ಕನ್ನಡ ಮಹಿಳಾ ವಿಚಾರ ಸಾಹಿತ್ಯ : ಮಹಿಳಾ ಪ್ರಶ್ನೆಗಳು

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ., ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು
ಲತ ಕೆ.ಇ.,

ಮಾರ್ಗದರ್ಶಕರು
ಡಾ. ಬಿ.ಎಂ.ಪುಟ್ಟಯ್ಯ
ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೨೦

ಕನ್ನಡ ಮಹಿಳಾ ವಿಚಾರ ಸಾಹಿತ್ಯ : ಮಹಿಳಾ ಪ್ರಶ್ನೆಗಳು

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ., ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಲತ ಕೆ.ಇ.,

ಮಾರ್ಗದರ್ಶಕರು

ಡಾ. ಬಿ.ಎಂ.ಪುಟ್ಟಯ್ಯ

ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩೨೭೬

೨೦೨೦

ಮಾರ್ಗದರ್ಶಕರ ದೃಢೀಕರಣ ಪತ್ರ

ಲತ ಕೆ.ಇ., ಇವರು ಪಿಎಚ್.ಡಿ ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **ಕನ್ನಡ ಮಹಿಳಾ ವಿಚಾರ ಸಾಹಿತ್ಯ : ಮಹಿಳಾ ಪ್ರಶ್ನೆಗಳು** ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ **ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ** ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಮಾರ್ಗದರ್ಶಕರು

ಡಾ. ಬಿ.ಎಂ.ಪುಟ್ಟಯ್ಯ
ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ದಿನಾಂಕ: 11.09.2020
ಸ್ಥಳ : ವಿದ್ಯಾರಣ್ಯ

ಸಂಶೋಧಕರ ಘೋಷಣಾ ಪತ್ರ

ಕನ್ನಡ ಮಹಿಳಾ ವಿಚಾರ ಸಾಹಿತ್ಯ : ಮಹಿಳಾ ಪ್ರಶ್ನೆಗಳು ಎಂಬ ಈ ಮಹಾಪ್ರಬಂಧವನ್ನು ಪಿಎಚ್.ಡಿ., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ **ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ** ಪ್ರಾಧ್ಯಾಪಕರಾದ **ಡಾ.ಬಿ.ಎಂ.ಪುಟ್ಟಯ್ಯ** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಶೋಧಕರು

ಲತ ಕೆ.ಇ.,

ಪಿಎಚ್.ಡಿ., ಸಂಶೋಧನ ವಿದ್ಯಾರ್ಥಿನಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ದಿನಾಂಕ: 11.09.2020
ಸ್ಥಳ : ವಿದ್ಯಾರಣ್ಯ

ಕನ್ನಡ ಮಹಿಳಾ ವಿಚಾರ ಸಾಹಿತ್ಯ : ಮಹಿಳಾ ಪ್ರಶ್ನೆಗಳು

ಪರಿವಿಡಿ

ಅಧ್ಯಾಯ - ಒಂದು

ಪ್ರವೇಶ

ಅಧ್ಯಾಯ - ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಹಾಗೂ ಸ್ವರೂಪ

ಪ್ರವೇಶ

ಕನ್ನಡ ವಿಚಾರ ಸಾಹಿತ್ಯಕ್ಕೆ ದೊಡ್ಡ ಪರಂಪರೆ ಇದೆ. ಸಾಮಾಜಿಕ ಬದಲಾವಣೆ ಮತ್ತು ಸಾಮಾಜಿಕ ಚಲನಶೀಲತೆಗೆ ಅಡ್ಡಿಯಾಗಿರುವ ನಂಬಿಕೆಗಳು, ಮೌಲ್ಯಗಳು, ಆಚರಣೆಗಳು, ಮಾನವ-ಮಾನವರ ನಡುವಿನ ಸಂಬಂಧಗಳು, ಪ್ರಭುತ್ವ, ರಾಜ್ಯ ವ್ಯವಸ್ಥೆ ಮುಂತಾದವುಗಳನ್ನು ಗುರುತಿಸುವುದು ಮತ್ತು ಅವುಗಳನ್ನು ಪ್ರಶ್ನೆ ಮಾಡುವುದು ವಿಚಾರ ಸಾಹಿತ್ಯದ ಮೂಲತಿರುಳು. ಸಾಹಿತ್ಯ ವಿಮರ್ಶೆಗೆ ಸಾಹಿತ್ಯವೇ ಪ್ರಧಾನ ಆಕರವಾದರೆ, ವಿಚಾರ ಸಾಹಿತ್ಯಕ್ಕೆ ಇಡಿಯಾಗಿ ವ್ಯವಸ್ಥೆಯೇ ಮೂಲ ಆಕರ. ವ್ಯವಸ್ಥೆಯಲ್ಲಿ ಸರಿಕಾಣದ್ದನ್ನು, ಗುರುತಿಸುವುದು ಮತ್ತು ಅದನ್ನು ವಿರೋಧಿಸುವುದು. ವ್ಯವಸ್ಥೆಯಲ್ಲಿರುವ ಎಲ್ಲಾ ಬಗೆಯ ಅಸಮಾನತೆ, ಅನ್ಯಾಯ ತಾರತಮ್ಯ, ದೌರ್ಜನ್ಯ ಮುಂತಾದವನ್ನು ಗುರುತಿಸಿ ತನ್ನದೇಯಾದ ವಿಚಾರಗಳನ್ನು ಮುಖಾಮುಖಿಯಾಗಿ ಅವುಗಳೊಂದಿಗೆ ಇರುವ ವಿಚಾರಗಳನ್ನು ವಿರೋಧಿಸುತ್ತದೆ ಮತ್ತು ಅವುಗಳನ್ನು ವಿರೋಧಿಸುವುದು, ಸಾಮಾಜಿಕ ಚಲನೆಗೆ ಮತ್ತು ಬದಲಾವಣೆಗೆ ಅಡ್ಡಿಯಾಗಿರುವ ಎಲ್ಲಾ ಬಗೆಯ ಗೊಡ್ಡು ನಂಬಿಕೆ ಹಾಗೂ ಆಚರಣೆಗಳನ್ನು ಗುರುತಿಸುವುದು ಮತ್ತು ವಿರೋಧಿಸುವುದು. ಅದರ ಜಾಗದಲ್ಲಿ ವೈಜ್ಞಾನಿಕ ತಿಳುವಳಿಕೆಯನ್ನು ಪರಿಚಯಿಸುವುದು. ಇದು ಅತ್ಯಂತ ಸ್ಥೂಲವಾಗಿ ವಿಚಾರ ಸಾಹಿತ್ಯದ ತಿರುಳು ಮತ್ತು ಸ್ವರೂಪ.

ಭಾರತದಲ್ಲಿ ಸ್ವಾತಂತ್ರ್ಯ ಚಳುವಳಿ ನಡೆಯುತ್ತಿದ್ದಾಗ ಬ್ರಿಟಿಷರ ಆಳ್ವಿಕೆಯನ್ನು ವಿರೋಧಿಸಿ ಮತ್ತು ಸ್ವಾತಂತ್ರ್ಯ ಹೋರಾಟವನ್ನು ಪ್ರೇರೇಪಿಸಿ ವಿಚಾರ ಸಾಹಿತ್ಯ ಕನ್ನಡದಲ್ಲಿ ರಚನೆಯಾಯಿತು. ಆಯಾ ಕಾಲದ ಚಾರಿತ್ರಿಕ, ಆರ್ಥಿಕ, ರಾಜಕೀಯ, ಸಾಮಾಜಿಕ ಮತ್ತಿತರೆ ಅಗತ್ಯಗಳಿಗೆ ಅನುಗುಣವಾಗಿ ವಿಚಾರ ಸಾಹಿತ್ಯ ರಚನೆಯಾಗಿದೆ. ದೇವರು, ಧರ್ಮ, ಮತಧರ್ಮ, ಸಾಮಾಜಿಕ ಸಂಬಂಧಗಳು, ಸಾಮಾಜಿಕ ಮೌಲ್ಯಗಳು, ನಂಬಿಕೆಗಳು, ಆಚರಣೆ, ಸಂಪ್ರದಾಯ, ಚರಿತ್ರೆ, ಪುರಾಣ ಮುಂತಾದವುಗಳನ್ನು ವಿವರಿಸುವ ವ್ಯಾಖ್ಯಾನಿಸುವ ಮತ್ತು ವಿಮರ್ಶಿಸುವ ವಿಚಾರ ಸಾಹಿತ್ಯ

ಬಂದಿದೆ. ಈ ಸಾಹಿತ್ಯ ಪ್ರಕಾರವು ಹೆಚ್ಚಾಗಿ ವಾಸ್ತವತೆಗೆ ಮತ್ತು ವೈಜ್ಞಾನಿಕತೆಗೆ ಹೆಚ್ಚು ಒತ್ತು ಕೊಟ್ಟಿದೆ. ಊಳಿಗಮಾನ್ಯಶಾಹಿಯ ಎಲ್ಲಾ ರೀತಿಯ ಹಳೆಯ ನಂಬಿಕೆಗಳನ್ನು, ತರತಮಗಳನ್ನು ಮತ್ತು ಮೌಲ್ಯಗಳನ್ನು ವಿಚಾರ ಸಾಹಿತ್ಯ ಅನುಮಾನಿಸುತ್ತಾ, ಪ್ರಶ್ನೆ ಮಾಡುತ್ತಾ ಬಂದಿದೆ.

ವಿಚಾರ ಸಾಹಿತ್ಯವು ಎಲ್ಲಾ ಬಗೆಯ ಜಡತ್ವವನ್ನು ನಿರಾಕರಿಸುತ್ತದೆ. ಅಂದರೆ ಮೊದಲಿದ್ದ ಸ್ಥಿತಿಯನ್ನು ಬದಲಾಯಿಸಲು ಪ್ರಯತ್ನಿಸುತ್ತದೆ. ಮೊದಲಿದ್ದಂತಹ ಸಿದ್ಧಮಾದರಿಯ ನಂಬಿಕೆಯನ್ನು ಅಲುಗಾಡಿಸಿದೆ. ಅಸಮಾನತೆಯಿಂದ ಕೂಡಿರುವ ಸಾಮಾಜಿಕ ರಚನೆಯಾಗಲಿ ಅಥವಾ ಮಾನವ ಮಾನವರ ನಡುವಿನ ತಾರತಮ್ಯಗಳ ಸಂಬಂಧಗಳೇ ಆಗಲಿ, ಅವು ಇರುವುದು ಹೀಗೆಯೇ. ಇವು ಮೊದಲು ಹೀಗೆಯೇ ಇರಬೇಕು. ಈಗ ಇರುವುದೆಲ್ಲಾ ಸರಿಯಾಗಿದೆ ಎಂಬ ಸ್ಥಾಪಿತ ಸಿದ್ಧಮಾದರಿಯ ಆಲೋಚನೆಗಳನ್ನು ಒಡೆದು ನೋಡುವ ಪ್ರಾಥಮಿಕ ಆಸಕ್ತಿ ವಿಚಾರ ಸಾಹಿತ್ಯದ್ದು. ಈ ಮೂಲಕ ಜಡವಾದ ನಂಬಿಕೆ ಹಾಗೂ ಆಲೋಚನೆಗಳನ್ನು ಪ್ರಶ್ನೆ ಮಾಡುವ ಮನೋಧರ್ಮವನ್ನು ವಿಚಾರ ಸಾಹಿತ್ಯವು ಹುಟ್ಟುಹಾಕಿದೆ. ಈ ದೃಷ್ಟಿಯಿಂದ ವಿಚಾರ ಸಾಹಿತ್ಯಕ್ಕೆ ತರ್ಕ ಮತ್ತು ಪ್ರಶ್ನಾರ್ಥಕ ಸ್ವಭಾವ ಮುಖ್ಯವಾಗಿದೆ. ಸಾಹಿತ್ಯದ ಮೂಲಕ ಪ್ರಶ್ನೆ ಮಾಡುವ ಮತ್ತು ತಾರ್ಕಿಕವಾಗಿ ಆಲೋಚಿಸುವಂತೆ ಮಾಡುವ ಬರವಣಿಗೆ ಎಂದರೆ ಅದು ವಿಚಾರ ಸಾಹಿತ್ಯವೇ ಆಗಿದೆ. ಈ ನೆಲೆಯಲ್ಲಿ ವಿಚಾರ ಸಾಹಿತ್ಯವು ಭಾವ ಪ್ರಧಾನವಲ್ಲ; ಅದು ವಿಚಾರ ಪ್ರಧಾನ ಮತ್ತು ತರ್ಕ ಪ್ರಧಾನ. ಎಲ್ಲವನ್ನು ಒಪ್ಪಿಕೊಳ್ಳುವುದು ಒಂದು ಬಗೆಯಾದರೆ, ಎಲ್ಲವನ್ನೂ ಪ್ರಶ್ನೆ ಮಾಡುವುದು ಇದರ ಮತ್ತೊಂದು ಬಗೆಯ ಆಯಾಮವಾಗಿದೆ.

ವಿಚಾರ ಸಾಹಿತ್ಯವು ನಿರ್ದಿಷ್ಟ ವಸ್ತುವನ್ನು ಒಳಗೊಳ್ಳದೆ ಹಲವು ವಸ್ತುಗಳನ್ನಾಧರಿಸಿ ರಚನೆಯಾಗಿದೆ. ಅದರಲ್ಲಿ ಜಾತಿ, ವರ್ಗ, ಲಿಂಗ, ಪರಿಸರ, ಶಿಕ್ಷಣ, ದೇಶಾಭಿಮಾನ, ದೇಶದ ವಿಮೋಚನೆ, ದೇವರು, ಧರ್ಮ, ಮೂಢನಂಬಿಕೆ, ಮತಾಂತರ, ಮಹಿಳಾ ಪ್ರಶ್ನೆ, ದಲಿತ ಪ್ರಶ್ನೆ, ಆದಿವಾಸಿ ಅಲೆಮಾರಿಗಳ ಪ್ರಶ್ನೆ, ಪ್ರಭುತ್ವ, ಅಧಿಕಾರ, ಮಾರುಕಟ್ಟೆ, ನಿರುದ್ಯೋಗ, ಬೆಲೆ ಏರಿಕೆ, ಸಾಹಿತ್ಯದ ಸಾಮಾಜಿಕ ಪರಿಣಾಮ, ದೇಶೀ ಭಾಷೆಗಳು, ವಿವಾಹ, ಕುಟುಂಬ, ಮಾಧ್ಯಮ ಹೀಗೆ ವಿಸ್ತಾರವಾದ ವಿಷಯಗಳು ಇದರಲ್ಲಿ ಚರ್ಚೆಯಾಗಿವೆ. ಹಾಗೆ ನೋಡುತ್ತಾ ಹೋದರೆ ವೈಚಾರಿಕ ವ್ಯಾಪ್ತಿಯಿಂದ ಹೊರಗುಳಿಯಬಹುದಾದ ವಸ್ತುವಾಗಲಿ, ವಿಷಯವಾಗಲಿ ಈ ವಿಚಾರ ಸಾಹಿತ್ಯದಲ್ಲಿ ಇಲ್ಲವೆಂದೇ ಹೇಳಬಹುದು. ಅಷ್ಟರಮಟ್ಟಿಗೆ ಇದರ ವ್ಯಾಪ್ತಿ ಇದೆ.

ವಿಚಾರ ಸಾಹಿತ್ಯವು ಹಲವು ವಸ್ತು ವಿಷಯಗಳನ್ನು ಕುರಿತು ಚರ್ಚಿಸಿರುವುದರ ಜೊತೆಗೆ ಪ್ರಮುಖವಾದ ವಿಚಾರಧಾರೆಗಳನ್ನು ಕೂಡ ಒಳಗೊಂಡಿದೆ. ಸಮಾಜದಲ್ಲಿ ಸ್ಥಾಪಿತ ನಂಬಿಕೆ ಮತ್ತು ಮೌಲ್ಯಗಳನ್ನು ಇದ್ದ ಹಾಗೆಯೇ ಪ್ರಶ್ನೆ ಮಾಡದೆ ಒಪ್ಪಿಕೊಳ್ಳುವ ಆಲೋಚನೆಗಳನ್ನು ಬಲಪಂಥೀಯ ವಿಚಾರಧಾರೆ ಎಂತಲೂ, ಸಮಾಜದಲ್ಲಿ ಸ್ಥಾಪಿತ ನಂಬಿಕೆ ಮತ್ತು ಮೌಲ್ಯಗಳನ್ನು ಪ್ರಶ್ನಿಸುವ, ಅವುಗಳಿಗೆ ಭಿನ್ನ ಮತಗಳನ್ನು ಸೂಚಿಸುವ ಆಲೋಚನೆಗಳನ್ನು ಎಡಪಂಥೀಯ ವಿಚಾರಧಾರೆ ಎಂತಲೂ ಕರೆಯಲಾಗಿದೆ. ವಿಚಾರ ಸಾಹಿತ್ಯದಲ್ಲಿ ಅತ್ಯಂತ ಸ್ಥೂಲವಾಗಿ ಈ ಎರಡು ಆಲೋಚನಾ ಧಾರೆಗಳು ಕಾಣುತ್ತವೆ. ಆದರೆ ವಿಚಾರ ಸಾಹಿತ್ಯದ ಹಿಂದೆ ಹಲವು

ಧೋರಣೆಗಳು ಕೆಲಸ ಮಾಡಿವೆ. ಅವನ್ನು ಈ ಮುಂದಿನಂತೆ ಗುರುತಿಸಬಹುದು. ಆರ್ಥಿಕ ದೃಷ್ಟಿಕೋನ, ಸಾಮಾಜಿಕ ದೃಷ್ಟಿಕೋನ, ಲಿಂಗತಾರತಮ್ಯ ದೃಷ್ಟಿಕೋನ, ಭಾಷಿಕ ನೆಲೆಯ ದೃಷ್ಟಿಕೋನ, ಇವು ವಿಚಾರ ಸಾಹಿತ್ಯದ ರಚನೆಯಲ್ಲಿ ಕೆಲಸ ಮಾಡಿರುವ ಪ್ರಧಾನ ದೃಷ್ಟಿಕೋನಗಳು.

ಕನ್ನಡದಲ್ಲಿ ವಿಚಾರ ಸಾಹಿತ್ಯಕ್ಕೆ ಸರಿಸುಮಾರು ಒಂದು ಶತಮಾನದಷ್ಟು ದೀರ್ಘ ಇತಿಹಾಸವಿದೆ. ವಿಚಾರ ಸಾಹಿತ್ಯಕ್ಕೆ ಉಳಿದ ಇನ್ನಿತರ ಸಾಹಿತ್ಯ ಪ್ರಕಾರಗಳಿಗಿಂತ ಹೆಚ್ಚು ಪ್ರಮಾಣದ ಓದುಗರೂ ಇದ್ದಾರೆ. ಓದುಗರ ಆಸಕ್ತಿ, ಓದುಗರ ದೃಷ್ಟಿ ಧೋರಣೆಯನ್ನು ಅವಲಂಭಿಸಿಯೂ ಸಹ ವಿಚಾರ ಸಾಹಿತ್ಯ ಪ್ರಕಟವಾಗಿದೆ. ಓದುಗರೂ ಕೂಡ ವಿಚಾರ ಸಾಹಿತ್ಯವನ್ನು ತಮ್ಮ ಬೌದ್ಧಿಕ ಹಾಗೂ ವೈಚಾರಿಕ ಅಗತ್ಯಗಳಿಗೆ ಅನುಗುಣವಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ವಿಚಾರ ಸಾಹಿತ್ಯವು ಓದುಗರ ಸ್ಥಾಪಿತ ಗ್ರಹಿಕೆಗಳನ್ನು ಅಲುಗಾಡಿಸಿದೆ, ಪ್ರಚೋದಿಸಿದೆ, ಪ್ರಭಾವಿಸಿದೆ ಮತ್ತು ಬದಲಾಯಿಸಿದೆ. ಇಂತಹ ಮುಖ್ಯ ಕಾರಣಗಳೇ ವಿಚಾರ ಸಾಹಿತ್ಯದ ರಚನೆಗೆ, ವಿಚಾರ ಸಾಹಿತ್ಯದ ಅನುವಾದಕ್ಕೆ ಮತ್ತು ಮುದ್ರಣಕ್ಕೆ ಕಾರಣಗಳಾಗಿವೆ.

ಕನ್ನಡ ವಿಚಾರ ಸಾಹಿತ್ಯಕ್ಕೆ ಬೇರೆ ಬೇರೆ ಭಾಷೆ ಸಾಹಿತ್ಯಗಳಿಂದ ಅನುವಾದಗೊಂಡಿದ್ದೂ ಇದೆ ಮತ್ತು ಕನ್ನಡದಲ್ಲಿಯೇ ವಿಚಾರ ಸಾಹಿತ್ಯ ಹುಟ್ಟಿದ್ದೂ ಇದೆ. ವಿಶೇಷವಾಗಿ ತೆಲುಗಿನಿಂದ ಬಂದಿದ್ದಿದೆ. ಅದರ ಜೊತೆಗೆ ಮಲಯಾಳಿ, ರಷ್ಯನ್, ಇಂಗ್ಲಿಷ್, ಬೆಂಗಾಲಿ ಭಾಷೆಯಿಂದಲೂ ಬಹಳ ಪ್ರಮಾಣದಲ್ಲಿ ಕನ್ನಡ ಸಾಹಿತ್ಯಕ್ಕೆ ವಿಚಾರ ಸಾಹಿತ್ಯ ಬಂದಿದೆ. ಕನ್ನಡದಲ್ಲಿ ಹೊಸ ವಿಷಯಗಳನ್ನು ಕುರಿತು ವಿಚಾರ ಸಾಹಿತ್ಯ ರಚನೆಯಾಗುವಂತಹ ಅಡಿಪಾಯವನ್ನು ಹಾಕಿದೆ. ಕನ್ನಡದಲ್ಲೇ ಹುಟ್ಟಿರುವ ವಿಚಾರ ಸಾಹಿತ್ಯ ಅಪಾರ ಪ್ರಮಾಣದಲ್ಲಿದೆ. ಜೊತೆಗೆ ಭಾರತದ ವಿವಿಧ ಭಾಷೆಗಳಿಂದ ಮತ್ತು ಭಾರತದಾಚೆಗಿನ ಕೆಲವು ಭಾಷೆಗಳಿಂದ ವಿಚಾರ ಸಾಹಿತ್ಯವು ಕನ್ನಡಕ್ಕೆ ಬಂದಿದೆ. ಗಾಂಧಿ, ಅಂಬೇಡ್ಕರ್, ಲೋಹಿಯಾ, ಪೆರಿಯಾರ್, ಕೌಂಟ್ ಕೋವೂರ್ ಮುಂತಾದವರ ಆಲೋಚನೆಗಳು ಕನ್ನಡದ ವಿಚಾರ ಸಾಹಿತ್ಯವನ್ನು ಬೆಳೆಸಿವೆ. ಅದಕ್ಕೆ ವಿವಿಧ ಕವಲುಗಳನ್ನು ನಿರ್ಮಿಸಿವೆ.

ವಿಚಾರ ಸಾಹಿತ್ಯವು ಸ್ಥಾಪಿತ ವೈಚಾರಿಕ ಆಕೃತಿಗಳನ್ನು ಪ್ರಶ್ನೆ ಮಾಡುವ ಮೂಲಕವೇ ಹುಟ್ಟುತ್ತದೆ. ತಾರ್ಕಿಕವಾಗಿ ಆಲೋಚಿಸುವ ಮೂಲಕ ಅದು ಬೆಳೆಯುತ್ತದೆ. ಈ ದೃಷ್ಟಿಯಿಂದ ಪ್ರಶ್ನೆ ಮಾಡುವುದು ಮತ್ತು ತಾರ್ಕಿಕವಾಗಿ ಆಲೋಚಿಸುವುದು ವಿಚಾರ ಸಾಹಿತ್ಯದ ಪ್ರಧಾನ ಗುಣ. ವಿಚಾರ ಸಾಹಿತ್ಯದ ಈ ಗುಣವು ಸಾಹಿತ್ಯದ ಉಳಿದ ಇನ್ನಿತರೆ ಪ್ರಕಾರಗಳಿಗೂ ವಿಸ್ತರಿಸಿದೆ. ಸಾಹಿತ್ಯ ವಿಮರ್ಶೆ, ಸಾಹಿತ್ಯ ಸಂಶೋಧನೆ, ಪ್ರಬಂಧ ಸಾಹಿತ್ಯ, ವಿನೋದ ಸಾಹಿತ್ಯ ಈ ಎಲ್ಲಾ ಪ್ರಕಾರಗಳಿಗೂ ಇದರ ಗುಣ ವಿಸ್ತರಿಸಿದೆ.

೧೯೯೦ರ ದಶಕದ ನಂತರ ಭಾರತವು ಜಾಗತೀಕರಣ, ಖಾಸಗೀಕರಣ, ಆಧುನೀಕರಣ ಮತ್ತು ಉದಾರೀಕರಣದ ನೀತಿಗಳನ್ನು ಜಾರಿಗೊಳಿಸಿತು. ಆನಂತರದಲ್ಲಿ ಈ ಕುರಿತು ಸಾಕಷ್ಟು ಪ್ರಮಾಣದ ವಿಚಾರ ಸಾಹಿತ್ಯ ಪ್ರಕಟವಾಗಿದೆ. ಈ ಸಾಹಿತ್ಯದಲ್ಲಿ ಅನೇಕ ವಿಷಯಗಳು ಚರ್ಚೆಯಾಗಿವೆ.

ಅದರಲ್ಲೂ ಮುಖ್ಯವಾಗಿ ಆರ್ಥಿಕ ವಿಚಾರಗಳು, ಕೃಷಿಯ ವಿಚಾರಗಳು, ಮಾರುಕಟ್ಟೆಯ ವಿಚಾರಗಳು ಸಾಕಷ್ಟು ಪ್ರಮಾಣದಲ್ಲಿ ಚರ್ಚೆಯಾಗಿವೆ.

ಬ್ರಹ್ಮಾಂಡದ ಉಗಮ, ವಿಕಾಸ ಮತ್ತು ಲಯ(ನಾಶ)ವನ್ನು ವಿವರಿಸಲು ರಚನೆಗೊಂಡಿದ್ದ ಧರ್ಮ, ದೇವರು, ಸಾಮಾಜಿಕ ನಂಬಿಕೆಗಳು, ಸಮಾಜದಲ್ಲಿ ಹಾಗೂ ಕುಟುಂಬದಲ್ಲಿ ವ್ಯಕ್ತಿ ವ್ಯಕ್ತಿಗಳ ನಡುವಿನ ಸಂಬಂಧಗಳು ಹೇಗಿರಬೇಕು ಮತ್ತು ಹೇಗಿರಬಾರದು. ಎಂಬುದನ್ನು ವಿಚಾರ ಸಾಹಿತ್ಯವು ವಿಶ್ಲೇಷಿಸುತ್ತದೆ. ಪಾರಂಪರಿಕವಾಗಿ ದೇವರನ್ನು ನಂಬುವಂತಹ ವಿಚಾರಗಳನ್ನು ಇದು ಬದಲಾಯಿಸಿದೆ. ಧರ್ಮ ಹಾಗೂ ಧಾರ್ಮಿಕ ನೆಲೆಯ ಸ್ಥಾಪಿತ ಮೌಲ್ಯಗಳನ್ನು ಈ ವಿಚಾರ ಸಾಹಿತ್ಯ ಗಂಭೀರವಾಗಿ ವಿಮರ್ಶೆ ಮಾಡಿದೆ. ಸಾಮಾಜಿಕ ಪರಿಸರದಲ್ಲಿ ಸ್ತ್ರೀಯರು ಇರಬೇಕಾದ ಸ್ಥಾನಮಾನಗಳನ್ನು ಸಂಪ್ರದಾಯ, ಆಚರಣೆ, ಮೌಢ್ಯತೆಗಳನ್ನು ಮೀರಿ ನಿಲ್ಲುವಂತಹ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದೆ.

ಸಮಾಜವನ್ನು ಬಾಧಿಸುತ್ತಿರುವ ವಿಷಯಗಳಲ್ಲಿ ಜಾತಿ, ಮಹಿಳೆ, ಆರ್ಥಿಕತೆ, ಮಾರುಕಟ್ಟೆ, ಅಧಿಕಾರ, ಶಿಕ್ಷಣ ಮುಂತಾದ ವಿಷಯಗಳ ಆಳ ಅಗಲಗಳನ್ನು ಮತ್ತು ಅವುಗಳಲ್ಲಿರುವ ವೈಜ್ಞಾನಿಕ ಮತ್ತು ಅವೈಜ್ಞಾನಿಕ ಸಮಸ್ಯೆಗಳನ್ನು ವಿಚಾರ ಸಾಹಿತ್ಯವು ಅತ್ಯಂತ ಆಳವಾಗಿ ಪರಿಶೀಲಿಸಿದೆ. ವಿಚಾರ ಸಾಹಿತ್ಯದಲ್ಲಿ ಪ್ರಶ್ನೆ ಮಾಡುವ ಮನೋಭಾವ ಇದೆ. ಅದರ ಜೊತೆಗೆ ಹಕ್ಕೊತ್ತಾಯವನ್ನು ಮಂಡಿಸುವ ಸ್ವಭಾವವೂ ಇದೆ. ಇದಲ್ಲದೆ ಮನುಷ್ಯ ಕೇಂದ್ರಿತವಾದ ಮೌಲ್ಯಗಳ ಕಡೆಗೆ ಆಧುನಿಕ ವೈಚಾರಿಕತೆಯು ಮುಖ ಮಾಡಿದೆ. ವಿಚಾರ ಸಾಹಿತ್ಯದ ನಿರ್ಮಾಣಕ್ಕೆ ಹೊರಗಿನ ಪ್ರೇರಣೆ ಪ್ರಭಾವಗಳು ಮತ್ತು ಒಳಗಿನ ಒತ್ತಡಗಳು ಕಾರಣವಾಗಿವೆ. ಇವಲ್ಲದೆ ಸಮಾಜದ ಕೆಳವರ್ಗ, ಶೋಷಿತರು, ಮಹಿಳೆಯರು ಬರೆಯುತ್ತಿರುವ ಈ ಪ್ರಕಾರದ ಬರವಣಿಗೆಯಲ್ಲಿ ಸಾಮಾಜಿಕ ನ್ಯಾಯದ ಪ್ರಶ್ನೆಗಳಿವೆ. ಆರ್ಥಿಕ ಪ್ರಶ್ನೆಗಳು, ಮಾರುಕಟ್ಟೆ ಪ್ರಶ್ನೆಗಳು ಪ್ರಸ್ತುತ ದಿನಮಾನಗಳಲ್ಲಿ ಮುಖ್ಯನೆಲೆಯಲ್ಲಿ ಚರ್ಚಿತವಾಗುತ್ತಿವೆ. ಈ ದೃಷ್ಟಿಯಿಂದ ವಿಚಾರ ಸಾಹಿತ್ಯದ ನಿರ್ಮಾಣ ಮತ್ತು ಅದರ ಓದು ಸಾಮಾಜಿಕ ಕ್ರಿಯೆಯ ಪ್ರಧಾನ ಭಾಗ ಎಂಬಂತಹ ನಂಬಿಕೆಗಳು ಗಟ್ಟಿಗೊಳ್ಳುತ್ತಿವೆ.

೧.೧. ಅಧ್ಯಯನದ ಉದ್ದೇಶ

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಆರಂಭದ ಕಾಲಘಟ್ಟದಿಂದಲೂ ಸೃಜನಶೀಲ ಸಾಹಿತ್ಯದ ಮೂಲಕವೇ ಮಹಿಳಾ ಪ್ರಶ್ನೆಗಳನ್ನು ನೋಡುತ್ತಾ ಬರಲಾಗಿದೆ. ಆದರೆ ಆ ಸಂದರ್ಭದಲ್ಲಿ ಧಾರ್ಮಿಕ ಮತ್ತು ಕೌಟುಂಬಿಕ ಚೌಕಟ್ಟಿನ ನೆಲೆಯಲ್ಲಿ ನೋಡಲಾಗಿದೆ. ಮಹಿಳೆಯನ್ನು ಪುರುಷ ಪ್ರಧಾನ ಸಮಾಜದ ಮೌಲ್ಯಗಳ ಮೂಲಕ ಸುಧಾರಣೆಯನ್ನು ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದೆ. ಆದರೆ ವಿಚಾರ ಸಾಹಿತ್ಯದಲ್ಲಿ ಮಹಿಳೆಯ ಅಸ್ತಿತ್ವದ ಪ್ರಶ್ನೆಗಳನ್ನು ಹಲವಾರು ಆಯಾಮಗಳಲ್ಲಿ ಗುರುತಿಸಿಕೊಳ್ಳುವ ಮತ್ತು ಆ ಮೂಲಕ ಎಲ್ಲಾ ಸಮಸ್ಯೆಗಳತ್ತ ಕೇಂದ್ರೀಕರಿಸುವ ಒಳನೋಟವನ್ನು ವಿಚಾರ ಸಾಹಿತ್ಯವು ರೂಪಿಸಿಕೊಂಡಿತು. ಮಹಿಳೆಯು ಸಮಾಜ ಮತ್ತು ಕುಟುಂಬದಲ್ಲಿ ಹೇಗೆ ತಾನು ನಿಯಂತ್ರಣಕ್ಕೆ ಒಳಪಟ್ಟಿದ್ದಾಳೆ ಎಂಬುದನ್ನು ವಿಚಾರ ಸಾಹಿತ್ಯದಲ್ಲಿ ಹಲವಾರು ಲೇಖಕಿಯರು

ತಮ್ಮ ಚರ್ಚೆಯನ್ನು ಯಾವ ಯಾವ ನೆಲೆಯಲ್ಲಿ ಚರ್ಚಿಸಿದ್ದಾರೆ ಎಂಬುದನ್ನು ಶೋಧಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಸಮಾಜದ ವಿವಿಧ ವರ್ಗಗಳ ಮತ್ತು ವಿವಿಧ ಸಾಮಾಜಿಕ ಸ್ತರಗಳ ಹಿನ್ನೆಲೆಯುಳ್ಳ ಬರಹಗಾರರು ಇದನ್ನು ನಿರ್ಮಾಣ ಮಾಡಿದ್ದಾರೆ. ನಿಶ್ಚಿತವಾದ ಮತ್ತು ಖಚಿತವಾದ ಧೋರಣೆಯನ್ನಿಟ್ಟುಕೊಂಡು ವಿಚಾರ ಸಾಹಿತ್ಯವು ಹುಟ್ಟುತ್ತದೆ. ಇದು ವಿಚಾರ ಸಾಹಿತ್ಯದ ಮೂಲ ಗುಣ. ವಿಚಾರ ಸಾಹಿತ್ಯವು ಸಾಮಾಜಿಕ ಮತ್ತು ವೈಚಾರಿಕ ವಲಯದ ಹಲವು ಮುಖ್ಯ ಪ್ರಶ್ನೆಗಳನ್ನು ಕುರಿತು ಚರ್ಚಿಸಿದೆ. ಒಂದು ಅಂಶದ ಮೇಲೆ ವಿವಿಧ ಧೋರಣೆಯ ಚರ್ಚೆಗಳು ನಡೆದಿವೆ. ಕಳೆದ ಒಂದು ಶತಮಾನದ ವಿಚಾರ ಸಾಹಿತ್ಯವು ಚರ್ಚಿಸುತ್ತಾ ಬಂದಿರುವ ವಿಷಯಗಳು ಹಲವಾರು ಸಾಮಾಜಿಕ, ರಾಜಕೀಯ ಮತ್ತು ಕೌಟುಂಬಿಕ ಬದುಕನ್ನು ಕದಡುತ್ತಿರುವ ಮತ್ತು ಕಾಡುತ್ತಿರುವ ಹಲವು ವಿಷಯಗಳ ಚರ್ಚೆ ವಿಚಾರ ಸಾಹಿತ್ಯದಲ್ಲಿದೆ. ಇಂತಹ ಹಲವಾರು ವಿಷಯಗಳಲ್ಲಿ ಮುಖ್ಯವೆನಿಸಿದ ಮಹಿಳಾ ಪ್ರಶ್ನೆಗಳು ಎಂಬ ಒಂದು ವಿಷಯವನ್ನು ಈ ಸಂಶೋಧನೆಗೆ ರೂಪಿಸಿಕೊಳ್ಳಲಾಗಿದೆ.

ಸೃಜನಶೀಲ ಸಾಹಿತ್ಯ ಪ್ರಕಾರಗಳಲ್ಲಿ ಮಹಿಳೆಯನ್ನು ಪುರುಷನ ಅಧೀನವಾಗಿ ಲಿಂಗತಾರತಮ್ಯದ ನೆಲೆಯೊಳಗೆ ಹೆಣ್ಣನ್ನು ಚಿತ್ರಿಸಲಾಗಿದೆ. ಚಾರಿತ್ರಿಕ ಒತ್ತಡದಿಂದಾಗಿ ಹುಟ್ಟಿಕೊಂಡ ವಿಚಾರ ಸಾಹಿತ್ಯವು ಮಹಿಳೆಯನ್ನು ವಿಭಿನ್ನ ನೆಲೆಯಲ್ಲಿ ಹೇಗೆ ಪ್ರತಿನಿಧಿಸಿದೆ ಎಂಬುದನ್ನು ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಿದೆ.

ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮದೊಳಗೆ ಮಹಿಳೆಯನ್ನು ಕೀಳಾಗಿ ನೋಡಲಾಗಿದೆ. ಅವುಗಳಿಂದ ಮಹಿಳೆಯು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಆಧುನಿಕ ಸಂದರ್ಭದಲ್ಲಿ ಅವಳು ಪರ್ಯಾಯ ಮಾರ್ಗವನ್ನು ವಿಚಾರ ಸಾಹಿತ್ಯದಲ್ಲಿ ಕಂಡುಕೊಂಡ ಮಾರ್ಗ ಯಾವುದು ಎಂಬುದನ್ನ ಕಂಡುಕೊಳ್ಳುವುದು. ಈ ಅಧ್ಯಯನದ ಉದ್ದೇಶದಲ್ಲಿ ಒಂದಾಗಿದೆ.

ಸೀಮೋನ್ ದ ಬೋವ ಹೇಳುವಂತೆ ಮಹಿಳೆ ಚಾರಿತ್ರಿಕವಾಗಿ ರೂಪಿಸಲ್ಪಟ್ಟವಳು ಮತ್ತು ಪುರುಷ ಪ್ರಧಾನ ಸಮಾಜದಲ್ಲಿ ಸಾಮಾಜಿಕವಾಗಿ ನಿಯಂತ್ರಿಸಲ್ಪಟ್ಟವಳು. ಸಾಂಸ್ಕೃತಿಕವಾಗಿ, ಭಾಷಿಕವಾಗಿ ಮತ್ತು ಸಾಮಾಜಿಕವಾಗಿ ಪುರುಷ ಪ್ರಧಾನ ಸಮಾಜದ ಅಧೀನ ಸ್ಥಿತಿಯಲ್ಲಿ ಮಹಿಳೆಯನ್ನು ಇಡಲಾಗಿದೆ. ಅವಳ ಮೇಲೆ ಕರ್ತವ್ಯಗಳನ್ನು ಹೇರಲಾಗಿದೆ. ಆದರೆ ಅವಳಿಂದ ಹಕ್ಕುಗಳನ್ನು ಕಿತ್ತುಕೊಳ್ಳಲಾಗಿದೆ.

ಸಮಾಜದಲ್ಲಿ ಮಹಿಳೆಯನ್ನು ಎರಡು ರೀತಿಯಲ್ಲಿ ಗ್ರಹಿಸಬಹುದು. ೧. ಜೈವಿಕ ನೆಲೆ, ೨. ಸಾಮಾಜಿಕ ನೆಲೆ, ಜೈವಿಕ ನೆಲೆಯಲ್ಲಿ ನೋಡುವುದಾದರೆ ಎಲ್ಲಾ ಮಹಿಳೆಯರು ಒಂದೆ. ಸಾಮಾಜಿಕ ನೆಲೆಯಿಂದ ನೋಡುವುದಾದರೆ ಆರ್ಥಿಕ, ಸಾಮಾಜಿಕ, ಜಾತಿ, ವರ್ಗ, ವಯೋಮಾನದ ಅಸಮಾನತೆಯ ದೃಷ್ಟಿಯಿಂದ ಹಲವಾರು ಬಗೆಯ ಮಹಿಳೆಯರನ್ನು ಕಾಣುತ್ತೇವೆ.

ಹೀಗೆ ಮಹಿಳಾ ವಿಚಾರ ಸಾಹಿತ್ಯ ಮಹಿಳೆಯ ಜೈವಿಕವಾದ ಪ್ರಶ್ನೆಗಳನ್ನು ಮಾತ್ರ ಒಳಗೊಂಡಿದೆಯೋ ಅಥವಾ ಜೈವಿಕ ನೆಲೆಯನ್ನು ಸೇರಿದ ಹಾಗೆ ಸಾಮಾಜಿಕ ನೆಲೆಯಲ್ಲೂ ಅವಳ ಬದುಕನ್ನು ಚರ್ಚೆಮಾಡಿವೆಯೊ ಎಂಬುದು ಈ ಅಧ್ಯಯನದ ಉದ್ದೇಶವಾಗಿದೆ.

೧.೨.ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಬರುವ ಮಹಿಳಾ ವಿಚಾರ ಸಾಹಿತ್ಯವನ್ನು ಸಂಗ್ರಹಿಸಿ ಅಧ್ಯಯನ ಮಾಡಲಾಗಿದೆ. ಕನ್ನಡ ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲಿ ವಿಶ್ಲೇಷಣಾ ಮಾದರಿಯೊಂದು ಬೆಳೆದುಬಂದಿದೆ. ಈ ಮಾದರಿಯನ್ನು ನನ್ನ ಅಧ್ಯಯನದ ಸಂದರ್ಭದಲ್ಲಿಯೂ ಬಳಸಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಆಯಾ ಅಧ್ಯಾಯಕ್ಕೆ ಸಂಬಂಧಿಸಿದಂತೆ ಲೇಖನಗಳು ಮತ್ತು ಕೃತಿಗಳಿಂದ ಆಯ್ದ ಭಾಗಗಳನ್ನು ಉಲ್ಲೇಖಿಸಿ ವಿಶ್ಲೇಷಿಸಲಾಗಿದೆ. ಹಾಗು ಕೆಲವು ಆಯ್ದ ಕಥೆ, ಕಾದಂಬರಿಗಳಲ್ಲಿ ಬರುವ ಕೆಲ ಸನ್ನಿವೇಶಗಳನ್ನು ಅಧ್ಯಯನದಲ್ಲಿ ತೌಲನಿಕವಾಗಿ ವಿಶ್ಲೇಷಿಸಲಾಗಿದೆ.

ಕನ್ನಡ ಮಹಿಳಾ ವಿಚಾರ ಸಾಹಿತ್ಯದಲ್ಲಿ ಮಹಿಳಾ ಪ್ರಶ್ನೆಗಳನ್ನು ಕುರಿತ ಚರ್ಚೆಗಳನ್ನು ಗುರುತಿಸಿ ಅಧ್ಯಯನವನ್ನು ಮಾಡಲಾಗಿದೆ. ವರ್ತಮಾನದ ಯಾವ ಒತ್ತಡಗಳು ಈ ಪರಿಕಲ್ಪನೆಯನ್ನು ಪರಿಭಾವಿಸಿವೆ ಎನ್ನುವುದನ್ನು ವಿಶ್ಲೇಷಿಸಲಾಗಿದೆ.

೧.೩. ಅಧ್ಯಯನದ ವ್ಯಾಪ್ತಿ

ವಿಚಾರ ಸಾಹಿತ್ಯಕ್ಕೆ ಬಹು ಸುದೀರ್ಘವಾದ ಇತಿಹಾಸವಿದೆ. ಕನ್ನಡಕ್ಕೆ ೧೯ನೇ ಶತಮಾನದಿಂದಲೂ ಇದರ ಪ್ರೇರಣೆ, ಪ್ರಭಾವವನ್ನು ಕಾಣಬಹುದು. ವಿಚಾರ ಸಾಹಿತ್ಯದ ವ್ಯಾಪ್ತಿಯು ವೈವಿಧ್ಯಮಯವಾದದ್ದು. ಈ ಅಧ್ಯಯನದ ವ್ಯಾಪ್ತಿಯ ದೃಷ್ಟಿಯಿಂದ ಎಪ್ಪತ್ತರ ದಶಕದಿಂದ ಇಂದಿನವರೆಗೂ ಬಂದಿರುವಂತಹ ಮಹಿಳಾ ವಿಚಾರ ಸಾಹಿತ್ಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಕನ್ನಡದ ಸಂದರ್ಭದಲ್ಲಿ ವಿಚಾರ ಸಾಹಿತ್ಯವನ್ನು ಹಲವಾರು ವಿದ್ವಾಂಸರು ರಚಿಸಿರುವುದನ್ನು ಕಾಣಬಹುದು. ಮಹಿಳೆಯರೇ ಬರೆದಿರುವ ವಿಚಾರ ಸಾಹಿತ್ಯವನ್ನು ಮಾತ್ರ ನನ್ನ ಅಧ್ಯಯನದ ವ್ಯಾಪ್ತಿಗೆ ಬಳಸಿಕೊಳ್ಳಲಾಗಿದೆ.

ಮಹಿಳಾ ವಿಚಾರ ಸಾಹಿತ್ಯವನ್ನು ಹಲವಾರು ಲೇಖಕಿಯರು ರಚಿಸಿದ್ದಾರೆ. ಅವರುಗಳಲ್ಲಿ ಮುಖ್ಯವಾಗಿ ವಿಜಯಾದಬ್ಬೆ, ಸುಮಿತ್ರಾ ಬಾಯಿ ಬಿ.ಎನ್., ಎಂ.ಎಸ್.ಆಶಾದೇವಿ, ಗೌರಿಲಂಕೇಶ್, ಎನ್.ಗಾಯಿತ್ರಿ, ಎಂ.ವಿ.ವಸು(ವಸುಮಳಲಿ), ನೀಲಾ ಕೆ., ಮೀನಾಕ್ಷಿ ಬಾಳಿ, ಅನುಪಮಾ ಎಚ್.ಎಸ್., ನಾಗವೇಣಿ ಎಚ್., ಸಾರಾ ಅಬೂಬಕ್ಕರ್, ಕೆ.ಷರೀಫಾ, ಭಾನುಮುಷ್ತಕ್, ಎಚ್.ಎಸ್.ಶ್ರೀಮತಿ, ಮಲ್ಲಿಕಾಘಂಟಿ, ವಿಜಯಾ, ಅನುಸೂಯ ಕಾಂಬಳೆ, ವಿನಯಾ ಒಕ್ಕುಂದ, ಆರ್.ಸುನಂದಮ್ಮ, ಸಿ.ಜಿ.ಮಂಜುಳಾ, ದು.ಸರಸ್ವತಿ, ಸಬಿಹಾ ಭೂಮಿಗೌಡ, ಸಾವಿತ್ರಿ ಮುಜುಮದಾರ, ಪ್ರೀತಿಶುಭಚಂದ್ರ, ಆರ್.ಪೂರ್ಣಿಮಾ, ಧರಣಿದೇವಿ ಮಾಲಗತ್ತಿ, ವಿಜಯಾಶ್ರೀ ಸಬರದ, ಬಿ.ಜಿ.ಕಲಾವತಿ, ಶ್ರೀದೇವಿ ಕೆರೆಮನೆ ಮುಂತಾದ ಲೇಖಕಿಯರ ವಿಚಾರ ಸಾಹಿತ್ಯದ ಕೃತಿಗಳನ್ನು ಈ ಅಧ್ಯಯನದ ವ್ಯಾಪ್ತಿಗೆ ಆಯ್ಕೆ ಮಾಡಿಕೊಳ್ಳಲಾಗಿದೆ. ಇವರ ವಿಚಾರ ಸಾಹಿತ್ಯದಲ್ಲಿ ಬಂದಿರುವ ಮಹಿಳಾ ಪ್ರಶ್ನೆಗಳನ್ನು ಹಲವು ಆಯಾಮದಲ್ಲಿ ಚರ್ಚಿಸಲಾಗಿದೆ.

ಈ ಎಲ್ಲಾ ಚಿಂತಕಿಯರು ವಿಚಾರ ಸಾಹಿತ್ಯದ ಜೊತೆಗೆ ಸೃಜನಶೀಲ ಸಾಹಿತ್ಯವಾದ ಕಥೆ, ಕಾದಂಬರಿ, ಕಾವ್ಯಗಳನ್ನು ರಚಿಸಿದ್ದಾರೆ. ಹೀಗಾಗಿ ಪ್ರಾಸಂಗಿಕವಾಗಿ ಕೆಲವು ಸಂದರ್ಭದಲ್ಲಿ ಈ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಜೊತೆಗೆ ಸಮಾಜಶಾಸ್ತ್ರ, ರಾಜ್ಯಶಾಸ್ತ್ರದ ಸಾಮಾನ್ಯ ತಿಳುವಳಿಕೆಯ

ನೆರವನ್ನು ಪಡೆಯಲಾಗಿದೆ. ಈ ಮೂಲಕ ಇದು ಬಹುಶಿಸ್ತೀಯ ಅಧ್ಯಯನದ ವ್ಯಾಪ್ತಿಯನ್ನು ಪಡೆದಿದೆ. ಕನ್ನಡ ವಿಚಾರ ಸಾಹಿತ್ಯದ ಪ್ರಮಾಣ ಬಹಳ ದೊಡ್ಡದು. ಮಹಿಳಾ ಪ್ರಶ್ನೆಗಳನ್ನಿಟ್ಟುಕೊಂಡು ಅಧ್ಯಯನ ಮಾಡಲು ಅದರ ಅತಿ ವ್ಯಾಪ್ತಿಯೇ ಈ ಅಧ್ಯಯನದ ಮಿತಿಯೂ ಆಗಿದೆ.

೧.೪. ಸಂಶೋಧನೆಯ ಸ್ವರೂಪ

ಪ್ರಸ್ತುತ ಸಂಶೋಧನ ಪ್ರಬಂಧದಲ್ಲಿ ಒಟ್ಟು ಹನ್ನೊಂದು ಅಧ್ಯಾಯಗಳನ್ನು ರೂಪಿಸಿಕೊಳ್ಳಲಾಗಿದೆ ಮತ್ತು ಅವನ್ನು ವಿಶ್ಲೇಷಿಸಲಾಗಿದೆ. ಮೊದಲ ಅಧ್ಯಾಯದಲ್ಲಿ ಅಧ್ಯಯನದ ಸ್ವರೂಪವನ್ನು ಚರ್ಚಿಸಲಾಗಿದೆ. ಅಧ್ಯಾಯ ಎರಡರಲ್ಲಿ ಇದುವರೆಗೂ ನಡೆದಿರುವ ಪೂರ್ವಾಧ್ಯಯನದ ಸಮೀಕ್ಷೆ ಮಾಡಲಾಗಿದೆ. ಅಧ್ಯಾಯ ಮೂರರಲ್ಲಿ ಪರಿಕಲ್ಪನಾತ್ಮಕ ಚರ್ಚೆಯನ್ನು ಮಾಡಲಾಗಿದೆ. ಅಧ್ಯಾಯ ನಾಲ್ಕರಲ್ಲಿ ಘಟನಾ ಕೇಂದ್ರಿತ ವಿಚಾರ ಸಾಹಿತ್ಯ ವಿಶ್ಲೇಷಣೆ ಮಾಡಲಾಗಿದೆ. ಅಧ್ಯಾಯ ಐದು ಮಹಿಳೆ ಮತ್ತು ಮೀಸಲಾತಿಯನ್ನು ಕುರಿತು ವಿಚಾರಗಳನ್ನು ವಿವರಿಸಲಾಗಿದೆ. ಅಧ್ಯಾಯ ಆರು ಮಹಿಳೆ: ಶಿಕ್ಷಣ–ಉದ್ಯೋಗದ ಬಗೆಗೆ ವಿವರಿಸಲಾಗಿದೆ. ಅಧ್ಯಾಯ ಏಳರಲ್ಲಿ ದುಡಿಯುವ ವರ್ಗದ ಮಹಿಳೆಯ ಕುರಿತು ವಿವರಿಸಲಾಗಿದೆ. ಅಧ್ಯಾಯ ಎಂಟರಲ್ಲಿ ಸಿನಿಮಾ ಧಾರಾವಾಹಿ, ಜಾಹೀರಾತುಗಳಲ್ಲಿ ಮಹಿಳೆಯ ಪ್ರಶ್ನೆಗಳ ಬಗೆಗೆ ಚರ್ಚಿಸಲಾಗಿದೆ. ಅಧ್ಯಾಯ ಒಂಭತ್ತರಲ್ಲಿ ಮಹಿಳಾ ಹೋರಾಟಗಳ ಚರ್ಚೆಯನ್ನು ಮಾಡಲಾಗಿದೆ. ಅಧ್ಯಾಯ ಹತ್ತರಲ್ಲಿ ಮತ, ಧರ್ಮದ ಪರಿಧಿಯಲ್ಲಿ ಮಹಿಳೆ ಕುರಿತು ವಿಶ್ಲೇಷಣೆ ಮಾಡಲಾಗಿದೆ. ಅಧ್ಯಾಯ ಹನ್ನೊಂದರಲ್ಲಿ ಸಮಾರೋಪ ಮತ್ತು ಅಧ್ಯಯನದ ಫಲಿತವನ್ನು ದಾಖಲಿಸಲಾಗಿದೆ.

ಅಧ್ಯಾಯ – ಎರಡು

ಇದುವರೆಗೂ ನಡೆದಿರುವ ಅಧ್ಯಯನಗಳ ಸಮೀಕ್ಷೆ

೨.೧. ಸಂಶೋಧನಾ ಪ್ರಬಂಧ ಅಥವಾ ಬರಹಗಳಲ್ಲಿ
ಮಹಿಳಾ ವಿಚಾರ ಸಾಹಿತ್ಯ ಕುರಿತ ಅಧ್ಯಯನಗಳು

೨.೨. ಸಾಹಿತ್ಯ ಕೃತಿಗಳಲ್ಲಿ ವಿಚಾರ ಸಾಹಿತ್ಯ ಕುರಿತ ಮುನ್ನುಡಿಗಳ ಅಧ್ಯಯನಗಳು

ಅಧ್ಯಾಯ – ಎರಡು

ಇದುವರೆಗೂ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಇತ್ತೀಚಿನಲ್ಲಿ ವೈಚಾರಿಕ/ವಿಚಾರ ಸಾಹಿತ್ಯವು ಹೆಚ್ಚಾಗಿ ರಚನೆಯಾಗುತ್ತಿರುವುದನ್ನು ಕಾಣುತ್ತೇವೆ. ಸೃಜನ ಮತ್ತು ಸೃಜನೇತರ ಸಾಹಿತ್ಯ ಎಂಬೆರಡು ಭಾಗವಾಗಿ ನೋಡಿದಾಗ ಸೃಜನಶೀಲ ಸಾಹಿತ್ಯದಲ್ಲಿ ಮೂಡಿಬರುವ ವಿಚಾರಗಳಿಗೂ ಹಾಗು ವಿಚಾರ ಸಾಹಿತ್ಯದಲ್ಲಿ ಮೂಡಿಬರುವ ವಿಚಾರಗಳಿಗೂ ವ್ಯತ್ಯಾಸವನ್ನು ಕಾಣಬಹುದು. ಕಥೆ, ಕಾದಂಬರಿ, ಕಾವ್ಯಗಳಲ್ಲಿ ವಿಚಾರವನ್ನ ಹೇಳುವುದಕ್ಕಿಂತ ಭಿನ್ನವಾಗಿ ವಿಚಾರ ಸಾಹಿತ್ಯದಲ್ಲಿ ವಿಚಾರವು ಸ್ಪಷ್ಟವಾಗಿ ರಚನೆ ಗೊಂಡಿರುವುದನ್ನ ಮನಗಾಣುತ್ತೇವೆ. ವಿಚಾರ ಸಾಹಿತ್ಯದಲ್ಲಿ ಸಮಾಜ, ಧರ್ಮ, ಸಂಸ್ಕೃತಿ, ಮಹಿಳೆ, ನಂಬಿಕೆ, ಆಚಾರ–ವಿಚಾರಗಳ ಕುರಿತಾದ ಅನೇಕ ಬರಹಗಳು ಬಂದಿವೆ ಮತ್ತು ಇಂದಿನವರೆಗೂ ಅವು ಹೆಚ್ಚು ಕಾಲ ಚರ್ಚಿತ ವಿಷಯವಾಗಿವೆ. ಹಾಗು ಅವುಗಳ ಮೂಲಕ ಪ್ರಸ್ತುತತೆಯ ತುಡಿತ ಮಿಡಿತಗಳನ್ನು ಹೇಳುತ್ತಿವೆ.

ವಿಚಾರ ಸಾಹಿತ್ಯದಲ್ಲಿ ಮಹಿಳಾ ಪ್ರಶ್ನೆಗಳು, ಅವಳ ಅಸ್ಮಿತೆಯ ಬಗೆಗೆ ಹಲವಾರು ಲೇಖಕಿಯರು/ಲೇಖಕರು ಚರ್ಚಿಸಿರುವುದನ್ನು ಕಾಣುತ್ತೇವೆ. ಪ್ರಸ್ತುತ ನನ್ನ ಅಧ್ಯಯನಕ್ಕೆ ಸಂಬಂಧಿಸಿದಂತೆ ಪೂರ್ವ ಅಧ್ಯಯನ ಸಮೀಕ್ಷೆಯನ್ನು ಲೇಖಕಿಯರು ಬರೆದಿರುವಂತಹ ವಿಚಾರ ಸಾಹಿತ್ಯದಲ್ಲಿ ಮಹಿಳಾ ಪ್ರಶ್ನೆಗಳ ಕುರಿತಾಗಿ ಬಂದಿರುವ ಬರಹಗಳನ್ನು ಅಳವಡಿಸಿಕೊಳ್ಳಲಾಗಿದೆ. ಹಾಗೆಯೇ ಮಹಿಳಾ ವಿಚಾರ ಸಾಹಿತ್ಯ ಅಧ್ಯಯನದ ಮೇಲೆ ಇದುವರೆಗೂ ನಡೆದಿರುವ ಸಂಶೋಧನಾ ಪ್ರಬಂಧಗಳು ಮತ್ತು ಆಯ್ದ ಸಾಹಿತ್ಯ ಕೃತಿಯ ಮುನ್ನುಡಿಗಳು, ಹಾಗೂ ಲೇಖನಗಳನ್ನು ಸಮೀಕ್ಷೆಗೆ ಬಳಸಿಕೊಳ್ಳಲಾಗಿದೆ.

ಅ. ಸಂಶೋಧನಾ ಪ್ರಬಂಧ ಅಥವಾ ಬರಹಗಳಲ್ಲಿ ಮಹಿಳಾ ವಿಚಾರ ಸಾಹಿತ್ಯ ಕುರಿತ ಅಧ್ಯನಯಗಳು.

ಆ. ಸಾಹಿತ್ಯ ಕೃತಿಗಳಲ್ಲಿ ವಿಚಾರ ಸಾಹಿತ್ಯ ಕುರಿತ ಮುನ್ನುಡಿಯ ಅಧ್ಯಯನಗಳು.

೨.೧. ಸಂಶೋಧನಾ ಪ್ರಬಂಧ ಅಥವಾ ಬರಹಗಳಲ್ಲಿ ಮಹಿಳಾ ವಿಚಾರ ಸಾಹಿತ್ಯ ಕುರಿತ ಅಧ್ಯಯನಗಳು:

ಕನ್ನಡ ಸಾಹಿತ್ಯದಲ್ಲಿ ವಿಚಾರ ಸಾಹಿತ್ಯಕ್ಕೆ ಸಂಬಂಧಿಸಿದಂತಹ ಬರಹಗಳು ತುಂಬಾ ಕಡಿಮೆ ಅದರಲ್ಲೂ ಮಹಿಳಾ ಪ್ರಶ್ನೆಗೆ ಸಂಬಂಧಪಟ್ಟ ಸಾಹಿತ್ಯದ ಮೇಲೆ ಸಂಶೋಧನಾ ಪ್ರಬಂಧಗಳು ಅಥವಾ ಬರಹ ತುಂಬಾ ವಿರಳವಾಗಿವೆ. ಸಿಕ್ಕಷ್ಟು ಪ್ರಬಂಧಗಳನ್ನು ಈ ಕೆಳಕಂಡಂತೆ ವಿಶ್ಲೇಷಿಸಿಕೊಂಡು ಅಧ್ಯಯನಕ್ಕೆ ಒಳಪಡಿಸಲಾಗಿದೆ.

'ಕನ್ನಡ ಮಹಿಳಾ ವಿಚಾರ ಸಾಹಿತ್ಯ' ಸಂಶೋಧಕರು ಸುಜಾತ.ಎಸ್ ಅವರು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದ ಡಾ.ಆರ್.ಸಿ.ಹಿರೇಮಠ ಅಧ್ಯಯನ ಕೇಂದ್ರಕ್ಕೆ ೨೦೦೮ರಲ್ಲಿ ಸಲ್ಲಿಸಿದ ಪಿಎಚ್.ಡಿ., ಮಹಾಪ್ರಬಂಧವಾಗಿದೆ. 'ಕನ್ನಡ ಮಹಿಳಾ ವಿಚಾರ ಸಾಹಿತ್ಯ' ಎಂಬ ಪ್ರಬಂಧದ ಶೀರ್ಷಿಕೆಯನ್ನು ನೋಡಿದಾಗ ಈ ಅಧ್ಯಯನವು ಕೇವಲ ಲೇಖಕಿಯರು ಬರೆದಿರುವ ವಿಚಾರ ಸಾಹಿತ್ಯವನ್ನು ಕುರಿತು ನಡೆದಿರುವ ಅಧ್ಯಯನವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಆದರೆ ಇವರ ಅಧ್ಯಯನದಲ್ಲಿ ಒಂದು ನಿರ್ಧಿಷ್ಟವಾದ ಆಕರಗಳು ಮತ್ತು ನಿಖರವಾದ ವ್ಯಾಪ್ತಿಯ ಬಗೆಗೆ ಖಚಿತವಾದ ಸ್ಪಷ್ಟತೆ ಇಲ್ಲದಿರುವುದು ಕಾಣುತ್ತದೆ. ಇವರು ತಮ್ಮ ಅಧ್ಯಯನದಲ್ಲಿ ಹೇಳುವ ಈ 'ಶುದ್ಧಸಾಹಿತ್ಯ'ವೆಂಬುದು ಸಾಹಿತ್ಯದಲ್ಲಿ ಇದೆಯೆ? ಶುದ್ಧ ಮತ್ತು ಅಶುದ್ಧ ಸಾಹಿತ್ಯವೆಂಬುದು ಇದೆಯೆ? ಎಂಬುದು ಇಲ್ಲಿ ಪ್ರಶ್ನೆಯಾಗಿದೆ. ಮುಂದುವರೆದು ಇವರು ವಿಚಾರ ಸಾಹಿತ್ಯದ ಪರಿಕಲ್ಪನೆ ಅಧ್ಯಾಯದಲ್ಲಿ ವಿಚಾರ ಸಾಹಿತ್ಯ ಮತ್ತು ವೈಚಾರಿಕತೆಯ ಪರಿಕಲ್ಪನೆಗಳ ಬಗೆಗೆ ನಿಖರವಾದ ಸ್ಪಷ್ಟತೆಯನ್ನು ಹೊಂದಿಲ್ಲ. ಇವರು 'ವಿಚಾರಶೀಲ ಸಾಹಿತ್ಯವೆಲ್ಲ ವಿಚಾರ ಸಾಹಿತ್ಯ' ಎಂಬ ನಿರಂಜನರ ವ್ಯಾಖ್ಯಾನವನ್ನ ಸಮರ್ಥಿಸಿ ಕೊಳ್ಳುತ್ತಾರೆ. ಇವರು ಮಹಿಳಾ ಸಾಹಿತ್ಯವನ್ನು ಕುರಿತು ಚರ್ಚಿಸುವ ಸಂದರ್ಭದಲ್ಲಿ 'ಮಹಿಳೆಯರು ಹೆಚ್ಚು ಹೆಚ್ಚು ಸಾಹಿತ್ಯದಲ್ಲಿ ತೊಡಗಿಸಿಕೊಂಡಿಲ್ಲ. ಬದಲಿಗೆ ಕಥೆ, ಕಾವ್ಯ, ಕಾದಂಬರಿಗಳಲ್ಲಿ ಮಾತ್ರ ತೊಡಗಿಸಿಕೊಂಡಿದ್ದಾರೆ. ಮಹಿಳೆಯರೂ ವಿಚಾರ ಸಾಹಿತ್ಯದಲ್ಲಿ ತೊಡಗಿಕೊಳ್ಳಬೇಕು' ಎನ್ನುವ ಅವರ ಮಾತಿನಲ್ಲಿ ಕನ್ನಡ ಸಾಹಿತ್ಯದ ಕತೆ, ಕಾವ್ಯ, ಕಾದಂಬರಿಗಳಲ್ಲಿ ವೈಚಾರಿಕತೆ ಅಥವಾ ವಿಚಾರ ಎನ್ನುವುದು ಇಲ್ಲ ಎನ್ನುವ ತೀರ್ಮಾನಕ್ಕೆ ಬರುತ್ತಾರೆ.

ಅಧ್ಯಾಯ ಮೂರರಲ್ಲಿ 'ಕನ್ನಡದಲ್ಲಿ ವಿಚಾರ ಸಾಹಿತ್ಯ ಪರಂಪರೆ' ಎಂಬ ಅಧ್ಯಾಯದಲ್ಲಿ ಪ್ರಾಚೀನ ಮತ್ತು ಆಧುನಿಕ ಕನ್ನಡ ಸಾಹಿತ್ಯ ಎಂಬ ಎರಡು ಉಪ ಅಧ್ಯಾಯವನ್ನು ಮಾಡಿಕೊಂಡಿದ್ದಾರೆ. ಪ್ರಾಚೀನ ಸಾಹಿತ್ಯದಲ್ಲಿ ವಿಚಾರ ಪರಂಪರೆಯನ್ನು ವೇದ, ಉಪನಿಷತ್ತ್‌ನಿಂದ ಆರಂಭಮಾಡಿ ಪಂಪ, ರನ್ನ, ಜನ್ನ, ವಚನ ಸಾಹಿತ್ಯ, ದಾಸ ಸಾಹಿತ್ಯ ಮತ್ತು ಸರ್ವಜ್ಞನ ತ್ರಿಪದಿಗಳ ಹಿನ್ನೆಯಲ್ಲಿ ವೈಚಾರಿಕತೆಯನ್ನು ಗುರುತಿಸುತ್ತಾರೆ. ಆಧುನಿಕ ಕನ್ನಡ ಸಾಹಿತ್ಯವನ್ನು ಗುರುತಿಸುವಾಗ ಗೋವಿಂದ ಪೈ, ಕುವೆಂಪು, ಜಿ.ಎಸ್.ಶಿವರುದ್ರಪ್ಪ, ಇವರಿಗೆ ಮಾತ್ರ ನಿಲ್ಲಿಸುತ್ತಾರೆ. ವಿಚಾರ ಸಾಹಿತ್ಯ ಚರ್ಚಿಸುವಾಗ ಈ ಕಾಲಘಟ್ಟದಲ್ಲಿನ ವ್ಯಾಪ್ತಿಯನ್ನು ಗುರುತಿಸಿ ಕೊಂಡಿರುವ ಲೇಖಕರಿಗೆ ಪರಂಪರೆ ಎಂದರೇನು ಮತ್ತು ಆ ಪರಂಪರೆ ಎನ್ನುವಂತಹದ್ದು ಇವರಿಗೆ ಎಷ್ಟು ಮಹತ್ವದ್ದಾಗಿದೆ ಎಂಬ ವಿಷಯಗಳನ್ನು ಕುರಿತು ಚರ್ಚಿಸಿದ್ದಾರೆ.

ಅಧ್ಯಾಯ ನಾಲ್ಕರಲ್ಲಿ ಮಹಿಳಾ ಅಸ್ಮಿತೆಯನ್ನು ಚರ್ಚಿಸಿದ್ದಾರೆ. ಇವರು ವಿವಿಧ ಹಂತಗಳಲ್ಲಿ ಮಹಿಳಾ ಅಸ್ಮಿತೆಯನ್ನ ಧರ್ಮಗಳ ಹಿನ್ನೆಲೆಯಲ್ಲಿ ಚರ್ಚಿಸುವಾಗ ಜೊರಾಷ್ಟ್ರಿಯನ್(ಇರಾನ್)ದಿಂದ ಮೊದಲುಗೊಂಡು ಹಿಂದೂ ಧರ್ಮ, ಮನುಸ್ಮೃತಿಯನ್ನು ಒಳಗೊಂಡಿದೆ. ಇದೇ ಅಧ್ಯಾಯದಲ್ಲಿ 'ಕನ್ನಡ ಸಾಹಿತ್ಯದಲ್ಲಿ ಮಹಿಳೆಯರು' ಎಂಬ ಶೀರ್ಷಿಕೆಯನ್ನು ರಚಿಸಿಕೊಂಡಿದ್ದಾರೆ. ಇದರಲ್ಲಿ ಪುನಃ ಧಾರ್ಮಿಕ ಹಿನ್ನೆಲೆಯಲ್ಲಿ ಚರ್ಚಿಸುವಾಗ ವೀರಶೈವ ಧರ್ಮದಲ್ಲಿ ಮಹಿಳೆಯರ ಅಸ್ಮಿತೆಯನ್ನು ಹೇಳುವಾಗ ಅಕ್ಕಮಹಾದೇವಿ, ಮುಕ್ತಾಯಕ್ಕ, ರೆಮ್ಮವ್ವೆ, ಮೋಳಿಗೆಯ ಮಹಾದೇವಿಯಮ್ಮ, ನೀಲಾಲೋಚನೆ ಸತ್ಯಕ್ಕ, ಆಯ್ದಕ್ಕಿ ಲಕ್ಕಮ್ಮ, ಉರಿಲಿಂಗ ಪೆದ್ದಿಗಳ ಪುಣ್ಯ ಸ್ತ್ರೀ ಕಾಳವ್ವೆ, ಹೊನ್ನಮ್ಮ ಇವರ ವಚನಗಳಲ್ಲಿ ವೈಚಾರಿಕಯನ್ನು ಅಧ್ಯಯನ ಮಾಡಿದ್ದಾರೆ.

'ಮಹಿಳೆ ಮತ್ತು ವೈಚಾರಿಕತೆ' ಈ ಅಧ್ಯಾಯದಲ್ಲಿ ಮಹಿಳೆಯರು ವೈಚಾರಿಕತೆಯ ನೆಲೆಯಿಂದ ಹಿಂದುಳಿಯಲು ಅಥವಾ ದೂರ ಉಳಿಯಲು ಕಾರಣಗಳನ್ನು ಹೀಗೆ ಗುರುತಿಸುತ್ತಾರೆ. ಅನಕ್ಷರತೆ, ಅಂಧಶ್ರದ್ಧೆ, ಅನಗತ್ಯ ಆಡಂಬರ, ಅನುಕರಣೆ, ಅತಿಸಂತಾನ ಈ ಎಲ್ಲಾ ಪರಿಕಲ್ಪನೆಗಳು ವೈಚಾರಿಕತೆಯಿಂದ ದೂರವಿರಲು ಕಾರಣಗಳಾಗಿವೆ ಎನ್ನುವ ನಿಲುವಿಗೆ ಬರುತ್ತಾರೆ. ಆದರೆ ಇವರು ಹೇಳಿರುವ ಪರಿಕಲ್ಪನೆಗಳನ್ನು ಗಮನಿಸಿದರೆ ಕೇವಲ ಹೆಣ್ಣಿಗೆ ಮಾತ್ರ ಆರೋಪಿಸಿ ಹೇಳಿದ್ದಾರೆ. ಇಲ್ಲಿ ಗಂಡಿನ ಅಥವಾ ಪುರುಷ ಪ್ರಧಾನ ಸಮಾಜದ ಪಾತ್ರವೂ ಇದೆ ಎಂಬುದನ್ನು ಗೌಣಗೊಳಿಸಿದ್ದಾರೆ. ಹಾಗೆಯೆ ಈ ಅಧ್ಯಾಯದಲ್ಲಿ ಸಾಹಿತ್ಯಿಕವಾಗಿ ವೈಚಾರಿಕತೆಯನ್ನು ಗುರುತಿಸುವುದಕ್ಕಿಂತ ಹೆಚ್ಚಾಗಿ ಸಾಮಾಜಿಕ ನೆಲೆಯಲ್ಲಿಯೆ ಚರ್ಚಿಸಿರುವುದು ಕಾಣಬಹುದು.

ಲೇಖಕರು ಆರಂಭದ ಅಧ್ಯಾಯದಲ್ಲಿ ಸಂಶೋಧನೆಯ ಉದ್ದೇಶ ಸ್ಪಷ್ಟಗೊಳಿಸುವಾಗ ಆರಂಭದಿಂದ ಇಲ್ಲಿಯ ವರೆಗೂ ಮಹಿಳೆಯರ ವಿಚಾರ ಸಾಹಿತ್ಯವನ್ನು ಕುರಿತು ಅಧ್ಯಯನ ಮಾಡುವುದಾಗಿ ಸ್ಪಷ್ಟ ಪಡಿಸಿದ್ದಾರೆ. ಆದರೆ ಎಲ್ಲಿಯೂ ಸಹ ಆಧುನಿಕ ಮಹಿಳಾ ವಿಚಾರ ಸಾಹಿತ್ಯವನ್ನು ಬಳಸಿಕೊಳ್ಳದೇ ಇರುವುದು ಇಲ್ಲಿನ ಮಹಾಪ್ರಬಂಧದ ಮಿತಿಯಾಗಿದೆ. ಮತ್ತು ವಚನ ಸಾಹಿತ್ಯ ಹಾಗೂ ಜಾನಪದವನ್ನು ಬಳಸಿಕೊಂಡಿದರಾದರೂ ನಿಖರವಾದ ನಿಲುವನ್ನು ಹೇಳುವುದಿಲ್ಲ. ಹಾಗಾಗಿ ಅವರು ಪ್ರಬಂಧದಲ್ಲಿ ಹೇಳಿರುವ ಉದೇಶಕ್ಕೂ ತಾತ್ತ್ವಿಕ ಹಿನ್ನೆಲೆಗೂ ಬಹಳ ಅಂತರವನ್ನು ಕಾಯ್ದುಕೊಂಡಿರುವುದು ಎದ್ದು ಕಾಣುತ್ತದೆ.

'ಸ್ತ್ರೀವಾದ' ಎಂಬ ಅಧ್ಯಾಯವನ್ನು ಮಾಡಿಕೊಂಡಿದ್ದಾರೆ. ಸ್ತ್ರೀವಾದದ ನೆಲೆಯಲ್ಲಿ ವಿಚಾರ ಸಾಹಿತ್ಯವನ್ನ ಗಮನಿಸಿದರಾದರೂ ೧೨ನೇ ಶತಮಾನವೇ ಮೊದಲು ಸ್ತ್ರೀವಾದದ ಕೇಂದ್ರಬಿಂದು ಎಂಬ ನಿಲುವನ್ನ ವ್ಯಕ್ತಪಡಿಸಿದ್ದಾರೆ. ಆದರೆ ವಚನ ಸಾಹಿತ್ಯದ ಕಾಲಘಟ್ಟದಲ್ಲಿದ್ದ ಹಲವಾರು ವೈರುಧ್ಯತೆಗಳಿದ್ದವು ಎಂಬುದನ್ನು ಈ ಸಂಶೋಧಕರು ಗಮನಿಸಿರುವುದಿಲ್ಲ.

ಮಹಾಪ್ರಬಂಧದ ವ್ಯಾಪ್ತಿಯನ್ನು ಹೇಳುವಂತಹ ಸಂದರ್ಭದಲ್ಲಿ ಕಾಲ, ಪ್ರದೇಶ, ಜನಾಂಗ ಈ ಯಾವುದಕ್ಕೂ ಸೀಮಿತಗೊಳಿಸಿಕೊಂಡಿಲ್ಲ. ಕನ್ನಡ ಸಾಹಿತ್ಯದ ಆರಂಭದ ಕಾಲಘಟ್ಟದಿಂದ ಹಿಡಿದು ಇಲ್ಲಿಯವರೆಗೆ ರಚನೆಯಾದ ಮಹಿಳೆಯರ ಎಲ್ಲಾ ಸಾಹಿತ್ಯವನ್ನು ದೃಷ್ಟಿಯಲ್ಲಿಟ್ಟು

ಕೊಳ್ಳಲಾಗಿದೆ ಎಂದು ಹೇಳಲಾಗಿದೆ. ಆನಂತರ ತಮ್ಮ ಪ್ರಬಂಧಕ್ಕೆ ನಿರ್ಧಿಷ್ಟವಾದ ಚೌಕಟ್ಟು ಎನ್ನುವುದಿಲ್ಲ ಹಾಗೂ ಸಮಗ್ರವಾದ ಅಧ್ಯಯನ ಇದಾಗಿದೆ ಎಂಬ ನಿಲುವನ್ನೂ ಸಹ ವ್ಯಕ್ತಪಡಿಸುತ್ತಾರೆ. ಹಾಗೆಯೇ ಪರಂಪರೆಯನ್ನ ಚರ್ಚಿಸುವ ಸಂದರ್ಭದಲ್ಲಿ ಪ್ರಾಸಂಗಿಕವಾಗಿ ಮಾತ್ರವೇ ಪ್ರಾಚೀನ ಸಾಹಿತ್ಯವನ್ನ ವಿಶ್ಲೇಷಿಸಿದ್ದಾರೆ. ಆಧುನಿಕ ಸಾಹಿತ್ಯದ ಸಂದರ್ಭವನ್ನು ವಿವರಿಸುವಾಗ ಕೇವಲ ರಾಷ್ಟ್ರಕವಿಗಳಿಗೆ ಮಾತ್ರ ಇವರ ಚರ್ಚೆಯನ್ನು ಸೀಮಿತಗೊಳಿಸಿಕೊಂಡಿರುವುದು ಕಾಣುತ್ತೇವೆ. ಈ ಮಧ್ಯಕಾಲೀನ ಸಾಹಿತ್ಯಕ್ಕೆ ಹೆಚ್ಚು ಒತ್ತು ನೀಡುತ್ತಾರೆ ಮತ್ತು ಆಧುನಿಕ ಮಹಿಳಾ ವೈಚಾರಿಕ ಚಿಂತಕಿಯರ ಪ್ರಸ್ತಾಪವನ್ನಿಲ್ಲಿ ಮಾಡಿರುವುದಿಲ್ಲ. ಒಟ್ಟಾರೆಯಾಗಿ ಈ ಮಹಾಪ್ರಬಂಧವು ವೈರುಧ್ಯಗಳಿಂದ ಕೂಡಿದ್ದಾಗಿದೆ.

ಒಟ್ಟಿನಲ್ಲಿ 'ಕನ್ನಡ ವಿಚಾರ ಸಾಹಿತ್ಯದಲ್ಲಿ ಮಹಿಳೆ' ಎನ್ನುವ ಈ ಅಧ್ಯಯನದಲ್ಲಿ ಹಲವು ಕ್ಷೇತ್ರಗಳಲ್ಲಿ ಮಹಿಳೆಯ ಸಹಭಾಗಿತ್ವ ಮತ್ತು ಮಹಿಳೆ ಬಗೆಗಿನ ಧೋರಣೆಗಳನ್ನು ಕುರಿತು ಅಧ್ಯಯನವನ್ನು ಕೈಗೊಳ್ಳಲಾಗಿದೆ. ವಿಚಾರ ಸಾಹಿತ್ಯದ ಬಗೆಗೆ ಸಂಶೋಧನೆಯನ್ನು ಮಾಡುವ ಸಂದರ್ಭಕ್ಕೆ ಸಂಶೋಧಕಿಯು ಯಥಾಪ್ರಕಾರ 'ಸೃಜನಶೀಲ ಸಾಹಿತ್ಯ' ಎನ್ನಿಸಿಕೊಂಡಿರುವ ಪ್ರಕಾರಗಳಲ್ಲೆ ಚರ್ಚಿಸಿದ್ದಾರೆ. ಮುಖ್ಯವಾಗಿ ತ್ರಿಪದಿ, ವಚನ, ಕಾವ್ಯ ಮುಂತಾದವುಗಳಿಗೆ ಅವರ ಅಧ್ಯಯನವನ್ನು ಸೀಮಿತಗೊಳಿಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ "ಕನ್ನಡ ಮಹಿಳಾ ವಿಚಾರ ಸಾಹಿತ್ಯ ಮಹಿಳಾ ಪ್ರಶ್ನೆಗಳು" ಎಂಬ ನನ್ನ ಅಧ್ಯಯನವು ಈ ಹಿಂದೆ ನಡೆದಿರುವ ಅಧ್ಯಯನಕ್ಕಿಂತ ಭಿನ್ನವಾಗಿದೆ. ವಿಚಾರ ಸಾಹಿತ್ಯದ ಬಗೆಗೆ ನಡೆದಿರುವ ಸಂಶೋಧನೆಗಳು ಕೆಲವೇ ಕೆಲವು ಮಾತ್ರ. ವಿಚಾರ ಸಾಹಿತ್ಯದಲ್ಲಿ ಮಹಿಳೆ, ಮಹಿಳಾ ಪ್ರಶ್ನೆಗಳು, ಮಹಿಳಾ ಪ್ರಶ್ನೆಯ ಸಾಮಾಜಿಕ ಮತ್ತು ಆರ್ಥಿಕ ಆಯಾಮ, ಚರಿತ್ರೆ ಮೊದಲಾದ ಆಕರಗಳನ್ನ ಬಳಸಿಕೊಂಡು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ. ಈ ಅಧ್ಯಯನವು ಅಧ್ಯಯನದ ಕ್ಷೇತ್ರವನ್ನಾಗಿ ಮಹಿಳಾ ವಿಚಾರ ಸಾಹಿತ್ಯವನ್ನು ಆಯ್ದುಕೊಂಡಿರುವುದರಿಂದ ಕಳೆದ ೭೦ರ ದಶಕದಿಂದ ಇಂದಿನವರೆಗೆ ಬಂದಿರುವ ಮಹಿಳಾ ವಿಚಾರ ಸಾಹಿತ್ಯವನ್ನು ಆಯ್ದು ಕೊಳ್ಳಲಾಗಿದೆ. ಮತ್ತು ಕೆಲವು ಪ್ರಮುಖ ಲೇಖಕಿಯರ ಹಾಗೂ ಕೃತಿಗಳ ಹಿನ್ನೆಲೆಯನ್ನಿಟ್ಟುಕೊಂಡು ಈ ಸಂಶೋಧನೆಯನ್ನು ಕೈಗೊಳ್ಳಲಾಗಿದೆ.

ಡಾ.ಗದ್ದಿಗೆಮ್ಮ ಪೂಜಾರ ಅವರ ಪ್ರಕಟಿತ ಪಿಎಚ್.ಡಿ., ಮಹಾಪ್ರಬಂಧ "ಡಾ.ಎಚ್.ತಿಪ್ಪೇರುದ್ರ ಸ್ವಾಮಿ ಅವರ ವಿಚಾರ ಸಾಹಿತ್ಯ" ಈ ಮಹಾಪ್ರಬಂಧದಲ್ಲಿ ವಿಚಾರ ಸಾಹಿತ್ಯದ ಲಕ್ಷಣ, ಹುಟ್ಟು, ಬೆಳವಣಿಗೆ ಹಾಗು ವಿಚಾರ ಸಾಹಿತ್ಯದ ಪರಿಕಲ್ಪನೆಗಳನ್ನು ಕುರಿತು ಚರ್ಚಿಸಲಾಗಿದೆ. ಲೇಖಕಿಯು ವಿಚಾರ ಅಥವಾ ವೈಚಾರಿಕತೆಯನ್ನು ಕುರಿತ ವ್ಯಾಖ್ಯಾನವನ್ನ ಹೀಗೆ ಹೇಳಿದ್ದಾರೆ "ವೈಚಾರಿಕತೆ ಎಂದರೆ ಯಾವುದೋ ಒಂದು ವಿಷಯವನ್ನು ವಿಮರ್ಶೆಯ ಒರೆಗಲ್ಲಿಗೆ ಉಜ್ಜಿ ಅದರ ಒಳಿತು ಕೆಡುಕುಗಳನ್ನ ಗುರುತಿಸಿ ಒಳಿತನ್ನ ಸ್ವೀಕರಿಸುವ ಕೆಡುಕನ್ನು ಬಿಟ್ಟುಬಿಡುವ ಚಿಂತನಾಕ್ರಮ ಅದು ನಿಂತ ನೀರಾಗಿರದೇ ಸದಾ ಬದುಕನ್ನು ಅರ್ಥಪೂರ್ಣವಾಗಿ ಹುಡುಕುತ್ತಾ ಸಾಗುವ ನಿರಂತರ ಕ್ರಿಯೆಯಾಗಿದೆ"[೧] ವಿಚಾರ ಸಾಹಿತ್ಯದ ಚಲನ ಶೀಲತೆಯನ್ನು ಕುರಿತು ಇವರು ಈ ವ್ಯಾಖ್ಯಾನದಲ್ಲಿ ಹೇಳಿದ್ದಾರೆ.

"ವಿಚಾರ ಸಾಹಿತ್ಯವನ್ನು ಈಗ ಒಂದು ಸಾಹಿತ್ಯ ಪ್ರಕಾರವಾಗಿ ಕೈಗೆತ್ತಿಕೊಳ್ಳಲಾಗುತ್ತಿದೆ. ಹಾಗೆ ನೋಡಿದರೆ ಸಾಹಿತ್ಯದಲ್ಲಿ ವೈಚಾರಿಕತೆ ಇದ್ದೇ ಇರುತ್ತದೆ. ವೈಚಾರಿಕತೆ ಇಲ್ಲದ ಸಾಹಿತ್ಯವಿರುವುದುಂಟೆ ಎಂದು ಪ್ರಶ್ನಿಸಬಹುದು. ಇದು ಇಂದಿಗೂ ಸಂಶಯವಾಗಿ ಕಾಡುತ್ತಿರುವ ಸಮಸ್ಯೆಗೆ ಉತ್ತರ ಕಂಡುಕೊಳ್ಳುವುದು ಮೊದಲನೆಯ ಕೆಲಸವಾಗಿದೆ. ಸಾಹಿತ್ಯದಲ್ಲಿ ಎರಡು ಪ್ರಕಾರ ಮಾಡಬಹುದು. ಒಂದು ಸೃಜನಶೀಲ ಸಾಹಿತ್ಯ. ಇನ್ನೊಂದು ಸೃಜನೇತರ ಸಾಹಿತ್ಯ. ಸೃಜನ ಸಾಹಿತ್ಯವೆಂದರೆ ಶಾಸ್ತ್ರ ಸಾಹಿತ್ಯ ವೆಂದಿಟ್ಟುಕೊಳ್ಳಬಹುದು. ಇದನ್ನೇ ವಿಚಾರ ಸಾಹಿತ್ಯವೆಂದೂ ಗುರುತಿಸಲಾಗಿದೆ."[೨] ಸಾಂಪ್ರದಾಯಿಕ ವಿಂಗಡಣೆಗಳಾದ 'ಸೃಜನಶೀಲ' ಮತ್ತು 'ಸೃಜನೇತರ' ಸಾಹಿತ್ಯ ಎಂಬ ಈ ಎರಡೂ ಪರಿಕಲ್ಪನೆಗಳನ್ನು ಲೇಖಕರು ಹೇಳಿದ್ದಾರೆ. ಮತ್ತು ವಿಚಾರ ಸಾಹಿತ್ಯ ಎಂಬುದು ನಿರ್ಧಿಷ್ಟವಾಗಿ ಇಂತಹದ್ದೇ ಸಾಹಿತ್ಯದಲ್ಲಿ ಇರುತ್ತದೆಂದು ವಿಂಗಡಿಸಲು ಸಾಧ್ಯವಿಲ್ಲ ಎಂಬುದನ್ನಿವರು ಚರ್ಚಿಸಿದ್ದಾರೆ.

'ಕನ್ನಡದಲ್ಲಿ ವಿಚಾರ ಸಾಹಿತ್ಯ' ಡಿ.ಡಿ. ರಾಮಕೃಷ್ಣ ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಯನ ಸಂಸ್ಥೆಗೆ ಸಲ್ಲಿಸಿರುವ ಪಿಎಚ್.ಡಿ., ಮಹಾಪ್ರಬಂಧ. ವಿಚಾರ ಸಾಹಿತ್ಯವನ್ನ ಕುರಿತಾದ ಸಂಕೀರ್ಣವಾದ ಒಳನೋಟವನ್ನು ಈ ಮಹಾಪ್ರಬಂಧವು ಒಳಗೊಂಡಿದೆ. ವಿಚಾರ ಸಾಹಿತ್ಯದ ಹಿನ್ನೆಲೆ ವಿಚಾರ ಸಾಹಿತ್ಯದ ತಾತ್ವಿಕ ನೆಲೆಗಳನ್ನು ಕನ್ನಡ ವಿಚಾರ ಸಾಹಿತ್ಯಕ್ಕೆ ಆದಂತಹ ಪ್ರಭಾವ ಪ್ರೇರಣೆಗಳನ್ನು ಮತ್ತು ಕನ್ನಡದ ಆಯ್ದ ವಿಚಾರ ಚಿಂತಕರ ಕೃತಿಗಳನ್ನು ಈ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

ಕನ್ನಡ ವಿಚಾರ ಸಾಹಿತ್ಯ ಬೆಳವಣಿಗೆಗೆ ಬೇರೆ ಬೇರೆ ವಲಯದಿಂದಾದ ಪ್ರಭಾವ ಮತ್ತು ಪ್ರೇರಣೆಯನ್ನು ಕುರಿತಂತೆ ಜೈನ, ಬೌದ್ಧ, ವಚನ, ಪೆರಿಯಾರ್, ನಾರಾಯಣಗುರು, ಗಾಂಧಿ, ಅಂಬೇಡ್ಕರ್, ಲೋಹಿಯಾ, ದಲಿತ ಪ್ಯಾಂಥರ್, ಕಾರ್ಲ್‌ಮಾರ್ಕ್ಸ್, ಲೆನಿನ್ ಮೊದಲಾದವರ ವಿಚಾರ ಧಾರೆಗಳನ್ನು, ವಿಚಾರ ಸಾಹಿತ್ಯ ಬೆಳೆದು ಬಂದಿರುವ ಬಗೆಗಳನ್ನು ಚರ್ಚಿಸಿದ್ದಾರೆ. ಈ ಮಹಾಪ್ರಬಂಧವು ಅನ್ಯಶಿಸ್ತುಗಳನ್ನೂ ಸಹ ಒಳಗೊಂಡ ಅಧ್ಯಯನವಾಗಿದೆ. ಈ ಅಧ್ಯಯನದ ವ್ಯಾಪ್ತಿಯು ನಿರ್ಧಿಷ್ಟವಾಗಿರದೆ ಅತೀ ವ್ಯಾಪ್ತಿಯನ್ನು ಒಳಗೊಂಡಿದೆ. ಇದೆ ಈ ಮಹಾಪ್ರಬಂಧದ ಮಿತಿಯೂ ಆಗಿದೆ. ಇವರ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಪ್ರಾತಿನಿಧಿಕ ಚಿಂತಕರ ಕೃತಿಗಳ ಚರ್ಚೆಯ ಸಂದರ್ಭಗಳಲ್ಲಿ ಸೃಜನಶೀಲ ಮತ್ತು ಅನುವಾದ ಎಂಬ ಎರಡು ವಿಭಾಗವನ್ನು ಅನುಸರಿಸಿದ್ದಾರೆ. ವಿಚಾರವಾದವು ಸೃಜನಶೀಲ ಕೃತಿಗಳಿಗಿಂತ ಅನುವಾದಿತ ಕೃತಿಗಳಲ್ಲಿಯೇ ವ್ಯಾಪಕವಾಗಿದೆ ಎಂಬುದು ಅಧ್ಯಯನಕಾರರ ನಿಲುವಾಗಿದೆ.

೨.೨. ಸಾಹಿತ್ಯ ಕೃತಿಗಳಲ್ಲಿ ವಿಚಾರ ಸಾಹಿತ್ಯ ಕುರಿತ ಮುನ್ನುಡಿಗಳ ಅಧ್ಯಯನಗಳು:

ಕನ್ನಡ ಸಾಹಿತ್ಯದ ಚರ್ಚೆಯಲ್ಲಿ ಮಹಿಳಾ ಪ್ರಶ್ನೆಗಳನ್ನು ಚರ್ಚಿಸಿದಂತೆ, ವಿಚಾರ ಸಾಹಿತ್ಯದಲ್ಲೂ ನೇರವಾಗಿ ಮಹಿಳಾ ಪ್ರಶ್ನೆಯನ್ನು ಹೆಚ್ಚು ಹೆಚ್ಚು ಚರ್ಚೆಗೆ ಒಳಪಡಿಸಿರುವುದನ್ನು ಕಾಣುತ್ತೇವೆ. ಆಯ್ದ ವೈಚಾರಿಕ ಕೃತಿಗಳ ಮಹಿಳಾ ಪ್ರಶ್ನೆಗಳನ್ನು ವಿಮರ್ಶಾತ್ಮಕವಾಗಿ ನೋಡಲಾಗಿದೆ.

"ಕನ್ನಡ ವಿಚಾರ ಸಾಹಿತ್ಯದಲ್ಲಿ ಸ್ತ್ರೀ ಅಸ್ಮಿತೆಯ ಹುಡುಕಾಟದ ನೆಲೆಗಳು" ಎಂಬ ಮಹಾಪ್ರಬಂಧವನ್ನು ಸಂಶೋಧಕರು ಗಾಯಿತ್ರಮ್ಮ ಟಿ., ಅವರು ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯದ ಅಧ್ಯಯನ ವಿಭಾಗದಕ್ಕೆ ೨೦೧೭ರಲ್ಲಿ ಸಲ್ಲಿಸಿದ್ದಾರೆ. 'ಕನ್ನಡ ವಿಚಾರ ಸಾಹಿತ್ಯದಲ್ಲಿ ಸ್ತ್ರೀ ಅಸ್ಮಿತೆಯ ಹುಡುಕಾಟದ ನೆಲೆಗಳು' ಎಂಬ ಪ್ರಬಂಧದಲ್ಲಿ ಕನ್ನಡ ಸಾಹಿತ್ಯದಲ್ಲಿ ಬರುವ ವಿಚಾರ ಚಿಂತಕರನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಆರಂಭಿಕ ಕಾಲಘಟ್ಟದಿಂದ ಹಿಡಿದು ಆಧುನಿಕ ಕಾಲಘಟ್ಟದ ಮಹಿಳಾ ಚಿಂತಕಿಯರವರೆಗೂ ತಮ್ಮ ಪ್ರಬಂಧದ ವ್ಯಾಪ್ತಿಯನ್ನು ಹಿಗ್ಗಿಸಿಕೊಂಡಿರುವುದು ತಿಳಿಯುತ್ತದೆ. ಆರಂಭಿಕ ಕಾಲಘಟ್ಟದಲ್ಲಿ ಬರುವ ತಿರುಮಲಾಂಬಾ, ಪಂಡಿತ ತಾರಾನಾಥ, ಕುವೆಂಪು, ಗೌರೀಶಕಾಯ್ಕಿಣಿ ಅವರನ್ನೊಳಗೊಂಡು ಪಿ.ಲಂಕೇಶ್, ದೇವನೂರ ಮಹಾದೇವ, ವಿಜಯಾ ದಬ್ಬೆ, ಬಿ.ಎನ್.ಸುಮಿತ್ರಾಬಾಯಿ, ಕೆ.ನೀಲಾ, ಎಚ್.ನಾಗವೇಣಿ, ಎಂ.ಎಸ್.ಆಶಾದೇವಿ, ವೀಣಾ ಬನ್ನಂಜೆ, ಈ ಎಲ್ಲಾ ಚಿಂತಕರನ್ನು ತಮ್ಮ ಅಧ್ಯಯನದಲ್ಲಿ ಪ್ರಮುಖವಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ಒಟ್ಟಾರೆ ವಿಚಾರ ಸಾಹಿತ್ಯದಲ್ಲಿ ಮಹಿಳಾ ಅಸ್ಮಿತೆಯ ಹುಡುಕಾಟವನ್ನು ಇವರು ತಮ್ಮ ಅಧ್ಯಯನದಲ್ಲಿ ಚರ್ಚೆಮಾಡಿದ್ದಾರೆ.

ಈ ಪ್ರಬಂಧದಲ್ಲಿ ಮಹಿಳಾ ಅಸ್ಮಿತೆಯನ್ನು ಹಲವಾರು ಆಯಾಮಗಳಲ್ಲಿ ಚರ್ಚೆಮಾಡಿದ್ದಾರೆ. ಇವರ ಅಧ್ಯಯನದಲ್ಲಿ ಮಹಿಳಾ ವಿಚಾರ ಚಿಂತಕಿಯರು ಮಹಿಳಾ ಅಸ್ಮಿತೆಯನ್ನು ಹೇಗೆ ಕಟ್ಟಿಕೊಟ್ಟಿದ್ದಾರೆ ಎಂಬುದನ್ನು ಇವರು ತಮ್ಮ ಅಧ್ಯಯನದಲ್ಲಿ ಹೇಳಿದ್ದಾರೆ. ಮೊದಲ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿಯನ್ನು ಚರ್ಚೆಮಾಡಿದ್ದಾರೆ. ಅಧ್ಯಾಯ ನಾಲ್ಕರಲ್ಲಿ 'ಸ್ತ್ರೀ ಅಸ್ಮಿತೆಯ ಸಾಮಾಜಿಕ ಆಯಾಮಗಳನ್ನು ಚರ್ಚೆ ಮಾಡಿದ್ದಾರೆ. ಸಾಮಾಜಿಕ ಆಯಾಮಗಳಾದ ಕೌಟುಂಬಿಕ ಹಿಂಸೆ, ಲಿಂಗತಾರತಮ್ಯ, ಧರ್ಮ ಮತ್ತು ಸಂಸ್ಕೃತಿ, ಮತ್ತು ಶಿಕ್ಷಣ ಎಲ್ಲಾ ಆಯಾಮಗಳಲ್ಲಿ ಮಹಿಳಾ ಅಸ್ಮಿತೆಯು ಹೇಗೆ ಚರ್ಚಿತವಾಗಿದೆ ಎನ್ನುವುದನ್ನು ಸ್ಥೂಲವಾಗಿ ಅಧ್ಯಯನ ಮಾಡಿದ್ದಾರೆ. ಆರ್ಥಿಕ ಆಯಾಮಗಳು ಎನ್ನುವ ಅಧ್ಯಾಯದಲ್ಲಿ ಮಹಿಳೆಯ ಆರ್ಥಿಕತೆಯ ಬಗ್ಗೆ ಚರ್ಚಿಸಿದ್ದಾರೆ. ಇಲ್ಲಿ ಆರ್ಥಿಕತೆಗೆ ಸಂಬಂಧಿಸಿದಂತೆ ಹೆಚ್ಚು ಮಹಿಳಾ ಚಿಂತಕಿಯರು ಬರೆದಿರುವ ವಿಚಾರ ಸಾಹಿತ್ಯವನ್ನೇ ಆಯ್ಕೆ ಮಾಡಿಕೊಂಡಿದಾರೆ. ಈ ಅಧ್ಯಾಯದಲ್ಲಿ ಎರಡು ಉಪ ಅಧ್ಯಾಯಗಳನ್ನಾಗಿ ವಿಭಾಗಿಸಿಕೊಳ್ಳಲಾಗಿದೆ. ಮಹಿಳೆ ಮತ್ತು ದುಡಿಮೆ, ಮಹಿಳೆ ಮತ್ತು ಜಾಗತೀಕರಣ ಇವುಗಳಲ್ಲಿ ಮಹಿಳೆಯ ದುಡಿಮೆಯನ್ನು ನಾಲ್ಕು ಹಂತದಲ್ಲಿ ಗುರುತಿಸಿದ್ದಾರೆ. ಜಾಗತೀಕರಣ ಮತ್ತು ಮಹಿಳೆಯ ಚರ್ಚೆಯಲ್ಲಿ ಪ್ರವಾಸೋದ್ಯಮದಲ್ಲಿ ಮಹಿಳೆಯನ್ನ ಶೋಷಣೆ ಮಾಡುತ್ತಿರುವ ಕುರಿತು ಚರ್ಚಿಸಲಾಗಿದೆ. ಜಾಗತೀಕರಣದ ಸಂದರ್ಭದಲ್ಲಿ ಮಹಿಳೆಯನ್ನು ಜಾಹೀರಾತು, ಸೌಂದರ್ಯ ಸ್ಪರ್ಧೆಗಳ ನೆಪದಲ್ಲಿ ಹೇಗೆ ಬಳಕೆ ಮಾಡಲಾಗುತ್ತಿದೆ. ಅವಳನ್ನು ಸರಕು ಸಂಸ್ಕೃತಿಯೊಳಗೆ ಹೆಣ್ಣಿನ ದೇಹವನ್ನೇ ಬಂಡವಾಳವನ್ನಾಗಿಸಿಕೊಳ್ಳುತ್ತಿರುವುದನ್ನು ಈ ಅಧ್ಯಾಯದಲ್ಲಿ ಚರ್ಚಿಸಿದ್ದಾರೆ.

'ಕನ್ನಡ ವಿಚಾರ ಸಾಹಿತ್ಯದಲ್ಲಿ ಸ್ತ್ರೀ ಅಸ್ಮಿತೆಯ ರಾಜಕೀಯ ಆಯಾಮಗಳು' ಈ ಅಧ್ಯಾಯದಲ್ಲಿ ರಾಜಕೀಯ ಕ್ಷೇತ್ರದಲ್ಲಿ ಮಹಿಳೆಗೆ ಇರುವಂತ ಸ್ಥಾನಮಾನಗಳನ್ನು ಚರ್ಚಿಸಿದ್ದಾರೆ. ಇಲ್ಲಿ ಮಹಿಳಾ

ಮೀಸಲಾತಿ, ರಾಜಕೀಯದಲ್ಲಿ ಮಹಿಳೆಯರ ಸಹಭಾಗಿತ್ವ ಯಾವ ನೆಲೆಯಲ್ಲಿವೆ. ಆ ಕ್ಷೇತ್ರಕ್ಕೆ ತಮ್ಮನ್ನು ತೊಡಗಿಸಿಕೊಳ್ಳಲು ಸ್ತ್ರೀಯರಿಗೆ ಎದುರಾಗುವ ಸಮಸ್ಯೆ ಮತ್ತು ಸವಾಲುಗಳು ಯಾವ ರೀತಿಯಾದವುಗಳು. ಚುನಾವಣೆಯ ಸಂದರ್ಭದಲ್ಲಿ ಮಹಿಳೆಯರಿಗೆ ಎದುರಾಗುವ ಸವಾಲುಗಳ ಬಗೆಗೆ ಚರ್ಚಿಸಿದ್ದಾರೆ. ರಾಜಕೀಯ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಮಹಿಳಾ ರಾಜಕಾರಣಿಗಳ ರಾಜಕೀಯ ಅನುಭವಗಳನ್ನು ಈ ಅಧ್ಯಾಯದಲ್ಲಿ ದಾಖಲಿಸಿರುವುದನ್ನೂ ಕಾಣಬಹುದು. ಈ ಕ್ಷೇತ್ರದಲ್ಲಿ ಸಚಿವೆಯಾಗಿ ಆಯ್ಕೆಯಾದ ಮಹಿಳಾ ಸಚಿವೆಯರಿಗೆ ನೀಡಿರುವ ಸ್ಥಾನ ಮಾನವನ್ನು ಈ ಅಧ್ಯಾಯದಲ್ಲಿ ಚರ್ಚಿಸಿದ್ದಾರೆ. ಕನ್ನಡ ವಿಚಾರ ಸಾಹಿತ್ಯದಲ್ಲಿ ಸ್ತ್ರೀ ಅಸ್ಮಿತೆಯ ಭಾಷಿಕ ಆಯಾಮಗಳು ಎನ್ನುವ ಅಧ್ಯಾಯದಲ್ಲಿ ಮಹಿಳೆಯನ್ನು ತಮ್ಮ ಲೇಖನ, ಕಥೆಗಳಲ್ಲಿ ಯಾವ ನೆಲೆ ಭಾಷಿಕ ಹಿನ್ನೆಲೆಯಲ್ಲಿ ಬಳಕೆ ಮಾಡಲಾಗಿದೆ ಎಂಬುದನ್ನು ಚರ್ಚಿಸಿದ್ದಾರೆ.

ಒಟ್ಟಾರೆಯಾಗಿ ಇವರು ತಮ್ಮ ಅಧ್ಯಯನದಲ್ಲಿ ಮಹಿಳಾ ಅಸ್ಮಿತೆಯ ಹುಡುಕಾಟದ ನೆಲೆಗಳನ್ನು ತಾತ್ವಿಕವಾಗಿ ಗುರುತಿಸಿದ್ದಾರೆ. ಸಂಶೋಧಕರು ಪ್ರಬಂಧದ ಅಧ್ಯಯನದ ಸಂದರ್ಭದಲ್ಲಿ ಮಹಿಳಾ ಅಸ್ಮಿತೆಯ ಬಗ್ಗೆ ಚರ್ಚಿಸುವಾಗ ಸ್ತ್ರೀವಾದಿ ಸಾಹಿತ್ಯದಲ್ಲಿ ಅಂದರೆ ಲೇಖಕಿಯರ ಸಾಹಿತ್ಯದಲ್ಲಿ ಮಹಿಳಾ ಅಸ್ಮಿತೆಯ ಹುಡುಕಾಟ ಹೆಚ್ಚಾಗಿದೆ. ಹಾಗೆಯೆ ಪುರುಷ ವಿಚಾರ ಸಾಹಿತಿಗಳಲ್ಲಿ ಸ್ತ್ರೀ ಅಸ್ಮಿತೆಯ ಹುಡುಕಾಟ ಕಡಿಮೆಯಿದೆ ಎಂದು ಚರ್ಚಿಸಿದ್ದಾರೆ. ಮುಂದುವರೆದು ಪುರುಷ ವಿಚಾರ ಚಿಂತಕರಲ್ಲಿ ಸ್ತ್ರೀಯರ ವಿಚಾರಗಳ ನ್ಯೂನ್ಯತೆಗಳು ಹೆಚ್ಚಾಗಿವೆ ಮತ್ತು ಪುರುಷರು ಸ್ತ್ರೀಯರನ್ನು ನಿರ್ಲಕ್ಷ್ಯ ಮಾಡಿದ್ದಾರೆ ಎನ್ನುವ ತಾತ್ವಿಕ ಧೋರಣೆಯನ್ನು ಇಲ್ಲಿ ಕಟ್ಟಿಕೊಡಲಾಗಿದೆ.

ಮೀನಾಕ್ಷಿಬಾಳಿ ಅವರ 'ಮನದ ಸೂತಕ ಹಿಂಗಿದೊಡೆ' ಎಂಬ ಕೃತಿಯ 'ಬೀದಿ ಅನುಭವಗಳು ಬರೆಹವಾದಾಗ' ಎಂಬ ಮುನ್ನುಡಿಯಲ್ಲಿ ಡಾ.ರಹಮತ್ ತರೀಕೆರೆ ಅವರು ಮೀನಾಕ್ಷಿಬಾಳಿ ಅವರ ಬರಹಗಳಲ್ಲಿನ ಸಾಮಾಜಿಕ ನೆಲೆಯ ಮತ್ತು ಮಾನವೀಯ ನೆಲೆಯಲ್ಲಿ ಮಹಿಳಾ ಪ್ರಶ್ನೆಗಳು ಹೇಗೆ ಮೂಡಿಬಂದಿವೆ ಎಂಬುದನ್ನ ಅವರು ಚರ್ಚಿಸುತ್ತಾರೆ. "ಮೂಲತಃ ಆಕ್ಟಿವಿಸ್ಟ್ ಆಗಿರುವ ಬಾಳಿ ಅವರು ಸಾಹಿತ್ಯ ವಿಶ್ಲೇಷಣೆಗೆ ಚಳುವಳಿಯ ಅನುಭವಗಳಿಂದಲೂ ಚಳುವಳಿಗೆ ಸಾಹಿತ್ಯದ ಅಧ್ಯಯನದಿಂದಲೂ ಶಕ್ತಿ ಹಾಯಿಸಿಕೊಳ್ಳುವ ಕೆಲವೇ ಸಾಮಾಜಿಕ ಕಾರ್ಯಕರ್ತರಲ್ಲಿ ಬಾಳಿಯವರೂ ಒಬ್ಬರು. ಇಲ್ಲಿನ ಚಿಂತನೆಗಳು ಮೂರ್ತವಾಗಿವೆ, ಸ್ಪಷ್ಟವಾಗಿವೆ, ನೇರವಾಗಿವೆ, ಸರಳವಾಗಿವೆ, ಪುರುಷವಾದ, ಕೋಮುವಾದ, ಜಾತಿವಾದ ಹೀಗೆ ನಮ್ಮ ಬಾಳನ್ನು ಕುಬ್ಜಮಾಡಿರುವ ಎಲ್ಲಾ ವಿಕಾರಗಳಿಗೆ ಅವರು ಇಲ್ಲಿ ತೋರಿರುವ ಸಿಟ್ಟು ಮತ್ತು ಪ್ರತಿರೋಧಗಳ ಹಿಂದೆ ಹೊಸ ಸಮಾಜ ಕಟ್ಟುವ ಕನಸಿದೆ. ಮಹಿಳೆಯು ತಾಯಿಯಾಗುವಾಗ ಪಡುವ ಜೈವಿಕ ಅನುಭವದ ಕಥನದಲ್ಲಿ ಆ ಝಲಕು ಮೈದೋರಿದೆ. ಸಾಮಾನ್ಯವಾಗಿ ವೈಚಾರಿಕ ಪ್ರಜ್ಞೆಯಿಂದ ತಾರ್ಕಿಕವಾಗಿ ಬರೆಯುವ ಇವರು ಕೆಲವು ವಿಷಯಗಳಲ್ಲಿ ಅಂತರ್‌ಮುಖಿಯಾಗಿದ್ದು, ಭಾವನಾತ್ಮಕವಾಗಿಯೂ, ಕಾವ್ಯಾತ್ಮಕವಾಗಿ ಬರೆಯಬಲ್ಲರು"[೩] ಲೇಖಕಿಯು ಹೇಳುವಂತೆ ಮಹಿಳೆಯರು ಸ್ವಾತಂತ್ರ್ಯವಾಗಿ ಬದುಕಿದರೂ ಅವರು ಪೂರ್ಣ ಸ್ವಾತಂತ್ರ್ಯದಿಂದ ತಮ್ಮನ್ನು ತಾವು ಒಳಗು ಮಾಡಿಕೊಂಡಿಲ್ಲ.

ಮತ್ತು ಎಷ್ಟೇ ವಿದ್ಯಾವಂತರಾಗಿದ್ದರೂ ಪುರುಷ ಪ್ರಧಾನ ಸಮಾಜದಿಂದ ಆಗುತ್ತಿರುವ ಶೋಷಣೆಯಿಂದ ಮುಕ್ತರಾಗಿಲ್ಲ ಎನ್ನುವುದು ಇವರ ನಿಲುವಾಗಿದೆ.

ಚಳುವಳಿಗಾರರಾದ ಕೆ.ನೀಲಾ ಅವರ 'ಬಾಳ ಕೌದಿ' ಕೃತಿಯ ಮುನ್ನುಡಿಯಲ್ಲಿ ಡಾ. ವಸು.ಎಂ.ವಿ. ಅವರು ಈ ರೀತಿಯಾಗಿ ಚರ್ಚಿಸಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಮೇಲ್ವರ್ಗದ ಸ್ತ್ರೀಯ ಆಗು-ಹೋಗುಗಳನ್ನೇ ಹೆಚ್ಚಾಗಿ ಚರ್ಚಿಸಿವೆ. ಆದರೆ ನೀಲಾ ಅವರು ಹೋರಾಟದ ಚಳುವಳಿಯ ಹಾಗು ಮಾರ್ಕ್ಸ್‌ವಾದದ ಹಿನ್ನೆಲೆಯಿಂದ ಬಂದ ಇವರು ತಳಸಮುದಾಯದ ಸ್ತ್ರೀಯನ್ನು ಅವಳ ಬದುಕು ಬವಣೆಯನ್ನು ತಮ್ಮ ಅಂಕಣ ಬರಹದಲ್ಲಿ ತರುವ ಕೆಲಸವನ್ನಿಲ್ಲಿ ಮಾಡಿದ್ದಾರೆ. ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ವಸು ಅವರ ಮಾತಿನಲ್ಲಿಯೆ ಹೇಳುವುದಾದರೆ. "ಬಾಳ ಕೌದಿ ಅಂಕಣಗಳು ಉತ್ತರ ಕರ್ನಾಟಕದ ದನಿಯೂ ಹೌದು, ಅದರಲ್ಲೂ ತಳಸಮುದಾಯದ ಸಂಕಟಗಳು ಇಲ್ಲಿ ನಿಚ್ಚಳವಾಗಿ ಪ್ರತಿನಿಧಿಸಲ್ಪಟ್ಟಿವೆ. ತಮಗೊಂದು ಸೂರಿಲ್ಲದೆ ಬೇರೆಯವರಿಗೆ ಸೂರು ಮಾಡಿಕೊಡುವ ಜನ ಇವರ ಗಮನ ಸೆಳೆಯುತ್ತಾರೆ. ಗಗನ ಮುಟ್ಟುವ ಕಟ್ಟುವ ಕಟ್ಟಡಗಳಲ್ಲಿ ವಾಸಿಸುವವರು ಇವರ ಆಯ್ಕೆಯಾಗಿರುವುದಿಲ್ಲ. ಸಾಮಾನ್ಯವಾಗಿ ಕನ್ನಡ ಸಾಹಿತ್ಯ ಉಳ್ಳವರ ಮನೆಯ ಹೆಣ್ಣಿನ ಸಮಸ್ಯೆಗಳನ್ನೋ ಇಲ್ಲವೆ ಅವರ ಮನೋವ್ಯಾಪಾರವನ್ನೋ ಆದರಿಸಿ ಬಂದಿದೆ. ತಳಸಮುದಾಯದ, ಬಡತನದ ಹೆಣ್ಣುಮಕ್ಕಳ ಬವಣೆಗೆ ಮಿಡಿಯುವ ಬರಹಗಳು ನೀಲಾ ಅವರಲ್ಲಿ ಕಾಣುತ್ತವೆ."[೪] ಈ ಹಿನ್ನೆಲೆಯಲ್ಲಿ ನೀಲಾ ಅವರ ವೈಚಾರಿಕ ಬರಹಗಳಲ್ಲಿ ಮಹಿಳೆಯ ಪ್ರಶ್ನೆಗೆ ಮಹತ್ವವನ್ನು ನೀಡಿದ್ದಾರೆ.

ನೀಲಾ ಕೆ. ಅವರ 'ಬದುಕು ಬಂದೀಖಾನೆ' ಕೃತಿಯ ಮುನ್ನುಡಿಯಲ್ಲಿ ಡಾ.ಜಿ.ರಾಮಕೃಷ್ಣ ಅವರು "ಮಹಿಳಾ ಪ್ರಶ್ನೆಗಳನ್ನು ಪ್ರಮುಖವಾಗಿ ಕೈಗೆತ್ತಿಕೊಳ್ಳುವ ಸಂಘಟನೆಯೊಂದರ ನೇತಾರರಾಗಿ ನೀಲಾ ಅವರು ಈ ಪುಸ್ತಿಕೆಯಲ್ಲಿ ಕ್ಷೇತ್ರದ ಸಮಸ್ಯೆಯ ಸ್ವರೂಪವನ್ನು ಅವರು ಸಂಧಿಸಿದ ಕೆಲವು ಮಹಿಳೆಯರ ಜೀವನ, ಅವರ ಆಕಾಂಕ್ಷೆಗಳು, ಅವರ ಹತಾಶೆಗಳು ಮತ್ತು ಅವರ ಮನೋವೇಧನೆ ನೀಲಾ ಅವರ ಪುಸ್ತಿಕೆಯಲ್ಲಿ ಪ್ರತಿಫಲನಗೊಂಡಿವೆ. ಯಾವುದು ನಿಜ ಮತ್ತು ಯಾವುದು ಸುಳ್ಳು ಎಂಬುದನ್ನು ತೀರ್ಮಾನಿಸುವುದಕ್ಕಿಂತಲೂ ಮುಖ್ಯವಾಗಿ ನಮ್ಮ ಸಮಾಜದ ಕೌಟುಂಬಿಕ ವ್ಯವಹಾರಗಳಲ್ಲಿ ಎಂತಹ ಘೋರವಾದ ಪಿಡುಗುಗಳು ಮನೆ ಮಾಡಿಕೊಂಡಿವೆ. ಮತ್ತು ಅದರಿಂದ ಎಂತಹ ವಿಪತ್ತುಗಳು ಸಂಭವಿಸುತ್ತದೆ ಎಂಬುದಕ್ಕೆ ನೀಲಾ ಅವರು ಸಕಾರಣವಾಗಿಯೇ ಒತ್ತು ಕೊಟ್ಟಿದ್ದಾರೆ. ಈ ರೀತಿಯ ಸಾಮಾಜಿಕ ಸಂರಚನೆಯ ಬಗ್ಗೆ ನಮ್ಮೆಲ್ಲರ ಪ್ರಜ್ಞೆಯನ್ನು ಬಡಿದೆಬ್ಬಿಸುವುದು ನೀಲಾ ಅವರ ಉದ್ದೇಶಗಳಲ್ಲೊಂದು."[೫]

ಡಾ. ವಸು ಮಳಲಿ ಅವರ 'ಒಡಲ ಬೆಂಕಿ ಆರದಿರಲಿ' ಕೃತಿಯಲ್ಲಿ 'ವಸು ಎನ್ನುವ ನಮ್ಮೊಳಗಿನ ಬೆಳಕು' ಎಂಬ ಮುನ್ನುಡಿಯಲ್ಲಿ ನೀಲಾ.ಕೆ. ಅವರು ಈ ರೀತಿಯಾಗಿ ವ್ಯಾಖ್ಯಾನಿಸಿದ್ದಾರೆ. ಇವರು ಇತಿಹಾಸದ ಪ್ರಾಧ್ಯಾಪಕರಾಗಿದ್ದರೂ ಕನ್ನಡ ಸಾಹಿತ್ಯದೊಂದಿಗಿನ ನಂಟು ಅಧಮ್ಯವಾಗಿತ್ತು. ಹಾಗೆಯೆ ಜನಪದದಿಂದ ಇತಿಹಾಸಕ್ಕೆ ಒಂದಕ್ಕೊಂದನ್ನು ಬೆಸೆದು ಸಾಮಾನ್ಯ ಜನಸಮುದಾಯದ

ರಚನೆಯಲ್ಲಾಗಿದ್ದಂತ ಬದಲಾವಣೆಗಳ ಕುರಿತ ಹಾಗೂ ತಳಸಮುದಾಯಗಳ ಅಧ್ಯಯನ ಮಾಡುವಲ್ಲಿ ಅತ್ಯಂತ ಆಸಕ್ತರಾಗಿದ್ದರು. "ವೈದಿಕಶಾಹಿ ವಿದ್ಯಮಾನಗಳು ಕೆರಳಿಸುತ್ತಿದ್ದವು. ಕೋಮುವಾದಿ ಸಂಗತಿಗಳು ಚಿಂತೆಗೆ ದೂಡುತ್ತಿದ್ದವು. ವಸು ಕ್ರಮೇಣ ಸೈದ್ಧಾಂತಿಕವಾಗಿ ಸ್ಪಷ್ಟವಾಗುತ್ತ, ಮಹಿಳಾ ಅಸ್ಮಿತೆ, ಅಸ್ತಿತ್ವದ ಪ್ರಜ್ಞೆಯೊಂದಿಗೆ, ಜಾತ್ಯಾತೀತ ನಿಲುಮೆಯೊಂದಿಗೆ, ದಲಿತ, ಮಹಿಳೆ, ಶೂದ್ರ, ಆದಿವಾಸಿ, ಬುಡಕಟ್ಟು, ಅಲೆಮಾರಿ, ದೇವದಾಸಿ, ಸೆಕ್ಸ್‌ವರ್ಕರ್, ಮತ್ತು ಹಿಜಡಾ ಸಮುದಾಯದ ನಡುವೆ ಚಿಂತನೆ ಪಸರಿಸುವ ಕಾರ್ಯಕ್ಕಿಳಿದರು"[೬] ವಸು ಅವರ ಬರಹಗಳಲ್ಲಿ ವೈಚಾರಿಕವಾಗಿ ಮಾತ್ರವಲ್ಲದೆ ಅಂಚಿಗೆ ತಳ್ಳಲ್ಪಟ್ಟ ಮಹಿಳೆಯರ ಮತ್ತು ತಳಸಮುದಾಯಗಳ ಜೀವ ಪರವಾದ ಕಾಳಜಿಯನ್ನು ಕಾಣಬಹುದಾಗಿದೆ.

ಎನ್.ಗಾಯಿತ್ರಿ ಅವರ 'ಸಂಚಲ' ಕೃತಿಯ 'ಓದುಗರೊಂದಿಗೆ' ಎಂಬ ಮುನ್ನುಡಿಯಲ್ಲಿ ಈ ಕೃತಿಯಲ್ಲಿ ಮೂಡಿರುವ ವೈಚಾರಿಕತೆ ಮತ್ತು ಮಹಿಳಾ ಪ್ರಶ್ನೆಯ ಬಗೆಗೆ ಜಿ.ರಾಮಕೃಷ್ಣ ಅವರು ಚರ್ಚಿಸಿದ್ದಾರೆ. "ಚಾರಿತ್ರಿಕವಾಗಿ ನೋಡಿದರೆ ಮಹಿಳೆಯ ವಿಕಾಸದ ಹಾದಿ ಹಲವು ಅಡಚಣೆಗಳ ಆಗರವಾಗಿದೆ. ವಿಶ್ವದ ಎಲ್ಲ ಮಹಿಳೆಯರಿಗೂ ಅನ್ವಯಿಸುತ್ತವೆ ನಿಜ; ಆದರೆ ನಮ್ಮವೇ ಕೆಲವು ವಿಶಿಷ್ಟ ತೊಡಕುಗಳೂ ಇವೆ. ಅದಕ್ಕೆ ನಮ್ಮ ಚರಿತ್ರೆ, ಸಾಮಾಜಿಕ ರಚನೆ, ಸಂಪ್ರದಾಯ, ಕೆಲವೊಮ್ಮೆ ಜಡ್ಡುಗಟ್ಟಿದ ಭಾವನೆಗಳು, ಎಲ್ಲಾ ಕಾರಣವಾಗಿವೆ. ಒಟ್ಟಿನಲ್ಲಿ ಹೇಳುವುದಾದರೆ, ಮಹಿಳಾ ಪ್ರಶ್ನೆಯ ವಿವಿಧ ಆಯಾಮಗಳನ್ನು ಗುರುತಿಸುವಲ್ಲಿ ಸಂಚಲ ಆಪ್ತಸಹಾಯ ನೀಡಲು ಸಮರ್ಥವಾಗಿದೆ."[೭] ಲೇಖಕಿಯು ಈ ಕೃತಿಯಲ್ಲಿ ಹಲವಾರು ವಲಯಗಳಲ್ಲಿ ಮಹಿಳೆಯನ್ನು ದೂರವಿಟ್ಟು ನೋಡಿರುವ ಮತ್ತು ಅವಳ ಪ್ರಾಮುಖ್ಯತೆಯ ಪ್ರಶ್ನೆಗಳನ್ನು ಇಲ್ಲಿ ವೈಚಾರಿಕವಾಗಿ ಹಾಗು ಸವಿವರವಾಗಿ ಚರ್ಚಿಸಿದ್ದಾರೆ.

ಡಾ.ವಿಜಯಾ ಅವರ 'ಸುಡಿ ರಂಗೋಲಿ' ಎಂಬ ಕೃತಿಯಲ್ಲಿ 'ಮಹಿಳೆ-ವೈಚಾರಿಕತೆ' ಎಂಬ ಲೇಖನದಲ್ಲಿ ಕನ್ನಡ ಸಾಹಿತ್ಯದಲ್ಲಿ ಮಹಿಳೆಯರಿಗೆ ಕೊಟ್ಟಿರುವ ಸ್ಥಾನಮಾನ ಕುರಿತು ಚರ್ಚಿಸುತ್ತಾ, ವೈದಿಕ ಸಾಹಿತ್ಯದ ನೆಲೆಯನ್ನೇ ಎಲ್ಲಾ ಕಾಲಕ್ಕು ಮುಂದುವರೆಸಿಕೊಂಡು ಬಂದಿರುವುದನ್ನು ಕಟುವಾಗಿ ಟೀಕಿಸುತ್ತಾರೆ. ಅಲ್ಲದೆ ಕೇವಲ ಪುರುಷರು ಬರೆದಂತಹ ಸಾಹಿತ್ಯವು ಬ್ರಾಹ್ಮಣೀಕರಣಕ್ಕೆ ಒಳಗಾಗದೇ ಮಹಿಳಾ ಲೇಖಕಿಯರೂ ಸಹ ಈ ನೆಲೆಯನ್ನೇ ಮುಂದುವರಿಸಿಕೊಂಡು ಬಂದಿರುವುದರ ಬಗೆಗೆ ನಿರಾಶೆಯನ್ನು ವ್ಯಕ್ತಪಡಿಸುತ್ತಾರೆ. ಮಹಿಳೆಯರು ವೈಚಾರಿಕವಾಗಿ ವಿಚಾರವಂತರಾಗದಿರಲು ಅದಕ್ಕೆ ಕಾರಣಗಳನ್ನೂ ನೀಡುತ್ತಾರೆ. "ಸಾಗುತ್ತಿರುವ ಹಾದಿಯ ಪೊಳ್ಳುತನದ ಬಗ್ಗೆ ಸ್ಪಷ್ಟ ಅರಿವಿದ್ದರೂ ಕ್ರಿಯಾತ್ಮಕವಾಗಿ ತೊಡಗಲು ನೂರೆಂಟು ಸಮಸ್ಯೆಗಳಿರುವ ಹಾದಿ ಕಾಣದ ಸ್ಥಿತಿ ನಮ್ಮದು. ಗಂಡು-ಹೆಣ್ಣು ಇಬ್ಬರೂ ಒಟ್ಟಾಗಿ ಆಲೋಚಿಸಿ ನಿರ್ಮಿಸಿದ ಸಮಾಜದಲ್ಲಿ ಮಾತ್ರ ವೈಚಾರಿಕತೆಯ ಹೊಳವು ಕಂಡೀತೆಂಬ ಮಾತನ್ನು ಅನೇಕರು ಗೊತ್ತಿದ್ದೂ ಹೇಳದೆ ತೆಪ್ಪಗಿರುತ್ತಾರೆ. ಬದಲಾವಣೆಗೆ ಅವಕಾಶವೇ ಇಲ್ಲದಂಥ ಭ್ರಾಮಕ ವಾತಾವರಣದಲ್ಲಿರುವ ನಾವು ಇದ್ದುದನ್ನು ಬರೆಯಲಾಗದೆ, ಬೇಕಾದ ಆದರೆ ಇಲ್ಲದ ವಾತಾವರಣವನ್ನು ತರಲಾಗದೆ, ಕೇವಲ ಮಾತಿನಲ್ಲಿ

ಕಾಲ ಹಾಕುತ್ತೇವೆ. ಇದಾವುದರ ಅರಿವಿಲ್ಲದ ಬಡಹೆಂಗಸು ಶ್ರೀಮಂತರ ವೇಶ್ಯೆಯಾಗಿ, ಕೆಲಸದ ಆಳಾಗಿ, ಅಡಿಗೆ ಮನೆಯ ದಾಸಿಯಾಗಿ, ಇಷ್ಟ ಇದ್ದೋ ಇಲ್ಲದೆಯೋ ಗಂಡನ ಹಾಸಿಗೆಗೆ ನೈವೇದ್ಯವಾಗುತ್ತ, ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಕ್ಷಣ ಕ್ಷಣದಲ್ಲೂ ಪುರುಷ, ಜಾತಿ, ಅಧಿಕಾರಶಾಹಿ, ಧರ್ಮ, ಕಾನೂನುಗಳ ಮೂಲಕ ಶೋಷಣೆಗೆ ಒಳಗಾಗುತ್ತಲೇ ಇದ್ದಾಳೆ ಎಂದ ಮೇಲೆ ವೈಚಾರಿಕತೆ ಎಲ್ಲಿದೆ?"[೮] ಹೀಗೆ ಅಸಹನೆ, ಸಿಟ್ಟು ಪ್ರತಿರೋಧವನ್ನೊಡ್ಡುತ್ತಾ, ವ್ಯವಸ್ಥೆಯಲ್ಲಿನ ಮಹಿಳಾ ಪ್ರಶ್ನೆಗಳ ಬಗೆಗೆ ದಿಟ್ಟವಾಗಿ ಚರ್ಚಿಸಿದ್ದಾರೆ.

ಬಿ.ಎನ್.ಸುಮಿತ್ರಾಬಾಯಿ ಅವರ 'ಸರಹದ್ದುಗಳ ಆಚೆ-ಈಚೆ' ಕೃತಿಯ ಮುನ್ನುಡಿಯಲ್ಲಿ ಎನ್.ಮನುಚಕ್ರವರ್ತಿಯವರು ೧೪ ಲೇಖನಗಳು ನಾಲ್ಕು ವಿಭಾಗಗಳಲ್ಲಿ ಇರುವ ಈ ಕೃತಿ ಹಾಗೂ ವಿಮರ್ಶಾ ಧೋರಣೆಗಳನ್ನು ಕುರಿತು ಹೀಗೆ ವ್ಯಾಖ್ಯಾನಿಸಿದ್ದಾರೆ. ಸುಮಿತ್ರಾಬಾಯಿ ಅವರು ತಮ್ಮ ಬರಹಗಳಲ್ಲಿ ಪಾಶ್ಚಾತ್ಯ ಮಾದರಿಗಳನ್ನು ಅಧ್ಯಯನದ ವಿನ್ಯಾಸಕ್ಕೆ ಬಳಸಿಕೊಳ್ಳದೆ, ನಮ್ಮ ಸಾಂಸ್ಕೃತಿಕ ನೆಲೆಯಿಂದಲೇ ಪರಿಕಲ್ಪನೆಗಳನ್ನು ಕಟ್ಟಿಕೊಂಡಿದ್ದಾರೆ. ಹಾಗೆಯೇ ಸ್ತ್ರೀವಾದಿ ನೆಲೆಯಿಂದ ಪರಂಪರೆಯನ್ನು ವಿಶ್ಲೇಷಿಸುವ ಪ್ರಯತ್ನವನ್ನು ಮಾಡುತ್ತಾರೆ. ಜೊತೆ ಜೊತೆಗೆ ಹೆಣ್ತನ ಅಂದರೆ ಸ್ತ್ರೀತ್ವವನ್ನು ಕುರಿತಂತೆ ಇರುವ ಒಪ್ಪಿತ ಮೌಲ್ಯದ ಮಾತುಗಳಾದ ಹೆಣ್ಣು ಪೂಜ್ಯನೀಯಳು, ದೇವಿ ಪರಿಕಲ್ಪನೆ, ಮುಕ್ತಿಯ ಮಾರ್ಗ ಮುಂತಾದವುಗಳನ್ನು ಪ್ರಶ್ನಿಸುತ್ತಾ, ಅಮೂರ್ತವಾಗಿ ಹೆಣ್ಣನ್ನು ನೋಡದೆ ಸಮಕಾಲೀನ ಸಂದರ್ಭದ ಬದುಕಿನೊಂದಿಗೆ ಮುಖಾಮುಖಿಯಾಗುವ ಸ್ತ್ರೀವಾದಿ ನೆಲೆಯನ್ನು ಕಟ್ಟುವ ಕೆಲಸವನ್ನು ಇವರು ಮಾಡಿದ್ದಾರೆ.

ಎಂ.ಎಸ್, ಆಶಾದೇವಿಯವರ 'ಸ್ತ್ರೀ ಮತವನ್ನುತ್ತರಿಸಲಾಗದೆ?' ಈ ಕೃತಿಯ ಮುನ್ನುಡಿಯಲ್ಲಿ ಆಶಾದೇವಿಯವರ ಚಿಂತನೆಗಳನ್ನು ಕುರಿತು ರಾಜೇಂದ್ರ ಚೆನ್ನಿ ಈ ಕೆಳಕಂಡಂತೆ ಅಭಿಪ್ರಾಯ ಪಟ್ಟಿದ್ದಾರೆ. ಮೂಲಭೂತವಾದ ಸಾಹಿತ್ಯಗಳನ್ನು ಆಶಾ ಅವರ ಬರಹವು ಪ್ರಶ್ನಿಸುವ ಕೆಲಸವನ್ನು ಮಾಡುತ್ತವೆ ಹಾಗೂ ಚಳುವಳಿಗಳು ವಿಕೇಂದ್ರೀಕರಣಗೊಳ್ಳುತ್ತಾ ಅವುಗಳು ನಿರ್ಧಿಷ್ಟ ಗುರಿಯನ್ನು ತಲುಪಲು ಸಾಧ್ಯವಾಗಿಲ್ಲ. ಹಾಗಾಗಿಯೇ ಮಹಿಳಾ ಪ್ರಶ್ನೆಗಳು, ಸ್ತ್ರೀವಾದ ಕೇವಲ ಮಹಿಳೆಯರಿಗೆ ಮಾತ್ರ ಸಂಬಂಧಿಸಿದ್ದಲ್ಲ. ಬದಲಿಗೆ ಅದು ಎಲ್ಲರಿಗೂ ಸಂಬಂಧಿಸಿದ್ದು. ವಚನ ಚಳುವಳಿಯನ್ನ ಕುರಿತ ಲೇಖಕಿಯ ನಿಲುವು ಪ್ರಜ್ಞಾವಲಯದಿಂದ ಬಂದದ್ದು. ವಚನ ಚಳುವಳಿಯಲ್ಲಿ ಬಸವಣ್ಣನಿಗೆ ಇತರ ಸವಾಲುಗಳು ನಿದ್ದೆ ಕೆಡಿಸಿದಂತೆ ಮಹಿಳಾ ಪ್ರಶ್ನೆಗಳು ಸಮಸ್ಯೆಯಾಗಿ ಕಾಡಿದಂತಿಲ್ಲ ಎನ್ನುವ ಅವರ ಚಿಂತನೆಗಳು ಕೇವಲ ಉಗ್ರ ಸ್ತ್ರೀವಾದದ ಪ್ರತೀಕವೆಂದು ತಳ್ಳಿ ಹಾಕುವಂತವುಗಳಲ್ಲ. ಸೈದ್ಧಾಂತಿಕವಾಗಿ ಪ್ರಬಲವೂ, ಸಂವೇದನೆಯಲ್ಲಿ ಸೂಕ್ಷ್ಮವೂ ಆಗಿವೆ ಎಂದು ರಾಜೇಂದ್ರ ಚೆನ್ನಿಯವರು ಅಭಿಪ್ರಾಯ ಪಡುತ್ತಾರೆ

ಕೊನೆಟಿಪ್ಪಣಿಗಳು

೧. ಗದ್ದಿಗೆಮ್ಮ ಪೂಜಾರ, 'ಡಾ. ಎಚ್. ತಿಪ್ಪೆರುದ್ರಸ್ವಾಮಿಯವರ ವಿಚಾರ ಸಾಹಿತ್ಯ', ಪು.೩೯
೨. ಅದೇ, ಪು.೩೯
೩. ಮೀನಾಕ್ಷಿಬಾಳಿ. 'ಮನದ ಸೂತಕ ಹಿಂಗಿದೊಡೆ'
೪. ಕೆ.ನೀಲಾ, 'ಬಾಳಕೌದಿ'
೫. ಕೆ. ನೀಲಾ, 'ಬದುಕು ಬಂಧೀಖಾನೆ' ಪುಟ-೬
೬. ವಸು ಮಳಲಿ, 'ಒಡಲ ಬೆಂಕಿ ಆರದಿರಲಿ', ಪು-ix
೭. ಎನ್. ಗಾಯಿತ್ರಿ, 'ಸಂಚಲ', ಪುಟ.೪-೫
೮. ವಿಜಯಾ, 'ನುಡಿ ರಂಗೋಲಿ', ಪುಟ-೧೦೯
೯. ಆಶಾದೇವಿ. ಎಂ. ಎಸ್. 'ಸ್ತ್ರೀ ಮತವನ್ನುತ್ತರಿಸಲಾಗದೆ?', ಪುಟ-

ಅಧ್ಯಾಯ – ಮೂರು

ಪರಿಕಲ್ಪನೆ ಚರ್ಚೆ

ಅಧ್ಯಾಯ – ಮೂರು

ಪರಿಕಲ್ಪನೆ ಚರ್ಚೆ

‘ಕನ್ನಡ ಮಹಿಳಾ ವಿಚಾರ ಸಾಹಿತ್ಯ : ಮಹಿಳಾ ಪ್ರಶ್ನೆಗಳು’ ಎಂಬ ವಿಷಯವನ್ನು ಸಂಶೋಧನೆಗೆ ರೂಪಿಸಿಕೊಳ್ಳಲಾಗಿದೆ. ಈ ಪ್ರಸ್ತುತ ವಿಷಯವನ್ನು ಸಂಶೋಧನೆಗೆ ಗೊತ್ತುಪಡಿಸುವುದು ಇಲ್ಲಿನ ಪ್ರಮುಖವಾಗಿ ಪರಿಕಲ್ಪನೆಗಳನ್ನು ಅರ್ಥೈಸಿಕೊಳ್ಳುವುದು ಸೂಕ್ತವಾಗಿದೆ. ಹಾಗಾಗಿ ಪ್ರಸ್ತುತ ಅಧ್ಯಾಯದಲ್ಲಿ ಸಂಶೋಧನಾ ವಿಷಯದಲ್ಲಿ ಕಂಡುಬರುವ ಪ್ರಮುಖ ಪರಿಕಲ್ಪನೆಗಳಾದ ಕನ್ನಡ ವಿಚಾರ ಸಾಹಿತ್ಯ, ವಿಚಾರ ಸಾಹಿತ್ಯ ಮತ್ತು ಮಹಿಳೆ, ಮಹಿಳಾ ಪ್ರಶ್ನೆಗಳು ಎಂಬ ಪರಿಕಲ್ಪನೆಗಳನ್ನು ಕುರಿತು ಚರ್ಚಿಸಲಾಗುವುದು. ಇಲ್ಲಿ ವಿಚಾರ ಸಾಹಿತ್ಯದ ಹಿನ್ನೆಲೆ, ವಿಚಾರ ಸಾಹಿತ್ಯವು ಬೆಳೆದು ಬಂದ ಬಗೆ, ಅದರ ವ್ಯಾಪ್ತಿ ಮತ್ತು ಸ್ವರೂಪವನ್ನು ಕುರಿತು ಮತ್ತು ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ವಿಚಾರ ಸಾಹಿತ್ಯವು ಹೇಗೆ ಪರಿಣಾಮ ಬೀರಿದೆ, ಕನ್ನಡದಲ್ಲಿ ಅನೇಕ ವಿದ್ವಾಂಸರು ವಿಚಾರ ಸಾಹಿತ್ಯವನ್ನು ಹೇಗೆ ಬೆಳೆಸಿಕೊಂಡು ಬಂದಿದ್ದಾರೆ ಎಂಬ ಚಾರಿತ್ರಿಕ ಹಿನ್ನೆಲೆಯಲ್ಲಿ ಚರ್ಚೆಯನ್ನು ಇಲ್ಲಿ ಕೈಗೊಳ್ಳಲಾಗಿದೆ. ಕನ್ನಡದಲ್ಲಿನ ಮಹಿಳಾ ವಿಚಾರ ಸಾಹಿತ್ಯ ಹಾಗೂ ಮಹಿಳಾ ಪ್ರಶ್ನೆಗಳು ಹೇಗೆ ಅನುಸಂಧಾನದ ನೆಲೆಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಚರ್ಚೆಗೆ ಗುರಿಪಡಿಸಲಾಗುವುದು.

ಮಹಿಳಾ ಸಾಹಿತ್ಯ, ಮಹಿಳಾ ವಿಚಾರ ಸಾಹಿತ್ಯಕ್ಕೂ ಮತ್ತು ಮಹಿಳಾ ಪ್ರಶ್ನೆಗಳಿಗೂ ಇರುವ ವ್ಯತ್ಯಾಸಗಳು ಮತ್ತು ಸಾಮ್ಯತೆಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಮಾಡಲಾಗುವುದು. ಮೊದಲು ಮಹಿಳಾ ಸಾಹಿತ್ಯ ಎಂಬ ಪರಿಕಲ್ಪನೆಯನ್ನು ಬಿಡಿಸಿಕೊಂಡು ನಂತರದಲ್ಲಿ ವಿಚಾರ ಸಾಹಿತ್ಯಕ್ಕೂ ಮತ್ತು ಮಹಿಳಾ ಸಾಹಿತ್ಯಕ್ಕೂ ಇರುವ ಸಾಮ್ಯತೆಯನ್ನು ಚರ್ಚಿಸುವುದು. ವಿಚಾರ ಸಾಹಿತ್ಯವನ್ನು ಕುರಿತು ವಿವಿಧ ಚಿಂತಕರು ಅವರದ್ದೇ ಆದಂತಹ ನೆಲೆಯಲ್ಲಿ ವಿಚಾರವನ್ನು ವ್ಯಕ್ತಪಡಿಸಿರುವುದನ್ನು ಕಾಣಬಹುದು. ಅವುಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗುವುದು.

ಈ ಅಧ್ಯಾಯದಲ್ಲಿ ಪ್ರಮುಖ ಪರಿಕಲ್ಪನೆಯಾದ ಮಹಿಳಾ ಪ್ರಶ್ನೆಗಳು ಎಂಬ ಅಂಶವನ್ನು ಚರ್ಚೆಗೆ ಗುರಿಪಡಿಸಲಾಗುವುದು. ಇಲ್ಲಿ ಮಹಿಳಾ ವಿಚಾರ ಸಾಹಿತ್ಯವನ್ನು ಕೇಂದ್ರವಾಗಿಟ್ಟುಕೊಂಡು

ಈ ಸಾಹಿತ್ಯದಲ್ಲಿ ವ್ಯಕ್ತವಾಗಿರುವಂತಹ ಧಾರ್ಮಿಕ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ, ಕೌಟುಂಬಿಕ, ಭಾಷಿಕ, ಲಿಂಗತಾರತಮ್ಯತೆಯ ನೆಲೆಗಳು ಇನ್ನೂ ಮುಂತಾದ ಮುಖ್ಯ ಹಲವಾರು ಪ್ರಶ್ನೆಗಳನ್ನು ಈ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗಿದೆ.

ವಿಚಾರ ಸಾಹಿತ್ಯ

ವಿಚಾರ ಸಾಹಿತ್ಯವನ್ನು ಕನ್ನಡ ಸಾಹಿತ್ಯದಲ್ಲಿ ಚಿಂತನಾ ಸಾಹಿತ್ಯ ಎಂದು ಪರ್ಯಾಯ ಪದವಾಗಿ ಬಳಸಲಾಗಿದೆ. ವಿಚಾರವೆಂದರೆ ಯೋಚನೆ, ಆಲೋಚನೆ, ಧ್ಯಾನ ಎಂಬ ಅರ್ಥವನ್ನು ಒಳಗೊಂಡಿದೆ. ಪ್ರಪಂಚದಲ್ಲಿ ಹಲವು ವಿಷಯ, ವಸ್ತುಗಳನ್ನು ಕುರಿತು ನಡೆಯುವಂತಹ ಚರ್ಚೆ, ಆಲೋಚನೆ, ತರ್ಕ, ವೈಚಾರಿಕ ನಿಲುವುಗಳನ್ನು ವಿಚಾರ ಎಂದು ಕರೆಯಲಾಗುವುದು. ಹೀಗೆ ಚರ್ಚೆ, ತರ್ಕಗಳ ಮುಖೇನ ಹುಟ್ಟುವ ಸಾಹಿತ್ಯವನ್ನು ವಿಚಾರ ಸಾಹಿತ್ಯ ಅಥವಾ ವೈಚಾರಿಕ ಸಾಹಿತ್ಯ ಎಂದು ಕರೆಯಲಾಗುತ್ತದೆ.

ವಿಚಾರ ಸಾಹಿತ್ಯದ ಇತಿಹಾಸವನ್ನು ಗಮನಿಸುವುದಾದರೆ ನಿನ್ನೆ ಮತ್ತು ಇಂದಿನದಲ್ಲ. ಇದು ಸಾವಿರಾರು ವರ್ಷಗಳ ಇತಿಹಾಸವನ್ನು ತನ್ನಲ್ಲಿಟ್ಟು ಉಳಿಸಿಕೊಂಡೇ ಬಂದಿರುವುದು ಕಾಣುತ್ತೇವೆ. ಈ ಪ್ರಕಾರವು ಕ್ರಿಸ್ತಪೂರ್ವ ಕಾಲದಲ್ಲಿಯೇ ತನ್ನ ಇರುವಿಕೆಯನ್ನು ಪಡೆದುಕೊಂಡಿರುವುದು ತಿಳಿದುಬರುತ್ತದೆ. ಈ ವಿಚಾರ ಸಾಹಿತ್ಯದ ವಿಶಿಷ್ಟ ಲಕ್ಷಣವೆಂದರೆ, ಜನಸಾಮಾನ್ಯರು ಬಳಸುತ್ತಿದ್ದ ಪ್ರಾಕೃತ ಭಾಷೆಯಲ್ಲೇ ಇರುವುದನ್ನು ಕಾಣುತ್ತೇವೆ.

"ವಿಚಾರ ಅಥವಾ ವೈಚಾರಿಕ ಎಂಬ ಪದವು ಇಂಗ್ಲೀಷಿನ Rational ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಬಳಕೆಗೊಂಡಿದೆ. Rational ಪದವು ಲ್ಯಾಟಿನ್ ಭಾಷೆಯ ರೇಷಿಯೋ ಪದದಿಂದ ನಿಷ್ಪನ್ನಗೊಂಡಿದೆ. Rational or Rationality ಎಂಬ ಪದಗಳು ಮತ ಧರ್ಮಶಾಸ್ತ್ರಗಳಲ್ಲಿ ಅವಾಸ್ತವಿಕ ಸಂಗತಿಗಳ ಕುರಿತು ವಿರೋಧ ವ್ಯಕ್ತಪಡಿಸುವ ವಿಚಾರ ಧಾರೆಯನ್ನು ಕುರಿತು ಬಳಸಿರುವ ಪದಗಳು. ನಂತರ ಪಾಶ್ಚಿಮಾತ್ಯ ದೇಶಗಳಲ್ಲಿ ಈ ಪದಗಳನ್ನು ಈಗ ಕರೆಯುತ್ತಿರುವ ವೈಚಾರಿಕ ಪದಗಳ ಅರ್ಥದಲ್ಲೇ ಕರೆಯುತ್ತಾ ಬರಲಾಯಿತು. ಈ ಮೂಲಕ ಅದೊಂದು ವಾದವು (Rationalism) ಜಗತ್ತಿನಾದ್ಯಂತ ಪ್ರಚಲಿತದಲ್ಲಿದೆ."[1] ಹೀಗೆ ವಿಚಾರ ಅಥವಾ ವೈಚಾರಿಕ ಸಾಹಿತ್ಯವು ಬೆಳೆದುಬಂದ ಇತಿಹಾಸವಾದರೆ. ಕನ್ನಡಕ್ಕೆ ವಿಚಾರ ಎಂಬ ಶಬ್ದವು ಸಂಸ್ಕೃತ ಮೂಲದ್ದಾಗಿದೆ. 'ವಿ' ಎಂಬ ಉಪಸರ್ಗಕ್ಕೆ 'ಚರಾ' ಎಂಬ ಧಾತು ಹತ್ತಿ ವಿಚಾರ ಎಂಬ ಶಬ್ದವು ನಿಷ್ಪನ್ನಗೊಂಡಿದೆ. 'ಚರಾ' ಎಂದರೆ ಚಲಿಸು. ಇದು ಚಲನಶೀಲತೆಯನ್ನು ಸೂಚಿಸುವಂತಹದ್ದು. 'ವಿಚಾರ, ಎಂಬ ಪದವು ಕನ್ನಡದ ಸಂದರ್ಭದಲ್ಲಿ ಹಲವು ಅರ್ಥಗಳನ್ನು ಪಡೆದುಕೊಂಡಿದೆ. ಪರ್ಯಾಲೋಚನೆ, ವಿಮರ್ಶೆ, ಚರ್ಚೆ, ಸಂದಿಗ್ಧವಾದ ವಿಷಯದಲ್ಲಿ ತತ್ವ ಪರೀಕ್ಷೆಗಾಗಿ ಪ್ರಮಾಣ ಪೂರ್ವಕವಾಗಿ ಮಾಡುವ ವಾದ, ತತ್ವ ನಿರ್ಣಯ, ವಿಚಾರಣೆ, ಯುಕ್ತಿ ಯುಕ್ತವಾದ ಮಾತುಗಳಿಂದ ಪರೋಕ್ಷವಾದ ವಿಷಯಗಳನ್ನು ಸಾಧಿಸುವುದು ಎಂಬ ಅರ್ಥವನ್ನು ಒಳಗೊಳ್ಳುತ್ತದೆ.

ಮನುಷ್ಯರಿಗೆ ಸ್ವಾಭಾವಿಕವಾಗಿ ಆಲೋಚನಾಶಕ್ತಿ ಇದ್ದರೂ, ಹಲವಾರು ಕಾರಣಗಳಿಂದಾಗಿ ಈ ಆಲೋಚನೆಗಳನ್ನು ನಿರ್ದಿಷ್ಟವಾಗಿ ಹಾಗೂ ಸ್ಪಷ್ಟವಾಗಿ ಹೇಳುವುದಕ್ಕೂ ಅನೇಕ ತೊಡಕುಗಳಿವೆ.

ಇದಕ್ಕೆ ಒಳ್ಳೆಯ ಉದಾಹರಣೆಯನ್ನು ನೀಡುವುದಾದರೆ ಗ್ರೀಕ್ ಇತಿಹಾಸದಲ್ಲಿ ಸುಪ್ರಸಿದ್ಧವಾದ ಸಾಕ್ರಟಿಸ್‌ನ ದುರಂತ ಕಥೆಯೇ ಒಂದು ನಿದರ್ಶನವಾಗಿದೆ. ಇವನ ಪ್ರಶ್ನಿಸುವ ಮತ್ತು ತರ್ಕಿಸುವ ಸ್ವಭಾವವೇ ಅವನ ಜೀವನಕ್ಕೆ ಮುಳುವಾಯಿತು. ಸಮಾಜದಲ್ಲಿನ ಅಸಮಾನತೆಯ ವಿರುದ್ಧವಾಗಿದ್ದಂತ ನಿಲುವುಗಳನ್ನು ಈ ವಿಚಾರ ಸಾಹಿತ್ಯವು ಬುಡಮೇಲು ಮಾಡಿತು.

ಆಧುನಿಕ ಸಂದರ್ಭದಲ್ಲಿ ವಿಚಾರ ಸಾಹಿತ್ಯವನ್ನು ಗಮನಿಸುವುದಾದರೆ ಈ ಪ್ರಕಾರವನ್ನು ಬೆಳಕಿಗೆ ತಂದವರು ಪಾಶ್ಚಿಮಾತ್ಯ ವಿದ್ವಾಂಸರಾಗಿದ್ದಾರೆ. ಭಾರತವು ಬ್ರಿಟೀಷ್ ವಸಾಹತುಶಾಹಿ ಆಳ್ವಿಕೆಗೆ ಒಳಪಟ್ಟಿದ್ದಂತ ಕಾಲದಲ್ಲಿ ಅವರು ತಮ್ಮ ಆಡಳಿತದ ಅನುಕೂಲಕ್ಕಾಗಿ ಭಾರತದ ಧರ್ಮ ಮತ್ತು ಸಂಸ್ಕೃತಿಯ ಮೇಲೆ ಅಧ್ಯಯನವನ್ನು ನಡೆಸಿದ್ದಾರೆ. ಮ್ಯಾಕ್ಸ್ ಮುಲ್ಲರ್ ಆದಿಯಾಗಿ ಹಲವಾರು ವಿದ್ವಾಂಸರು ಭಾರತೀಯ ಪ್ರಾಚೀನ ಧರ್ಮಗಳ, ಸಾಹಿತ್ಯದ ಅಧ್ಯಯನ ನಡೆಸುತ್ತಾ ವಿಚಾರ ಸಾಹಿತ್ಯ ಸಂಪ್ರದಾಯದ ಮೇಲೂ ಬೆಳಕು ಚೆಲ್ಲಿದ್ದಾರೆ.

ಇಪ್ಪತ್ತನೇ ಶತಮಾನದ ವೇಳೆಗೆ ಬ್ರಿಟೀಷ್ ಶಿಕ್ಷಣ ನೀತಿಯ ಫಲವಾಗಿ ಎಡಪಂಥೀಯ ಚಿಂತಕರು ಉದಯಿಸಿದ್ದಾರೆ. ಈ ಚಿಂತಕರು ಮೊದಲು ನಿರೂಪಿಸಲ್ಪಟ್ಟಂತ ಆಧ್ಯಾತ್ಮ ಪ್ರಧಾನವಾದ ನಿರೂಪಣೆಗಳನ್ನು ತರ್ಕಕ್ಕೆ ಅಥವಾ ಟೀಕೆಗೆ ಗುರಿಪಡಿಸಿದರು. ಇಂತಹ ಎಡಪಂಥೀಯ ವಿದ್ವಾಂಸರಲ್ಲಿ ಚರಿತ್ರೆಯ ವಿಷಯದಲ್ಲಿ ಡಿ.ಡಿ.ಕೋಸಾಂಬಿ, ತತ್ವಶಾಸ್ತ್ರದ ವಿಷಯದಲ್ಲಿ ದೇವಿ ಪ್ರಸಾದ್ ಚಟ್ಟೋಪಾಧ್ಯಾಯರು ಮುಖ್ಯರಾದವರಾಗಿದ್ದಾರೆ. ಎಡಪಂಥೀಯ ಚಿಂತಕರು ತಳಮೂಲ ಸಂಸ್ಕೃತಿಗಳನ್ನು ಆಧಾರವಾಗಿಟ್ಟುಕೊಂಡು ತಮ್ಮ ವಿಚಾರಗಳನ್ನು ವ್ಯಕ್ತಪಡಿಸುತ್ತಾ ಬಂದಿದ್ದಾರೆ. ಇವರು ಈ ಮೊದಲಿನ ವಿಚಾರಗಳನ್ನು ವಿಮರ್ಶೆಗೆ ಒಳಗುಮಾಡುವ ಮೂಲಕ ಹಲವಾರು ಹೊಸ ವಿಚಾರಗಳನ್ನು ಬೆಳಕಿಗೆ ತಂದಿದ್ದಾರೆ. ಭಾರತೀಯ ಚಿಂತಕರಲ್ಲಿ ಡಾ.ಬಿ.ಆರ್.ಅಂಬೇಡ್ಕರ್, ಜ್ಯೋತಿ ಬಾಪುಲೆ, ಗಾಂಧೀಜಿ, ಲೋಹಿಯಾ, ಪೆರಿಯಾರ್, ಸ್ವಾಮಿ ವಿವೇಕಾನಂದ ರಾಜಾರಾಮ್ ಮೋಹನರಾಯ್, ದಯಾನಂದ ಸರಸ್ವತಿ, ಸಾವಿತ್ರಿ ಬಾಪುಲೆ, ಆ್ಯನಿಬೆಸೆಂಟ್ ಪ್ರಮುಖರಾಗಿ ಕಂಡುಬರುತ್ತಾರೆ.

೧೯ನೇ ಶತಮಾನದ ಆರಂಭ ಕಾಲಘಟ್ಟದಲ್ಲಿ ಪಶ್ಚಿಮದ ಶಿಕ್ಷಣ ಹಾಗೂ ಉದಾರವಾದಿ ತತ್ವದೊಂದಿಗೆ ಸಂಪರ್ಕ ಪಡೆದ ಕೆಲವು ಭಾರತೀಯರಿಗೆ ಪಶ್ಚಿಮದ ಒಟ್ಟಾರೆ ಪ್ರಗತಿಯ ಬಗ್ಗೆ ಮೆಚ್ಚುಗೆಯಿತ್ತು. ತಮ್ಮ ಅನೇಕ ನಂಬಿಕೆಗಳು ಅವೈಜ್ಞಾನಿಕವಾದವು ಎಂದು ಅವರ ಅರಿವಿಗೆ ಬರತೊಡಗಿತು. ತಮ್ಮ ಸಮಾಜ ಹಾಗೂ ದೇಶದ ಅಧೋಗತಿಗೆ ಈ ನಂಬಿಕೆಗಳು ಕಾರಣವೆಂಬುದು ಕೂಡ ಅವರಿಗೆ ಮನವರಿಕೆಯಾಗ ತೊಡಗಿತು. ಹೀಗಾಗಿ ಪ್ರಭುತ್ವದ ಉದಾರವಾದಿ ನೀತಿಗಳಿಗೆ ಹೊಂದಿಕೊಳ್ಳದ ಹಾಗೂ ತಮ್ಮ ಸಮಾಜಕ್ಕೆ ಅಂಟಿಕೊಂಡ ಹೀನ ಪದ್ಧತಿಗಳನ್ನು ತೊಡೆದು ಹಾಕಲು ಬಯಸಿದರು. ಇದರ ಫಲವಾಗಿಯೇ ಧಾರ್ಮಿಕ, ಸಾಮಾಜಿಕ ಚಳುವಳಿಗಳು ಹುಟ್ಟಿಕೊಂಡವು. ವೈಚಾರಿಕವಾದವು ಭಾವನಾವಾದದ ಪ್ರತಿರೋಧವಾಗಿ ಬೆಳೆಯ ತೊಡಗಿತು. ಇದರಿಂದಾಗಿ ಸತಿಪದ್ಧತಿ, ವಿಧವಾ ಪದ್ಧತಿ, ಬಾಲ್ಯವಿವಾಹದಂತ ಅನಿಷ್ಟ ಪದ್ಧತಿಗಳನ್ನು ತೊಡೆದು

ಹಾಕಿ ಮಹಿಳಾ ಶಿಕ್ಷಣ, ವಿಧವಾ ಪುನರ್‌ವಿವಾಹ ಮೊದಲಾದ ಆಚರಣೆಗಳನ್ನು ಜಾರಿಗೆ ತರಲಾಯಿತು.

ಕನ್ನಡ ವಿಚಾರ ಸಾಹಿತ್ಯ

ಕನ್ನಡ ಸಾಹಿತ್ಯ ಪರಂಪರೆಯು ಹಲವಾರು ಪ್ರಕಾರಗಳಲ್ಲಿ ಬೆಳೆದು ಬಂದಿದೆ. ಅವುಗಳಲ್ಲಿ ವೈಚಾರಿಕ ಸಾಹಿತ್ಯ ಅಥವಾ ವಿಚಾರ ಸಾಹಿತ್ಯವು ಪ್ರಮುಖವಾದ ಒಂದು ಪ್ರಕಾರವಾಗಿದೆ. ಇಂತಹ ವಿಚಾರ ಸಾಹಿತ್ಯವನ್ನು ಶಂಬಾಜೋಶಿ, ಕುವೆಂಪು, ಪಂಡಿತ ತಾರಾನಾಥ್, ಡಿ.ವಿ.ಜಿ, ಶಿವರಾಮ ಕಾರಂತ, ಎ.ಎನ್.ಮೂರ್ತಿರಾವ್, ಬಿ.ಕೃಷ್ಣಪ್ಪ, ಬರಗೂರು ರಾಮಚಂದ್ರಪ್ಪ, ಸಿದ್ಧಲಿಂಗಯ್ಯ, ಅರವಿಂದ ಮಾಲಗತ್ತಿ ಇನ್ನೂ ಮುಂತಾದ ಚಿಂತಕರು ತಮ್ಮ ಸುತ್ತಮುತ್ತಲಿನ ಮತ್ತು ಜಾಗತಿಕ ಆಗು–ಹೋಗುಗಳನ್ನು ಆಧಾರವಾಗಿಟ್ಟುಕೊಂಡು ಈ ಸಾಹಿತ್ಯವನ್ನು ರಚಿಸಿದ್ದಾರೆ. ಇವರ ವಿಚಾರ ಅಥವಾ ವೈಚಾರಿಕ ಸಾಹಿತ್ಯಕ್ಕೆ ಜಗತ್ತಿನ ವಿವಿಧ ದಾರ್ಶನಿಕರು, ಸಮಾಜ ಸುಧಾರಕರು ಹಾಗೂ ಅವರ ತತ್ವ ಸಿದ್ಧಾಂತಗಳು ಪ್ರೇರಣೆ ಮತ್ತು ಪ್ರಭಾವ ಬೀರಿವೆ. "ಅಂಬೇಡ್ಕರ್‌ವಾದ, ಲೋಹಿಯಾವಾದ, ಮಾರ್ಕ್ಸ್‌ವಾದ, ಗಾಂಧೀವಾದ, ಪೆರಿಯಾರ್‌ವಾದಗಳು, ಇಷ್ಟಲ್ಲದೆ ಕೆಲವು ಚಿಂತಕರಿಗೆ ವೈಯಕ್ತಿಕವಾಗಿ ಸ್ವಾಮಿ ವಿವೇಕಾನಂದ, ಮಾರ್ಕ್ಸ್‌ವಾದಿ, ತತ್ವಜ್ಞಾನಿ ದೇವಿಪ್ರಸಾದ್ ಚಟ್ಟೋಪಾಧ್ಯಾಯರು, ವಚನಕಾರ ಬಸವಣ್ಣ, ಶ್ರೀಲಂಕೆಯ ವಿಚಾರವಾದಿ ಅಬ್ರಾಹಂ ಕೊವೂರ್ ಪಾಶ್ಚಾತ್ಯ ತತ್ವಜ್ಞಾನಿಗಳಾದ ನಿಶೆ, ರೆಸರ್, ಇಂಗರ್‌ಸಾಲ್, ಶ್ರೀಲಂಕೆಯ ಪೌರ್ವಾತ್ಯವಾದಿ ಆನಂದ ಕುಮಾರಸ್ವಾಮಿ, ಭಾರತೀಯ ಮಾರ್ಕ್ಸ್‌ವಾದಿಯಾದ ಎಮ್.ಎನ್.ರಾಯ್, ಓಶೋ ಮುಂತಾದ ಚಿಂತಕರು ಕೂಡ ಪ್ರಭಾವ ಬೀರಿರುವರು."[೨]

ಕನ್ನಡ ವಿಚಾರ ಸಾಹಿತ್ಯವು ವಿವಿಧ ಆಯಾಮಗಳಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದೆ. ಈ ಪ್ರಕಾರವು ಧಾರ್ಮಿಕ, ಆರ್ಥಿಕ, ರಾಜಕೀಯ ಹಾಗೂ ವೈಜ್ಞಾನಿಕ ನೆಲೆಯಲ್ಲಿ ಚರ್ಚಿತವಾಗುತ್ತಿರುವುದು ಕಂಡುಬರುತ್ತದೆ. ಈ ವಿಚಾರ ಸಾಹಿತ್ಯ ಪ್ರಕಾರವನ್ನು ಅಧ್ಯಯನದ ಅನುಕೂಲಕ್ಕೆ ತಕ್ಕಂತೆ ರಾಷ್ಟ್ರೀಯವಾದಿ ವಿಚಾರ, ನಾಸ್ತಿಕ ವಿಚಾರ, ಶೈಕ್ಷಣಿಕ ವೈಚಾರಿಕತೆ, ಸಂಸ್ಕೃತಿ ವೈಚಾರಿಕತೆ, ದಲಿತ ವೈಚಾರಿಕತೆ ಎಂಬುದಾಗಿ ವಿಂಗಡಣೆಗಳಾಗಿ ಕನ್ನಡ ವಿಚಾರ ಸಾಹಿತ್ಯ ಪ್ರಕಾರವು ಬೆಳೆದುಬಂದಿದೆ. ಪ್ರಸಕ್ತ ಸಂದರ್ಭದಲ್ಲಿ ಈ ಪ್ರಕಾರವು ಎಲ್ಲಾ ಸಾಹಿತ್ಯ ಪ್ರಕಾರಗಳಿಗಿಂತ ಹೆಚ್ಚು ಜನ ಮನ್ನಣೆಯನ್ನು ಪಡೆದುಕೊಳ್ಳುತ್ತಿದೆ. ಎಲ್ಲ ವರ್ಗದ ವಿಚಾರ ಸಾಹಿತ್ಯದ ಪ್ರಕಾರದತ್ತ ಗಮನಹರಿಸುತ್ತಿರುವುದು ಕಂಡುಬರುತ್ತದೆ.

ಮನುಷ್ಯನು "ಬಾಹ್ಯ ಜಗತ್ತಿನ ಬಗ್ಗೆ ಜ್ಞಾನವನ್ನು ಯಾವ ರೀತಿ ಗ್ರಹಿಸುತ್ತಾನೆ ಎನ್ನುವುದನ್ನು ವಿವರಿಸುವ ಜ್ಞಾನ ಸಿದ್ಧಾಂತವೇ ವಿಚಾರವಾದ ಇದು ಸಾಹಿತ್ಯದಲ್ಲಿ ಅಳವಟ್ಟಾಗ ವಿಚಾರ ಸಾಹಿತ್ಯ ನಿರ್ಮಾಣವಾಗುತ್ತದೆ."[೩] ಎಂದು ಅಭಿಪ್ರಾಯಪಡುತ್ತಾರೆ. "ನಮಗೆ ಪರಿಚಿತವಾಗಿ ಬಂದಿರುವ ತಿಳುವಳಿಕೆಯಲ್ಲಿ ಸಂಶಯ ಕಾಣತೊಡಗಿದಾಗ ನಾವು ಹಿರಿಯರಿಂದ ಕಲಿತ ಜ್ಞಾನಕ್ಕೂ, ನಮ್ಮ ಸ್ವಂತ ಲಹರಿಗಳಿಗೂ ಹೊಂದಿಕೆ ಕಾಣಿಸದಾದಾಗ, ನಾವು ಕಲಿತ ಜ್ಞಾನದಲ್ಲೇ ಪರಸ್ಪರ ವೈಷಮ್ಯಗಳು

ಕಾಣಿಸಿ, ಅದೇ ಇದೇ ಎಂಬ ಅಪನಂಬಿಕೆಗಳು ಮೂಡಿದಾಗ ವಿಚಾರ ಸಾಹಿತ್ಯ ನಿರ್ಮಾಣವಾಗುತ್ತದೆ."[೪] ಸಾಹಿತ್ಯ ಕ್ಷೇತ್ರದಲ್ಲಿ ಎಲ್ಲರಿಗೂ ಒಂದೇ ರೀತಿಯಾದ ಸಾಹಿತ್ಯ ಮೆಚ್ಚುಗೆ ಆಗಲು ಸಾಧ್ಯವಿಲ್ಲ, ಒಬ್ಬೊಬ್ಬರಿಗೆ ಒಂದೊಂದು ತೆರನಾದ ಮತ್ತು ಅವರ ಅಭಿರುಚಿ, ಜಾಯಮಾನಗಳಿಗೆ ತಕ್ಕಂತೆ ಕಥೆ, ಕವಿತೆ, ನಾಟಕ, ವಿಮರ್ಶೆ, ಪ್ರಬಂಧ ಹೀಗೆ ಯಾವುದಾದರೂ ಒಂದು ಬಗೆಯಲ್ಲಿ ಅವರ ಒಲವು, ಅಕ್ಕರೆ, ಆಸಕ್ತಿಗಳು ರೂಪತಳೆಯುತ್ತವೆ. ಅವು ಉಳಿದವುಗಳಿಗಿಂತ ಹಲವು ರೀತಿಯಲ್ಲಿ ವ್ಯಕ್ತಗೊಳ್ಳಬಹುದು.

ಮನುಷ್ಯನೆಂದರೆ ಚಿಂತನೆ ಅಥವಾ ವಿಚಾರ ಮಾಡುವ ಶಕ್ತಿಯನ್ನು ಒಳಗೊಂಡಿರುವ ಜೀವಿಯಾಗಿದ್ದಾನೆ. ಎಲ್ಲಾ ಕಾಲ, ಸಮಾಜ ಸಂಸ್ಕೃತಿಗಳಲ್ಲಿಯೂ ವಿಚಾರ ಮಾಡಿ ಜೀವನವನ್ನು ಸಾಗಿಸುವುದು ಅತ್ಯಗತ್ಯವಾದುದು. ಪ್ರಮುಖವಾಗಿ ಯಂತ್ರಯುಗದಲ್ಲಿ ವಿಚಾರವನ್ನೊಳಗೊಂಡ ಆಶ್ರಯದಡಿಯಲ್ಲಿ ಜೀವನವನ್ನು ನಡೆಸುವುದು ಅಗತ್ಯವಾದುದು.

ಯಾವುದೇ ವಿಷಯವನ್ನು ಮೊದಲು ಅನುಮಾನದಿಂದ, ಕುತೂಹಲವಾಗಿ ಮತ್ತು ಅದನ್ನು ತರ್ಕಕ್ಕೆ ಒಡ್ಡಿಯೇ ಒಪ್ಪಿಕೊಳ್ಳುವ ಗುಣವನ್ನು ಹೊಂದಿದೆ. ಜೊತೆಗೆ ಈ ವಿಚಾರ ಸಾಹಿತ್ಯ ಮೌಢ್ಯತೆ, ಮೂಢನಂಬಿಕೆ, ಆಸ್ತಿವಾದ, ಇವುಗಳಿಗೆ ಇದರಲ್ಲಿ ಪ್ರವೇಶವಿಲ್ಲ. "ಜ್ಞಾನ ಸಾಹಿತ್ಯದ ಗುರಿ, ಮಾಹಿತಿ, ವಿಚಾರ ಸಾಹಿತ್ಯದ ಗುರಿ ಮಾರ್ಪಾಟು ಜ್ಞಾನ ಸಾಹಿತ್ಯದ ಘನ ಸ್ವರೂಪವಾಗಿ ದೊರಕುವ ವಿವಿಧ ಬಗೆಯ ಮಾಹಿತಿಯ ಹೊಸ ಸಂಗತಿಗಳ ವೈಜ್ಞಾನಿಕ ಸಿದ್ಧಾಂತಗಳ ಬೆಳಕಿನ ಬಳಕೆ ಮಾಡಿಕೊಂಡೇ ವೈಚಾರಿಕ ಸಾಹಿತ್ಯ ಹುಟ್ಟುತ್ತದೆಂದೂ ತಿಳಿಯುತ್ತದೆ."[೫] 'ಲೋಕ ವಿಚಾರವನ್ನು ವೈಚಾರಿಕವಾಗಿ ಗ್ರಹಿಸಲು ಪರಂಪರಾಗತವಾಗಿ ರೂಪುಗೊಂಡಿದ್ದ ಮತ-ಧರ್ಮ ಆಧ್ಯಾತ್ಮ ಮತ್ತು ತತ್ವಶಾಸ್ತ್ರಗಳ ಪರಿಭಾಷೆಗಳನ್ನು ಬಿಟ್ಟು ಮನುಷ್ಯ ಕೇಂದ್ರಿತ ಗುಣಮೌಲ್ಯಗಳ ಕಡೆಗೆ ಆಧುನಿಕ ವೈಚಾರಿಕತೆ ಧಾವಿಸಿತು.' ಕನ್ನಡದಲ್ಲಿ ವೈಚಾರಿಕವಾದ ಚಿಂತನೆಗಳಿಗೆ ವಿವಿಧ ಸಾಮಾಜಿಕ ನೆಲೆಯ ಆಲೋಚನೆಗಳು.

ಹೆಣ್ಣು ಅಥವಾ ಸ್ತ್ರೀ ಎಂದರೆ ಭಾರತೀಯ ಸಂಸ್ಕೃತಿಯ ಪ್ರತಿಭೆಯ ಪರಿಕಲ್ಪನೆಯಂತೆ 'ಹೆರುವವಳು', 'ಸೂತ್ರಿ', 'ಸೋತ್ರ' ಎಂಬ ಧಾತುಗಳ ಅರ್ಥದಂತೆ ಹೆರುವ ಪ್ರಾಣಿ, ಆದ್ದರಿಂದ ಹೆಣ್ಣು ಪ್ರಾಣಿಗಳಿಗೂ 'ಸ್ತ್ರೀ' ಎಂದು ಹೀಗೆ ಭ್ರೂಣವಾಸ್ಥೆಯಲ್ಲಿ ಇದ್ದಾಗಲೇ 'ಹೆಣ್ಣು' ಎಂಬ ವ್ಯಕ್ತಿತ್ವವನ್ನು ಪಡೆದುಕೊಂಡವಳು. ಮಹಿಳೆ ಹೆಣ್ಣು ಅಥವಾ ಸ್ತ್ರೀ ಎಂಬ ಪದಕ್ಕೆ ಇಂಗ್ಲೀಷಿನಲ್ಲಿ Woman ಪದ Wifeman ಎಂಬ ಪದದಿಂದ ಬಂದಿದೆ. Man and Wife ಅಂದರೆ Wife ಗಂಡು ಮತ್ತು ಹೆಣ್ಣು ಎನ್ನುವ ಅರ್ಥ ಇಂಗ್ಲೀಷ್‌ನಲ್ಲಿ ಪ್ರಾಚೀನವಾಗಿತ್ತು. ಈಗ Man of Woman ವಾಡಿಕೆಯಲ್ಲಿದೆ."[೬] ಇಲ್ಲಿ ನಾವು ಗಮನಿಸಬೇಕಾದ ಅಂಶವೇನೆಂದರೆ ಹೆಣ್ಣು ನಮ್ಮ ಸಂಸ್ಕೃತಿಯಲ್ಲಿ ತಾಯಿಯಾದರೆ ಪಾಶ್ಚಾತ್ಯರಲ್ಲಿ ಹೆಣ್ಣು ಮನುಷ್ಯನು ಪ್ರಾಣಿವರ್ಗಕ್ಕಿಂತ ಭಿನ್ನವಾಗಿರುವುದು ನಮ್ಮೆಲ್ಲರಿಗೂ ತಿಳಿದಿರುವ ಮತ್ತು ಸ್ಪಷ್ಟವಾಗಿರುವ ವಿಷಯವೇ ಆಗಿದೆ. ಮನುಷ್ಯನಲ್ಲಿರುವಂತಹ ಆಲೋಚಿಸುವ, ವಿಚಾರ ಮಾಡುವ, ವಿಮರ್ಶಿಸುವ, ತರ್ಕಿಸುವ ಮನೋಭಾವನೆಯಿಂದಾಗಿ ಭಿನ್ನವೆನಿಸುತ್ತಾನೆ.

ಆದರೆ ಸಮಾಜ ವ್ಯವಸ್ಥೆಯ ಮೌಲ್ಯಗಳ ನಡುವೆಯೂ ಸಹ ಬದುಕು ಹಾಗೂ ಸಂಘರ್ಷಗಳು ನಡೆಯುವ, ಸಂಘರ್ಷಗಳು ನಡೆದು ಹೊಸ ಬದುಕಿನ ಉಗಮಕ್ಕೆ ಕಾರಣವಾಗುತ್ತದೆ. ಆದರೆ ಪ್ರಸ್ತುತದ ಸಂದರ್ಭದಲ್ಲಿ ಜನಪರವಾಗಿ ಚಿಂತನೆ ನಡೆಸುವುದೇ ನಿಜವಾದಂತಹ ವಿಚಾರ ಅಥವಾ ವೈಚಾರಿಕತೆ ಎನಿಸುತ್ತದೆ. ಯಾವುದೇ ವಿಚಾರವನ್ನು ಬರಹರೂಪಕ್ಕೆ ರೂಪಿಸಿದವೆಲ್ಲವುಗಳೂ ವಿಚಾರ ಸಾಹಿತ್ಯವಾಗುವುದಿಲ್ಲ. ಮಾನವ ಸಂಘಜೀವಿಯಾದ್ದರಿಂದ ಅವನ ಅನುಭವಗಳು, ಭಾವನೆ, ಕಲ್ಪನೆ, ಆಲೋಚನೆಗಳನ್ನು ತನ್ನೊಳಗೇ ಹುದುಗಿಸಿಟ್ಟುಕೊಳ್ಳಲಾರ. ಆದ್ದರಿಂದ ಅವನ ಸುತ್ತ ಹೆಣೆದುಕೊಂಡಿರುವ ಸಂಬಂಧಗಳಿಗೆ ಎಲ್ಲವನ್ನೂ ನಿರೂಪಿಸುವ/ನಿವೇದಿಸುವ ನಿರಂತರ ಒತ್ತಡಕ್ಕೆ ಸಿಲುಕುವುದನ್ನು ಕಾಣಬಹುದು.

ಸಾಹಿತ್ಯ ಕ್ಷೇತ್ರಕ್ಕೆ ಬಂದಾಗ ಎಲ್ಲರಿಗೂ ಒಂದೇ ಪ್ರಕಾರವು ಇಷ್ಟವಾಗಬೇಕೆಂದೇನು ಇಲ್ಲ. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ವಿಚಾರ ಸಾಹಿತ್ಯವೂ ಒಂದು. ವಿಚಾರ ಸಾಹಿತ್ಯವನ್ನು ಕುರಿತು ಅನೇಕ ವಿದ್ವಾಂಸರು ತಮ್ಮದೇ ಆದ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. "ಬುದ್ಧಿಯುಳ್ಳವರೆಲ್ಲ ಬುದ್ಧಿವಂತರಲ್ಲ, ಬುದ್ಧಿವಂತರೆಲ್ಲರೂ ಬುದ್ಧಿವಾದಿಗಳಲ್ಲ."[2] ಇವರು ಹೇಳುವ ಮಾತು ವಾಸ್ತವತೆಯಲ್ಲಿ ಸತ್ಯವೇ ಸರಿ. ಒಂದು ವಿಷಯದಲ್ಲಿ ಅಥವಾ ಒಂದು ಹೂ ಅರಳಬೇಕಾದರೆ ಅದು ಮೊಗ್ಗಾಗಿದ್ದಾಗ ಅದಕ್ಕೆ ಅರಳಲು ಅಗತ್ಯವಾಗಿ ಬೇಕಾದಂತಹ ಪೋಷಕಾಂಶ ಸಿಗದೆ ಹೋದಾಗ ಮೊಗ್ಗು ಹೂವಾಗಲು ಹೇಗೆ ಸಾಧ್ಯವಾಗುವುದಿಲ್ಲವೋ ಹಾಗೆಯೇ ಒಂದು ವಿಚಾರದಲ್ಲಿ ಖಚಿತತೆ ಎಂಬುದು ಇಲ್ಲವಾದಾಗ ಅದು ವೈಚಾರಿಕತೆ ಅಥವಾ ವಿಚಾರವಾಗಲು ಸಾಧ್ಯವಾಗಲಾರದು.

ಯಾವುದೇ ವಿಚಾರ ಬೆಳೆಯಬೇಕಾದರೆ ವೈಚಾರಿಕವಾಗಿ ಮತ್ತು ವೈಜ್ಞಾನಿಕವಾಗಿ ಆಲೋಚಿಸಿದಾಗ ಮಾತ್ರ ಒಂದು ಹೊಸ ವಿಚಾರ ಉಗಮವಾಗಲು ಸಾಧ್ಯವಾಗುತ್ತದೆ. ಹಳೆಯ ಅಥವಾ ಪಾರಂಪರಿಕವಾಗಿ ಬೆಳೆದು ಬಂದದ್ದನ್ನು ಪ್ರಶ್ನೆ ಮಾಡುವ, ತರ್ಕಿಸುವ ಮೂಲಕ ಹಳೆಯದನ್ನು ಮುರಿದು ಕಟ್ಟಲು ಸಾಧ್ಯವಾಗುತ್ತದೆ. ಈ ರೀತಿಯಾಗಿ "ವೈಚಾರಿಕ ಸಾಹಿತ್ಯವೆಂದರೆ, ಧರ್ಮಲಂಡರ ನಾಸ್ತಿಕರ ಸಾಹಿತ್ಯ, ಶ್ರೇಷ್ಠವಾದ ಭಾರತೀಯ ಸಂಸ್ಕೃತಿಯ ವಿನಾಶಕ ಸಾಹಿತ್ಯವೆಂಬುದಾಗಿ ಇದಕ್ಕೆ ಹಣೆಪಟ್ಟಿ ಕಟ್ಟಿ, ಪೂರ್ವಾಗ್ರಹ ಪೀಡಿತರಾದ ಹಲವರು ಕೇವಲ ದೂಷಿಸುತ್ತಿರುವುದು ಮಾತ್ರ ವಿಷಾದನೀಯ. ಇಂಥ ಧೂಷಣೆ ಅನಾದರ, ಪ್ರತಿಕಾರಗಳಿದ್ದರೂ ವೈಚಾರಿಕ ಸಾಹಿತ್ಯ ನಿರ್ಮಾಣಕ್ಕೆ ಕೈಹಾಕುವವರು ಅಲ್ಪಸಂಖ್ಯೆಯಲ್ಲಾದರೂ ಇದ್ದಾರೆಂಬುದು ಸಮಾಧಾನಕರ ಸಂಗತಿ, ಅವರ ಧೈರ್ಯ ನಿಜಕ್ಕೂ ದೊಡ್ಡದು"[3] ವೈಚಾರಿಕತೆ ಎಂಬುದು ಕೇವಲ ಒಂದೇ ಒಳನೋಟದಲ್ಲಿ ಹುಟ್ಟಿಕೊಳ್ಳುವಂತಹದ್ದಲ್ಲ ಮತ್ತು ಅದಕ್ಕೆ ಹಲವು ರೀತಿಯಾಗಿ ಯೋಚಿಸುವ, ತರ್ಕಿಸುವ, ಮತ್ತದನ್ನ ಮುರಿದುಕಟ್ಟುವಂತಹ ಸಾಮರ್ಥ್ಯವನ್ನೊಳಗೊಂಡರೆ ಮಾತ್ರ ಈ ವೈಚಾರಿಕತೆ ಬೆಳೆಯಲು ಸಾಧ್ಯವಾಗುತ್ತದೆ ಎನ್ನುವುದನ್ನು ಈ ಲೇಖಕರು ಬಲವಾಗಿ ಪ್ರತಿಪಾದಿಸಿದ್ದಾರೆ. ಯಾವುದೇ ವಿಷಯವನ್ನು ಏಕಮುಖ ಅಭಿಪ್ರಾಯದಲ್ಲಿ ಮಂಡಿಸುವುದಕ್ಕಿಂತ ವಿಭಿನ್ನ ಆಯಾಮದ ನೆಲೆಗಳಲ್ಲಿ ಚಿಂತಿಸಿದಾಗ ಸಾಧ್ಯವಾಗುತ್ತದೆ ಎಂಬುದು ತಿಳಿಯುತ್ತದೆ.

ಎಡಪಂಥೀಯ ವಿಚಾರಗಳು ತರ್ಕದ ಮೂಲದಿಂದಲೇ ಹುಟ್ಟಿಕೊಳ್ಳುತ್ತದೆ. ಆದರೆ ತರ್ಕವನ್ನು ಬಲಪಂಥೀಯರು ಅಥವಾ ಮತೀಯವಾದಿಗಳು ಇದನ್ನು ನಿರಾಕರಿಸುತ್ತಲೇ ಬಂದಿದ್ದಾರೆ. ಹಿಂದಿನ ಕಾಲದಿಂದ ಹಿಡಿದು ಆಧುನಿಕ ಕಾಲಮಾನದ ಸಂದರ್ಭದಲ್ಲಿಯೂ ಕೂಡ ಮುಂದುವರೆದುಕೊಂಡು ಬಂದಿರುವುದನ್ನು ಕಾಣಬಹುದು. "ತರ್ಕದಿಂದ ಮೂಡಿಬರುವ ಅಂಶಕ್ಕೂ ವೇದ ವಾಕ್ಯಕ್ಕೂ ವಿರೋಧ ಕಂಡುಬಂದರೆ, ವೇದವಾಕ್ಯವನ್ನು ಸ್ವೀಕರಿಸಿ ತರ್ಕವನ್ನು ನಿಷೇಧಿಸಬೇಕು. ಶಂಕರಾಚಾರ್ಯರಿಂದ ಹಿಡಿದು ಸಂಪ್ರದಾಯವಾದಿಗಳೆಲ್ಲ ಮಾಡಿರುವುದು ಇದನ್ನೇ"[೯] ಎಂಬುದನ್ನು ಜಿ. ರಾಮಕೃಷ್ಣ ಅವರು ಪ್ರತಿಪಾದಿಸಿದ್ದಾರೆ. ವಾಸ್ತವದ ಬದುಕು ಇವರಿಗೆ ಮುಖ್ಯವಾಗಿ ಕಾಣುವುದಿಲ್ಲ. ಈ ವರ್ಗವು ವೇದವಾಕ್ಯಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡುತ್ತದೆ. ಅದಲ್ಲದೆ ವಾಸ್ತವ ಜೀವನದಲ್ಲಿ ಬೇಕಾದಂತಹ ಈ ವೈಚಾರಿಕ ನೆಲೆಗಟ್ಟಿನ ಮುಕ್ತ ಚರ್ಚೆಗಳನ್ನು ಇದು ನಿರಾಕರಿಸುತ್ತದೆ.

ವಿಚಾರ ಸಾಹಿತ್ಯವನ್ನು ಕುರಿತು ಬೇಂದ್ರೆಯವರು ಹೀಗೆ ಹೇಳುತ್ತಾರೆ. "ಒಂದು ಸಣ್ಣ ವಿಚಾರದಲ್ಲಿಯೂ ನಾಲ್ಕು ಅಂಗಗಳಿರುತ್ತವೆ. ಹೇಳುವವನಿಗೆ ಅದು ಅವನ ಅನುಭವ, ಹೇಳುವಾಗ ಅದೊಂದು ಮನಸ್ಸನ್ನು ಮಾತಿನಲ್ಲಿ ಮೂಡಿಸುವ ರೀತಿ. ಹೇಳಿದ ಮೇಲೆ ಅದು ಅಂತರಂಗ ಅಥವಾ ಬಹಿರಂಗ ಪ್ರಪಂಚಕ್ಕೆ ಸೇರಿದ ವಸ್ತು ವರ್ಣನಾ ವಿಷಯ ಕೇಳಿದವರಿಗೆ ಅದು ತಂತಮ್ಮ ಅನುಭವದೊಡನೆ ಸರಿದೂಗಿ ನೋಡಿ ಸಂಮತಿ, ಅರ್ಧಸಂಮತಿ, ಭಿನ್ನಾಭಿಪ್ರಾಯಗಳೊಡನೆ ಸ್ಮೃತಿ ಭಂಡಾರಕ್ಕೆ ಸೇರಿಸಬೇಕಾದ ಅನುಭವ ವಿಷಯ. ಅಂತೂ ವಿಷಯವಿಲ್ಲದ ವಿಚಾರವಿಲ್ಲ. ವಿಚಾರವಿಲ್ಲದೆಯಾದರೂ ವಿಚಾರವುಂಟೆ? ಅದೂ ಇರಲಿ ಆ ವಿಚಾರಕ್ಕೆ ವಿಶಿಷ್ಟತೆಯಿರದಿದ್ದರೆ ತಮ್ಮ ವಿಚಾರವೆಂಬ ಹಮ್ಮು ಏನು? ಇಷ್ಟಾಗಿ ಆ ವಿಚಾರವು ಬೇರೆ ವಿಚಾರಿಗಳ ಮನನಕ್ಕೆ, ಆಕಲನೆಗೆ ನಿಲುಕದೆ ಹೋದರೆ ವಿಷಯದಲ್ಲಿಯೋ ವಿಚಾರದಲ್ಲಿಯೋ ದೋಷವಿರಬೇಕೆಂಬ ಬೇರೊಂದು ವಿಚಾರವೇ ಹುಟ್ಟುವುದು ತೊಡಕಿದ್ದಲ್ಲಿಯೇ ವಿಚಾರಕ್ಕವಕಾಶ ಉಂಟಾಗುವುದು."[೧೦] ಬೇಂದ್ರೆಯವರು ಹೇಳುವ ಹಾಗೆ ವಿಚಾರ ಎನ್ನುವಂತಹದ್ದು ಅನುಭವಕ್ಕೆ ನಿಲುಕುವಂತಹದ್ದಾಗಿದೆ. ಜೊತೆಗೆ ವಿಚಾರ ಎಂಬುದು ವಿವೇಚನೆಗೆ ಸಂಬಂಧಪಟ್ಟಿರುವುದರಿಂದಾಗಿ ಎಲ್ಲರೂ ಅದನ್ನು ಅವರ ವೈಯಕ್ತಿಕ ನಿಲುವಿನಲ್ಲಿಯೇ ಅಳೆಯಲು ಯತ್ನಿಸುತ್ತಾರೆ. ವಿಚಾರವಿಲ್ಲದೆ ವಿಚಾರ ಸಾಹಿತ್ಯಕ್ಕೆ ಸ್ವತಂತ್ರವಾದ ನೆಲೆಯಿಲ್ಲ ಎಂಬುದನ್ನು ಲೇಖಕರು ಅಭಿಪ್ರಾಯಪಡುತ್ತಾರೆ.

೩.೩. ವಿಚಾರ ಸಾಹಿತ್ಯ ಮತ್ತು ಮಹಿಳೆ

ಕನ್ನಡ ಮಹಿಳಾ ಸಾಹಿತ್ಯದಲ್ಲಿ ಸೃಜನ ಮತ್ತು ಸೃಜನೇತರ ಎಂಬುದಾಗಿ ಎರಡು ವಿಭಾಗ ಕ್ರಮಗಳನ್ನು ಕಾಣಬಹುದು. ಸೃಜನಶೀಲ ಸಾಹಿತ್ಯದಲ್ಲಿ ಕಥೆ, ಕಾದಂಬರಿ, ನಾಟಕ, ಕಾವ್ಯ ಜೀವನ ಚರಿತ್ರೆ, ಆತ್ಮಕಥನಗಳು ಇವು ಸೃಜನಶೀಲ ಸಾಹಿತ್ಯದ ಭಾಗವಾದರೆ, ಸೃಜನೇತರ ಸಾಹಿತ್ಯದಲ್ಲಿ ವಿಚಾರ ಸಾಹಿತ್ಯವನ್ನು ಕಾಣುತ್ತೇವೆ. ಮಹಿಳಾ ಸಾಹಿತ್ಯವು ಸುಮಾರು ೭೦ರ ದಶಕದಲ್ಲಿ ತನ್ನ ಅಸ್ತಿತ್ವವನ್ನು ಕಂಡುಕೊಂಡಿತು. ಆರಂಭದ ಕಾಲಘಟ್ಟದಿಂದಲೂ ಮಹಿಳೆಯರು ಸಾಹಿತ್ಯ ರಚನೆಯಲ್ಲಿ ತೊಡಗಿದ್ದರೂ ಸಹ ಎಪ್ಪತ್ತರ ದಶಕದಲ್ಲಿ ತೀವ್ರತರವಾದ ಮಹಿಳಾ ಸಾಹಿತ್ಯ ಬೆಳವಣಿಗೆ ಕಂಡಿತು.

ಮಹಿಳಾ ಸಾಹಿತ್ಯವನ್ನು ಕೇವಲ ಮಹಿಳೆಯರು ಮಾತ್ರ ಬರೆಯದೆ ಪುರುಷರು ಕೂಡ ಮಹಿಳಾ ಸಾಹಿತ್ಯವನ್ನು ಬರೆದಿರುವುದನ್ನು ಕಾಣುತ್ತೇವೆ. ಕೇವಲ ಮಹಿಳೆಯರು ಅನುಭವಿಸಿ ಬರೆದಿರುವ ಸಾಹಿತ್ಯವನ್ನು ಮಹಿಳಾ ಸಾಹಿತ್ಯವಾಗುತ್ತದೆ ಎಂದು ಒಂದು ವಿಚಾರಧಾರೆಯು ವಾದಮಾಡಿದರೆ, ಮತ್ತೊಂದು ವಿಚಾರಧಾರೆಯು ಸಮಾಜದಲ್ಲಿ ಮಹಿಳೆಯರ ಮೇಲೆ ಆಗುತ್ತಿರುವಂತಹ ಶೋಷಣೆ, ದೌರ್ಜನ್ಯ ಇವೆಲ್ಲವನ್ನೂ ನೋಡಿ ಪರವಾಗಿ ಬರೆದಿರುವ ಮತ್ತು ಬರೆಯುತ್ತಿರುವ ಸಾಹಿತ್ಯವನ್ನು ಕೂಡ ಮಹಿಳಾ ಸಾಹಿತ್ಯವಾಗುತ್ತದೆ ಎಂಬುದಾಗಿ ಹೇಳುತ್ತದೆ. ಹೀಗೆ ಮಹಿಳಾ ಸಾಹಿತ್ಯವು ಹಲವಾರು ಅಡೆತಡೆಗಳನ್ನು ಮೀರಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡೇ ಬಂದಿರುವುದನ್ನು ಕಾಣುತ್ತೇವೆ. ಈ ಎರಡೂ ನೆಲೆಯ ಸಾಹಿತ್ಯವನ್ನಿಟ್ಟುಕೊಂಡು ಮಹಿಳಾ ಪರವಾದಂತ ಮಹಿಳಾ ಶೋಷಣೆಯನ್ನಿಟ್ಟುಕೊಂಡು ಸಾಹಿತ್ಯವನ್ನು ಕಥೆ, ಕಾದಂಬರಿ, ನಾಟಕ, ಕಾವ್ಯ, ಪ್ರಕಾರಗಳ ಮೂಲಕ ತಮ್ಮ ಸಂವೇದನೆಗಳನ್ನು ಚಿತ್ರಿಸುತ್ತಿದ್ದರೂ ನೇರವಾಗಿ ಪುರುಷಪ್ರಧಾನ ಸಮಾಜದ ಮೇಲೆ ಆರೋಪ ಮಾಡುತ್ತಿರಲಿಲ್ಲ.

ಬದಲಾಗಿ ಪರೋಕ್ಷವಾಗಿ ಸಮಾಜದಲ್ಲಿನ ಹೇರುವಿಕೆಯನ್ನು ಪ್ರಶ್ನಿಸಿರುವುದನ್ನು ಕಾಣಬಹುದು. ಆದರೆ ವಿಚಾರ ಸಾಹಿತ್ಯಕ್ಕೆ ಬಂದಂತಹ ಸಂದರ್ಭದಲ್ಲಿ ಸಮಾಜದೊಂದಿಗೆ ನೇರವಾಗಿ ಮುಖಾಮುಖಿಯಾಗುವುದನ್ನು ಗಮನಿಸಬಹುದು. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿಗಾಗುತ್ತಿರುವ ಅನ್ಯಾಯ, ಅಸಮಾನತೆಯ ವಿರುದ್ಧ ಧ್ವನಿ ಎತ್ತುವ ಮತ್ತು ಅವುಗಳಿಗೆ ನ್ಯಾಯವನ್ನು ದೊರಕಿಸಿಕೊಳ್ಳುವ ನಿಟ್ಟಿನಲ್ಲಿ ಮಹಿಳಾ ಸಾಹಿತ್ಯ ಮೂಡಿ ಬಂದಿರುವುದನ್ನು ಕಾಣುತ್ತೇವೆ.

ವಿಚಾರ ಸಾಹಿತ್ಯದ ಮೂಲಕ ಅನೇಕ ಸವಾಲು ಮತ್ತು ಸಮಸ್ಯೆಗಳನ್ನು ಎದುರಿಸಿರುವುದು ಮರೆಯುವಂತಿಲ್ಲ. ಮಹಿಳಾ ವಿಚಾರ ಸಾಹಿತ್ಯವು ಮಹಿಳೆಯರನ್ನು ಎಚ್ಚರಿಸುವ ಮತ್ತು ಜಾಗೃತಿಯನ್ನು ಮೂಡಿಸುವ ನಿಟ್ಟಿನಲ್ಲಿ ಈ ಸಾಹಿತ್ಯ ಪ್ರಕಾರವು ಪ್ರಚಲಿತದಲ್ಲಿದೆ. ಆ ಮೂಲಕವಾಗಿ ಮಹಿಳೆಯರ ಮೇಲೆ ನಡೆಯುತ್ತಿರುವಂತಹ ಶೋಷಣೆ, ದೌರ್ಜನ್ಯ, ಲಿಂಗ ಅಸಮಾನತೆ, ತನಗಾಗಿರುವ ನೋವುಗಳನ್ನು ಸಮಾಜವು ಮುಂದೆ ಒಡ್ಡುವಂತಹ ಪ್ರಶ್ನೆಗಳನ್ನು ಅದರಿಂದ ಪರ್ಯಾಯ ಮಾರ್ಗವನ್ನು ಕಂಡುಕೊಳ್ಳುವಲ್ಲಿ ಹುಟ್ಟಿಕೊಂಡಿರುವಂತಹ ಪ್ರಕಾರವನ್ನು ಮಹಿಳಾ ವಿಚಾರ ಸಾಹಿತ್ಯ : ಮಹಿಳಾ ಪ್ರಶ್ನೆಗಳು ಎಂಬುದಾಗಿ ಅದನ್ನು ನನ್ನ ಅಧ್ಯಯನಕ್ಕೆ ರೂಪಿಸಿಕೊಳ್ಳಲಾಗಿದೆ.

ಸಮಾಜದಲ್ಲಿ ಮಹಿಳೆಗೆ ಧಾರ್ಮಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ಅನ್ಯಾಯವಾಗಿದೆ. ಹೀಗೆ ಅನ್ಯಾಯವಾಗಿರುವುದನ್ನು ಕನ್ನಡ ವಿಚಾರ ಸಾಹಿತ್ಯದ ಸಂದರ್ಭದಲ್ಲಿ ಮಹಿಳಾ ಲೇಖಕಿಯರು ಎತ್ತಿರುವ ಮತ್ತು ಅವರು ಕಂಡುಕೊಂಡಿರುವ ಪ್ರಶ್ನೆಗಳನ್ನು ಹಾಗೂ ವ್ಯವಸ್ಥೆಯ ವಿರುದ್ಧ ಪ್ರತಿರೋಧವನ್ನು ಒಡ್ಡಿರುವ ಅಂಶಗಳನ್ನು ಅಧ್ಯಯನಕ್ಕೆ ಒಳಗು ಮಾಡುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

ವಿಚಾರ ಸಾಹಿತ್ಯದಲ್ಲಿ ದಲಿತ, ಮಹಿಳಾ, ಬುಡಕಟ್ಟು, ಜಾನಪದ, ದ್ರಾವಿಡ, ಸಾಮಾಜಿಕ, ವೈಜ್ಞಾನಿಕ ಹೀಗೆ ಹಲವಾರು ವಿಷಯಗಳ ಪರವಾದ ಚಿಂತನೆಗಳು ಪ್ರಕಟವಾಗಿವೆ. ಕನ್ನಡ

ವಿಚಾರ ಸಾಹಿತ್ಯದಲ್ಲಿ ಇತ್ತೀಚೆಗೆ ಮಹಿಳಾ ಪ್ರಶ್ನೆಗೆ ಸಂಬಂಧಿಸಿದಂತೆ ಮಹಿಳಾ ಪರವಾದ ಆಶೋತ್ತರಗಳನ್ನು ಹೆಚ್ಚು ಪ್ರಕಟಿಸುತ್ತ ಗಮನ ಸೆಳೆಯುತ್ತಿದೆ. ಮಹಿಳೆಯರ ಮೇಲಿನ ದಮನದ ಪ್ರಜ್ಞೆ ಎಚ್ಚರಗೊಂಡಿರುವುದಕ್ಕೂ ಮತ್ತು ಅದರ ಪರವಾದ ಚಳುವಳಿಗಳು ಜಾಗತಿಕವಾಗಿ ಗರಿಬಿಚ್ಚಿಕೊಂಡಿರುವುದಕ್ಕೂ ಒಂದಕ್ಕೊಂದು ಸಂಬಂಧವಿದೆ. 'ಹೆಣ್ಣಿನ ಅನ್ಯಾಯದ ಬಗ್ಗೆ, ಅವಳ ಹಕ್ಕು ಕರ್ತವ್ಯ ಸ್ವಾತಂತ್ರ್ಯಗಳ ಬಗ್ಗೆ ಮಾತನಾಡುವ ಎಲ್ಲಾ ಅಕ್ಷರರೂಪಿ ಹಾಗೂ ಮೌಖಿಕ ಅಭಿವ್ಯಕ್ತಿಗಳು ವಿಶಾಲ ಅರ್ಥದಲ್ಲಿ ವಿಚಾರ ಸಾಹಿತ್ಯ ಎನಿಸಿಕೊಳ್ಳುತ್ತದೆ.'.

ಮಹಿಳೆಯನ್ನು ವೈಚಾರಿಕವಾಗಿ ಆಲೋಚಿಸಲು ಸಾಧ್ಯವಾಗದಂತೆ ಸಾಮಾಜಿಕ ಪರಿಸರ ಅವಳನ್ನು ನಿಯಂತ್ರಿಸಿದೆ. ವೈಚಾರಿಕತೆಗೆ ತಮ್ಮನ್ನು ತಾವು ಸಂಪೂರ್ಣವಾಗಿ ಒಡ್ಡಿಕೊಳ್ಳುವ ಮತ್ತು ತೆರೆದುಕೊಳ್ಳಲು ಸಮಾಜ ಮತ್ತು ಸಾಮಾಜಿಕ ವ್ಯವಸ್ಥೆಯು ಪ್ರಾಮುಖ್ಯತೆಯನ್ನು ಕೊಡದೇ ಇದ್ದದ್ದು ಒಂದು ಪ್ರಬಲವಾದ ಕಾರಣವಾಗಿದೆ. ಅಂದಿನ ಸಮಾಜವು ಶೂದ್ರ, ದಲಿತ ಜನಾಂಗವನ್ನು ಬೆಳೆಯಲು ಯಾವುದೇ ಅನುಕೂಲ ಮತ್ತು ಅವಕಾಶಗಳನ್ನು ಕಲ್ಪಿಸಿಕೊಡದಂತೆಯೆ ಮಹಿಳೆಗೂ ಸಹ ಯಾವ ಅವಕಾಶವನ್ನು ಕೊಡಲಿಲ್ಲ ಮತ್ತು ಅವಳನ್ನು ಒಬ್ಬ ಶೂದ್ರಳಾಗಿಯೆ ನೋಡಲಾಯಿತು. ಅಂತಹ ಸಂದಿಗ್ಧ ಪರಿಸ್ಥಿತಿಯಲ್ಲೂ ಅವರು ವೈಚಾರಿಕವಾಗಿ ತೆರೆದುಕೊಂಡಿರುವುದು ಶ್ಲಾಘನೀಯ.

ಪುರುಷ ತನ್ನೆಲ್ಲಾ ಸುಖ ಸಂತೋಷಕ್ಕೆ ಇಡೀ ಸಮಾಜ ವ್ಯವಸ್ಥೆಯನ್ನೇ ತನ್ನದಾಗಿ ಮಾರ್ಪಡಿಸಿಕೊಂಡ ಮತ್ತು ಬದಲಾಯಿಸಿಕೊಂಡ. ಇಂದಿಗೂ ಹೆಣ್ಣನ್ನು ಹಂತಹಂತವಾಗಿ ಎಲ್ಲಾ ರೀತಿಯಿಂದಲೂ ಶೋಷಿಸಿಕೊಂಡೆ ಬಂದಿದ್ದಾನೆ. "ಕಾಲ ವ್ಯತ್ಯಾಸ ಆಗಿರಬಹುದು, ಕಾನೂನುಗಳು ಕಣ್ತೆರೆದಿರಬಹುದು. ಸುಧಾರಣೆಗಳು ಸೂಚಿಸಬಹುದು. ಘೋಷಣೆಗಳ ಕೂಗು ಕೇಳುತ್ತಿರಬಹುದು, ಆದರೆ ಹೆಣ್ಣು ಇಂದಿಗೂ ಈ ಕ್ಷಣಕ್ಕೂ ಗುಲಾಮಳಾಗಿಯೇ ಬದುಕುತ್ತಿರುವುದು ದುಃಖದ ಸಂಗತಿ. ಪುರುಷ ಪ್ರಧಾನ ಸಮಾಜದ ಅಮಾನವೀಯ ವರ್ತನೆಯಲ್ಲಿ ಹೆಣ್ಣು ಒಂದು ಮಾರಾಟದ ವಸ್ತುವಾಗಿದ್ದಾಳೆ. ಭೋಗದ ಬೊಂಬೆಯಾಗಿದ್ದಾಳೆ."[೧೧] ಸನಾತನ ಕಾಲದಿಂದಲೂ ಹೆಣ್ಣು ಶೋಷಣೆಗೆ ಒಳಗಾಗುತ್ತಲೇ ಬಂದಿದ್ದಾಳೆ. ಶಿಕ್ಷಣ ಪಡೆದ ಆಧುನಿಕ ಸಂದರ್ಭದಲ್ಲಿಯೂ ಮಹಿಳೆಯು ಶೋಷಣೆಯಿಂದ ಮುಕ್ತಳಾಗಿಲ್ಲ. ಕಾಲ ಬದಲಾದಂತೆ ದೌರ್ಜನ್ಯದ ಅಥವಾ ಶೋಷಣೆಯ ಸ್ವರೂಪ ಕೂಡ ಬದಲಾಗುತ್ತಾ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ ಎಂಬುದನ್ನು ಮನವರಿಕೆ ಮಾಡಿದ್ದಾರೆ. ಕಾನೂನುಗಳು, ಹೋರಾಟಗಳು ಇದ್ದರೂ ಸಹ ಅವು ಮಹಿಳೆಯರಿಗೆ ಸೂಕ್ತವಾದ ರೀತಿಯಲ್ಲಿ ಭದ್ರತೆಯನ್ನು ನೀಡುತ್ತಿಲ್ಲ ಎಂಬುದನ್ನು ಹೇಳಲಾಗಿದೆ.

ನವೋದಯ ಸಾಹಿತ್ಯದ ಕಾಲದಲ್ಲೇ ಮಹಿಳಾ ಪ್ರಶ್ನೆಗಳನ್ನು ಕುರಿತು ಶಾಂತದೇವಿ ಮಾಳವಾಡ ಅವರು "ಭಾರತದ ಮಹಿಳೆಯರು ಪುರುಷ ದ್ವೇಷಿಗಳಾಗಬೇಕಿಲ್ಲ. ಅವರ ವಿರುದ್ಧ ಬಂಡೇಳಬೇಕಾಗಿಲ್ಲ. ನಮ್ಮಲ್ಲಿರುವ ಆಲಸ್ಯ, ಅಂಧಶ್ರದ್ಧೆ, ಅಜ್ಞಾನದ ವಿರುದ್ಧ ಹೋರಾಡಬೇಕಾಗಿದೆ"[೧೨] ಎಂದು ಹೇಳುವಾಗ ಮಹಿಳೆಯರ ಶೋಷಣೆಗೆ ಪುರುಷರಷ್ಟೇ ಕಾರಣರಲ್ಲ, ಮಹಿಳೆಯೂ ಕೂಡ ಇದರಲ್ಲಿ ಪಾಲುದಾರಳಾಗಿದ್ದಾಳೆ ಎಂಬ ನಿಲುವನ್ನು ವ್ಯಕ್ತಪಡಿಸುವಾಗ ನೇರವಾಗಿ ವ್ಯವಸ್ಥೆಯ ವಿರುದ್ಧ ಬಂಡೇಳದೆ ಎಲ್ಲದಕ್ಕೂ ಮಹಿಳೆಯೇ ಜವಾಬ್ದಾರಳು ಎಂದು ಮಹಿಳೆಯನ್ನೇ ಹೊಣೆಯನ್ನಾಗಿ

ಮಾಡಿದ್ದಾರೆ. ಅಲ್ಲದೆಯೇ ಪುರುಷ ಪ್ರಧಾನ ಸಮಾಜದ ಮೌಲ್ಯಗಳನ್ನು ಒಪ್ಪಿಕೊಂಡಿರುವಂತೆ ಭಾಸವಾಗುತ್ತದೆ. ಅಥವಾ ಅಂದಿನ ಕಾಲಕ್ಕೆ ಅದರ ಮಿತಿಯೂ ಆಗಿರಬಹುದು.

ಕನ್ನಡ ವಿಚಾರ ಸಾಹಿತ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಮಹಿಳಾ ಪ್ರಶ್ನೆಯ ಧ್ವನಿಯು ತನ್ನ ತಳಮಳ ಮತ್ತು ಆಶಯಗಳನ್ನು ಹೆಚ್ಚು ಪ್ರಕಟಿಸುತ್ತಾ ಗಮನ ಸೆಳೆಯುತ್ತಿದೆ. ಮಹಿಳೆಯು ಸಮಾಜದಲ್ಲಿ ವಿಶಿಷ್ಟ ಪಾತ್ರವುಳ್ಳವಳಾಗಿದ್ದಾಳೆ. ಸಮಾಜದಲ್ಲಿ ಮಹಿಳೆಯರು ಮತ್ತು ಮಹಿಳಾ ಪ್ರಶ್ನೆಗಳು ಒಂದೇ ಬಗೆಯಲಿಲ್ಲ. ಜಾತಿ ಮತ್ತು ವರ್ಗ ಅಸಮಾನತೆಗೆ ಅನುಗುಣವಾಗಿ ಮಹಿಳೆಯರಿಗೆ ಮತ್ತೊಂದು ರೀತಿಯಾದ ಸ್ಥಾನಮಾನಗಳಿವೆ. ಕೌಟುಂಬಿಕ, ಔದ್ಯೋಗಿಕ ಮತ್ತು ಸಾಮಾಜಿಕ ತಾರತಮ್ಯದಿಂದಾಗಿ ಮಹಿಳೆಯರು ತಮ್ಮ ಅಸ್ತಿತ್ವಕ್ಕಾಗಿ ಪರಿತಪಿಸುವಂತಾಗಿದೆ.

ಜಾಗತೀಕ ಸಂದರ್ಭದಲ್ಲಿ ಮಹಿಳಾ ಪ್ರಶ್ನೆಗಳು ಹಲವಾರು ಹುಟ್ಟಿಕೊಂಡಿವೆ. ಅಧಿಕಾರ, ಮಾರುಕಟ್ಟೆಯ ನೀತಿ, ಆಧುನಿಕವಾದದ ನಿಯಮಗಳು ಈ ಎಲ್ಲಾ ಒತ್ತಡಗಳು ಸ್ತ್ರೀಯರಿಗೆ ಉಸಿರುಗಟ್ಟಿಸುವ ವಾತಾವರಣವನ್ನು ಸೃಷ್ಟಿಸಿವೆ. ಜಾಗತೀಕರಣದ ಬೆಳವಣಿಗೆಯಲ್ಲಿ ಮೊದಲು ಬಲಿಪಶುವಾಗುವವಳು ಮಹಿಳೆಯೇ ಆಗಿದ್ದಾಳೆ. ಮಹಿಳೆಯರನ್ನು ಜಾಗತೀಕ ಮಟ್ಟದ ಆರ್ಥಿಕ ಜೂಜಿನಲ್ಲಿ ಸೌಂದರ್ಯ ಲೋಕದಲ್ಲಿ ಮಾಧ್ಯಮಗಳ ಮೂಲಕ ಅವಳನ್ನು ಒತ್ತೆಯಿಡಲಾಗುತ್ತಿದೆ. ಇಂದಿನ ದೂರದರ್ಶನದ ಮೆಘಾಧಾರವಾಹಿಗಳು, ಮಹಿಳಾ ವಿಶೇಷಾಂಕಗಳಂತಹ ಬರಹಗಳು ಮಹಿಳೆಯರಿಗೆ ಆಡಂಬರವನ್ನು ಉತ್ತೇಜಿಸುವಂತೆ ಮಾಡುತ್ತಿವೆ. ಇಲ್ಲಿ ಕೇವಲ ಮನರಂಜನೆಯಷ್ಟೇ ನೀಡುವಂತಹ ಯಂತ್ರಗಳಾಗಿವೆಯೇ ವಿನಃ ಮಹಿಳೆಯರ ವಿಚಾರಗಳನ್ನು, ವೈಚಾರಿಕ ಆಲೋಚನೆಗಳನ್ನು ಕಿತ್ತುಕೊಳ್ಳುವ ಅಥವಾ ಗೌಣವಾಗಿಸುವ ಕೆಲಸವನ್ನು ಈ ಮಾಧ್ಯಮಗಳು ಮಾಡುತ್ತಿವೆ.

ಜಾಗತೀಕರಣದ ನೀತಿಗಳು "ಮಹಿಳೆಯರಿಗೆ ನೀಡುವ ಭರವಸೆಗಳೆಂದರೆ ಮಾಡೆಲಿಂಗ್, ಫ್ಯಾಷನ್ ಡಿಸೈನರ್ ಮುಂತಾದವುಗಳನ್ನು ಮಾತ್ರ. ಇವುಗಳಿಂದ ನಗರವಾಸಿಗಳಾದ ಶೇಕಡ ೧೦%ರಷ್ಟು ಜನರಿಗೆ ಲಾಭವಾಗಬಹುದೇ ಹೊರತು ಹೆಚ್ಚಿನ ಮಂದಿಗೆ ಪ್ರಯೋಜನವಾಗಲಾರದು."[೧೯] ಜಾಗತೀಕರಣದ ಪ್ರಕ್ರಿಯೆಯಲ್ಲಿ ಮಹಿಳೆಯರನ್ನು ಎರಡು ದೃಷ್ಟಿಕೋನದಲ್ಲಿ ನೋಡಲಾಗುತ್ತಿದೆ. ಅವಳನ್ನು ದುಡಿಮೆಯ ಮೂಲಕ ಹಾಗೂ ಹೆಚ್ಚಿನ ಲಾಭ ತರಬಹುದಾದ ಸಾಧನವಾಗಿ ನೋಡುವುದು ಒಂದು ಬಗೆಯಾದರೆ, ಮತ್ತೊಂದು ಉತ್ಪನ್ನಗಳ ಮಾರಾಟದ ಬಹುದೊಡ್ಡ ಅಂಶವೆಂದು ನೋಡುವುದು. ಈ ಮಾರುಕಟ್ಟೆಯ ವಿಸ್ತರಣೆ ಹಾಗೂ ನಿರ್ವಹಣೆಯ ಪ್ರಕ್ರಿಯೆಯಲ್ಲಿ ಅವಳನ್ನೂ ಸಹ ಒಂದು ಸರಕನ್ನಾಗಿಸಿ ಬಳಸಿಕೊಳ್ಳಲಾಗುತ್ತಿದೆ.

ಲಿಂಗ ವ್ಯವಸ್ಥೆಯನ್ನು ಕುರಿತು ಬಿ.ಎನ್. ಸುಮಿತ್ರಾಬಾಯಿ ಅವರು ಕೇಳುವ ಮುಖ್ಯ ಪ್ರಶ್ನೆಗಳೆಂದರೆ: "ಲಿಂಗ ಎಂದರೇನು? ಲಿಂಗ ಪ್ರಭೇದದ ಸ್ವರೂಪವೇನು? ಲಿಂಗಾಧಾರಿತ ಸಂಬಂಧಗಳು ವ್ಯಕ್ತಿಯ ಅನುಭವವಾಗಿ ಹೇಗೆ ರೂಪುಗೊಳ್ಳುತ್ತವೆ. ಹೇಗೆ ಪೋಷಿತವಾಗುತ್ತವೆ? ವರ್ಗ ಅಥವಾ ಜನಾಂಗ ಮುಂತಾದವುಗಳ ಜೊತೆ ಇವುಗಳ ಸಂಬಂಧ ಯಾವ ಬಗೆಯದು?

ಈ ಸಂಬಂಧಗಳಿಗೆ ಚರಿತ್ರೆಯೊಂದು ಇದೆಯೇ? ಲಿಂಗ ಪ್ರಭೇದ ಲೈಂಗಿಕತೆ ಮತ್ತು ವ್ಯಕ್ತಿಯ ಸ್ವಂತಿಕೆಯ ಅರಿವುಗಳಿಗೆ ಇರುವ ಸಂಬಂಧವೇನು? ಭಿನ್ನ ಲಿಂಗರತಿ, ಸಲಿಂಗರತಿ ಮತ್ತು ಲಿಂಗಧಾರಿತ ಸಂಬಂಧಗಳ ಸ್ವರೂಪವೇನು? ತಾತ್ವಿಕ ಚಿಂತನ ವಿಧಾನಗಳಲ್ಲಿ ಹಾಗೂ ಸಾಮಾಜಿಕ ಸಂಬಂಧಗಳಲ್ಲಿ ಸ್ತ್ರೀತ್ವ ಅಥವಾ ಪುರುಷತ್ವ ಪ್ರತ್ಯೇಕವಾಗಿದೆಯೇ? ಇಂತಹ ಸ್ಪಷ್ಟ ವ್ಯತ್ಯಾಸಗಳಿದ್ದರೆ. ಅವು ಹುಟ್ಟಿನಿಂದ ಅಂತರ್ಗತವಾಗಿದ್ದೋ ಅಥವಾ ಸಾಮಾಜಿಕವಾಗಿ ಉಪಯುಕ್ತವಾಗಿದೆಯೇ? ಎಂಬ ಇತ್ಯಾದಿ ಪ್ರಶ್ನೆಗಳು ಸ್ತ್ರೀವಾದಿಗಳನ್ನು ನಿರಂತರವಾಗಿ ಕಾಡುತ್ತಲೇ ಬಂದಿದೆ."[೧೪] ಲಿಂಗ ಎನ್ನುವುದು ಜೈವಿಕ ವ್ಯತ್ಯಾಸದ ಮೂಲಕ ಅಂದರೆ ಗಂಡು-ಹೆಣ್ಣುಗಳ ಜೈವಿಕ ಅನನ್ಯತೆಯಿಂದ ಪರಿಗಣಿಸಲ್ಪಟ್ಟಿದೆ. Gender ಎನ್ನುವಂತಹದ್ದು ಸಾಮಾಜಿಕವಾಗಿ ಅವರವರ ವರ್ತನೆಗಳ ಆಧಾರದ ಮೇಲೆ ನಿರ್ಧಾರವಾಗುವುದು. ಅಂದರೆ ಗಂಡು ಈ ರೀತಿಯಾಗಿ ಇರಬೇಕು, ಹೆಣ್ಣು ಹೀಗೆಯೇ ಇರಬೇಕು ಎಂಬ ಆಧಾರದ ಮೇಲೆ ಪರಿಗಣಿಸಲ್ಪಡುತ್ತದೆ ಎಂದು ಇಲ್ಲಿ ಉಲ್ಲೇಖಿಸಲಾಗಿದೆ.

"ಸ್ತ್ರೀವಾದಿ ಪ್ರಜ್ಞೆ ಬದುಕಿನ ಅಸಮತೋಲನವನ್ನು ಏಕಮುಖತೆಯನ್ನು ಲಿಂಗ ನೀತಿಯ ಕೊರತೆಯನ್ನು ಗುರುತಿಸುತ್ತದೆ. ಲಿಂಗಾಧರಿತವಾದ ಶೋಷಣೆಯನ್ನು ವಿರೋಧಿಸುತ್ತದೆ. ಸ್ತ್ರೀ-ಪುರುಷರಲ್ಲೂ ಈ ಪ್ರಜ್ಞೆ ಲೋಕವನ್ನು ಒಂದು ದೃಷ್ಟಿಯಿಂದ ಕಾಣುವಂತೆ ಮಾಡುತ್ತದೆ. ದ್ವಿಲಿಂಗ ದೃಷ್ಟಿಕೋನದ ಮೇಲೆ ರೂಪಿತವಾದ ಆರೋಗ್ಯಕರ ಸಮಾಜವನ್ನಾಗಿ ಈ ಸಮಾಜವನ್ನು ಬದಲಾಯಿಸಲು ಅದು ಉದ್ದೇಶಿಸಿದೆ. ಕುಟುಂಬವೆನ್ನುವುದು ಮಹಿಳೆಗೆ ಅನಿವಾರ್ಯವಾಗಬಾರದು. ಆಯ್ಕೆಯ ಪ್ರಶ್ನೆಯಾಗಬೇಕು ಹಾಗೂ ಕೌಟುಂಬಿಕ ಜವಾಬ್ದಾರಿಗಳು ಸಮನಾಗಿ ಹಂಚಿಕೆಯಾಗಬೇಕು. ತನ್ನ ಲೈಂಗಿಕ ಬದುಕಿನ ಮೇಲೆ ಮಹಿಳೆಗೆ ಸಾಮ್ಯತೆಬೇಕು. ಜೀವೋತ್ಪಾದನೆಯಲ್ಲಿ ನಿರ್ಣಯಾತ್ಮಕ ದುಡಿಮೆ ಹಾಗೂ ದುಡಿಮೆಯ ಪ್ರತಿಫಲದ ಮೇಲೆ ಸಮಾನ ಹಕ್ಕು ಬೇಕು ಇದೇ ಮೊದಲಾದವು ಸ್ತ್ರೀವಾದಿ ಪ್ರಜ್ಞೆ ಚಳುವಳಿಯ ಪ್ರಮುಖ ಹಕ್ಕೊತ್ತಾಯಗಳು. ಸ್ತ್ರೀವಿಮೋಚನೆಯಲ್ಲಿ ಮನುಷ್ಯನ ವೀವೆಚನೆಯಿದೆ. ಸಿಮೋನ್-ದ-ಬೋವಾ"[೧೫] ಇವರ ಇಡೀ ಲೇಖನವನ್ನು ನೋಡಿದಾಗ ಮಹಿಳಾವಾದ ಅಥವಾ ಸ್ತ್ರೀವಾದವು ಪುರುಷ ಪ್ರಧಾನ ಸಮಾಜದಲ್ಲಿನ ಮಹಿಳೆಗಿರುವ ಸ್ಥಾನಮಾನಗಳು ಹಾಗೂ ಅವಳಿಗಿರುವ ಶೋಷಣೆಗಳನ್ನು, ಅಸಮಾನತೆಯನ್ನು ಸ್ತ್ರೀವಾದಿ ಚಿಂತನೆಯು ಹೇಗೆ ಗ್ರಹಿಸುತ್ತದೆ ಮತ್ತು ಅವುಗಳಿಗೆ ವಿಮೋಚನೆಯನ್ನು ಕಂಡುಕೊಳ್ಳಬೇಕಾದಂತಹ ಮಾರ್ಗಗಳು ಯಾವುವು ಇರಬಹುದೆಂಬುದನ್ನು ವಿವರಿಸಿದ್ದಾರೆ.

ಸ್ತ್ರೀಯರು ಅಭಿವೃದ್ಧಿಯತ್ತ ಎಷ್ಟೇ ದಾಪುಗಾಲು ಇಟ್ಟರೂ ಶೋಷಣೆ, ದೌರ್ಜನ್ಯಗಳಿಂದೇನು ಮುಕ್ತಿಪಡೆದಿಲ್ಲ. ಇದಕ್ಕೆ ಮೊದಲು ಕುಟುಂಬವೇ ಕಾರಣವಾಗಿದೆ. ಈ ಕುಟುಂಬ ವ್ಯವಸ್ಥೆಯು ಗಂಡು ಹೆಣ್ಣು ಎಂಬ ಲಿಂಗತ್ವದ ಪಾತ್ರಗಳನ್ನು ಸಾಮಾಜಿಕ ಸಂಸ್ಥೆಯಲ್ಲೊಂದಾದ ಕುಟುಂಬ ಒಂದು ಪುಟ್ಟ ಘಟಕದಿಂದ ಹಿಡಿದು ಸಮಾಜದ ಇನ್ನೂ ಹಲವು ಘಟಕಗಳು ಮಹಿಳೆಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ನಿರ್ಬಂಧಗಳನ್ನು ಹೇರುತ್ತಲೇ ಬಂದಿದೆ. ಸಿಮೋನ್‌ದ

ಬೋವಾ ಹೇಳುವಂತೆ 'ಹೆಣ್ಣು ಮೊದಲೇ ಹೆಣ್ಣಾಗಿ ಹುಟ್ಟಿದವಳಲ್ಲ, ಅವಳನ್ನು ಸಾಮಾಜಿಕವಾಗಿ ಹೆಣ್ಣಾಗಿ ರೂಪಿಸಲ್ಪಟ್ಟವಳು' ಎಂಬ ಮಾತು ಕಾಲದಿಂದ ಕಾಲಕ್ಕೆ ಗಟ್ಟಿಗೊಳ್ಳುತ್ತಲೇ ಹೋಗಿದೆ/ಹೋಗುತ್ತಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ.

ಕುಟುಂಬ ವ್ಯವಸ್ಥೆಯೊಳಗೆ ಗಂಡು ಏನೇ ತಪ್ಪು ಮಾಡಿದರೂ ಅದನ್ನು ತಳ್ಳಿಹಾಕುವ ಮತ್ತು ಹೆಣ್ಣಿಗೆ ಪ್ರಶ್ನೆಮಾಡುವ ಹಕ್ಕನ್ನು ಕಸಿದುಕೊಳ್ಳುವುದು, ಪುರುಷಾಧಿಕಾರವನ್ನು ಇಲ್ಲಿ ಗುರುತಿಸಬಹುದು. "ಮಹಿಳೆ ದುಡಿಯಲು ಹೊರಬಂದರೂ ಆಕೆಯನ್ನು ಬಿಗಿದ ಬಂಧನಗಳು ಹಾಗೆ ಇರಬೇಕೆಂದು ದುಡಿಸಿಕೊಳ್ಳುವವರೂ ಬಯಸುತ್ತಾರೆ. ಆಗ ಮಾತ್ರ ಅವರಿಗೆ ಸಿದ್ಧವಾದ ಗುಲಾಮಿ ಪಡೆಯೊಂದು ಸದಾ ಸರಬರಾಜಾಗಲು ಸಾಧ್ಯವಾಗುತ್ತದೆ. ಮಹಿಳೆಯ ಮೇಲೆ ಹೊರಗೆ ದುಡಿಯಬೇಕಾದ ಹೊರೆಯನ್ನು ಹೇರಿದ್ದು ಬಿಟ್ಟರೆ ಕುಟುಂಬ, ತಾಯ್ತನ ಹಾಗೂ ನಡವಳಿಕೆಯ ಬಗ್ಗೆಯ ಕಾಮುಕ ಹಾಗೂ ಶೋಷಕ ಧೋರಣೆಗಳನ್ನು ಪರಿಷ್ಕರಿಸಿ ಮತ್ತೆ ಮತ್ತೆ ಎತ್ತಿ ಹಿಡಿಯಲಾಯಿತು."[೧೬] ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆಗೆ ಯಾವುದೇ ತರಹದಲ್ಲಿ ಸ್ವತಃ ನಿರ್ಧಾರವನ್ನು ತೆಗೆದುಕೊಳ್ಳುವ ಸ್ವಾತಂತ್ರ್ಯ ಮತ್ತು ಹಕ್ಕು ಅವಳಿಗಿಲ್ಲ, ಒಂದೊಮ್ಮೆ ಯಾವುದಾದರೂ ನಿರ್ಧಾರವನ್ನು ತೆಗೆದುಕೊಂಡಿದ್ದಾಳೆ ಎಂದರೆ ಅದು ಕುಟುಂಬದ ಏಳಿಗೆಗಾಗಿಯೇ ಹೊರತು ತನಗಾಗಿ ಆಗಿರುವುದಿಲ್ಲ. ಪುರುಷಪ್ರಧಾನ ವ್ಯವಸ್ಥೆಯೊಳಗೆ ಅವಳದ್ದೇ ಆದ ನಿರ್ಧಾರಗಳನ್ನು ತೆಗೆದುಕೊಳ್ಳದಂತೆ ಮತ್ತು ಅವಳಿಗಾಗಿ ಯೋಚಿಸದಂತೆ ಹೊರಗಿಟ್ಟಿದ್ದು ಕೌಟುಂಬಿಕ ದಬ್ಬಾಳಿಕೆಯೇ ಸರಿ. ಪಿತೃಪ್ರಧಾನ ವ್ಯವಸ್ಥೆಯೊಳಗೆ ಮಹಿಳೆಯು ಕೌಟುಂಬಿಕವಾಗಿ ಲಿಂಗ ಅಸಮಾನತೆ, ಲೈಂಗಿಕ ಕಿರುಕುಳ ಮತ್ತು ದೌರ್ಜನ್ಯಗಳಂತಹ ಸಾಮಾಜಿಕ ಕ್ರೌರ್ಯಗಳಿಗೆ ಒಳಗಾಗುತ್ತಾ ನಾಲ್ಕು ಗೋಡೆಗಳ ನಡುವೆಯೇ ಬಂಧಿಯಾಗಿದ್ದಾಳೆ. ಹೀಗಾಗಿ ಪುರುಷಪ್ರಧಾನ ವ್ಯವಸ್ಥೆ ವಿರುದ್ಧ ಧ್ವನಿ ಎತ್ತುವ ಶಕ್ತಿಯನ್ನು ಕಳೆದುಕೊಳ್ಳುತ್ತಿದ್ದಾಳೆ ಎಂಬುದು ಉತ್ಪ್ರೇಕ್ಷೆ ಏನಲ್ಲ.

ಮಹಿಳೆಯರನ್ನು ದುಡಿಯುವ ಸಂದರ್ಭದಲ್ಲಿ ಆರ್ಥಿಕತೆಯ ಅಧೀನವಾಗಿಯೇ ನೋಡಲಾಗುತ್ತದೆ. "ಹೆಂಗಸು ಕೆಲಸ ಮಾಡುತ್ತಾಳೆ. ಗಂಡಸು ದುಡಿದು ಏನನ್ನಾದರೂ ಉತ್ಪಾದಿಸುತ್ತಾನೆ. ಹೆಣ್ಣಿನ ಸೇವಾವಲಯದ ಕೆಲಸಗಳು ಮನೆ ಮಂದಿ ಸಂಗೋಪನೆಯಲ್ಲಿ ಸಕಾರಾತ್ಮಕ ಅಗತ್ಯದ ಪರಿಣಾಮಗಳನ್ನು ಬೀರುತ್ತವಾದರೂ ಅವಕ್ಕೆ ವಿನಿಮಯವಾಗಿ ಅವಳ ಕೈಗೆ ಸಂಪಾದನೆಯೂ ಹತ್ತುವುದು ಸಾಧ್ಯವಿಲ್ಲ. ಏಕೆಂದರೆ ಗಂಡಸಿನ ದುಡಿಮೆಯ ಉತ್ಪಾದನೆಯನ್ನು ಅಳೆಯುವ ಮಾಪಕಗಳಿರುವಂತೆ ಅವಳ ಸೇವೆಯ ಪರಿಣಾಮಗಳನ್ನು ಅಳೆಯುವ ಯಾವುದೇ ಮಾಪಕಗಳಿಲ್ಲ."[೧೭] ಮಹಿಳೆಯು ದುಡಿದರೂ ಕೂಡ ಅವಳ ದುಡಿಮೆಗೆ ಯಾವುದೇ ರೀತಿಯ ಪ್ರತಿಫಲ ದೊರೆಯುವುದಿಲ್ಲ. ಮನೆಯಲ್ಲಿಯೇ ಆಕೆ ಒಂದು ನಿಮಿಷ ಬಿಡುವಿಲ್ಲದೆ ದುಡಿದರೂ ಅವಳ ಶ್ರಮಕ್ಕೆ ಯಾವುದೇ ರೀತಿಯಾದಂತ ವೇತನ ದೊರೆಯುವುದಿಲ್ಲ. ಅವಳ ದುಡಿಮೆಯು ಲೆಕ್ಕಕ್ಕೆ ಬರುವುದಿಲ್ಲ. ಕಾರಣ ಕುಟುಂಬದೊಳಗಿನ ವಿವಾಹ ಸಂಸ್ಥೆಯೇ ಆಗಿದೆ. ಸಾಮಾಜಿಕ ನೀತಿಗಳು ಹಾಗೂ ಮೌಲ್ಯಗಳು ಅಧಿಕಾರ ಕೇಂದ್ರದ ರಚನೆಗಳೇ ಆಗಿರುತ್ತವೆ. ದುಡಿಮೆ ಮತ್ತು ಶ್ರಮದ ವಿಷಯಕ್ಕೆ ಬರುವುದಾದರೆ ಪುರುಷ ಮತ್ತು ಮಹಿಳೆ ಈ ಇಬ್ಬರಿಗೂ ಶ್ರಮಬಲದ

ವ್ಯತ್ಯಾಸವನ್ನು ಹೇಳುವ ಕಾಲಕ್ಕೆ ಪುರುಷರಿಗೆ ಮೊದಲ ಆದ್ಯತೆಯನ್ನು ಕೊಡಲಾಗಿದೆ. ಈ ಲಿಂಗತಾರತಮ್ಯವನ್ನು ಕುಟುಂಬ ವ್ಯವಸ್ಥೆಯನ್ನು ಮೊದಲುಗೊಂಡು ಆಧುನಿಕ ಜಗತ್ತಿನ ದುಡಿಮೆ ಮತ್ತು ಆರ್ಥಿಕತೆಯಲ್ಲಿ ಅಸಮಾನತೆಯನ್ನು ಮುಂದುವರೆಸಿಕೊಂಡು ಬಂದಿರುವುದು ತಿಳಿಯುತ್ತದೆ.

ಮಹಿಳೆಗೆ ಆಸ್ತಿಯಲ್ಲಿ ವಂಚಿಸುವುದನ್ನು ಕಾಣಬಹುದು. ಮತ್ತು ಅವಳನ್ನು ಭಾವನಾತ್ಮಕವಾಗಿ ಬಂಧಿಸುತ್ತಾರೆ. ಖಾಸಗಿ ಆಸ್ತಿಯ ಪರಿಕಲ್ಪನೆಯನ್ನು ಏಂಗೆಲ್ಸ್ ಹೀಗೆ ಹೇಳಿದ್ದಾರೆ. "ಖಾಸಗಿ ಆಸ್ತಿಯ ಪರಿಕಲ್ಪನೆಗೆ ಮೊದಲು ಆಸ್ತಿಯ ಒಡೆತನವು ಸಮಷ್ಟಿಗೆ ಸೇರಿದ್ದು ಸ್ತ್ರೀ ಪುರುಷರಿಬ್ಬರಿಗೂ ಸಮಾನ ಸ್ಥಾನಮಾನವಿತ್ತು. ಮನೆ ಹೊರಗಿನ ಗಂಡಿನ ಬೇಟೆಯ ಕೆಲಸದಷ್ಟೇ ಮನೆಯೊಳಗಿನ ಕೆಲಸಕ್ಕೂ ಗೌರವವಿತ್ತು. ಖಾಸಗಿ ಆಸ್ತಿಯ ಕಲ್ಪನೆಯೊಂದಿಗೆ ಚರಾಚರ ಸಂಪತ್ತು ಗಂಡಿನ ಅಧೀನಕ್ಕೆ ಒಳಪಟ್ಟಿತು. ಸ್ತ್ರೀಯು ಮನೆಯೊಳಗಿನ ವಂಶ ಹಾಗೂ ಉತ್ತರಾಧಿಕಾರವನ್ನು ಪಿತೃ ಅಧಿಕಾರಕ್ಕೆ ವರ್ಗಾಯಿಸಲಾಯಿತು."[೧೮] ಹೊರಗೆ ದುಡಿಯುವ ಗಂಡು ಶ್ರೇಷ್ಠ ಕುಟುಂಬದೊಳಗೆ ದುಡಿಯುವ ಹೆಣ್ಣು ಕನಿಷ್ಟ ಎಂಬ ಲಿಂಗ ತಾರಮ್ಯದಿಂದಾಗಿ ಖಾಸಗಿ ಆಸ್ತಿಯ ಹಕ್ಕಿನಿಂದ ಮಹಿಳೆ ವಂಚಿತಳಾದಳು.

ಮಹಿಳೆ ಮತ್ತು ಆಸ್ತಿಯ ವಿಷಯಕ್ಕೆ ಬಂದಾಗ ಮುಖ್ಯವಾಗಿ ಗಂಡಿನಂತೆ ಹೆಣ್ಣಿಗೆ ಸಮಾನವಾದ ಆಸ್ತಿಯನ್ನು ನೀಡಲಾಗಿಲ್ಲ. ಮೇಲಾಗಿ ಅವಳಿಗೆ ಆಸ್ತಿಯಲ್ಲಿ ವಂಚನೆ ಮಾಡಿರುವುದೇ ಹೆಚ್ಚು. "ಮೊದಲು ತಾಯಿಯಿಂದ ಅವಳ ಎಲ್ಲ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಮಾತ್ರ ದಕ್ಕುವ ಹಾಗಾಯಿತು. ಹೀಗೆ ಖಾಸಗಿ ಆಸ್ತಿಯ ಕಲ್ಪನೆಯೇ ಪಿತೃಪ್ರಧಾನ ಕುಟುಂಬ ವ್ಯವಸ್ಥೆಗೆ ಮೂಲ ಕಾರಣವಾಯಿತು."[೧೯] ಸ್ತ್ರೀ ಪ್ರಧಾನ ಕುಟುಂಬ ವ್ಯವಸ್ಥೆ ಪುರುಷ ಪ್ರಧಾನ ಕುಟುಂಬ ವ್ಯವಸ್ಥೆಯಾಗಿ ಪರಿವರ್ತಿತಗೊಳ್ಳಲು ಖಾಸಗಿ ಆಸ್ತಿಯು ಬದಲಾಯಿತು ಎಂಬುದನ್ನು ಇಲ್ಲಿ ತಿಳಿಯುವುದರ ಜೊತೆಗೆ ಮಹಿಳೆಯರಿಗೆ ಆಸ್ತಿಯಿಂದ ಹೇಗೆ ವಂಚಿತಳನ್ನಾಗಿ ಮಾಡಿದೆ ಈ ವ್ಯವಸ್ಥೆ ಎಂಬುದನ್ನು ಇಲ್ಲಿ ಕಾಣುತ್ತೇವೆ. ಹಾಗೆಯೇ ಮಹಿಳೆಯು ತನ್ನ ಆಸ್ತಿ ತನಗೆ ಸಿಗಬೇಕಾದದ್ದು ನನ್ನ ಹಕ್ಕು ಎಂದು ಅದನ್ನು ಕೇಳಲು ಮುಂದಾದಾಗ ಆ ಮಹಿಳೆಯನ್ನು ಯಾವ ರೀತಿಯಾಗಿ ಈ ಸಮಾಜ ನಡೆಸಿಕೊಳ್ಳುತ್ತದೆ ಎಂಬುದನ್ನು ನೋಡಬಹುದು. "ಹೆಣ್ಣು ಬದುಕನ್ನು ಇಡಿಯಾಗಿ ಆವರಿಸುವ ಆಸ್ತಿ ಹಕ್ಕು ಮತ್ತು ವಾರಸುದಾರಿಕೆಯ ಪ್ರಶ್ನೆಗಳು ಅವಳ ಬದುಕನ್ನು ಕಗ್ಗಂಟಾಗಿಸುವ ವೈವಾಹಿಕ ಸಮಸ್ಯೆಗಳನ್ನು ಹುಟ್ಟುಹಾಕಿ ಬೆಳೆಸುತ್ತಲೇ ಇವೆ." ತನ್ನ ತಂದೆಯಿಂದ ತನಗೆ ಬರಬೇಕಾದ ಆಸ್ತಿಯನ್ನು ಕೇಳಲು ಹೋದಾಗ ಆಕೆಗೆ ಆಗುವ ಆಘಾತ ಮತ್ತು ಭಾವನಾತ್ಮಕ ಬೆದರಿಕೆಗಳು ಹಲವಾರಿವೆ. ಉದಾಹರಣೆಗೆ ಮಹಿಳೆಯರಿಗೆ ಆಸ್ತಿ ಹಕ್ಕಿನ ಪ್ರಶ್ನೆ ಬಂದಾಗಲೆಲ್ಲ. ನನ್ನ ಸಹೋದರ ಅಥವಾ ತವರುಮನೆಯವರಿಂದ ಭಾವನಾತ್ಮಕ ಒತ್ತಡಗಳ ಜೊತೆಗೆ ಕಾನೂನಾತ್ಮಕವಾಗಿ ಆ ಮಹಿಳೆಗೆ ಬೆದರಿಕೆ ಅಥವಾ ಹಣದ ಆಮಿಷವನ್ನು ಒಡ್ಡುವ ಮತ್ತು ಆಸ್ತಿಯ ಬಗೆಗೆ ಮಾತನಾಡದಂತೆ ಅವಳನ್ನು ಬಂಧಿಸಿಡುವುದು ಇಂತಹ ಹಲವಾರು ನಿದರ್ಶನಗಳನ್ನು ಮಹಿಳಾ ವಿಚಾರ ಸಾಹಿತ್ಯದಲ್ಲಿ ಚರ್ಚಿಸಲಾಗಿದೆ.

ಮಹಿಳಾ ಪ್ರಶ್ನೆ ಎಂದರೆ ಇದುವರೆಗೂ ಭಾರತದ ಮಹಿಳೆಯರ ಗತಕಾಲದಿಂದ ನಡೆದುಕೊಂಡು ಬಂದಿರುವ ಚರಿತ್ರೆಯ ಹಿನ್ನೆಲೆಯನ್ನು ಹೊಂದಿದೆ. ವರ್ತಮಾನದ ಸಮಸ್ಯೆಯನ್ನೂ ಒಳಗೊಂಡಿರುತ್ತದೆ. ಅದಕ್ಕೆ ಭೂತಕಾಲದ ಸಂಪರ್ಕವೂ ಇರುತ್ತದೆ. ಭೂತ ಮತ್ತು ವರ್ತಮಾನದ ಪ್ರಶ್ನೆಯನ್ನು ಆಲೋಚಿಸುವಾಗ ಮಹಿಳೆಯ ಕುರಿತು ಮುಂದಿನ ಭವಿಷ್ಯದ ಆದಿ ಏನೆಂಬುದನ್ನು ಕೂಡ ಹೊಂದಿದೆ. ಹೀಗಾಗಿ ಮೂರು ಕಾಲದ ಪ್ರಶ್ನೆಯನ್ನು ಒಳಗೊಂಡಿದೆ. ಹಾಗಾಗಿಯೇ ಮಹಿಳಾ ಪ್ರಶ್ನೆಯೂ ಮೂರು ಕಾಲದ ಪ್ರಶ್ನೆಯನ್ನು ಏಕೀಭರ್ವಿಸಿಕೊಂಡಿದೆ.

ಮಹಿಳಾ ಪ್ರಶ್ನೆಯನ್ನು ಚರಿತ್ರೆಯ ಹಿನ್ನೆಲೆಯಲ್ಲಿ ವರ್ತಮಾನದ ಪ್ರಶ್ನೆಗಳನ್ನು ಪರಿಶೀಲನೆ ಮಾಡುವಾಗ ಭವಿಷ್ಯದ ಆದಿಯನ್ನು ರೂಪಿಸುವ ಕೆಲಸ ಸಹ ಇದೆ. ಹೀಗಾಗಿ ಮಹಿಳಾ ಪ್ರಶ್ನೆಯು ಮಹಿಳೆಯರ ಸಂಕಟ ಮತ್ತು ಹರ್ಷಗಳು ಈ ಮೂರು ಕಾಲಘಟ್ಟವನ್ನು ಅದು ಏಕೀಭರ್ವಿಸಿಕೊಂಡಿದೆ.

ಮಹಿಳಾ ಪ್ರಶ್ನೆಯು ದಮನ, ಶರಣಾಗತಿ, ನಾಶ, ಪ್ರತಿರೋಧ ಮತ್ತು ಪರ್ಯಾಯ ಸೃಷ್ಟಿ ಈ ಐದೂ ಸ್ವರೂಪವನ್ನು ಒಳಗೊಂಡಿರುತ್ತದೆ. ಮಹಿಳಾ ಪ್ರಶ್ನೆ ದಮನದ ಚರಿತ್ರೆಯನ್ನು ಒಳಗೊಂಡಿದೆ. ಅನೇಕ ಮಹಿಳೆಯರು ಪುರುಷ ಪ್ರಧಾನ ಸಮಾಜದಲ್ಲಿ ದಮನವನ್ನು ಒಪ್ಪಿಕೊಂಡಿದ್ದಾರೆ ಮತ್ತು ಶರಣಾಗಿದ್ದಾರೆ. ಹಾಗೇಯೆ ಇವೆಲ್ಲವನ್ನು ಪ್ರತಿರೋಧ ಮಾಡುತ್ತ ಪರ್ಯಾಯ ಮಾರ್ಗವನ್ನು ಹುಡುಕಿಕೊಳ್ಳುತ್ತಾ ಸಮಸ್ಯೆಯನ್ನು ಎದುರಿಸಿದ್ದಾರೆ. ಮಹಿಳೆಯನ್ನು ಗತಕಾಲದಿಂದ ಹಿಡಿದು ಇಂದಿನವರೆಗೂ ದಮನ ಮಾಡಿಕೊಂಡೇ ಬರಲಾಗಿದೆ. ಎಷ್ಟೋ ಮಹಿಳೆಯರು ಈ ದಮನವನ್ನು ಪ್ರತಿರೋಧ ಮಾಡಲು ಸಾಧ್ಯವಾಗದೆ ಶರಣಾಗತಿಯನ್ನು ಹೊಂದಿದ್ದಾರೆ ಮತ್ತು ನಷ್ಟವನ್ನು ಅನುಭವಿಸಿದ್ದಾರೆ. ಪ್ರತಿರೋಧ ಮಾಡುವ ಮಹಿಳಾ ಪ್ರಜ್ಞೆ ಬೇರೆ ಬೇರೆ ರೀತಿಯಾಗಿವೆ. ಅಕ್ಷರಸ್ಥ ಮಹಿಳೆಯ ಪ್ರತಿರೋಧದ ಮಹಿಳಾ ಪ್ರಜ್ಞೆ ಒಂದು ರೀತಿಯದ್ದಾಗಿದ್ದರೆ, ಅನಕ್ಷರಸ್ಥ ಮಹಿಳೆಯ ಪ್ರತಿರೋಧದ ಮಹಿಳಾ ಪ್ರಜ್ಞೆಯು ಮತ್ತೊಂದು ರೀತಿಯದ್ದಾಗಿರುತ್ತದೆ. ಒಟ್ಟಿನಲ್ಲಿ ಪ್ರತಿರೋಧದ ಪ್ರಜ್ಞೆ ವಿಭಿನ್ನ ಆಯಾಮವನ್ನು ಒಳಗೊಂಡಿರುತ್ತದೆ. ಶರಣಾಗತಿ, ಪ್ರತಿರೋಧ, ಪರ್ಯಾಯ ಈ ಮೂರು ಆಯಾಮಗಳನ್ನು ಒಳಗೊಂಡಿದೆ. ಸಾಮಾಜಿಕ ಕ್ಷೇತ್ರದಲ್ಲಿ, ಧಾರ್ಮಿಕ ಕ್ಷೇತ್ರದಲ್ಲಿ, ರಾಜಕೀಯ ಕ್ಷೇತ್ರದಲ್ಲಿ ಮತ್ತು ಕುಟುಂಬದಲ್ಲಿ ಎದುರಿಸುತ್ತಿರುವ ಸಂಕಟಗಳನ್ನು ದಮನವನ್ನು ಅವಳು ಮಾಡುತ್ತಿರುವ ಪ್ರತಿರೋಧ ಹಾಗೂ ಅವಳು ಕಂಡುಕೊಳ್ಳುತ್ತಿರುವ ಪರ್ಯಾಯಗಳನ್ನು ಮಹಿಳಾ ಪ್ರಶ್ನೆಯ ಮೂಲಕ ಹೇಳಲಾಗುತ್ತಿದೆ.

ದಮನ, ಪ್ರತಿರೋಧ ಮತ್ತು ಪರ್ಯಾಯ ಮಾರ್ಗಗಳು ಏಕರೂಪಿಯಾಗಿಲ್ಲ. ಅವು ಬಹುರೂಪಿಯಾಗಿವೆ ಮತ್ತು ಬೇರೆ ಬೇರೆ ಕಾಲಕ್ಕೆ ಬೇರೆ ಬೇರೆ ಬಗೆಯ ಪರ್ಯಾಯವು ಬೇರೆ ಆಯಾಮದಲ್ಲಿವೆ. ದಮನ, ಪ್ರತಿರೋಧ ಮತ್ತು ಪರ್ಯಾಯಗಳು ವಿವಿಧ ಆಯಾಮಗಳನ್ನು

ಚರ್ಚೆ ಮಾಡಿರುವುದನ್ನು ನಾನು ಮಹಿಳಾ ಪ್ರಶ್ನೆ ಎನ್ನುವುದನ್ನು ಪರಿಕಲ್ಪನೆಯನ್ನಾಗಿ ಮಾಡಿಕೊಂಡಿದ್ದೇನೆ.

ಕನ್ನಡ ಮಹಿಳಾ ವಿಚಾರ ಸಾಹಿತ್ಯದಲ್ಲಿ ಮಹಿಳಾ ದೃಷ್ಟಿಕೋನವನ್ನು ಕುರಿತು ಚರ್ಚಿಸಲಾಗಿದೆ. ಮಹಿಳೆಯೊಬ್ಬಳು ತನ್ನದೇ ಆದ ದೃಷ್ಟಿಕೋನವನ್ನು, ಲೋಕದೃಷ್ಟಿಯನ್ನು ಹೊಂದಿದ್ದಾಳೆ. ಅವುಗಳನ್ನು ಅವಳು ಸಮಾಜದ ಮುಂದಿಟ್ಟಾಗ ಅನೇಕ ಸಲ ಪುರುಷ ಪ್ರಧಾನ ಸಮಾಜವು ಕಂಗಾಲಾಗಿದೆ. ಎಷ್ಟೋ ಸಾರಿ ಅವಳ ಆ ಪ್ರಶ್ನೆಯನ್ನು ರದ್ದು ಮಾಡಲಾಗಿದೆ. ಆದರೆ ಪ್ರಶ್ನೆ ರದ್ದಾಗಿರುವುದಿಲ್ಲ ಎನ್ನುವುದನ್ನು ಎಂ.ಎಸ್.ಆಶಾದೇವಿಯವರ 'ಸ್ತ್ರೀ ಮತವನ್ನುತ್ತರಿಸಲಾಗದೆ' ಎಂಬ ಲೇಖನದ ಮೂಲಕ ಕುಮಾರ ವ್ಯಾಸನ ಪಠ್ಯವನ್ನು ಚರ್ಚಿಸಿದ್ದಾರೆ. ಪ್ರತಿ ಮಹಿಳೆಗೆ ತನ್ನದೇ ಆದ ಲೋಕದೃಷ್ಟಿಯಿದೆ. ಹೀಗಾಗಿ ಮಹಿಳಾ ಪ್ರಶ್ನೆಯು ಮಹಿಳಾ ಲೋಕದಿಂದ ತನ್ನದೇ ಆದ ಲೋಕದೃಷ್ಟಿಯನ್ನು ಹೊಂದಿರುತ್ತದೆ. ಕನ್ನಡ ಮಹಿಳಾ ವಿಚಾರ ಸಾಹಿತ್ಯವು ಮಹಿಳಾ ಪ್ರಶ್ನೆಗಳ ಕುರಿತು ವರ್ತಮಾನದಲ್ಲಿ ಮತ್ತು ಪುರಾಣಗಳಲ್ಲಿ ಅನೇಕ ಮಹಿಳೆಯರು ತಮ್ಮ ತಾಯ್ತತನದ ಪ್ರಶ್ನೆಯನ್ನು ಮತ್ತು ಲೈಂಗಿಕ ಹಕ್ಕಿನ ಪ್ರಶ್ನೆಯನ್ನು ಬದುಕುವ ಹಕ್ಕಿನ ಪ್ರಶ್ನೆಯನ್ನು ಸಾಹಿತ್ಯದ ಮೂಲಕ ಚರ್ಚೆಮಾಡಲಾಗಿದೆ.

ನಾನು ನನ್ನ ಅಧ್ಯಯನದಲ್ಲಿ ಬಳಸಿಕೊಳ್ಳುತ್ತಿರುವ ಆಕರಗಳಲ್ಲಿ ಶುದ್ಧ ಸಮಾಜ ಶಾಸ್ತ್ರೀಯ ಲೇಖನಗಳಷ್ಟೇ ಅಲ್ಲ. ಕೆಲವು ಸಾಹಿತ್ಯದ ನೆಲೆಯಿಂದ ಹುಟ್ಟಿದರೂ ಕೂಡ ಸಮಾಜಶಾಸ್ತ್ರೀಯ ನೆಲೆಯ ಪ್ರಶ್ನೆಗಳನ್ನು ಎತ್ತಿರುವ ಲೇಖನಗಳನ್ನು ಬಳಸಿಕೊಳ್ಳಲಾಗಿದೆ.

ಒಟ್ಟಾರೆಯಾಗಿ ನನ್ನ ಅಧ್ಯಯನದ ಮುಖ್ಯ ಪರಿಕಲ್ಪನೆಯಾದ ಮಹಿಳಾ ಪ್ರಶ್ನೆಯನ್ನು ಮಹಿಳೆಯರ ಆತ್ಮವಿಮರ್ಶೆಯ ಭಾಗವಾಗಿ ಮಹಿಳಾ ಪ್ರಶ್ನೆಗಳನ್ನ ಎತ್ತಿಕೊಳ್ಳಲಾಗಿದೆ. ಹಾಗೆಯೇ 'ಪ್ರಶ್ನೆ' ಎಂಬ ಪರಿಕಲ್ಪನೆಯನ್ನು ಕೇವಲ ಪದಬಳಕೆಯ ಅರ್ಥದಲ್ಲಿ ಬಳಸಿಕೊಳ್ಳದೆ ಅದನ್ನು ಪ್ರತಿಭಟನೆ ಪ್ರತಿರೋಧದ ಭಾಗವಾಗಿ ನೋಡಲಾಗಿದೆ. ಕೇವಲ ಪ್ರಶ್ನೆ ಮಾಡುವುದಷ್ಟೇ ಆಗಿರದೆ ಅದರ ಜೊತೆಗೆ ಪರ್ಯಾಯ ಮಾರ್ಗವನ್ನು ಹೇಗೆ ಕಂಡುಕೊಳ್ಳುವರು ಮತ್ತು ಪರ್ಯಾಯ ಮಾರ್ಗ ಕಂಡುಕೊಳ್ಳುವುದೇ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವುದಾಗಿದೆ. ಈಗಾಗಲೇ ನಡೆದಿರುವ ದೌರ್ಜನ್ಯಕ್ಕೆ ಪ್ರತಿಯಾಗಿ ನ್ಯಾಯವನ್ನು ಕಂಡುಕೊಳ್ಳುವಂತಹದ್ದು, ಪರ್ಯಾಯವನ್ನು ರೂಪಿಸುವಂತಹದ್ದು, ಚರಿತ್ರೆಯ ಕಾಲದಿಂದಲೂ ಮಹಿಳೆಯ ಮೇಲೆ ನಡೆದಿರುವ ಅನ್ಯಾಯ, ಶೋಷಣೆ, ದಬ್ಬಾಳಿಕೆ ಇವೆಲ್ಲವನ್ನೂ ಇಂದು ಶಿಕ್ಷಣ ಪಡೆದ ಮಹಿಳೆಯು ತಮ್ಮ ಅಸ್ತಿತ್ವದ ಭಾಗವಾಗಿ ಪ್ರಶ್ನೆಮಾಡುತ್ತಿದ್ದಾಳೆ ಎಂಬುದನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

ಕೊನೆಟಿಪ್ಪಣಿಗಳು

೧. ಯಲ್ಲಪ್ಪ ಹಿಮ್ಮಡಿ, ವೈಚಾರಿಕ ಸಾಹಿತ್ಯ ಮೀಮಾಂಸೆ, ಪುಟ-೧

೨. ದೂರಶಿಕ್ಷಣ ಮಾಲೆ-೫, ಕರ್ನಾಟಕ ಚಿಂತನ ಪರಂಪರೆ, ರಹಮತ್ ತರೀಕೆರೆ, ಪುಟ-೨

೩. ಮೀರಾ ಚಕ್ರವರ್ತಿ, ವಿಚಾರವಾದ ಮತ್ತು ಚಾರ್ವಾಕ, ಸಂಕ್ರಮಣ ೧೯೭೬, ಪುಟ-೧೬

೪. ಶಿವರಾಮ ಕಾರಂತ, ವಿಚಾರ ಸಾಹಿತ್ಯ ನಿರ್ಮಾಣ, ಪುಟ-೩

೫. ಜ್ಯೋತಿ ಹೊಸೂರು, ವೈಚಾರಿಕ ಸಾಹಿತ್ಯ, ಪುಟ-೧೫೪

೬. ವಿಚಾರ ಸಾಹಿತ್ಯ ಮತ್ತು ಹೆಣ್ಣು, ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀ, ಪೋಲಂಕಿ ರಾಮಮೂರ್ತಿ, ಪುಟ-೩೦

೭. ಗೌರೀಶ ಕಾಯ್ಕಿಣಿ, ಸಮಗ್ರ ಸಾಹಿತ್ಯ ಸಂಪುಟ-೧, ಪುಟ-೩

೮. ಶಿವರಾಮ ಕಾರಂತ, ವಿಚಾರ ಸಾಹಿತ್ಯ ನಿರ್ಮಾಣ, ಪುಟ-೩೫

೯. ಜಿ.ಆರ್.ತಿಪ್ಪೇರುದ್ರಸ್ವಾಮಿ (ಸಂ)., ವಿಚಾರ ಸಾಹಿತ್ಯ ೨೦೦೦, ಪುಟ-೭೫

೧೦. ಬೇಂದ್ರೆ 'ವಿಚಾರ ಮಂಜರಿ', ಪುಟ-೬೯

೧೧. ಮಾಲತಿ ಪಟ್ಟಣಶೆಟ್ಟಿ, ಭರಣ ಸ್ತ್ರೀ ಸಂವೇದನೆ ಸಂಪುಟ-೫, ಪುಟ-೫

೧೨. ತಾರಿಣಿಶುಭದಾಯಿನಿ ಆರ್.(ಸಂ)., ಮಹಿಳಾ ವಿಚಾರ ಸಾಹಿತ್ಯ ಸಂಪುಟ-೭, ಪುಟ-೨೨

೧೩. ಹೆಚ್.ಟಿ.ಪೋತೆ (ಸಂ)., ವಿಚಾರ ಸಾಹಿತ್ಯ, ೨೦೦೬, ಪುಟ-೫೭

೧೪. ಸುನಂದ ಎಂ., ನಿಷೇಧಗಳು ಮತ್ತು ಲಿಂಗ ವ್ಯವಸ್ಥೆ, ಪುಟ-೧೯೩

೧೫. ವಿಜಯಾ ದಬ್ಬೆ, ಸ್ತ್ರೀವಾದ ಮತ್ತು ಸ್ತ್ರೀವಾದಿ ವಿಮರ್ಶೆ, ಪುಟ-೭೭

೧೬. ಸೌಂದರ್ಯ ಸ್ಪರ್ಧೆ, ಮಾರಾಟಕ್ಕೆ ನೂರೆಂಟು ಮಾರ್ಗ, ಪುಟ-೮೭

೧೭. ಹೆಚ್.ಎಸ್.ಶ್ರೀಮತಿ, ಹೆಣ್ಣು ಹೆಂಗಸು, ಪುಟ-೨೭೩

೧೮. ಇಂದಿರಮಾನ್ವೀಕರ, ಸಂಪ್ರೀತಿ, ಪುಟ-೨೨೮

೧೯. ಹೆಚ್.ಎಸ್.ಶ್ರೀಮತಿ, ಸ್ತ್ರೀವಾದಿ ತಾತ್ವಿಕತೆ, ಪುಟ-೨೩೧

ಅಧ್ಯಾಯ – ನಾಲ್ಕು

ವಿಚಾರ ಸಾಹಿತ್ಯ : ಘಟನಾ ಕೇಂದ್ರಿತ ಚಿಂತನಾ ಸಾಹಿತ್ಯ ವಿಶ್ಲೇಷಣೆ

ಅಧ್ಯಾಯ – ನಾಲ್ಕು

ವಿಚಾರ ಸಾಹಿತ್ಯ : ಘಟನಾ ಕೇಂದ್ರಿತ ಚಿಂತನಾ ಸಾಹಿತ್ಯ ವಿಶ್ಲೇಷಣೆ

ವಿಚಾರ ಸಾಹಿತ್ಯವು ಬಹುತೇಕ ಎಲ್ಲಾ ವಿಷಯಗಳನ್ನು ಒಳಗೊಂಡಿದೆ. ಹಾಗೆಯೇ ಆಯಾ ಕಾಲದಲ್ಲಿ ನಡೆದ ಘಟನೆಗಳ ಬಗೆಗೆ ಪ್ರತಿಕ್ರಿಯಿಸುತ್ತಲೇ ಬಂದಿರುವುದು ಕಾಣಬಹುದು. ಕೇವಲ ಯಾವುದೊ ಒಂದು ವಿಷಯಕ್ಕೆ ಮಾತ್ರ ಸೀಮಿತವಾಗದೆ ಎಲ್ಲಾ ಕ್ಷೇತ್ರಗಳಿಗೂ ಅಂದರೆ ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಹಿತ್ಯಿಕ, ಶೈಕ್ಷಣಿಕವಾಗಿ ಪ್ರತಿಕ್ರಿಯಿಸಿದೆ. ಹಾಗೆಯೇ ಇವೆಲ್ಲ ವಿಷಯಗಳ ನಡುವೆಯೂ ಈ ಸಮಾಜದಲ್ಲಿ ಮಹಿಳೆಯರಿಗೆ ನೀಡಿರುವ ಸ್ಥಾನಮಾನಗಳು ಯಾವ ರೀತಿಯವು ಎಂಬುದನ್ನು ಹಲವಾರು ಲೇಖಕಿಯರು ಚರ್ಚಿಸಿದ್ದಾರೆ.

"ಚಂದ್ರಗುತ್ತಿ ಕರ್ನಾಟಕದ ಒಂದು ಚಿಕ್ಕಗ್ರಾಮ ಅಲ್ಲಿನ ಗುತ್ಯವ್ವ ದೇವತೆಗೆ ಪ್ರತಿ ವರ್ಷ ಸಂದಾಯವಾಗುವ ಬೆತ್ತಲೆ ಸೇವೆಯ ಸಂದರ್ಭದಲ್ಲಿ ಭಕ್ತರ ಪ್ರಕೋಪಕ್ಕೆ ಕಾರಣವಾದ ಘಟನೆಗಳು ಸುದ್ದಿಗೆ ಮುಖ್ಯವಾದ ವಸ್ತು, ದಲಿತ ಸಂಘರ್ಷ ಸಮಿತಿ ಮತ್ತು ಕೆಲವು ಮಹಿಳಾ ಸಂಘಟನೆಗಳು ಅಲ್ಲಿ ಜರುಗಲಿದ್ದ ಮತ್ತು ಜರುಗಿದ ಬೆತ್ತಲೆ ಸೇವೆಯನ್ನು ಖಂಡಿಸಿ ಪ್ರತಿಭಟನೆ ನಡೆಸಿದವು. ಭಕ್ತೆಯರನಷ್ಟೇ ಅಲ್ಲ, ಪ್ರತಿಭಟನಾಕಾರರನ್ನೂ ಬಲವಂತವಾಗಿ ಬೆತ್ತಲೆಗೊಳಿಸಿದ್ದು ಈ ವರ್ಷದ ವಿಶೇಷ. ಸಂಭವಿಸಬಹುದಾದ ಈ ಆಚರಣೆಯ ಅರಿವಿದ್ದು ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದ್ದರೂ ಪರಿಸ್ಥಿತಿ ಕೈಮೀರಿ ಹೋಯಿತೆಂಬ ಸರ್ಕಾರದ ಹೇಳಿಕೆ ಒಂದು ಕಡೆ. ವ್ಯಾಪಾರೀ ಪತ್ರಿಕೆಗಳಷ್ಟೇ ಅಲ್ಲದೆ ಪ್ರಗತಿಪರರೆಂಬ ಹಣೆಪಟ್ಟಿ ಕಟ್ಟಿಕೊಂಡ ಪತ್ರಿಕೆಗಳೂ ಕೂಡ ಬೆತ್ತಲೆ ಹೆಣ್ಣಿನ ಚಿತ್ರದ ವಿವರಗಳನ್ನು ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸಿ ಮತ್ತು ಪ್ರಚಾರ ಎರಡನ್ನೂ ಹೆಚ್ಚಿಸಿಕೊಂಡವು. ಆಚರಣೆಯಲ್ಲಿ ಮಗ್ನರಾದವರ ಸುಖದುಃಖಗಳು ಏನೇ ಇರಲಿ, ಆಚರಣೆಯಿಂದ ಸ್ವಹಿತಾಸಕ್ತಿ ಕಾಯ್ದುಕೊಂಡವರೂ ಈ ಸಂದರ್ಭದಲ್ಲಿ ಇಲ್ಲದಿಲ್ಲ. ಇಷ್ಟು ಸಾಲದೆಂಬಂತೆ ಈ ಆಚರಣೆಯನ್ನು ನಗರ ಕ್ಯಾಬರೆಗೆ, ಏಲಾಚಾರ್ಯರ ದಿಗಂಬರತ್ವಕ್ಕೆ ಹೋಲಿಸಿ ಆಚರಣೆಯ ಸ್ವಾತಂತ್ರ್ಯಕ್ಕೆ ತಮ್ಮ ಆಚಾರವಾದ ಕಾಳಜಿ ತೋರಿಸಿದ ಬೇಜವಾಬ್ದಾರಿ ಧೀಮಂತರು ಕೆಲವರು!"[೧]

ದೇವರ ಹೆಸರಿನಲ್ಲಿ ನಡೆಯುತ್ತಿರುವ ಮೌಢ್ಯ, ಕಂದಾಚಾರಕ್ಕೆ ಮಹಿಳೆಯರು ಬಲಿಯಾಗುತ್ತಿರುವುದನ್ನು ನಾವು ಕಾಣುತ್ತೇವೆ. ಈ ಮೇಲಿನ ಘಟನೆಯನ್ನು ದಲಿತ ಸಂಘರ್ಷ ಸಮಿತಿ ಮತ್ತು ಮಹಿಳಾ ಸಂಘಟನೆಗಳು ವಿರೋಧಿಸಿದರೂ ಕೂಡ ಕಿಂಚಿತ್ತು ಬದಲಾವಣೆ ಆಗದ್ದನ್ನು ಇಲ್ಲಿ ಹೇಳುತ್ತಾರೆ. ಹಾಗೆ ಸಮಾಜದಲ್ಲಿ ಕ್ರೂರವ್ಯವಸ್ಥೆ ಜಡ್ಡುಗಟ್ಟಿ ಹೋಗಿದೆ ಎಂಬುದಕ್ಕೆ ಮಹಿಳಾ ಸಂಘಟಕರನ್ನೇ ಬಲವಂತವಾಗಿ ಬೆತ್ತಲೆಗೊಳಿಸಿರುವುದನ್ನು ನೋಡಿದರೆ ಈ ವ್ಯವಸ್ಥೆಯಲ್ಲಿನ ಅಸ್ವಸ್ಥತೆಯು ತಿಳಿಯುತ್ತದೆ. ಇದರ ವಿರುದ್ಧ ಧ್ವನಿ ಎತ್ತಬೇಕಾಗಿದ್ದ ಪತ್ರಿಕೆಗಳೂ ಕೂಡ ಯಾವುದೊ ಒಂದೇ ಒಂದು ವಿಷಯವನ್ನು ಬೆತ್ತಲೆಯಾದ ಚಿತ್ರವನ್ನು ವರ್ಣಿಸಿದ್ದಾವೆ ಹೊರತು ಮೌಢ್ಯಾಚಾರಣೆಯ ಬಗೆಗೆ ಚಕಾರವೆತ್ತದಿರುವುದನ್ನು ಲೇಖಕಿಯು ಈ ಲೇಖನದಲ್ಲಿ ಖಂಡಿಸಿದ್ದಾರೆ.

ಹೆಣ್ಣು ಮಕ್ಕಳು ಮತ್ತು ದಲಿತರು ತಮ್ಮ ಕಾಲ ಮೇಲೆ ತಾವು ನಿಂತು ಘನತೆಯಿಂದ ತಮ್ಮ ಜೀವನವನ್ನು ನಡೆಸುವುದೇ ತಪ್ಪು ಎನ್ನುವಂತೆ ನೋಡುವ ಸವರ್ಣಿಯರ ಅಥವಾ ಉಳ್ಳವರ ನಡೆ ಅತ್ಯಂತ ಅಮಾನುಷವಾದುದು. ಭಾರತೀಯ ನೆಲದಲ್ಲಿ ಸಮಾನತೆಯ ಕನಸು ಕಾಣುತ್ತಿರುವಾಗಲೇ ಅಸಮಾನತೆಯ, ಜಾತಿಯತೆಯ ಕ್ರೌರ್ಯ ಕಾಡುತ್ತಿರುವುದು ವಿಪರ್ಯಾಸವೇ ಸರಿ. ಇಡೀ ದೇಶದ ಉದ್ದಗಲಕ್ಕೂ ಇಂತಹ ಪ್ರಕರಣಗಳು ಸಾಲು ಸಾಲು ನಡೆಯುತ್ತಿವೆ. ಸರ್ಕಾರಗಳು ಎಷ್ಟೇ ಕಾನೂನು ರೀತಿಯಾದ ಕ್ರಮ ತೆಗೆದುಕೊಂಡಾಗಲೂ ಇಂತಹ ಘಟನೆಗಳು ಮರುಕಳಿಸುತ್ತಿವೆ.

"ಒರಿಸ್ಸಾದ ಹಳ್ಳಿಯೊಂದರಲ್ಲಿ ದಲಿತ ಹೆಣ್ಣು ಮಗಳೊಬ್ಬಳು ಕಾಲೇಜಿಗೆ ಹೋಗಲಾರಂಭಿಸಿದಳು. ಸುಮಾರು ಮೂರು ಕಿಲೋಮೀಟರ್ ನಡೆದುಕೊಂಡೇ ಹೋಗಬೇಕಾಗಿದ್ದುದರಿಂದ ಆಕೆ ಸೈಕಲಿನಲ್ಲಿ ಹೋಗಲಾರಂಭಿಸಿದಳು ದಲಿತ ಹುಡುಗಿ ತಮ್ಮ ಮುಂದೆ ಸೈಕಲ್ ತುಳಿಯುತ್ತಾ ಹೋಗುವುದನ್ನು ಅಲ್ಲಿನ ಬ್ರಾಹ್ಮಣರು ಸಹಿಸದಾದರು. ಅವರು 'ಫತ್ವ' ಹೊರಡಿಸಿದರು. ಆಕೆ ರಸ್ತೆಯಲ್ಲಿ ಸೈಕಲ್ ತುಳಿಯುತ್ತಾ ಹೋಗಬಾರದು ಇವರ ಆಜ್ಞೆಗೆ ಭಯಪಟ್ಟ ಆಕೆ ಬಳಿಕ ನಿತ್ಯ ೬ ಕಿಲೀಮೀಟರ್ ನಡೆದುಕೊಂಡೇ ಕಾಲೇಜಿಗೆ ಹೋಗಿ ಬರಲಾರಂಬಿಸಿದಳು. ಆಕೆಯ ಜಾತಿಯವರಿಂದ ಈ ಬ್ರಾಹ್ಮಣರನ್ನು ವಿರೋಧಿಸುವುದು ಸಾಧ್ಯವಿರಲಿಲ್ಲ. ಈ ದೇಶದ ಸಂವಿಧಾನದ ಪ್ರಕಾರ ಸರ್ವರೂ ಸಮಾನರು ನಿಜ ಯಾರ ಮೇಲೂ ಇಂತಹ ನಿರ್ಬಂಧ ಹೇರಲು ಯಾರಿಗೂ ಅಧಿಕಾರವಿಲ್ಲ."[೨] ಸಂವಿಧಾನದಲ್ಲಿ ಸಮಾನತೆಯ ಆಶಯವಿದೆ. ಆದರೆ ಅದು ಕಾಗದದಲ್ಲಿದೆ. ಆಚರಣೆಯಲಿಲ್ಲ. ಓದುವುದೂ ಕೂಡ ಇನ್ನೊಬ್ಬರಿಗೆ ಇರಿಸುಮುರಿಸಾಗುತ್ತದೆ ಎಂದರೆ ಈ ಮನುಷ್ಯರ ಮನಸ್ಥಿತಿ ಯಾವ ಮಟ್ಟಕ್ಕೆ ಅದೋಗತಿಯನ್ನು ಹೊಂದಿದೆ ಎಂಬುದು ತಿಳಿಯುತ್ತದೆ. ಬ್ರಾಹ್ಮಣರ ಅಟ್ಟಹಾಸಕ್ಕೆ ಮುಗ್ಧ ಜೀವಗಳು ಬಲಿಯಾಗುತ್ತಿವೆ. ಜೊತೆಗೆ ಅವರ ಕನಸುಗಳು ಅರಳುತ್ತಿರುವಾಗಲೇ ಕಮರಿ ಹೋಗುತ್ತಿವೆ. ಸಂವಿಧಾನದ ಆಶಯಕ್ಕನುಗುಣವಾಗಿ ಮಹಿಳೆ ಮತ್ತು ದಲಿತರು ಬದುಕಲು ಸಾಧ್ಯವಾಗದೇ ಇರುವುದರ ಬಗೆಗೆ ಈ ಮೇಲಿನ ಘಟನೆಯನ್ನು ವಿವರಿಸುವುದರ ಮೂಲಕವಾಗಿ ಅಲ್ಲಿನ ಇತರೆ ಜನಾಂಗದ ಮೇಲೆ ಆಗುತ್ತಿರುವ ಪರಿಣಾಮದ ಕುರಿತು ಚರ್ಚಿಸಿದ್ದಾರೆ.

"ಇತ್ತೀಚೆಗೆ ಬಳ್ಳಾರಿ ಜಿಲ್ಲೆಯ ವಣೇನೂರು ಗ್ರಾಮದಲ್ಲಿ ನಡೆದ ದಲಿತ ಮಹಿಳೆ ಎರ್ರಮ್ಮನಿಗೆ ಆ ಊರಿನ ಗ್ರಾಮದ ಪ್ರತಿಷ್ಠಿತರು ವಿಧಿಸಿದ ಬೆತ್ತಲೆ ಮೆರವಣಿಗೆಯ ಶಿಕ್ಷೆ ಇಡೀ ಭಾರತೀಯ ಸಮಾಜ ತಲೆ ತಗ್ಗಿಸುವಂತಹ ಘಟನೆ. ಈ ಘಟನೆಗೆ ಕಾರಣರಾದವನ್ನು ದುಷ್ಟರು, ನೀಚರು, ಬರ್ಬರರು ಎಂದೆಲ್ಲ ದೂಷಿಸಬಹುದಾದರೂ ದುಷ್ಕೃತ್ಯವನ್ನು ನಿಷ್ಕ್ರಿಯವಾಗಿ ನೋಡುತ್ತಾ ನಿಂತ ಆ ಗ್ರಾಮದ ಜನತೆಯೂ ಅಷ್ಟೇ ಅಪರಾಧಿಗಳು. ಮೇಲ್ನೋಟಕ್ಕೆ ಈ ಘಟನೆ ತುಂಬ ಸರಳವಾಗಿ ಕಂಡರೂ ಅದು ನಮ್ಮ ಸಮಾಜದ ಎಲ್ಲ ಕೊಳಕುಗಳನ್ನು ಪ್ರತಿಬಿಂಬಿಸುತ್ತದೆ.

ಯರ್ರಮ್ಮ ಬಡ ದಲಿತ ಹೆಣ್ಣುಮಗಳು ತನ್ನ ಮಗಳ ಬಾಣಂತನವನ್ನು ಮಾಡಲೆಂದು ಮಗಳ ಮನೆಗೆ ಬಂದವಳು ಅಲ್ಲಿ ಮನೆಯೊಳಗಿರುವಾಗ ಪಾನಮತ್ತರಾದ ಐವರು ಪುರುಷರು ಮತ್ತು ಮೂವರು ಮಹಿಳೆಯರು ಮನೆಯೊಳಗೆ ಬಂದು ಈಕೆಯನ್ನು ಚೆನ್ನಾಗಿ ಥಳಿಸಿ ನಗ್ನಗೊಳಿಸಿ ಊರಲ್ಲಿ ಮೆರವಣಿಗೆ ಮಾಡಿದ್ದಾರೆ. ಅದಕ್ಕೆ ಅವಳ ಮೇಲಿರುವ ಆರೋಪ ಆ ಊರಿನ ಪ್ರೇಮಿಗಳಿಬ್ಬರು ಮನೆ ಬಿಟ್ಟು ಓಡಿಹೋಗಿ ಮಧುವೆಯಾಗಲು ನೆರವಾದದ್ದು ಈ ಆರೋಪದ ಸತ್ಯಾಸತ್ಯತೆಯೇನೇ ಇರಲಿ. ಇಲ್ಲಿ ದಲಿತ ಹೆಣ್ಣು ಮಗಳನ್ನು ಥಳಿಸಿದವರು ದಲಿತರೇ ಆಗಿದ್ದಾರೆ. ಮತ್ತು ಹಾಗೆ ಥಳಿಸಿ ಬೆತ್ತಲೆಗೊಳಿಸುವ ಕಾರ್ಯದಲ್ಲಿ ಮಹಿಳೆಯರೂ ಸೇರಿದ್ದಾರೆ. ಎನ್ನುವುದು ಸಮಸ್ಯೆಯ ಗಂಭೀರತೆಯನ್ನು ಸೂಚಿಸುತ್ತದೆ.

ವಣೆನೂರಿನಲ್ಲಿ ತುಂಗಭದ್ರ ನದಿಯ ಕಾಲುವೆಯ ಬದಿಯಲ್ಲಿ ಸಮೃದ್ಧವಾದ ನೀರಾವರಿ ಜಮೀನಿದೆ. ಈ ಜಮೀನುಗಳ ಒಡೆತನ ಬಹುಸಂಖ್ಯಾತರಾದ ವಾಲ್ಮೀಕಿ ಜನಾಂಗದವರದು. ಈ ಭೂಮಿಯ ಒಡೆತನದಿಂದ ಕೊಬ್ಬಿದ ಶ್ರೀಮಂತರ ಮನೆಯ ಮಗಳು ಹೊನ್ನವ್ವ ಅವಳು ಅವರ ಜಮೀನಿನ ಟ್ರಾಕ್ಟರ್ ಚಾಲಕ ಕೇಶವಪ್ಪನನ್ನು ಪ್ರೀತಿಸಿ ಅವನೊಡನೆ ಊರು ಬಿಟ್ಟು ಓಡಿಹೋಗಿ ಮಧುವೆಯಾದದ್ದು ಹೆತ್ತವರಿಗೆ ಘೋರ ಅಪರಾಧವಾಗಿ ಕಂಡಿದೆ. ಓಡಿಹೋದ ಮಗಳನ್ನು ಹಿಂದಕ್ಕೆ ಕರೆದು ತಂದ ಹೆತ್ತವರು ಯುವಕ ಕೇಶವಪ್ಪನನ್ನು ನಾಪತ್ತೆಯಾಗುವಂತೆ ಮಾಡಿದ್ದಾರೆ. ಆದರೆ ಇಂತಹ ದುಷ್ಕೃತ್ಯವೊಂದು ನಡೆಯುತ್ತಿರುವಾಗ ಅದನ್ನು ತಡೆಗಟ್ಟದೆ ಸುತ್ತಮುತ್ತಲಿನವರೆಲ್ಲಾ ಮೂಕ ಸಾಕ್ಷಿಯಾಗಿ ನಿಂತದ್ದು ಆಶ್ಚರ್ಯಕರ ಮತ್ತು ಅವಮಾನಕರ"[3] ಜಾತಿ ಎಂಬ ವಿಷ ಮನುಷ್ಯತ್ವವನ್ನೇ ಕಸಿದುಕೊಂಡಿದೆ. ಮನುಷ್ಯ ಮನುಷ್ಯರ ನಡುವೆ ಇರಬೇಕಾದ ಭ್ರಾತೃತ್ವವನ್ನೇ ಇಲ್ಲವಾಗಿಸಿದೆ. ಈ ಘಟನೆಯಲ್ಲಿ ಪ್ರೇಮಿಗಳಿಬ್ಬರಿಗೆ ಸಹಾಯ ಮಾಡಿರಬಹುದು ಎಂಬ ಕಾರಣಕ್ಕೆ ಆ ಮಹಿಳೆಯನ್ನು ವಿವಸ್ತ್ರಗೊಳಿಸಿ ಊರಿನಲ್ಲಿ ಬೆತ್ತಲೆ ಮೆರವಣಿಗೆ ಮಾಡಿರುವುದು ಇಡಿ ಮಾನವ ಸಮಾಜ ತಲೆ ತಗ್ಗಿಸುವಂತಹದ್ದು.

ಆ ಮಹಿಳೆ ದಲಿತಳಾಗಿದ್ದಕ್ಕಾಗಿ ಆಕೆಯನ್ನು ಥಳಿಸಿ ಬೆತ್ತಲೆಯಾಗಿ ಮೆರವಣಿಗೆ ಮಾಡಿದ್ದಾರೆ ಮತ್ತು ಅವಳನ್ನು ಥಳಿಸಲು ದಲಿತರನ್ನೇ ಬಳಸಿಕೊಂಡಿದ್ದಾರೆ. ದುರಂತವೆಂದರೆ ಇವರುಗಳಲ್ಲಿ ಮಹಿಳೆಯರೂ ಇರುವುದು. ಮಹಿಳೆಯನ್ನು ರಕ್ಷಿಸಬೇಕಾದ ಮಹಿಳೆಯರೇ ಈ ಹೇಯ ಕೃತ್ಯಕ್ಕೆ ಮುಂದಾಗಿರುವುದು. ಅಲ್ಲದೆಯೇ ಅಲ್ಲಿನ ಸ್ಥಳೀಯರು ಎಲ್ಲವನ್ನೂ ನೋಡುತ್ತಾ ಮೂಕ ಪ್ರೇಕ್ಷಕರಂತೆ

ನಿಂತದ್ದು ಮೇಲು ನೋಟಕ್ಕೆ ಆಶ್ಚರ್ಯವೆನಿಸಿದರೂ ಅವರ ಮೇಲಿನ ಮೇಲ್ಜಾತಿಯವರ ಹಿಡಿತ ಎಂಥದ್ದು ಎಂಬುದು ತಿಳಿಯುತ್ತದೆ. ಕರುಳ ಸಂಬಂಧಕ್ಕಿಂತ ಜಾತಿ ಮೇಲಿನ ಕುರುಡು ನಂಬಿಕೆ ಮತ್ತು ಮರ್ಯಾದೆಯೆ ಹೆಚ್ಚು. ಮೇಲ್ಜಾತಿಯವರ ಈ ಅಂಧ ಜಾತಿ ಪ್ರೇಮಕ್ಕೆ ಮುಗ್ಧ ಎಳೆ ಜೀವಗಳು ಬಲಿಯಾಗುತ್ತಿವೆ.

ಈ ಘಟನೆಯನ್ನು ಅವಲೋಕಿಸಿದಾಗ ಒಂದು ಪ್ರಶ್ನೆ ಕಾಡುತ್ತದೆ. ಅದೇನೆಂದರೆ ಯರ್ರಮ್ಮ ಪ್ರೇಮಿಗಳಿಗೆ ಸಹಾಯ ಮಾಡಿದ್ದಾಳೆ ಎಂಬುದಾಗಿ ಆಕೆಯನ್ನು ಬೆತ್ತಲುಗೊಳಿಸಿದ್ದಾರೆ. ಕೇವಲ ಇದೊಂದೇ ಕಾರಣಕ್ಕಲ್ಲದೆ ಆಕೆ ದಲಿತವರ್ಗಕ್ಕೆ ಸೇರಿದವಳು ಎಂಬುದು ಬಹು ಮುಖ್ಯವಾದ ಸಂಗತಿ. ಒಂದು ವೇಳೆ ಯರ್ರಮ್ಮನ ಜಾಗದಲ್ಲಿ ಮೇಲ್ಜಾತಿಯ ಯಾರಾದರು ಅಥವಾ ಯಾವೊಬ್ಬ ಮಹಿಳೆ ಇದ್ದಿದ್ದರೆ ಇಂತಹ ಹೇಯ ಕೃತ್ಯಕ್ಕೆ ಈ ಮೇಲ್ಜಾತಿಯವರು ಮುಂದಾಗುತ್ತಿದ್ದರೆ ಅದು ಅವರಿಂದ ಸಾಧ್ಯವಾಗುತ್ತಿತ್ತಾ? ಮಹಿಳೆಯ ಅತ್ಯಂತ ಖಾಸಗಿ ವಿಷಯವಾದ ಪ್ರೇಮವನ್ನೂ ಕೂಡ ಪುರುಷ ಪ್ರಧಾನ ವ್ಯವಸ್ಥೆಯು ತನ್ನ ಹಿಡಿತವನ್ನು ಸಾಧಿಸುವಲ್ಲಿ ಯಶಸ್ವಿಯನ್ನು ಕಂಡಿದೆ. ಮಹಿಳೆ ಅವಳ ಹಕ್ಕನ್ನು ಅವಳು ಪಡೆದುಕೊಳ್ಳಲಾರದಂತೆ ಎಚ್ಚರವಹಿಸುತ್ತಿರುವುದನ್ನು ಇಲ್ಲಿ ಲೇಖಕಿಯು ಅಭಿವ್ಯಕ್ತಿಸಿದ್ದಾರೆ.

"ಹಿಂದೂ ಧರ್ಮದಲ್ಲಿಯೂ ಬೇರೆ ಬೇರೆ ರೀತಿಯಲ್ಲಿ ಮಹಿಳೆಯನ್ನು ಹಿಡಿತದಲ್ಲಿಡುವ ಪ್ರಯತ್ನ ನಡೆದಿದೆ. ಈಚೆಗೆ ೩೦–೦೭–೧೯೯೭ ರ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಡೆಹ್ರಾಡೂನಿನಿಂದ ಒಂದು ವರದಿ ಸುದ್ಧಿಯಾಗಿದೆ. ಅತುಲದೇವಿ ಎಂಬ ದಲಿತ ಮಹಿಳೆಯ ತಲೆ ಬೋಳಿಸಿ ಹೊಡೆದು ನಗ್ನವಾಗಿಸಿ ಉತ್ತರ ಕಾಶಿಯ ಸಮೀಪದ ಕಂಬಾನಿಯ ಗ್ರಾಮಸ್ಥರು ಮೆರವಣಿಗೆ ಮಾಡಿದರಂತೆ ಮಹಿಳೆಯರು 'ಪ್ರವೇಶಿಸ ಬಾರದ' ದೇವಾಲಯವನ್ನು ಅವಳು ಪ್ರವೇಶಿಸಿದ್ದೇ ಅವಳ ತಪ್ಪಾಗಿದೆ. ಇದಕ್ಕಿಂತಲೂ ಅಕ್ಷಮ್ಯ ಅಪರಾಧವೆಂದರೆ ಈ ಮಹಿಳೆಯನ್ನು ಹಾಗೆ ಹಿಂಸಿಸಿದವರ ವಿರುದ್ಧ ಕ್ರಮ ತೆಗೆದುಕೊಳ್ಳುವ ಬದಲಿಗೆ ಸ್ಥಳೀಯ ಆಡಳಿತ ಅವಳ ಬಂಧನಕ್ಕೆ ಆಜ್ಞೆ ನೀಡಿತು. ಮತ್ತು ಎರಡು ದಿನ ಆಕೆಯನ್ನು ಜೈಲಿನಲ್ಲಿ ಇರಿಸಲಾಯಿತು. ಆಕೆ ದೇವಾಲಯವನ್ನು ಅಪವಿತ್ರಗೊಳಿಸಿದಳಂತೆ, ತನ್ನ ಗಂಡನಿಗೆ ಬರಬೇಕಾಗಿದ್ದ ಕೂಲಿಯನ್ನು ಕೇಳಿ ಕೇಳೀ ಸೋತು ಆಕೆ ಆ ನಾಗದೇವಾಲಯದ ನಾಗದೇವನನ್ನು ಪ್ರಾರ್ಥಿಸಲು ದೇವಾಲಯದೊಳಗೆ ಹೋದಳಂತೆ ಹಳ್ಳಿಯವರು ಅತುಲದೇವಿಯ ವಿರುದ್ಧ ದೂರು ಕೊಡುವಂತೆ ಅವಕಾಶ ಕೊಟ್ಟು ಆಕೆಯನ್ನು ಬಂಧಿಸಿದ್ದು ತಪ್ಪು ಎಂದು ಗಲಾಟೆಯೆದ್ದ ಮೇಲೆ ತಪ್ಪಿನ ಅರಿವಾಗಿ ಅವಳನ್ನು ಬಿಡುಗಡೆ ಮಾಡಿ ಪರಿಶಿಷ್ಟ ಜಾತಿ ಕಾಯ್ದೆಯ ಅಡಿ ದೂರನ್ನು ದಾಖಲಿಸಿಕೊಳ್ಳಲಾಗಿದೆ. ಸಾಮಾಜಿಕ, ರಾಜಕೀಯ, ಸಂಘಟನೆಗಳು ಗಲಾಟೆ ಮಾಡಿದರೂ ಇಂಥ ಎಷ್ಟೋ ಪ್ರಕರಣಗಳಲ್ಲಾದಂತೆ ಈ ಪ್ರಕರಣವೂ ಹೂತು ಹೋಗಬಹುದು"[೪] ತನ್ನ ಸಂಕಷ್ಟವನ್ನು ಮನುಷ್ಯ ಕೇಳಿಸಿಕೊಳ್ಳದೆ ಇದ್ದಾಗ ದೇವರ ಮೊರೆ ಹೋಗುತ್ತಾರೆ. ಹಾಗೆಯೇ ಅತುಲದೇವಿಯೂ ಕೂಡ ತನ್ನ ಗಂಡನಿಗೆ ಬರಬೇಕಾಗಿದ್ದ ಕೂಲಿ ಹಣಕ್ಕಾಗಿ ನಾಗದೇವರನ್ನು ಪ್ರಾರ್ಥಿಸುವ ಮೂಲಕವಾದ್ರು ಹಣ ಸಿಗಬಹುದೇನೋ

ಎಂಬ ಯಾವುದೋ ಒಂದು ನಂಬಿಕೆಯನ್ನಿಟ್ಟು ದೇವಾಲಯ ಪ್ರವೇಶಿಸಿದ್ದಾಳೆ. ಆದರೆ ಅಲ್ಲಿನ ಜನರು ಅವಳು ಪ್ರವೇಶಿಸಿದ್ದೇ ದೊಡ್ಡ ಅಪರಾಧವೆಂದು ಭಾವಿಸಿ ಆಕೆಗೆ ಕೊಟ್ಟ ಶಿಕ್ಷೆ ನಗ್ನವಾಗಿಸಿ ಮೆರವಣಿಗೆ ಮಾಡಿದ್ದು.

ಯಾಕೆ ಈ ರೀತಿಯಾದ ಘಟನೆಗಳು ಮರುಕಳುಹಿಸುತ್ತಲೇ ಹೋಗುತ್ತವೆ? ಹೆಣ್ಣಿನ ಮೂಲದಿಂದಲೇ ಹುಟ್ಟಿದ ಈ ಪುರುಷ ಹೆಣ್ಣನ್ನೇ ಅತ್ಯಂತ ಕೀಳಾಗಿ, ಹೇಯವಾಗಿ ನಡೆಸಿಕೊಳ್ಳುತ್ತಾನೆ. ಹೆಣ್ಣು ಗಂಡು ಎಲ್ಲರೂ ಸಮಾನರು ಎಂಬುದನ್ನೇ ಮರೆತು ಕ್ರೌರ್ಯ ಮೆರೆಯುತ್ತಿರುವ ಪುರುಷ ಪ್ರಧಾನ ಸಮಾಜವು ಅಳಿಯುವವರೆಗೂ ಇಂತಹ ದುರ್ಘಟನೆಗಳು ನಡೆಯುತ್ತಲೇ ಸಾಗುತ್ತವೆ. ಕಾನೂನಾತ್ಮಕವಾಗಿ ಸಿಗಬೇಕಾದ ನ್ಯಾಯ ಕೂಡ ಸಿಗದೆ ತಾವು ಮಾಡದೇ ಇರುವ ತಪ್ಪಿಗೆ ಶಿಕ್ಷೆ ಅನುಭವಿಸಿದವರು ಲೆಕ್ಕವಿಲ್ಲದಷ್ಟು. ಭಾರತದಲ್ಲಿ ಮಹಿಳೆಯನ್ನು ಪ್ರಕೃತಿಗೆ ಹೋಲಿಸಲಾಗುತ್ತದೆ. ಅದೇ ಪ್ರಕೃತಿ ಮಾತೆಯನ್ನು ನಗ್ನಗೊಳಿಸಿ ಹಿಂಸಿಸುತ್ತಿರುವುದರ ಬಗ್ಗೆ ಇಲ್ಲಿ ವಿಶಾಧಿಸುತ್ತಾರೆ. ಅಲ್ಲದೆಯೇ ಮಹಿಳೆಯು ಗತ ಕಾಲದಿಂದಲೂ ಅನುಭವಿಸಿದಂತಹ ನೋವು, ಸಂಕಟಗಳು ಹೊಸ ರೂಪ ಪಡೆದುಕೊಂಡಿರುವುದನ್ನು ಇಲ್ಲಿ ಚರ್ಚಿಸಲಾಗಿದೆ.

"ಆಂದ್ರದ ನಾಗಾರ್ಜುನ ಸಾಗರದಿಂದ ೧೫ ಕಿ.ಮೀಟರ್ ದೂರದಲ್ಲಿರುವ ಚಿಲಕುರ್ತಿ ಗ್ರಾಮದಲ್ಲಿ ಕಳೆದ ತಿಂಗಳು ಮಹಾಭಾರತದ ಪುನಾರಾವರ್ತನೆಯಾಯಿತು. ಈ ಊರಿನ ಒಬ್ಬ ಜಮೀನ್ದಾರ ರೆಡ್ಡಿ ಇವನ ಸೋದರಿಯ ಹೆಸರು ಜಯಮ್ಮ ವಿವಾಹಿತೆ. ಅವಳು ಗೊಲ್ಲರ ಕೋಮಿಗೆ ಸೇರಿದ ಯುವಕನೊಂದಿಗೆ ಓಡಿ ಹೋದಳು ಇದಕ್ಕೆ ಇವಳಿಗೆ ಸಹಾಯ ಮಾಡಿರಬಹುದೆಂದು ಗೊಲ್ಲರ ಕೋಮಿಗೆ ಸೇರಿದ ಅವಳ ಸೇವಕಿ ಮುತ್ತಮ್ಮಳ ಮೇಲೆ ಸಂಶಯ ಬಂತು. ಸಂಶಯ ಆಪಾದನೆಯಾಗಿ ಅಸಹಾಯಕ ಮುತ್ತಮ್ಮಳನ್ನು ಬೆತ್ತಲೆಗೊಳಿಸಲು ಜಮೀನ್ದಾರ ತನ್ನ ಸೇವಕರಿಗೆ ತಿಳಿಸಿದ ಅವಳನ್ನು ಬೆತ್ತಲೆಗೊಳಿಸಿದ್ದೇ ಅಲ್ಲದೆ ಅವಳದೇ ಕುಪ್ಪಸದಿಂದ ಅವಳ ಕೈಕಟ್ಟಿ ಅವಳ ಮೆರವಣಿಗೆಯನ್ನು ಮಾಡಿದರು. ಮೆರವಣಿಗೆಯ ಸಂದರ್ಭದಲ್ಲಿ ಉದ್ದಕ್ಕೂ ಅವಳನ್ನು ದೊಣ್ಣೆಯಿಂದ ಹೊಡೆಯುತ್ತಾ ಅವಳಿಗೆ ಯಾರೂ ರಕ್ಷಣೆ ಕೊಡದಂತೆ ಕಾವಲು ಕಾದರು. ಆಗ ಇವಳ ಪತಿ ಊರಿನಲ್ಲಿರಲಿಲ್ಲ ಪಕ್ಕದೂರಲ್ಲಿ ಕೂಲಿಗೆಂದು ಹೋಗಿದ್ದು ಅಲ್ಲಿಯೇ ಇದ್ದ ಇವಳ ಹದಿನೈದು ವರ್ಷದ ವಯಸ್ಸಿನ ಮಗ ಅಸಹಾಯಕನಾಗಿ ತಾಯಿಯ ದುರವಸ್ಥೆಯನ್ನು ಕಂಡು ಸುಮ್ಮನೇ ಇರಬೇಕಾಯಿತು. ತನಗಾದ ಅಪಮಾನಕ್ಕೆ ಮುತ್ತಮ್ಮ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದಳು ಅವಳ ಜನ ಇದನ್ನು ತಪ್ಪಿಸಿದರು. ಈ ಘಟನೆಗೆ ಕಾರಣರಾದ ರೆಡ್ಡಿಗಳು ತಮ್ಮ ಕುಟುಂಬಗಳೊಡನೆ ಆ ಊರಿನಿಂದಲೇ ಪರಾರಿಯಾದರು.

ಈ ಘಟನೆಗೆ ಕೆಲವು ಜನಗಳು ಮುಂಚೆಯಷ್ಟೇ ಆಂದ್ರದ ಗುಂಟೂರು ಬಳಿ ಸುಂದೂರು ಗ್ರಾಮದಲ್ಲಿ ಹರಿಜನರ ಮಾರಣ ಹೋಮವೇ ನಡೆದಿತ್ತು. ಹರಿಜನ ಬಾಲಕನೊಬ್ಬ ಜಮೀನ್ದಾರನಿಗೆ ಕೆಟ್ಟ ಮಾತುಗಳನ್ನು ಆಡಿದನೆಂಬ ಚಿಕ್ಕ ಕಾರಣಕ್ಕಾಗಿ ಜಮೀನ್ದಾರರಾಗಿದ್ದ ಪ್ರಬಲ ಕೋಮಿನವರು ಒಂದಾದರು ಹರಿಜನರನ್ನು ಹಿಡಿದು ಎಳೆದು ಕೈಕಾಲು ಕತ್ತರಿಸಿದರು. ಕಣ್ಣು ಗುಡ್ಡೆ ಕಿತ್ತರು, ಸತ್ತ

ಇಪ್ಪತ್ತಕ್ಕಿಂತಲೂ ಹೆಚ್ಚು ಜನರನ್ನು ಗೋಣಿ ಚೀಲಗಳಲ್ಲಿ ಹಾಕಿ ಕಾಲುವೆಗೆ ಎಸೆದರು ಎಂದಿನಂತೆ ಪ್ರಕರಣ ಸಂಸತ್ತನ್ನು ಪ್ರವೇಶಿಸಿತು. ಪತ್ರಿಕೆಗಳು ಸುದ್ದಿಯನ್ನು ದೊಡ್ಡದಾಗಿ ಪ್ರಕಟಿಸಿದವು. ಸರ್ಕಾರ ಹರಿಜನರಿಗೆ ನೆರವು ನೀಡಲು ಮುಂದೆ ಬಂತು. ಆದರೆ ಅಲ್ಲಿನ ಹರಿಜನರು ಎಲ್ಲವನ್ನು ನಿರಾಕರಿಸಿದರು. ಆಪಾದಿತರಿಗೆ ಶಿಕ್ಷೆ ವಿಧಿಸಲೇಬೇಕು ಎನ್ನುವುದು ಎಲ್ಲರ ಒಕ್ಕೊರಲಿನ ಬೇಡಿಕೆಯಾಗಿತ್ತು.

ಈ ಘಟನೆಯಿಂದ ಇನ್ನೂ ಜನ ಚೇತರಿಸಿಕೊಳ್ಳದಿರುವಾಗಲೇ ಚಿಲಕುರ್ತಿಯ ಗೊಲ್ಲತಿಯ ಬೆತ್ತಲೆ ಮೆರವಣಿಗೆ ನಡೆದಿದ್ದು. ಸುಂದೂರು ಘಟನೆಯಿಂದ ಬೆಚ್ಚಿದ್ದ ಪೋಲೀಸ್ ಅಧಿಕಾರಿಗಳು ವಿಷಯ ತಿಳಿದ ತಕ್ಷಣ ಸ್ಥಳಕ್ಕೆ ಧಾವಿಸಿ ಅಪರಾಧಿಗಳ ಭೇಟಿಯಾದರು ನೊಂದ ಮುತ್ತಮ್ಮನಿಗೆ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು. ಆದರೆ ಈ ಸಂದರ್ಭದಲ್ಲಿ ರೆವಿನ್ಯು ಡಿವಿಜನಲ್ ಅಧಿಕಾರಿ ನುಡಿದ ಮಾತುಗಳು ಆಶ್ಚರ್ಯ ಹುಟ್ಟಿಸುತ್ತದೆ! 'ಬಲತ್ಕಾರದ ಲೈಂಗಿಕ ಕ್ರಿಯೆಗೆ ಇವಳು ಒಳಗಾಗಿಲ್ಲ ಆದ್ದರಿಂದ ಈ ಮಹಿಳೆ ಪರಿಹಾರ ಪಡೆಯಲು ಅರ್ಹತೆ ಪಡೆದಿಲ್ಲ' ಅಮಾನುಷ ಘಟನೆಯೊಂದು ನಡೆದಾಗ ಕಾನೂನಿನ ಇಂಚುಪಟ್ಟಿ ಹಿಡಿದು ಹೊರಟ ಅಧಿಕಾರಿಗಳ ಅಮಾನವೀಯತೆಗೆ ಎಲ್ಲೆಯೆಲ್ಲಿ? ಹಾಗೆಯೇ ದುರ್ಬಲರನ್ನು ಹಿಡಿದು ತಮ್ಮ ಮನಸೋ ಇಚ್ಛೆ ಶಿಕ್ಷಿಸುವ ಅಧಿಕಾರ ಇವರಿಗೆ ಕೊಟ್ಟವರಾರು?"[೫]

ಸಂವಿಧಾನ ಬದ್ಧವಾದ ಕಾಯ್ದೆ ಕಾನೂನುಗಳು ಇದ್ದರೂ ಸಹ ಮೇಲ್ಜಾತಿ ಮೇಲ್ವರ್ಗದವರ ದೌರ್ಜನ್ಯಗಳು ಹೆಚ್ಚುತ್ತಲೆ ಇವೆ. ಯಾವುದರ ಪರಿವೆಯೂ ಇರದೇ ತಮ್ಮ ದಬ್ಬಾಳಿಕೆಯನ್ನು ಮುಂದುವರೆಸಿಕೊಂಡೆ ಬರುತ್ತಿರುವುದು ಕಾಣಬಹುದು. ಮಹಿಳೆ ಮತ್ತು ದಲಿತರ ಮೇಲೆ ಕ್ಷುಲ್ಲಕ ಕಾರಣಗಳಿಗಾಗಿ ಹಲ್ಲೆ ದೌರ್ಜನ್ಯಗಳು ಮುಂದುವರೆಯುತ್ತಲೇ ಇವೆ. ಮನುಷ್ಯರ ನಡುವೆ ಜಾತಿಯ ಗೋಡೆಗಳು ಪ್ರಬಲವಾಗುತ್ತಲೇ ಸಾಗುತ್ತಿದೆ. ಯಾವುದೋ ಸಣ್ಣ ಮಾತಿಗಾಗಿ ಇಡೀ ಹರಿಜನರ ಕುಟುಂಬಗಳ ಜೊತೆಗೆ ಮತ್ತವರ ಸಮುದಾಯದವರನ್ನೆಲ್ಲ ಹಿಂಸಿಸುವುದು ಅಲ್ಲದೆಯೇ ಅವರುಗಳ ಜೀವವನ್ನೇ ಬಲಿತೆಗೆದು ಕೊಂಡಿರುವ ಇಂತಹ ಅಮಾನವೀಯ ಕೃತ್ಯಗಳು ಇಡೀ ಮನುಕುಲವೇ ಬೆಚ್ಚಿ ಬೀಳುವಂತೆ ಮಾಡುತ್ತಿವೆ.

ಕೆಲವೊಮ್ಮೆ ಇಂತಹ ಘಟನೆಗಳು ನಡೆದಾಗ ಅಲ್ಲಿನ ಆಳುವ ಸರ್ಕಾರಗಳು ನಿರ್ಲಕ್ಷ್ಯ ವಹಿಸಿವೆ. ಸರಿಯಾದ ಕ್ರಮ ಕೈಗೊಳ್ಳದೆ ಅಪರಾಧಿಗಳನ್ನು ಬಚಾವ್ ಮಾಡಿದ್ದೂ ಇದೆ. ಮುತ್ತಮ್ಮನ ಪ್ರಕರಣದಲ್ಲಿಯೂ ಇದೇ ರೀತಿಯಾದ ನಿರ್ಲಕ್ಷ್ಯವನ್ನು ಹೊಂದಲಾಗಿದೆ. ದೌರ್ಜನ್ಯಕ್ಕೆ ಒಳಗಾದ ಮುತ್ತಮ್ಮನಿಗೆ ಸೂಕ್ತ ಪರಿಹಾರವನ್ನು ನೀಡದೆ ಬೀಸು ಹೇಳಿಕೆ ನೀಡಿರುವುದರಲ್ಲೇ ತಿಳಿಯುತ್ತದೆ. ಅಧಿಕಾರಿಯ ಪ್ರಕಾರ ಮಹಿಳೆಯು ಅತ್ಯಾಚಾರಕ್ಕೆ ಒಳಗಾಗ ಬೇಕಾಗಿತ್ತು. ಇಲ್ಲಿ ದೌರ್ಜನ್ಯಕ್ಕಷ್ಟೇ ಒಳಗಾಗಿದ್ದಾಳೆ ಎನ್ನುವಂತಿದೆ. ಆ ಮಹಿಳೆಯು ಅನುಭವಿಸಿದ ದೌರ್ಜನ್ಯ ಮಾನಸಿಕ, ದೈಹಿಕ ಕಿರುಕುಳವೇ ಅಲ್ಲವೇ? ಇಂತಹ ಅಮಾನವೀಯತೆಗೆ ಎಲ್ಲೆಯೆಲ್ಲಿದೆ.? ಇವರಿಗೆಲ್ಲ ದುರ್ಬಲರಿಗೆ ಶಿಕ್ಷಿಸುವ ಹಕ್ಕನ್ನು ಕೊಟ್ಟವರಾರು? ಕಾನೂನಿನಲ್ಲಿ ಎಲ್ಲರಿಗೂ ಸಮಾನವಾದ ನ್ಯಾಯ ದೊರಕಬೇಕು.

ಆದರೆ ಅಧಿಕಾರದ ಹೆಸರಿನಲ್ಲಿ ಮಹಿಳೆಯನ್ನು ಮತ್ತಷ್ಟು ತುಳಿಯುವಂತಹ ಕೆಲಸವನ್ನು ಮಾಡಲಾಗುತ್ತಿದೆ ಎಂಬುದನ್ನು ಲೇಖಕಿಯು ಈ ಲೇಖನದಲ್ಲಿ ಚರ್ಚಿಸಿದ್ದಾರೆ.

"೨೦೦೫ ರ ಮಾರ್ಚ್ ೮ ರಂದು ಬಳ್ಳಾರಿ ಜಿಲ್ಲೆಯ ಬೈರಗಾ ಮನದಿನ್ನಿ ಗ್ರಾಮದಲ್ಲಿ ದಲಿತ ಮಹಿಳೆ ಗಂಗಮ್ಮಳನ್ನು ವಿವಸ್ತ್ರಗೊಳಿಸಿ ಸವರ್ಣಿಯರು ದೌರ್ಜನ್ಯವೆಸಗಿದರು ಅವಳು ನಾಲ್ಕು ರೂಪಾಯಿಗಳ ಸಾಲ ತೀರಿಸಿಲ್ಲ ಎಂಬ ಕ್ಷುಲ್ಲಕ ಕಾರಣವನ್ನು ಮುಂದೆ ಮಾಡಿ ಬಿಂಬಿಸಲಾಗಿತ್ತಾದರೂ ನಿಜವಾದ ಕಾರಣ ಅವಳು ಪಂಚಾಯಿತಿ ಚುನಾವಣೆಯಲ್ಲಿ ಮೇಲ್ಜಾತಿಯವರ ವಿರುದ್ಧ ಸ್ಪರ್ಧಿಸಿದ್ದೇ ಆಗಿತ್ತು. ದಲಿತರು ಅದರಲ್ಲೂ ಮಹಿಳೆಯರು ಅಧಿಕಾರ ಹೊಂದುವುದನ್ನು ತಡೆಯಲು ಅವಳನ್ನು ಬೆತ್ತಲುಗೊಳಿಸಿ ಸಾರ್ವಜನಿಕವಾಗಿ ಅವಮಾನಗೊಳಿಸಲಾಗಿತ್ತು."[೬] ಮಹಿಳೆ ತನ್ನ ಹಕ್ಕನ್ನು ತಾನು ಪಡೆದುಕೊಂಡರೂ ಸಹಿಸಲಾರದ ಮನಸ್ಥಿತಿಗಳು ಇಂತಹ ಕ್ರೂರ ಕೃತ್ಯಕ್ಕೆ ಮುಂದಾಗುತ್ತಾರೆ. ಅದರಲ್ಲಿಯೂ ದಲಿತ ಮಹಿಳೆಯರ ಸ್ಥಿತಿ ಶೋಚನೀಯವಾದದ್ದು. ಕೇವಲ ನಾಲ್ಕು ರೂಪಾಯಿಗಳ ಸಾಲ ತೀರಿಸಿಲ್ಲವೆಂಬ ಕುಂಟು ನೆಪವೊಡ್ಡಿ ಅವಳನ್ನು ವಿವಸ್ತ್ರಗೊಳಿಸಿ ಅವಮಾನಿಸಿ ಖುಷಿಪಡುವುದು ಪುರುಷ ಪ್ರಧಾನ ಸಮಾಜ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ.

ಮಹಿಳೆಗೆ ೩೩% ಮೀಸಲಾತಿಯಿದ್ದು ಅವಳ ಹಕ್ಕನ್ನು ಪಡೆದು ಕೊಳ್ಳುವುದರಿಂದ ಸಬಲಳಾಗುತ್ತಿದ್ದಾಳೆ. ಎನ್ನುವ ಸಂದರ್ಭದಲ್ಲಿ ಅಂತಹ ಅನಾಗರೀಕ ಘಟನೆಗಳು ನಡೆಯುತ್ತಿವೆ. "ಇತ್ತೀಚೆಗೆ ಮಾಧ್ಯಮಗಳಲ್ಲಿ ಅತಿಪ್ರಚಾರ ಪಡೆದ ಗುಡಿಯಾಳ ಪ್ರಕರಣ. ಹೆಣ್ಣಿನ ವೈಯಕ್ತಿಕ ನಿರ್ಧಾರ ಸ್ವಾತಂತ್ರ್ಯದ ಬಗ್ಗೆ ಹೊಸ ಚರ್ಚೆಯನ್ನು ಹುಟ್ಟುಹಾಕಿದೆ. ಸೇನೆಯಲ್ಲಿದ್ದ ಅಳಿಯ ನಾಲ್ಕು ವರ್ಷಗಳಾದರೂ ಮರಳಿ ಬಾರದಿದ್ದಾಗ ಗುಡಿಯಾಳ ತಂದೆ ತಾಯಿ ಅವಳನ್ನು ಬೇರೊಬ್ಬನಿಗೆ ಮಧುವೆ ಮಾಡಿದರು. ಹೊಸ ಗಂಡನ ಮನೆಯಲ್ಲಿ ಗುಡಿಯಾ ಸಂಸಾರ ಮಾಡುತ್ತಿದ್ದಾಗ ಹಳೆಯ ಗಂಡ ಇದ್ದಕ್ಕಿದ್ದಂತೆ ವಾಪಸಾಗಿಬಿಟ್ಟ. ಎಂಟು ತಿಂಗಳ ಗರ್ಭಿಣಿಯ ವೈಯಕ್ತಿಕ ತೀರ್ಮಾನ ಏನು ಎಂದು ಯಾರೂ ಕೇಳಲಿಲ್ಲ. ಊರ ಪಂಚಾಯ್ತಿ ಸಭೆ ಸೇರಿ ಗುಡಿಯಾಳ ಮೊದಲ ಗಂಡ ಶೆರಿಯತ್ ಪ್ರಕಾರ ತಲಾಖ್ ನೀಡಿಲ್ಲವಾದ್ದರಿಂದ ಅವಳು ನ್ಯಾಯ ವ್ಯವಸ್ಥೆಯಲ್ಲಿ ಅವಳ ಇಷ್ಟಾನಿಷ್ಟಕ್ಕೆ ಬೆಲೆಯೇ ಇರಲಿಲ್ಲ. ಇಬ್ಬರು ಗಂಡರಲ್ಲಿ ಯಾರು ಪರ ಪುರುಷ? ಐದಾರು ಗಂಡಸರಿದ್ದ ಪಂಚಾಯ್ತಿ ಕೊಟ್ಟ ಈ ತೀರ್ಪಿನ ಬಗ್ಗೆ ದೇಶದ ಕಾನೂನು ಸಚಿವಾಲಯ ಸುಪ್ರಿಂ ಕೋರ್ಟ್ ಯಾವುದೂ ಬಾಯಿ ಬಿಚ್ಚಲಿಲ್ಲ."[೭] ಮಹಿಳೆ ತನ್ನ ಬಗೆಗೆ ಅವಳೇ ನಿರ್ಧಾರ ತೆಗೆದುಕೊಳ್ಳುವ ಸ್ವಾತಂತ್ರ್ಯವನ್ನು ಪುರುಷ ಪ್ರಧಾನ ಸಮಾಜ ವಿರೋಧಿಸುತ್ತಲೇ ಬಂದಿದೆ. ಅವಳ ಇಷ್ಟ. ಆಸೆ ಆಕಾಂಕ್ಷೆಗಳಿಗೆ ಕವಡೆ ಕಾಸಿನಷ್ಟು ಕಿಮ್ಮತ್ತಿಲ್ಲ. ಅವಳು ಯಾರ ಜೊತೆಗಿರಬೇಕು ಏನನ್ನು ಉಡಬೇಕು, ಅವಳ ಜೀವನ ಶೈಲಿ ಹೇಗಿರಬೇಕು ಇವೆಲ್ಲಾವನ್ನು ಪುರುಷನೇ ನಿರ್ಧಾರ ಮಾಡುತ್ತಾನೆ. ಅವಳು ಕೇವಲ ಹರಕೆಯ ಕುರಿಯಂತೆ ಶಿರಸಾವಹಿಸಿ ಒಪ್ಪಿಕೊಳ್ಳಬೇಕು. ಇಲ್ಲಿ ಗುಡಿಯಾಳ ಸ್ಥಿತಿ ಅತಂತ್ರವಾಗಿದೆ. ಗುಡಿಯಾ ಎಂಟು ತಿಂಗಳ ಗರ್ಭಿಣಿಯಾಗಿದ್ದಾಳೆ ಅಲ್ಲದೆ ಆಕೆಯನ್ನು ತನ್ನ ತಂದೆತಾಯಿಯರೇ ಸ್ವತಃ ನಿಂತು ಎರಡನೇ

ಮದುವೆ ಮಾಡಿದ್ದರೂ ಕೂಡ ಅವಳ ಮೊದಲನೇ ಗಂಡ ಧರ್ಮದ ನಿಯಮಾನುಸಾರ 'ತಲಾಖ್' ನೀಡಿಲ್ಲವೆಂಬ ಕ್ಷುಲ್ಲಕ ಕಾರಣಕ್ಕೆ ತೀರ್ಪು ನೀಡಿರುವುದು ಎಷ್ಟು ಸಮಂಜಸವಾದುದು. ಇದಕ್ಕೆ ಯಾರೂ ಸಹ ಚಕಾರವೆತ್ತದೆ ಇದ್ದದ್ದು ವಿಚಿತ್ರ. ಕಾನೂನು ಕೋರ್ಟುಗಳಿದ್ದರೂ ಪಂಚಾಯ್ತಿಯ ತೀರ್ಪಿನ ವಿರುದ್ಧ ಯಾಕೆ ಯಾವುದೇ ಕ್ರಮವನ್ನು ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ ಎನ್ನುವುದು ಇವರ ಆತಂಕವಾಗಿದೆ.

"೧೯೮೬ ರಲ್ಲಿ ಪಾಕಿಸ್ತಾನದಲ್ಲಿ ಒಂದು ಘಟನೆ ನಡೆಯಿತು. ಶಹೀದಾ ಪರ್ವೀನ್ ಎಂಬ ಮಹಿಳೆಯನ್ನು ಮಕ್ಕಳಾಗದ ಕಾರಣಕ್ಕಾಗಿ ಆಕೆಯ ಗಂಡನು ತಲಾಖ್ ನೀಡಿ ಬೇರೊಬ್ಬಳನ್ನು ವಿವಾಹವಾದನು. ಆಕೆ ಕೂಡ ಮೂರು ತಿಂಗಳ ಬಳಿಕ ಬೇರೊಬ್ಬನನ್ನು ಮಧುವೆಯಾದಳು. ೧೯೮೭ ರ ನವೆಂಬರ್‌ನಲ್ಲಿ ನ್ಯಾಯಾಧೀಶರು ಆಕೆಯ ತಲಾಖ್ ನಮ್ಮ ಕಾನೂನು ಬದ್ಧವಾಗಿಲ್ಲವೆಂಬ ತೀರ್ಪು ನೀಡಿ ಆಕೆಯ ದ್ವಿತೀಯ ವಿವಾಹ ಅಸಿಂಧು ಎಂದು ತೀರ್ಪು ನೀಡಿದರು. ವಿವಾಹ ಅಸಿಂಧುವಾದ ಕಾರಣ ಆಕೆ ಅನೈತಿಕವಾಗಿ ಪರಪುರುಷನೊಡನೆ ಬಾಳುತ್ತಿದ್ದಾಳೆಂಬ ಕಾರಣ ನೀಡಿ ಶೆರಿಯತ್ ನಿಮಯಮದಂತೆ ಆಕೆಯನ್ನು ಕಲ್ಲು ಹೊಡೆದು ಕೊಲ್ಲಬೇಕೆಂದು ನ್ಯಾಯಧೀಶರು ತೀರ್ಪು ನೀಡಿದರು! ಪುರುಷ ಪ್ರಧಾನ ಸಮಾಜದಲ್ಲಿ ಪುರುಷರು ಎಸಗುವ ಎಲ್ಲ ತಪ್ಪುಗಳಿಗೂ ಯಾವ ರೀತಿ ಮಹಿಳೆಗೆ ಶಿಕ್ಷೆ ನೀಡಲಾಗುತ್ತದೆ ಎಂಬುದಕ್ಕೆ ಇದೊಂದು ಉದಾಹರಣೆ"[೮] ಶಹೀದಾ ಪರ್ವೀನ್‌ಗೆ ಅವಳ ಗಂಡನೇ ತಲಾಖ್ ಕೊಟ್ಟ ನಂತರವೇ ಅವಳು ಮತ್ತೊಂದು ಮದುವೆ ಆಗಿದ್ದಾಳೆ. ಹಾಗೆ ಮೊದಲ ಗಂಡನೂ ಬೇರೆಯ ಮದುವೆಯಾಗಿದ್ದಾನೆ. ಆದರೆ ಪರ್ವೀನ್‌ಳಿಗೆ ಮಾತ್ರ ಶಿಕ್ಷೆ ಮೊದಲ ಗಂಡನಿಗೆ ಶಿಕ್ಷೆಯಿಲ್ಲ ಹಾಗಾದರೆ ಹೆಣ್ಣು ಮಾತ್ರ ಶಿಕ್ಷೆಗೆ ಹೇಗೆ ಅರ್ಹಳಾಗಲು ಸಾಧ್ಯ? ಒಂದು ವೇಳೆ ಆ ಮಹಿಳೆಯ ಎರಡನೇ ಮದುವೆ ತಪ್ಪು ಎಂದಾದರೆ? ಪುರುಷನೂ ಮತ್ತೊಂದು ಮದುವೆಯಾದದ್ದು ತಪ್ಪೇ ಅಲ್ಲವೇ? ಹಾಗಿದ್ದಲ್ಲಿ ಹೆಣ್ಣಿಗೆ ಮಾತ್ರ ಅಂತಹ ಘೋರ ಶಿಕ್ಷೆಯೇ, ಗಂಡಿಗೂ ಶಿಕ್ಷೆ ನೀಡಬೇಕಿತ್ತಲ್ಲವೇ? ನ್ಯಾಯ ಕಾನೂನು ಎಲ್ಲರಿಗೂ ಸಮಾನವಾಗಿರುವಾಗ ಹೀಗೇಕೆ ತಾರತಮ್ಯ ನೀತಿಯನ್ನು ಒಳಗೊಳ್ಳುತ್ತವೆ ಧರ್ಮದ ಹೆಸರಿನಲ್ಲಿ ಮಹಿಳೆಯನ್ನು ಇನ್ನಿಲ್ಲದಂತೆ ಬಂಧಿಸಿ ಹಿಂಸಿಸುವ ಮತ್ತು ಅವಳನ್ನು ಇನಷ್ಟು ಮೂಲೆ ಗುಂಪಾಗಿಸುವ ರೀತಿಯನ್ನು ಇಲ್ಲಿ ಚರ್ಚಿಸಿದ್ದಾರೆ.

"ಬಬ್ಲಿ ಮತ್ತು ಮನೋಜ್ ಮದುವೆ ಅವರಿಬ್ಬರು ಇಷ್ಟಪಟ್ಟು ಆದ ಮದುವೆಯನ್ನು ಖಾಪ್ ಪಂಚಾಯಿತಿ ವಿಧಿ ನಿಷೇಧದ ಮದುವೆಯೆಂದು ಘೋಷಿಸಿದ್ದೇ ಮುಂದಿನ ಅನಾಹುತಗಳಿಗೆ ಕಾರಣ. ಈ ಯುವ ಜೋಡಿಯ ಸಾವಿಗೆ ಕಾರಣವಾಗಿರುವ ಐವರಿಗೆ ಸೆಶನ್ಸ್ ಕೋರ್ಟ್ ಮರಣದಂಡನೆ ವಿಧಿಸಿತ್ತು. ಇದರಿಂದ ಕುಪಿತಗೊಂಡ ಖಾಪ್ ಪಂಚಾಯ್ತ್‌ಗಳು ಇದರ ವಿರುದ್ಧ ಹೋರಾಟಕ್ಕೆ ಇಳಿದಿವೆ. ಹರಿಯಾಣದಲ್ಲಿ ಕೆಲವು ಕಡೆ ಇಂಥ ಕೊಲೆಯನ್ನು ತಡೆಯಲು ಮುಂದಾಗಬೇಕಿರುವ ಅಧಿಕಾರಿಗಳೇ ಇದಕ್ಕೆ ಸಹಕಾರ ನೀಡುತ್ತಿರುವುದು ಆತಂಕಕಾರಿಯಾದ ಸಂಗತಿ. ನಿವೃತ್ತ ಡಿಜಿಪಿಯೊಬ್ಬರು ಖಾಪ್ ಪಂಚಾಯತ್‌ನ ಟೀಕಾಕಾರರನ್ನು ಹೆದರಿಸುತ್ತಾರೆನ್ನುವುದಾಗಿ

ತಿಳಿದು ಬರುತ್ತದೆ."" ಉತ್ತರ ಭಾರತದ ರಾಜ್ಯಗಳಲ್ಲಿ ಖಾಪ್ ಪಂಚಾಯತ್‌ಗಳು ಇನ್ನೂ ಜೀವಂತವಿದೆ. ಅದರಲ್ಲೂ ಹರಿಯಾಣ ರಾಜ್ಯದಲ್ಲಿ ಇದರ ಕಾರ್ಯ ಭಾರ ಹೆಚ್ಚಾಗಿದೆ. ಸ್ವಗೋತ್ರದಲ್ಲಿ ಮದುವೆಯಾಗುವುದು ನಿಷೇಧ ಆದರೆ ಆ ಜೋಡಿಯನ್ನು ಕೊಲೆ ಮಾಡಿ ಎಂದು ತೀರ್ಪು ನೀಡುವುದು ಮಾನವೀಯತೆಗೆ ವಿರುದ್ಧವಾದುದ್ದಾಗಿದೆ. ಇದು ಮರ್ಯಾದೆಹತ್ಯೆ ಎನ್ನುವ ಹೆಸರಿನಲ್ಲಿ ನಡೆಯುತ್ತಿದೆ. ಇದಕ್ಕೆ ದಲಿತರು, ಮಹಿಳೆಯರೇ ಹೆಚ್ಚು ಬಲಿಯಾಗುತ್ತಿದ್ದಾರೆ. ಹೀಗೆ ಮದುವೆಯಾದವರನ್ನು ಖಾಪ್‌ಪಂಚಾಯ್ತಿ ಇರುವಂತಹ ರಾಜ್ಯಗಳಲ್ಲಿ ಕೊಲ್ಲಲಾಗುತ್ತಿದೆ. ಈ ರೀತಿಯಾಗಿ ನಡೆಯುತ್ತಿರುವ ಮದುವೆಗಳಲ್ಲಿ ಎಲ್ಲವೂ ಸ್ವಗೋತ್ರದಲ್ಲಿಯೇ ಮದುವೆಯಾದ ಯುವ ಜೋಡಿಗಳಲ್ಲಿ ಬೇರೆ ಬೇರೆ ಜಾತಿ ಜನಾಂಗಗಳಲ್ಲಿ ಮದುವೆಯಾಗಿದ್ದರೂ ಅವರನ್ನು ಅತೀ ಕ್ರೂರವಾಗಿ ಕೊಲ್ಲಲಾಗುತ್ತಿದೆ. ಇಂತಹ ಹತ್ಯೆಗಳನ್ನು ತಪ್ಪಿಸುವ ಅಥವಾ ನಿರ್ಬಂಧಿಸುವ ಅಧಿಕಾರ ಇರುವ ಇಲ್ಲಿನ ಅಧಿಕಾರಿಗಳೇ ಇದಕ್ಕೆ ಮತ್ತಷ್ಟು ಕುಮ್ಮಕ್ಕು ನೀಡುತ್ತಿರುವುದು ದುರಂತವೇ ಸರಿ. ಕಾಪಾಡಬೇಕಾದ ಕೈಗಳೇ ಕೊಲ್ಲುವುದಕ್ಕೆ ಉತ್ತೇಜಿಸುತ್ತಿವೆ ಎಂದರೆ ಎಂತಹ ದುಃಸ್ಥಿತಿಗೆ ತಲುಪಿದೆ ಈ ಸಮಾಜ ಎಂಬುದನ್ನು ಇವರು ಮನವರಿಕೆ ಮಾಡಿದ್ದಾರೆ.

"ಅವಳು ಹುಬ್ಬಳ್ಳಿಯವಳು ಎಂಟನೇತ್ತೆ ಅದೇ ಆಗ ಮುಗಿಸಿದ್ದಳು ಅಪ್ಪ ಬಡವ ಮತ್ತು ಕುಡುಕ, ತಾಯಿ ಇಲ್ಲ. ಅಪ್ಪ ದೇವಸ್ಥಾನದಲ್ಲಿ ತಾಳಿಕಟ್ಟಿಸಿ ಗುಜ್ಜರ ಮದುವೆ ಮಾಡಿಕೊಟ್ಟ ಅಲ್ಲಿಗೆ ಹೋದಮೇಲೆ ಅವಳಿಗೆ ತಿಳಿದದ್ದು ಇದು ಎಲ್ಲ ಮದುವೆಗಳ ಹಾಗಲ್ಲ ಇಲ್ಲಿ ತಾಳಿಕಟ್ಟಿದವನು ಹೆಸರಿಗೆ ಮಾತ್ರ ಅವನು ಹೀಗೆ ಬೇರೆ ಬೇರೆ ಊರುಗಳಲ್ಲಿ ತಾಳಿಕಟ್ಟುವ ಮದುಮಗನಾಗಿರುತ್ತಾನೆ. ಮೈಮೇಲೆ ಒಡವೆ ಸೀರೆ ಎಲ್ಲ ಬರುತ್ತದೆ. ಆದರೆ ಅಲ್ಲಿಯವರು ಹೇಳಿದ್ದನ್ನು ಕೇಳಬೇಕು, ಒಪ್ಪಿಕೊಳ್ಳಬೇಕು ಮದುವೆ ಮಾಡಿಕೊಂಡು ಕರೆದೊಯ್ದು ಕೆಲ ತಿಂಗಳಿನಲ್ಲಿ 'ತವರಿಗೆ ಕರೆತಂದು ಹೋಗುವ' ಶಾಸ್ತ್ರ ನಡೆಯುತ್ತದೆ. ಆ ಒಂದೆರಡು ದಿನ ಹುಡುಗಿ ಒಬ್ಬಳೇ ಯಾರೊಂದಿಗೂ ಬೆರೆಯುವಂತಿಲ್ಲ ಅಸಲಿಗೆ ಇಲ್ಲಿಯ ಭಾಷೆ ಮಾತಾಡುವಂತಿಲ್ಲ. ತವರು ಮನೆಯಲ್ಲಿ ಉಣ್ಣುವಂತಿಲ್ಲ ಅಲ್ಲಿಯ ಸಂಬಂಧಿಯೊಬ್ಬಳು ಸದಾ ಒಂಟಿಯಾಗಿರುತ್ತಾಳೆ. ಇವೆಲ್ಲ ಸಾಂಪ್ರದಾಯಿಕ ಆಚರಣೆಗಳು ಹೀಗೆ ಮುಗಿಸಿ ಮರಳಿದರೆಂದರೆ ಅವಳ ಬದುಕು ಅವರ ಸುಪರ್ದಿಗೆ ಸಂದುಹೋಗುತ್ತದೆ. ಎಷ್ಟು ದಿನ ಇಟ್ಟುಕೊಳ್ಳಬೇಕು? ಯಾವಾಗ ದೇಹ ವ್ಯಾಪಾರವನ್ನು ಆರಂಭಿಸಬೇಕು? ಎಲ್ಲಿ? ಹೇಗೆ? ಎಲ್ಲಾ ಕಾಂಟ್ರಾಕ್ಟ್‌ಗಳೂ ಒಂದು ಆಯೋಮಯದಲ್ಲಿ ನಡೆಯುತ್ತವೆ. ಮೊಬೈಲ್‌ಗಳ ಈ ಕಾಲದಲ್ಲೂ ಹುಡುಗಿ ಬಂಧಿಖಾನೆ ಅನುಭವಿಸುತ್ತಾಳೆ. ತನ್ನ ಭವಿಷ್ಯತ್ತನ್ನು ಈ ಹುಡುಗಿ ತಿಳಿದುಕೊಂಡಿದ್ದಳು. ತಿಳಿವು ಒಳಗನ್ನು ಪ್ರವೇಶಿಸಿದ ಘಳಿಗೆ ಎಂತಹದಿದ್ದೀತ್ತೋ? ಸತ್ತೇನು ಮರಳಿ ಹೋಗಲಾರೆ' ಎಂದೇ ಜಗಿದಿದ್ದಳಂತೆ. ಅವಳ ಕಾಲಿಗೆ ಕಸುವು ಮನಕ್ಕೆ ಧೀಃಶಕ್ತಿಯನ್ನು ಕೊಟ್ಟಿದ್ದು ಪುಟ್ಟ ಬಿಳಿ ಅಂಗೈ ಮೇಲಿದ್ದ ನೀಲಿ ಅಂಕಿಗಳು ಅದು ಯಾರ ಮೊಬೈಲ್ ಸಂಖ್ಯೆ ಎಂದು ವಿಚಾರಿಸುವುದು ಅನೈತಿಕವೆನಿಸಿತ್ತು. ಅವಳಿಗೆ ಸಾಂತ್ವಾನ ಸಲಹೆ ನಮ್ಮ ಮೊಬೈಲ್ ಸಂಖ್ಯೆ ಎಲ್ಲ ಹೊರೆಸಿ ಕಳಿಸಿದ್ದಾಯಿತು. ಆ ಮೇಲೆ ಎಷ್ಟು ಪ್ರಯತ್ನಿಸಿದರೂ ಅವಳೊಂದಿಗೆ

ಮಾತನಾಡಲಾಗಿಲ್ಲ ಆಗಾಗ ಅವಳ ನೆನಪಾಗುತ್ತದೆ. ಆ ಪುಟ್ಟ ಹೆಣ್ಣು ಸುಖವಾಗಿರಬಹುದಲ್ಲವೆ? ಇರಲಿ ದೇವರೆ ಆ ನೀಲಿ ಅಂಕಿಗಳು ಅವಳ ವಿಶ್ವಾಸವನ್ನೆಂದೂ ಕಸಿಯದಿರಲಿ ಎಂತಹ ಬಿರುಗಾಳಿಗೂ ಜಗ್ಗದ ಹುಲ್ಲದಳಗಳ ಗುಣ ಅವಳದ್ದು"[೧೦] ಮದುವೆ ಎಂಬುದನ್ನು ಮಾರಾಟ ಜಾಲವನ್ನಾಗಿ ರೂಪಿಸಿಕೊಳ್ಳಲಾಗಿದೆ. ಮಾನವ ಕಳ್ಳ ಸಾಗಾಣಿಕೆಯು ಒಂದು ಕಾಲದಲ್ಲಿ ಎಲ್ಲರ ಕಣ್ಣುತಪ್ಪಿಸಿ ನಡೆಯುತ್ತಿದ್ದವು ಆದ್ರೆ ಇಂದು ಮದುವೆ ಎಂಬ ಸಾರ್ವಜನಿಕ ಪರವಾನಿಗಿಯನ್ನ ಪಡೆದುಕೊಂಡು ಮಹಿಳೆ ಮತ್ತು ಮಕ್ಕಳ ಮಾರಾಟ ಜಾಲ ಹೆಚ್ಚುತ್ತಿರುವುದು ಆತಂಕಕಾರಿ ವಿಷಯ.

ಮಾನವ ಕಳ್ಳ ಸಾಗಾಣಿಕೆ ಮಾರಾಟದಾರರಿಗೆ ಕೆಲವು ಅಧಿಕಾರಸ್ಥ ವರ್ಗವೇ ಬೆಂಗಾವಲಾಗಿ ನಿಂತಿರುವುದು ದುರಂತವಾಗಿದೆ. ಇವರಿಗೆ ಬಡತನವೇ ಬಂಡವಾಳವಾಗಿದೆ. ಬಡತನದಿಂದ ಬಳಲುತ್ತಿರುವ ಕುಟುಂಬದ ಹೆಣ್ಣುಗಳೇ ಆಯ್ಕೆ ಮಾಡಿಕೊಂಡು ಆ ಮನೆಯವರಿಗೆ ಹಣದ ಆಮಿಷವೊಡ್ಡಿ ಹೆಣ್ಣು ಮಕ್ಕಳನ್ನು ಖರೀದಿ ಮಾಡುತ್ತಿದ್ದಾರೆ. ಇದನ್ನರಿಯದ ಪೋಷಕರು ಅವರು ಹಾಕಿದ ದಾಳಕ್ಕೆ ಸಿಲುಕಿ ಬಿಡಿಸಿಕೊಳ್ಳಲಾರದೆ ಚಡಪಡಿಸಿದ್ದು ಇದೆ. ಇಂತಹ ಅನೇಕ ಘಟನೆಗಳನ್ನು ವಿಶ್ಲೇಷಿಸುವುದರ ಮೂಲಕ ಆಧುನಿಕ ಕಾಲಘಟ್ಟಲ್ಲಿ ಮತ್ತೆ ಮತ್ತೆ ದೌರ್ಜನ್ಯದ ಕೂಪಕ್ಕೆ ತಳ್ಳಲ್ಪಡುತ್ತಿರುವುದರನ್ನು ಸೂಕ್ಷ್ಮವಾಗಿ ಹೇಳುವ ಪ್ರಯತ್ನವನ್ನು ಮಾಡಿದ್ದಾರೆ. ಅಲ್ಲದೆ ನಗರೀಕರಣ ಬೆಳೆದಂತೆಲ್ಲಾ ವೇಶ್ಯಾವಾಟಿಕೆಯ ಜಾಲ ಹೆಗ್ಗಿಲ್ಲದೆ ಬೆಳೆಯುತ್ತಿರುವುದರ ಅಪಾಯವನ್ನು ಅಭಿವ್ಯಕ್ತಿಸಿದ್ದಾರೆ.

"ಗುಲಬರ್ಗಾ ಜಿಲ್ಲೆಯ ಚಿಂಚೋಳಿಯ ಗಿರಿಜಾ ಪಾರ್ಶ್ವವಾಯುವಿನಿಂದ ನರಳುತ್ತಿರುವ ತಂದೆಯ ಸೇವೆ ಮಾಡುತ್ತಾ ತನ್ನ ಪಾಡಿಗೆ ಬದುಕುತ್ತಿದ್ದಳು. ಯಾರಿಗೂ ಕೈಚಾಚಬಾರದು ಎಂದು ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದಳು. ಅದೊಂದು ದಿನ ಶಾರದಮ್ಮ ಎಂಬ ಮಹಿಳೆಯು ಇವಳ ಅತ್ತಿಗೆಯೊಂದಿಗೆ ಬಂದು ಗುಜರಾತಿನಿಂದ ಒಳ್ಳೆಯ ಅನುಕೂಲಸ್ಥ ಗಂಡು ಬಂದಿದ್ದಾನೆ. ಅವನಿಗೆ ನೋಡು, ನಿನಗೆ ಇಷ್ಟ ಇದ್ದರೆ ಮದುವೆ ಮಾಡುತ್ತೇವೆ ಎಂದಳಂತೆ ಇವಳಿಗೆ ಹುಂ ಅನ್ನಿಸಿತು ಪರಸ್ಪರ ಫೋಟೊ ನೋಡಿದರು. ಮರುದಿನವೇ ಅತ್ತಿಗೆ, ತಮ್ಮ ಮತ್ತು ಶಾರದಮ್ಮನೊಂದಿಗೆ ಗುಜರಾತಿಗೆ ಮದುವೆಗೆಂದು ಹೊರಟೇಬಿಟ್ಟರು. ಉಳಿದೆಲ್ಲ ವ್ಯವಹಾರ ಶಾರದಮ್ಮ ಮತ್ತು ಗುಜರಾತು ಕರ್ನಾಟಕದ ನಡುವಿಗೆ ಮದುವೆ ಮಾಡಿಸುವ ಏಜೆಂಟನಾಗಿರುವ ಅಜೀಜ್ ಎಂಬುವರ ನಡುವೆ ನಡೆಯಿತಂತೆ. ಇವರೆಲ್ಲ ರಾಜಕೋಟೆಗೆ ಹೋದ ಮೇಲೆ ಅಲ್ಲಿ ಗಂಡಿನ ಕಡೆಯವರ ನಡವಳಿಕೆ ಭಯನಕವಾಗಿ ಕಂಡು ಬಂದು ಗಿರಿಜಾಳ ತಮ್ಮನಿಗೆ ಅನುಮಾನ ಬಂದು 'ಈ ಮದುವಿ ಬ್ಯಾಡ ಇದರಲ್ಲೇನೋ ಮೋಸ ಇದೆ. ನಡಿ ನಮೂರಿಗೆ ಹೋಗೋಣ' ಎಂದು ಎದ್ದು ಬಂದನಂತೆ. ತಮ್ಮನೊಂದಿಗೆ ಗಿರಿಜಾ ಸಹ ಎದ್ದಳು ಇದರಿಂದ ವ್ಯವಹಾರಕ್ಕೆ ದಕ್ಕೆ ಬಂದಂತಾಯಿತೆನೋ ಗಂಡಿನ ಕಡೆಯವರು ಇವರನ್ನು ಬೆದರಿಸತೊಡಗಿದರಂತೆ. ಇದರಿಂದ ಮತ್ತಷ್ಟು ಭಯಗೊಂಡ ಇವರು ಅಲ್ಲಿಂದ ಹೊರಬಂದು ಪಲಾಯನ ಮಾಡಿದರಂತೆ ಇವರನ್ನು ಹುಡುಕುತ್ತಾ ಕನಿಷ್ಟ ಹದಿನೈದು ಜನ ಗುಂಡಾಗಳಂಥವರು ಅಹಮದ್ ನಗರದವರೆಗೂ ಬೆಂಬತ್ತಿದ್ದರು

ಎಂದು ಗಿರಿಜಾಳ ಹೇಳಿಕೆ. ಏನೂ ಅರಿಯದ ಅಕ್ಕ ತಮ್ಮ ಒಂದು ವಾರಗಟ್ಟಲೇ ಕಂಡ ಊರಲ್ಲಿ ಮುಚ್ಚಿಕೊಳ್ಳುತ್ತ ಕರುಣೆಯಿಟ್ಟು ಯಾರೋ ಕೊಟ್ಟಿದ್ದನ್ನು ತಿನ್ನುತ್ತ ಕಳ್ಳರೆಂದು ಒಂದು ಹಳ್ಳಿಯಲ್ಲಿ ಅನುಮಾನಿಸಿ ಮಾರಣಾಂತಿಕ ಹಲ್ಲೆಯಿಂದ ಸತ್ತು ಬದುಕುತ್ತ ಕಡೆಗೂ ಗುಲಬರ್ಗಾ ಸೇರಿರುವರು. ಅವಳ ತಮ್ಮ ಮಾರ್ಗ ಮಧ್ಯದಲ್ಲಿ ತಪ್ಪಿಸಿಕೊಂಡು ಈಗ ಅರೆ ಹುಚ್ಚನಂತಾಗಿರುವನು. ಇದು ಮದುವೆಯಲ್ಲ ವ್ಯಾಪಾರ ಅನ್ನುವುದು ಹೌದಲ್ಲವೇ?"[೧೧] ಮದುವೆ ಎಂಬುದು ಎರಡು ಮನಸ್ಸುಗಳ ಮತ್ತು ಎರಡು ಕುಟುಂಬಗಳ ನಡುವೆ ಏರ್ಪಡುವ ಒಂದು ಮಧುರ ಸಂಬಂಧವಾಗಿದೆ. ಇಂದಿನ ದಿನಮಾನಗಳಲ್ಲಿ ಮದುವೆ ಎಂಬುದು ಮಾನವ ಕಳ್ಳ ಸಾಗಾಣಿಕೆಗೆ ಒಂದು ನೆಪವಾಗುತ್ತಿದೆ. ಆದರೆ ವಾಸ್ತವವಾಗಿ ಅಲ್ಲಿ ನಡೆಯುತ್ತಿರುವುದೇ ಬೇರೆ. ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಳ್ಳುವ ನೆಪದಲ್ಲಿ ವೇಶ್ಯಾವಾಟಿಕೆಗೆ ತಳ್ಳುತ್ತಿದ್ದಾರೆ. ಅದು ತಿಳಿದ ಕೆಲವು ಗಿರಿಜಾಳಂತಹವರು ಹೊರ ಬರುವ ಪ್ರಯತ್ನವನ್ನು ಮಾಡಿದ್ದಾರೆ. ಆದರೆ ಇನ್ನುಳಿದವರಿಗೆ ಅಂತಹ ಅವಕಾಶ ಒದಗಿಲ್ಲ ಎಷ್ಟೊ ಹೆಣ್ಣು ಮಕ್ಕಳು ಈ ಜಾಲಕ್ಕೆ ಸಿಕ್ಕಿ ನರಳುತ್ತಿದ್ದಾರೆ.

"ಹಿಂದೂ, ಸಿಖ್ ಮೊದಲಾದ ಧಾರ್ಮಿಕ ಸಂಘಟನೆಗಳು ಪುರುಷ ಮಾದರಿಗಳ ಕ್ರೌರ್ಯ ಘನತೆ ಮೊದಲಾದವುಗಳನ್ನು ಎತ್ತಿ ಹಿಡಿದಂತೆ ಸ್ತ್ರೀ ಮಾದರಿಗಳ ಪಾವಿತ್ರ್ಯ, ವಿಧೇಯತೆ ಅಸಹಾಯಕತೆಗಳನ್ನು ಎತ್ತಿಹಿಡಿದವು. ಮತದ ಗುಂಪಿನ ರಾಷ್ಟ್ರದ ಅನನ್ಯತೆಯನ್ನು ಸ್ತ್ರೀಯರ ಮೂಲಕ ಗುರುತಿಸಲಾಯಿತು. ಕೌಟುಂಬಿಕ ನಂಟನ್ನು ರಾಷ್ಟ್ರಕ್ಕೆ ವಿಸ್ತರಿಸಲಾಯಿತು. ಕುಟುಂಬ ಸಂಬಂಧಗಳಂತೆ ಅದು ಕೂಡಲ್ಪಟ್ಟದ್ದು, ಸಹಜವಾದದ್ದು. ಈ ಅನನ್ಯತೆಯು ಎಷ್ಟು ತೀವ್ರವೆಂದರೆ ಅಗತ್ಯವಿದ್ದಾಗ ಪ್ರಾಣಾರ್ಪಣೆ ಕೂಡ ಸಹಜ. ತ್ಯಾಗಮಯಿಯಾದ ತಾಯಿ ಅಥವಾ ವಿಧೇಯಳಿಂದ ಪತ್ನಿಯ ಸಮರ್ಥನೆ ಮತ್ತು ರಕ್ಷಣೆಗಾಗಿ ಮುನ್ನುಗ್ಗುವಿಕೆಯನ್ನು ಪುರುಷರಲ್ಲಿ ಪ್ರೋತ್ಸಾಹಿಸಲಾಯಿತು ಮನೆಯ ಮನೆತನದ ಗೌರವವನ್ನು ಕಾಪಾಡುವುದೆಂದರೆ ಅಲ್ಲಿಯ ಹೆಂಗಸರ ಶ್ರಮ, ಲೈಂಗಿಕತೆ ಮತ್ತು ಸಂತಾನೋತ್ಪತ್ತಿಯ ಮೇಲೆ ಹಿಡಿತವಿರುವುದು ಎಂದೂ ತಿಳಿಸಲಾಯಿತು. ಶಾಬಾನು, ಸತಿ ಪ್ರಕರಣಗಳು ಒಂಟಿ ಮಹಿಳೆಯು ಸಮಾಜಕ್ಕೆ ಒಡ್ಡಿದ ಒಂದು ಬಗೆಯ ಹೆದರಿಕೆಯೆಂಬುದು ಈಗಾಗಲೇ ಆ ಪ್ರಕರಣಗಳ ವಿಶ್ಲೇಷಣೆಯಲ್ಲಿ ವ್ಯಕ್ತವಾಗಿದೆ. 'ಪ್ರತ್ಯೇಕ ಸಿಖ್ ಕಸ್ಟಮ್ ಲಾ' ಕೂಡ ಹೆಣ್ಣು ಮಕ್ಕಳ ಉತ್ತರಾಧಿಕಾರತ್ವದ ನಿಯಂತ್ರಣ ಮತ್ತು ವಿಧವೆಯರು ಗಂಡನ ಸೋದರನನ್ನು ವಿವಾಹವಾಗುವ ಪದ್ಧತಿಯನ್ನು ಒತ್ತಾಯಿಸುತ್ತದೆ. ಸ್ತ್ರೀಯರ ಮೇಲೆ ಹಿಡಿತ ಸಾಧಿಸಲು ಯತ್ನಿಸುವ ನಿದರ್ಶನಗಳು ಕಾನೂನಿನಲ್ಲಿ ಹಾಗೂ ಸಮಾಜದಲ್ಲಿ ವಿಫುಲವಾಗಿ ದೊರೆಯುತ್ತವೆ. ಮಹಾರಾಷ್ಟ್ರದ ಲಂಗಾವ್ ಜಿಲ್ಲೆಯ ಹೆಂಗಸರು ಚಲನ ಚಿತ್ರ ನೋಡಬಾರದು ಎಂದು ನಿಷೇಧವನ್ನು ರಜಿಯಾಪಟೇಲ್ ಮತ್ತು ಇತರ ಹೆಂಗಸರು ಮೀರಿದರು. ಅವರ ಬುರ್ಖಾಗಳನ್ನು ಕತ್ತರಿಸಿ ಮುಂದಿನ ಸಾರಿ ಹೀಗೆ ನಿಷೇಧವನ್ನು ಮೀರಿದವರ ದೇಹಗಳನ್ನು ಹೀಗೆಯೇ ಕತ್ತರಿಸಲಾಗುವುದು ಎಂದು ಹೆದರಿಸಲಾಯಿತು. ಮುಸ್ಲಿಂ ವೈಯಕ್ತಿಕ ಕಾನೂನನ್ನು ಮೀರಿದಕ್ಕೆ ಕೇರಳದ ಜುಲೈಕಾ ಬೀಬಿಗೆ ೧೦೧ ಏಟು ಬಿದ್ದರೆ ಶಾಬಾನು ಪೆರಂತುರಾ ಎಂಬಾಕೆಯ ತಲೆಯನ್ನು ಬೋಳಿಸಲಾಯಿತು."[೧೨]

ಧರ್ಮದ ಪರಿಧಿಯೊಳಗೆ ಮಹಿಳೆಯನ್ನು ಬಂಧಿಸಲಾಗಿದೆ. ಅಲ್ಲದೆಯೇ ಅವಳಿಗೆ ಹೀಗೆಯೆ ಇರಬೇಕೆಂಬ ಹೇರಿಕೆಯನ್ನು ವಿಧಿಸಲಾಗಿದೆ. ಮಹಿಳೆಗೆ ಈ ಸಮಾಜ ಆರೋಪಿಸಿರುವ ತಾಳ್ಮೆ, ತ್ಯಾಗ, ವಿನಯ, ವಿಧೇಯತೆ, ಅಸಹಾಯಕಳು ಹೀಗೆ ಮುಂತಾದವನ್ನು ಹೇರುವುದರ ಮೂಲಕ ಅವಳನ್ನು ಹೊರ ಪ್ರಪಂಚಕ್ಕೆ ಬರಲಾರದಂತೆ ಕುಟುಂಬದೊಳಗೆಯೇ ಉಳಿಸಲಾಗಿದೆ. ಪುರುಷ ಪ್ರಧಾನ ಸಮಾಜವು ಜಾರಿಯಲ್ಲಿಟ್ಟಿರುವ ಇಂತಹ ನಿಯಮಗಳನ್ನು ಮುರಿದು ಮುಂದೆ ಬಂದರೆ ಅಂತಹ ಮಹಿಳೆಯರಿಗೆ ಸಂಕಷ್ಟ ತಪ್ಪಿದ್ದಲ್ಲ. ಮಹಿಳೆಯೊಬ್ಬಳ ಆಸೆ, ಆಕಾಂಕ್ಷೆ, ಸ್ವಾತಂತ್ರ್ಯಕ್ಕೆ ಬೆಲೆಯಿಲ್ಲ. ಈ ಮೇಲಿನ ಪ್ರಕರಣಗಳನ್ನೇ ಗಮನಿಸಬಹುದು ಸಿನಿಮಾ ನೋಡಿದ್ದು ದೊಡ್ಡ ಅಪರಾಧವಾಯಿತು. ಆ ಧರ್ಮದ ನಿಯಮ ಉಲ್ಲಂಘನೆ ಮಾಡಿದರು ಎಂದು ಬೊಬ್ಬಿಟ್ಟು, ಆ ಮಹಿಳೆಯರ ಬುರ್ಖಗಳನ್ನ ಕತ್ತರಿಸಿ ಎಚ್ಚರಿಸಿ ಮುಂದೆ ಇದೇ ತಪ್ಪು ಮುಂದುವರೆದರೆ ದೇಹವನ್ನು ತುಂಡರಿಸುತ್ತೇವೆ ಎಂಬ ಬೆದರಿಕೆಗಳು ಎಂತಹ ಘಟ್ಟಿಗರಿಗೂ ಎದೆ ನಡುಗುವಂತೆ ಮಾಡುತ್ತದೆ. ಒಂದು ಸಿನಿಮಾ ನೋಡಿದರೆ ಈ ರೀತಿಯ ಬೆದರಿಕೆ ಹಾಕುವ ಈ ಸಮಾಜದಲ್ಲಿ ಮಹಿಳೆ ಸಬಲಳು ಎಂದು ಹೇಳುವುದಾದರೂ ಹೇಗೆ? ಎಂಬ ಆತಂಕದ ಜೊತೆಗೆ ಮುಸ್ಲಿಂ ಧರ್ಮದಲ್ಲಿರುವ ಕ್ರೌರ್ಯತೆಯನ್ನು ಅನಾವರಣ ಮಾಡಿದ್ದಾರೆ.

"ಕೇರಳದಲ್ಲಿ ಅತ್ಯಧಿಕ ಮುಸ್ಲಿಂ ಜನಸಾಂದ್ರತೆ ಇರುವ ಹಾಗೂ ಹಿಂದುಳಿದ ಜಿಲ್ಲೆ ಮಲ್ಲಪುರಂ. ಇಂದಿನ ಧಾರ್ಮಿಕ ಮೂಲಭೂತವಾದದಿಂದಾಗಿ ಇಂದು ಈ ಜಿಲ್ಲೆಯಲ್ಲಿ ನಾಲ್ಕು ವರ್ಷದ ಹೆಣ್ಣು ಮಕ್ಕಳು ಕೂಡ ಬುರ್ಖಾ ಹಾಕಿಕೊಳ್ಳಬೇಕಾಗಿದೆ. ಬುರ್ಖಾ ಧರಿಸದ ಹೆಣ್ಣು ಮಕ್ಕಳನ್ನು ಶಾಲೆಗಳಿಂದ ಹೊರಗೆ ಕಳುಹಿಸಲಾಗುತ್ತದೆ. ಮದ್ರಾಸಾಗಳಲ್ಲಿ ಪ್ರಾರಂಭದಿಂದಲೇ ಈ ಹೆಣ್ಣು ಮಕ್ಕಳ ತಲೆಯೊಳಗೆ 'ನೀನು ಹೆಣ್ಣು, ಗಂಡ ಹೇಳಿದಂತೆ ಕೇಳಿಕೊಂಡಿರಬೇಕಾದವಳು. ನೀವು ಹುಟ್ಟಿರುವುದೇ ಗಂಡಿಗಾಗಿ ಗಂಡನನ್ನು ಸಂತೋಷಪಡಿಸುವುದಕ್ಕಾಗಿ ತಲೆಯಿಂದ ಕಾಲಿನವರೆಗೂ ಮರೆ ಮಾಡಿಕೊಂಡು ಗಂಡನ ನೆರಳಾಗಿ ಬದುಕಬೇಕು. ಇಹಲೋಕದಲ್ಲಿ ಏನನ್ನೂ ಆಶಿಸಬಾರದು' ಎಂಬ ಮಾತುಗಳನ್ನು ತುರುಕಲಾಗುತ್ತದೆ ಮದುವೆಯೇ ಹೆಣ್ಣು ಮಕ್ಕಳ ಬದುಕಿನ ಏಕೈಕ ಗುರಿ ಎಂಬಂತೆ ಬಿಂಬಿಸಲಾಗುತ್ತದೆ.

ಇವರ ಬಡತನದಿಂದಾಗಿ ಈ ಹೆಣ್ಣು ಮಕ್ಕಳ ಮದುವೆಯೂ ಬಹಳ ಕಷ್ಟಕರವಾಗಿದೆ. ಮದುವೆಗಾಗಿ ಇವರ ಹೆತ್ತವರು ಮದುವೆ ದಲ್ಲಾಳಿಗಳ ಮೊರೆ ಹೋಗುತ್ತಾರೆ. ಮಲ್ಲಪ್ಪರಂ ಜಿಲ್ಲೆ ಮೈಸೂರಿಗೆ ಸಮೀಪವಿದೆ. ಮದುವೆ ದಲ್ಲಾಳಿಗಳು ಮೈಸೂರಿನಿಂದ ವರರನ್ನು ಕುದುರಿಸುತ್ತಾರೆ. ಅಲ್ಲಿ ಸಮನಾದ(ಸರಿಯಾದ) ವಿಳಾಸವೇ ಇಲ್ಲದ ಹತ್ತಿಪ್ಪತ್ತು ಹುಡುಗರನ್ನು ಬಸ್ಸು ಹತ್ತಿಸಿ ಕರೆದುಕೊಂಡು ಬಂದು ಮಲ್ಲಪ್ಪರಂನ ಹುಡುಗಿಯರೊಡನೆ ಮದುವೆ ನೆರವೇರಿಸುತ್ತಾರೆ. ಊರವರು ಈ ಬಸ್ಸನ್ನು ಮಧು ಮಕ್ಕಳ ಬಸ್ಸು' ಎಂದೇ ಕರೆಯುತ್ತಾರೆ. ಹತ್ತಿಪ್ಪತ್ತು ಸವರನ್ನಿನ ಚಿನ್ನಾಭರಣ ಹಾಗೂ ಐವತ್ತು ಸಾವಿರ ರೂಪಾಯಿ ವರದಕ್ಷಿಣೆಯನ್ನೂ ನೀಡಲಾಗುತ್ತದೆ. ಒಂದೆರಡು ವರ್ಷಗಳಲ್ಲಿ ಎಲ್ಲವನ್ನೂ ಖರ್ಚುಮಾಡಿ ಒಂದೆರೆಡು ಮಕ್ಕಳನ್ನು ಹುಟ್ಟಿಸಿ ಇವರು ಕಣ್ಮರೆಯಾಗುತ್ತಾರೆ. ಈ

ರೀತಿ ಮದುವೆಯಾಗಿ ವಿಚ್ಛೇಧನವೂ ಇಲ್ಲದೆ ಜೀವನಾಂಶವೂ ಇಲ್ಲದೆ ನೂರಾರು ಮುಸ್ಲಿಂ ಹೆಣ್ಣು ಮಕ್ಕಳು ಮಲಪ್ಪುರಂ ಜಿಲ್ಲೆಯಲ್ಲಿ ಇದ್ದಾರೆ. ನಿಲಂಬೂರಿನ ಓರ್ವ ನ್ಯಾಯವಾದಿಯ ಬಳಿಯಲ್ಲಿ ಇಂತಹ ಆರುನೂರು ಮೊಕದ್ದಮೆಗಳು ದಾಖಲಾಗಿವೆ! ವಿಳಾಸವೇ ಇಲ್ಲದ ಮೇಲೆ ಮೊಕದ್ದಮೆ ನಡೆಸುವುದು ಹೇಗೆ?"[೧೩] ದೇಶ, ಧರ್ಮ, ಜಾತಿಯಲ್ಲಾಗಲೀ ಮೊದಲು ಬಲಿಪಶುವಾಗುವುದು ಮಹಿಳೆಯೇ.

ಬಡತನದ ದಳ್ಳುರಿಗೆ ಸಿಕ್ಕು ನಲುಗುವ ಸಮುದಾಯದಲ್ಲಿನ ಮಹಿಳೆಯರ ಸ್ಥಿತಿ ಚಿಂತಾಜನಕವೇ ಆಗಿರುತ್ತದೆ. ಮದುವೆಯ ಪ್ರಸ್ತಾಪ ಬಂದಾಗ ಬಡತನದ ಕುಟುಂಬಗಳಲ್ಲಿ ಹೆಣ್ಣು ಮಕ್ಕಳ ಆಸೆ ಆಕಾಂಕ್ಷೆಗಳು ಲೆಕ್ಕಕ್ಕೇ ಬರುವುದಿಲ್ಲ. ಮದುವೆ ಎಂಬ ಸಂಬಂಧದ ಸರಪಳಿಗೆ ಕಟ್ಟುವುದೇ ಮೊದಲ ಆಧ್ಯತೆಯಾಗಿರುತ್ತದೆ. ತಮ್ಮ ಮಕ್ಕಳ ಮುಂದಿನ ಭವಿಷ್ಯದ ಬಗೆಗೆ ಆಲೋಚಿಸದೆ ಯಾವುದು ತಿಳಿಯದೆ ಬಂದ ಗಂಡಿಗೆ ಮದುವೆ ಮಾಡಿ ಕೈತೊಳೆದುಕೊಳ್ಳುತ್ತಾರೆ. ಆದರೆ ಆ ಹೆಣ್ಣಿನ ಸ್ಥಿತಿಯನ್ನು ನೋಡುವುದೇ ಇಲ್ಲ. ಮೂಕ ಪಕ್ಷಿಯಂತೆ ಒಪ್ಪಿ ಮದುವೆಯಾದರೂ ಅವರ ಇಷ್ಟದ ಜೀವನ ನಡೆಸಲು ಸಾಧ್ಯವಾಗದೆ ನರಳುತ್ತಿರುವ ಮಹಿಳೆಯರು ಅದೇಷ್ಟೋ? ಮದುವೆಯ ನೆಪದಲ್ಲಿ ಎಲ್ಲವನ್ನೂ ದೋಚಿಕೊಂಡು ಪರಾರಿಯಾಗುತ್ತಾರೆ. ಇಂತಹ ಅನೇಕ ಪ್ರಕರಣಗಳು ನಡೆದು ಬೆಳಕಿಗೆ ಬಂದರೂ ತಡೆಯಲಾಗುತ್ತಿಲ್ಲ. ಈ ರೀತಿ ಮದುವೆಯಾದ ನೂರಾರು ಮುಸ್ಲಿಂ ಹೆಣ್ಣುಗಳ ಬದುಕು ಮೂರಾಬಟ್ಟೆಯಾಗಿ ಹೋಗಿದೆ. ಮದುವೆಯಾದವರು ವಿಚ್ಛೇದನವನ್ನೂ ನೀಡದೆ ಪರಾರಿಯಾಗಿದ್ದಾರೆ. ಎಷ್ಟೋ ಮಹಿಳೆಯರ ಬದುಕು ಅತಂತ್ರವಾಗಿದೆ ಎನ್ನುವುದು ಈ ಲೇಖಕಿಯ ನಿಲುವಾಗಿದೆ.

"ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಕೊಂಚಾವರಂ ಪ್ರದೇಶದ ಥಾಂಡಾಗಳಲ್ಲಿ ಹೆಣ್ಣು ಕೂಸುಗಳ ಮಾರಾಟದ ಜಾಲ ಅನಾವರಣಗೊಂಡ ಸಮಯವದು. ಲಂಬಾಣಿ ಜನಾಂಗದ ಸುಂದರ ಹೆಂಗೂಸುಗಳನ್ನು ಕೇವಲ ರೂ ೫೦೦ ರಿಂದ ರೂ ೨೦೦೦ ಗಳಿಗೆ ಮಾರಾಟ ಮಾಡಲಾಗಿತ್ತು ಅನೇಕ ವರ್ಷಗಳಿಂದ ಗೌಪ್ಯವಾಗಿ ನಡೆಸಿಕೊಂಡು ಬಂದ 'ಜಾಲವು' ಈವರೆಗೂ ಅಭೇದ್ಯವಾಗಿಯೇ ಇದೆ. ಅನೇಕ ಬಾರಿ ನಾವು ಥಾಂಡಾಗಳಿಗೆ ಬೇಟಿಯಿತ್ತಿದ್ದೇವು. ಥಾಂಡಾ ವಾಸಿಗಳಾದ ಲಂಬಾಣಿ ಜನಾಂಗವು ಖಂಡಿತ ಕಡು ಬಡವರೇ. ಹತ್ತಾರು ವರ್ಷಗಳಿಂದ ಅರಣ್ಯ ಪ್ರದೇಶದಲ್ಲಿ ವಾಸವಿದ್ದರೂ ಅರಣ್ಯ ಸಂಪತ್ತಿಗೆ ಇವರು ಒಡೆಯರಲ್ಲ. ಉಳುಮೆ ಮಾಡಿಕೊಂಡಿದ್ದ ಭೂಮಿಯಿಂದ ಹೊರದಬ್ಬುವ ಸಂಚು ಅರಣ್ಯ ಅಧಿಕಾರಿಗಳದ್ದು. ಉದ್ಯೋಗದ ಅವಕಾಶವಿಲ್ಲ ಬಾಂಬೆ, ಪುಣೆಗೆ ವಲಸೆ, ಕಿತ್ತು ತಿನ್ನುವ ಬಡತನ ಅನೇಕ ಬೇಡಿಕೆಗಳನ್ನಿಟ್ಟು ಚಳುವಳಿಗಳು ನಡೆದವು. ನಾವಾಗ ೧೫ ಜನ ಸಮೀಕ್ಷೆಗಾಗಿ ಲಿಂಗ ಸಮಾನತೆಯ ಬೆಳಕ್ಹಿಡಿದು ಹೊರಟೆವು. ಹೆಣ್ಣು ಕೂಸುಗಳ, ಕರುಳಕುಡಿಗಳ ಮಾರಾಟದ ಹಿಂದಿನ ಮೌಲ್ಯ ಭೇಧಿಸಲು ನಾಲ್ಕು ದಿನಗಳ ಕಾಲ ಥಾಂಡಾಗಳಲ್ಲಿ ಠಿಕಾಣಿ ಹೂಡಿದೆವು. ಚೌಕಿ ಥಾಂಡಾದತ್ತ ನಮ್ಮ ಪಯಣ. ಎಳೆ ಮಗು ಮಾರಿಕೊಂಡ ಹೆಂಗಸು ಅಂಗಳದಲ್ಲಿ ಕೂತಿದ್ದಳು. ಆಕೆಯ ಗಂಡ ಬೀಡಿಯ ತುದಿಗೆ ಬೆಂಕಿಹೊತ್ತಿಸಿ

ನಿರ್ಭಾವ ದಿಟ್ಟಿಹರಿಸಿದ. ಬಂದವರಿಗೆಲ್ಲ ಬೇಟಿಕೊಟ್ಟು ವಿವರಿಸಿದ ನುರಿತ ಅನುಭವದಿಂದಾಗಿ ಚಕಚಕನೇ ಬಡತನವೆಂಬ ಕೌದಿಯ ಮಗ್ಗಲುಗಳನ್ನು ತೋಡಿಕೊಂಡರು ಸರ್ಕಾರ ತಮ್ಮ ನೆರವಿಗೆ ಬರಬೇಕೆಂದು ಆಗ್ರಹಿಸಿದರು. ನಾನು ಒಂದೇ ಒಂದು ಮಾತು ಕೇಳಿದೆ ಅಂಗಾಲಿಗಿ ಹೇಸಿಕ್ಕಿಲ್ಲ. ಕಳ್ಳಿಗೆ ನಾಚಿಕಿಲ್ಲ. ಅಂತಾರ ಒಂಬತ್ತು ತಿಂಗಳು ಹೊತ್ತು ಹೆತ್ತಿದ ತಾಯಿ ನೀ ಕೂಸಿಗೆ ಮಾರಿದ ಮ್ಯಾಲ ಒತ್ತರಿಸಿ ಬಂದ ಎದಿಹಾಲ ಎಲ್ಲಿ ಚೆಲ್ಲಿದಿ? ನಿಂಗ ಹ್ಯಾಂಗ್ ಮನಸ ಬಂತು ಮಾರಲಾಕ? ಆಕಿಯ ಕರುಳಿನಲ್ಲಿ ಕತ್ತಿ ಆಡಿಸಿದಂಗಾಯ್ತೆನೋ ಗಂಡನ ಕಡೆ ನೋಡಿದಳು. ನಮ್ಮ ಮಾತು ಕೇಳಿಸಿಕೊಳ್ಳುತ್ತಾ ಅವರ ಎರಡನೆಯ ಮಗಳು ೧೨ ವರ್ಷದವಳಿರಬೇಕು ದೊಡ್ಡ ಕೊಡಪಾನದಲ್ಲಿ ನೀರು ಹೊತ್ತು ಡ್ರಮ್ಮಿನಲ್ಲಿ ಸುರುವಿ ನಿಂತಿದ್ದಳು. ಎಂಥ ಸುಂದರ ಹುಡುಗಿ! ಈಗಾಗಲೇ ಮಾರಲ್ಪಟ್ಟ ಎಳೆಯ ಕೂಸುಗಳೊಂದಿಗೆ ಏನೆಲ್ಲ ನಡೆದಿರಬಹುದು! ಊಹಿಸಿಯೇ ಎದೆ ನಡುಗಿತು. ಕೂಸುಗಳೊಂದಿಗೆ ಲೈಂಗಿಕ ಚಟುವಟಿಕೆ ನಡೆಸುವ ವಿಕೃತ ಶಕ್ತಿಗಳು ಎಲ್ಲೆಡೆಯೂ ಕಾಣಸಿಗುತ್ತವೆ. ಆ ತಂದೆಯೆಂಬ ಮನುಷ್ಯ ತನ್ನ ತೋರು ಬೆರಳು ಮಗಳತ್ತ ತೋರಿಸಿ ಹೇಳತೊಡಗಿದ 'ಇಕಿ ಹಳಾ ನೋಡ್ರೀ ದೊಡ್ಡಕ್ಕಾಗಿ ಒಂದ್ ವರ್ಷಾಯ್ತು ಮದ್ಯಾಗ ಹುಂಡಾ ಕೇಳ್ತಾರ ; ಹುಟ್ಸಿ ಬೆಳ್ಸಿದ್ ಮ್ಯಾಲಿ ನಮಗೇನು ಲಾಭ ಅದಾ? ಓದಸ್ಲಾಕ ರೊಕ್ಕ ಮದಿಗೆ, ರೊಕ್ಕ ಹಾಕಲಾಕ ಸಾಧ್ಯ ಇಲ್ಲ ನಾವು ಬಡವ್ರು. ಮುಪ್ಪು ಕಾಲಕ ಗಂಡು ಮಗ ಬೇಕು ಗಂಣಸ ಮಗ ಆದ್ರಾ ದೀಪಕ್ಕ ದಿಕ್ಕ ಆಗ್ತಾನ. ಈ ಹೆಣ್ ಪೋರಿ ಗೊಳಿಗೆ ತಗೊಂಡು ಏನ್ ಮಾಡಾರಿ..?' ಅವನು ಹೇಳುತ್ತಲೇ ಇದ್ದ"[೧] ಬಡತನವು ಎಂಥ ಮನುಷ್ಯರನ್ನು ಕಟುಕರನ್ನಾಗಿಸಿ ಬಿಡುತ್ತದೆ ಎನ್ನುವುದಕ್ಕೆ ಅದೊಂದು ಉದಾಹರಣೆ. ಲಿಂಗ ಸಮಾನತೆಯ ಬಗೆಗೆ ಕನಸೊತ್ತು ಸಾಗುತ್ತಿರುವ ಹೊತ್ತಿನಲ್ಲಿ ಹೆಣ್ಣಿನ ಮೇಲಿರುವ ಅಸಡ್ಡೆ ಮತ್ತು ಗಂಡು ಮಗುವಿನ ಮೇಲಿರುವ ವ್ಯಾಮೋಹ ಹೆಚ್ಚುತ್ತಲೇ ಇದೆ.

ಹೆಣ್ಣು ಮಗು ಮನೆಗೆ ಭಾರವೆಂದು ಭಾವಿಸಿ ಅವಳನ್ನು ತಿರಸ್ಕಾರದ ಭಾವನೆಯಿಂದಲೇ ಬೆಳೆಸುತ್ತಿರುವುದು ಕಾಣುತ್ತದೆ. ಈ ತಿರಸ್ಕಾರ ಭಾವನೆಗಳೇ ಹೆಣ್ಣು ಮಗುವಿನ ಮಾರಾಟಕ್ಕೂ ಮುಂದಾಗುವಂತೆ ಮಾಡಿದೆ. ಹೆಣ್ಣು ಮಗುವನ್ನು 'ಮದ್ಯಾಗ ಹುಂಡ್ಯಾ ಕೇಳ್ತಾರ' ಎನ್ನುವ ಮಾತು ಹೆಣ್ಣು ಜೀವ ಒಂದು ಜೀವವಾಗಿ ಅಥವಾ ಮನುಷ್ಯಳಾಗಿ ಕಾಣದೆ ಕೇವಲ ಮಾರಾಟದ ವಸ್ತುವಾಗಿ ಬಿಂಬಿತವಾಗಿರುವುದನ್ನು ಇಲ್ಲಿ ಕಾಣಬಹುದಾಗಿದೆ. ಹೆಣ್ಣಿಗೆ ಮದುವೆಯೇ ಮುಕ್ತಿಯೆಂದು ಭಾವಿಸಿರುವ ಈ ಪುರುಷ ಪ್ರಧಾನ ಸಮಾಜದಲ್ಲಿ ಅವಳನ್ನ ಮದುವೆಯ ನೆಪದಲ್ಲಿ ಮಾರಾಟಕ್ಕಿಟ್ಟು ವಸ್ತುವಂತೆ ಗ್ರಹಿಸಲಾಗುತ್ತಿದೆ. ಅಲ್ಲದೆಯೆ ಗಂಡು ಶ್ರೇಷ್ಠ ಹೆಣ್ಣು ಕನಿಷ್ಠ ಎಂಬುದನ್ನು ಮತ್ತಷ್ಟು ಗಟ್ಟಿಗೊಳಿಸುವ ಹುನ್ನಾರ ಇದಾಗಿದೆ ಎನ್ನುವುದನ್ನ ಕೆ.ನೀಲಾ ಅವರು ಕೇಸ್‌ಸ್ಟಡಿಯ ಮೂಲಕ ನಿರೂಪಿಸಿದ್ದಾರೆ.

ಬಡತನದ ಕಾರಣಕ್ಕೆ ಹೆತ್ತ ಎಳೆ ಕೂಸುಗಳನ್ನು ಮಾರಿ ಜೀವನ ನಡೆಸುವಂತಹ ಕೆಟ್ಟ ವ್ಯವಸ್ಥೆಯು ನಿರ್ಮಾಣವಾಗಿರುವುದು ಈ ಸಮಾಜದಲ್ಲಿನ ಆರ್ಥಿಕ ಅಸಮಾನತೆಗೆ ಹಿಡಿದ

ಕನ್ನಡಿಯಾಗಿದೆ. “ಭಾರತೀಯರ ಪುಣ್ಯ ಸ್ಥಳವಾದ ವಾರಣಾಸಿಯ ಶಿವಪುರದಲ್ಲಿ ಅಲ್ಲಿನ ಸರ್ಕಾರ ನಿರ್ವಹಿಸುವ ಬಾಲಕಿಯರ ರಕ್ಷಣಾ ಗೃಹಗಳ ಮುಖ್ಯಸ್ಥೆ ಶ್ಯಾಮಾಸಿಂಗ್ ಅಲ್ಲಿನ ಹೆಣ್ಣು ಮಕ್ಕಳನ್ನು ರಾಜಕಾರಣಿಗಳಿಗೆ, ಅಧಿಕಾರಿಗಳಿಗೆ ಸರಬರಾಜು ಮಾಡುವ ಕಾರ್ಯಕ್ಕೆಂದೇ ನೇಮಿಸಲ್ಪಟಂತೆ ವರ್ತಿಸುತ್ತಿರುವ ರೀತಿ ನಾಚಿಕೆಗೇಡಿನದು. ತಮ್ಮ ಮೇಲಾಗುವ ದೌರ್ಜನ್ಯವನ್ನು ಪ್ರತಿಭಟಿಸಿದ ಹೆಣ್ಣು ಮಕ್ಕಳಿಗೆ ಕಿರುಕುಳ ದೌರ್ಜನ್ಯ ಕೊನೆಗೆ ಸಾವು ಕಟ್ಟಿಟ್ಟ ಬುತ್ತಿ. ಹಲವಾರು ಕಾರಣಗಳಿಗಾಗಿ ನಿರಾಶ್ರಿತರಾಗಿ ಅಸಹಾಯಕ ಸ್ಥಿತಿಯಲ್ಲಿ ಈ ರಕ್ಷಣಾ ಗೃಹಗಳನ್ನು ಸೇರಿದ ಹೆಣ್ಣು ಮಕ್ಕಳ ಬದುಕು ಬೆಂಕಿಯಲ್ಲಿ ಬಾಳ ಬೇಕಾದ ಆತಂಕದ ಬದುಕು. ರಾಜ್ಯ ಸರ್ಕಾರದ ಮಹಿಳಾ ಕಲ್ಯಾಣ ಇಲಾಖೆಯೇ ನಡೆಸುವ ರಕ್ಷಣಾ ಗೃಹದಲ್ಲಿ ನಿರಂತರವಾಗಿ ನಡೆಯುತ್ತಾ ಬಂದ ಹೆಣ್ಣಿನ ಮಾರಾಟಕ್ಕೆ ಕುತ್ತು ಬಂದು ಅಪರಾಧಿಗಳು ಬೆಳಕಿಗೆ ಬಂದದ್ದು ಇತ್ತೀಚೆಗೆಯೇ.

ಕಳೆದ ಮೇ ತಿಂಗಳಲ್ಲಿ ಈ ಪಾಪಕೂಪದಿಂದ ತಪ್ಪಿಸಿಕೊಂಡು ಹೊರ ಬಂದ ಹದಿಮೂರು ವರ್ಷದ ಬಾಲೆ ರೂಬಿಸಿಂಗ್ ಶಿವಪುರದ ಪೋಲಿಸ್ ಠಾಣೆಗೆ ಬಂದು ತನ್ನ ಗೋಳಿನ ಕಥೆಯನ್ನು ಹೇಳಿಕೊಂಡಾಗ ರಕ್ಷಣಾ ಗೃಹದ ಎಲ್ಲ ಕೊಳಕು ದುರ್ನಾತವು ಹೊರಬಿತ್ತು. ಕೂಡಲೇ ಕಾರ್ಯಾಚರಣೆ ನಡೆಸಿದ ಪೋಲಿಸರು ಇದುವರೆಗೂ ಹನ್ನೆರಡು ಮಂದಿಯನ್ನು ಬಂಧಿಸಿದ್ದಾರೆ. ಅವರಲ್ಲಿ ಆ ರಕ್ಷಣಾ ಗೃಹದ ವಾರ್ಡ್‌ನ್ ಶ್ಯಾಮಸಿಂಗ್ ಅವಳ ಮಗ ಯಶವಂತ ಸಿಂಗ್, ವಿಫುಲ್ ಸಿಂಗ್ (ಸ್ಥಳೀಯ ಬಿಜೆಪಿ ಯುವ ನಾಯಕ) ಶಹೀದ್ ಪರ್ವಿಜ್ (ಸ್ಥಳೀಯ ಕಾಂಗ್ರೇಸ್ ಮುಖಂಡ) ಮತ್ತು ಎಸ್.ಕೆ ಮಿಶ್ರಾ (ಜಿಲ್ಲಾ ಹಿರಿಯ ಅಧಿಕಾರಿ) ಪ್ರಮುಖರು ಇನ್ನು ಕೆಲವು ರಾಜಕೀಯ ದುರೀಣರಿಗೆ ಅಲಹಬಾದ್ ಹೈಕೋರ್ಟ್ ಜಾಮೀನು ನೀಡಿ ಖುಲಾಸೆ ಮಾಡಿದೆ. ಈ ರಕ್ಷಣಾಗೃಹದ ಎಂಟು ಮಂದಿ ಮಹಿಳೆಯರಿಂದ ಪೋಲಿಸರು ಮಾಹಿತಿಗಳನ್ನು ಸಂಗ್ರಹಿಸಿದ್ದಾರೆ. ಹೇಳಿಕೆಗಳನ್ನು ಪಡೆದಿದ್ದಾರೆ. ಅವರು ನಿವೇದಿಸಿದ ಕತೆಯಂತೂ ಘೋರವಾಗಿದೆ. ಮತ್ತು ಈ ರಕ್ಷಣಾ ಗೃಹದ ಕಾರ್ಯವೈಖರಿಯ ಹಲವಾರು ಕ್ರೂರ ಸತ್ಯಗಳನ್ನು ಬಯಲು ಮಾಡುತ್ತದೆ. ಶಿವಪುರ ಗೋಡೆಗಳಲ್ಲಿ ‘ಸರ್ಕಾರ ನಡೆಸುತ್ತಿರುವ ವೇಶ್ಯಾವಾಟಿಕೆ’ ಎಂಬ ಪೋಸ್ಟರ್‌ಗಳು ರಾರಾಜಿಸುತ್ತಿವೆ.”[೧೫] ಬೇಲಿಯೇ ಎದ್ದು ಹೊಲ ಮೇಯ್ದ ಹಾಗಾಯಿತು. ರಕ್ಷಕರಾದವರೆ ಭಕ್ಷಕರಾದಾಗ ರಕ್ಷಣೆ ಪಡೆಯುವವರ ಸ್ಥಿತಿ ಹೇಳತೀರದು.

ಮಹಿಳೆಯನ್ನು ದೈವತ್ವಕ್ಕೇರಿಸಿ ಪೂಜಿಸುವ ಸಂಸ್ಕೃತಿ ನಮ್ಮದಾದರೂ ಮಹಿಳೆಯರ ಬದುಕಿನಲ್ಲಿ ಪರಿಸ್ಥಿತಿ ಆ ರೀತಿಯಾಗಿಲ್ಲ. ಪುರುಷ ಪ್ರಧಾನ ಸಮಾಜದಲ್ಲಿ ಘನತೆಯಾದ ಬದುಕು ಕಟ್ಟಿಕೊಳ್ಳುವ ಮಹಿಳೆಯರನ್ನು ಒಂದು ಶಾಪವೆಂಬಂತೆ ಬಿಂಬಿಸಲಾಗುತ್ತದೆ. ಅನಾಥರು ದುರ್ಬಲರನ್ನು ಗೌರವಯುತವಾಗಿ ನೋಡುವುದು ನಮ್ಮ ಸಂಸ್ಕೃತಿಯಾಗಿದೆ. ಆದರೆ ಮಹಿಳೆಯನ್ನ ಕೇವಲ ಭೋಗದ ವಸ್ತುವನ್ನಾಗಿಯೇ ಇಂದಿಗೂ ನೋಡಲಾಗುತ್ತಿದೆ. ಪುಣ್ಯ ಸ್ಥಳ ಎಂದು ಕರೆಸಿಕೊಂಡ ವಾರಣಾಸಿಯಲ್ಲಿ ಇಂತಹ ಘಟನೆಗಳು ನಡೆಯುತ್ತಿರುವುದು ಈ ಸಂಸ್ಕೃತಿಯು ಅದೋಗತಿಯ ಜಾಡು ಹಿಡಿಯುತ್ತಿರುವುದು ಸ್ಪಷ್ಟವಾಗುತ್ತಿದೆ. ಹೆಣ್ಣು ಮಕ್ಕಳನ್ನು ಮಾರಾಟ ಮಾಡುವುದು ಎಂತಹ ಹೇಯ ಕೃತ್ಯವಾಗಿದೆ.

ಸರ್ಕಾರವೇ ನಡೆಸುತ್ತಿದ್ದ ಬಾಲಕಿಯರ ರಕ್ಷಣಾ ಗೃಹಗಳು ಅದೆಷ್ಟು ಕೊಳಕು ಮನಸ್ಸಿಂದ ತುಂಬಿತ್ತೊ. ಅಲ್ಲಿನ ವಾರ್ಡನ್ ಆ ಹೆಣ್ಣು ಮಕ್ಕಳನ್ನು ಮಾರಾಟ ಮಾಡುವ ನೀಚತನಕ್ಕೆ ಇಳಿದಿದ್ದಾರೆ ಎಂದರೆ ಹೆಣ್ಣು ಮಕ್ಕಳ ರಕ್ಷಣೆಯು ಕನಸಿನ ಮಾತೇ ಸರಿ. ಸರ್ಕಾರವೇ ವೇಶ್ಯವಾಟಿಕೆ ನಡೆಸುತ್ತಿದೆ ಎಂದರೆ ಮಕ್ಕಳ ರಕ್ಷಣೆ ಮಾಡುವುದಾದರು ಹೇಗೆ? ತಪ್ಪು ಮಾಡಿದವರಿಗೆ ಕಾನೂನಿಂದ ತಪ್ಪಿಸಿಕೊಳ್ಳುವುದೂ ತುಂಬಾ ಸುಲಭವೆನಿಸಿದೆ. ರಾಜಕೀಯ ನಾಯಕರುಗಳು ಎಂತಹ ದೊಡ್ಡ ಅಪರಾಧ ಮಾಡಿದರೂ ಇಂತಹ ಪ್ರಕರಣಗಳಲ್ಲಿ ಜಾಮೀನಿನಿಂದಾಗಿ ಖುಲಾಸೆಯಾಗುವುದು ನ್ಯಾಯಾಂಗ ವ್ಯವಸ್ಥೆಯಲ್ಲಿ ಆಗುತ್ತಿರುವ ಲೋಪವನ್ನು ಹೇಳುತ್ತಿದ್ದಾರೆ.

"೧೯೮೭ ಸೆಪ್ಟಂಬರ್ ೪ ರಂದು ದೇವ್ರೋರಾಲಾದಲ್ಲಿ ನಡೆದ ರೂಪ್ ಕನ್ವರ್‌ಳ 'ಸತಿ'ಯ ಘಟನೆ ಯಾವ ಜಾತಿಯ ಯಾವ ವರ್ಗದ ಜನರೇ ಆಗಲಿ ಮಾನವೀಯತೆಯುಳ್ಳ ಎಲ್ಲ ಮನುಷ್ಯ ಪ್ರಾಣಿಯ ರಕ್ತವನ್ನು ಕುದಿಸುವಂತಹದು. ಇಪ್ಪತ್ತೊಂದನೆಯ ಶತಮಾನವನ್ನು ಪ್ರವೇಶಿಸುತ್ತಿದೆ ಎಂದು ನಮ್ಮ ವೈಜ್ಞಾನಿಕ ಸಾಧನೆಯ ಬಗ್ಗೆ ಹೆಮ್ಮೆಪಟ್ಟು ಕೊಳ್ಳುವ ಭಾರತಿಯರೆಲ್ಲರೂ ತಲೆ ತಗ್ಗಿಸುವಂತಹ ಘಟನೆ ಮನುಷ್ಯ ಮನುಷ್ಯನ ರಕ್ತವನ್ನು ಬಸಿದು ಜೀವಿಸುವಂತಹ ನರಮಾಂಸ ಭಕ್ಷಕರ ಕಾಲಕ್ಕೂ ಹಿಂದೆ ಹೆಜ್ಜೆ ಇಟ್ಟ ನಮ್ಮ ಅನಾಗರೀಕ ನಡವಳಿಕೆಯ ಪ್ರದರ್ಶನ ಇದು. ಈ ಸಂದರ್ಭದಲ್ಲಿ ಒಂದು ವಿಷಯ ನೆನಪಿಗೆ ಬರುತ್ತದೆ. ಟಿ.ವಿ.ಯಲ್ಲಿ ಈ ವಿಷಯವನ್ನು ಕುರಿತಂತೆ ಸಂದರ್ಶನವೊಂದರಲ್ಲಿ ನಮ್ಮ ಕೇಂದ್ರದ ಮಹಿಳಾ ಮಂತ್ರಿಯವರು ಸಂದರ್ಶಕರಿಗೆ ಒಂದು ಮಾತು ಹೇಳಿದರು. 'ಕನಾಟ್ ಪ್ಲೇಸ್‌ನಲ್ಲಿ ಒಬ್ಬ ಪುರುಷನ ಕೊಲೆ ನಡೆದರೆ ಅವನ್ನು ಕೊಲೆಯೆನ್ನುತ್ತೀರಿ ಆದರೆ ದೇವ್ರೋರಾಲಾದ ಘಟನೆಯನ್ನು ಕೊಲೆಯೆಂದೇಕೆ ಪರಿಗಣಿಸುವುದಿಲ್ಲ?' ಇವೆರಡೂ ಕೊಲೆಯೆನ್ನುವುದಕ್ಕೆ ಏನೂ ಅಭ್ಯಂತರವಿಲ್ಲ. ಆದರೆ ರೂಪ್ ಕನ್ವರ್‌ಳ ಸಾವು ಕೇವಲ ಕೊಲೆಯಷ್ಟೇ ಆಗಿದ್ದಿದ್ದರೆ ಪರಿಸ್ಥಿತಿ ಬೇರೆಯೇ ಇತ್ತು. ಈಗಿರುವಷ್ಟು ವಾದ ವಿವಾದಗಳು ರಾಜಕೀಯ ಅಲ್ಲೋಲಕಲ್ಲೋಲಗಳು ಇರುತ್ತಿರಲಿಲ್ಲ. ಅಷ್ಟೇ ಅಲ್ಲ ಈ ವಿಷಯವನ್ನು ಇಲ್ಲಿ ಪ್ರಸ್ತಾಪಿಸುವ ಅವಶ್ಯಕತೆಯೂ ಕಂಡು ಬರುತ್ತಿರಲಿಲ್ಲ. ಈ ಪದ್ಧತಿಯ ಉಗಮ ಇತಿಹಾಸಗಳು ಶಾಸ್ತ್ರಾಧಾರಗಳು ಏನೇ ಇರಲಿ ಅದು ಈ ಸಮಕಾಲೀನ ಜಗತ್ತಿನಲ್ಲಿ ಎತ್ತುವ ಪ್ರಶ್ನೆಗಳು ಮುಖ್ಯ. ಈ ಪದ್ಧತಿ ಯಾವ ಸಮಯದಲ್ಲಿ ಯಾವ ಸಂದರ್ಭದಲ್ಲಿ ಅಗತ್ಯವಾಗಿ ಹುಟ್ಟಿಕೊಂಡಿತು ಎಂಬ ಚರ್ಚೆಯು ಈಗ ತೀರ ಅನಾವಶ್ಯಕ. ಮೃತ್ಯುವನ್ನು ಆರಾಧಿಸುವ ಅದು ಅಂಗೀಕಾರಾರ್ಹ ವಿಷಯವೇನಲ್ಲ ; ಬದಲಿಗೆ ಅದೋಗತಿಗಿಳಿದಿರುವ ಈ ಧರ್ಮಾಧಿಪತಿಗಳ ನೀಚತನಕ್ಕೆ ಸಾಕ್ಷಿ"[೧೬] ದೇಶದಲ್ಲಿನ ಕೆಲವು ಅನಿಷ್ಟ ಪದ್ಧತಿಯನ್ನು ತೊಡೆದು ಹಾಕುವಲ್ಲಿ ಬ್ರಿಟೀಷ್ ಸರ್ಕಾರದ ಪಾತ್ರ ಪ್ರಮುಖವಾದದ್ದು. ಸತಿ, ಬಾಲ್ಯವಿವಾಹ, ಇನ್ನು ಹಲವಾರು ಪದ್ಧತಿಗಳನ್ನು ಸ್ವಾತಂತ್ರ್ಯ ಪೂರ್ವ ಕಾಲದಲ್ಲೇ ತೊಡೆದು ಹಾಕುವಲ್ಲಿ ಸಫಲರಾದರು. ಆದರೆ ಇಪ್ಪತ್ತೊಂದನೆಯ ಶತಮಾನದ ಕಾಲದಲ್ಲಿದ್ದರೂ ಸಹಿತ ಮುಂದುವರೆಯುತ್ತಿರುವ ಮತ್ತು ಈ ಕಾಲದಲ್ಲಿಯೂ 'ಸತಿ' ಹೋಗುವ ಪದ್ಧತಿಯ ಆಚರಣೆಯನ್ನು ಮುಂದುವರೆಸಿಕೊಂಡು ಬರುತ್ತಿರುವುದು ನಿಜವಾಗಿಯೂ ಸಾಂಸ್ಕೃತಿಕವಾಗಿ ಅಧೋಗತಿಯತ್ತ ಸಾಗುತ್ತಿರುವುದು ತಿಳಿಯುತ್ತದೆ.

ವೈದಿಕಶಾಹಿ, ಪುರೋಹಿತಶಾಹಿ, ಸತಿ ನಿಯಮಗಳು ಮಹಿಳೆಯನ್ನು ಶೋಷಿಸುವಲ್ಲಿ ತಮ್ಮ ಪ್ರಾಬಲ್ಯವನ್ನು ಉಳಿಸಿ ಬೆಳಸಿಕೊಂಡೇ ಬರುತ್ತಿರುವುದು ಈ ಘಟನೆಯಿಂದ ತಿಳಿಯುತ್ತದೆ. ವಿಜ್ಞಾನವನ್ನು ಒಪ್ಪಿ ಹಾಗೂ ಅಪ್ಪಿಕೊಂಡು ಸಾಗುತ್ತಿರುವ ಕಾಲದಲ್ಲಿದ್ದರೂ, ಧರ್ಮದ ಅಂಧಕಾರ ಮೂಢನಂಬಿಕೆಗಳಿಂದ ಮಹಿಳೆಗೆ ಮುಕ್ತಿ ದೊರೆಯದಿರುವುದು ಆತಂಕಕಾರಿಯಾಗಿದೆ. ರಾಜಕೀಯವಾಗಿ ಇಂತಹ ಮೂಢನಂಬಿಕೆಗಳನ್ನು ಸಂಪೂರ್ಣವಾಗಿ ನಿಷೇಧ ಮಾಡುವಲ್ಲಿ ಸರ್ಕಾರಗಳು ವಿಫಲವಾಗಿರುವುದೇ ಇದಕ್ಕೆ ಮತ್ತೊಂದಿಷ್ಟು ಪುಷ್ಟಿ ನೀಡಿದಂತಾಗಿದೆ. ಒಂದು ಜೀವವನ್ನ ಜೀವಂತವಾಗಿ ದೈಹಿಸಿ ಸ್ವರ್ಗದ ಕಲ್ಪನೆಯನ್ನು ಕಟ್ಟಿ ಅವಳಿಗೆ ದೈವತ್ವಕ್ಕೇರಿಸಿ ಸಂಭ್ರಮಿಸುವುದಾದರೆ, ಮಹಿಳೆಗೆ ಇಂತಹ ಹಿಂಸೆಯ ಜೀವನ ಸಾಗಿಸುವುದು ಸಾಧ್ಯವಾಗುವುದಾದರು ಹೇಗೆ? ಪಾತಿವ್ರತ್ಯಕ್ಕೆ ಹೆಚ್ಚು ಒತ್ತು ಕೊಡುವ ಈ ಪುರುಷ ಪ್ರಧಾನ ಸಮಾಜ ಗಂಡನಿಲ್ಲದೆ ಸ್ತ್ರೀಯನ್ನು ನೋಡುವ ರೀತಿಯೆ ಇಡೀ ಸಮಾಜವು ತಲೆ ತಗ್ಗಿಸುವಂತಹದ್ದು. ತಮ್ಮ ವಿಚಾರಗಳ ಮೂಲಕ ಧಾರ್ಮಿಕತೆಯಲ್ಲಿನ ಸಂಪ್ರದಾಯಗಳನ್ನು ಪ್ರಶ್ನಿಸಿದ್ದಾರೆ.

ಕೋಮುವಾದ ಮತ್ತು ವೈದಿಕಶಾಹಿ ವ್ಯವಸ್ಥೆಯು ಕೋಮು ಸಾಮರಸ್ಯತೆಯನ್ನು ಒಡೆದು ಆಳುವುದರ ಮೂಲಕ ಮತಧರ್ಮಗಳ ನಡುವೆಯೆ ಒಡಕನ್ನು ಸೃಷ್ಟಿ ಮಾಡಿದರೂ ಸಹ ಸೌಹಾರ್ಧತೆಯಿಂದ ಬದುಕು ಸಾಗಿಸಿದ ದೇಶ ನಮ್ಮದು. "ಮತದಿಂದ ಮತಾಂಧತೆ, ಮತಾಂಧತೆಯಿಂದ ಕೋಮುವಾದ ಬೆಳೆಯುತ್ತದೆ. ಧರ್ಮಗಳು ಚಲನಶೀಲತೆಯನ್ನು ಕಳೆದುಕೊಂಡು ಕೋಮುವಾದಕ್ಕೆ ಜನ್ಮ ನೀಡುತ್ತವೆ. ಆಗ ಮುಸ್ಲಿಮರು ಗೋಮಾತೆಯ ಭಕ್ಷಕರು, ಕ್ರಿಶ್ಚಿಯನ್ನರು ಮತಾಂತರಕಾರಿಗಳು ಎಂದು ಕೋಮುಪ್ರಜ್ಞೆ ಬಡಿದೆಬ್ಬಿಸುತ್ತಾರೆ. ವೈದಿಕರು ಮುಂಬೈ ಗಲಭೆಗಳಲ್ಲಿ ಬಡ ಮುಸ್ಲಿಮರು ಹೆಚ್ಚಾಗಿ ಸಾವು ನೋವು ಅನುಭವಿಸುತ್ತಿರುವಾಗ ದಿವಂಗತ ಬಲರಾಜ ಸಾಹ್ನಿಯವರು ಬಡ ಮುಸ್ಲಿಮರ ಮನೆಯಲ್ಲಿಯೇ ಹೋಗಿ ತಂಗಿದ್ದರು. ಭಿವಂಡಿಯಲ್ಲಿ ಗಲಭೆ ನಡೆದಾಗ ಮುಸ್ಲಿಮರನ್ನು ಕೊಲ್ಲುವವರು ನನ್ನನ್ನೂ ಕೊಲ್ಲಲಿ ಎಂದು ಅಡ್ಡ ಗೋಡೆಯಾದರು. ಹಿಂದುಗಳನ್ನು ಕೊಲ್ಲುವ ಮುಸ್ಲಿಮರೇ ಇಸ್ಲಾಂ ಧರ್ಮದಲ್ಲಿ. ಅದೇ ರೀತಿ ಮುಸ್ಲಿಮರನ್ನು ಕೊಲ್ಲುವ ಹಿಂದುಗಳು ಹಿಂದು ಧರ್ಮಾನುಯಾಯಿಗಳಲ್ಲ. ಅಲ್ಲಿ ಬಲರಾಜ್ ಸಾಹ್ನಿರಂತವರೂ ಇದ್ದಾರೆ. ಸುಳ್ಯಾದಲ್ಲಿ ಮರಿಯಾಳ ಮನೆಗೆ ಕೊಲೆಗಡುಕರು ಕೊಳ್ಳಿಯಿಡಲೂ ಬಂದಾಗ ನೆರೆಮನೆಯ ಬ್ರಾಹ್ಮಣ ಹೆಂಗಸೋರ್ವಳು ಅವರ ಜೀವ ರಕ್ಷಿಸುತ್ತಾಳೆ. ದೆಹಲಿಯ ಕೋಮುಗಲಭೆಗಳಲ್ಲಿ ಮುಸ್ಲಿಂ ಸೋದರಿಯೊಬ್ಬಳು ತನ್ನ ಹಿಂದೂ ಸೋದರಿಗೆ ಬುರ್ಖಾ ತೊಡಿಸಿ ಕುತ್ತಿನಿಂದ ಪಾರು ಮಾಡಿದ ಘಟನೆಗಳಿವೆ. ಹೈದರಾಬಾದಿನ ಚಾರ್‌ಮೀನಾರ್ ಬಳಿಯ ಕೋಮುಗಲಭೆಯಲ್ಲಿ ಹಿಂದೂ ಪೋಲಿಸ್ ಪೇದೆಯೊಬ್ಬ ಎರಡು ಮುಸ್ಲಿಂ ಮಕ್ಕಳ ಜೀವ ರಕ್ಷಿಸಿದ ಘಟನೆಗಳಿವೆ"[೧೭] ಮೇಲು ನೋಟಕ್ಕೆ ಕೋಮುವಾದಿ ಶಕ್ತಿಗೆ ಜಯ ಎಂಬಂತೆ ಕಂಡರೂ ಕೊನೆಯಲ್ಲಿ ಕೂಡಿ ಬಾಳುವ ಸೌಹಾರ್ದ ಸಂಸ್ಕೃತಿಗೆ ಜಯ ಸಿಗುವುದು. ಈ ದೇಶದಲ್ಲಿ ಕೋಮುವಾದಿ ಶಕ್ತಿಯಿಂದ ಕೊಲ್ಲುವ ಕೈಗಳು ನೂರಾದರೆ ಸಾಮರಸ್ಯದಿಂದ ಬದುಕುವ ಕೈಗಳು ಸಾವಿರಾರು. ತಲೆತಲಾಂತರದಿಂದ

ಸಾಮರಸ್ಯ ಸಹಬಾಳ್ವೆಯಿಂದ ಕೂಡಿ ಬೆಳೆದು ಬಂದದ್ದು ನಮ್ಮ ನಾಡು, ದೇಶ ಇಲ್ಲಿ ಕೋಮುವಾದದ ವಿಷ ಬೀಜ ಬಿತ್ತಿ ಒಡಕು ತರುವ ಪ್ರಯತ್ನಗಳು ನಡೆಯುತ್ತಲೇ ಬಂದಿದೆ. ಆದರು ಎಲ್ಲರೂ ಕೂಡಿ ಬದುಕುವ ಶಕ್ತಿಯನ್ನು ಕಳೆದು ಕೊಳ್ಳದೆ ಉಳಿಸಿಕೊಳ್ಳುವುದರ ಜೊತೆಗೆ ಮುಂದುವರೆಸಿಕೊಂಡು ಬಂದಿರುವುದಕ್ಕೆ ಇತಿಹಾಸದಲ್ಲಿ ಹಲವು ನಿದರ್ಶನಗಳು ನಮ್ಮ ಕಣ್ಣ ಮುಂದೆ ಕಾಣಸಿಗುತ್ತವೆ.

ಕೋಮುವಾದ ಎಂಬುದು ಒಂದು ರೀತಿಯಲ್ಲಿ ಎರಡು ಅಂಚಿನ ಕತ್ತಿಯಂತೆ ಒಂದು ಕಡೆ ಮಹಿಳೆಯರ ಶಕ್ತಿಯನ್ನು ಕುಂದಿಸುತ್ತದೆ ಮತ್ತೊಂದೆಡೆ ಜಾತಿ ಧರ್ಮಗಳಾಗಿ ವಿಭಾಗ ಮಾಡಿ ಒಡೆದು ಹಾಕುತ್ತದೆ. ಅಲ್ಲದೆಯೇ ಅವಳ ಸ್ವಾತಂತ್ರ್ಯ, ಹಕ್ಕುಗಳನ್ನು ಕಿತ್ತುಕೊಳ್ಳುತ್ತದೆ. ಮಹಿಳೆಯ ಶೋಷಣೆಗಳನ್ನು ಸಮರ್ಥಿಸುತ್ತದೆ. ಮಹಿಳೆಯು ಬದುಕುವ ಹಾದಿಯನ್ನೇ ದಿಕ್ಕು ತಪ್ಪಿಸುತ್ತದೆ. ತನ್ನ ಜೀವಿತಾವಧಿಯ ಕೊನೆಯ ಕ್ಷಣದವರೆಗೂ ಪುರುಷ ಪ್ರಧಾನ ಸಮಾಜದ ನೆರಳಲ್ಲಿಯೇ ಬದುಕುವಂತೆ ಮಾಡುತ್ತದೆ. "ಗರ್ಭಿಣಿ ಹೆಣ್ಣಿನ ಹೊಟ್ಟೆ ಸೀಳಿ ಆ ಮಗುವನ್ನು ತ್ರಿಶೂಲದ ತುದಿಯಿಂದ ಚುಚ್ಚಿ ಎತ್ತಿ ಬೆಂಕಿಗೆಸೆದಂತಹ ಘಟನೆ ಬೇರೆ ಯಾವ ದೇಶದಲ್ಲಿ ನಡೆದಿದೆ? ಹಾಗೆಯ ಹಾಡು ಹಗಲಲ್ಲೇ ನೂರಾರು ಜನರು ನೋಡುತ್ತಿದ್ದಂತೆಯೇ ಕ್ರೈಸ್ತ ಸನ್ಯಾಸಿಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ ಘಟನೆ ಕೂಡ ಬೇರೆ ಯಾವ ದೇಶದಲ್ಲಿ ನಡೆದಿದೆ?"[೧೮] ಯಾವುದೇ ಒಂದು ಘಟನೆ ನಡೆದರೆ ಅದಕ್ಕೆ ಮೊದಲು ಬಲಿಪಶುವಾಗುವವಳು ಮಹಿಳೆಯೆ, ಕೂಮುವಾದದ ಕ್ರೌರ್ಯದ ದಳ್ಳುರಿಗೆ ಬಲಿಯಾದ ಘಟನೆಯನ್ನು ಸಮರ್ಥಿಸಿಕೊಂಡ ಪ್ರಸಿದ್ಧ ಲೇಖಕ/ ಸಾಹಿತಿ ಅವರ ವಿಕೃತ ಮನಸ್ಥಿತಿಗೆ ಲೇಖಕಿಯು ಮೇಲಿನಂತೆ ಪ್ರಶ್ನಿಸಿದ್ದಾರೆ.

"ಅಥಣಿ ತಾಲ್ಲೂಕಿನ ತೇಲಸಂಗ ಎಂಬ ಊರಿನಲ್ಲಿ ಬಂಡೆದ್ದವರಂತೆ ಬಂದು ತಮ್ಮ ಬದುಕನ್ನು ಮೂರಾಬಟ್ಟೆ ಮಾಡಿದ ಪೆಗ್ ಬಾರ್‌ಗೆ ಬೆಂಕಿಹಚ್ಚಿದ್ದಾರೆ, ಕಲ್ಲು ತೂರಿದ್ದಾರೆ, ಬೆಂಕಿ ನಂದಿಸಲು ಬಂದ ಅಗ್ನಿಶಾಮಕ ವಾಹನದ ಗಾಡಿಗೂ ಕಲ್ಲು ತೂರಿ 'ಯಾರಾದರೂ ಬೆಂಕಿ ನಂದಿಸಲು ಯತ್ನಿಸಿದರೆ ನಾವೇ ಬೆಂಕಿ ಹಚ್ಚಿಕೊಂಡು ಸಾಯುತ್ತೇವೆ' ಎಂದು ಕೂಗಿದ್ದಾರೆ. ಮಾಧ್ಯಮ ಪ್ರತಿನಿಧಿಗಳ ಮುಂದೆ ಕೊರಳಿನ ಗುಳದಾಳಿ ಹಿಡಿದು 'ಇದೊಂದ ... ಉಳಿದೈತೆ, ಇದನ್ನಾರ ಉಳಸ್ಕಳಾಣೋ ಬ್ಯಾಡೋ ಹೇಳ್ರಿ ಅಂತ ನಿಂತಿದ್ದಾರೆ. ಅವರ ಕಣ್ಣುಗಳು ನೀರನ್ನು ಎಂದೋ ಅರಗಿಸಿ ಕೊಂಡಿವೆ. ಕಣ್ಣಿನಿಂದ ಸುಡು ಸಂಕಟ ಸುರಿಯುತ್ತಿದೆ. ಅಮ್ಮಂದಿರ ಅಕ್ಕ ಪಕ್ಕ ಮುಕುರಿಕೊಂಡು ಪುಟ್ಟ ಮಕ್ಕಳ ಮುಖ ನೋವಿನ ಜೀತದ ಮನೆಯಂತಿದೆ. ಅವರ ಕಣ್ಬೆಳಕು ನಂದಿದೆ. ಈ ಸಾರಾಯಿ ಅಂಗಡಿಗಳು ಪೆಗ್‌ಬಾರ್‌ಗಳು ಸಣ್ಣ ಕಂದಮ್ಮಗಳ ಕವಡೀಯ ಜೋಮಾಲೆ ಹಾಕಿಕೊಂಡು ಕುಣಿಯುತ್ತಿವೆ. ನೋವು ರೋಷಗಳು ಬೆರೆತ ಅವರ ಮುಖಗಳಲ್ಲಿ ಕಿರುಗೂರಿನ ಗಯ್ಯಾಳಿಯರೇ ಇದ್ದರು ಅದೇನು ಸಾಂಕೇತಿಕ ಮುಷ್ಕರವಾಗಿರಲಿಲ್ಲ ಕಲ್ಲು, ಸೀಮೆಯೆಣ್ಣೆ ಕಟ್ಟಿಕೊಂಡು 'ಒಂದ ನಾವಿರಬೇಕು, ಇಲ್ಲಾ ಈ ಬಾರ್ ಇರಬೇಕು' ಅಂತ ದೃಢ ಚಿತ್ತದಿಂದಲೇ ಬಂದಿದ್ದರು ಕತ್ತಲಾಯಿತೆಂದು ಮನೆಯ ಕಡೆ ಹೊರಟವರ ಕಾಲುಗಳಲ್ಲಿ ಮುಂಬರುವ ನೂರು ಪ್ರಶ್ನೆಗಳನ್ನು ಎದುರಿಸುತ್ತೇವೆಂಬ ಕೆಚ್ಚಿತ್ತು. ಇದು ಹೀಗೆ ಮುಗಿದು ಬಿಡುವ ಕಥೆಯಲ್ಲ ಎಂಬ

ಅರಿವೂ ಇತ್ತು”[೧೯] ಸಾರಾಯಿಯಿಂದ ಬಡ ಕುಟುಂಬಗಳು ಬೀದಿ ಪಾಲಾಗಿ ಹೋಗುತ್ತಿವೆ. ಅಲ್ಲದೆಯೇ ಕುಟುಂಬ ನಿರ್ವಹಣೆಯ ಜವಾಬ್ದಾರಿಯಿಂದ ದೂರ ಉಳಿಯುವಂತೆ ಸಾರಾಯಿ ಮತ್ತು ಪೆಗ್‌ಬಾರ್‌ಗಳು ಬಡಕುಟುಂಬ ಕಣ್ಣೀರಿನಲ್ಲಿ ತೇಲುವಂತೆ ಮಾಡುತ್ತಿವೆ. ಎಷ್ಟು ದುಡಿದರೂ ನೆಮ್ಮದಿಯಿಂದ ಒಂದು ತುತ್ತು ಉಣ್ಣಲು ಪರದಾಡುವಂತೆ ಮಾಡಿದೆ. ಹಲವಾರು ಕುಟುಂಬಗಳಲ್ಲಿ ಮಹಿಳೆಯರು ದುಡಿವ ದುಡ್ಡೆಲ್ಲವೂ ಸಾರಾಯಿ ಅಂಗಡಿಯ ಪಾಲಾಗಿ ಸಾರಾಯಿ ಮಾರುವವನನ್ನು ಉದ್ಧರಿಸುತ್ತಿವೆ. ತಾಳ್ಮೆಗೂ ಒಂದಿಷ್ಟು ಮಿತಿ ಎಂಬುದು ಇರುತ್ತದೆ. ತಾಳ್ಮೆಯಿಂದ ಗಂಡಂದಿರ ಕಿರುಕುಳವನ್ನು ಸಹಿಸಿಕೊಂಡವರ ಬದುಕು ಛಿದ್ರಛಿದ್ರ ಮಾಡಿರುವುದನ್ನು ಅರಿತ ತೇಲಸಂಗ ಗ್ರಾಮದ ಎಲ್ಲಾ ಮಕ್ಕಳು ಮತ್ತು ಮಹಿಳೆಯರ ಆದಿಯಾಗಿ ತಮ್ಮೂರಿನಲ್ಲಿದ್ದ ಪೆಗ್‌ಬಾರ್‌ನ್ನು ಸುಟ್ಟುಹಾಕಲು ಮುಂದಾಗಿದ್ದರಲ್ಲಿ ಅಚ್ಚರಿ ಪಡುವುದೇನಿಲ್ಲ.

ತಮ್ಮ ಕುಟುಂಬ ಮತ್ತು ಗಂಡಂದಿರನ್ನು ಉಳಿಸಿಕೊಳ್ಳಲು ಅವರು ಅವರ ಕೈಗಳಿಗೆ ಮನಸ್ಸಿಗೆ ಧೈರ್ಯ ಹಾಗೂ ಶಕ್ತಿಯನ್ನು ತಂದುಕೊಳ್ಳಲೇ ಬೇಕಾಯಿತು. ಶಾಂತವಾಗಿ ಪರಿಹಾರ ಕಂಡುಕೊಳ್ಳಲು ಸಾಧ್ಯವಿಲ್ಲವೆಂದು ತಿಳಿದೇ ಇದ್ದವರು ಉಗ್ರ ಸ್ವರೂಪವನ್ನು ತಾಳಲೇ ಬೇಕಾಯಿತು. ಮುಂದೆ ಬರುವಂತಹ ಎಲ್ಲಾ ಅವಘಡಗಳನ್ನು ಎದುರಿಸಲು ಸಿದ್ಧರಾಗಿಯೇ ಪೆಗ್‌ಬಾರ್ ಸುಡಲು ಮುಂದಾಗಿದ್ದರು. ತಮ್ಮ ಸಂಸಾರವನ್ನು ಉಳಿಸಿಕೊಳ್ಳುವ ತವಕದಿಂದಾಗಿಯೇ ಸಾರಾಯಿ ವಿರುದ್ಧ ಸಮರ ಸಾರಿದ್ದರು. ದೇಶದ ಉದ್ದಗಲಕ್ಕೂ ಇದೇ ರೀತಿಯ ಹೋರಾಟಗಳು ನಡೆದಿವೆ. ಹಿಂದಿನ ಕಾಲದಿಂದ ಹಿಡಿದು ಇಂದಿನ ದಿನಮಾನಗಳ ವರೆಗೂ ಮುಂದುವರೆದುಕೊಂಡೇ ಸಾಗಿದೆ. ಇತ್ತೀಚೆಗೆ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಯಿಂದ ಮಹಿಳೆಯರು ಒಗ್ಗೂಡಿ ಸಾವಿರಾರು ಮಹಿಳೆಯರು ಪಾದಯಾತ್ರೆ ಮಾಡುವ ಮೂಲಕ ವಿಧಾನಸೌಧವನ್ನೂ ಮುತ್ತಿಗೆ ಹಾಕುವ ಮತ್ತು ಸರ್ಕಾರಕ್ಕೆ ಮನವರಿಕೆ ಮಾಡುವ ನಿರ್ಧಾರವನ್ನು ಕೈಗೊಂಡರು. ಆದರೆ ಇಂದಿನ ಆಡಳಿತ ಪಕ್ಷಗಳು ಸಾರಾಯಿ ನಿಷೇಧದ ವಿರುದ್ಧ ಸಮರ ಸಾರಿದ್ದ ಬಡ ಮಹಿಳೆಯರ ಹೋರಾಟವನ್ನು ಹತ್ತಿಕ್ಕಿದ್ದರ ಜೊತೆಗೆ ಸಾರಾಯಿ ನಿಷೇಧ ಮಾಡಲು ಸಾಧ್ಯವಿಲ್ಲವೆಂದು ಹಾರಿಕೆಯ ಉತ್ತರ ಕೊಟ್ಟು ಮಹಿಳೆಯರ ಹೋರಾಟಕ್ಕೆ ತಣ್ಣೀರನ್ನು ಎರಚಿಬಿಟ್ಟಿತು. ಯಾವುದೇ ಹೋರಾಟ ನಡೆಯಬೇಕಾದರೆ ಅದರ ಉದ್ದೇಶವು ಅವ್ಯವಸ್ಥೆಯಿಂದ ಮುಕ್ತಿಹೊಂದುವುದೇ ಆಗಿರುತ್ತದೆ. ಮಹಿಳಾ ಹೋರಾಟವು ಕೂಡ ತಮ್ಮ ಕುಟುಂಬಗಳ ಉಳಿವಿಗಾಗಿ, ಬದುಕಿನ ಭಾಗವಾಗಿ ಹೋರಾಟಕ್ಕೆ ಮುನ್ನಡಿ ಇಟ್ಟಿರುವುದನ್ನಿಲ್ಲಿ ವಿನಯಾ ಅವರು ಚರ್ಚಿಸಿದ್ದಾರೆ.

“ಕೊಡುಗು ಜಿಲ್ಲೆಯ ಶ್ರೀಮತಿ ಶಾರದಮ್ಮ ಅವರು ಸಹಾನುಭೂತಿ ಕಾರಣಗಳಿಗಾಗಿ ಉದ್ಯೋಗಾವಕಾಶ ಪಡೆಯಲು ಇರುವ ಅವಕಾಶವನ್ನು ಬಳಸಿಕೊಳ್ಳಲು ಪೋಲಿಸ್ ಇಲಾಖೆಗೆ ೧೯೮೯ ರಲ್ಲಿ ಅರ್ಜಿ ಸಲ್ಲಿಸಿದ್ದರು. ಸಬ್ ಇನ್ಸ್ಪೆಕ್ಟರ್ ಆಗಿದ್ದ ಅವರ ತಂದೆಯವರು ವೃತ್ತಿಯ ಮಧ್ಯದಲ್ಲಿದ್ದಾಗಲೇ ಗತಿಸಿದ್ದರಿಂದ ಅಡ್‌ಮಿನಿಸ್ಟ್ರೇಟಿವ್ ಟ್ರಿಬ್ಯೂನಲ್ ಆಕ್ಟ್ ೧೯೮೫ (೧೯ ನೇ ಸಕ್ಷನ್)ನಲ್ಲಿ ನಮೂದಿಸಿರುವ ಸೌಲಭ್ಯವನ್ನು ಪಡೆಯಲು ಅವರು ನಿರ್ಧರಿಸಿದರು. ವಿಧವೆ

ತಾಯಿ ಹಾಗೂ ಆರು ಮಕ್ಕಳ ಕುಟುಂಬದಲ್ಲಿ ಹಿರಿಯಳಾದ ಶಾರದಾರವರಿಗೆ ಈ ಉದ್ಯೋಗದ ಅವಶ್ಯಕತೆಯಿತ್ತು. ಅವರ ಅರ್ಜಿಯನ್ನು ಪರಿಗಣಿಸಿದ ಪೋಲಿಸ್ ಇಲಾಖೆಯು ಶ್ರೀಮತಿ ಶಾರದಾರವರನ್ನು ಉದ್ಯೋಗಕ್ಕೆ ಆಯ್ಕೆ ಮಾಡಿ ಕಾಯ್ದಿರಿಸುವಿಕೆಯ ಪಟ್ಟಿಯಲ್ಲಿ ಅವರ ಹೆಸರನ್ನು ಸೇರಿಸಿರುವುದು ಅವರಿಗೆ ಪತ್ರದ ಮುಖೇನ ತಿಳಿಸಿತು. ಈ ಮಧ್ಯೆ ಶಾರದಾರವರು ವಿವಾಹಿತರಾದರು ವಿವಾಹಿತ ಮಗಳಿಗೆ ಈ ಉದ್ಯೋಗದ ಸೌಲಭ್ಯವು ಕೊಡಬೇಕಿಲ್ಲವೆಂದು ಮನಗಂಡ ಇಲಾಖೆಯು ಶ್ರೀಮತಿ ಶಾರದಾರವರು ವಿವಾಹಿತರಾದ್ದರಿಂದ ಅವರಿಗೆ ನೌಕರಿ ದೊರೆಯುವುದಿಲ್ಲವೆಂಬುದನ್ನು ಪತ್ರದಲ್ಲಿ ತಿಳಿಸಿದರು. ವಿವಾಹಿತ ಮಗನಿಗೆ ಇರುವ ಸೌಲಭ್ಯ ವಿವಾಹಿತ ಮಗಳಿಗೆ ಏಕಿಲ್ಲ? ಎಂದು ನ್ಯಾಯಾಲಯದಲ್ಲಿ ಪ್ರಶ್ನಿಸಿದ ಶ್ರೀಮತಿ ಶಾರದಾರವರು ಅಡ್‌ಮಿನಿಸ್ಟ್ರೇಟಿವ್ ಟ್ರಿಬ್ಯೂನಲ್‌ನಲ್ಲಿ ತಮ್ಮ ಕಡೆಗೇ ನ್ಯಾಯ ದೊರಕಿಸಿಕೊಂಡರು. ಹಾಗೂ ಉದ್ಯೋಗ ದಕ್ಕಿಸಿಕೊಂಡರು."[೨೦] ಮಗ ಮತ್ತು ಮಗಳು ಎಂದೇ ತಾರತಮ್ಯ ನೀತಿಯನ್ನು ಅನುಸರಿಸಿಕೊಂಡೇ ಬಂದಿರುವ ಈ ಸಮಾಜದಲ್ಲಿ ಮಗಳು ಎಂದಿಗೂ ನಿರ್ಲಕ್ಷ್ಯದ ವಸ್ತುವೇ ಆಗಿಬಿಟ್ಟಿದ್ದಾಳೆ.

ಎಲ್ಲಾ ಕ್ಷೇತ್ರದಲ್ಲಿ ಗಂಡಿಗೆ ಯಾವಾಗಲು ಮೊದಲ ಮಾನ್ಯತೆಯನ್ನೇ ನೀಡಲಾಗುತ್ತದೆ. ಹಿಂದಿನ ಕಾಲದಿಂದಲೂ ಗಾದೆ ಮಾತುಗಳ ಮೂಲಕ ಒಪ್ಪಿಸಿಕೊಂಡು ಬಂದಿದೆ. 'ಕೊಟ್ಟ ಹೆಣ್ಣು ಕುಲಕೆ ಹೊರಗೆ' ಎಂಬುದನ್ನು ಮನನ ಮಾಡಿಸಿ ರೂಢಿಗತ ಮಾಡಿಕೊಂಡು ಬಂದಿದೆ. ಹೀಗಾಗಿ ಮದುವೆಯಾದ ಹೆಣ್ಣು ತನ್ನ ಕುಟುಂಬಕ್ಕಾಗಿ ತನ್ನ ಜೀವ ತೇದರೂ ಅವಳಿಗೆ ಗೌರವ ದೊರಕುವುದು ಅಷ್ಟಕ್ಕಷ್ಟೇ. ತನ್ನ ತಂದೆಯ ಸಾವಿನ ನಂತರ ಸಹಾನುಭೂತಿಪರ ಕಾರಣಗಳಿಗಾಗಿ ಉದ್ಯೋಗಾವಕಾಶವನ್ನು ಪಡೆಯುವಲ್ಲಿಯೂ ಸಹ ಕಾನೂನಿನ ಮೊರೆ ಹೋಗಿಯೇ ಉದ್ಯೋಗ ಪಡೆಯಬೇಕಾದ ಸ್ಥಿತಿಯನ್ನು ವಿವರಿಸಲಾಗಿದೆ.

ಮಹಿಳೆಯು ಸಹಾನುಭೂತಿಪರ ಉದ್ಯೋಗವನ್ನು ಪಡೆಯ ಬೇಕಾದರೆ ಆಕೆ ಅವಿವಾಹಿತಳಾಗಿಯೇ ಉಳಿಯಬೇಕೆ? ಹಾಗಾದರೆ ಅವಳ ವೈಯಕ್ತಿಕ ಜೀವನಕ್ಕೆ ಯಾವುದೇ ರೀತಿಯಾದಂತಹ ಬೆಲೆಯಿಲ್ಲ ಎಂದಾಯಿತಲ್ಲವೆ. ಹೆಣ್ಣು ಮದುವೆಯಾದ ಮಾತ್ರಕ್ಕೆ ಇಂತಹ ಉದ್ಯೋಗಾವಕಾಶಕ್ಕೆ ಅನರ್ಹಳೆಂದಾದರೆ, ಪುರುಷ ಈ ಉದ್ಯೋಗಕ್ಕೆ ಅರ್ಹನಾಗಲು ಹೇಗೆ ಸಾಧ್ಯ? ಪುರುಷ ಮದುವೆಯಾದರೂ ಆತ ಮಾನ್ಯವಾಗುತ್ತಾನೆ ಎಂದಾದಲ್ಲಿ, ಉದ್ಯೋಗಕ್ಕೆ ಮಹಿಳೆಯೂ ಮಾನ್ಯಳಲ್ಲವೆ. ಕುಟುಂಬದೊಳಗಿನಿಂದಲೇ ಆರಂಭವಾದ ಈ ರೀತಿಯ ಲಿಂಗ ಅಸಮಾನತೆ ಸಮಾಜದೊಳಗೆ ಆಳವಾದ ಬೇರು ಬಿಟ್ಟಿರುವುದರಿಂದಾಗಿ ಆ ಬೇಲಿಯಿಂದ ಮಹಿಳೆ ಹೊರಬರಲು ಅನೇಕ ಸಂಕಷ್ಟಗಳನ್ನು ಎದುರಿಸಿ ನಿಲ್ಲಬೇಕಾದ ಪರಿಸ್ಥಿತಿಯನ್ನು ಈ ಲೇಖನದಲ್ಲಿ ವಿವರಿಸಿದ್ದಾರೆ.

"ದೊಬ್ಬಗೂಟ ಹಳ್ಳಿಯ ರೈತಾಪಿ ಕಾರ್ಮಿಕ ವರ್ಗದ ಪುರುಷರು ಕುಡಿತದ ದಾಸಾನುದಾಸರು, ತಮ್ಮ ದುಡಿತವಲ್ಲದೆ ಹೆಂಡರು–ಮಕ್ಕಳ ಕೂಲಿಯ ಹಣವನ್ನು ಒತ್ತಾಯದಿಂದ ಕಸಿದುಕೊಂಡು ಕುಡಿದು ಬರುವುದು, ವಿನಾಕಾರಣ ಹೆಂಡರು–ಮಕ್ಕಳನ್ನು ಹೊಡೆಯುವುದು ಕುಡಿಯಲು ದುಡ್ಡು

ಸಿಗದಿದ್ದರೆ ಎಂಥ ನೀಚತನಕ್ಕಾದರೂ ಇಳಿಯುವುದು ಇವೆಲ್ಲ ಅಲ್ಲಿ ಸರ್ವೆ ಸಾಮಾನ್ಯ ಸಂಗತಿಯಾಗಿತ್ತು. ಆ ಹಳ್ಳಿಯ ಒಟ್ಟು ಆದಾಯದ ಸಿಂಹಪಾಲು ಸಾರಾಯಿ ಅಂಗಡಿಯ ಹಡವೆ ಬೊಕ್ಕಸಕ್ಕೆ ನೈವೇದ್ಯವಾಗುತ್ತಿತ್ತು. ದಿನಗಟ್ಟಲೆ ಉಪವಾಸವಿದ್ದ ಹಸು ಕಂದಮ್ಮ ಬಸುರಿ–ಬಾಣಂತಿಯರ ಹಸುವಿನ ಚೀತ್ಕಾರವೂ ಕೇಳಿಸದಷ್ಟು ನಶೆ ಆ ಊರಿನ ಸೇಂದಿಗೆ ಇತ್ತು. ಸಾರಾಯಿಯ ಅಮಲಿನ ಹುಚ್ಚು ಹುದುಲಿಗೆ ಸಿಕ್ಕು ನರಳುತ್ತಿರುವ ಅವರನ್ನು ಉದ್ಧರಿಸಿ ಸಾರಾಯಿ ಧಣಿಗಳ ದುಷ್ಟತನವನ್ನು ಅಡಗಿಸಲು ಯಾವ ಕೃಷ್ಣನ ಅವತಾರವೂ ಅಲ್ಲಿ ಆಗುವಂತಿರಲಿಲ್ಲ. ಕ್ರಿ.ಶ ಸುಮಾರು ೧೯೯೦ರ ಸುಮಾರಿಗೆ ಇದ್ದಕಿದ್ದಂತೆ ಒಂದು ದಿನ ಹಸುಳೆ ಹೆಂಗಳೆಯರ ಹೊಟ್ಟೆಯ ಸಿಟ್ಟು ಅದೇಗೊ ರೆಟ್ಟೆಯಲ್ಲಿ ಕಾಣಿಸಿಕೊಂಡಿತು. ಅವರ ಹಲವು ದಿನಗಳ ಹಸಿವು–ನೋವು, ದಯನೀಯ ತವಕ–ತಲ್ಲಣಗಳು ಬುಸುಗುಟ್ಟುವ ಹಾವಾಗಿ ಕೇರಿಯಲ್ಲಿ ಹರಿಯಾಡತೊಡಗಿದವು. ಅವರೆಲ್ಲ ಬೋರ್‍ಯಾಡಿ ಚೀತ್ಕರಿಸುತ್ತಲೆ ಸಾರಾಯಿ ಅಂಗಡಿಯತ್ತ ನುಗ್ಗಿದರು. ಬೆಂಕಿ ಹಚ್ಚಿದರು. ಸಾರಾಯಿ ಧಣಿಗಳ ಅನೈತಿಕ ಸಂಪತ್ತನ್ನು ಸುಟ್ಟು ಭಸ್ಮ ಮಾಡಿದರು. ತಮ್ಮೂರಿಗೆ ಸೇಂದಿ ಸಾರಾಯಿಗಳು ಬರದಂತೆ ತಡೆಯೊಡ್ಡಿದರು. ಅಲ್ಲಿ ಪೋಲಿಸು, ಕಾನೂನು ಏನೇನೂ ಇರಲಿಲ್ಲ ಕೇವಲ ಹಸಿದ ಹೊಟ್ಟೆಗಳು ಚಿಂದಿ–ಪಂದಿಗಳಲ್ಲಿ ತೆವಳುತ್ತಲೆ ಧನಿಕರ ದೌಲತ್ತಿಗೆ ತಲೆಯೊಡ್ಡಿದವು. ಧನಿಕರ ಆಕ್ರೋಶಕ್ಕೆ ಬಲಿಯಾಗಿ ಒದೆತ–ಹೊಡೆತ ಏನೆಲ್ಲ ತಿಂದರಾದರೂ ತಮ್ಮೂರಿನಿಂದ ಸಾರಾಯಿಯನ್ನು ಉಚ್ಚಾಟಿಸಿದರು. ಹನಿ ಸೇಂದಿಯೂ ಊರ ಒಳಗೆ ಹೋಗದಂತೆ ತಡೆದರು"[೨೧] ಇಡೀ ಕುಟುಂಬ ತನ್ನ ಮನೆಯ ಯಜಮಾನನ ಆಧಾರದ ಮೇಲೆ ನಿಂತಿರುತ್ತದೆ. ಈ ಕುಟುಂಬವನ್ನು ಆರ್ಥಿಕ ಸುಸ್ಥಿತಿಯಲ್ಲಿ ಇಡುತ್ತಿದ್ದಾನೆ ಎಂಬ ನಂಬಿಕೆಯಲ್ಲಿಯೇ ಇರುತ್ತದೆ. ಸಮಾಜದಲ್ಲಿ ಇಂತಹ ಚಿತ್ರಣ ಉಲ್ಟಾ ಆಗಿರುವುದನ್ನು ಇಲ್ಲಿ ವಿವರಿಸಿದ್ದಾರೆ. ಹಗಲೆಲ್ಲಾ ದುಡಿದು ತನ್ನ ಬೆವರಿನ ಪ್ರತಿಫಲವಾಗಿ ತನ್ನ ಕುಟುಂಬಕ್ಕೆ ಆಧಾರವಾಗಬೇಕಾಗಿದ್ದ ಬಡ ಕುಟುಂಬದ ಪುರುಷನು ಕಂಟಕವಾಗಿ ಕಾಡುತ್ತಾನೆ. ಕುಡಿತಕ್ಕೆ ದಾಸರಾದ ಗಂಡಸರು ಇಡೀ ಕುಟುಂಬವನ್ನು ಬೀದಿಯ ಪಾಲು ಮಾಡುವರು. ಬಂಡವಾಳಶಾಹಿ ವ್ಯವಸ್ಥೆಯೊಳಗೆ ಬಡವರ ಬೆವರ ಹನಿಯು ಅವರಿಗೆ ಬಂಡವಾಳವೇ ಆಗಿದೆ. ಕುಡಿತದ ವ್ಯಸನಕ್ಕೆ ಬಿದ್ದ ಕುಟುಂಬದಲ್ಲಿ ಮಹಿಳೆಯರು ಕಷ್ಟ ಪಟ್ಟು ದುಡಿದರೂ ಕೂಡ ಅವರ ದುಡಿಮೆಯ ಹಣ ಸಾರಾಯಿ ಅಂಗಡಿಗೆ ಸರಾಗವಾಗಿ ಸೇರುತ್ತದೆ. ಇದರಿಂದ ಉಳಿದ ಇನ್ನಿತರ ಕುಟುಂಬದ ಸದಸ್ಯರು ಉಪವಾಸವೇ ನರಳ ಬೇಕಾದ ಸ್ಥಿತಿಯನ್ನು ಎದುರಿಸಬೇಕಾಗಿದೆ. ಈ ಹಿಂಸೆಯನ್ನು ಎಲ್ಲಾ ಸಹಿಸಿಕೊಂಡಿದ್ದ ಮಹಿಳೆಯರು ಮಕ್ಕಳು ಸಾರಾಯಿ ನಿಷೇಧಕ್ಕೆ ಮುನ್ನುಡಿಯಿತ್ತರು. ಇವರ ದಿಟ್ಟ ಹೋರಾಟ ಇಡೀ ರಾಷ್ಟ್ರದ ಗಮನವನ್ನೇ ಸೆಳೆಯಿತು. ಇದರಿಂದಾಗಿ ಅಲ್ಲಿನ ಸರ್ಕಾರ ಸಂಪೂರ್ಣ ಪಾನನಿಷೇಧ ಕಾನೂನು ಜಾರಿಗೆ ತಂದಿತು ಅಲ್ಲದೆಯೇ ಎಲ್ಲಾ ವಿಷಯಗಳಂತೆ ಈ ಹೋರಾಟವು ರಾಜಕೀಯ ತಿರುವನ್ನು ಪಡೆದು ಕೊಂಡಿತು. ಆ ರಾಜ್ಯದ ಸರ್ಕಾರ ಪಾನನಿಷೇಧ ಜಾರಿ ತಂದಿತ್ತಾದರು ಇದಕ್ಕೆ ಬೇರೆ ಬೇರೆ ರಾಜ್ಯದಲ್ಲಿ ಮಾನ್ಯತೆ ದೊರೆಯದೇ ಇದ್ದದ್ದನ್ನು ವಿಷಾಧಿಸುತ್ತಾರೆ.

"ಚೀನಾದ ಬೀಜಿಂಗ್‌ನಲ್ಲಿ ನಡೆದ ಜಾಗತಿಕ ಮಹಿಳಾ ಸಮ್ಮೇಳನಕ್ಕೆ ಭಾರತದಿಂದ ಹೋದ ನಿಯೋಗದ ಅನುಭವ ಹೀಗಿದೆ. ಮಹಿಳೆಯರ ಶೋಷಣೆ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಲಿದ್ದ ಈ ನಿಯೋಗದ ನಾಯಕಿ ಒರ್ವ ಮಹಿಳೆಯೇ ಆಗಬೇಕಾಗಿದ್ದರೂ ಈ ನಿಯೋಗದ ನಾಯಕತ್ವವನ್ನು ಮಾಧವ್ ರಾವ್ ಸಿಂಧಿಯಾ ವಹಿಸಿದ್ದರು. ಮಾರ್ಗರೇಟ್ ಆಳ್ವಾ, ನಜ್ಮಾ ಹೆಫ್ತುಲ್ಲಾ ಮುಂತಾದ ಸಮರ್ಥ ಹಾಗೂ ಯೋಗ್ಯ ಮಹಿಳೆಯರು ಈ ನಿಯೋಗದಲ್ಲಿದ್ದರೂ ನಾಯಕತ್ವ ಮಾತ್ರ ಪುರುಷನ ಪಾಲಾಯಿತು. ಹಾಗೆಯೇ ವಿಶ್ವ ಆರೋಗ್ಯ ಸಂಸ್ಥೆಯು ಮೊಲೆ ಹಾಲುಣಿಸುವಿಕೆ ಕುರಿತಂತೆ ಒಂದು ಸಮಿತಿ ರಚಿಸಿದೆ. ಇದರಲ್ಲಿರುವ ಸದಸ್ಯರೆಲ್ಲರೂ ಪುರುಷರೇ ಆಗಿದ್ದಾರೆ ಎಂದು ಪತ್ರಿಕೆಯೊಂದು ವರದಿ ಮಾಡಿತ್ತು!"[೨೨] ಮಹಿಳೆ ತನಗೆ ಸಿಗಬೇಕಾದ ಹಕ್ಕಿಗಾಗಿ ಪ್ರತೀ ಹಂತದಲ್ಲಿಯೂ ಹೋರಾಡಿಯೇ ಧಕ್ಕಿಸಿಕೊಳ್ಳಬೇಕಾಯಿತು. ತನ್ನ ಸ್ಥಾನಮಾನಗಳಿಗೆ ಹಕ್ಕು ಭಾದ್ಯತೆಗಳಿಗೆ ಪುರುಷ ಪ್ರಧಾನ ಸಮಾಜದೊಳಗೆ ಸೆಣಸಾಡಿಯೇ ಪಡೆದುಕೊಳ್ಳುತ್ತಾಳೆ. ಎಂಬುದು ಲೇಖಕಿಯು ಅಭಿಪ್ರಾಯಪಟ್ಟಿದ್ದಾರೆ.

ಮಹಿಳೆಯು ತನ್ನ ಗುರುತನ್ನ ಸಾಬೀತು ಪಡಿಸಲು ಪ್ರತಿ ಹೆಜ್ಜೆ ಹೆಜ್ಜೆಗೂ ಹೋರಾಡುತ್ತಾಳೆ. ಪುರುಷನಿಗೆ ಸರಿಸಮಾನವಾಗಿ ಬೆಳೆದು ಸಾಧನೆ ಮಾಡಿದರೂ ಕೂಡ ಅವಳನ್ನು ನಿರ್ಲಕ್ಷ್ಯಭಾವದಿಂದಲೇ ನೋಡಲಾಗುತ್ತಿದೆ. ಜಾಗತಿಕ ಮಹಿಳಾ ಸಮ್ಮೇಳನದಲ್ಲಿ ಮಹಿಳೆಯೇ ಅಧ್ಯಕ್ಷಳಾಗಬೇಕಿದ್ದರೂ ಅಲ್ಲಿ ಪುರುಷ ಅಧ್ಯಕ್ಷರಾದದ್ದು, ಅಂದರೆ ಮಹಿಳೆಗೆ ಮೀಸಲಿದ್ದ ಅಧಿಕಾರವನ್ನು ಪುರುಷ ಅತಿಕ್ರಮಣ ಮಾಡುವ ಮೂಲಕ ಅವನ ಅಧಿಕಾರದ ಬಗೆಗೆ ಇರುವ ದುರಾಸೆಯನ್ನು ಬಿಂಬಿಸುತ್ತಿದೆ. ಹಾಗೆಯೇ ವಿಶ್ವ ಆರೋಗ್ಯ ಸಮಿತಿಯಲ್ಲಿ ಎದೆಹಾಲಿನ ಮಹತ್ವದ ಬಗ್ಗೆ ತಿಳಿಸಲು ಒಬ್ಬರೇ ಒಬ್ಬ ಮಹಿಳೆಯೂ ಇಲ್ಲದಿರುವುದನ್ನು ಲೇಖಕಿಯು ಉಲ್ಲೇಖಿಸುತ್ತಾರೆ. ಎದೆ ಹಾಲಿನ ಮಹತ್ವ ಅದರ ಪರಿಣಾಮಗಳು ಏನು ಎಂಬುದನ್ನು ಸವಿವರವಾಗಿ ತಿಳಿಸಬೇಕಾದವಳು ಮಹಿಳೆಯಾಗಿದ್ದರೂ ಅಲ್ಲಿ ಅವಳಿಗೆ ಪ್ರವೇಶವಿಲ್ಲ. ಒಟ್ಟಿನಲ್ಲಿ ಅಧಿಕಾರ ಎಂಬುದು ಪುರುಷನ ಸ್ವತ್ತಾಗಿದೆಯೇ ಹೊರತು ಮಹಿಳೆಯರಿಗೆ ಸುಲಭವಾಗಿ ದಕ್ಕುವುದಕ್ಕೆ ಇರುವ ಅಡೆತಡೆಗಳನ್ನು ಇಲ್ಲಿ ಕಾಣಬಹುದಾಗಿದೆ.

ಎಪ್ಪತ್ತರ ದಶಕದ ಸಂದರ್ಭದಲ್ಲಿ ದಲಿತ-ಬಂಡಾಯದ ಕಾಲಘಟ್ಟದ ಸಾಹಿತ್ಯದ ಜೊತೆ ಜೊತೆಗೆ ದಲಿತ ಚಳುವಳಿಗಳು ನಡೆಯುತ್ತಿದ್ದವು. ಇದೇ ಸಮಯದಲ್ಲಿ ಮಹಿಳಾ ಸಾಹಿತ್ಯವೂ ಕೂಡ ಬೆಳಕಿಗೆ ಬಂತು. ದಲಿತ ಬಂಡಾಯ ಹಾಗೂ ಮಹಿಳಾ ಸಾಹಿತ್ಯವೂ ಸಮಾಜದಲ್ಲಿ ನಡೆಯುತ್ತಿದ್ದ ಅನ್ಯಾಯದ ವಿರುದ್ಧ ಧ್ವನಿ ಎತ್ತ ತೊಡಗಿದಾಗ ಒಬ್ಬ ಜಮೀನ್ದಾರನು ಬಡ ಕುಟುಂಬದ ಮಹಿಳೆಯ ಮೇಲೆ ನಡೆಸಿದ ದೌರ್ಜನ್ಯದ ವಿರುದ್ಧ ನಾಡಿನ ಎಲ್ಲಾ ಮಹಿಳಾ ಮತ್ತು ದಲಿತ ಸಂಘಟನೆಗಳು ಧ್ವನಿ ಎತ್ತಿದವು. "ಹುಣಸೇಕೋಟೆಯ ಅನಸೂಯಮ್ಮನ ಮೇಲೆ ನಡೆದ ಅತ್ಯಾಚಾರದ ಹಗರಣದ ನೆನಪು ಇನ್ನೂ ಮಾಸಿಲ್ಲ. ಅತ್ಯಾಚಾರವನ್ನು ಪ್ರತಿಭಟಿಸಿದ ಅವಳ ಗಂಡ ಪಾಪಿ ಕೃಷ್ಣಪ್ಪನಿಂದ ಹತನಾದ. ಈ ಕೃತ್ಯವನ್ನು ವಿರೋಧಿಸಿ ಮಹಿಳಾ ಸಂಘಟನೆಗಳು

ತಮ್ಮ ಪ್ರತಿಭಟನೆಯನ್ನು ತೋರಿಸಿದವು. ಆದರೆ ಇಂತಹ ಘೋರ ಪ್ರಸಂಗಗಳು ಆಕೆಯ ಅನುಭವದೊಂದಿಗೆ ಕೊನೆಯಾಗಲಿಲ್ಲ. ಹಾಗೆ ಪದ್ಮಕ್ಕನ ಪ್ರಕರಣ, ಕೌಸಲ್ಯಳ ಪ್ರಕರಣ... ಹೀಗೆ ಹೆಸರಿಸುತ್ತಲೇ ಹೋಗಬಹುದೇನೋ! ಇದಕ್ಕೆ ಕೊನೆ ಮೊದಲೇ ಇಲ್ಲವೇ? ಅಂತಹ ಪ್ರಕರಣಗಳ ಸಂದರ್ಭಗಳಲ್ಲಿ ನಡೆದ ಪ್ರತಿಭಟನೆಗಳು ತತ್‌ಕ್ಷಣದ ಕ್ರಿಯೆಗಳಾಗಿ ಅಪರಾಧಿಗೆ ಶಿಕ್ಷೆಯಾಗುವುದರ ಮೂಲಕ ಗೆಲುವನ್ನು ಗಳಿಸಿಕೊಟ್ಟಿರಲೂಬಹುದು. ಆದರೆ ಈ ಪಾತಕಿಗಳಿಗೆ ಇತಿಶ್ರೀ ಹಾಡುವಂತಹ ಪ್ರಯತ್ನವನ್ನು ಈ ಪ್ರತಿಭಟನೆಗಳು ಸಾಧಿಸಲು ಅಶಕ್ತವಾದವು."[೨೩] ಆ ಸಂದರ್ಭಕ್ಕೆ ಎಲ್ಲಾ ಸಂಘಟನೆಗಳು ಪ್ರತಿಭಟಿಸಿದವು. ಅಪರಾಧಿಗೆ ಶಿಕ್ಷೆ ಆಗುವಂತೆಯೂ ಮಾಡಿದವು. ಕೇವಲ ಒಂದು ಪ್ರಕರಣ ಮಾತ್ರವಲ್ಲ ಹಲವಾರು ಇಂತಹ ಪ್ರಕರಣಗಳ ಮೇಲೆ ಬೆಳಕು ಚೆಲ್ಲುವಂತಹ ಪ್ರಯತ್ನಗಳು ನಡೆದವು ಯಶಸ್ವಿಯನ್ನೂ ಕಂಡದ್ದನ್ನು ಗಮನಿಸಬಹುದು. ಯಾವುದೇ ಚಳುವಳಿಗಳು ನಡೆಯ ಬೇಕಾದರೆ ಸರಿಯಾದ ಸಿದ್ಧಾಂತ, ಸೈದ್ಧಾಂತಿಕತೆ ಮುಖ್ಯವಾಗಿರುತ್ತದೆ. ಒಂದು ಸಮಸ್ಯೆಯ ವಿರುದ್ಧ ಗಟ್ಟಿಯಾದ ಹೋರಾಟ ರೂಪುಗೊಳ್ಳಲು ಇಂತಹ ಸಿದ್ಧಾಂತದ ಆಧಾರದ ಮೇಲೆಯೇ ಚಳುವಳಿಗಳು ನಡೆಯದಿರುವುದು ನಿಷ್ಪ್ರಯೋಜಕವೆಂಬುದು ಈ ಲೇಖಕಿಯ ಪ್ರಮುಖವಾದಂತಹ ವಾದವಾಗಿದೆ. ಅಲ್ಲದೆಯೇ ಅಂತಹ ಗಟ್ಟಿಯಾದ ಸಂಕಲ್ಪ ಹೊಂದಿರುವ ಕೆಲವು ಮಹಿಳಾ ಸಂಘಟನೆಗಳನ್ನು ಇವರು ಶ್ಲಾಘಿಸಿರುವುದನ್ನು ಕಾಣಬಹುದು.

"ಗುಲಬರ್ಗಾದಲ್ಲಿರುವ ಅನಾಥಾಶ್ರಮ ಜಾನ್ ಅಬ್ರಹಾಂಮೆಮೋರಿಯಲ್ ಬೆಥೂನೆ ಹೋಂನ ಶಾಖೆಯಿಂದ ಲಂಬಾಣಿ ತಾಂಡಾದ ಮತ್ತು ಇನ್ನಿತರ ಹೆಣ್ಣು ಮಕ್ಕಳನ್ನು ತೆಗೆದುಕೊಂಡು ದತ್ತು ತೆಗೆದುಕೊಂಡ ನಂತರ ಅವರನ್ನು ಡೆನ್ಮಾರ್ಕ್, ಆಸ್ಟ್ರೇಲಿಯಾ, ಕೆನಡಾ ಸೇರಿದಂತೆ ವಿವಿಧ ದೇಶಗಳಿಗೆ ಎಲ್ಲ ನೀತಿ ನಿಯಮಾವಳಿಗಳನ್ನು ಮೀರಿ ರವಾನಿಸಲಾಗುತ್ತಿರುವ ಸಂಗತಿ ಅತ್ಯಂತ ಗಂಭೀರ ಸ್ವರೂಪದ್ದು. ಸ್ವಯಂ ಸೇವಾ ಸಂಘಗಳ ಅಧಿಕೃತತೆಯ ಬಗ್ಗೆ ಅವರ ಸಾಮಾಜಿಕ ಬದ್ಧತೆಯ ಬಗ್ಗೆ ಜನ ಅನುಮಾನಿಸುವಂತಾಗಿದೆ. ಇದು ಕೇವಲ ಒಂದು ರಾಜ್ಯದ ರಾಜಕೀಯವಾಗಿ ಉಳಿಯದೆ ಅಂತರಾಷ್ಟ್ರೀಯ ವ್ಯಾಪಕ ಜಾಲ ಹೊಂದಿದ್ದು ಇದರಲ್ಲಿ ಗಣ್ಯ ವ್ಯಕ್ತಿಗಳೂ ಸೇರಿಕೊಂಡಿರುವುದು ಸಮಸ್ಯೆಯನ್ನು ಹೆಚ್ಚು ಸಂಕೀರ್ಣಗೊಳಿಸಿದೆ."[೨೪] ಈ ದೇಶದಲ್ಲಿ ಬಡತನದಿಂದಾಗಿ ನರಳುತ್ತಿರುವವರ ಸಂಖ್ಯೆ ಹೆಚ್ಚಾಗಿದೆ. ಹೀಗಿರುವಾಗ ತಮ್ಮ ತುತ್ತಿನ ಚೀಲ ತುಂಬಿಸಿಕೊಳ್ಳಲಾರದೆ ಹಲವಾರು ಕುಟುಂಬದಲ್ಲಿ ಮಕ್ಕಳನ್ನು ಅನಾಥಾಶ್ರಮಕ್ಕೆ ಸೇರಿಸುವುದನ್ನು ಕಾಣುತ್ತೇವೆ.

ಇದನ್ನೆಲ್ಲ ಅರಿತ ಎನ್.ಜಿ.ಓ.ಸಂಸ್ಥೆಗಳು ಆ ಬಡಕುಟುಂಬದ ಮಕ್ಕಳನ್ನು ತಮ್ಮ ಆಶ್ರಮದ ಹೆಸರಿನಲ್ಲಿ ದತ್ತು ಪಡೆಯುತ್ತಿವೆ. ಆದರೆ ಅವರುಗಳು ಮಕ್ಕಳನ್ನ ಬೇರೆ ಬೇರೆ ರಾಷ್ಟ್ರಗಳಿಗೆ ಮಾರಾಟಮಾಡುವ ದಂದೆಯನ್ನು ನಡೆಸುತ್ತಿವೆ. ಸರ್ಕಾರದ ಕಾನೂನು ನೀತಿ ಎಲ್ಲವನ್ನೂ ಉಲ್ಲಂಘಿಸಿ ಈ ಮಾರಾಟ ಜಾಲ ನಡೆಯುತ್ತಿರುವುದು ಆತಂಕಕಾರಿಯಾದ ಸಂಗತಿಯಾಗಿದೆ. ಮಾನವ ಕಳ್ಳಸಾಗಣೆಕೆ ಕೇವಲ ಕರ್ನಾಟಕ ರಾಜ್ಯದಲ್ಲಿ ಮಾತ್ರವಲ್ಲದೆ ಇಡೀ ದೇಶವ್ಯಾಪಿ ನಡೆಯುತ್ತಿರುವ ಜಾಲವಾಗಿದೆ. ಅಲ್ಲದೆಯೇ ಹೆಣ್ಣುಮಕ್ಕಳನ್ನೇ ಹೆಚ್ಚಾಗಿ ಮಾರಾಟ ಮಾಡುತ್ತಿರುವುದು ಹೆಣ್ಣಿನ ಮೇಲಿರುವ ಹೀನ ದೃಷ್ಟಿಕೋನವನ್ನು ತೋರಿಸುತ್ತದೆ.

ಹೆಣ್ಣುಮಕ್ಕಳು ಅದರಲ್ಲೂ ಕಾಲೇಜು ವಿದ್ಯಾರ್ಥಿನಿಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು, ಹಲ್ಲೆಗಳು ಆಕೆಯ ಜೀವನವನ್ನೇ ಕಿತ್ತುಕೊಳ್ಳುತ್ತಿವೆ. "ಬೆಂಗಳೂರಿನ ಕಾಲೇಜು ವಿದ್ಯಾರ್ಥಿನಿ ಶೃತಿಗೆ ಆ್ಯಸಿಡ್ ಎರಚಿ ಕುರೂಪಗೊಳಿಸಿದ್ದ ರಾಜೇಶ್‌ನಿಗೆ ಕೆಲವು ದಿನಗಳ ಹಿಂದೆ ಜಿಲ್ಲಾ ಸೆಷನ್ಸ್ ನ್ಯಾಯಾಲಯವು ಏಳು ವರ್ಷಗಳ ಕಾಲ ಕಠಿಣ ಸೆರೆವಾಸ ಮತ್ತು ಐದು ಸಾವಿರ ರೂಪಾಯಿಗಳ ದಂಡ ಶಿಕ್ಷೆ ವಿಧಿಸಿ ತೀರ್ಪು ನೀಡಿದೆ. ಮೂರು ವರ್ಷಗಳ ಹಿಂದೆ ನಡೆದ ಈ ದುರಂತ ಘಟನೆ ನಮ್ಮ ನೆನಪಿನಿಂದ ಅಳಿಸಿಹೋಗುವುದಕ್ಕೂ ಮುಂಚೆಯೇ ನಮ್ಮ ನ್ಯಾಯಾಲಯದ ನಿಧಾನ ನಡೆಯಲ್ಲಿ ತೀರ್ಪು ಇಷ್ಟು ಬೇಗ ಹೊರಬಿದ್ದಿರುವುದು ಒಂದು ಸೋಜಿಗವೇ ಸರಿ. ಈ ತೀರ್ಪಿನಿಂದ ಯಾರಿಗೆ ನ್ಯಾಯ ದಕ್ಕಿತು ಎಂಬುದು ನಮ್ಮ ಮುಂದಿರುವ ಪ್ರಶ್ನೆ."[೨೫] ಈ ರೀತಿಯಾದ ಅಮಾನುಷ ಘಟನೆಗಳು ನಡೆದಾಗ ಅದರ ವಿರುದ್ಧ ನ್ಯಾಯಾಲಯಕ್ಕೆ ದೂರು ಸಲ್ಲಿಸಿದರೂ ಎಷ್ಟೋ ಸಂದರ್ಭಗಳಲ್ಲಿ ಅಪರಾಧಿಗಳಿಗೆ ಶಿಕ್ಷೆ ಆಗದೇ ಖುಲಾಷೆಯಾಗಿರುವುದು ಇದೆ. ಅಪರಾಧಿಗಳಿಗೆ ಕಠಿಣ ಶಿಕ್ಷೆ ಕೊಟ್ಟರೂ ಆ ಹೆಣ್ಣಿನ ಜೀವನ ಮಾತ್ರ ಜೀವನಪರ್ಯಂತ ನರಕ ಹಾಗೂ ಯಾತನಮಯವೇ ಆಗಿರುತ್ತದೆ. ಹೆಣ್ಣು ಮಕ್ಕಳು ಅನುಭವಿಸುವ ನೋವಿನಮುಂದೆ ಅಪರಾಧಿಗಳಿಗೆ ಕೊಡುವ ಶಿಕ್ಷೆ ಕಡಿಮೆಯೇ ಆಗಿರುತ್ತದೆ.

ಕುಟುಂಬದೊಳಗೆ ಹೆಣ್ಣು ಮಗು ಜನಿಸಿದೆ ಎಂದರೆ ಒಂದು ರೀತಿಯ ತಾತ್ಸಾರ, ಅಸಡ್ಡೆಯಿಂದಲೇ ನೋಡಲಾಗುತ್ತದೆ. ಹೆಣ್ಣು ಅಂದ್ರೆ ಭಾರವಾದವಳು, ಆ ಕುಟುಂಬಕ್ಕೆ ಹೊರೆಯಾಗಿ ಕಾಣುತ್ತಾಳೆ. ಹೆಣ್ಣು ಮಕ್ಕಳನ್ನ ಮದುವೆ ಮಾಡಿದರೇನೆ ಜವಾಬ್ದಾರಿಯಿಂದ ಮುಕ್ತ ಎಂಬ ಭಾವನೆಗಳು ಆಳವಾಗಿ ಬೇರುಬಿಟ್ಟಿರುವುದನ್ನು ಕೆ.ನೀಲಾ ಅವರು ತಮ್ಮ ಲೇಖನದಲ್ಲಿ ತಿಳಿಸಿದ್ದಾರೆ. "ಅಕ್ಕಾರೆ, ನಮ್ಮ ಕಡಿಗೆ ಮಗಳ ಮದುವಿ ಆಗಬೇಕಾದ್ರಾ ವರದಕ್ಷಿಣಿ ಭಾಳ ಕೊಡಬೇಕಲ್ರಿ, ನಮ್ಮಂಥ ಬಡವ್ರಿಗ್ಗಿ ಹ್ಯಾಂಗ ಸಾಧ್ಯ? ಅದಕ್ಕೆ ಗುಜರಾತಿನ ಮಂದಿಗಿ ಕೊಟ್ಟು ಮದುವಿ ಮಾಡತೀವ್ರಿ."[೨೬] ಇಂತಹ ಮಾತುಗಳು ಎಂತಹವರಿಗೂ ಒಮ್ಮೆ ಎದೆ ಝುಲ್ಲೆನಿಸುತ್ತದೆ. ಮದುವೆ ಎಂಬ ನೆಪದಲ್ಲಿ ಹೆಣ್ಣುಗಳ ಮಾರಾಟ ದಂಧೆಯು ಎಗ್ಗಿಲ್ಲದೆ ನಡೆಯುತ್ತಿದೆ. ಒಂದು ಕಡೆ ಆರ್ಥಿಕತೆಯು ಬಡತನವನ್ನು ಕಾಡಿದರೆ, ಮತ್ತೊಂದೆಡೆ ಹೆಣ್ಣೆತ್ತವರಿಗೆ ವರದಕ್ಷಿಣೆ ಎಂಬ ಪೆಡಂಭೂತದ ಭಯ ಬೇರೆ. ವರದಕ್ಷಿಣೆಯ ಪಿಡುಗು ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಇಂದಿನ ನಾಗರೀಕ ಸಮಾಜದಲ್ಲಿ ಅಕ್ಷರಸ್ಥ ಜಗತ್ತಿನೊಳಗೆ ಇದು ಒಂದು 'ಪ್ರತಿಷ್ಠೆ'ಯಾಗಿಯೂ ಬೆಳೆಯುತ್ತಿರುವುದನ್ನು ಕಾಣಬಹುದು. ವರದಕ್ಷಿಣೆ ಇಲ್ಲದೆ ಮದುವೆ ಮಾಡಿಕೊಂಡು ಹೋಗುತ್ತೇವೆ ಮಗಳನ್ನ ಕೊಡಿ ಎಂದು ಬರುವ ಹೊರರಾಜ್ಯದವರಿಗೆ ಏನನ್ನೂ ಯೋಚಿಸದೆ ಮಗಳನ್ನ ಮದುವೆ ಮಾಡಿ ತಮ್ಮ ಹೊರೆಯನ್ನು ಇಳಿಸಿಕೊಂಡೆವೆಂದು ಹೆತ್ತವರು ನಿಟ್ಟುಸಿರು ಬಿಡುತ್ತಾರೆ. ಆದರೆ ಅಲ್ಲಿ ನಡೆಯುವುದೇ ಬೇರೆ ಮಾರುಕಟ್ಟೆಯ ಸರಕಿನಂತೆ ಹೆಣ್ಣನ್ನು ಮಾರಾಟಮಾಡಲಾಗುತ್ತದೆ. ಆರ್ಥಿಕತೆಯಲ್ಲಿ ಹೆಣ್ಣು ಮಾರಾಟದ ವಸ್ತುವಾಗುತ್ತಿರುವುದರ ಬಗ್ಗೆ ಚರ್ಚಿಸಿದ್ದಾರೆ.

ಹೆಣ್ಣು ಎಷ್ಟೇ ವಿದ್ಯಾವಂತೆ, ಬುದ್ಧಿವುಳ್ಳವಳಾಗಿದ್ದರೂ ಕೂಡ ಶೋಷಣೆಯಿಂದ ಮುಕ್ತಳಾಗಿಲ್ಲ ಎನ್ನುವುದನ್ನು ಎಚ್.ನಾಗವೇಣಿಯರ ಮಾತಿನಲ್ಲೇ ನೋಡುವುದಾದರೆ "ಮದುವೆಗಿಂತ ಮೊದಲೇ ಪಾರಂಪರಿಕ ಸಮಾಜ ವ್ಯವಸ್ಥೆಯನ್ನು ಪ್ರತಿಭಟಿಸುವಂತ ಕವನಗಳನ್ನು ಬರೆಯುತ್ತಿದ್ದ ಈಕೆಯನ್ನು ಇಷ್ಟಪಟ್ಟೇ ಮದುವೆ ಆದವನು. ಆ ನನ್ನ ಕಾಮ್ರೇಡ್ ಭಾವ! ಮದುವೆಯಾದ ನಂತರ ಯಾಕೋ 'ಭಾವ'ನಿಗೆ ಈ ಕನಸುಗಾರ್ತಿ 'ಅಕ್ಕ'ನ ಪ್ರತಿಭಟನೆಯ ಕಾವ್ಯಗಳು ಇಷ್ಟವಾಗುತ್ತಿರಲಿಲ್ಲವೋ ಅಥವಾ ಆಕೆಯ ಬಂಡಾಯದ ಹೋರಾಟಗಳು ಹಿಡಿಸುತ್ತಿರಲಿಲ್ಲವೋ ಏನೋ? ಮನೆಯಲ್ಲಿ ಆತನಿಂದ ಶೋಷಣೆಯ ವಿವಿಧ ಮಾದರಿ ಪ್ರಯೋಗಗಳು ಆರಂಭವಾದವು. ಸಾಹಿತ್ಯದ ಮೂಲಕ ಬಂಡಾಯ ಸುಲಭವಿರಬಹುದು ಆದರೆ ಬದುಕಿನಲ್ಲಿ ಬಂಡಾಯ ಸುಲಭವಲ್ಲ. ಎಂಬುದನ್ನು ಅರ್ಥೈಸಿಕೊಂಡ 'ಅಕ್ಕ' ಮೂರು ಮಕ್ಕಳ ಜೊತೆ ಗಂಡನ ಶೋಷಣೆಯನ್ನು 'ಸಂಭಾಳಿಸಿಕೊಂಡು ಆತನ ಹೊಡೆತ, ಬೈಗುಳ, ಹೀಗಳೆಯುವಿಕೆಯ ಜತೆಗೆ ಸಾಹಿತ್ಯದಲ್ಲೂ ಬಂಡಾಯವನ್ನು ಸಂಭಾಳಿಸಿಕೊಂಡು ಸುಮಾರು ಎರಡು ದಶಕಗಳ ದಾಂಪತ್ಯ ಜೀವನವನ್ನು ಆತನೊಂದಿಗೆ ದೂಡಿದ್ದಾಳೆ."[೨೭] ಸಂಪ್ರದಾಯವನ್ನು ಮುರಿದು ದಿಟ್ಟತನದಿಂದ ಬದುಕನ್ನು ಸಾಗಿಸುವ ಕನಸೋತ್ತ ಆ 'ಅಕ್ಕ'ನ ಬದುಕು ಮತ್ತದೇ ಪುರುಷ ಪಾರಮ್ಯದ ಕ್ರೌರ್ಯವನ್ನೇ ಸಹಿಸಿಕೊಂಡು ಬದುಕನ್ನು ಸಾಗಿಸುವಂತಾಯಿತು. ಹೊರ ಜಗತ್ತಿಗೆ ತಾನೊಬ್ಬ ಸಮಾಜ ಮುಖಿ, ಚಿಂತಕ, ಹೋರಾಟಗಾರರ, ಸಮಾನತೆಯನ್ನು ಪಾಲಿಸುವವನು, ಮಹಿಳಾಪರ ಚಿಂತಕ ಹೀಗೆ ಅನೇಕ ಹಣೆಪಟ್ಟಿಯನ್ನು ಹೊಂದಿದ್ದವನು ತನ್ನ ಮನೆಯೊಳಗೆ ಅಥವಾ ಮನಸ್ಸಿನೊಳಗಿನ ಕ್ರೌರ್ಯವನ್ನು ಎಂದಿಗೂ ಈ ಪುರುಷ ಬಿಟ್ಟಿರಲಾರನು ಎಂಬುದಕ್ಕೆ ಇದೊಂದು ಉದಾಹರಣೆಯಾಗಿದೆ. ಮದುವೆಗಿಂದ ಮೊದಲು ಹೆಣ್ಣಿನ ಧೈರ್ಯ, ದಿಟ್ಟತನವನ್ನು ಒಪ್ಪಿಕೊಂಡ ಪುರುಷನು ಮದುವೆಯ ನಂತರ ತನ್ನೊಳಗಿರುವ ಗೋಸುಂಬೆಯಂತಹ ಬುದ್ದಿಯನ್ನ ಹೊರಹಾಕಲಾರಂಭಿಸುತ್ತಾನೆ. ಪುರುಷ ಎಂದಿಗೂ ತನ್ನ ಆಳ್ವಿಕೆ(ತುಳಿಯುವ)ಯನ್ನು ಎಂದಿಗೂ ಬದಲಿಸಿಕೊಳ್ಳಲಾರ ಎನ್ನುವುದನ್ನು ತಮ್ಮ ವಿಚಾರ ಸಾಹಿತ್ಯದಲ್ಲಿ ಅಭಿವ್ಯಕ್ತಿಸಿದ್ದಾರೆ.

ದಲಿತ ಮಹಿಳೆಯರನ್ನು ಮೇಲ್ವರ್ಗದವರು ದೇವದಾಸಿಯನ್ನಾಗಿ ಹೇಗೆ ಶೋಷಣೆ ಮಾಡುತ್ತಿದ್ದರು ಎಂಬುದನ್ನು "೧೯೧೬ರಲ್ಲಿ ಬೆಳಗಾವಿ ಜಿಲ್ಲೆಯ ಡೆಪ್ಯೂಟಿ ಕಮಿಷನರ್ ಆಗಿದ್ದ ಆರ್.ಸಿ.ಅರ್ಟಿಲ್ ಅವರು ಚಂದ್ರಗುತ್ತಿಯಲ್ಲಿ ನಡೆಯುತ್ತಿದ್ದ ಶೋಷಣೆಯ ಬಗ್ಗೆ ಹೀಗೆ ಬರೆದಿದ್ದಾರೆ. ಲಿಂಗಾಯತ ಜಂಗಮರು ದಲಿತ ಹುಡುಗಿಯರನ್ನು ದೇವದಾಸಿ ಪದ್ಧತಿಗೆ ಹೋಗುವಂತೆ ಮಾಡುತ್ತಿದ್ದರಲ್ಲದೆ. ಆಕೆಯ ಕನ್ಯತ್ವವನ್ನು ತಾವು ಪಡೆಯುವ ಹಕ್ಕನ್ನು ಹೊಂದಿದ್ದರು. ಜಂಗಮರು ಲಿಂಗಾಯತ ಮಹಿಳೆಯರೊಂದಿಗೆ ಮಾತ್ರ ಲೈಂಗಿಕ ಸಂಬಂಧವನ್ನು ಇಟ್ಟುಕೊಂಡಿರಬೇಕು ಎಂಬ ನಿಯಮವಿರುವುದರಿಂದ ಈ ಜಂಗಮರು 'ಭಕ್ತರ ಮನೆ ಊಟ' ಎಂಬ ಪದ್ಧತಿಯಲ್ಲಿ ಶುರುಮಾಡಿ ದೇವದಾಸಿಯರೊಂದಿಗೆ ರಾತ್ರಿಗಳನ್ನು ಕಳೆಯುತ್ತಿದ್ದರು. ಹೀಗೆ ದಲಿತ ಮಹಿಳೆಯರನ್ನು ಶೋಷಿಸಿದ ಜಂಗಮರು ಆ ಮಹಿಳೆಯರಿಗೆ ಕಾಣಿಕೆಯಾಗಿ ನೀಡುತ್ತಿದ್ದದ್ದು ಬಿಕ್ಷೆ ಬೇಡಲೆಂದು ಒಂದು

ಪಾತ್ರೆ."[೨೮] ದಲಿತರು ಮತ್ತು ದಲಿತ ಮಹಿಳೆಯರು ಎಂಬ ಕಾರಣಕ್ಕೆ ದೇವರು, ಧರ್ಮದ ಹೆಸರಿನಲ್ಲಿ ದೌರ್ಜನ್ಯವೆಸಗುತ್ತಿದ್ದಾರೆ. ಮಹಿಳೆಯನ್ನು ಶೋಷಣೆ ಮಾಡುವ ಮೂಲ ಉದ್ದೇಶ ಲೈಂಗಿಕತೆಯೇ ಆಗಿರುತ್ತದೆ. ಹೀಗಾಗಿ ಮೇಲ್ಜಾತಿ, ಮೇಲ್ವರ್ಗದ ಮಹಿಳೆಯರಿಗಿಂತ ಕೆಳಜಾತಿ, ಕೆಳವರ್ಗದ ಮಹಿಳೆಯರು ಇಂತಹ ಅನಿಷ್ಟ ಪದ್ಧತಿಗಳಿಗೆ ಬಲವಂತವಾಗಿ ತಳ್ಳಲ್ಪಡುತ್ತಾಳೆ. ಪುರೋಹಿತಶಾಹಿ ವರ್ಗದಿಂದ ಇನ್ನಷ್ಟು ದೌರ್ಜನ್ಯಕ್ಕೆ ಒಳಗಾಗುತ್ತಾಳೆ. ಇದರಿಂದಾಗಿ ಮೇಲ್ವರ್ಗದವರು ನಡೆಸುವ ದೌರ್ಜನ್ಯದಿಂದ ಹೊರ ಬರಲಾರದೆ ನರಳುವ ಸ್ಥಿತಿಯನ್ನು ಇಲ್ಲಿ ವಿವರಿಸಿದ್ದಾರೆ.

"ಸಿನಿಮಾ ನಟ ಅಮೀರ್ ಖಾನ್ 'ಸತ್ಯಮೇವ ಜಯತೇ' ಕಾರ್ಯಕ್ರಮದಲ್ಲಿ ದಲಿತರು ಮಲದ ಗುಂಡಿಗಿಳಿದು ಅದನ್ನು ಕ್ಲೀನ್ ಮಾಡುತ್ತಿದ್ದ ಕುರಿತು ವಿವರಿಸಿದರು. ಕೋಲಾರದ ಒಂದೆಡೆಯಲ್ಲಿ ಮಲದ ಗುಂಡಿಯಿಂದ ಬಕೆಟಿನಲ್ಲಿ ಮಲವನ್ನು ಎತ್ತಿ ಲಾರಿಗೆ ತುಂಬಿಸುತ್ತಿದ್ದುದನ್ನೂ ಹಾಗೆ ಎತ್ತುವಾಗ ಆತನ ಕೈಯಿಂದ ಬಕೆಟ್ ಜಾರಿ ಆ ಗುಂಡಿಯೊಳಗೆ ಬಿದ್ದಿದ್ದನ್ನೂ ವಿವರಿಸಿದರು. ಅಮೀರ್‌ಖಾನ್ ತಂಡ ಇದನ್ನು ನೋಡುತ್ತಿದ್ದಂತೆ ಆತನು ಆ ಗುಂಡಿಗಿಳಿದು ಬಕೆಟ್‌ಗಾಗಿ ಜಾಲಾಡತೊಡಗಿದನು. ಇದನ್ನು ನೋಡಿಕೊಂಡು ಸಹಿಸಲಾಗದ ಈ ತಂಡ ಆತನನ್ನು ಮೇಲೆ ಬರಲು ಒತ್ತಾಯಿಸತೊಡಗಿದರು. ಆದರೆ ಬಕೆಟ್ ದೊರೆಯುವವರೆಗೆ ಆತನು ಅದರಿಂದ ಹೊರಗೆ ಬರಲಿಲ್ಲ! ಬಕೆಟ್‌ನ ಹಣವನ್ನು ತನ್ನ ಸಂಬಳದಿಂದ ಮುರಿದುಕೊಳ್ಳುವರೆಂದು ಭಯವಲ್ಲದೆ ಕೆಲಸ ಕಳೆದುಕೊಳ್ಳುವ ಭಯವೂ ಆತನನ್ನು ಕಾಡುತ್ತಿದ್ದುದೇ ಹುಡುಕಾಟಕ್ಕೆ ಕಾರಣವಾಗಿತ್ತು."[೨೯] ಮನುಷ್ಯ ಮನುಷ್ಯನನ್ನೇ ಕ್ರೂರಿಯಂತೆ ನಡೆಸಿಕೊಳ್ಳುವ ವ್ಯವಸ್ಥೆಯನ್ನು ವಿವರಿಸುತ್ತಿದ್ದಾರೆ. ಪ್ರಾಣಿಗಳಿಗಿರುವ ಬೆಲೆಯು ಮನುಷ್ಯನಿಗೆ ಇಲ್ಲದೆ ಇರುವುದು ಈ ಸಮಾಜದ ದುರಂತ. ತನ್ನ ಜೀವವನ್ನು ಲೆಕ್ಕಿಸದೇ ಮಲದ ಗುಂಡಿಗಿಳಿದು ಸ್ವಚ್ಛ ಮಾಡಿದರು ಅವರ ದುಡಿಮೆಗೆ ತಕ್ಕ ವೇತನ ದೊರೆಯುವುದು ಅಷ್ಟಕ್ಕಷ್ಟೇ.

"ಮಧ್ಯಪ್ರದೇಶದ ಧಾರ್ ಜಿಲ್ಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಹಿಳಾ ಮೇಲ್ವಿಚಾರಕಿ ಶಕುಂತಲಾ ವರ್ಮ ಅವರ ಕೈಗಳನ್ನು ಕೊಚ್ಚಿ ಹಾಕುವ ಪ್ರಯತ್ನ ನಡೆದಿದ್ದು ಅವರ ಮೇಲೆ ಮಾರಾಣಾಂತಿಕ ಹಲ್ಲೆ ನಡೆದಿದೆ. ಶಕುಂತಲಾ ವರ್ಮ ಅವರು ತಮ್ಮ ವ್ಯಾಪ್ತಿಯ ಪ್ರದೇಶದಲ್ಲಿ ನಡೆದಿರುವ ಮತ್ತು ನಡೆಯಬಹುದಾದ ಬಾಲ್ಯವಿವಾಹಗಳ ಬಗ್ಗೆ ವಿಚಾರಣೆ ನಡೆಸಿ ಅಧ್ಯಯನ ಮಾಡಿ ಸರಕಾರಕ್ಕೆ ವರದಿ ನೀಡುವ ಕಾರ್ಯದಲ್ಲಿ ತೊಡಗಿದ್ದರೆಂಬುದೇ ಈ ಕೃತ್ಯಕ್ಕೆ ಕಾರಣವಾಗಿದೆ. ಅಕ್ಷಯ ತದಿಗೆಯಂದು ಯಾವುದೇ ಪುರೋಹಿತರ ಅದ್ದೂರಿ ಆಡಂಬರಗಳಿಲ್ಲದ ಮದುವೆ ನಡೆಸಬಹುದಾದ್ದರಿಂದ ಸಾಕಷ್ಟು ಬಾಲ್ಯವಿವಾಹಗಳು ನಡೆಯುವುದು ಪದ್ಧತಿ. ಈ ಹಿನ್ನೆಲೆಯಲ್ಲಿ ಅಕ್ಷಯ ತದಿಗೆಯ ಅಂದಿನ ದಿನ ಶಕುಂತಲಾ ವರ್ಮ ಅವರ ಮೇಲೆ ಹಲ್ಲೆ ನಡೆದಿರುವುದು ಸೇಡಿನ ಕ್ರಮವೆಂದು ಸೂರ್ಯ ಸ್ಪಷ್ಟ. ಆದರೆ ಶಕುಂತಲಾರ ಮೇಲಿನ ಹಲ್ಲೆಗೂ ರಾಜ್ಯದಲ್ಲಿ ನಡೆಯುತ್ತಿರುವ ಬಾಲ್ಯವಿವಾಹಗಳಿಗೂ ಏನೂ ಸಂಬಂಧವಿಲ್ಲವೆಂದು ಹೇಳಿ, ಬಾಲ್ಯವಿವಾಹವನ್ನು ಕುರಿತಂತೆ ಆ ರಾಜ್ಯದ ಮುಖ್ಯಮಂತ್ರಿಗಳು ಹೇಳಿರುವ ಮಾತುಗಳು ಅತ್ಯಂತ

ಬೇಜವಾಬ್ದಾರಿಯಿಂದ ಕೂಡಿದವಾಗಿದೆ."[೩೦] ಬಾಲ್ಯವಿವಾಹ ಕಾನೂನು ಬಾಹಿರವಾದದ್ದು, ಮತ್ತು ಕಾನೂನಿನ ಪ್ರಕಾರ ಅಂತಹವರಿಗೆ ಶಿಕ್ಷೆಯನ್ನು ನೀಡಲಾಗುತ್ತದೆ. ಎಷ್ಟು ಕ್ರಮವಿದ್ದರೂ ಕಾನೂನಿನ ಭಯವಿಲ್ಲದೆ ಎಗ್ಗಿಲ್ಲದೆ ಬಾಲ್ಯವಿವಾಹ ನಡೆಯುತ್ತಲೇ ಇವೆ. ಇದನ್ನ ತಡೆಯಲು ಸರ್ಕಾರವೇ ಒಂದು ಸಮೀಕ್ಷೆ ಮಾಡುವಂತೆ ಕಾರ್ಯಕ್ರಮ ರೂಪಿಸಿದೆ. ಆದರೆ ಮತ್ತೊಂದೆಡೆ ತಡೆಯುವ ಪ್ರಯತ್ನ ಮಾಡುವವರ ಮೇಲೆ ಮಾರಾಣಾಂತಿಕ ಹಲ್ಲೆಗಳು, ದೌರ್ಜನ್ಯಗಳು ನಡೆಯುತ್ತಿದ್ದರೂ ಸರ್ಕಾರಕ್ಕೂ ಮತ್ತು ಈ ಘಟನೆಗೂ ಯಾವುದೇ ಸಂಬಂಧವಿಲ್ಲ ಎಂದು ಹೇಳುವ ಮೂಲಕ ತಪ್ಪಿತಸ್ಥರನ್ನು ಬಜಾವ್ ಮಾಡುವ ಉದ್ದೇಶವನ್ನು ಹೊಂದಿರುವುದು ಸ್ಪಷ್ಟವಾಗಿ ತಿಳಿಯುತ್ತದೆ. ಬಾಲ್ಯ ವಿವಾಹವನ್ನು ತಡೆಯಲು ಹೋದ ಬಾಂವ್ರಿದೇವಿಯ ಮೇಲೆ ಮೇಲ್ವರ್ಗದವರು ಅತ್ಯಾಚಾರವೆಸಗಿದರು. ಇದರ ವಿರುದ್ಧ ನ್ಯಾಯ ಕೇಳಲು ಹೋದ ಬಾಂವ್ರಿದೇವಿಗೆ ಸಿಕ್ಕಿದ್ದು ಅನ್ಯಾಯದ ತೀರ್ಪು. ಮೇಲು ಜಾತಿಯವರು ಇಂತಹ ನೀಚ ಕೆಲಸ ಮಾಡುವುದಿಲ್ಲ ಎಂಬ ಹಾರಿಕೆಯ ತೀರ್ಪುನೀಡಲಾಯಿತು.

ಮಹಿಳಾ ಮೇಲ್ವಿಚಾರಕಿ ಶಕುಂತಲ ವರ್ಮ ಅವರ ಮೇಲೆ ನಡೆದ ಹಲ್ಲೆ ಕೂಡ ಇಂತಹದ್ದೆ ಆಗಿದೆ. ನಿರ್ಭಯವಾಗಿ ಯಾವುದೇ ಭಯವಿಲ್ಲದೆ ಅವರನ್ನು ಮಾರಾಣಾಂತಿಕವಾಗಿ ಹಲ್ಲೆಮಾಡಿದ್ದು. ಮೇಲ್ವರ್ಗದವರು ಮಾಡುವ ಯಾವುದೇ ತಪ್ಪು ಅಥವಾ ಅನ್ಯಾಯಗಳಿಗೆ ಕೆಲವೊಮ್ಮೆ ಪ್ರಭುತ್ವವೇ ಸಹಕಾರ ನೀಡುವುದು ನೋಡಿದರೆ ಈ ಸಮಾಜವು ಅಧೋಗತಿಯತ್ತ ಸಾಗುತ್ತಿರುವುದು ಕಾಣಬಹುದು. ಅಲ್ಲದೆ ಸಮಾಜದಲ್ಲಿ ಮಹಿಳೆಯ ಮೇಲೆ ನಡೆಯುತ್ತಿರುವಂತಹ ಅನ್ಯಾಯದ ವಿರುದ್ಧ ಧ್ವನಿ ಎತ್ತಲಾರದಂತೆ ಈ ಪುರುಷ ಪ್ರಧಾನ ವ್ಯವಸ್ಥೆಯು ಅವಳನ್ನು ಹೇಗೆಲ್ಲಾ ನಿರ್ಬಂಧಿಸುತ್ತದೆ ಎಂಬುದನ್ನು ಈ ಲೇಖನದಲ್ಲಿ ಚರ್ಚಿಸಿದ್ದಾರೆ.

ಕೊನೆಟಿಪ್ಪಣಿಗಳು

೧. ಗಾಯಿತ್ರಿ ಎನ್., ಸಂಚಲ, ಪು-೨೨.
೨. ಸಾ.ರಾ. ಅಬೂಬಕ್ಕರ್, ಸಾಹಿತ್ಯಕ್ಕೊಂದು ದಾರಿದೀಪ, ಪು-೮೮-೮೯.
೩. ಗಾಯಿತ್ರಿ ಎನ್., ಸಂಚಲ ಪು-೧೪೧.
೪. ಎಸ್.ಡಿ. ಶಶಿಕಲಾ (ಸಂ), ವಿಜಯಾದಬ್ಬೆ, ಸಮಗ್ರ ಸಂಪುಟ, ಪು-೩೭೭.
೫. ಗಾಯಿತ್ರಿ ಎನ್., ಸಂಚಲ ಪು-೬೪-೬೫.
೬. ಗುಲಾಬಿ ಬಿಳಿಮಲೆ (ಸಂ)., ಇನ್ನು ಸಾಕು, ಪು-೧೫೬-೧೫೭.
೭. ಆರ್ ಪೂರ್ಣಿಮಾ, ಮಣ್ಣಿನ ಕಣ್ಣು, ಪು-೧೫೬-೧೫೭
೮. ಸಾರಾ ಅಬೂಬಕ್ಕರ್, ಸಾಹಿತ್ಯಕ್ಕೊಂದು ದಾರಿದೀಪ, ಪು-೧೦೦.
೯. ಚಂದ್ರಮತಿ ಸೋಂದಾ, ಆಟಕ್ಕೂ ಉಂಟು ಲೆಕ್ಕಕ್ಕೂ ಉಂಟು, ಪು-೧೯.
೧೦. ವಿನಯಾ ಒಕ್ಕುಂದ, ಅನುದಿನದ ದಂದುಗ, ಪು-೨೩-೨೪.

೧೧. ನೀಲಾ ಕೆ. ಬಾಳಕೌದಿ, ಪು-೮೪.

೧೨. ಶಶಿಕಲಾ ಎಸ್.ಡಿ (ಸಂ) ವಿಜಯಾ ದಬ್ಬೆ ಸಮಗ್ರ ಸಂಪುಟ-೨, ಪು-೩೭೬-೩೭೭

೧೩. ಸಾರಾ ಅಬೂಬಕ್ಕರ್, ಸಾಹಿತ್ಯಕ್ಕೊಂದು ದಾರಿದೀಪ ಪು-೧೧೬.

೧೪. ನೀಲಾ ಕೆ. ನೆಲದ ಪಿಸುಮಾತು, ಪು-೧೭-೧೮

೧೫. ಗಾಯಿತ್ರಿ ಎನ್, ಸಂಚಲ, ಪು-೧೩೦-೧೩೧.

೧೬. ಗಾಯಿತ್ರಿ ಎನ್, ಸಂಚಲ, ಪು-೩೭.

೧೭. ಕೆ. ಷರೀಫಾ- ಮಹಿಳೆ ಚಳುವಳಿ ಮತ್ತು ರಾಜಕಾರಣ, ಪು-೭೭-೭೮.

೧೮. ಸಾರಾ ಅಬೂಬಕ್ಕರ್, ಚಿಂತೆ-ಚಿಂತನ, ಪು-೩೩.

೧೯. ವಿನಯಾ ಒಕ್ಕುಂದ, ಉಡಿಯಕ್ಕಿ, ಪು-೨೪-೨೫.

೨೦. ಗಾಯಿತ್ರಿ, ಎನ್, ಸಂಚಲ, ಪು-೮೧.

೨೧. ಮೀನಾಕ್ಷಿಬಾಳಿ, ಮನದ ಸೂತಕ ಹಿಂಗಿದೊಡೆ, ಪು-೩೧-೩೨.

೨೨. ಸಾರಾ ಅಬೂಬಕ್ಕರ್, ಸಾಹಿತ್ಯಕ್ಕೊಂದು ದಾರಿದೀಪ, ಪು-೧೮೦-೧೮೧.

೨೩. ಗಾಯಿತ್ರಿ ಎನ್, ಸಂಚಲ, ಪು-೧೧

೨೪. ಗಾಯಿತ್ರಿ ಎನ್, ಸಂಚಲ, ಪು-೧೩೯

೨೫. ಗಾಯಿತ್ರಿ ಎನ್, ಸಂಚಲ, ಪು-೧೯೫

೨೬. ಕೆ.ನೀಲಾ, ಬಾಳಕೌದಿ, ಪು-೮೫

೨೭. ನಾಗವೇಣಿ ಎಚ್, ಸೂರ್ಯನಿಗೊಂದು ವೀಳ್ಯ, ಪು-೩೩

೨೮. ಗೌರಿಲಂಕೇಶ್, ಕಂಡಹಾಗೆ, ಸಂಗ್ರಹ-೨, ಪು-೧೧

೨೯. ಸಾರಾ ಅಬೂಬಕ್ಕರ್, ಚಿಂತೆ-ಚಿಂತನ, ಪು-೬೮

೩೦. ಗಾಯಿತ್ರಿ ಎನ್ , ಸಂಚಲ, ಪು-೧೯೬

ಅಧ್ಯಾಯ - ಐದು

ವಿಚಾರ ಸಾಹಿತ್ಯ : ಮಹಿಳೆ ಮತ್ತು ಮೀಸಲಾತಿ

ಅಧ್ಯಾಯ - ಐದು

ವಿಚಾರ ಸಾಹಿತ್ಯ : ಮಹಿಳೆ ಮತ್ತು ಮೀಸಲಾತಿ

ಭಾರತವು ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು, ರಾಜಕೀಯವಾಗಿ ಎಲ್ಲರಿಗೂ ಸಮಾನತೆಯನ್ನು ಕಲ್ಪಿಸುವ ವ್ಯವಸ್ಥೆಯನ್ನು ಹೊಂದಿದೆ. ಮಹಿಳೆಯರನ್ನು ಸ್ವತಂತ್ರ ನಾಗರಿಕ ಪ್ರಜೆ ಎಂದು ಗೌರವಿಸುವುದರ ಜೊತೆಗೆ ಅವರಿಗೂ ರಾಜಕೀಯ ಮೀಸಲಾತಿಯನ್ನು ನೀಡುವ ಮೂಲಕ ರಾಜಕೀಯ ಕ್ಷೇತ್ರದಲ್ಲಿ ಪ್ರಾತಿನಿಧ್ಯ ಕೊಡುವ ಚರ್ಚೆಗಳು ನಡೆದಿವೆ. ಈ ಎಲ್ಲಾ ಚರ್ಚೆಗಳನ್ನು ವಿಚಾರ ಸಾಹಿತ್ಯವೂ ಮಹತ್ವ ಪೂರ್ಣವಾಗಿ ಚರ್ಚಿಸಿರುವುದಲ್ಲದೆ, ವಿಚಾರ ಚಿಂತಕರು ಭಿನ್ನ ಭಿನ್ನ ಆಲೋಚನೆಗಳ ಮೂಲಕ ಮೀಸಲಾತಿಯ ಪರಿಕಲ್ಪನೆಗೆ ಒಂದು ತಾತ್ವಿಕವಾದಂತಹ ಚೌಕಟ್ಟು ಹಾಕಿಕೊಟ್ಟಿರುವುದು ಇಲ್ಲಿ ಗಮನಿಸಬಹುದಾದಂತಹ ಮುಖ್ಯ ವಿಷಯವಾಗಿದೆ.

ಹಲವಾರು ಲೇಖಕಿಯರು ಮಹಿಳಾ ಮೀಸಲಾತಿಯ ಬಗೆಗೆ ನಡೆದಿರುವ ಮತ್ತು ಪ್ರಸ್ತುತ ನಡೆಯುತ್ತಿರುವ ತಾರತಮ್ಯದ ಕುರಿತಾಗಿ ತಮ್ಮದೇ ನಿಲುವುಗಳನ್ನು ಅಭಿವ್ಯಕ್ತಿಸಿದ್ದಾರೆ. ಮುಖ್ಯವಾಗಿ ಅವರುಗಳಲ್ಲಿ ಎನ್. ಗಾಯಿತ್ರಿ, ಆರ್. ಪೂರ್ಣಿಮಾ, ಎಚ್.ಎಸ್. ಅನುಪಮಾ, ಎಚ್.ಎಸ್. ಶ್ರೀಮತಿ, ಬಾನುಮುಷ್ತಕ್, ಗೌರಿ ಲಂಕೇಶ್, ಮೀನಾಕ್ಷಿ ಬಾಳಿ, ನೀಲಾ ಕೆ. ಇವರೆಲ್ಲ ಪ್ರಮುಖರು.

ಮಾರ್ಕ್ಸ್‌ವಾದಿ ಚಿಂತಕಿಯಾಗಿರುವ ಎನ್. ಗಾಯಿತ್ರಿ ಅವರು ಮೀಸಲಾತಿಯ ಕುರಿತಾಗಿ 'ಮಹಿಳಾ ಮೀಸಲಾತಿ ಮತ್ತೆ ಶೈತ್ಯಾಗಾರಕ್ಕೆ' ಎಂಬ ಲೇಖನದಲ್ಲಿ ವಿವರಿಸಿದ್ದಾರೆ. "ಮೀಸಲಾತಿ ಮಸೂದೆ ಮೂರನೆಯ ಬಾರಿಗೆ ಮತ್ತೊಮ್ಮೆ ಶೈತ್ಯಾಗಾರಕ್ಕೆ ಹೋಗಿದೆ. ಸಂವಿಧಾನದ (೮೫ನೇ ತಿದ್ದುಪಡಿ) ೧೯೯೮ರ ಮಸೂದೆ ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿ ಮಹಿಳೆಯರಿಗೆ ಶೇಕಡ ೩೩ರಷ್ಟು ಮೀಸಲಾತಿ ಕೊಡಬೇಕೆಂದಿರುವುದು ಮಹಿಳಾ ಸಬಲೀಕರಣ ಪ್ರಕ್ರಿಯೆಯಲ್ಲಿ ಒಂದು ಮಹತ್ವದ ಹೆಜ್ಜೆ. ಮಹಿಳೆಯರ ಅಭಿವೃದ್ಧಿ, ಬೆಳವಣಿಗೆಯ ಬಗ್ಗೆ ಬಾಯಿಮಾತಿನಲ್ಲಿ ಕೊಚ್ಚಿಕೊಳ್ಳುವ, ಚುನಾವಣೆಯ ಸಂದರ್ಭದಲ್ಲಿ ದೊಡ್ಡ ಘೋಷಣೆಗಳನ್ನು ಮಾಡುವ ಪಿತೃಪ್ರಧಾನ ಮೌಲ್ಯಗಳ ಆರಾಧಕ ರಾಜಕೀಯ ಪಕ್ಷಗಳು ಒಂದಲ್ಲ ಒಂದು ಸಂದರ್ಭದಲ್ಲಿ ಈ ಮಹಿಳಾ ಮೀಸಲಾತಿಯನ್ನು ವಿರೋಧಿಸುತ್ತಲೇ ಬಂದಿವೆ.

ಕಾನೂನು ಮಂತ್ರಿಗಳು ಮಸೂದೆಯನ್ನು ಮಂಡಿಸಲು ಅನುಮತಿ ಕೋರಲು ಎದ್ದು ನಿಂತಾಗ ಸದಸ್ಯರು ಆಗಬಹುದು ಎಂದು ಹೇಳುವ ಮೊದಲೇ ಸಭಾಧ್ಯಕ್ಷ ಶ್ರೀಯುತ ಬಾಲಯೋಗಿಯವರು ಮಧ್ಯ ಪ್ರವೇಶಿಸಿ ಸದನದ ಒಪ್ಪಿಗೆಯೊಂದಿಗೆ ಮಸೂದೆಯ ಮಂಡನೆಯನ್ನು ಸದ್ಯಕ್ಕೆ ಮುಂದೂಡಿರುವುದಾಗಿ ಹೇಳಿದರು. ಇದರಿಂದ ಅಧಿವೇಶನ ಆರಂಭವಾಗುವ ಮೊದಲೇ ಈ ಮಸೂದೆಯ ಮೇಲೆ ಒಮ್ಮತವಿಲ್ಲ ಎಂಬ ನೆಪದಲ್ಲಿ ಮಸೂದೆ ಮಂಡನೆಯನ್ನು ಮುಂದೂಡಲು ಅವರು ನಿರ್ಧರಿಸಿದ್ದರು ಎಂಬುದು ಸ್ಪಷ್ಟ."[೧] ಮಹಿಳಾ ಮೀಸಲಾತಿಯ ಬಗೆಗೆ ಆಡಳಿತ ಸರ್ಕಾರಗಳು ಮತ್ತು ಪುರುಷಪ್ರಧಾನ ಸಮಾಜ ತಳೆದಿರುವ ಧೋರಣೆಯನ್ನು ವಿವರವಾಗಿ ಚರ್ಚಿಸಿದ್ದಾರೆ. ಪುರುಷ ರಾಜಕಾರಣಿಗಳಿಗೆ ತಮ್ಮ ಅಧಿಕಾರ ದಾಹ ಎಷ್ಟಿದೆ ಎಂಬುದನ್ನು ಮಹಿಳಾ ಮೀಸಲಾತಿಯನ್ನು ವಿರೋಧಿಸುವ ಮೂಲಕ ತಿಳಿಯಬಹುದು. ಮಹಿಳೆಯರು ಕೇವಲ ಅಡುಗೆ ಮನೆಗೆ ಸೀಮಿತರಾದವರು. ಅವರಿಗೆ ರಾಜಕೀಯ(ರಾಜಕಾರಣದ) ಬಗೆಗೆ ಯಾವುದೇ ರೀತಿಯಾದಂತಹ ಪ್ರಾತಿನಿಧ್ಯ ಸಲ್ಲದು ಎಂಬುದು ಇವರುಗಳ ಧೋರಣೆಯಾಗಿದೆ. ಹಾಗೆ ಮಹಿಳೆಯರ ಬಗೆಗಿರುವ ಒಂದು ಕಲ್ಪಿತವಾದ ಪರಿಕಲ್ಪನೆಯೂ ಇದಕ್ಕೆ ಕಾರಣವಾಗಿದೆ. ಅದೆಂದರೆ ಮಹಿಳೆಯರು ಅಧಿಕಾರಕ್ಕೆ ಬಂದರೆ ತಮ್ಮ ರಾಜಕೀಯ ಅಸ್ತಿತ್ವಕ್ಕೆ ಮತ್ತು ಅಧಿಕಾರಕ್ಕೆ ಎಲ್ಲಿ ಧಕ್ಕೆ ಬರುವುದೆಂಬ ದಿಗಿಲು ಕೂಡ ಹೌದು.

ಮಹಿಳಾ ಮೀಸಲಾತಿಯನ್ನು ಕೇವಲ ಪುರುಷರು ಮಾತ್ರ ವಿರೋಧಿಸಿದ್ದಲ್ಲದೆ ಮಹಿಳೆಯರನ್ನೂ ವಿರೋಧಿಸುವಂತೆ ಪ್ರೇರೇಪಿಸಿ ಮಹಿಳೆಯರ ಮೂಲಕವೇ ಮೀಸಲಾತಿ ವಿರೋಧಿ ಹೇಳಿಕೆಯನ್ನು ನೀಡಿಸಿದ್ದು ಪ್ರಜಾಪ್ರಭುತ್ವದ ದುರಂತವೇ ಸರಿ. ಮೀಸಲಾತಿಯ ಕುರಿತಾಗಿ ಕೇವಲ ಆಡಳಿತ ಅಥವಾ ಬಲಪಂಥೀಯರು ಮಾತ್ರವಲ್ಲದೆ ಎಡಪಂಥೀಯ ಚಿಂತನೆಯುಳ್ಳವರು ಪರೋಕ್ಷವಾಗಿ ಮಹಿಳಾ ಮೀಸಲಾತಿ ಜಾರಿಯಾಗದಿರಲು ಕಾರಣವಾಗಿರುವುದನ್ನು ಲೇಖಕಿ ವ್ಯಕ್ತಪಡಿಸಿದ್ದಾರೆ.

"ಮಹಿಳಾ ಮೀಸಲಾತಿಯ ಬಗ್ಗೆ ಭರವಸೆಗಳ ಬಗ್ಗೆ ಮಹಾಪೌರುಷವನ್ನೇ ಹರಿಸಿದ್ದ ರಾಜಕೀಯ ಪಕ್ಷಗಳ ಬಣ್ಣ ಮಸೂದೆ ಮಂಡನೆಯ ನಂತರ ಬಯಲಾದ ರೀತಿ ಎಂದೂ ಎಲ್ಲೂ ಕಂಡು ಕೇಳರಿಯದು. ೧೯೯೮ರಲ್ಲಿ ಮತ್ತು ೧೯೯೯ರಲ್ಲಿ ಹೊಸ ಸರ್ಕಾರಗಳಿಂದ ಹೊಸ ತಿದ್ದುಪಡಿ ಮಸೂದೆಗಳು ಮಂಡನೆಯಾದಾಗ ಸಂಸತ್ತಿನಲ್ಲಿ ಕಂಡುಬಂದ ಅಸಂಸದೀಯ ನಡವಳಿಕೆಯನ್ನು ದೇಶ ಇನ್ನಾವ ವಿಷಯದಲ್ಲೂ ಕಂಡಿರಲಿಲ್ಲ. ನಮ್ಮ ದೇಶದ ಒಂಭತ್ತು ಪ್ರಮುಖ ರಾಜಕೀಯ ಪಕ್ಷಗಳ ಪೈಕಿ ಐದು ಪಕ್ಷಗಳು ಮಹಿಳಾ ಮೀಸಲಾತಿಗೆ ತಮ್ಮ ಬೆಂಬಲವನ್ನು ಅಧಿಕೃತವಾಗಿ ಸಾರಿದ್ದವು. ಹಾಗಿದ್ದೂ ಮಸೂದೆ ಅಂಗಿಕಾರವಾಗಲಿಲ್ಲ ಎಂಬುದು ಏನನ್ನು ಹೇಳುತ್ತದೆ? ಇನ್ನು ಈ ೨೦೦೪ರ ಏಪ್ರಿಲ್-ಮೇ ತಿಂಗಳಲ್ಲಿ ನಡೆಯಲಿರುವ ಮಹಾಚುನಾವಣೆ ಮುಗಿದು ಹೊಸ ಸರ್ಕಾರ ರಚಿತವಾಗಿ, ಹೊಸ ಮಸೂದೆ ಮಂಡನೆಯಾಗಿ - ಇವೆಲ್ಲ ಆದರೆ ಹೋದರೆ ರಾಜ್ಯಕ್ಕೆ ಸೇರಿದ ಮಾತು. ಯಾವ ರಾಜಕೀಯ ಪಕ್ಷವಾದರೂ ಅಧಿಕಾರಕ್ಕೆ ಬರಲಿ, ಈ ವಿಷಯಕ್ಕೆ ವಿರೋಧ ಮಾತ್ರ ಅದೇ ರೀತಿ ವ್ಯಕ್ತವಾಗುವುದು ಬಹುತೇಕ ಖಚಿತ. ಆದ್ದರಿಂದ

ಈ ಬಾರಿ ಎಲ್ಲಾ ರಾಜಕೀಯ ಪಕ್ಷಗಳ ಪ್ರಣಾಳಿಕೆ, ಪ್ರಚಾರ ಮುಂತಾದ್ದರಲ್ಲಿ ಮಹಿಳಾ ಮೀಸಲಾತಿ ವಿಷಯವೇ ಮಾಯವಾದರೆ ಆಶ್ಚರ್ಯ ಪಡಬೇಕಾಗಿಲ್ಲ. ಇದು ವಿಚಿತ್ರ ಆದರೂ ಸತ್ಯ - ಮಹಿಳೆಯರನ್ನು ಮುಟ್ಟಲು ಯಾರೂ ಇಷ್ಟಪಡುವುದಿಲ್ಲ!

ಹದಿಮೂರು ಲೋಕಸಭೆಗಳನ್ನು ದಾಟಿದರೂ ಸಂಸತ್ತಿನಲ್ಲಿ ಮಹಿಳೆಯರ ಪ್ರಾತಿನಿಧ್ಯ ಶೇಕಡ ೧೦ರ ಪ್ರಮಾಣವನ್ನು ದಾಟಿಲ್ಲ. ೧೯೯೯ರ ಮಹಾಚುನಾವಣೆಯಲ್ಲಿ ಲೋಕಸಭೆಯ ೫೩೭ ಸ್ಥಾನಗಳಿಗೆ ಸ್ಪರ್ಧಿಸಿದ್ದ ೪೬೪೮ ಅಭ್ಯರ್ಥಿಗಳ ಪೈಕಿ ಮಹಿಳೆಯರ ಸಂಖ್ಯೆ ಕೇವಲ ೨೭೫ ಮಾತ್ರ. ವಿವಿಧ ದೊಡ್ಡ ರಾಜಕೀಯ ಪಕ್ಷಗಳು ನಿಲ್ಲಿಸಿದ್ದ ೧೩೦೦ ಅಭ್ಯರ್ಥಿಗಳಲ್ಲಿ ಕೇವಲ ೧೦೩ ಮಹಿಳೆಯರು ಮಾತ್ರ ಇದ್ದರು. ಕಾಂಗ್ರೇಸ್ ಪಕ್ಷ ಕಣಕ್ಕಿಳಿಸಿದ್ದ ೪೫೩ ಅಭ್ಯರ್ಥಿಗಳಲ್ಲಿ ಕೇವಲ ೫೧ ಮಹಿಳೆಯರಿಗೆ ಮಾತ್ರ ಟಿಕೆಟ್ ಕೊಟ್ಟಿತ್ತು. ಆದರೂ ಎಲ್ಲ ರಾಜಕೀಯ ಪಕ್ಷಗಳು ತಾವು ಮಹಿಳಾ ಮೀಸಲಾತಿಯ ಪರವಾಗಿ ಇದ್ದೇವೆಂದು ಹೇಳಿಕೊಂಡಿದ್ದಾರೆ."[೨] ಮೀಸಲಾತಿಯ ಚರ್ಚೆಯು ನಡೆದ ಮೊದಲು ವರ್ಷದಿಂದ ಇಂದಿನವರೆಗೂ ಕಗ್ಗಂಟಾಗಿರುವುದರ ಕುರಿತು ಲೇಖಕಿಯು ಅಂಕಿ-ಅಂಶಗಳ ನೀಡುವುದರ ಜೊತೆಗೆ ಸರ್ಕಾರಗಳ ನಿರ್ಲಿಪ್ತತೆಯನ್ನು ಇಲ್ಲಿ ವಿವರಿಸಿದ್ದಾರೆ. ರಾಜಕೀಯ ಪ್ರಾತಿನಿಧ್ಯವನ್ನು ಪಡೆದುಕೊಳ್ಳಲು ಮಹಿಳೆಯರು ಎಷ್ಟೆಲ್ಲಾ ನಿರ್ಬಂಧಗಳನ್ನು ದಾಟಬೇಕಾಗಿದೆ. ಅಲ್ಲದೆ ರಾಜಕೀಯ ಪಕ್ಷಗಳು ಸಂವಿಧಾನಿಕವಾಗಿ ಸಿಗಬೇಕಾಗಿರುವ ಮೀಸಲಾತಿಯ ಹಕ್ಕನ್ನು ನೀಡುವಲ್ಲಿ ಏನೆಲ್ಲಾ ಕುತಂತ್ರವನ್ನು ಮಾಡಿವೆ ಎಂಬುದನ್ನು ಇಲ್ಲಿ ಮನಗಾಣಬಹುದು. ಪುರುಷ ರಾಜಕಾರಣಿಗಳು ತಮ್ಮ ಅಧಿಕಾರವನ್ನೇ ಕಳೆದುಕೊಂಡೆವೇನೋ ಎಂಬಂತಹ ಆತಂಕವನ್ನು ಬೆನ್ನಿಗೇರಿಸಿಕೊಂಡೇ ಇದ್ದಾರೆ.

ಮಹಿಳಾ ಮೀಸಲಾತಿ ಎಂಬುದು ಭಿಕ್ಷೆ ಎಂಬಂತೆ ಪರಿಗಣಿಸುತ್ತಿದ್ದಾರೆ. ಇದು ಮಹಿಳೆಯರ ರಾಜಕೀಯ ಪ್ರಾತಿನಿಧ್ಯ ಎಂಬುದನ್ನೇ ಮರೆತಂತಿದೆ. ಎಲ್ಲಾ ಚುನಾವಣೆಗಳಲ್ಲಿಯೂ ಮಹಿಳೆಯರಿಗೆ ಟಿಕೇಟು ಕೊಟ್ಟಿದ್ದಾರಾದರೂ ಅದು ಕೇವಲ ಹೆಸರಿಗೆ ಮಾತ್ರವೆಂಬಂತೆ ಅಂದರೆ ಅನುಕಂಪದ ರೂಪದಲ್ಲಿಯೂ ಆಗಿರಬಹುದು. ಇಲ್ಲಿಯೂ ಕೂಡ ಸಮಾನತೆಯ ಮಾತಿಗೆ ಕಿಂಚಿತ್ತು, ಬೆಲೆಯಿಲ್ಲ.

ಚುನಾವಣೆಯಲ್ಲಿ ಮಹಿಳಾ ಪ್ರತಿನಿಧಿಯು ಗೆದ್ದು ಬಂದರೆಂದರೆ ಅವರಿಗೆ ಹಂಚಿಕೆ ಮಾಡುವಂತಹ ಸ್ಥಾನಗಳಲ್ಲಿಯೂ ತಾರತಮ್ಯವೇ, ಪುರುಷ ರಾಜಕಾರಣಿಗಳಿಗೆ ಕೊಡುವಂತಹ ಜವಾಬ್ದಾರಿಯುತ ಅಥವಾ ದೊಡ್ಡ ಸ್ಥಾನಗಳನ್ನು ಮಹಿಳಾ ರಾಜಕಾರಣಿಗಳಿಗೆ ನೀಡುವುದು ಅಷ್ಟರಲ್ಲೇ. ಮಹಿಳೆಯರಿಗೆ ಮತ್ತದೇ ಪೋರ್ಸ್ಟ್‌ಗಳು ಪಾಲನೆ, ಪೋಷಣೆ ಸಂಬಂಧಿಸಿದ್ದವು(ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರ) ಸ್ಥಾನಗಳು. ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯನ್ನು ಬದಲಾದ ದೃಷ್ಟಿಯಲ್ಲಿ ನೋಡದಿರುವುದೇ ಇಂತಹ ಸ್ಥಿತಿಗೆ ಕಾರಣವಾಗಿದೆ. "ಮಹಿಳಾ ಮೀಸಲಾತಿ ಅವಳಲ್ಲಿ ರಾಜಕೀಯ ಪ್ರಜ್ಞೆ ಬೆಳೆಸುತ್ತದೆ. ಮಹಿಳಾ ಮೀಸಲಾತಿ ಒಂದು ಕಡೆ ಅವಳನ್ನು ಜಾಗೃತಗೊಳಿಸಿದರೆ ಮತ್ತೊಂದು ಕಡೆ ಸಂಘಟಿತಳಾಗುವಂತೆ ಪ್ರೇರೇಪಿಸುತ್ತದೆ. ಅವಳ ವಿವಿಧ

ರಂಗಗಳ ಜ್ಞಾನ ಅವಳ ಬೆಳವಣಿಗೆಗೆ ಪೂರಕವಾಗುವುದಲ್ಲದೆ ಅವಳನ್ನು ರಾಜಕೀಯವಾಗಿ ಪ್ರಜ್ಞೆ ಬೆಳೆಯಲು ಕಾರಣವಾಗುತ್ತದೆ. ಮೀಸಲಾತಿಯೆಂಬ ಹರಿಗೋಲಿನಿಂದ ಸಬಲೀಕರಣದತ್ತ ರೂಪಿಸಿದ ಮಹಿಳಾ ಮೀಸಲಾತಿಯನ್ನು ದಿನೇ ದಿನೇ ವಿರೂಪಗೊಳಿಸುತ್ತಿದೆ. 'ಮಹಿಳೆಗೆ ಸಂಸತ್ತಿನ ಜವಾಬ್ದಾರಿ ನಿರ್ವಹಿಸಲು ಆಗುವುದಿಲ್ಲ' ಎಂಬ ಅವರ ಹೇಳಿಕೆಯನ್ನು ಪಂಚಾಯ್ತಿ ಚುನಾವಣೆಗಳು ಹುಸಿಗೊಳಿಸಿವೆ. ಅನಾನುಭವಿ, ಮುದ್ದುಮಣಿ ಶಾಸಕರುಗಳು ಅನೇಕರು ಶಾಸನಸಭೆಗೆ ಮೊದಲ ಬಾರಿ ಪ್ರವೇಶಿಸಿದ್ದಾರೆ.

ಮಹಿಳಾ ಮೀಸಲಾತಿ ಮಸೂದೆ ಜಾರಿಯಾಗಬೇಕಾದರೆ ಪುರುಷ ಸಂಸದರ ಸೀಟುಗಳಿಗೆ ಧಕ್ಕೆಯಾಗದಂತೆ ಹೆಚ್ಚಿನ ಸೀಟು ಹುಟ್ಟು ಹಾಕಿಕೊಡಲಿ? ಎಂಬುದು ಕೆಲವರ ವಾದ. ಆದರೆ ಮಹಿಳೆ ಬೌದ್ಧಿಕ ದಾಸ್ಯದಿಂದ ಹೊರಬರಲು ರಾಜಕೀಯ ಮೀಸಲಾತಿ ಅವಶ್ಯಕ. ಅವಳು ಕೇವಲ ವ್ಯಕ್ತಿಯಲ್ಲ, ಕೇವಲ ಸೋದರಿ, ಹೆಂಡತಿ ತಾಯಿಯಲ್ಲ. ಬದಲಾಗಿ ಅವಳು ಸಮಾಜದ ಒಂದು ಅಭಿನ್ನ ಅಂಗವಾಗಿದ್ದಾಳೆ. ತನಗೆ ಪಂಚಾಯ್ತಿಯಲ್ಲಿ ದೊರೆತ ಸ್ಥಾನದಿಂದ ಅವಳ ಘನತೆ ಹೆಚ್ಚಾಗಿದೆ. ಅವಳು ರಾಜಕೀಯಕ್ಕೊಂದು ಶಕ್ತಿಯಾಗುತ್ತಾಳೆ. ಅವರಲ್ಲಿ ನಾಯಕತ್ವದ ಗುಣ ಬರುವುದರೊಂದಿಗೆ ಸಮಾಜಮುಖಿ ಚಾಲನೆ ಅವಳದಾಗುತ್ತದೆ. ಮೀಸಲಾತಿ ಜಾರಿಯಾದರೆ ಅವಳು ಚರಿತ್ರೆ ನಿರ್ಮಿಸುವ ಹರಿಕಾರಳಾಗುತ್ತಾಳೆ."[೩] ಮಹಿಳಾ ಮೀಸಲಾತಿಯಿಂದ ಮಹಿಳೆಯು ಕೇವಲ ರಾಜಕೀಯವಾಗಿ ಮಾತ್ರ ಬೆಳೆಯದೆ, ಬೌದ್ಧಿಕವಾಗಿ, ಸಾಂಘಿಕವಾಗಿಯೂ ಬೆಳೆಯುವಳು. ಹಿಂದಿನಿಂದಲೂ ಅವಳ ವಿರುದ್ಧ ನಡೆಸಿಕೊಂಡು ಬಂದಿರುವ ದೌರ್ಜನ್ಯ ಕ್ರೌರ್ಯಗಳಿಂದ ಮುಕ್ತಳಾಗಬಲ್ಲಳು. ಚಾರಿತ್ರಿಕವಾಗಿ ಮುಚ್ಚಿಟ್ಟ ಮಹಿಳೆಯರ ಬಗೆಗಿನ ಚಿಂತನೆ ಮತ್ತು ಚರಿತ್ರೆಯ ಸತ್ಯಗಳನ್ನು ಮತ್ತೆ ಮುನ್ನಲೆಗೆ ತರಲು ಸಾಧ್ಯವಾಗುವುದು. ಅಷ್ಟೇ ಅಲ್ಲದೆ ಎಲ್ಲಾ ರಂಗಗಳಲ್ಲಿಯೂ ಪುರುಷರಿಗೆ ಸರಿಸಮಾನವಾಗಿ ಬೆಳೆಯಬಲ್ಲಳು. ಸಾಮಾಜಿಕವಾಗಿಯೂ ಸಬಲಳಾಗಿ ನಿಲ್ಲಬಲ್ಲವಳಾಗಿದ್ದಾಳೆ.

ಸಮಾಜದ ಸ್ವಾಸ್ಥ್ಯ ಕಾಪಾಡಿಕೊಳ್ಳುವಲ್ಲಿ ಮಹಿಳಾ ಮೀಸಲಾತಿಯು ಪ್ರಮುಖವಾದುದ್ದಾಗಿದೆ. ಮಹಿಳೆಯನ್ನು ಕೇವಲ ಮನೆಗೆ ಮತ್ತು ನಿರ್ದಿಷ್ಟ ಸಂಬಂಧಗಳೊಳಗೆ ನಿರ್ಬಂಧಿಸಿ ಅವಳಿಗೆ ಸಾಮಾಜಿಕವಾಗಿ ದುಡಿಯಲು ಸಾಮರ್ಥ್ಯವಿಲ್ಲವೆಂದೇ ಹೇಳಿಕೊಂಡು ಪುರುಷ ಪ್ರಧಾನ ಸಮಾಜವು ಮೂಲೆಗುಂಪು ಮಾಡಿಕೊಂಡೇ ಬಂದಿದೆ. "ಪುರುಷ ಪ್ರಧಾನ ವ್ಯವಸ್ಥೆಯು ತನ್ನದಲ್ಲದ ನಂಬಿಕೆಗಳನ್ನೇ ಪೋಷಿಸಿಕೊಂಡು ಬರುವಂತೆ ಮಹಿಳೆಯರನ್ನು ಹುಸಿ ಮೌಲ್ಯಗಳಡಿಯಲ್ಲಿ ಬಂಧಿಸಿದೆ. ಇಂಥ ವ್ಯವಸ್ಥೆಯಲ್ಲಿ ಬದುಕುತ್ತಿರುವ ಮಹಿಳಾಲೋಕ ಪುರುಷ ಕೇಂದ್ರಿತ ನೆಲೆಯಲ್ಲಿಯೇ ತನ್ನ ಒಳಿತನ್ನು ಭ್ರಮಿಸುತ್ತ ಹೋಗುತ್ತಿದೆ. ಗಂಡಸರ ಕಣ್ಣಿನಿಂದಲೇ ಬದುಕನ್ನು ಕಟ್ಟಿಕೊಳ್ಳುತ್ತಿರುವ ಅವರು ತಮ್ಮ ಸುತ್ತ ತಾವೇ ಹುತ್ತ ಕಟ್ಟಿಕೊಂಡು ನರಳುತ್ತಿದ್ದಾರೆ. ಮಹಿಳೆಯರಿಗೆ ಶಾಸನಸಭೆಯಲ್ಲಿ ಶೇಕಡ ೩೩ರಷ್ಟು ಮೀಸಲಾತಿ ಬೇಕು ಎಂಬ ಮಸೂದೆ ಮಂಡಿಸುವಾಗ ಮಹಿಳಾ ಮೀಸಲಾತಿ ಮತ್ತಾವುದೇ ಕುರಿತು ನೆಪವೊಡ್ಡಿ ಮಹಿಳೆಯರಿಂದಲೇ ಅದನ್ನು ವಿರೋಧಿಸುವ ಕುತಂತ್ರವೂ

ನಡೆಯುತ್ತಿರುತ್ತದೆ. ಇದಕ್ಕೆಲ್ಲಾ ಮಹಿಳೆಯರಿಗೆ ತಮ್ಮ ಪರವಾಗಿರುವ ಶಿಕ್ಷಣದ ಅವಕಾಶವಿಲ್ಲದಿರುವುದೇ ಕಾರಣವಾಗಿದೆ. ಆದ್ದರಿಂದ ಮಹಿಳೆಯರಿಗೆ ಮೂಲಭೂತವಾಗಿ ಶಿಕ್ಷಣ ಲಭ್ಯವಾಗಬೇಕು. ಅದೂ ಸ್ತ್ರೀ ಅಸ್ಮಿತತೆ ಮೆರೆಯುವ ವಿಶಿಷ್ಟ ಶಿಕ್ಷಣ ಬೇಕು. ಹೀಗಾಗಲೂ ನೀತಿ ನಿರೂಪಣೆಯಲ್ಲಿ ಹೆಚ್ಚು ಮಹಿಳೆಯರು ಭಾಗವಹಿಸುವಿಕೆ, ಭಾಗವಹಿಸುವ ಮೂಲಕ ಸ್ತ್ರೀಪರ ಪಾಲಿಸಿಯ ಜಾರಿ ಸಾಧ್ಯ."[೪] ಮಹಿಳೆಯರಿಗೆ ಸರಿಯಾದ ರೀತಿಯಲ್ಲಿ ಶಿಕ್ಷಣದ ಅರಿವು ಇಲ್ಲದಕ್ಕಾಗಿಯೇ ಇನ್ನೂ ಪುರುಷ ಪ್ರಧಾನ ಸಮಾಜದ ದೃಷ್ಟಿಕೋನದಲ್ಲಿಯೆ ಬದುಕನ್ನು ಸಾಗಿಸಬೇಕಾಗಿದೆ. ಅಲ್ಲದೇ ಸರಿಯಾದ ತಿಳಿವಳಿಕೆಯಿಂದಾಗಿ ಉತ್ತಮ ಸಮಾಜ ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ. ಮಹಿಳೆಯರಿಗೆ ಶಿಕ್ಷಣದ ಕೊರತೆಯಿಂದಾಗಿ ರಾಜಕೀಯ ನೆಲೆಯಲ್ಲಿ ಕೇವಲ ನಾಮಕಾವಸ್ಥೆಗೆ ಆಯ್ಕೆಯಾಗಿ ಬಂದಂತಾಗುತ್ತಿದೆ. ಉದಾಹರಣೆಗೆ ಗ್ರಾಮಪಂಚಾಯತ್ ಚುನಾವಣೆಗಳಲ್ಲಿ ಮಹಿಳೆ ಪ್ರತಿನಿಧಿಯಾಗಿ ಅಧಿಕಾರ ಸ್ವೀಕರಿಸಿದ್ದರೂ ಅವಳ ಸ್ಥಾನದಲ್ಲಿ ಆಳ್ವಿಕೆ (ಅಧಿಕಾರ) ನಡೆಸುವುದು ಅವಳ ಗಂಡ ಅಥವಾ ಅಲ್ಲಿನ ಪುರುಷಾಧಿಕಾರಿಗಳಾಗಿರುತ್ತಾರೆ. ಇದರಿಂದಾಗಿ ಮಹಿಳೆಯು ತಾನು ನಡೆಸಬೇಕಾಗಿದ್ದ ಅಧಿಕಾರ ಮತ್ತು ಅವಳ ಅರಿವು ಮೊಟಕುಗೊಳ್ಳುತ್ತದೆ. ಮಹಿಳಾ ಮೀಸಲಾತಿಯನ್ನು ಶೇಕಡ ೩೩ರಷ್ಟು ಕೊಟ್ಟರೂ ಸಹ ದಕ್ಷವಾಗಿ ಬಳಸಿಕೊಳ್ಳಲು ಸಾಧ್ಯವಾಗದಂತಹ ಸ್ಥಿತಿಯನ್ನು ಗ್ರಾಮಪಂಚಾಯತ್‌ಗಳಲ್ಲಿ ಕಾಣಬಹುದಾಗಿದೆ.

"ಮಹಿಳೆಯರು ಒಬ್ಬರೊಬ್ಬರಿಗೆ ಪೂರಕವಾಗಿ ನಿಲ್ಲಬೇಕಾದ ಅಗತ್ಯ ತುಂಬ ಇದೆ. ಪಂಚಾಯ್ತಿಗೆ ಆಯ್ಕೆಯಾದ ಒಬ್ಬ ಮಹಿಳೆ ಓದು-ಬರಹ ತಿಳಿದಿಲ್ಲದಿದ್ದರೆ, ಮೇಲಿನ ಅಧಿಕಾರಿಗಳನ್ನು ನೋಡಲು, ಕಚೇರಿಗಳಿಗೆ ಹೋಗಲು ಹಿಂಜರಿಕೆಯಿದ್ದರೆ ಅದೇ ಊರಿನ ವಿದ್ಯಾವಂತೆಯರು ಅವರಿಗೆ ಸಹಾಯ ಮಾಡಬೇಕು. ಅವರು ಯಾವ ಪಕ್ಷದವರು, ಯಾವ ಜಾತಿಯವರು ಎಂಬುದನ್ನೆಲ್ಲ ಮರೆತು ಅವರ ಸಹಾಯಕ್ಕೆ ನಾವು ಮುಂದಾಗಬೇಕು. ಆ ಮಹಿಳೆಯ ಕೈಗೆ ಬಂದ ಅಧಿಕಾರ ನಮ್ಮೆಲ್ಲರ ಕೈಗೆ ಬಂದ ಅಧಿಕಾರ. ಅದನ್ನು ನಾವು ಉಳಿಸಿಕೊಳ್ಳಬೇಕು, ಸರಿಯಾಗಿ ಬಳಸಿಕೊಳ್ಳಬೇಕು. ಒಂದು ವೇಳೆ ಇಂಥ ಮೀಸಲಾತಿಯಿಲ್ಲದಿದ್ದರೆ ಬಹುಶಃ ಇನ್ನೂ ಎಷ್ಟೋ ಕಾಲ ಇಂಥ ಪರಿಸ್ಥಿತಿಗೆ ಕಾಯಬೇಕಾಗಿತ್ತು. ರಾಜ್ಯಸಭೆ, ಲೋಕಸಭೆ ಮೊದಲಾದವುಗಳಲ್ಲಿರುವ ಪರಿಸ್ಥಿತಿಯನ್ನು ನೋಡಿದರೆ ಈ ಪರಿಸ್ಥಿತಿ ತಿಳಿಯುತ್ತದೆ. ಇನ್ನೂ ಶೇಕಡ ೪ರಷ್ಟು, ಶೇಕಡ ೫ರಷ್ಟು ಪ್ರಾತಿನಿಧ್ಯವನ್ನು ದಾಟಿ ಹೋಗುವುದು ಕಷ್ಟವಾಗಿದೆ."[೫] ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ಸ್ಪರ್ಧಿಸುವ ಮಹಿಳೆಯರು ಸಾಮಾನ್ಯವಾಗಿ ಶಿಕ್ಷಣವನ್ನು ಕಲಿತವರು ಕಡಿಮೆಯೆ. ಶಿಕ್ಷಣ ಕಲಿತವರೂ ಸ್ಪರ್ಧಿಸಿದರೂ ವಿರಳ ಸಂಖ್ಯೆಯಲ್ಲಿ ಕಾಣುತ್ತೇವೆ. ಇಂತಹ ಸಂದರ್ಭದಲ್ಲಿ ಆಯ್ಕೆಯಾಗಿ ಅಧಿಕಾರವನ್ನು ಸ್ವೀಕರಿಸಿದ ಮಹಿಳೆಯೋರ್ವಳನ್ನೇ ಬಿಡದೆ ಉಳಿದ ಅಕ್ಷರಸ್ಥ ಮಹಿಳೆಯರು ಆ ಮಹಿಳೆಯ ಬೆನ್ನೆಲುಬಾಗಿ ನಿಲ್ಲಬೇಕೆಂದು ಹೇಳುತ್ತಾರೆ.

ಹಾಗೆಯೇ ಗ್ರಾಮಪಂಚಾಯ್ತಿಯ ಮೂಲಕ ಸಿಕ್ಕಿರುವ ಅಧಿಕಾರ ಆ ಮಹಿಳೆ ಒಬ್ಬಳದ್ದೇ ಆಗಿರದೆ ಇಡೀ ಮಹಿಳಾ ಸಂಕುಲಕ್ಕೆ ಸಿಕ್ಕಿದ ಅಧಿಕಾರವಾಗಿರುತ್ತದೆ. ಆದ್ದರಿಂದ ಅದನ್ನು ಉಳಿಸಿ

ಬೆಳೆಸುವುದು ಎಲ್ಲಾ ಮಹಿಳೆಯರ ಕರ್ತವ್ಯವೂ ಹೌದು. ಮೀಸಲಾತಿಯಿಂದಾಗಿ ಮಹಿಳೆಯರಿಗೆ ಸಿಕ್ಕ ಪ್ರಾತಿನಿಧ್ಯವದು. ಅದನ್ನು ಸರಿಯಾದ ಕ್ರಮದಲ್ಲಿ ಬಳಸಬೇಕು. ಇಲ್ಲವಾದಲ್ಲಿ ಪುರುಷ ಪ್ರಧಾನ ಸಮಾಜದಲ್ಲಿ ಮತ್ತೆ ಪುರುಷರ ಕೈಗೆ ಸಿಕ್ಕಿ ನಲುಗಿ ಹೋಗುವುದು. ಯಾವುದೇ ಜಾತಿ, ಧರ್ಮಕ್ಕೆ ಕಟ್ಟು ಬೀಳದೇ ಉಳಿಸಿಕೊಳ್ಳುವುದು ಮಹಿಳೆಯರೆಲ್ಲರ ಕರ್ತವ್ಯವಾಗಿದೆ ಎಂಬುದನ್ನು ಲೇಖಕಿಯು ಹೇಳುತ್ತಾರೆ.

"ರಾಜಕೀಯ ಮೀಸಲಾತಿಯ ವಿಷಯ ಭಾರತಕ್ಕೆ ಹೊಸದಲ್ಲ. ೧೯ನೆಯ ಶತಮಾನದ ಕೊನೆಯಲ್ಲೇ ಬ್ರಿಟಿಷ್ ಆಳ್ವಿಕೆಯಲ್ಲೇ ಮೀಸಲಾತಿಯ ಪ್ರವೇಶವಾಯಿತು. ೨೦ನೇ ಶತಮಾನದ ನಾಲ್ಕನೇ ದಶಕದಲ್ಲಿ ಮೀಸಲು ಚುನಾವಣಾ ಕ್ಷೇತ್ರಗಳು ಹಾಗೂ ಅಲ್ಪಸಂಖ್ಯಾತರಿಗೆ ಮೀಸಲಾತಿ ಬರುವಾಗಲೇ ಮಹಿಳಾ ಮೀಸಲಾತಿಯ ವಿಷಯವೂ ತಲೆಯೆತ್ತಿತ್ತು. ೧೯೫೭ರಲ್ಲೇ ಪಂಚಾಯ್ತಿಗೆ ಮಹಿಳೆಯರನ್ನು ನಾಮಕರಣ ಮಾಡುವ ಪ್ರಸ್ತಾಪ ಬಂತು. ೧೯೭೪ರಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಶೇಕಡ ೩೦ರಷ್ಟು ಮೀಸಲಾತಿ ನೀಡುವ ಶಿಫಾರಸ್ಸು ಬಂತು. ೧೯೯೧ರ ನಂತರ ಪಂಚಾಯ್ತಿ ಮೀಸಲಾತಿಯ ಮೂಲಕ ಸುಮಾರು ಒಂದು ಮಿಲಿಯನ್ ಮಹಿಳೆಯರು ರಾಜಕೀಯಕ್ಕೆ ಬರುವಂತಾಯಿತು. ಈ ಎಲ್ಲ ಶಿಫಾರಸ್ಸು, ಬದಲಾವಣೆಯ ಹಿನ್ನೆಲೆಯಲ್ಲಿ ಶಾಸನಸಭೆಗಳಲ್ಲಿ ಶೇಕಡ ೩೩ರಷ್ಟು ಮಹಿಳಾ ಮೀಸಲಾತಿ ಇರಬೇಕೆಂಬ ಮಸೂದೆಯ ಮಂಡನೆಯಾಯಿತು. ಆ ಕುರಿತ ಪರ - ವಿರೋಧ ಚರ್ಚೆಗಳು ನಡೆಯುತ್ತಿವೆ. ರಾಜಕಾರಣಿಗಳ ಮಹಿಳಾ ಪರತೆಯ ಬಣ್ಣವೂ ಬಯಲಾಗಿದೆ."[೬] ಶತಮಾನಗಳು ಉರುಳಿದರೂ ಮಹಿಳಾ ಮೀಸಲಾತಿಗೆ ವಿರೋಧ ಮಾಡುತ್ತಿರುವುದು ಇನ್ನೂ ನಿಂತಿಲ್ಲವೆಂಬುದು ಈ ಪ್ರಭುತ್ವ ಮತ್ತು ವ್ಯವಸ್ಥೆಯ ದುರಂತವೇ ಸರಿ. ಈ ಕಾಲಕ್ಕೂ ಮುಂದುವರೆಸಿಕೊಂಡೇ ಬರಲಾಗುತ್ತಿದೆ. ಸಮಾನತೆಗಾಗಿ ನಿರಂತರವಾಗಿ ಮಹಿಳೆಯರು ಹೋರಾಡುತ್ತಿದ್ದಾರೆಂದರು. ಅದಕ್ಕೆ ತಕ್ಕ ಪ್ರತಿಫಲವು ದಕ್ಕದೇ ಇರುವುದು ಈ ವ್ಯವಸ್ಥೆಯಲ್ಲಿನ ಲೋಪವನ್ನು ತೋರುತ್ತಿದೆ. ಆಧುನಿಕ ಮತ್ತು ಉನ್ನತ ಶಿಕ್ಷಣದ ಸಂದರ್ಭದಲ್ಲಿಯೂ ಕೂಡ ಬಂಡವಾಳಶಾಹಿ ಆಡಳಿತದಿಂದ ಬಿಡಿಸಿಕೊಳ್ಳಲು ಸಾಧ್ಯವಾಗದೇ ನಲುಗುತ್ತಿರುವುದನ್ನು ಈ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ ಎಂಬುದು ವಿಜಯಾದಬ್ಬೆಯವರ ನಿಲುವಾಗಿದೆ.

"ಮಹಿಳಾ ಮೀಸಲಾತಿ ಮಸೂದೆಯು ಪಾರ್ಲಿಮೆಂಟಿನಲ್ಲಿ ಬಂದಾಗೆಲ್ಲ ಯಾದವ ತ್ರಿಮೂರ್ತಿಗಳು ಯಾವತ್ತೂ ವಿರೋಧಿಸುವರು. ಇತರ ಹಿಂದುಳಿದ ಸಮುದಾಯದ ಮಹಿಳೆಯರಿಗೆ ಮಸೂದೆಯಲ್ಲಿ ಮೀಸಲಾತಿ ಕಲ್ಪಿಸದ ಹೊರತು ಬಿಲ್ಲು ತರಲು ಬಿಡುವುದಿಲ್ಲವೆಂದು ಪಾರ್ಲಿಮೆಂಟಿನಲ್ಲಿ ಮಸೂದೆಯ ಪ್ರತಿ ಹರಿದು ಥೇಟ್ ಗೂಂಡಾಗಳಂತೆ ವರ್ತಿಸಿದ್ದರು. ಆದರೆ ತಮ್ಮದೇ ಪಕ್ಷದಲ್ಲಿ ಟಿಕೇಟು ಕೊಡುವಾಗ ಹಿಂದುಳಿದ ಮಹಿಳೆಯರ ನೆನಪೇ ಆಗುವುದಿಲ್ಲ. ಮೀಸಲಾತಿ ಮಸೂದೆಯ ಪ್ರಶ್ನೆ ಬಂದಾಗ ಮಹಿಳಾಪರ ಮಾತಾಡುವ ಇವರ ಹುಸಿ ಪ್ರೀತಿಯ ಹಿಂದೆಯೂ ಸ್ವಾರ್ಥ ಪುರುಷ ರಾಜಕಾರಣವಿದೆ ಎಂಬುದು ಅಷ್ಟೇ ಸತ್ಯವಾದದ್ದು. ಉದ್ದೇಶ ಮಾತ್ರ ಮಹಿಳಾ ಮೀಸಲಾತಿ ಮಸೂದೆ ವಿರೋಧಿಯಾದದ್ದೇ. ಆದ್ದರಿಂದಲೇ ಮಹಿಳಾ ನಾಯಕತ್ವ ಹೊಂದಿದ ಕಾಂಗ್ರೆಸ್ ಪಕ್ಷವು ಚುನಾವಣೆ ಪ್ರಣಾಳಿಕೆಯಲ್ಲಿ ಮಸೂದೆ ಜಾರಿಗೆ ತಾನು ಬದ್ಧ ಎಂದು

ಹೇಳಿಕೊಳ್ಳುತ್ತಲೇ ಮಸೂದೆಯನ್ನು ನೆನಗುದಿಗೆ ತಳ್ಳಿದ ಸತ್ಯ ಈಗ ದೇಶದ ಅಂಗೈ ಹುಣ್ಣು. ಎಡಪಕ್ಷಗಳನ್ನು ಹೊರತುಪಡಿಸಿ ಉಳಿದೆಲ್ಲ ಪಕ್ಷಗಳು ಒಂದೊಂದು ನೆಪ ಮುಂದೆ ಮಾಡಿ ಮಹಿಳಾ ಮೀಸಲಾತಿ ಮಸೂದೆಗೆ ಕಡೆಯ ಮೊಳೆ ಹೊಡೆಯಲು ಕಾಯುತ್ತಿರುವುದು ನೀತಿ ನಿರೂಪಣಾ ಸ್ಥಾನದಲ್ಲಿ ಮಹಿಳೆಯರು ಇರಬೇಕೆಂದು ನಿರಂತರ ಹೋರಾಡುತ್ತಿರುವ ಮಹಿಳಾ ಸಂಘಟನೆಗಳು ಇಂದಿನ ರಾಜಕೀಯ ಬೆಳವಣಿಗೆಯನ್ನು ಇನ್ನಷ್ಟು ತೀವ್ರವಾಗಿ ವಿಮರ್ಶಿಸುವ ಜರೂರಿ ಇದೆ. ಯಾಕೆಂದರೆ ಮೀಸಲಾತಿಯ ಪರವಾಗಿರುವ ಪಕ್ಷಗಳು ಸಹ ಚುನಾವಣೆಯ ಸಂದರ್ಭದಲ್ಲಿ ಮಹಿಳೆಯರಿಗೆ ಟಿಕೇಟು ಕೊಡುವಲ್ಲಿ ಹಿಂದೇಟು ಹಾಕುತ್ತವೆ."[೭] ಒಂದು ಕಡೆ ಸಮರ್ಥವೆನಿಸಿಕೊಂಡವರೇ ಮಹಿಳಾ ಮೀಸಲಾತಿಯ ಮಸೂದೆಯನ್ನು ವಿರೋಧಿಸಿ ಗದ್ದಲವೆಬ್ಬಿಸಿದರು. ಮತ್ತೊಂದೆಡೆ ಮೀಸಲಾತಿಯನ್ನು ಜಾರಿ ಮಾಡದೇ ಇದ್ದಲ್ಲಿ ಬಿಲ್ ಪಾಸ್ ಮಾಡಲು ಬಿಡುವುದಿಲ್ಲವೆಂದು ಕೂಗಾಡಿದರು. ಆದರೆ ಟಿಕೇಟು ನೀಡುವ ಸಂದರ್ಭದಲ್ಲಿ ಮಾತ್ರ ಮಹಿಳೆಯರಿಗೆ ಟಿಕೇಟು ಕೊಡಲು ಹಿಂದೇಟು ಹಾಕಿದ್ದು ಮರೆಯುವಂತಿಲ್ಲ. ಮಹಿಳಾ ಮೀಸಲಾತಿಯಲ್ಲಿ ಓ.ಬಿ.ಸಿ. ಮಹಿಳೆಯರಿಗೆ ಮೀಸಲಾತಿಯ ಅಗತ್ಯವನ್ನು ಕೋರಿದವರು ಚುನಾವಣೆ ಸಮಯದಲ್ಲಿ ಅದನ್ನು ಮರೆತೇ ಬಿಟ್ಟರು. ಮೀಸಲಾತಿಯ ಮಾತೇ ಬರದಂತೆ ನೋಡಿಕೊಂಡರು. ಮೀಸಲಾತಿ ಕೊಡುವ ಚರ್ಚೆ ನಡೆದಾಗ ಶರದ್ ಯಾದವ್ ಹೀಗೆ ಹೇಳಿದ್ದರು. 'ಹೆಣ್ಣುಮಕ್ಕಳಿಗೆ ಸಂಸದೀಯ ವ್ಯವಸ್ಥೆಯಲ್ಲಿ ಮೀಸಲಾತಿ ಕೊಟ್ಟರೆ ಸದನದಲ್ಲಿ ಬರೀ ಬಾಲ್‌ಕಟಿ(ಕೂದಲು ಕತ್ತರಿಸಿಕೊಂಡ) ಹೆಣ್ಣು ಮಕ್ಕಳೇ ತುಂಬುತ್ತಿದ್ದರು' ಎನ್ನುತ್ತಾರೆ. ಇದಕ್ಕೆ ಮತ್ತಷ್ಟು ಪುಷ್ಟಿ ನೀಡಿ ಮುಲಾಯಂ ಸಿಂಗ್ ಯಾದವ್ ಮತ್ತು ಲಾಲುಪ್ರಸಾದ್ ಯಾದವ್ ಕೂಡ ಇದೇ ಅರ್ಥದಲ್ಲಿ ಮಾತಾಡಿದ್ದನ್ನು ನಾವು ನೋಡಬಹುದು. ಈ ಮೂರು ಜನರು ಮಹಿಳಾ ಮೀಸಲಾತಿಯನ್ನು ತಡೆಯುವಲ್ಲಿ ಪ್ರಮುಖ ಪಾತ್ರವಹಿಸಿರುವುದನ್ನು ಇಲ್ಲಿ ಲೇಖಕಿಯು ಟೀಕಿಸಿದ್ದಾರೆ.

೪.೧. ಒಳಮೀಸಲಾತಿ

ರಾಜಕೀಯ ಪ್ರಾತಿನಿಧ್ಯ ಹೊಂದಲು ಶೇಕಡ ೩೩ರಷ್ಟು ಮಹಿಳಾ ಮೀಸಲಾತಿಯು ಬಹಳ ಪ್ರಮುಖವಾದದ್ದಾಗಿದೆ. ಹಾಗೆಯೇ ಇದರಲ್ಲಿ ಮಹಿಳೆಯರಲ್ಲರ ಸಹಭಾಗಿತ್ವವು ಅಷ್ಟೇ ಮುಖ್ಯ. ಎಲ್ಲಾ ವರ್ಗ, ಜಾತಿಯ ಮಹಿಳೆಯರಿಗೆ ಈ ಮೀಸಲಾತಿಯ ಹಂಚಿಕೆಯು ಧನಾತ್ಮಕವಾದ ಅಂಶವಾಗಿದ್ದರೂ ಕೂಡ ಭಾರತದಂತಹ ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೆ ಜಾತಿ ಮುಖ್ಯ ಪಾತ್ರವಹಿಸುತ್ತದೆ ಎನ್ನುವುದನ್ನು ಮರೆಯುವಂತಿಲ್ಲ. ಹಾಗೆಯೇ ಎಲ್ಲಾ ವರ್ಗದ ಮಹಿಳೆಯರ ಸ್ಥಿತಿಗತಿಗಳೂ ಕೂಡ ಒಂದೇ ಎಂದು ಭಾವಿಸುವುದು ಕೂಡ ಒಳ್ಳೆಯದಲ್ಲ. ಕೆಳವರ್ಗ ಮತ್ತು ಮೇಲ್ವರ್ಗದ ಮಹಿಳೆಯರು ದೈಹಿಕವಾಗಿ ಒಂದೇ ರೀತಿಯಾದಂತಹ ಸಮಸ್ಯೆ ಮತ್ತು ಸವಾಲನ್ನು ಎದುರಿಸುತ್ತಾರಾದರು. ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕವಾಗಿ ಒಂದೇ ತೆರನಾದ ಸಮಸ್ಯೆಯನ್ನು ಎದುರಿಸಲು ಸಾಧ್ಯವಿಲ್ಲ. ಈ ಕಾರಣಕ್ಕಾಗಿಯೇ 'ಒಳಮೀಸಲಾತಿಯ' ಅಗತ್ಯವನ್ನು ನಾವು ಅರಿಯಬೇಕಾಗಿದೆ.

ಒಳಮೀಸಲಾತಿಗೆ ಸಂಬಂಧಿಸಿದ ಚರ್ಚೆಗಳಲ್ಲಿ ಕೆಲವರದು ವಿರೋಧವಿರುವುದನ್ನೂ ಕೂಡ ನಾವು ಕಾಣಬಹುದು. ನೇರವಾಗಿ ವಿರೋಧ ವ್ಯಕ್ತಪಡಿಸದಿದ್ದರೂ ಪರೋಕ್ಷವಾಗಿ ನಯವಾಗಿ ತಿಳಿಯಲಾರದಂತೆ ಸಮಾನತೆಯ ಹೆಸರು ಹೇಳುತ್ತಲೇ ತಿರಸ್ಕರಿಸುವುದು ತಿಳಿಯುವುದು ಇಲ್ಲಿಯ ಬಹುಮುಖ್ಯ ಅಂಶವಾಗಿದೆ.

ಒಳಮೀಸಲಾತಿಯನ್ನು ಕುರಿತಾಗಿ ಎಚ್.ಎಸ್. ಶ್ರೀಮತಿಯವರು 'ದಲಿತ ಮಹಿಳಾಲೋಕ ಮತ್ತು ಮಹಿಳಾ ಮೀಸಲಾತಿ-ಒಂದು ಟಿಪ್ಪಣಿ' ಎಂಬ ಲೇಖನದಲ್ಲಿ ಹೀಗೆ ಹೇಳುತ್ತಾರೆ. "ದಲಿತ ಮಹಿಳೆಯರಿಗೆ ಒಳಮೀಸಲಾತಿ ಎಂಬ ಅತಿ ಬುದ್ಧಿವಂತಿಕೆಯ ವಾದ ಸರಣಿಯೊಂದು ಹುಟ್ಟಿಕೊಂಡು ಪುರುಷರ ಸವಲತ್ತುಗಳನ್ನು ಕಾಯುವ ಆಯುಧವಾಗಿ ಕೆಲಸ ಮಾಡತೊಡಗಿದೆ. ಮೇಲುನೋಟಕ್ಕೆ ಒಳಮೀಸಲಾತಿಯನ್ನು ಈ ಮಾತು ಜಾತಿ, ವರ್ಗ ಶ್ರೇಣೀಕರಣಗಳ ನ್ಯಾಯ, ತರ್ಕಗಳನ್ನು ಹಿಡಿದು ಹೊರಟ ಸಭ್ಯ ಚಿಂತನೆಯಂತೆಯೇ ತೋರುತ್ತದೆ. ಆದರೆ ದಲಿತ ಮಹಿಳೆಯರೂ ಒಳಗೊಂಡಂತೆ ಒಟ್ಟು ಮಹಿಳಾ ಸಮುದಾಯವೇ ಈ ಸಾಮಾಜಿಕ ವ್ಯವಸ್ಥೆಯಲ್ಲಿ, ಸಿಲುಕಿರುವ ಅನೇಕ ಸಮಸ್ಯೆಗಳನ್ನು ಸೂಕ್ಷ್ಮ ವಿಶ್ಲೇಷಣೆಗಳಲ್ಲಿ ಗಮನಿಸಿದರೆ ಇಲ್ಲಿ ವ್ಯಕ್ತವಾಗಿರುವ ದಲಿತ ಮಹಿಳೆಯರ ಬಗೆಗಿನ ಕಾಳಜಿ ಅಷ್ಟೇನೂ ಸರಳವಾದದ್ದಲ್ಲ ಎಂಬುದು ತಿಳಿಯುತ್ತದೆ. ಮಹಿಳಾ ಸಮುದಾಯವನ್ನು ಒಡೆದು ಆಳುವ ರಾಜಕೀಯ ತಂತ್ರವಾಗಿ ಮಾತ್ರ ಈ ಒಳಮೀಸಲಾತಿಯ ಮಾತು ಹುಟ್ಟಿಕೊಂಡು, ಪುರುಷರ ಸೀಟುಗಳು ಸದ್ಯಕ್ಕಾದರೂ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಂಡು ಅವರಿಗೇ ಉಳಿಯುವಲ್ಲಿ ನೆರವಾದಂತಿದೆ."[೮] ಹೀಗೆ ಪುರುಷ ಪ್ರಧಾನ ಸಮಾಜದ ಹುನ್ನಾರವನ್ನು ದೂಷಿಸುತ್ತಲೇ ಒಳಮೀಸಲಾತಿಗಿರುವ ಅವರ ವಿರೋಧವು ವ್ಯಕ್ತವಾಗುವುದನ್ನು ನಾವು ಸೂಕ್ಷ್ಮವಾಗಿ ನೋಡಿದಾಗ ತಿಳಿಯುತ್ತದೆ. ಇದಷ್ಟೇ ಅಲ್ಲದೆ ಮುಂದುವರೆದು ಅವರು ಹೇಳುತ್ತಾರೆ.

ಅವರ ಮಾತಿನಲ್ಲಿಯೇ ಹೇಳುವುದಾದರೆ "ಸದ್ಯಕ್ಕೆ ಸ್ತ್ರೀ ಪುರುಷ ಸಮಾನತೆಯ ಒಂದು ಸಾಧನವಾಗಿ ಒದಗಬಹುದಾದ ಮಹಿಳಾ ಮೀಸಲಾತಿಯನ್ನು ಪಡೆದು ನಾವು ಸಶಕ್ತರಾಗಬೇಕು. ಇಲ್ಲಿ ಮಹಿಳೆಯರೆಲ್ಲರೂ ಒಂದೇ. ಒಟ್ಟು ಮಹಿಳಾ ಮೀಸಲಾತಿಯಲ್ಲಿ ದಲಿತ ಮಹಿಳೆಯರಿಗೆ ಪಾಲು ಒದಗಿಸಿ ಬಿಟ್ಟರೆ, ತಮ್ಮ ಪಾಲಿನಲ್ಲಿ ಅವರಿಗೆ ಕೊಡಬೇಕಾದದ್ದನ್ನು ತಪ್ಪಿಸಬಹುದು ಎಂದು ತರ್ಕಿಸಿದರೆ, ಅದು ಮಹಿಳಾ ಸಮುದಾಯಕ್ಕೆ ಮಾಡುವ ವಂಚನೆಯಲ್ಲವೇ? ಒಟ್ಟು ಮಹಿಳೆಯರಿಗಾಗಿ ಎಂದು ಮೀಸಲಿಟ್ಟ ಭಾಗದೊಳಗೇ ದಲಿತ ಮಹಿಳೆ ಎಂಬ ಜಾತಿ ಪ್ರಶ್ನೆಯನ್ನೂ ತೂರಿಸಿಬಿಟ್ಟು ಜಾತಿ ಮೀಸಲಾತಿಯಲ್ಲಿ ದಲಿತ ಮಹಿಳೆಯ ಪಾಲನ್ನು ನುಂಗಿ ಹಾಕಲು ಅವಕಾಶವಾಗುವುದು ಬೇಡ. ದಲಿತರ ಕೋಟದಲ್ಲಿ ಅಲ್ಲಿನ ಮಹಿಳೆಯರಿಗೆ ನ್ಯಾಯವಾದ ಪಾಲು ಸಿಗಬೇಕು. ಒಟ್ಟು ಮಹಿಳಾ ಮೀಸಲಾತಿಯಲ್ಲಿ ದಲಿತ ಮಹಿಳೆಯೂ ಸೇರಿದಂತೆ, ಎಲ್ಲ ದುರ್ಬಲ ಮಹಿಳೆಯರ ಹಕ್ಕುಗಳೂ ಸಂರಕ್ಷಿತವಾಗಬೇಕು. ಮಹಿಳೆಯರೆಲ್ಲರೂ ಪರಸ್ಪರ ನ್ಯಾಯಯುತವಾದ ಒಂದು ಒಪ್ಪಂದಕ್ಕೆ ಬರುವಲ್ಲಿ 'ಸೋದರಿತ್ವ'ವನ್ನು ಸಾಧಿಸಬೇಕು. 'ಮಹಿಳಾ ಮೀಸಲಾತಿ' ಎಂದಾಕ್ಷಣ 'ದಲಿತ ಮಹಿಳೆ'ಯನ್ನು ಹೊರತುಪಡಿಸಿ ಎಂಬ ಅರ್ಥವೇನಲ್ಲ. ಪುರುಷ ಚಿಂತನೆಯು ಇಲ್ಲದ

ಅರ್ಥವನ್ನು ತುರುಕಿ ವಾದವಿವಾದಗಳನ್ನೆಬ್ಬಿಸಿ ಮಹಿಳಾ ಮೀಸಲಾತಿ ಮಸೂದೆಯು ಎಂದೆಂದೂ ಒಂದು ಗತಿಕಾಣದಿರಲಿ ಎಂಬ ಪ್ರಯತ್ನವನ್ನು ನಡೆಸುತ್ತಿದೆ ಎಂಬ ಬಗ್ಗೆ ಎಚ್ಚರ ಅಗತ್ಯ." ಮೀಸಲಾತಿ ಎಂದು ಬಂದಾಗ ಮಾತ್ರ ಎಲ್ಲ ಮಹಿಳೆಯರೂ ಒಂದಾಗಬೇಕು. ಮಹಿಳೆಯರ ನಡುವೆ ಒಡಕುಂಟಾಗುತ್ತದೆ ಎಂದು ಹೇಳುವಾಗ ಕೆಲವು ಸಂದರ್ಭಗಳಲ್ಲಿ ದಲಿತ ಮಹಿಳೆಯನ್ನು ಹೊರಗಿಟ್ಟು ನೋಡುವುದನ್ನು ಈ ಸಮಾಜದಲ್ಲಿ ಕಾಣುತ್ತೇವೆ. ಆ ಕಾರಣಕ್ಕಾದರೂ 'ದಲಿತ ಮಹಿಳೆ'ಯರಿಗೆ ಒಳಮೀಸಲಾತಿಯ ಅಗತ್ಯವಿದೆ.

ದಲಿತ ಮಹಿಳೆಯರಿಗೆ ಅಥವಾ ಒಳಮೀಸಲಾತಿಯ ಅಗತ್ಯ ಏಕಿದೆ ಎನ್ನುವುದಕ್ಕೆ ಶಿರಿನ್‌ರಾಯ್ ಎನ್ನುವವರು ತಮ್ಮ 'ಜಾತಿ, ವರ್ಗ ಮತ್ತು ಲಿಂಗ-ಭಾರತದ ಪಾರ್ಲಿಮೆಂಟಿನಲ್ಲಿ ಮಹಿಳೆಯರು' ಎಂಬ ಅಧ್ಯಯನದಲ್ಲಿ ಹತ್ತನೇ ಪಾರ್ಲಿಮೆಂಟಿನಲ್ಲಿದ್ದ ಮಹಿಳೆಯರ ಬಗ್ಗೆ ಕೆಲವು ಕುತೂಹಲಕಾರಿ ಅಂಶಗಳನ್ನು ಸಂಶೋಧನೆ ಮಾಡಿ ಪ್ರಕಟಿಸುತ್ತಾರೆ. "ಭಾರತದ ಜನಜೀವನದಲ್ಲಿ 'ಜಾತಿ' ಅತ್ಯಂತ ಪ್ರಮುಖ ಸ್ಥಾನ ಪಡೆಯುತ್ತದೆ. ಸಂಸತ್ತಿಗೆ ಚುನಾಯಿತರಾಗಿರುವ ಬಹುಪಾಲು ಮಂದಿ ಮೇಲುಜಾತಿಯ ಮಹಿಳೆಯರೇ. ಉದಾಹರಣೆಗೆ ಬ್ರಾಹ್ಮಣ ಜಾತಿಗೆ ಸೇರಿದ ಮಹಿಳೆಯರು ಆರು ಮಂದಿ ಇದ್ದರು. ಅಂದರೆ ಇದ್ದ ಮಹಿಳಾ ಎಂ.ಪಿ.ಗಳ ಸಂಖ್ಯೆಯಲ್ಲಿ ಶೇಕಡ ೧೭.೧೪ರಷ್ಟು ಆಗುತ್ತದೆ. ಆದರೆ ಜನಸಂಖ್ಯೆಯಲ್ಲಿ ಬ್ರಾಹ್ಮಣರ ಪ್ರಮಾಣ ಶೇಕಡ ೫.೫೨ರಷ್ಟು ಮಾತ್ರ. ಇಂತಹ ಸರಳೀಕರಣದ ತೀರ್ಮಾನದ ನಡುವೆಯೂ ಈ ಆರು ಮಹಿಳೆಯರಲ್ಲಿ ಇಬ್ಬರು ಕಮ್ಯೂನಿಸ್ಟ್ ಪಕ್ಷದವರು ಮತ್ತು ಸ್ವಾತಂತ್ರ್ಯ ಚಳುವಳಿ ಮತ್ತು ಎಮರ್ಜೆನ್ಸಿ ವಿರೋಧಿ ಚಳುವಳಿಯಿಂದ ಬಂದವರಾಗಿದ್ದರು. ಇಷ್ಟಾಗಿ ಜಾತಿ ಮೀಸಲಾತಿಯ ಲಾಭವನ್ನು ಪಡೆಯುವುದರಲ್ಲಿ ಮಹಿಳೆಯರು ಕೇವಲ ಶೆಕಡ ೪.೧ರಷ್ಟು ಇಬ್ಬರು ಪರಿಶಿಷ್ಟ ಪಂಗಡದ ಮತ್ತು ಇಬ್ಬರು ಹಿಂದುಳಿದ ವರ್ಗದ ಮಹಿಳೆಯರು ಚುನಾಯಿತರಾಗಿದ್ದರು. ಹೀಗೆ ಮಹಿಳಾ ನಾಯಕರ ನಿಷ್ಠೆ, ಕಾರ್ಯ ಶೈಲಿ, ಪ್ರತಿನಿಧೀಕರಣವನ್ನು ನಿರ್ಧರಿಸುವಲ್ಲಿ ಜಾತಿಯ ಪಾತ್ರ ಬಹಳವಿದೆ. ಮತ್ತೆ ಜಾತಿಯ ಒಳಗಡೆ ಕೆಲಸ ಮಾಡುವ ಲಿಂಗ ರಾಜಕೀಯವೂ ಮಹಿಳಾ ಸಬಲೀಕರಣಕ್ಕೆ ಅಡ್ಡಗಾಲು ಹಾಕುತ್ತದೆ.

ಪಾರ್ಲಿಮೆಂಟಿನಲ್ಲಿದ್ದ ೩೯ ಸಂಸತ್ ಸದಸ್ಯೆಯರಲ್ಲಿ ೩೨ ಮಂದಿ ಸ್ನಾತಕೋತ್ತರ ಪದವಿ ಪಡೆದವರು, ರಾಜ್ಯಸಭೆಯಲ್ಲಿದ್ದ ೧೭ ಮಂದಿಯಲ್ಲಿ ೧೪ ಮಂದಿ ಪದವೀಧರರು ಆಗಿದ್ದರು. ಇಲ್ಲಿ ಜಾತಿಗಿಂತ ಈ ಮಹಿಳೆಯರ ವಿದ್ಯಾಭ್ಯಾಸವೇ ಅವರ ವರ್ಗವನ್ನು ನಿರ್ಧರಿಸುವ ಅಂಶವಾಗಿತ್ತು. ಇದ್ದ ಏಳು ಕೆಳಜಾತಿಯ ಮಹಿಳೆಯರಲ್ಲಿ ಒಬ್ಬರು ಮಾತ್ರ ಪದವೀಧರರಾಗಿರಲಿಲ್ಲ. ಒಬ್ಬ ಪರಿಶಿಷ್ಟ ಜಾತಿಯ ಮಹಿಳಾ ಎಂ.ಪಿ.ಯು ಸ್ನಾತಕೋತ್ತರ ಪದವಿ ಪಡೆದಿದ್ದರು. ರಾಜ್ಯಸಭೆಯಲ್ಲಿದ್ದ ಶೇಕಡ ೩೦ರಷ್ಟು ಮಹಿಳೆಯರು ವಕೀಲೆಯರಾಗಿದ್ದರೆ ಲೋಕಸಭೆಯಲ್ಲಿದ್ದ ಶೇಕಡ ೨೫ರಷ್ಟು ಮಹಿಳೆಯರು ಶಿಕ್ಷಕಿಯರು ಆಗಿದ್ದರು. ವರ್ಗವು ಧರ್ಮವನ್ನು ಪ್ರಭಾವಿಸುತ್ತದೆ. ರಾಜ್ಯಸಭೆಯಲ್ಲಿದ್ದ ಏಕೈಕ ಮುಸ್ಲಿಂ ಎಂ.ಪಿ.ಯಾದ ಡಾ. ನಜ್ಮಾಹೆಪ್ತುಲ್ಲಾ ಮತ್ತು ರಾಜ್ಯ ಸಚಿವೆ ಮತ್ತು ಈಗ ರಾಜ್ಯಪಾಲೆಯೂ ಆಗಿರುವ ಮಾರ್ಗರೇಟ್ ಆಳ್ವಾ - ಇಬ್ಬರೂ ಹೆಚ್ಚು ಓದಿದವರು, ಶ್ರೀಮಂತ

ಕುಟುಂಬದಿಂದ ಬಂದವರು ಮತ್ತು ರಾಷ್ಟ್ರೀಯ ಚಳುವಳಿ ಮತ್ತು ಉದಾರವಾದಿ ಸಿದ್ಧಾಂತದಿಂದ ಪ್ರಭಾವಿತರಾದವರೂ ಆಗಿದ್ದರು. ಅಂದರೆ ಕೆಳ ಮತ್ತು ಅಲ್ಪಸಂಖ್ಯಾತ ಮಹಿಳೆಯರು ಚುನಾಯಿತರಾಗುವಲ್ಲೂ ಅವರು ವಿದ್ಯಾಭ್ಯಾಸ ಹೊಂದಿದ ಮತ್ತು ಮೇಲುವರ್ಗದ ಮಹಿಳೆಯರೇ ಆಗಿರುತ್ತಾರೆ."[೧೦] ಈ ಮೇಲಿನ ವರದಿಯನ್ನು ನೋಡಿದಾಗ ತಿಳಿಯುತ್ತದೆ. ಜಾತಿ ಮತ್ತು ವರ್ಗಗಳ ನಡುವೆ ಮಹಿಳಾ ಮೀಸಲಾತಿಯು ಹೇಗೆ ಹಂಚಿಕೆಯಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಒಳಮೀಸಲಾತಿಯನ್ನು ಬೇಡವೆಂದಾದಲ್ಲಿ ಎಲ್ಲ ಮಹಿಳೆಯರಿಗೆ ಶೇಕಡ ೩೩ರಷ್ಟು ಮೀಸಲಾತಿಯು ಸಮಾನವಾಗಿ ಹಂಚಿಕೆಯಾಗಬೇಕಿತ್ತು. ಆದರೆ ಇಲ್ಲಿ ಹಾಗಾಗಿಲ್ಲ. ಯಾವುದೋ ಒಂದು ವರ್ಗ ಅಥವಾ ಜಾತಿ ಹೆಚ್ಚು ಮಾನ್ಯತೆ ಪಡೆಯುತ್ತಿರುವುದು ಗೋಚರಿಸುತ್ತಿದೆ. ಆದಾಗ್ಯೂ ಎಲ್ಲಾ ಜಾತಿ ಮಹಿಳೆಯರು ರಾಜಕೀಯದಲ್ಲಿ ಭಾಗವಹಿಸಿದ್ದರೂ ಕೆಳಸಮುದಾಯದ ಮಹಿಳೆಯರಲ್ಲಿ ವಿದ್ಯಾಭ್ಯಾಸದ ಕೊರತೆಯನ್ನು ಕಾಣುತ್ತೇವೆ. ಪಾರ್ಲಿಮೆಂಟಿನ ಸದಸ್ಯರಲ್ಲಿ ಹೆಚ್ಚು ವಿದ್ಯಾಭ್ಯಾಸ ಹೊಂದಿರುವ ಮಹಿಳೆಯರಿಗೆ ಮೇಲಾಧಿಕಾರದ ಸ್ಥಾನವನ್ನು ನೀಡಲಾಗುತ್ತದೆ. ಅಂತಹ ಸಂದರ್ಭದಲ್ಲಿ ಶ್ರೀಮಂತ ಕುಟುಂಬದಿಂದ ಬಂದಂತಹ ಮಹಿಳೆಯರಿಗೆ ಅಂತಹ ಅಧಿಕಾರ ದಕ್ಕುವುದನ್ನು ಕಾಣುತ್ತೇವೆ. ಈ ಕಾರಣಕ್ಕಾಗಿಯಾದರೂ ದಲಿತ ಮಹಿಳಾ ಮೀಸಲಾತಿಯ ಅಗತ್ಯವಿದೆ ಎಂಬುದನ್ನು ಈ ಲೇಖಕಿಯ ನಿಲುವಾಗಿದೆ.

ಪ್ರಸ್ತುತದಲ್ಲಿ ಮೀಸಲಾತಿಯ ಹೆಸರು ಕೇಳುತ್ತಿದ್ದಂತೆ ಮೇಲುವರ್ಗದವರು ಹೇಗೆ ಸಹನೆ ಕಳೆದುಕೊಳ್ಳುತ್ತಾರೆ ಮತ್ತು ಎಲ್ಲಾ ಸೌಲಭ್ಯವನ್ನೂ ಸ್ವತಃ ಮೇಲ್ವರ್ಗದವರೇ ದಲಿತರಿಗೆ ಬಿಟ್ಟು ಕೊಟ್ಟಿರುವಂತೆ ಕಿಡಿ ಕಾರುತ್ತಾ, ಮೀಸಲಾತಿಯ ವಿರುದ್ಧ ಹೇಗೆ ಎತ್ತಿ ಕಟ್ಟುತ್ತಿದ್ದಾರೆ ಎಂಬುದನ್ನು ಸಾ.ರಾ.ಅಬೂಬಕ್ಕರ್ ಅವರು ತಮ್ಮದೇ ಆದ ನಿಲುವನ್ನು ಅಭಿವ್ಯಕ್ತಿಸಿದ್ದಾರೆ. "ದಲಿತರಿಗೆ ಮೀಸಲಾತಿಯ ಪ್ರಯೋಜನ ಸಮನಾಗಿ ದಕ್ಕದಿದ್ದರೂ ಮೀಸಲಾತಿ ಎಂಬ ಹೆಸರು ಕೇಳಿದರೇನೇ ಮೇಲ್ಜಾತಿಯವರು ಸಹನೆ ಕಳೆದುಕೊಳ್ಳುತ್ತಾ, ಸೌಲಭ್ಯಗಳೆಲ್ಲವೂ ದಲಿತರಿಗೇ ದೊರಕಿಬಿಟ್ಟಿತೆಂಬಂತೆ ವರ್ತಿಸುತ್ತಾ ಇತರ ಹಿಂದುಳಿದವರನ್ನು ಮೀಸಲಾತಿಯ ವಿರುದ್ಧ ಎತ್ತಿ ಕಟ್ಟುತ್ತಾರೆ. ಮಂಡಲ್ ಆಯೋಗದ ವರದಿಯನ್ನು ಅನುಷ್ಠಾನಕ್ಕೆ ತರಬೇಕೆಂದು ಹೇಳಿದ ಕಾರಣಕ್ಕಾಗಿಯೇ ಮಾಜಿ ಪ್ರಧಾನಿ ವಿ.ಪಿ. ಸಿಂಗ್ ಪ್ರಧಾನಿ ಹುದ್ದೆಯಿಂದ ಕೆಳಗಿಳಿಸಲ್ಪಟ್ಟರು. ಮೇಲ್ಜಾತಿ, ಮೇಲ್ವರ್ಗಗಳ ಎಲ್ಲ ಹುನ್ನಾರಗಳನ್ನೂ ನಾವು, ನೀವೆಲ್ಲರೂ ಅರ್ಥ ಮಾಡಿಕೊಳ್ಳಬೇಕು. ಶಾಲೆಗಳಲ್ಲಿ ನಿಮ್ಮ ಮಕ್ಕಳಿಗೆ ಸಮಾನಾಗಿ ಶಿಕ್ಷಣ ದೊರೆಯುವಂತೆ, ಶಾಲೆಗಳಲ್ಲಿ ಸಮನಾದ ಅಧ್ಯಾಪಕರಿರುವಂತೆ ಸರಕಾರಿ ಶಾಲೆಗಳ ಮೇಲೆ ನಿಗಾ ಇಡುವಂತಹ ಸಮಿತಿಗಳನ್ನು ಆಯಾ ಗ್ರಾಮಗಳ ಜನರೇ ರಚಿಸಿಕೊಳ್ಳಬೇಕು. ತಾಯಂದಿರು ತಮ್ಮ ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಗಮನಕೊಡಬೇಕು. ವಿದ್ಯಾಭ್ಯಾಸದಿಂದ ಅವರ ಗಮನ ಬೇರೆಡೆಗೆ ಹರಿಯದಂತೆ ನೋಡಿಕೊಳ್ಳಬೇಕು. ಇಂದು ದಲಿತರು, ಹಿಂದುಳಿದವರು ಅಲ್ಪಸಂಖ್ಯಾತರೆಲ್ಲರೂ ಮಕ್ಕಳ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡಬೇಕು. ನಿಮ್ಮಲ್ಲಿ ಪ್ರತಿಭೆ ಇದೆ. ನೂರು ವರ್ಷಗಳ ಹಿಂದೆಯೇ ಅಂಬೇಡ್ಕರ್ ವಿದ್ಯಾವಂತರಾಗಿ ವಿದೇಶ ವ್ಯಾಸಂಗವನ್ನೂ ಮುಗಿಸಿ ಬಂದು ನಮ್ಮ ದೇಶದ ಸಂವಿಧಾನದ ರೂಪಿಸಿದ ಮಹಾನಾಯಕರಾದರು. ಇಂದು ಸಂವಿಧಾನ

ಶಿಲ್ಪಿ ಅಂಬೇಡ್ಕರ್ ಅಲ್ಲ ಎಂಬ ವಾದವನ್ನು ಆರಂಭಿಸಲಾಗಿದೆ."[೧೧] ಎಂಬ ಆತಂಕವನ್ನವರು ಹೇಳುತ್ತಿದ್ದಾರೆ. ಸಮಾಜದಲ್ಲಿ ಆಗುತ್ತಿರುವಂತಹ ತಲ್ಲಣಗಳು ಮತ್ತದರ ಪರಿಣಾಮವನ್ನು ಕುರಿತಾಗಿ ವಿವರವಾಗಿ ಈ ಲೇಖನದಲ್ಲಿ ಹೇಳಿದ್ದಾರೆ. ಮೀಸಲಾತಿಯ ವಿರೋಧಕ್ಕೆ ಏನೆಲ್ಲಾ ಕಾರಣಗಳಿವೆ. ಈ ಸಮಾಜದಲ್ಲಿ ಮತ್ತು ಅದನ್ನು ಸರಿಯಾದ ಕ್ರಮದಲ್ಲಿ ಅನುಸರಿಸಲು ನಾವೆಲ್ಲರೂ ಶ್ರಮಿಸಬೇಕಾದ ಕ್ರಮ ಯಾವುದೆನ್ನುವುದನ್ನೂ ಕೂಡ ಅಬೂಬಕ್ಕರ್ ಅವರು ಹೇಳುತ್ತಾರೆ. ಭಾರತೀಯ ಸಮಾಜಕ್ಕೆ, ಮಹಿಳೆ ಮತ್ತು ದಲಿತರಿಗೆ ಅಂಬೇಡ್ಕರ್ ಅವರು ಕೊಟ್ಟ ಕೊಡುಗೆಯನ್ನೂ ಅವರಿಲ್ಲಿ ಸ್ಮರಿಸಿದ್ದಾರೆ.

ಮೀಸಲಾತಿಯು ಶಿಕ್ಷಣದಲ್ಲಿಯೂ ಕೂಡ ಅಗತ್ಯವಿದೆ ಎಂಬುದನ್ನು ಅಬೂಬಕ್ಕರ್ ಅವರ ಮಾತಿನಲ್ಲಿ ನೋಡುವುದಾದರೆ "ಈ ದೇಶದ ಸಂವಿಧಾನದಲ್ಲಿ ಸರ್ವರೂ ಸಮಾನರು. ಇಲ್ಲಿ ಲಿಂಗ ತಾರತಮ್ಯವಾಗಲಿ, ಜಾತಿ ಧರ್ಮಗಳ ಆಧಾರದಲ್ಲಿ ಯಾವುದೇ ರೀತಿಯ ತಾರತಮ್ಯಕ್ಕೂ ಇಲ್ಲಿ ಅವಕಾಶವಿಲ್ಲ. ನಮ್ಮ ಈ ಸಂವಿಧಾನಕ್ಕೆ ಜಾಗತಿಕ ಮನ್ನಣೆ ಇದೆ, ಇದು ಹೊರನೋಟ. ಆದರೆ ಒಳಗಿನ ಪರಿಸ್ಥಿತಿ ಕಳೆದ ಕೆಲವು ದಿನಗಳಿಂದಲೂ ಮೀಸಲಾತಿಯ ಕುರಿತು ನಡೆಯುತ್ತಿರುವ ಚಳುವಳಿಯೇ ಈ ಒಳಗಿನ ಪರಿಸ್ಥಿತಿಯನ್ನು ವಿವರಿಸುತ್ತಿದೆ. ಹಿಂದುಳಿದವರಿಗೆ ಮೀಸಲಾತಿ ನೀಡುವುದು ಮುಂದುವರಿದವರು ನೀಡುವ ಭಿಕ್ಷೆಯಂತಾಗಿದೆ. ನಮ್ಮ ಈ ಹಕ್ಕಿಗಾಗಿ ಇಂದು, ಸ್ವಾತಂತ್ರ್ಯ ಪಡೆದು ಇಷ್ಟು ವರ್ಷಗಳ ಬಳಿಕವೂ ನಾವು ಹೋರಾಡಬೇಕಾದ ಪರಿಸ್ಥಿತಿ ನಮಗೆದುರಾಗಿದೆ. ಇಂದಿಗೂ ಸಮಾಜದ ಮೇಲ್ಜಾತಿ, ಮೇಲ್ವರ್ಗಗಳು, ಕೆಳಜಾತಿ, ಕೆಳವರ್ಗಗಳನ್ನು ತುಳಿಯುತ್ತಿರುವುದನ್ನು ನಾವು ಕಾಣುತ್ತಲೇ ಇದ್ದೇವೆ. ಕೆಳಜಾತಿ ಕೆಳವರ್ಗಗಳಿಗೆ ಪ್ರಾಥಮಿಕ ತರಗತಿಗಳಿಂದಲೂ ಸಮನಾದ ಶಿಕ್ಷಣ ದೊರೆಯುತ್ತಿಲ್ಲ. ಕೆಳಜಾತಿ, ಕೆಳವರ್ಗಗಳಿಗೆ ಅಧ್ಯಾಪಕರಿಲ್ಲದ, ಸಮನಾದ ಸೌಲಭ್ಯಗಳಿಲ್ಲದ ಕನ್ನಡ ಮಾಧ್ಯಮದ ಸರಕಾರಿ ಶಾಲೆಗಳಲ್ಲಿ ಶಿಕ್ಷಣ ದೊರೆಯುತ್ತದೆ. ಇಂತಹ ಶಾಲೆಗಳಲ್ಲಿ ಶಿಕ್ಷಣ ಪಡೆದ ಈ ಮಕ್ಕಳು ಅತ್ಯುತ್ತಮ ಶಿಕ್ಷಣ ಪಡೆದ ಮೇಲ್ಜಾತಿಯ ಮಕ್ಕಳೊಡನೆ ಸ್ಪರ್ಧಿಸಲು ಖಂಡಿತವಾಗಿಯೂ ಸಾಧ್ಯವಿಲ್ಲ. ಈ ಕಾರಣದಿಂದಲೇ ತುಳಿತಕೊಳ್ಳಗಾದ ಕೆಳಜಾತಿ, ಕೆಳವರ್ಗಗಳಿಗೆ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ ಅತ್ಯವಶ್ಯಕವಾಗಿದೆ."[೧೨] ಪ್ರಸ್ತುತ ದಿನಮಾನಗಳಲ್ಲಿ ಮೀಸಲಾತಿಯ ಅವಶ್ಯಕತೆಯನ್ನು ಹೇಳುತ್ತಲೇ, ಅಸಮಾನತೆಯನ್ನ ಎತ್ತಿಹಿಡಿಯುತ್ತಿರುವ ಈ ಸಂದರ್ಭದಲ್ಲಿ ಮೀಸಲಾತಿಯನ್ನು ಯಾರೋ ಕೊಟ್ಟ ಭಿಕ್ಷೆಯೂ ಅಲ್ಲ ಅಥವಾ ದಾನವೂ ಅಲ್ಲ. ಅದು ನಮ್ಮೆಲ್ಲರ ಹಕ್ಕು ಮತ್ತು ಅದನ್ನು ಪಡೆದುಕೊಳ್ಳುವ ಅರ್ಹತೆ ನಮ್ಮದು. ಇದಕ್ಕೆ ಯಾರ ಮತ್ತು ಯಾವ ಅನುಮತಿಯ ಅವಶ್ಯಕತೆಯಿಲ್ಲ ಎಂಬುದು ಇವರ ಸ್ಪಷ್ಟವಾದ ನಿಲುವಾಗಿದೆ.

ಮಹಿಳಾ ಮೀಸಲಾತಿ ಎಂದು ಒಟ್ಟಾರೆ "ಶೇಕಡ ೩೩ರಷ್ಟು ಮೀಸಲಾತಿ ಬಂದರೆ ಆಗಲಿಲ್ಲ, ಅಲ್ಲಿ ಭಿನ್ನ ಜಾತಿ - ಧರ್ಮ ವರ್ಗಗಳಿಗೆ ಸೇರಿದ ಜನರಿರಬೇಕು. ಸರ್ವೋದಯವಷ್ಟೇ ಅಲ್ಲ, ಅಂತ್ಯೋದಯ ಮೊದಲ ಗುರಿಯಾಗಬೇಕು. ಮಹಿಳಾ ಮೀಸಲಾತಿ ವಿರೋಧಿಸುವವರೂ, ಬೆಂಬಲಿಸುವವರೂ ಮೀಸಲಾತಿ ದುರುಪಯೋಗದ ಬಗೆಗೆ ಪ್ರಶ್ನೆಯೆತ್ತುತ್ತಾರೆ. ಸರಿಯೇ. ಮೀಸಲಾತಿ ನೀತಿ ವಿರೂಪಗೊಳ್ಳದಂತೆ, ಸವಲತ್ತು ದುರುಪಯೋಗವಾಗದಂತೆ ಕ್ರಮ ತೆಗೆದುಕೊಳ್ಳಬೇಕಾದ

ಅವಶ್ಯಕತೆಯಿದೆ. ಎರಡಕ್ಕಿಂತ ಹೆಚ್ಚು ಅವಧಿಗೆ ಮೀಸಲಾತಿ ಮೇಲೆ ಆಯ್ಕೆಯಾಗುವ ಅವಕಾಶ ನೀಡದಿರುವುದು; ರಾಜಕಾರಣಿಗಳ ಮನೆತನದವರಿಗೆ ಮಹಿಳಾ ಮೀಸಲಾತಿಯಡಿ ಸ್ಥಾನ ನೀಡದಿರುವುದು; ಈ ಮೊದಲು ಒಮ್ಮೆಯೂ ಸ್ಪರ್ಧಿಸದವರಿಗೆ ಮೊದಲ ಆದ್ಯತೆ ನೀಡುವುದು; ಮೀಸಲಾತಿ ನೀಡುವ ಮುನ್ನ ಮಹಿಳೆಯ ಆದಾಯ ಪರಿಗಣಿಸುವುದು; ಕನಿಷ್ಟ ವಿದ್ಯಾರ್ಹತೆ, ಸಂಘಟನೆಯ ಅನುಭವವಿರುವವರಿಗೆ ಆದ್ಯತೆ ನೀಡುವುದು ಇವೇ ಮೊದಲಾದ ಕ್ರಮಗಳನ್ನು ಪರಿಗಣಿಸಿ ಒಳಮೀಸಲಾತಿಯನ್ನು ಅರ್ಥಪೂರ್ಣಗೊಳಿಸಬಹುದಾಗಿದೆ. ಆಗ ವಿಶೇಷ ಸವಲತ್ತನ್ನು ದುರುಪಯೋಗಪಡಿಸಿಕೊಳ್ಳಬಲ್ಲ ಮೇಲ್ವರ್ಗವನ್ನು ಮೀಸಲಾತಿಯಿಂದ ದೂರ ಇಡಬಹುದಾಗಿದೆ."[೧೩]
ಭಾರತದಲ್ಲಿ ಜಾತಿಯಾಧಾರಿತ ವಿಂಗಡಣೆಯಿಲ್ಲದೆ ಮೀಸಲಾತಿಯನ್ನು ಹಂಚುವುದು ಕಷ್ಟದ ಕೆಲಸವೇ ಸರಿ. ಮೇಲ್ವರ್ಗ ಮತ್ತು ಕೆಳವರ್ಗದ ಮಹಿಳೆಯರಿಗೆ ಭಿನ್ನ ರೀತಿಯಾದಂತಹ ಸಮಸ್ಯೆಗಳಿವೆ. ಅದರಿಂದ ಹೊರಬರಲು ಒಳಮೀಸಲಾತಿಯ ಅಗತ್ಯವಿದೆ. ಹಾಗೆ ಮೀಸಲಾತಿಯ ದುರುಪಯೋಗವಾಗುತ್ತಿರುವುದಕ್ಕೆ ಮತ್ತು ಸವಲತ್ತನ್ನು ಬಳಸಿಕೊಂಡವರೇ ಬಳಸುತ್ತಿರುವುದಕ್ಕೆ ಕಡಿವಾಣ ಹಾಕಬೇಕು ಎಂಬುದು ವಾದವಾಗಿದೆ. ಇವರ ಪ್ರಕಾರ ಮೀಸಲಾತಿಯನ್ನು ದುರುಪಯೋಗಪಡಿಸಿಕೊಳ್ಳುತ್ತಿರುವ ಮೇಲ್ವರ್ಗವನ್ನು ಹೇಗೆ ದೂರವಿಡಲು ಸಾಧ್ಯವಾಗುತ್ತದೆ ಎನ್ನುವುದಕ್ಕೆ ಶಿಕ್ಷಣ, ಸಂಘಟನೆಯಲ್ಲಿನ ಅನುಭವ ಮತ್ತು ಹೊಸಬರಿಗೆ ಆದ್ಯತೆಯನ್ನು ನೀಡುವುದರ ಮೂಲಕವಾಗಿ ಮೀಸಲಾತಿಯನ್ನು ದುರುಪಯೋಗಪಡಿಸಿಕೊಳ್ಳುತ್ತಿರುವ ಮೇಲ್ವರ್ಗವನ್ನು ಮೀಸಲಾತಿಯಿಂದ ದೂರವಿಡಲು ಸಾಧ್ಯವಾಗುತ್ತದೆ.

ಮಹಿಳಾ ಮೀಸಲಾತಿ ಯಾವ ಮಹಿಳೆಯವರೆಗೂ ಅದು ತಲುಪಬೇಕು? ಮತ್ತು ಅದರ ಉಪಯೋಗವನ್ನು ಮಾಡಿಕೊಳ್ಳುವ ಮಹಿಳೆಯಾರಾಗಿರಬೇಕು. ಹಾಗೆಯೇ ಸಮಾಜದ ಕಟ್ಟಕಡೆಯ ಮಹಿಳೆಯವರೆಗೂ ಮಹಿಳಾ ಮೀಸಲಾತಿ ತಲುಪಿಸಲು ಏನು ಮಾಡಬೇಕೆಂಬುದನ್ನು ವಿಜಯಾದಬ್ಬೆ ಅವರ ಲೇಖನದಲ್ಲಿ ಹೇಳಿದ್ದಾರೆ. "ಮೀಸಲಾತಿಯೊಂದೇ ಮಹಿಳೆಯರಿಗೆ ಸೂಕ್ತ ರಾಜಕೀಯ ಪ್ರಾತಿನಿಧ್ಯವನ್ನು ಕೊಟ್ಟು ಅವರನ್ನು ರಾಜಕೀಯವಾಗಿ ಬಲಗೊಳಿಸುತ್ತದೆಯೇ? ಬೆಳೆಸುತ್ತಿದೆಯೇ? ಇಲ್ಲ ಬರೀ ಪ್ರಾತಿನಿಧ್ಯವನ್ನು ಪಡೆಯುವುದರಿಂದ ಸಾಧ್ಯವಿಲ್ಲ ಹಾಗೂ ಅದನ್ನು ಪಡೆಯುವುದಷ್ಟೇ ನಮ್ಮ ಗುರಿಯಾಗಬಾರದು. ಮೀಸಲಾತಿಯು ಉದ್ದೇಶಿತ ಗುರಿಯೆಡೆಗೆ ನಮ್ಮನ್ನು ತಲುಪಿಸಬೇಕಾದರೆ ಬೇರೆ ಕೆಲವು ಪೂರಕ ಪ್ರಯತ್ನಗಳೂ ಬೇಕು. ಈ ಪ್ರಾತಿನಿಧ್ಯ 'ಮಹಿಳಾ ಪ್ರಾತಿನಿಧ್ಯ'ವೂ ಹೌದು. 'ಕ್ಷೇತ್ರ ಪ್ರಾತಿನಿಧ್ಯ'ವೂ ಹೌದು. ಯಾರನ್ನು ನಾವು ಪ್ರತಿನಿಧಿಸಲು ಹೊರಟ್ಟಿದ್ದೇವೆಯೋ ಅವರು ನಿಜವಾದ ಪ್ರತಿನಿಧಿಗಳಾಗಬೇಕು. ಹಾಗಾಗಲು ಅವರಲ್ಲಿ ನಮ್ಮನ್ನು ಕಂಡುಕೊಳ್ಳಬೇಕು. ನಾವು ಪ್ರತಿನಿಧಿಸುವ ಮಹಿಳೆ ಮುಖ್ಯವಾಗಿ ಸಮಾಜದ ಅತ್ಯಂತ ಕೆಳಸ್ತರದಲ್ಲಿರುವ ಸಾಮಾನ್ಯ ಮಹಿಳೆ. ಅವಕಾಶಗಳಿಂದ ವಂಚಿತಳಾದ ಮಹಿಳೆ ಎಂಬುದನ್ನು ನಾವು ಮರೆಯುವಂತಿಲ್ಲ. ಇಂಥ ಮಹಿಳೆಯರನ್ನು ನಾವು ಪ್ರತಿನಿಧಿಸಲಾಗದಿದ್ದರೆ ಖಂಡಿತವಾಗಿ ಈ ಮೀಸಲಾತಿ ಬೇಡ. ಆ ಮಹಿಳೆಯರಿಗಾಗಿ ನಾವು ನಮಗೆ ದೊರೆಯುವ ರಾಜಕೀಯ ಬಲವನ್ನು ಬಳಸಲಾಗದಿದ್ದರೆ

ನಾವು ಈ ಮೀಸಲಾತಿಯನ್ನು ಬೆಂಬಲಿಸಲೇಬಾರದು."[೧೪] ಮಹಿಳಾ ಮೀಸಲಾತಿಯಿಂದಾಗಿ ರಾಜಕೀಯ ಪ್ರಾತಿನಿಧ್ಯ ದೊರಕಿರುವುದು ಕೇವಲ ಮಹಿಳಾ ಪ್ರಾತಿನಿಧ್ಯ ಮಾತ್ರವಾಗಿರದೆ ಆ ಕ್ಷೇತ್ರಕ್ಕೆ ದೊರೆತ ಪ್ರಾತಿನಿಧ್ಯವೂ ಕೂಡ ಆಗಿರುತ್ತದೆ. ಈ ಪ್ರಾತಿನಿಧ್ಯವು ಸಮರ್ಥವಾಗಿ ಬಳಕೆಯಾಗುವುದು ಮತ್ತು ಅದಕ್ಕೆ ಸಂಪೂರ್ಣ ಅರ್ಥ ಸಿಗುವುದು ಸಮಾಜದ ಅತ್ಯಂತ ಕೆಳಸ್ತರದಲ್ಲಿರುವ ಸಾಮಾನ್ಯ ಮಹಿಳೆ ಮತ್ತು ಅವಕಾಶ ವಂಚಿತ ಮಹಿಳೆಗೆ ತಲುಪಿದಾಗ ಮಾತ್ರ. ರಾಜಕೀಯ ಪ್ರಾತಿನಿಧ್ಯ ಪಡೆದ ಮಹಿಳೆಯರು ಶಾಸನಸಭೆ ಮತ್ತು ರಾಜ್ಯಸಭೆಗಳಲ್ಲಿ ಕೆಳಸ್ಥರದ ಮಹಿಳೆಗೆ ಅವಕಾಶವನ್ನು ತಲುಪುವಂತೆ ಮಾಡುವುದು ಅವರ ಕರ್ತವ್ಯವೂ ಹೌದು. ಕೇವಲ ಅವಕಾಶವಾದಿಯಾದಂತಹ ಮಹಿಳೆಗೆ ಈ ಮೀಸಲಾತಿ ಪ್ರಾತಿನಿಧ್ಯ ದೊರೆತರೆ ಅಂತಹವರು ಮೀಸಲಾಯಿತಿಯನ್ನು ತಮ್ಮ ಬಲವರ್ಧನೆಗೆ ಬಳಸಿಕೊಳ್ಳಲು ಕಾಯುತ್ತಿರುತ್ತಾರೆ. ಕೆಲವೊಮ್ಮೆ ಇಂಥಹ ನಿದರ್ಶನಗಳೂ ನಮ್ಮ ಕಣ್ಣಮುಂದೆ ನಡೆದಿವೆ ಎಂಬುದನ್ನು ಹೇಳುತ್ತಾರೆ. ಮುಂದುವರೆದು ಅವರು ಹೀಗೆ ಹೇಳಿದ್ದಾರೆ. ತಮ್ಮ ಸ್ವಾರ್ಥ ಸಾಧನೆಗಾಗಿ ಬಳಸಿಕೊಳ್ಳುವಂತಹ ಮೀಸಲಾತಿ ಬೇಡ. ಅದನ್ನು ತಿರಸ್ಕರಿಸುವುದೇ ಒಳಿತು.

"ಮಹಿಳೆಯರಿಗೆ ಮೀಸಲಾತಿ ಅಗತ್ಯವೆಂದು ಒತ್ತಾಯಿಸುವ ಬೇರೆಲ್ಲ ಕಾರಣಗಳನ್ನೂ ಅಲ್ಲಗಳೆಯುವುದು. ಆದರೆ ಈ ಸಾಮಾಜಿಕ ನ್ಯಾಯದ ಪ್ರಶ್ನೆಯನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಆದ್ದರಿಂದಲೇ ಪಂಚಾಯತ್ ವ್ಯವಸ್ಥೆಯಿಂದ ಹಿಡಿದು ಸಂಸತ್ತಿನವರೆಗೆ ಪ್ರಜಾಸತ್ತಾತ್ಮಕ ಆಡಳಿತದ ಎಲ್ಲ ಹಂತಗಳಲ್ಲಿ ಮಹಿಳೆಯರಿಗೆ ರಾಜಕೀಯ ಮೀಸಲಾತಿಯ ಆಲೋಚನೆ ಹುಟ್ಟಿತು. ಕೆಳ ಹಂತದಲ್ಲಿ ಮೀಸಲಾತಿ ಜಾರಿಯಾಗಿ ಹತ್ತಾರು ವರ್ಷಗಳೇ ಕಳೆದಿವೆ. ಮೇಲಿನ ಹಂತದಲ್ಲಿ ಅಂದರೆ ವಿಧಾನಸಭೆ ಮತ್ತು ಲೋಕಸಭೆಯಲ್ಲಿ ಮಹಿಳೆಯರ ಮೀಸಲಾತಿ ಪ್ರಶ್ನೆ ನೆನೆಗುದಿಗೆ ಬಿದ್ದು ಬೇರು ಬಲಿತರೂ ಮರ ಫಲ ನೀಡಲಾರದೆ ವಿಪರ್ಯಾಸ ಸೃಷ್ಟಿಯಾಗಿದೆ."[೧೫] ಮಹಿಳೆಯರು ಆರ್ಥಿಕ ಸ್ವಾವಲಂಬನೆಯನ್ನು ಹೊಂದಬೇಕು ಮತ್ತು ರಾಜಕೀಯ ಕ್ಷೇತ್ರದಲ್ಲೂ ಪುರುಷರಿಗೆ ಸಮಾನವಾಗಿ ಗುರುತಿಸಿಕೊಳ್ಳಬೇಕು. ಹಾಗಾದಾಗ ಮಾತ್ರ ಮಹಿಳಾ ಮೀಸಲಾತಿಯು ಜಾರಿಗೆ ಬಂದದ್ದಕ್ಕೆ ಸಾರ್ಥಕ ಎನಿಸುವುದು. ಮಹಿಳಾ ಮೀಸಲಾತಿಯನ್ನು ಕೆಲವು ರಾಜಕೀಯ ಪಕ್ಷಗಳು ಮೇಲುನೋಟಕ್ಕೆ ಸಮ್ಮತಿಸಿದರೂ ಕೂಡ ಆಂತರ್ಯದಲ್ಲಿ ಮಹಿಳಾ ಮೀಸಲಾತಿಯ ವಿರೋದಿಗಳೇ ಆಗಿರುತ್ತಾರೆ. ಗ್ರಾಮ ಪಂಚಾಯತ್‌ಗಳ ಚುನಾವಣೆಯ ಮೂಲಕ ಮಹಿಳೆಯರು ರಾಜಕೀಯ ಪ್ರವೇಶ ಪಡೆಯುವುದರ ಜೊತೆಗೆ ಮಹಿಳಾ ಮೀಸಲಾತಿ ಅಲ್ಲಿ ಸದುಪಯೋಗ ಆಗುತ್ತಿರುವುದನ್ನು ನಾವು ಕಾಣಬಹುದು. ಆದರೆ ಗ್ರಾಮ ಪಮಚಾಯಿತಿಯನ್ನು ಹೊರತುಪಡಿಸಿ ಮೇಲ್ಮನೆಗಳಲ್ಲಿ ಮಹಿಳಾ ಮೀಸಲಾತಿಯಿಂದ ಮಹಿಳಾ ಅಭ್ಯರ್ಥಿಗಳು ಇರುವುದು ವಿರಳಾತಿ ವಿರಳ. ಮೇಲ್ಮನೆ(ಲೋಕಸಭೆ, ರಾಜ್ಯಸಭೆ)ಗಳಲ್ಲಿ ಮಹಿಳಾ ಮೀಸಲಾತಿಯು ಮೂಲೆಗುಂಪಾಗಿರುವುದರ ಬಗೆಗೆ ಲೇಖಕಿಯು ಚರ್ಚಿಸಿದ್ದಾರೆ.

“ಗ್ರಾಮ ಪಂಚಾಯಿತಿಯಂತಹ ನಿಮ್ನ ಸ್ತರಗಳಲ್ಲಿ ಮಹಿಳಾ ಮೀಸಲಾತಿಗೆ ಆಕ್ಷೇಪಣೆ ತೋರದ ಪುರುಷ ಆಡಳಿತದ ಮೇಲಂತಸ್ತುಗಳ ಪ್ರಶ್ನೆ ಬಂದಾಗ ಮಾತ್ರ ತೀವ್ರ ವಿರೋಧ ತೋರುವುದೇಕೆ? ನಮ್ಮ ಸಂವಿಧಾನದ ೮೧ನೇ ಅನುಚ್ಛೇದ, ಹೇಳುವಂತೆ ಲೋಕಸಭಾ ಸದಸ್ಯರ ಸಂಖ್ಯೆ ೫೫೦ರ ಮಿತಿ ದಾಟುವಂತಿರಲಿಲ್ಲ. ಆದರಂದು ನಮ್ಮ ಜನಸಂಖ್ಯೆ ೫೪ ಕೋಟಿಯಷ್ಟು ಮಾತ್ರ ಇದ್ದು, ನಂತರದ ೨೦೦೧ನೇ ವರ್ಷದಲ್ಲಿ ನಡೆದ ಗಣತಿಯಲ್ಲಿ ನೂರು ಕೋಟಿ ದಾಟಿದ ಜನಸಂಖ್ಯೆಯನ್ನು ಪ್ರತಿನಿಧಿಸಲು ಸದಸ್ಯತ್ವದ ಸಂಖ್ಯೆಯನ್ನು ೭೫೦ಕ್ಕೇರಿಸಿ ಅನುಚ್ಛೇದವನ್ನು ಪರಿಷ್ಕರಿಸಲಾಗಿತ್ತು. ಆದ್ದರಿಂದ ಪುರುಷ ಪ್ರತಿನಿಧಿಗಳು ತಮ್ಮ ಉಚ್ಚಾಟನೆಯ ಭಯದ ಪರಿಧಿ ದಾಟಬಹುದಿತ್ತು. ಆದರೆ ಪುರುಷ ಪ್ರಧಾನ ಸಮಾಜಗಳಲ್ಲೊಂದಾದ ನಮ್ಮ ಸಮಾಜದಲ್ಲಿ ಪ್ರತಿಬಾರಿ ಮಹಿಳಾ ಮೀಸಲಾತಿಯ ಮಸೂದೆ ಮಂಡಿಸಿದಾಗ ಒಂದೋ ವಿರೋಧ ಪಕ್ಷಗಳ ನಾಯಕರು ಭಾರೀ ಪ್ರಮಾಣದಲ್ಲಿ ಒತ್ತಡ ಹೇರಿ ಪ್ರತಿರೋಧಿಸುತ್ತಾರೆ. ಇಲ್ಲ ಆಡಳಿತ ಸರಕಾರವೇ ಅವಿಶ್ವಾಸ ಗೊತ್ತುವಳಿಯಲ್ಲಿ ಬಿದ್ದು ಹೋಗುತ್ತದೆ!”[೧೬] ಸಂವಿಧಾನದಲ್ಲಿ ಎಲ್ಲರಿಗೂ ಸಮಾನತೆಯನ್ನು ನೀಡಿದೆ. ಆದರೆ ಮಹಿಳೆಯರಿಗೆ ಸಮಾನತೆ ಎಂಬುದು ಮರೀಚಿಕೆಯಾಗಿದೆ. ರಾಜಕೀಯ ಮಹಿಳಾ ಮೀಸಲಾತಿಯನ್ನು ಲೋಕಸಭೆಯಲ್ಲಿ ಅನುಮೋದನೆ ಮಾಡಲು ಎಲ್ಲಾ ಹಂತಗಳಲ್ಲಿಯೂ ಹಿಂದೇಟು ಹಾಕಿರುವುದನ್ನು ಕಾಣಬಹುದು. ಪುರುಷರು ಅಧಿಕಾರವನ್ನು ಎಲ್ಲಿ ಕಳೆದುಕೊಳ್ಳುತ್ತೇವೆಯೋ ಎಂಬ ಭಯದಲ್ಲಿ ಮೀಸಲಾತಿಯನ್ನು ಅಂಗೀಕಾರ ಮಾಡುವುದಕ್ಕೆ ಹಲವಾರು ಕಾರಣಗಳನ್ನು ಕೊಡುತ್ತಾ ಮುಂದೂಡುತ್ತಿರುವುದನ್ನು ಇಲ್ಲಿ ಲೇಖಕಿಯು ಚರ್ಚಿಸಿದ್ದಾರೆ.

“ಸಮುದಾಯ ಮತ್ತು ಸಮಾಜದ ಮಟ್ಟದಲ್ಲೂ ಮಹಿಳೆಯರು ಶಕ್ತಿಯ ಮೂಲಗಳಿಂದ ವಂಚಿತರಾಗಿದ್ದಾರೆ. ಸಾರ್ವಜನಿಕ ಕ್ಷೇತ್ರವು ಮಹಿಳೆಯರಿಗೆ ಅನೌಪಚಾರಿಕವಾಗಿ ನಿಷಿದ್ಧವಾಗಿರುವ ಸಂದರ್ಭದಲ್ಲಿ ಸಾರ್ವಜನಿಕ ಆಸ್ತಿ, ಭೌತಿಕ ಸಂಪನ್ಮೂಲಗಳು, ಸಂಸ್ಥೆಗಳ ಅಧಿಕಾರ ಸ್ಥಾನ, ರಾಜಕಾರಣ ಅಧಿಕಾರ ಮುಂತಾದವು ಮಹಿಳೆಯರಿಂದ ದೂರವಾಗಿ ಪುರುಷರ ಕೈ ಸೇರಿವೆ. ಹೀಗೆ ಎಲ್ಲಾ ಸ್ತರಗಳಲ್ಲೂ ಶಕ್ತಿ, ಅಧಿಕಾರ, ಹಕ್ಕುಗಳಿಂದ ವಂಚಿತರಾದ ಮಹಿಳೆಯರು ಅಶಕ್ತರಾಗಿರುವುದರಿಂದ ಮೀಸಲಾತಿ ಮೂಲಕ ಅವುಗಳನ್ನು ಪಡೆಯುವುದರ ಮೂಲಕ ಸಶಕ್ತರಾಗುವುದು ತುಂಬಾ ಅಗತ್ಯವಾಗಿದೆ. ಆದರೆ ಮೀಸಲಾತಿ ಕೇವಲ ಅಧಿಕಾರ, ಆಸ್ತಿ ಹೊಂದುವುದಷ್ಟೇ ಅಲ್ಲ ಅದು ಹೆಚ್ಚು ವಿಶಾಲಾರ್ಥವನ್ನು ಹೊಂದಿದ್ದು ವಿವಿಧ ಮೆಟ್ಟಿಲುಗಳನ್ನು ಪಡೆದಿದೆ.”[೧೭] ಮಹಿಳೆಯರಿಗೆ ಸಿಗಬೇಕಾದ ಅಧಿಕಾರಗಳೆಲ್ಲವೂ ಪುರುಷರ ಅಧಿಕಾರದಲ್ಲಿವೆ. ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರಿಗೆ ದಕ್ಕಬೇಕಾದ ಎಲ್ಲಾ ರೀತಿಯ ಹಕ್ಕುಗಳನ್ನು ಕಸಿದು ಕೊಳ್ಳಲಾಗಿದೆ. ಅಲ್ಲದೆಯೇ ತಮ್ಮ ಅಧೀನದಲ್ಲಿಯೇ ಇರಬೇಕೆಂದು ಅಪೇಕ್ಷಿಸುವ ಈ ಸಮಾಜದಲ್ಲಿ ಮಹಿಳಾ ಮೀಸಲಾತಿಯ ಮೂಲಕವಾದರೂ ಮಹಿಳೆಯರು ಅಧಿಕಾರವನ್ನು ಹೊಂದುವ ಅಗತ್ಯವಿದೆ. ಕೇವಲ ಅಧಿಕಾರವನ್ನು ಹೊಂದಿದರೆ ಮಾತ್ರ ಆಗಲಾರದು. ಇನ್ನೂ ಇತರೆ ಕ್ಷೇತ್ರಗಳಲ್ಲಿಯೂ ಮಹಿಳೆಯರು ಗುರುತಿಸಿಕೊಳ್ಳಬೇಕಾಗಿದೆ. ಉದಾಹರಣೆಗೆ ಶೈಕ್ಷಣಿಕವಾಗಿ,

ಆರ್ಥಿಕವಾಗಿ, ಜಾಗತೀಕವಾಗಿ, ಸಂಘಟನಾತ್ಮಕವಾಗಿ ಪ್ರವೇಶವನ್ನು ಪಡೆದುಕೊಳ್ಳಬೇಕಾಗಿದೆ. ಪ್ರಾಚೀನ ಕಾಲದಿಂದಲೂ ಮಹಿಳೆಯರನ್ನು ಎಲ್ಲಾ ಧರ್ಮಗಳು ಶೋಷಿಸುತ್ತಲೇ ಬಂದಿವೆ. ಇಂದಿನ ಕಾಲಮಾನದಲ್ಲಾದರೂ ಈ ಶೋಷಣೆಯಿಂದ ಮುಕ್ತಳಾಗಬೇಕಿದೆ. ಆ ಕಾರಣಕ್ಕಾಗಿ ಮಹಿಳಾ ಮೀಸಲಾತಿಯ ಅಗತ್ಯವಿದೆ ಎಂಬುದು ಇವರ ಅಭಿಪ್ರಾಯವಾಗಿದೆ.

ಮಹಿಳಾ ಮೀಸಲಾತಿಯಿಂದಾಗಿ ಇಂದು ಎಷ್ಟೋ ಮಹಿಳೆಯರು ಹೊರ ಪ್ರಪಂಚವನ್ನು ನೋಡುವಂತಾಗಿದೆ. "ಮಹಿಳಾ ಮೀಸಲಾತಿಗಳು ಇನ್ನಿಲ್ಲವೆಂದರೂ ತೀರಾ ಕೆಳವರ್ಗದ, ಮನೆಯೊಳಗೆ ಬಂದಿಸಲ್ಪಟ್ಟ ಮಹಿಳೆಯರನ್ನು ಹೊರಜಗತ್ತಿಗೆ ಪರಿಚಯಿಸುವ ಕೆಲಸ ಮಾಡುತ್ತಿದೆ ಎಂದರೆ ತಪ್ಪಾಗಲಾರದು. ಮಹಿಳಾ ಸಬಲೀಕರಣಕ್ಕೆ ಇದೊಂದು ಮೆಟ್ಟಿಲಾಗುವುದಿದ್ದರೆ ಇದನ್ನು ವಿರೋಧಿಸುವುದರಲ್ಲಿ ಅರ್ಥವೇ ಇಲ್ಲ."[೧೮] ಗ್ರಾಮ ಪಂಚಾಯಿತಿಯ ಚುನಾವಣೆಗಳ ಮೂಲಕ ಕೆಳವರ್ಗದ ಮಹಿಳೆಯರು ಚುನಾವಣೆಯಲ್ಲಿ ಸ್ಪರ್ಧಿಸಿಗೆಲ್ಲುವ ಮೂಲಕ ಹೊರ ಜಗತ್ತಿಗೆ ತನ್ನನ್ನು ತಾನು ಪರಿಚಯಿಸಿಕೊಳ್ಳುತ್ತಿದ್ದಾಳೆ. ಕುಟುಂಬಕ್ಕಷ್ಟೇ ಸೀಮಿತಳಾಗಿ ದುಡಿಯುತ್ತಿದ್ದ ಮಹಿಳೆ ಇಂದು ಸಾಮಾಜಿಕವಾಗಿ ಗುರುತಿಸಿಕೊಳ್ಳುತ್ತಿದ್ದಾಳೆ.

ಮೀಸಲಾತಿಯನ್ನು ಮೇಲುವರ್ಗದವರೇ ಕೆಳವರ್ಗದವರಿಗೆ ದಾನಮಾಡುತ್ತಿರುವವರೇನೋ ಅನ್ನುವ ಮಟ್ಟಕ್ಕೆ ಆ ವರ್ಗದವರ ಆಲೋಚನೆಯಾಗಿದೆ ಎಂಬುದನ್ನು ಗೌರಿಲಂಕೇಶ್ ಅವರು ಹೀಗೆ ವಿವರಿಸಿದ್ದಾರೆ. "ಈ ವರ್ಗದ ಧಿಮಾಕು ಎಂತಹದ್ದೆಂದರೆ, ಅವರಿಗಿಂತಲೂ ಅಪಾರ ಸಂಖ್ಯೆಯಲ್ಲಿರುವ ಹಿಂದುಳಿದವರು ಮತ್ತು ದಲಿತರಿಂದ ತೆರಿಗೆ ಪಡೆಯುವ ಸರ್ಕಾರ ಅವರಿಗೆ ತನ್ನ ಶಾಲಾ, ಕಾಲೇಜುಗಳಲ್ಲಿ ಮೀಸಲಾತಿ ನೀಡಿದರೆ ವಿರೋಧಿಸುತ್ತಾರೆ. "ಪ್ರತಿಭೆ ಇಲ್ಲದವರಿಗೆ ಇಲ್ಲಿ ಯಾಕೆ ಜಾಗ?" ಎಂದು ಕೆಂಡ ಕಾರುತ್ತಾರೆ. ಆದರೆ ಅವರ ವರ್ಗಕ್ಕೆ ಸೇರಿರುವ ಜನ ಬಡವರ ಭೂಮಿ ದೋಚಿ, ಸರ್ಕಾರದ ಸವಲತ್ತುಗಳನ್ನು ಪಡೆದು ಕ್ಯಾಪಿಟೇಶನ್ ಕಾಲೇಜಿನ ಹೆಸರಿನಲ್ಲಿ ಪ್ರತಿಭೆ ಇಲ್ಲದ ಹಣವಂತರಿಗೆ ಸೀಟು ಕೊಡುವುದನ್ನು ಒಮ್ಮೆಯೂ ಪ್ರಶ್ನಿಸುವುದಿಲ್ಲ. 'ಏನ್ರೀ ಪ್ರತಿಭೇ ಇಲ್ಲದವರೆಲ್ಲ ಈ ಶಿಕ್ಷಣ ಅಂಗಡಿಗಳಲ್ಲಿ ಡಾಕ್ಟ್ರರೂ, ಇಂಜಿನಿಯರ್ರೂ ಆಗ್ತಿದ್ದಾರಲ್ರಿ?' ಎಂದು ಪ್ರತಿಭಟಿಸುವುದೂ ಇಲ್ಲ."[೧೯] ಹಿಂದುಳಿದವರ ಮತ್ತು ದಲಿತರ ಏಳಿಗೆಯನ್ನು ಎಂದಿಗೂ ಸಹಿಸದ ಮೇಲ್ವರ್ಗದವರು ಮೀಸಲಾತಿಯನ್ನು ವಿರೋಧಿಸುತ್ತಲೇ ಬಂದಿದ್ದಾರೆ. ಮೇಲುವರ್ಗದವರ ಪ್ರಕಾರ ಪ್ರತಿಭೆ ಎಂಬುದು ಇವರುಗಳಿಗೆ ಮಾತ್ರ ಸೀಮಿತವಾಗಿರುವುದು ಎನ್ನುವುದು ಇವರ ದೃಢವಾದ ನಂಬಿಕೆಯಾಗಿರುವುದರಿಂದ ದಲಿತರು ಮತ್ತು ಹಿಂದುಳಿದವರಿಗೆ ಪ್ರತಿಭೆಯೆಂಬುದಿಲ್ಲ ಎಂಬುದನ್ನು ಇವರೇ ನಿರ್ಧರಿಸುತ್ತಾರೆ. ಮೀಸಲಾತಿ ಎಂದಾಕ್ಷಣ ಕೇವಲ ಉದ್ಯೋಗದ ಬಡ್ತಿಗೆ ಮಾತ್ರ ಸೀಮಿತವಾಗಿ ನೋಡುತ್ತಾರೆ. ಆದರೆ ಮೀಸಲಾತಿ ಒಂದು ಜಾತಿ ಪ್ರಶ್ನೆ ಎನ್ನುವುದನ್ನು ಬಹುತೇಕರು ಅರ್ಥಮಾಡಿಕೊಳ್ಳದೆ ಇದರಿಂದ ಅನ್ಯಾಯವಾಗುತ್ತಿದೆ ಎನ್ನುವರು. ಅಲ್ಲದೆ ಜಾತಿಗಳ ನಡುವೆ ತಾರತಮ್ಯ ಬೆಳೆಯುತ್ತದೆ. ಪ್ರಜಾಸತಾತ್ಮಕತೆಗೆ ವಿರೋಧವಾಗುತ್ತದೆ ಎಂದೆಲ್ಲ ಇವರುಗಳು ವಾದಮಂಡಿಸುತ್ತಾರೆ. ಆದರೆ ಹಳ್ಳಿಗಳಲ್ಲಿ ಇಂದಿಗೂ ಜಾತಿವ್ಯವಸ್ಥೆ ಜೀವಂತಿಕೆಯಿಂದ ಇರುವುದನ್ನು

ಕಾಣಬಹುದು. ಮೇಲು ಜಾತಿ, ಮೇಲ್ವರ್ಗದವರು ದಲಿತರನ್ನ ಇಂದಿಗೂ ಅಸ್ಪೃಶ್ಯತೆಯಿಂದಲೇ ನಡೆಸಿಕೊಳ್ಳುತ್ತಾರೆ. ಇದನ್ನ ಮಾತ್ರ ಸಮಾನತೆಯಿಂದ ನೋಡಬೇಕು ಎಂಬುದನ್ನು ಯಾರು ಮೀಸಲಾತಿಯ ವಿರೋಧಿವಾದ ಮಂಡಿಸುತ್ತಾರೋ ಅವರು ಈ ಅಸಮಾನತೆಯ ವಿರುದ್ಧ ಧ್ವನಿ ಎತ್ತಲಾರರು ಎನ್ನುವುದನ್ನು ಗೌರಿಲಂಕೇಶ್ ಅವರು ಚರ್ಚಿಸಿದ್ದಾರೆ.

ಮಹಿಳಾ ಮೀಸಲಾತಿಗಾಗಿ ಅಂಬೇಡ್ಕರ್ ಅವರು ಕೊಟ್ಟ ಕೊಡುಗೆಯನ್ನು ಮರೆಯುವಂತಿಲ್ಲ. ಮಹಿಳಾ ಮೀಸಲಾತಿಯನ್ನು ಇಂದು ಮಹಿಳೆಯರು ಕೇಳುತ್ತಿದ್ದಾರೆಂದರೆ ಅದಕ್ಕೆ ಅಂಬೇಡ್ಕರ್ ಅವರ ಶ್ರಮ ಮತ್ತು ಬದ್ಧತೆಯನ್ನು ನಾವಿಂದು ಸ್ಮರಿಸಲೇಬೇಕು.

ಒಳಮೀಸಲಾತಿಯ ಬಗೆಗೆ ನಡೆದಿರುವ ಚರ್ಚೆಗಳನ್ನೊಮ್ಮೆ ಗಮನಿಸುವುದಾದರೆ, ಕೆಲವೊಬ್ಬ ಲೇಖಕಿಯರು ಗೊಂದಲಕ್ಕೀಡಾಗಿರುವುದನ್ನು ಕಾಣಬಹುದು. ಸ್ಪಷ್ಟತೆಯನ್ನು ಕಂಡುಕೊಳ್ಳುವಲ್ಲಿ ಸಾಧ್ಯವಾಗದೇ ಇರುವುದು ತಿಳಿಯುತ್ತದೆ. ಅದರ ಜೊತೆಗೆ ಮಹಿಳಾ ಮೀಸಲಾತಿಯೊಳಗೆ ಒಳಮೀಸಲಾತಿಯ ಅಗತ್ಯ, ಅವಶ್ಯಕತೆ ಇದೆ ಎಂಬುದು ಕೂಡ ಅಷ್ಟೇ ಮುಖ್ಯ ಎಂಬುದನ್ನು ಹಲವಾರು ಲೇಖಕಿಯರು ಸ್ಪಷ್ಟವಾದ ನಿಲುವನ್ನು ಹೊಂದಿದ್ದಾರೆ. ಹಾಗೆಯೆ ಒಳಮೀಸಲಾತಿಯಿಂದಾಗಿ ಕೆಳವರ್ಗ ಮತ್ತು ಕೆಳಜಾತಿಯ ಮಹಿಳೆಯರಿಗೆ ರಾಜಕೀಯ ಪ್ರಾತಿನಿಧ್ಯ ದೊರಕಬೇಕು. ಕೆಳವರ್ಗದ ಅವಕಾಶ ವಂಚಿತ ಮಹಿಳೆಗೆ ಈ ಮೀಸಲಾತಿಯ ಉಪಯೋಗ ದೊರೆತಾಗ ಮಾತ್ರ ಇದಕ್ಕೊಂದು ಸಮರ್ಥವಾದ ಅರ್ಥವಿರುವುದು ಎಂಬುದು ತಿಳಿಯುತ್ತದೆ.

ಒಟ್ಟಾರೆಯಾಗಿ ಮಹಿಳಾ ಮೀಸಲಾತಿ ಮತ್ತು ಒಳಮೀಸಲಾತಿಯ ಚರ್ಚೆಗಳನ್ನು ಗಮನಿಸಿದಾಗ ತಿಳಿಯುವುದೇನೆಂದರೆ, ಮಹಿಳಾ ಮೀಸಲಾತಿಯನ್ನು ಜಾರಿಗೊಳಿಸುವ ಸಂದರ್ಭದಲ್ಲೆಲ್ಲಾ ತಡೆಗೋಡೆಗಳೇ ಹೆಚ್ಚು, ಹಾಗೆಯೇ ಮೀಸಲಾತಿಗೆ ಸಂಬಂಧಿಸಿದಂತೆ ಎಲ್ಲ ಆಡಳಿತ ಪಕ್ಷಗಳು ಒಂದೇ ರೀತಿಯ ನಿಲುವನ್ನು ಮತ್ತು ನಿರ್ಲಿಪ್ತತೆಯನ್ನು ಕಾಯ್ದುಕೊಂಡು ಬಂದಿರುವುದು ತಿಳಿಯುತ್ತದೆ. ಮಹಿಳೆಯರು ತಮಗೆ ಬೇಕಾಗಿರುವ ರಾಜಕೀಯ ಮೀಸಲಾತಿಯನ್ನು ತಮ್ಮ 'ಪ್ರಾತಿನಿಧ್ಯ' ಅದು ನಮ್ಮ 'ಹಕ್ಕು' ನಮಗೆ ದೊರೆಯಬೇಕು ಎಂದು ಹೋರಾಟ ನಡೆಸುತ್ತಿದ್ದರು. ಅದಕ್ಕೆ ಯಾವುದೇ ಪ್ರತಿಕ್ರಿಯೆ ನೀಡದೆ ಮುಂದುವರೆದುಕೊಂಡು ಬಂದಿರುವುದು ಪ್ರಭುತ್ವದ ತಂತ್ರವನ್ನು ಕಾಣುತ್ತೇವೆ.

ಕೊನೆಟಿಪ್ಪಣಿಗಳು

೧. ಎನ್. ಗಾಯಿತ್ರಿ, ಸಂಚಲ, ಪುಟ–೧೧೪.

೨. ಆರ್. ಪೂರ್ಣಿಮಾ, ಮಣ್ಣಿನ ಕಣ್ಣು, ಪುಟ–೭.

೩. ಷರೀಫಾ.ಕೆ., ಮಹಿಳೆ, ಚಳವಳಿ ಮತ್ತು ರಾಜಕಾರಣ, ಪುಟ–೬.

೪. ಮೀನಾಕ್ಷಿ ಬಾಳಿ, ಮನದ ಸೂತಕ ಹಿಂಗಿದೊಡೆ, ಪುಟ–೫೫.

೫. ಶಶಿಕಲಾ.ಎಸ್.ಡಿ.(ಸಂ), ವಿಜಯಾದಬ್ಬೆ ಸಮಗ್ರ ಸಾಹಿತ್ಯ, ಸಂಪುಟ-೨, ಪುಟ–೩೨೪-೩೨೫.

೬. ಅದೇ., ಪುಟ–೩೫೦–೩೫೧.

೭. ನೀಲಾ.ಕೆ., ಬಾಳಕೌದಿ, ಪುಟ-೧೩೯.

೮. ಶ್ರೀಮತಿ ಎಚ್.ಎಸ್., ಸ್ತ್ರೀವಾದ: ತಾತ್ವಿಕತೆ, ಪುಟ-೪೦೧.

೯. ಅದೇ., ಪುಟ-೪೦೩.

೧೦. ಎನ್. ಗಾಯಿತ್ರಿ, ಮಹಿಳಾ ಮೀಸಲಾತಿ ಮತ್ತು ಲಿಂಗರಾಜಕಾರಣ, ಪುಟ-೨೫.

೧೧. ಸಾ.ರಾ. ಅಬೂಬಕ್ಕರ್, ಸಾಹಿತ್ಯಕ್ಕೊಂದು ದಾರಿದೀಪ, ಪುಟ-೧೮೭.

೧೨. ಅದೇ., ಪುಟ-೧೯೧.

೧೩. ಸರಸ್ವತಿ ದು. (ಸಂ), ನೀರದಾರಿ, ಪುಟ-೨೭೬.

೧೪. ಶಶಿಕಲಾ.ಎಸ್.ಡಿ.(ಸಂ), ವಿಜಯಾದಬ್ಬೆ ಸಮಗ್ರ ಸಾಹಿತ್ಯ, ಸಂಪುಟ-೨, ಪುಟ-೩೫೧-೩೫೨.

೧೫. ಆರ್.ಪೂರ್ಣಿಮಾ, ಮಣ್ಣಿನ ಕಣ್ಣು, ಪುಟ-೨

೧೬. ಕೆ.ಎಸ್.ರತ್ನಮ್ಮ, ಸ.ನ.ಗಾಯಿತ್ರಿ, ಮಹಿಳಾ ಮೀಸಲಾತಿ, ಪುಟ-೩೧

೧೮. ಕೆ.ಎಸ್.ರತ್ನಮ್ಮ, ಸ.ನ.ಗಾಯಿತ್ರಿ, ಮಹಿಳಾ ಮೀಸಲಾತಿ, ಪುಟ-೩೮

೧೯. ಶ್ರೀದೇವಿ ಕೆರೆಮನೆ, ಹೆಣ್ತನದ ಆಚೆ-ಈಚೆ, ಪುಟ-೨೯

೨೦. ಗೌರಿಲಂಕೇಶ್, ಕಂಡಹಾಗೆ, ಪುಟ-೪೬

ಅಧ್ಯಾಯ - ಆರು

ವಿಚಾರ ಸಾಹಿತ್ಯ : ಮಹಿಳೆ, ಶಿಕ್ಷಣ-ಉದ್ಯೋಗ

ಅಧ್ಯಾಯ - ಆರು

ವಿಚಾರ ಸಾಹಿತ್ಯ : ಮಹಿಳೆ, ಶಿಕ್ಷಣ-ಉದ್ಯೋಗ

ಆದಿಮಾನವನ ಕಾಲದಿಂದಲೂ ಮನುಷ್ಯನು ಸಂಘಜೀವಿಯಾಗಿಯೇ ಬದುಕಿದ್ದಾನೆ. ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಆಹಾರವನ್ನರಿಸಿಕೊಂಡು ಅಲೆಮಾರಿ ಜೀವನವನ್ನು ನಡೆಸುವಾಗ ಮಹಿಳೆ ಮತ್ತು ಪುರುಷರಿಬ್ಬರು ಸಮಾನವಾಗಿಯೇ ಜೀವನ ನಡೆಸುತ್ತಿದ್ದರು. ಆಹಾರವನ್ನರಸಿ ತಂದು ತಿನ್ನುವಾಗ ಸಮಾನವಾಗಿ ಹಂಚಿ ತಿನ್ನುತ್ತಿದ್ದರು. ಕಾಲಕ್ರಮೇಣ ಮಹಿಳೆಯು ನಿಸರ್ಗದತ್ತವಾದ ಹೆರುವಿಕೆ, ಪಾಲನೆ, ಪೋಷಣೆಯ ಸಮಯದಲ್ಲಿ ಕುಟುಂಬಕ್ಕೆ ಮಾತ್ರ ಸೀಮಿತವಾದಳು. ಅಲೆಮಾರಿ ಜೀವನದಿಂದ ಖಾಸಗಿ ಆಸ್ತಿಯ ಗಳಿಕೆ ಅಥವಾ ಸಂಪತ್ತನ್ನು ಕೂಡಿಡುವ ಹಂತಕ್ಕೆ ತಲುಪಿದನು. ಅಲ್ಲಿಂದ ಮಹಿಳೆಯನ್ನು ದುಡಿಮೆ ಮತ್ತು ಆಧುನಿಕತೆಯಲ್ಲಿ ಎರಡನೇ ದರ್ಜೆಯವಳನ್ನಾಗಿ ಮಾಡಲಾಯಿತು.

ಮಹಿಳೆಯನ್ನು ಗೃಹಕೃತ್ಯಕ್ಕೆ ಸೀಮಿತ ಮಾಡಲಾಯಿತು. ಕುಟುಂಬ ನಿರ್ವಹಣೆಯ ಜವಾಬ್ದಾರಿ ಮಹಿಳೆಯ ಹೆಗಲಿಗೆ ಬಿತ್ತು. ಕುಟುಂಬದೊಳಗೆ ಅವಳು ದಣಿವರಿಯದಂತೆ ದುಡಿದರೂ ಮಹಿಳೆಯ ದುಡಿಮೆಯನ್ನು ಆರ್ಥಿಕತೆಯ ಭಾಗವೆಂದು ನೋಡಲಾಗಿಲ್ಲ ಮತ್ತು ಅವಳ ದುಡಿಮೆಗೆ ಯಾವುದೇ ರೀತಿಯಾದಂತಹ ವೇತನ ಕೂಡ ಇಲ್ಲ. ಪುರುಷ ಹೊರಹೋಗಿ ದುಡಿಮೆ ಮಾಡಲು ಸೀಮಿತನಾದನು. ಕ್ರಮೇಣ ಆರ್ಥಿಕತೆಯ ವ್ಯಾಖ್ಯಾನ ಕೂಡ ಬದಲಾಯಿತು. 'ಉದ್ಯೋಗಂ ಪುರುಷ ಲಕ್ಷಣಂ' ಎಂಬಂತಾಯಿತು. ಇದರಿಂದಾಗಿ ಆರ್ಥಿಕ ಅಸಮಾನತೆ ಮತ್ತು ಲಿಂಗ ಅಸಮಾನತೆ ಗಾಢವಾಗಿ ಬೇರೂರಿತು. ಅಲ್ಲದೆಯೇ ಪಿತೃಪ್ರಧಾನ ಸಮಾಜ ವ್ಯವಸ್ಥೆಯು ಸ್ತ್ರೀಯನ್ನು ಉದ್ಯೋಗ ಕ್ಷೇತ್ರದಿಂದ ದೂರ ಉಳಿಯುವಂತೆ ಮಾಡಿತು. ಕುಟುಂಬದೊಳಗೆ ಅನುತ್ಪಾದಿತ ಕೆಲಸವನ್ನು ಬಿಡಿಕಾಸಿನ ಕೂಲಿಯಿಲ್ಲದೆ ಮೂಕಳಾಗಿ ಹಗಲಿರುಳು ದುಡಿದಳು. ಆಧುನಿಕ ಸಂದರ್ಭದಲ್ಲಿ ಜಾಗತೀಕರಣದ ಪ್ರಭಾವದಿಂದಾಗಿ ಕೈಗಾರೀಕರಣ ಆದಾಗಿನಿಂದ ಮಹಿಳೆಯರು ಕುಟುಂಬದಿಂದ ಹೊರಬಂದು ದುಡಿಯುವಂತಾಯಿತು. ಜೊತೆಗೆ ಹೊರಗೆ ದುಡಿಯುವ ಮಹಿಳೆಯರ ದೊಡ್ಡ ಸಮುದಾಯವೇ ಹುಟ್ಟಿಕೊಂಡಿತು. ಸಂಘಟಿತ ಮತ್ತು ಅಸಂಘಟಿತ ಎರಡೂ ವಲಯದಲ್ಲಿ ಮಹಿಳೆಯರು ಉದ್ಯೋಗವನ್ನು ನಿರ್ವಹಿಸುತ್ತಿದ್ದಾರೆ.

ಶಿಕ್ಷಣವನ್ನೊಂದಿದ ಮಹಿಳೆಯರು ವೈದ್ಯಕೀಯ, ಬ್ಯಾಂಕಿಂಗ್, ಉಪನ್ಯಾಸಕರಾಗಿ, ಎಂಜಿನಿಯರಿಂಗ್ ಮುಂತಾದ ಉದ್ಯೋಗ ಕ್ಷೇತ್ರವನ್ನರಸಿ ಸಂಘಟಿತವಲಯಕ್ಕೆ ಹೋದರೆ, ಅಸಂಘಟಿತ ವಲಯಕ್ಕೆ ಅನಕ್ಷರಸ್ಥ ಮಹಿಳೆಯರು ದುಡಿಮೆಯನ್ನರಿಸಿ ಹೋಗುತ್ತಾರೆ. ಅಸಂಘಟಿತ ವಲಯವಾದ ಮನೆಗೆಲಸ, ಕೂಲಿ ಕೆಲಸ, ಸಿದ್ಧ ಉಡುಪು ತಯಾರಿಕೆ, ಎಲೆಕ್ಟ್ರಾನಿಕ್ ತಯಾರಿಕಾ ಕಾರ್ಖಾನೆಗಳಿಗೆ ಸೇರಿದರು. ಕೃಷಿ, ಕೂಲಿ ಕೆಲಸ, ಗಾರೆ ಕೆಲಸ, ಮನೆಗೂಲಿ ಕೆಲಸ ಅಥವಾ ಸಿದ್ಧ ಉಡುಪು ತಯಾರಿಕಾ ಘಟಕಗಳಲ್ಲಿ ಕೆಲಸ ಮಾಡುವ ಮಹಿಳೆಯರ ಸ್ಥಿತಿ ಶೋಚನೀಯವಾದದ್ದು. ಈ ಕ್ಷೇತ್ರದಲ್ಲಿ ದುಡಿಯುವ ಮಹಿಳೆಯರಿಗೆ ಯಾವುದೇ ರೀತಿಯಾದ ಸಾಮಾಜಿಕ, ಆರ್ಥಿಕ ಭದ್ರತೆಯಿಲ್ಲ. ಇವರ ಪ್ರಾಣ ಹಾನಿಯಾದರೆ ಯಾವ ಪರಿಹಾರವಿಲ್ಲ. ಜಾಗತೀಕರಣದಿಂದಾಗಿ ಗುಡಿ ಕೈಗಾರಿಕೆಗಳು ಅಳಿವಿನಂಚಿಗೆ ಸರಿದಿವೆ. ಇದರಿಂದಾಗಿ ಎಷ್ಟೋ ಕುಟುಂಬಗಳು ಬೀದಿಯ ಪಾಲಾಗಿವೆ. ಕೈಗಾರಿಕ ಕ್ಷೇತ್ರದಲ್ಲಿ ಹೆಚ್ಚು ಕೆಲಸ ಮಾಡುವ ಮಹಿಳೆಯರಲ್ಲಿ ಹೆಚ್ಚಾಗಿ ಅರೆಕಾಲಿಕ ಕೆಲಸವನ್ನು ಮಾಡುವವರಿದ್ದಾರೆ. ಹೀಗಾಗಿಯೇ ಅವರಿಗೆ ನಿಗದಿತವಾದ ಕೂಲಿಯಿಲ್ಲ. ಇವರು ಯಾಂತ್ರಿಕವಾಗಿ ಕೆಲಸ ನಿರ್ವಹಿಸುವುದರಿಂದ ಕೆಲಸದಲ್ಲಿನ ಅವರ ಉತ್ಸಾಹವನ್ನು ಕುಗ್ಗಿಸುತ್ತದೆ. ಮಹಿಳೆಯರು ಕೆಲಸವನ್ನು ನಿಭಾಯಿಸುವ ಸ್ಥಳದಲ್ಲಿ ಅವರಿಗೆ ಬೇಕಾದ ಮೂಲಭೂತ ಸೌಲಭ್ಯಗಳಾದ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಾಗಲಿ ಇರುವುದಿಲ್ಲ. ಹೀಗಾಗಿ ಮಹಿಳಾ ಕಾರ್ಮಿಕರು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿರುವುದನ್ನು ಕಾಣಬಹುದು.

ಅಜ್ಞಾನವನ್ನ ಅಳಿಸಲು ಅಕ್ಷರ ಜ್ಞಾನ ಒಂದೇ ದಾರಿದೀಪ ಅಕ್ಷರ ಜ್ಞಾನದಿಂದಾಗಿ ಈ ಸಮಾಜವು ಸುಸ್ಥಿತಿಯಲ್ಲಿರಲು ಸಾಧ್ಯವಾಗಿದೆ. ಎಲ್ಲರಿಗೆ ಶಿಕ್ಷಣವೆಂಬುದು ಜೀವನದ ಬೆಳಕಾಗಬೇಕು. ಅಂತಹ ಶಿಕ್ಷಣದ ಅವಶ್ಯಕತೆ ಮಹಿಳೆಯರಿಗಿದೆ. ದೇಶದಲ್ಲಿ ಅರ್ಧಭಾಗದಷ್ಟು ಮಹಿಳೆಯರಿದ್ದಾರೆ. ಅದರಲ್ಲಿಯೂ ಎಲ್ಲಾ ಮಹಿಳೆಯರಿಗೆ ಶಿಕ್ಷಣ ಪೂರ್ಣ ಪ್ರಮಾಣದಲ್ಲಿ ದೊರಕುತ್ತಿಲ್ಲ. ಶಿಕ್ಷಣ ಪಡೆದು ಎಲ್ಲಾ ಕ್ಷೇತ್ರಗಳಲ್ಲಿ ಪುರುಷರ ಸರಿಸಮಾನವಾಗಿ ದುಡಿಯುತ್ತಿರುವುದನ್ನು ಕಾಣುತ್ತೇವೆ. ಆದರೂ ಸಹ ಪುರುಷರಿಂದ ಅನೇಕ ಸಮಸ್ಯೆಗಳು ಎದುರಿಸುತ್ತಿರುವುದು ಮಾತ್ರ ಕಡಿಮೆಯಾಗಿಲ್ಲ. ಒಂದಲ್ಲ ಒಂದು ರೀತಿಯಲ್ಲಿ ತುಳಿತಕ್ಕೊಳಗಾಗುತ್ತಲೇ ಇದ್ದಾಳೆ. ಇಪ್ಪತ್ತೊಂದನೆಯ ಶತಮಾನದಲ್ಲಿ ಏರಿಕೆಯಾಗಬೇಕಾಗಿದ್ದ ಸಾಕ್ಷರತೆಯ ಪ್ರಮಾಣ ಇಳಿಮುಖವಾಗುತ್ತಿರುವುದು ಆತಂಕದ ವಿಷಯವೇ ಸರಿ.

"ಹೆಣ್ಣು ಮಕ್ಕಳ ಸಾಕ್ಷರತೆ ಮತ್ತು ಶಿಕ್ಷಣ ಅಲ್ಲಿಂದಾಚೆಗೆ ಆಡಳಿತದ ನೀತಿಯಲ್ಲಿ ಪ್ರಾಮುಖ್ಯ ಪಡೆದರೂ ದೇಶಕ್ಕೆ ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾದ ನಂತರವೂ ಮಹಿಳಾ ಅನಕ್ಷರತೆ ಅವ್ಯಾಹತವಾಗಿ ಮುಂದುವರೆದಿದೆ. ಇಪ್ಪತ್ತೊಂದನೆಯ ಶತಮಾನದ ಈ ಹೊತ್ತಿನಲ್ಲೂ ದೇಶದ ಮಹಿಳೆಯರಲ್ಲಿ ಅರ್ಧಭಾಗ ಅನಕ್ಷರಸ್ಥರಾಗಿಯೇ ಉಳಿದಿದ್ದಾರೆ. ಅಂಕಿ ಅಂಶಗಳನ್ನೇ ನೋಡುವುದಾದರೆ ೧೯೫೧ರಲ್ಲಿ ಮಹಿಳಾ ಸಾಕ್ಷರತೆ ೫೪.೨ಕ್ಕೆ ಏರಿಕೆಯಾಗಿದ್ದು ನೂರರಲ್ಲಿ ೪೪ ಹೆಣ್ಣು ಮಕ್ಕಳು ಶಾಲೆಗೆ ಬರುತ್ತಿದ್ದಾರೆ. ಮಿಕ್ಕ ಅಂದರೆ ಮಹಿಳೆಯರಲ್ಲಿ ಅರ್ಧದಷ್ಟು ಮಂದಿ

ಇನ್ನೂ ಅಕ್ಷರವಂಚಿತರಾಗಿಯೇ ಇದ್ದಾರೆ. ದೇಶದಲ್ಲಿ ಇನ್ನೂ ಶಾಲೆಗೆ ಹೋಗದ ೬ರಿಂದ ೧೧ವಯಸ್ಸಿನ ಒಟ್ಟು ಮಕ್ಕಳು ಶೇ ೮೮ರಷ್ಟು ಮಂದಿ ೧೨ರಿಂದ ೧೪ ವಯಸ್ಸಿನ ಒಟ್ಟು ಮಕ್ಕಳ ಪೈಕಿ ಶೇ.೫೮ರಷ್ಟು ಮಂದಿ ಹೆಣ್ಣು ಮಕ್ಕಳೇ ಆಗಿದ್ದಾರೆ. ಎನ್ನುವ ಅಂಶ ಗಾಬರಿ ಹುಟ್ಟಿಸುತ್ತದೆ. ಕುಟುಂಬದ ಬಡತನಕ್ಕೆ ಮೊದಲ ಬಲಿ ಹೆಣ್ಣು ಮಕ್ಕಳ ಓದು, ಬರಹ. ಇದರಿಂದ ಹಿಡಿದು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಕಂಟಕಗಳು ನೂರಾರು ತಾಯಿ ಕೆಲಸಕ್ಕೆ ಹೋದರೆ, ಅವಳಿಗೆ ಇನ್ನೊಂದು ಮಗುಹುಟ್ಟಿದರೆ, ಶಾಲೆ ದೂರವಿದ್ದರೆ, ಅಲ್ಲಿ ಗಂಡಸರೇ ಶಿಕ್ಷಕರಾಗಿದ್ದರೆ ಹೀಗೆ ಒಂದಿಲ್ಲೊಂದು ಕಾರಣದಿಂದ ಶಾಲೆಗೆ ಹೋಗುವ ಬಾಲೆ ಮನೆಯಲ್ಲಿ ಉಳಿಯುತ್ತಾಳೆ. ಅವಳನ್ನು ಶಾಲೆಗೆ ಮರಳಿ ತರಲು ಸರ್ಕಾರಗಳು ಕೋಟಿ ಕೋಟಿ ರೂಪಾಯಿಗಳನ್ನು ಸುರಿದು ಹಲವು ಯೋಜನೆಗಳನ್ನು ರೂಪಿಸಿದ್ದಾಗಿದೆ. ಅದು ಆಗದಿದ್ದರೆ ಮುಂದೆ ಅವಳಿಗೆ ವಯಸ್ಸಾದಾಗಲಾದರೂ ಅಕ್ಷರ ಹೇಳಿಕೊಡೋಣ ಎಂದು ವಯಸ್ಕರ ಶಿಕ್ಷಣ ಕಾರ್ಯಕ್ರಮಗಳನ್ನೂ ನಡೆಸಿದ್ದಾಗಿದೆ. ಏನು ಮಾಡಿದರೂ ದೇಶದ ಹೆಣ್ಣುಕುಲದ ಅರ್ಧಭಾಗಕ್ಕೆ ಅಕ್ಷರವೆಂಬ ಸಂಪತ್ತು ಮತ್ತು ಶಕ್ತಿ ದಕ್ಕಿಲ್ಲ. ಹತ್ತನೇ ಪಂಚವಾರ್ಷಿಕ ಯೋಜನೆ ಬಂದರೂ ದೇಶದಲ್ಲಿ ಹುಟ್ಟುವ ಹೆಣ್ಣು ಮಕ್ಕಳ ಅರ್ಧದಷ್ಟು ಜನ ಶಾಲೆಯ ಮೆಟ್ಟಲು ಹತ್ತಲಾಗಿಲ್ಲ."[೧]

ಹೆಣ್ಣು ಮಕ್ಕಳಿಗೆ ಶಿಕ್ಷಣ ದೊರಕದೇ ಇರುವುದಕ್ಕೆ ಹಲವಾರು ಕಾರಣಗಳಿವೆ. ಬಡತನ ಮೂಲ ಕಾರಣವಾಗಿದೆ. ಕುಟುಂಬವು ಬಡತನದಿಂದ ಬೇಯುತ್ತಿದ್ದರೆ ಅದಕ್ಕೆ ಮೊದಲ ಬಲಿ ಪಶು ಹೆಣ್ಣೇ ಆಗಿರುತ್ತಾಳೆ. ಮನೆಯಲ್ಲಿ ಹೆಣ್ಣು ಮಗು ಮೊದಲಿನವಳಾಗಿದ್ದರೆ ಮತ್ತೊಂದು ಮಗುವನ್ನು ನೋಡಿ ಕೊಳ್ಳುವ ಸಲುವಾಗಿ ಮನೆಯಲ್ಲೇ ಉಳಿಯಬೇಕಾಗುತ್ತದೆ. ಇಂದಿಗೂ ಶಾಲೆಗಳು ಹಳ್ಳಿಯಿಂದ ದೂರ ಇರುವುದರಿಂದ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸದೆ ಮನೆಯಲ್ಲಿಯೇ ಉಳಿಸಿಕೊಂಡಿರುವುದು ಕಾಣುತ್ತೇವೆ. ಬಡತನದ ಕಾರಣಕ್ಕಾಗಿ ಓದು ಬರಹ ಕಲಿಯಬೇಕಾದ ವಯಸ್ಸಿನಲ್ಲಿ ಬೇರೊಬ್ಬರ ಮನೆಯಲ್ಲಿ ಕೂಲಿ ಆಳಾಗಿ ದುಡಿಯುತ್ತಿದ್ದಾಳೆ. ಇದನ್ನ ತಪ್ಪಿಸಲು ಮತ್ತು ಹೆಣ್ಣುಮಕ್ಕಳನ್ನು ಸಾಕ್ಷರರನ್ನಾಗಿಸಲು ಸರ್ಕಾರವು ಹಲವಾರು ಯೋಜನೆಗಳನ್ನು ಕೈಗೊಂಡಿದ್ದರು ಸಾಧ್ಯವಾಗಿಲ್ಲ.

"ಇಡೀ ದೇಶದಲ್ಲಿ ಸಂಪೂರ್ಣ ಸಾಕ್ಷರತೆ ಸಾಧಿಸಿದ ರಾಜ್ಯ ಕೇರಳವೆಂಬ ಹೆಗ್ಗಳಿಕೆ ಇದ್ದರೂ ಇಂದು ಅಲ್ಲಿ ಮೂಲಭೂತವಾದಿಗಳ ಹೊಸ ಅವತಾರದಿಂದಾಗಿ ಮುಸ್ಲಿಂ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೂ ತಡೆ ಒಡ್ಡಲಾಗುತ್ತಿದೆ. ೧೮ ವರ್ಷದ ಕೆಳಗಿನ ಪ್ರಾಯದ ಹೆಣ್ಣು ಮಕ್ಕಳ ಮದುವೆ ಕಾನೂನು ಬಾಹಿರ ಎಂಬ ನಿಯಮವನ್ನು ಪ್ರಾರಂಭದಲ್ಲಿ ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರೂ ಕಳೆದ ಒಂದು ದಶಕದಿಂದ ಈ ನಿಯಮವನ್ನು ರಾಜಾರೋಷವಾಗಿ ಮುರಿಯಲಾಗುತ್ತಿದೆ. ಪ್ರಾಥಮಿಕ ತರಗತಿಯಿಂದಲೇ ಹೆಣ್ಣು ಮಕ್ಕಳ ವಿದ್ಯಾಭ್ಯಾಸವನ್ನು ನಿಲ್ಲಿಸಲು ಧಾರ್ಮಿಕ ಗುರುಗಳು ಮತ್ತು ಮೂಲಭೂತವಾದಿಗಳು ಒತ್ತಾಯಿಸುತ್ತಿದ್ದಾರೆ."[೨]

ಮುಸ್ಲಿಂ ಧರ್ಮದಲ್ಲಿ ಹೆಣ್ಣುಮಕ್ಕಳಿಗೆ ಶಿಕ್ಷಣವನ್ನು ಮೊಟಕುಗೊಳಿಸುವುದನ್ನ ಇಲ್ಲಿ ಕಾಣಬಹುದಾಗಿದೆ. ದೇಶದಲ್ಲಿ ಉಳಿದೆಲ್ಲಾ ರಾಜ್ಯಗಳಲ್ಲಿ ಕೇರಳ ರಾಜ್ಯವು ಸಾಕ್ಷರತೆಯಲ್ಲಿ ಮೊದಲ ಸ್ಥಾನದಲ್ಲಿರುವುದು ತಿಳಿದಿರುವ ಸಂಗತಿ. ಆದರೆ ಅದೇ ರಾಜ್ಯದಲ್ಲಿ ಧಾರ್ಮಿಕ ಮೂಲಭೂತವಾದಿಗಳು ಹೆಣ್ಣುಮಕ್ಕಳಿಗೆ ಶಿಕ್ಷಣವನ್ನು ಮೊಟಕುಗೊಳಿಸಲು ಮುಂದಾಗಿದೆ. ಹೆಣ್ಣು ಮಕ್ಕಳ ಮದುವೆಯ ವಯಸ್ಸನ್ನು ಸರ್ಕಾರ ನಿಗದಿಪಡಿಸಿರುವ ವರ್ಷಕ್ಕಿಂತ ಮುಂಚೆಯೆ ಮದುವೆ ಮಾಡುತ್ತಿದ್ದು ಕಾನೂನನ್ನು ಉಲ್ಲಂಘಿಸಲಾಗುತ್ತಿದೆ. ಕುಟುಂಬದ ಚೌಕಟ್ಟಿನೊಳಗೆಯೇ ಹೆಣ್ಣನ್ನು ಬಂದಿಸಿಡುವ ಹುನ್ನಾರ ಧಾರ್ಮಿಕ ಮೂಲಭೂತವಾದಿಗಳದ್ದಾಗಿದೆ.

"ನಮ್ಮ ದೇಶದ ಮಹಿಳಾ ನಿರಕ್ಷರತೆಯ ಕುರಿತು ಇತ್ತೀಚೆಗೆ ಪತ್ರಿಕೆಯೊಂದರಲ್ಲಿ ಕೆಲವು ಆತಂಕಕಾರಿ ವಿಷಯಗಳು ಪ್ರಕಟವಾಗಿವೆ. ವಿಶ್ವಸಂಸ್ಥೆಯ ಯುನೆಸ್ಕೋ ವರದಿಯ ಪ್ರಕಾರ ನಮ್ಮ ದೇಶದಲ್ಲಿ ೬೮%ರಷ್ಟು ಹೆಣ್ಣು ಮಕ್ಕಳು ಪ್ರಾಥಮಿಕ ತರಗತಿಗೆ ಸೇರ್ಪಡೆಯಾಗುತ್ತಿದ್ದರೂ ಅದರಲ್ಲಿ ಅರ್ಧಭಾಗದಷ್ಟು ಹೆಣ್ಣು ಮಕ್ಕಳು ಮಾತ್ರ ೫ನೇ ತರಗತಿಯವರೆಗೆ ತಲುಪುತ್ತಾರೆ. ಇವರು ೭ನೇ ತರಗತಿ ತಲುಪುವಷ್ಟರಲ್ಲಿ ಇವರಲ್ಲಿ ೩ನೇ ಎರಡರಷ್ಟು ಹುಡುಗಿಯರು ಶಾಲೆ ತ್ಯಜಿಸಿರುತ್ತಾರೆ. ಅಂದರೆ ೧೦%ರಷ್ಟು ಹೆಣ್ಣು ಮಕ್ಕಳು ಮಾತ್ರ ಪ್ರೌಢ ಶಿಕ್ಷಣದ ಮಟ್ಟ ತಲುಪುತ್ತಾರೆ. ಈ ಶತಮಾನದ ಕೊನೆಯಲ್ಲಿ ಭಾರತದಲ್ಲಿ ಗಂಡಸರ ಎರಡು ಪಾಲಷ್ಟು ಹೆಂಗಸರು ನಿರಕ್ಷಕರಾಗಿರುತ್ತಾರೆ. ಜಗತ್ತಿನ ೧೭೪ ರಾಷ್ಟ್ರಗಳಲ್ಲಿ ಭಾರತ ಈಗಾಗಲೇ ಸಾಕ್ಷರತೆಯಲ್ಲಿ ೧೨೪ನೇ ಸ್ಥಾನವನ್ನು ತಲುಪಿದೆ. ೨೧ನೇ ಶತಮಾನದಲ್ಲಿ ಜಗತ್ತಿನ ಅನಕ್ಷರಸ್ಥ ಮಹಿಳೆಯರ ೫ನೇ ಒಂದು ಭಾಗದಷ್ಟು ಮಹಿಳೆಯರನ್ನು ಮುಂದಿಟ್ಟುಕೊಂಡು ನಾವಿಂದು ಸಮಾನತೆ, ಸಮಾನ ಹಕ್ಕುಗಳಿಗಾಗಿ ಹೋರಾಡಬೇಕಾಗಿದೆ."[೩]

ಭಾರತ ಮುಂದುವರೆಯುತ್ತಿರುವ ರಾಷ್ಟ್ರವಾಗಿದೆ. ಹೀಗೆ ಹೇಳುವಾಗ ಶಿಕ್ಷಣದ ಪಾತ್ರ ಬಹುಮುಖ್ಯವಾದುದು. ಸಮಾನತೆ ಮತ್ತು ಸಮಾನ ಹಕ್ಕಿಗಾಗಿ ಹೋರಾಡುತ್ತಿರುವ ಈ ಸಂದರ್ಭದಲ್ಲಿ ಮಹಿಳೆಯರಿಗೆ ಶಿಕ್ಷಣವು ಮುಖ್ಯವಾದುದು. ಆದರೆ ಸಾಕ್ಷರತೆಯ ಪ್ರಮಾಣ ಕಡಿಮೆಯಾಗುತ್ತಲೇ ಇದೆ. ಅಂದರೆ ಸಾಮಾಜಿಕ ವ್ಯವಸ್ಥೆಯೊಳಗೆ ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ನಿರಾಕರಿಸುತ್ತಾ ಬಂದಿರುವುದೇ ಇದಕ್ಕೆ ಕಾರಣವಾಗಿದೆ. ಗಂಡಿಗೆ ಕೊಡುವ ಪ್ರಾಶಸ್ತ್ಯ ಹೆಣ್ಣಿಗೆ ಕೊಡದೆ ಇರುವುದು ಮತ್ತು ಗಂಡು ಶ್ರೇಷ್ಟ ಹೆಣ್ಣು ಕನಿಷ್ಟ ಎಂಬ ಅಸಮಾನತೆಯಿಂದಾಗಿ ಶಿಕ್ಷಣದಿಂದ ವಂಚಿತಳಾಗುವಂತೆ ಈ ವ್ಯವಸ್ಥೆ ಮಾಡಿದೆ. ೨೧ನೇ ಶತಮಾನದ ಜಾಗತೀಕ ಸಂದರ್ಭದಲ್ಲಿಯೂ ಭಾರತದಲ್ಲಿ ಅನಕ್ಷರಸ್ಥ ಮಹಿಳೆಯರು ಶೇಕಡ ೫ನೇ ಒಂದು ಭಾಗದಷ್ಟಿದ್ದಾರೆ ಎಂಬುದೇ ಆತಂಕಕಾರಿ ವಿಷಯವಾಗಿದೆ.

ಈಗಿನ ಶಿಕ್ಷಣ ವ್ಯವಸ್ಥೆಯು ಜಾತಿ ವರ್ಗಗಳ ನಡುವೆ ಹೇಗೆ ಕಂದಕವನ್ನುಂಟುಮಾಡುತ್ತಿದೆ ಎಂಬುದನ್ನು ಲೇಖಕಿಯು ಹೀಗೆ ಹೇಳುತ್ತಾರೆ. "ಇಂದಿನ ಶಿಕ್ಷಣ ಪದ್ಧತಿ ನಮ್ಮ ಮಕ್ಕಳ ನಡುವೆ ಕಂದಕಗಳನ್ನು ನಿರ್ಮಿಸುತ್ತಿದೆ. ಅತ್ಯುತ್ತಮ ಶಾಲೆಗಳಲ್ಲಿ ಕಲಿಯುತ್ತಿರುವ ಮೇಲ್ಜಾತಿ, ಮೇಲ್ವರ್ಗಗಳ

ಮಕ್ಕಳು, ಸರಕಾರಿ ಶಾಲೆಗಳಲ್ಲಿ ಕಲಿಯುವ ಕೆಳಜಾತಿಗಳ ಕೀಳರಿಮೆ ಇವರನ್ನು ಮತ್ತಷ್ಟು ದೂರ ಸರಿಸುತ್ತಿರುವುದು ಇವೆಲ್ಲವೂ ಬಹಳ ಅಪಾಯಕಾರಿಯಾಗಿದೆ. ಬಹುಶಃ ಈ ಅಗಲಿಕೆಯೇ ನಕ್ಸಲ್ ಸಮಸ್ಯೆಯ ಮೂಲವೂ ಆಗಿರಬಹುದು. ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯ ಎಲ್ಲ ಅವಕಾಶಗಳೂ ದೇಶದ ಎಲ್ಲ ನಾಗರೀಕರಿಗೂ ಸಮಾನವಾಗಿ ದೊರೆಯದಿದ್ದಲ್ಲಿ ಆ ಅವಕಾಶಗಳನ್ನು ಪಡೆಯಲು ಜನರು ನಾನಾ ಅಡ್ಡ ಹಾದಿಗಳನ್ನು ತುಳಿಯಲು ಮುಂದಾಗುತ್ತಾರೆ. ಆಗ ಎಲ್ಲ ರೀತಿಯ ಅವ್ಯವಸ್ಥೆಗಳಿಗೂ, ಆಡಳಿತ ಸಮಸ್ಯೆಗಳಿಗೂ ಇದು ಹಾದಿ ಮಾಡಿಕೊಡುತ್ತದೆ. ಜಾತ್ಯಾತೀತತೆ, ಸಮಾನತೆ, ಸಮಾನ ಅವಕಾಶಗಳಿಗೆ ಹಾದಿ, ಮುಂತಾದ ನಿಯಮಗಳನ್ನು ಎಲ್ಲರೂ ನಿತ್ಯ ಬದುಕಿನಲ್ಲಿ ಅಳವಡಿಸಿಕೊಳ್ಳುವುದರಿಂದ ಮಾತ್ರ ಈ ದೇಶದ ಅಭಿವೃದ್ಧಿ ಹೊಂದಲು ಸಾಧ್ಯ ಇಲ್ಲವಾದರೆ ಮುಂದಿನ ದಿನಗಳು ಕರಾಳವಾಗಲಿವೆ."[೪]

ಮೇಲು-ಕೀಳು, ತಾರಮ್ಯ, ಅಸಮಾನತೆ ಇವೆಲ್ಲವನ್ನು ಶಿಕ್ಷಣದ ಮೂಲಕ ತೊಡೆದು ಹಾಕಬೇಕು. ಆದರೆ ಇಂದಿನ ಶಿಕ್ಷಣ ವ್ಯವಸ್ಥೆ ಇದಕ್ಕೆ ತದ್ವಿರುದ್ಧವಾಗಿ ಬೆಳೆಯುತ್ತಿದೆ. ಸಮಾನತೆಯನ್ನು ಬೆಳೆಸಬೇಕಾದ ವಿದ್ಯಾಸಂಸ್ಥೆಗಳು ಅಸಮಾನತೆ ಬೆಳೆಸುವ ಹಾದಿಯಲ್ಲಿ ನಡೆಯುತ್ತಿದೆ. ಉಳ್ಳವರಿಗೊಂದು ಶಿಕ್ಷಣವಾದರೆ, ಇಲ್ಲದವರಿಗೊಂದು ಶಿಕ್ಷಣವಾಗಿ ಕಂದಕ ಹೆಚ್ಚಾಗುತ್ತಲೇ ಸಾಗುತ್ತಿದೆ. ಎಲ್ಲ ವರ್ಗದ ಮಕ್ಕಳು ಒಂದೇ ಶಿಕ್ಷಣದ ಸೂರಿನಡಿಯಲ್ಲಿ ಕಲಿಯುವಾಗ ಇಂತಹ ಕಂದಕದ ಅಂತರ ಏರ್ಪಡುವುದಿಲ್ಲ. ಬದಲಾಗಿ ಪರಸ್ಪರರಲ್ಲಿ ಆತ್ಮೀಯತೆ, ಸ್ನೇಹ ಬೆಳೆದು ಸಮಾನತೆಯಿಂದ ಮುಂದೆ ಸಾಗಲು ಹಾದಿ ಮಾಡಿಕೊಡುತ್ತದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರೂ ಸಮಾನರು, ಎಲ್ಲರಿಗೂ ಸಮಾನತೆಯಿಂದಿರುವ ಹಕ್ಕಿದೆ. ಆದರೆ ಇಂತಹ ತಾರತಮ್ಯತೆಯಿಂದಾಗಿ ಸಮಾಜದಲ್ಲಿ ಅಸಮಾನತೆ ಹೆಚ್ಚಾಗಿ ಅಪಾಯಕಾರಿಯಾದ ವಾತಾವರಣ ಸೃಷ್ಟಿಯಾಗುತ್ತದೆ. ಇಂತಹ ಅಗಲಿಕೆಯಿಂದಾಗಿ ನಕ್ಸಲ್ ನಂತಹ ಸಮಸ್ಯೆಯ ಮೂಲವೂ ಆಗಬಹುದು ಎಂಬುದು ಇವರ ಆತಂಕವಾಗಿದೆ.

"ವೈಚಾರಿಕ ಜಾಗೃತಿಯೇ ನಿಜವಾದ ಶಿಕ್ಷಣದ ಉದ್ದೇಶ. ಶಿಕ್ಷಣವೆಂದರೆ ಸಾಕ್ಷರತೆಯನ್ನು ತರುವುದು ಮಾತ್ರವಲ್ಲ ಓದುವುದು, ಬರೆಯುವುದು, ಕಲಿಯುವುದು ಒಂದು ಪ್ರಾಥಮಿಕ ತಾಂತ್ರಿಕ ಅಗತ್ಯ. ಆದರೆ ಈ ಕಲಿಕೆ, ಈ ಸಾಕ್ಷರತೆ ನಮ್ಮ ಆರೋಗ್ಯ ಸಾಕ್ಷರತೆಗೆ, ಕಾನೂನು ಸಾಕ್ಷರತೆಗೆ, ರಾಜಕೀಯ ಸಾಕ್ಷರತೆಗೆ ಎಲ್ಲಕ್ಕಿಂತ ಹೆಚ್ಚಾಗಿ ಸಾಮಾಜಿಕ-ಸಾಂಸ್ಕೃತಿಕ ಸಾಕ್ಷರತೆಗೆ ಒಯ್ಯಬೇಕು. ಅಂದಾಗಲೇ ಈ ಅಕ್ಷರಕ್ಕೆ ಬೆಲೆ. ಈ ಎಲ್ಲ ದಿಕ್ಕಿನ ಸಾಕ್ಷರತೆ ನಮ್ಮನ್ನು ವಿಚಾರಪರವಾಗಿಸುತ್ತದೆ. ಆಲೋಚನೆಯಿಂದ ವಿಮೋಚನೆ, ವಿಮೋಚನೆಯಿಂದ ಆಲೋಚನೆ, ಇದು ಬಿಡಿಸಬಾರದ ದ್ವಿದಳ, ಆಲೋಚನೆ ಇಲ್ಲದ ವಿಮೋಚನೆಯು ಕುರುಡು ಅನುಕರಣೆ. ಅದು ಹೆಚ್ಚು ಬಾಳಿಕೆ ಬರುವಂಥದ್ದೂ ಅಲ್ಲ. ನಿಜವಾದದ್ದೂ ಅಲ್ಲ. ಮಹಿಳೆಯರ ವಿಮೋಚನೆಯು ಮಹಿಳೆಯರನ್ನು ಕುರಿತ, ಮಹಿಳೆ ಪುರುಷ ಹಾಗೂ ಮಹಿಳೆ ಸಮಾಜದ ಸಂಬಂಧವನ್ನು ಕುರಿತ ಆಲೋಚನೆಯಿಂದಲೇ ಪ್ರಾರಂಭವಾಗುತ್ತದೆ."[೫] ಶಿಕ್ಷಣ ಎಂಬುದು ಕೇವಲ ಅಕ್ಷರ ಜ್ಞಾನ ಕಲಿಯುವ ಮತ್ತು ಬರೆಯುವ

ಜ್ಞಾನವಷ್ಟೇ ಆಗಿರಬಾರದು. ವೈಜ್ಞಾನಿಕವಾಗಿ ಚಿಂತಿಸುವ, ವೈಚಾರಿಕವಾಗಿ ಆಲೋಚಿಸುವ ಮತ್ತು ರೂಢಿಸಿಕೊಳ್ಳುವಂತ ಒಂದು ಆರೋಗ್ಯಕರವಾದ ಶಿಕ್ಷಣವಾಗಿರಬೇಕು. ಸಾಕ್ಷರತೆಯು ಏಕಮುಖವಾಗಿರಕೂಡದು. ಅದು ಬಹು ಮುಖವಾಗಿರಬೇಕು. ರಾಜಕೀಯ, ಕಾನೂನು, ಸಾಮಾಜಿಕ ಸಾಂಸ್ಕೃತಿಕವಾದಂತಹ ಸಾಕ್ಷರತೆಗೆ ಒಯ್ಯಬೇಕು ಆಗಲೇ ಈ ಅಕ್ಷರಕ್ಕೆ ಒಂದು ಬೆಲೆ ಮತ್ತು ಅರ್ಥಬರುತ್ತದೆ. ಆಲೋಚನೆ ಮತ್ತು ವಿಮೋಚನೆ ಇವೆರಡೂ ಒಂದೇ ನಾಣ್ಯದ ಎರಡು ಮುಖಗಳು. ಆಲೋಚನೆ ಮಾಡದ ವಿಮೋಚನೆಯು ಕುರುಡು ಅನುಕರಣೆಯಾಗಿರುತ್ತದೆ. ಹಾಗೆಯೆ ಮಹಿಳೆಯರನ್ನು ಕುರಿತ ಆಲೋಚನೆಯು ಮಹಿಳೆ ಪುರುಷ ಹಾಗೂ ಮಹಿಳೆ ಸಮಾಜದ ಸಂಬಂಧವನ್ನು ಕುರಿತ ಆಲೋಚನೆಯೇ ಆಗಿರುತ್ತದೆ ಎಂಬುದು ಈ ಲೇಖಕಿಯ ನಿಲುವಾಗಿದೆ.

“ಮಹಿಳೆಯರ ಸಾಕ್ಷರತೆಯ ಪ್ರಮಾಣ ಕಡಿಮೆ ಇರುವುದೇ ಅವರ ಅಭಿವೃದ್ಧಿಗೆ ದೊಡ್ಡ ಅಡ್ಡಿಯಾಗಿದೆ. ಮಹಿಳಾ ಸಾಕ್ಷರತೆಯನ್ನು ಕುಟುಂಬ ಮತ್ತು ಸಮಾಜದ ಅಭಿವೃದ್ಧಿ ದೃಷ್ಟಿಯಿಂದ ನೋಡುವುದರ ಜೊತೆಗೆ ಮಹಿಳೆಯರ ವೃತ್ತಿ ವಿಕಾಸನಕ್ಕಾಗಿ ಪ್ರೋತ್ಸಾಹಿಸಬೇಕು. ಗ್ರಾಮೀಣ ಪ್ರದೇಶದಲ್ಲಿ ಶಾಲಾ ಬಿಡುವಿಕೆ ಹೆಚ್ಚಾಗಿದೆ. ಹೆಣ್ಣು ಮಕ್ಕಳಿಗಾಗಿ ಇರುವ ಶೈಕ್ಷಣಿಕ ಕಾರ್ಯಕ್ರಮ ಮತ್ತು ಸೌಲಭ್ಯಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು. ಜ್ಞಾನ, ಅರಿವು, ಮಾಹಿತಿ ನೀಡುವ ವ್ಯಕ್ತಿ ವಿಕಸನಗೊಳಿಸುವ ಶಿಕ್ಷಣವು ಮಹಿಳಾ ಸಬಲೀಕರಣದ ಪ್ರಮುಖ ಸಾಧನವಾಗಬೇಕಾಗಿದೆ. ಶಿಕ್ಷಣವೇ ಆರ್ಥಿಕ ಸ್ವಾವಲಂಬನೆಯ ಅಡಿಪಾಯವಾದ್ದರಿಂದ ಹೆಣ್ಣು ಮಕ್ಕಳಿಗೆ ವೃತ್ತಿಪರ ಶಿಕ್ಷಣ ನೀಡಬೇಕಾದ ಅವಶ್ಯಕತೆ ಇದೆ.”[೬] ಯಾವುದೇ ಒಂದು ರಾಷ್ಟ್ರವು ಉನ್ನತ ಪ್ರಗತಿಯನ್ನು ಸಾಧಿಸಬೇಕಾದರೆ ಅಲ್ಲಿ ಶಿಕ್ಷಣದ ಅವಶ್ಯಕತೆ ಅತೀ ಮುಖ್ಯವಾದುದು. ಇಂತಹ ಶಿಕ್ಷಣವು ಎಲ್ಲರಿಗೂ ಎಲ್ಲಕಾಲಕ್ಕೂ ಸಮಾನವಾಗಿ ದೊರೆತಾಗ ಮಾತ್ರ ಇದು ಸಾಧ್ಯವಾಗುತ್ತದೆ. ಮಹಿಳೆಯರ ಸಾಕ್ಷರತೆ ಬಹು ಮುಖ್ಯವಾದುದು. ಹೀಗಾಗಿ ಹೆಣ್ಣುಮಕ್ಕಳಿಗೆ ಬಾಲ್ಯದಿಂದಲೇ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡಬೇಕಾಗಿದೆ. ಕೆಲವು ಕಾರಣಗಳಿಂದಾಗಿ ಗ್ರಾಮೀಣ ಭಾಗದ ಹೆಣ್ಣುಮಕ್ಕಳ ಶಿಕ್ಷಣ ಕುಂಠಿತವಾಗುತ್ತಿದೆ. ಇದರಿಂದಾಗಿ ಮಹಿಳೆಯರ ಸಾಕ್ಷರತೆಯೂ ಸಹ ಕಡಿಮೆ ಇರುವುದನ್ನು ಕಾಣಬಹುದಾಗಿದೆ. ಉನ್ನತ ಶಿಕ್ಷಣ ಮತ್ತು ವೃತ್ತಿ ಪರ ಶಿಕ್ಷಣದಿಂದಾಗಿ ಮಹಿಳೆಯರು ತಮ್ಮ ಬದುಕನ್ನ ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ. ಅಲ್ಲದೆಯೇ ಆರ್ಥಿಕ ಸ್ವಾವಲಂಬನೆಯಿಂದಾಗಿ ಅವರ ಅಭಿವೃದ್ಧಿಯು ಆಗಲು ಸಾಧ್ಯವಾಗುತ್ತದೆ.

“ಇಂದು ಉನ್ನತ ಹುದ್ದೆ ಮತ್ತು ಸ್ಥಾನಮಾನಗಳಲ್ಲಿ ಮಹಿಳೆಯರು ಬಹುಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಿರುವಂತೆ ಭಾಸವಾಗುತ್ತಿದ್ದರೂ ವಾಸ್ತವ ಪರಿಸ್ಥಿತಿ ಬೇರೆಯೇ ಇದೆ. ಈಗ ನಮ್ಮ ಮುಂದೆ ಎರಡು ಪ್ರಶ್ನೆಗಳಿವೆ. ಒಂದು ಎಲ್ಲ ಮಹಿಳೆಯರಿಗೆ ಸಮಾನವಾದ ಗುಣಮಟ್ಟದ ಶಿಕ್ಷಣ ಸಿಗಬೇಕು. ಎರಡನೆಯದು ಮಹಿಳೆಯರಿಗೆ ಎಂಥ ಶಿಕ್ಷಣ ಸಿಗಬೇಕು? ನಿಜವಾಗಿಯೂ ಮಹಿಳೆಯರನ್ನು ಸಬಲೀಕರಣಗೊಳಿಸುತ್ತಿದೆಯೇ ಎಂದು ಕೇಳಿದರೆ, ತುಂಬಾ ಸ್ಪಷ್ಟವಾಗಿ ಇಲ್ಲ ಎಂದೇ ಹೇಳಬೇಕಾಗುತ್ತದೆ. ಇಂದು ನಮಗೆ ದೊರೆಯುವುದೆಲ್ಲ ಪುರುಷ ಪ್ರಧಾನ ವ್ಯವಸ್ಥೆಯ

ಮೌಲ್ಯಗಳು ರೂಢಿಸಿರುವ ಸ್ತ್ರೀ ವಿರೋಧಿ ನೆಲೆಗಳೇ ಆಗಿವೆ. ಹೀಗಾಗಿಯೇ ವಿದ್ಯಾವಂತ ಮಹಿಳೆಯರು ಸಂಬಳ ಪಡೆಯುವ ಹುದ್ದೆಯಲ್ಲಿರುವಾಗಲೂ ಅವರ ಮೇಲೆ ಶೋಷಣೆ ತಪ್ಪುತ್ತಿಲ್ಲ. ಲಿಂಗಸಂವೇದನಾಶೀಲ ಶಿಕ್ಷಣವನ್ನು ನಮಗೆ ಈ ಕ್ಷಣಕ್ಕೂ ಕೊಡಲು ಸಾಧ್ಯವಾಗುತ್ತಿಲ್ಲ. ಎಂತಲೇ ಸ್ಥಳೀಯ ಸರಕಾರಿ ಆಡಳಿತ ಯಂತ್ರ ಮತ್ತು ಪಂಚಾಯತ್ ವ್ಯವಸ್ಥೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ತೊಡಗಿಸಿಕೊಳ್ಳುತ್ತಿರುವಾಗಲೂ ಅವರು ಸ್ತ್ರೀ ಪರ ಕಾನೂನು, ಸೌಲಭ್ಯ, ಅವಕಾಶ ಒಟ್ಟಾರೆ ಸ್ತ್ರೀಪರ ಪಾಲಸಿ ತರಲು ಸಾಧ್ಯವಾಗುತ್ತಿಲ್ಲ. ಗ್ರಾಮೀಣ ಪ್ರದೇಶದ ಚುನಾಯಿತ ಮಹಿಳೆಯರು ಒಂದೊ ತಮ್ಮ ಮನೆಯ ಗಂಡಸರ ಮುಖವಾಣಿಯೋ ಅಥವಾ ಶಿಕ್ಷಣ ಪಡೆದ ಮಹಿಳೆಯರಾದರೂ ಪುರುಷಕೇಂದ್ರಿತ ನೆಲೆಯಿಂದಲೇ ಆಡಳಿತವನ್ನು ನಡೆಸುತ್ತಾರೆ. ಮಹಿಳಾ ಅಸ್ಮಿತತೆ, ಸ್ತ್ರೀಪರ ವೈಜ್ಞಾನಿಕ ತಿಳುವಳಿಕೆ ಇಲ್ಲದೆ ಅವರು ಶುದ್ಧ ಡಮ್ಮಿಗಳಾಗಿರುತ್ತಾರೆ. ಮಹಿಳೆಯರು ತಮ್ಮ ಹೆಣ್ತನ, ತಾಯ್ತನಗಳ ಜೈವಿಕ, ನೈಸರ್ಗಿಕ ಪರಿಧಿ, ಪರಿವ್ಯಾಪ್ತಿಗಳನ್ನು ಅರ್ಥೈಸಿಕೊಂಡಾಗಲೇ ಅವರಿಗೆ ಸ್ತ್ರೀಪರ ದೃಷ್ಟಿ-ಧೋರಣೆ ಪ್ರಾಪ್ತವಾದೀತು. ಆದರೆ ನಮ್ಮ ಔಪಚಾರಿಕ ಶಿಕ್ಷಣ ಪದ್ಧತಿಯಲ್ಲಿ ಇಂಥ ಸ್ತ್ರೀ ಸಂವೇದನಾಶೀಲ ಪಠ್ಯ ಬೋಧನೆ, ಅಥವಾ ಕೋರ್ಸು ಇಲ್ಲವೇ ಇಲ್ಲ. ನಾವು ಬಾಳುತ್ತಿರುವ ಸಮಾಜದಲ್ಲಿಯೂ ಲಿಂಗ ತಾರತಮ್ಯ ರಹಿತ ಸಮಾನತಾ ಚಿಂತನೆ ಧಾರೆಯೂ ಗೋಚರವಾಗುತ್ತಿಲ್ಲ."[೭]

ಇದೂವರೆಗೂ ಇದ್ದ ಶಿಕ್ಷಣ ಮತ್ತು ಉದ್ಯೋಗದ ನೀತಿ ಬದಲಾಗಬೇಕು. ಕೇವಲ ಅಂಕಗಳಿಕೆಯಿಂದಾಗಿ ಮಾತ್ರ ಉದ್ಯೋಗವನ್ನು ಪಡೆಯುವಂತಿರಬಾರದು. ಅವರ ಕೌಶಲ್ಯ ಮತ್ತು ಸ್ವಾವಲಂಭಿತನದ ಆಧಾರದ ಮೇಲೆ ಉದ್ಯೋಗವನ್ನು ನೀಡುವಂತಹ ಯೋಜನೆ ಬರಬೇಕು ಎಂಬುದು ಈ ಲೇಖಕಿಯ ಅಭಿಪ್ರಾಯವಾಗಿದೆ.

ಪುರುಷ ಪ್ರಧಾನ ವ್ಯವಸ್ಥೆಯೊಳಗೆ ಮಹಿಳೆಯು ಅಧಿಕಾರ ವಹಿಸಿದ್ದರೂ ಸಹ ಪುರುಷ ಕೇಂದ್ರಿತ ನೆಲೆಯೊಳಗೆ ಆಡಳಿತವನ್ನು ನಡೆಸುವುದನ್ನು ಕಾಣಬಹುದು. ಶಿಕ್ಷಣದಲ್ಲಿ ಲಿಂಗಸಂವೇದನೆಯ ಮತ್ತು ಲಿಂಗ ಸೂಕ್ಷ್ಮತೆಯಂತಹ ಶಿಕ್ಷಣವು ಜಾರಿಗೆ ಬರಬೇಕಾಗಿದೆ. ಕೇವಲ ಪದವಿಯ ಆಧಾರದ ಮೇಲೆ ಉದ್ಯೋಗ ಗಳಿಸುವಂತಾಗಬಾರದು. ಇಂದಿನ ಕಾಲಮಾನಕ್ಕೆ ಅವಶ್ಯ ಹಾಗೂ ಅಗತ್ಯವಿರುವಂತಹ ವೃತ್ತಿಪರ ಕೋರ್ಸ್‌ಗಳನ್ನು ತೆರೆಯಬೇಕು. "ಮಹಿಳೆಯರು ಹೊರಗೆ ಬಂದು ಸಂಪಾದಿಸುವ ಮೂಲಕ ಅಥವಾ ಅಕ್ಷರ ಪಡೆದು ದೊಡ್ಡ ಪದವಿ ಗಿಟ್ಟಿಸಿಕೊಳ್ಳುವ ಮೂಲಕ ಸ್ತ್ರೀ ಸ್ವಾತಂತ್ರ್ಯದತ್ತ ಚಲಿಸುತ್ತಿದ್ದಾರೆ ಎಂಬ ಮಾತು ಸಂಪೂರ್ಣ ಸತ್ಯವಲ್ಲ. ಕಳೆದ ದಶಕಗಳ ಅನುಭವಗಳು ನಮ್ಮ ಆಲೋಚನೆಯ ದಿಕ್ಕನ್ನು ಬದಲಾಯಿಸಿಕೊಳ್ಳುವಂತೆ ಪ್ರಚೋದಿಸುತ್ತಿವೆ. ಅಕ್ಷರ ಪಡೆದಾಕ್ಷಣ ಸ್ತ್ರೀಯರು ತಮ್ಮ ಬಗೆಗೆ ಎಚ್ಚರಾಗಿದ್ದಾರೆ ಎಂದು ಹೇಳುವಂತಿಲ್ಲ. ಏಕೆಂದರೆ ನಮಗೆ ಕೊಡ ಮಾಡಿದ ಶಿಕ್ಷಣವಾದರೂ ಪುರುಷ ಪ್ರಧಾನ ವ್ಯವಸ್ಥೆಯನ್ನು ಪೋಷಿಸಿಕೊಂಡು ಬರುವಂಥದ್ದೆ ಆಗಿದೆ. ಎಂತಲೇ ಇವತ್ತಿಗೂ ಹತ್ತಾರು ಸಾವಿರ ಸಂಬಳ ತರುವ ಸ್ತ್ರೀಯರು ಸ್ವತಂತ್ರ್ಯವಾಗಿ ಆಲೋಚಿಸುವ ಅಥವಾ ಸ್ವಯಂ ನಿರ್ಧಾರ ತೆಗೆದುಕೊಳ್ಳುವ ಸ್ಥಿತಿಯಲ್ಲಿ ಇಲ್ಲ.

ಕೌಟುಂಬಿಕ ನಿರ್ಣಯಗಳು ತಮ್ಮ ವಿರುದ್ಧವಿದ್ದಾಗಲೂ ಅವರು ಪ್ರಶ್ನಾತೀತವಾಗಿ ಒಪ್ಪಿಕೊಂಡು ಬರುತ್ತಿರುವುದು ಸರ್ವೇಸಾಮಾನ್ಯ ಐ.ಟಿ.ಬಿ.ಟಿ ಕಲಿತು ಸಾವಿರಗಟ್ಟಲೆ ಸಂಬಳ ತರುತ್ತಿರುವ ಹುಡುಗಿಯರು ಇವತ್ತಿಗೂ ಕನ್ಯಾ ಪರೀಕ್ಷೆಗೆಂದು ತಲೆ ತಗ್ಗಿಸಿಕೂಡುವುದು. ವರನ ಕಡೆಯವರು ಕೇಳಿದಷ್ಟು ವರದಕ್ಷಿಣೆ ಕೊಟ್ಟು ಮದುವೆ ಮಾಡಿಕೊಳ್ಳುವುದನ್ನು ತಮ್ಮ ಭವ್ಯ ಸಂಸ್ಕೃತಿಯ ಮಹಾನ್ ಪರಂಪರೆ ಎಂದು ತಿಳಿದುಕೊಂಡಿದ್ದಾರೆ. ವರನಷ್ಟೆ ವಿದ್ಯೆ, ಬುದ್ಧಿ, ಆಸಕ್ತಿ ಸಾಮರ್ಥ್ಯ ಪಡೆದುಕೊಂಡಿರುವ ತಾನೇಕೆ ಹಣಕ್ಕೆ ಬಿಕರಿಯಾಗಬೇಕು. ಇದು ಸ್ತ್ರೀಕುಲವನ್ನು ಅಪಮಾನಿಸಿದಂತಲ್ಲವೆ? ಎಂಬ ಪ್ರಶ್ನೆಯನ್ನು ಕೇಳಿಕೊಳ್ಳದಷ್ಟು ಸಂಪ್ರದಾಯಕ್ಕೆ ಶರಣರಾಗಿದ್ದಾರೆ. ಇಂಥ ಸ್ತ್ರೀ ವಿರೋಧಿ ಸಾಮಾಜಿಕ ವಿಧಿವಿಧಾನಗಳ ವಿರುದ್ಧ ದಂಗೆ ಎದ್ದವರು ಇಲ್ಲವೆಂತಲ್ಲ ಇದ್ದಾರೆ ಸಂಖ್ಯಾ ದೃಷ್ಟಿಯಿಂದ ಹೀಗೆ ಸ್ತ್ರೀ ಅಸ್ಮಿತೆಯನ್ನು ಮರೆದು ಬದುಕುತ್ತಿರುವವರ ಸಂಖ್ಯೆ ತೀರ ವಿರಳ. ಹೀಗಾಗಿ ಈವರೆಗಿನ ಸಾಂಪ್ರದಾಯಿಕ ಶಿಕ್ಷಣವು ಸ್ತ್ರೀಯರನ್ನು ಅಕ್ಷರಸ್ತರನ್ನಾಗಿ ಮಾಡಿದೆ. ಹೊರತು ಪ್ರಜ್ಞಾವಂತರನ್ನಾಗಿ ಮಾಡಿಲ್ಲ. ಅಷ್ಟಕ್ಕೂ ನಮ್ಮ ಪರಂಪರಾಗತ ಶಿಕ್ಷಣದ ಬೇರುಗಳು ಪುರುಷ ಕೇಂದ್ರಿಯ ನೆಲೆಯಲ್ಲಿಯೇ ಗಟ್ಟಿಗೊಂಡಿವೆ. ಲಿಂಗ ಸಂವೇದನಾ ಶಿಕ್ಷಣ ಕ್ರಮವನ್ನು ಅಳವಡಿಸಿಕೊಳ್ಳಬೇಕಾಗಿದೆ. ಇತ್ತೀಚಿನ ದಿನಗಳಲ್ಲಿ ಮಹಿಳಾ ಅಧ್ಯಯನ ಕೇಂದ್ರಗಳು ಸಂಸ್ಥೆಗಳೆಂಬ ವಿದ್ಯಾ ಇಲಾಖೆಗಳು ತಲೆ ಎತ್ತಿದ್ದು ಅವು ಕೇಲವು ಕೋರ್ಸು, ಪದವಿ ಕೊಡುವ ಮಟ್ಟದಲ್ಲಿಯೇ ಗಿರಕಿ ಹೊಡೆಯುತ್ತಿವೆ. ಸ್ಪಷ್ಟವಾದ ದೃಷ್ಟಿಕೋನ ಮತ್ತು ಲಿಂಗ ಸಮಾನತೆಯ ಗಂಭೀರ ಇಚ್ಚಾಶಕ್ತಿಯ ಕೊರತೆಯಿಂದಾಗಿ ಇವು ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಾಗಿದೆ."[೮]

ಆಧುನಿಕ, ಜಾಗತೀಕರಣದ ಸಂದರ್ಭದಲ್ಲಿ ಇದ್ದಾಗಲೂ ಮಹಿಳೆಯು ತಲೆ ತಲಾಂತರದಿಂದ ಮೂಢ ಆಚರಣೆಯಿಂದ, ಗೊಡ್ಡು ಸಂಪ್ರದಾಯದಿಂದ ಹೊರಬರಲಾಗಿಲ್ಲ. ಮಹಿಳೆ ಆಧುನಿಕ ತಂತ್ರಜ್ಞಾನಗಳಂತಹ ಶಿಕ್ಷಣ ಪಡೆದು ಐ.ಟಿ.ಬಿ.ಟಿ ಕಂಪನಿಗಳಲ್ಲಿ ಕೆಲಸ ಗಿಟ್ಟಿಸಿಕೊಂಡು ಸಾವಿರಾರು ಗಟ್ಟಲೆ ಸಂಪಾದಿಸಿ ಸ್ವತಂತ್ರ್ಯರಾಗಿ ಬದುಕಿದ್ದಾಳೆ ಎಂದು ಮೇಲು ನೋಟಕ್ಕೆ ಕಂಡರೂ ಅದು ಸಂಪೂರ್ಣ ಸತ್ಯವಲ್ಲ. ಉನ್ನತ ಶಿಕ್ಷಣ ಪಡೆದು ವಿದ್ಯಾರ್ಹತೆ ಹೊಂದಿದ್ದರೂ ಆಕೆ ಕೆಲವು ಸಂದರ್ಭದಲ್ಲಿ ಸಂಪ್ರದಾಯದ ಹೆಸರಿನಲ್ಲಿ ಬಂಧಿಯಾಗಿಯೇ ಉಳಿದಿರುವುದು ಕಾಣಬಹುದು. ಸಾಮಾಜಿಕ ಪಿಡುಗಾಗಿರುವ ವರದಕ್ಷಿಣೆ ಎಂಬ ಕೂಪದಿಂದ ಹೊರಬರಲಾಗಿಲ್ಲ. ಅದನ್ನು ಎದುರಿಸಿ ದಿಟ್ಟತನದಿಂದ ತನ್ನ ಅಸ್ತಿತ್ವವನ್ನು ಉಳಿಸಿಕೊಂಡವರು ತುಂಬಾ ವಿರಳಾತಿ ವಿರಳ ಸಂಖ್ಯೆಯಲ್ಲಿದ್ದಾರೆ.

ಮಹಿಳೆಯು ಉನ್ನತ ಶಿಕ್ಷಣ ಪಡೆದು ಉನ್ನತ ಹುದ್ದೆಯಲ್ಲಿದ್ದರೂ ಸಹ ಸಂಪ್ರದಾಯದ ಬಿಕ್ಕಟ್ಟಿಗೆ ಸಿಲುಕಿ ತಾನು ವರದಕ್ಷಿಣೆಯಿಂದ ಬಿಕರಿಯಾಗುತ್ತಿದ್ದರೂ ಅದನ್ನು ಒಪ್ಪಿ ಮದುವೆಯಾದವರು ಲೆಕ್ಕವಿಲ್ಲದಷ್ಟು, ಮಹಿಳೆಯರಿಗೆ ಇದುವರೆಗೂ ಕಲಿಸಿರುವಂತ ಶಿಕ್ಷಣ ಪುರುಷ ಪ್ರಧಾನ ಸಮಾಜವನ್ನು ಉಳಿಸುವ ಮತ್ತು ಅದನ್ನು ಪೋಷಿಸಿಕೊಂಡು ಹೋಗುವಂತಹ ಶಿಕ್ಷಣವನ್ನೇ ನೀಡಲಾಗಿದೆ. ಹೀಗಿರುವಾಗ ಲಿಂಗ ಸಂವೇಧನೆಯಂತಹ ಸೂಕ್ಷ್ಮಮತಿಯ, ಹಾಗೂ ಲಿಂಗ ಸಮಾನತೆಯ

ಶಿಕ್ಷಣದ ಕನಸು ಕನಸಾಗಿಯೇ ಇದೆ. ಇಂತಹ ಶಿಕ್ಷಣ ಕೇವಲ ಅಕ್ಷರ ಜ್ಞಾನವನ್ನು ಮಾತ್ರ ಕಲಿಸುತ್ತದೆ. ಆದರೆ ಪ್ರಜ್ಞಾವಂತರನ್ನಾಗಿ ಮಾಡಿರುವುದಿಲ್ಲ.

ಇದುವರೆಗೂ ಹೇಳಿದ ಉದ್ಯೋಗಸ್ಥ ಮಹಿಳೆಯರ ಸಮಸ್ಯೆ ಒಂದು ಮುಖವಾದರೆ, ಉದ್ಯೋಗದ ಸ್ಥಳದಲ್ಲಿ ಜಾತಿಯ ನೆಲೆಯಲ್ಲಿಯೂ ದೌರ್ಜನ್ಯ ನಡೆಯುತ್ತಿದೆ ಎಂಬುದನ್ನು ಕೂಡ ಗಮನಿಸಬೇಕಾದ ಮುಖ್ಯ ಅಂಶವಾಗಿದೆ. "ಉದ್ಯೋಗ ಕ್ಷೇತ್ರದಲ್ಲಿ ದಲಿತ ಮಹಿಳೆಯನ್ನು ನೋಡುವ ದೃಷ್ಟಿಕೋನವೇ ಭಿನ್ನವಾಗಿರುತ್ತದೆ. ದಲಿತ ಮಹಿಳೆ ಸ್ವಲ್ಪ ಸ್ವತಂತ್ರ ಮನೋಧರ್ಮದವಳಾಗಿದ್ದರೆ ಅವಳನ್ನು ಕುರಿತಾಗಿ 'ಆ ಜಾತಿಯವರು ಹಾಗೆ' ಎಂಬ ಸಾಮಾನ್ಯ ಮಾತು ಹರಿದಾಡುತ್ತವೆ. ಆ ಮಹಿಳೆ ಗಂಭೀರವಾಗಿ ಸ್ವಾಭಿಮಾನದಿಂದ ಬದ್ಧತೆಯಿಂದ ಬದುಕುತ್ತಿದ್ದರೆ ಅಂಥ ಜಾತಿಯವಳಾದರೂ ಹಂಗಿಲ್ಲಾ ನೋಡು' ಎಂದು ಮತ್ತೆ ಜಾತಿಯ ಮಾನದಂಡದಿಂದಲೇ ಅವಳ ಗುಣ, ಸ್ವಭಾವ, ವ್ಯಕ್ತಿತ್ವವನ್ನು ಅಳೆಯಲಾಗುತ್ತದೆ."[೯] ದಲಿತ ಮಹಿಳೆಯರು ಎಷ್ಟು ಓದಿ ಉನ್ನತ ಹುದ್ದೆಯನ್ನು ಅಲಂಕರಿಸಿದ್ದರೂ ಅವರಿಗೆ ಜಾತಿ ನಿಂದನೆಯಿಂದ ಮುಕ್ತಿಯಿಲ್ಲ. ಪಿತೃಪ್ರಧಾನ ಮತ್ತು ಸನಾತನ ಸಂಸ್ಕೃತಿಯು ಅವರನ್ನು ಸ್ವತಂತ್ರವಾಗಿ ಇರಲು ಬಿಡುವುದಿಲ್ಲ. ಸನಾತನ ಧರ್ಮದ ಭಾರವನ್ನೇ ಹೊರಿಸಿ ಮುಂದಿಡಲಾಗಿದೆ. ದಲಿತ ಮಹಿಳೆಯರು ಸ್ವಾಭಿಮಾನದಿಂದ ಬದುಕಿದರೂ ಅಥವಾ ಸ್ವತಂತ್ರ ಮನೋಧರ್ಮವನ್ನೊಳಗೊಂಡು ಬದುಕಿದರೂ ಕಷ್ಟ ಸನಾತನ ಧರ್ಮದ ಸಂಸ್ಕೃತಿಯೊಳಗೆ ಅವಳು ಬದುಕನ್ನು ಕಟ್ಟಿಕೊಳ್ಳುವಂತೆ ಪರೋಕ್ಷವಾಗಿ ತಾಕೀತು ಮಾಡಲಾಗುತ್ತದೆ.

ಉದ್ಯೋಗವು ಕೆಲವೊಮ್ಮೆ ಸ್ವಾವಲಂಬಿ ಮತ್ತು ಸ್ವತಂತ್ರತೆಯನ್ನು ತಂದುಕೊಟ್ಟಿತಾದರೂ, ಕುಟುಂಬದಿಂದ ಹಾಗೂ ಸಮಾಜದ ಕಟ್ಟುಪಾಡುಗಳಿಂದ ಬಿಡಿಸಿಕೊಳ್ಳಲು ಸಂಪೂರ್ಣವಾಗಿ ಸಾಧ್ಯವಾಗಿಲ್ಲ. ಸಾರ್ವಜನಿಕ ವಲಯದಲ್ಲಿ ದುಡಿಯುವ ಸಂದರ್ಭಕ್ಕೆ ಮಹಿಳೆಯರಿಗೆ ಬಂಧನದಲ್ಲಿಡುವ 'ವಿವಾಹ'ದಿಂದಾಗಿ ಕೆಲವು ಕಾಲ ಹೊರಗುಳಿಯುವಂತೆ ಕಾಣುತ್ತದೆ. ಮತ್ತೊಂದು ಕೆಳಜಾತಿ, ಕೆಳವರ್ಗದ ಅಥವಾ ಉದ್ಯೋಗಸ್ಥೆ ಹೆಣ್ಣನ್ನು ಅವಳ ವ್ಯಕ್ತಿತ್ವಕ್ಕೆ ಗೌರವ ಕೊಡದೆ, ಅವಳು ತರುವಂತಹ ಸಂಬಳ(ದುಡಿಮೆ)ಕ್ಕೆ ಗೌರವ ತೋರುತ್ತಾರೆ. ಹೆಣ್ಣನ್ನು ದುಡಿಯುವ ಒಂದು ಯಂತ್ರವನ್ನಾಗಿಯಷ್ಟೆ ನೋಡಲಾಗುತ್ತದೆ. ಮಹಿಳೆಯು ಉದ್ಯೋಗಕ್ಕಾಗಿ ಮತ್ತು ಸ್ವಾವಲಂಬನೆಗಾಗಿ ಆಕೆ ಒಂದು ಹೆಜ್ಜೆ ಮುಂದೆ ಹೋದರೆ, ಪುರುಷ ಪ್ರಧಾನ ಸಂಸ್ಕೃತಿಯು ಅವಳನ್ನು ಎರಡು ಹೆಜ್ಜೆ ಹಿಂದಿಡುವಂತೆ ಮಾಡುತ್ತದೆ. ಪಿತೃಸಂಸ್ಕೃತಿಗೆ ವಿರುದ್ಧ ಎಂಬಂತೆ ಬಿಂಬಿಸುತ್ತದೆ. ಜೊತೆಗೆ ಭಾವನಾತ್ಮಕವಾಗಿ, ಪ್ರೀತಿಯಿಂದ ಅವಳ ಮೌಲ್ಯಗಳನ್ನು ಬದಲಾಯಿಸಿಕೊಳ್ಳುವಂತೆ ಪ್ರೇರೇಪಿಸುತ್ತದೆ.

"ಮನೆಯಲ್ಲಿ ನನ್ನ ಮದುವೆಯ ವಿಚಾರ ಕೈಗೆತ್ತಿಕೊಳ್ಳುವಷ್ಟರಲ್ಲಿ ಕಲ್ಕತ್ತೆಯಿಂದ ಕೇಂದ್ರ ಸರ್ಕಾರ ಹುದ್ದೆಯೊಂದು ಹಾರಿ ಬಂದು ನನ್ನನ್ನು ರಕ್ಷಿಸಿತು."[೧೦] ಈ ಲೇಖಕಿಯು ಉದ್ಯೋಗವನ್ನು ಬಿಡುಗಡೆಯ ಹಾದಿ ಎಂದೇ ಭಾವಿಸುತ್ತಾರೆ, ಹೆಣ್ಣಿಗೆ ಉದ್ಯೋಗವೆನ್ನುವುದು ಪಿತೃಸಂಸ್ಕೃತಿಯ ವಿವಾಹ ಎಂಬ ಬಂಧನದಿಂದ ಮುಕ್ತಿ ಹೊಂದುವುದೇ ಆಗಿದೆ. ಅಲ್ಲದೆ ಉದ್ಯೋಗದಿಂದಾಗಿ ವಿವಾಹವನ್ನು ಮುಂದೂಡುವ ಅವಕಾಶವನ್ನು ಪಡೆದಂತಾಯಿತು ಎಂದು ನಿರಾಳರಾಗುತ್ತಾರೆ.

ಹೆಣ್ಣು ತಾನು ಶಿಕ್ಷಣ ಕಲಿತು ತನ್ನ ಕಾಲ ಮೇಲೆ ನಿಲ್ಲಬೇಕೆಂದಾಗ ಕುಟುಂಬ ವ್ಯವಸ್ಥೆಯೊಳಗಿನ ವಿವಾಹ ಬಂಧನದಿಂದ ವಿಮುಕ್ತಿ ಹೊಂದಿದಾಗ ಸಾಧ್ಯವಾಗುತ್ತದೆ ಎಂಬುದನ್ನು ತಮ್ಮ ವೈಯಕ್ತಿಕ ನಿಲುವಿನಿಂದ ವ್ಯಕ್ತಪಡಿಸುತ್ತಾರೆ.

ಉದ್ಯೋಗ ಹೊಂದಿದ ಮಹಿಳೆಯು ಮದುವೆಗಿಂತ ಮುಂಚೆ ಲವಲವಿಕೆಯಿಂದ ಕೆಲಸ ಮಾಡಿದಷ್ಟು, ಮದುವೆಯ ನಂತರ ಮಾಡಲು ಸಾಧ್ಯವಾಗುವುದಿಲ್ಲ. ಉದ್ಯೋಗವನ್ನು ನಿರ್ವಹಿಸುವಾಗ ಕುಟುಂಬದೊಳಗಿನ ಕ್ರೌರ್ಯವನ್ನೂ ಎದುರಿಸಬೇಕಾಗುತ್ತದೆ ಎನ್ನುವುದನ್ನು ಎಂ.ಎಸ್.ಆಶಾದೇವಿ ಅವರು 'ವೀಣಾ ಶಾಂತೇಶ್ವರ' ಅವರ 'ಬಿಡುಗಡೆ' ಕಥೆಯ ಸರೋಜ ಪಾತ್ರದ ಮುಖೇನ ವಿವರಿಸಿರುವುದನ್ನು ಕಾಣಬಹುದು. "ಅಲ್ಲ ಸರೋಜಿ, ನೀ ಬ್ಯಾಂಕಿನಾಗ ಆಫೀಸರ್ ಇದ್ದೀ ಖರೆ, ಅದರರ್ಥ ನಿನಗೆ ಬೇಕಾದವರ ಜೋಡಿ ಖಿಖಿಖಿ ಮಾಡಿಕೊಂಡು ಚಕ್ಕಂದ ಆಡ್ಲಿಕ್ಕೆ ಲೈಸೆನ್ಸ್ ಅದ ಅಂತ ಅಲ್ಲ... ಇಕಾ ನೋಡು, ನಾ ಹೇಳಿದ್ದು ನೆನಪಿಟಗೋ, ಹೊರಗಿನ ಗಂಡಸರ ಜೋಡಿ ಖಾಕಿ ಪುಕ್ಕಟ ನಕ್ಕೊತ ಮಾತಾಡಿದರ ನಿನ್ನ ಹಲ್ಲು ಮುರಿತೀನಿ, ಪಗಾರ ಬಂದ ಕೂಡಲೇ ನನ್ನ ಕೈಯಾಗ ಕೊಡ ಬೇಕಂತ ತಿಳಿಯುದಿಲ್ಲ... ಎಷ್ಟರ ಸೀರೆ ಬೇಕು? ಮನ್ಯಾಗ ಎರಡು, ಹೊರಗ ಹೋಗ್ಲಿಕ್ಕೆ ಎರಡು ಸೀರಿ, ಒಟ್ಟು ನಾಲ್ಕು ಇದ್ದರೆ ಸಾಕು."[೧೧]

ಶಿಕ್ಷಣವನ್ನು ಕಲಿತು ಉದ್ಯೋಗವನ್ನು ಗಿಟ್ಟಿಸಿಕೊಂಡ ಸರೋಜ ದಾಂಪತ್ಯ ಜೀವನ ಆಕಾಂಕ್ಷೆಗಳನ್ನು ಗಂಡನ ಬಳಿ ಹೇಳಿಕೊಳ್ಳಲು ಹೋದಾಗಲೆಲ್ಲಾ ಅವಳಿಗೆ ಸಿಗುವುದು ಬರೀ ಗಂಡಿನ ದರ್ಪ, ದೌರ್ಜನ್ಯ, ಗಂಡ ಎಂಬ ಅಧಿಕಾರ, ಇವುಗಳಿಂದ ಸರೋಜಳಿಗೆ ಕ್ರೌರ್ಯದಲ್ಲಿ ನರಳುವಂತೆ ಮಾಡುತ್ತವೆ. ಇಲ್ಲಿ ಸರೋಜಳ ಆಸೆ, ಕನಸು ಮತ್ತು ಸ್ವಾತಂತ್ರ್ಯಕ್ಕಿಂತ ಮಿಗಿಲಾಗಿ ಅವಳು ತರುವ ದುಡಿಮೆ (ಸಂಬಳ) ಮುಖ್ಯವಾಗುತ್ತದೆ. ಮಹಿಳೆಯು ದುಡಿದು ತರುವ ಯಂತ್ರವಾಗಿ ಬದುಕುತ್ತಾಳೆಯೇ ವಿನಃ ಮನಸ್ಸಿರುವ ಮನುಷ್ಯಳಾಗಿಲ್ಲ.

"ಮಹಿಳಾ ಕಂಡಕ್ಟರ್ ಅಲ್ಲಿ ಪ್ರತಿಯೊಂದಕ್ಕೂ ಶೋಷಣೆ ಅನುಭವಿಸುತ್ತಿದ್ದಾರೆ. ಮಹಿಳಾ ಉದ್ಯೋಗಿಗಳಿಗೆ ಆಗುತ್ತಿರುವ ಕಿರುಕುಳಗಳನ್ನು ಹೇಳಿಕೊಳ್ಳುವಂತಿಲ್ಲ. ಅನುಭವಿಸುವಂತಿಲ್ಲ. ಮೀಸಲಾತಿ, ವಿನಾಯಿತಿ ಸಹಜವಾಗಿ ಬೇಡ ಬಿಡಿ. ಆದರೆ ಪ್ರೆಗ್ನೆಂಟ್ ಇರುವ ಡಿಲೇವರಿ ಆದ ಮಹಿಳಾ ಕಂಡಕ್ಟರ್‌ಗಳಿಗೂ ಕೆಲವೊಮ್ಮೆ ವಿನಾಯಿತಿ ಸಿಗೋದಿಲ್ಲ ಎನ್ನುವುದೇ ವಿಷಾದನೀಯ ಏನಾದರೂ ಅನಾರೋಗ್ಯದಿಂದ ವಿನಾಯಿತಿ ಕೇಳಿದರೆ ಮೇಲಧಿಕಾರಿಗಳು 'ಅಡ್ಜೆಸ್ಟ್' ಮಾಡ್ಕೋತೀಯಾ ಎನ್ನುತ್ತಾರಂತೆ. ಹಂಗೆ ನಾಚ್ಕೆ ಮರ್ಯಾದಿ ಕಳ್ಕೊಂಡು ಅಡ್ಜೆಸ್ಟ್ ಮಾಡಿಕೊಂಡು ಬೇಕುಬೇಕಾದಲ್ಲಿ ಡ್ಯೂಟಿ ಹಾಕಿಸಿಕೊಂಡು ಕೆಲವರು ಆರಾಂ ಆಗಿರೋದೂ ಗೊತ್ತು. ಇನ್ನು ಬಸ್‌ನಲ್ಲಿ ಡ್ಯೂಟಿ ಮಾಡುವಾಗಿನ ಕತೆ ಹೇಳ ಹೊರಟರೆ ಅದೇ ಒಂದು ಕಾದಂಬರಿ ಆದೀತು. ಬೇಕೆಂದೇ ಮೈಕೈ ಮುಟ್ಟುವವರು, ಕಾಲು ತಾಗಿಸುವವರ ಕಾಟ ನಿರಂತರ, ಏನಾದರೂ ಮಾತನಾಡಿದರೆ 'ಅಷ್ಟು ಮಡಿವಂತಳಾಗಿದ್ದರೆ ಈ ಕೆಲಸಕ್ಕೆ ಯಾಕೆ ಬರಬೇಕಿತ್ತು' ಎನ್ನುವ ಪ್ರಶ್ನೆ ಮೇಲಾಧಿಕಾರಿಗಳು, ಟಿ.ಸಿ.ಯಿಂದ ಹಿಡಿದು ಸಾಮಾನ್ಯ ಪ್ರಯಾಣಿಕನೂ ಕೇಳುವವನೇ. ಅದರಲ್ಲೂ ಡ್ರೈವರ್ ಕೂಡ

ಜೊಲ್ಲು ಸುರಿಸುವವನಾಗಿ ಬಿಟ್ಟರೆ ಮುಗಿದೇ ಹೋಯ್ತು. ಅಂತಹ ಸಂದರ್ಭಗಳಲ್ಲಿ ಇಂತಹ ಒರಟು ಪ್ರಯಾಣಿಕರು ಸಿಕ್ಕರೆ ನಾಯಿ ಪಾಡು ಎಂದಾಕೆ ನಿಟ್ಟುಸಿರು ಬಿಟ್ಟಳು."[೧೨]

ಮಹಿಳೆ ಶಿಕ್ಷಣ ಪಡೆದು ಸರ್ಕಾರಿ ಉದ್ಯೋಗ ಗಿಟ್ಟಿಸಿಕೊಂಡು ಸ್ವತಂತ್ರಳಾಗಿ ಜೀವನ ಸಾಗಿಸುತ್ತಿದ್ದಾಳೆ ಎನ್ನುವಾಗಲೇ ಆಕೆಯನ್ನು ಎಂದಿಗೂ ಸ್ವತಂತ್ರವಾಗಿ ಜೀವಿಸಲು ಬಿಡಲಾರವು ಈ ಸಮಸ್ಯೆಗಳು ಎನ್ನುವುದಕ್ಕೆ ಈ ಮೇಲಿನ ಘಟನೆಯೇ ಸಾಕ್ಷಿ. ನೆಮ್ಮದಿಯ ನಿಟ್ಟುಸಿರು ಬಿಡುತ್ತಿರುವಾಗಲೇ ಮತ್ತೇನೊ ಸವಾಲುಗಳ ಸರಪಳಿಯು ಆಕೆಯನ್ನು ಬಂಧಿಸಿ ಬಾದಿಸಲಾರಂಭಿಸುತ್ತದೆ. ಕುಟುಂಬದೊಳಗೆ ಎದುರಿಸುವ ಸಮಸ್ಯೆ, ಸವಾಲುಗಳು ಒಂದೆಡೆಯಾದರೆ, ಮತ್ತೊಂದೆಡೆ ತಾನು ನಿರ್ವಹಿಸುವ ಕೆಲಸದ ಸ್ಥಳಗಳಲ್ಲಿಯು ಇವು ತಪ್ಪಿದ್ದಲ್ಲ. ಒಂದಲ್ಲ ಒಂದು ರೀತಿಯಿಂದ ಜೀವನ ಪರ್ಯಂತ ಎಲ್ಲದಕ್ಕೂ ಹಾಗೂ ಎಲ್ಲರಿಗೂ ಅಂಜಿ ಬದುಕುವ ಸ್ಥಿತಿಯನ್ನು ನಾವಿಲ್ಲಿ ಕಾಣಬಹುದಾಗಿದೆ. ಮಹಿಳೆಯರಿಗೆ ಇರುವ ಜೈವಿಕವಾದಂತಹ ಕೆಲವು ಅಂಶಗಳಲ್ಲಿ ಮಗುವಿನ ಆರೈಕೆ, ಲಾಲನೆ ಪಾಲನೆಯು ಬಹುಮುಖ್ಯವಾದುದು. ಇಂತಹ ಸಂದರ್ಭದಲ್ಲಿ ಅದೆಷ್ಟೋ ಮಹಿಳೆಯರು ತನ್ನ ಕುಟುಂಬ, ಮಕ್ಕಳಿಗಿಂತ ತನ್ನ ತಾನು ನಿಭಾಯಿಸುವ ಉದ್ಯೋಗದ ಕಡೆಗೆ ಹೆಚ್ಚು ಗಮನ ಕೊಡುವುದನ್ನು ಕಾಣುತ್ತೇವೆ. ಆದರೆ ಕೆಲವು ಸಮಯದಲ್ಲಿ ಡೆಲವರಿಯ ಸಮಯದಲ್ಲಿಯೂ ಆಕೆಗೆ ರಜೆ ನೀಡದೆ ಇರುವುದು ಅಥವಾ ಅವಳಿಗೆ ಅನುಕೂಲ ಆಗಲಾರದಂತೆ ಎಚ್ಚರ ವಹಿಸದೆ ಅನಾನುಕೂಲ ಮಾಡುವುದನ್ನು ಇಲ್ಲಿ ವಿವರಿಸಲಾಗಿದೆ.

"ಅತ್ಯಂತ ಉನ್ನತ ಹುದ್ದೆಯಲ್ಲಿರುವ ಮಹಿಳೆಯರಿಗೆ ಕೈಕೆಳಗಿನ ಪುರುಷ ನೌಕರರಿಂದ ಕೆಲಸ ತೆಗೆದುಕೊಳ್ಳುವ ಕಷ್ಟದ ಜೊತೆಗೆ ಸಮಾನ ಹುದ್ದೆಯಲ್ಲಿರುವ ಪುರುಷರ ಜೊತೆಗೆ ಹೆಣಗುವುದು ಕೂಡ ಕಷ್ಟದ ಕೆಲಸವಾಗಿದೆ. ಪುರುಷರಿಗೆ ಸರಿ ತಪ್ಪುಗಳನ್ನು ಸರಿದೂಗಿಸಲು ಎರಡು ಕಾಲಗಳಿರುತ್ತವೆ. ಒಂದು ಹಗಲು ಮತ್ತೊಂದು ರಾತ್ರಿ. ಹಗಲಿನಲ್ಲಿ ಅದೆ ತಪ್ಪುಗಳನ್ನು ತಿದ್ದಲು ವ್ಯವಹಾರಗಳನ್ನು ನಿಭಾಯಿಸಲು ರಾತ್ರಿ ಕಾಲ ಪ್ರಶಕ್ತವಾಗಿರುತ್ತವೆ. ಆದರೆ ಮಹಿಳೆಯರಿಗೆ ಹಗಲೇ ಎದ್ದು ಎದೆಗೆ ಒದೆಯುತ್ತಿರುವಾಗ ರಾತ್ರಿ ರಕ್ಷಣೆ ನೀಡಲು ಹೇಗೆ ಸಾಧ್ಯ? ಈ ನನ್ನ ಅಭಿಪ್ರಾಯ ಪುರುಷರಂತೆ ಮಹಿಳೆಯರು ನಡೆದುಕೊಳ್ಳಬೇಕು ಎಂಬುದಲ್ಲ. ಆದರೆ ವ್ಯವಸ್ಥೆ ಹೇಗೆ ಪುರುಷರಿಗೆ ಅವಕಾಶಗಳನ್ನು ಕಲ್ಪಿಸಿರುತ್ತದೆ ಎಂಬುದಕ್ಕೆ ಪ್ರಸ್ತಾಪಿಸಿರುವ, ಮಹಿಳೆಯರಿಗೆ ತಡೆಗೋಡೆಗಳು ಎದುರಾಗುವುದು ಸಹಜ. ಮಹಿಳೆರಿಗೆ ಉನ್ನತವಾದ ಹುದ್ದೆಗಳು ದೊರೆತ ಮಾತ್ರಕ್ಕೆ ಆಕೆಯಿಂದ ವಾಸ್ತವದ ಆಚೆಗೆ ಸಮರ್ಥ, ಕೆಲಸ ಕಾರ್ಯಗಳನ್ನು ನಿರೀಕ್ಷಿಸುವುದು ನ್ಯಾಯವಲ್ಲ. ಪುರುಷ ಪ್ರಧಾನ ಸಮಾಜದ ಒಳಗಿನಿಂದಲೇ ರೂಪುಗೊಳ್ಳುವ ಮಹಿಳೆಯರು ಅದರ ರಕ್ಷಕರು ಹೌದು. ಅದೇ ಮಾದರಿಗಳು ಇಂದು ಕಣ್ಣೆದುರಿಗೆ ಹೆಚ್ಚಾಗಿದೆ. ಹೀಗಾಗಿ ಲಿಂಗಾತೀತವಾಗಿ ಕರ್ತವ್ಯ ನಿಭಾಯಿಸುವಂಥ ಸಮಾಜ ವ್ಯವಸ್ಥೆಯೊಂದು ಹುಟ್ಟಿದಾಗ ಮಾತ್ರ ಅಧಿಕಾರ, ಆರ್ಥಿಕತೆ, ಹುದ್ದೆ ವಿದ್ಯೆಗಳಿಗೆಲ್ಲ ನಿಜವಾದ ಅರ್ಥ ವ್ಯಾಖ್ಯಾನಗಳನ್ನು ಮಾಡಲು ಸಾಧ್ಯ. ದೇಹ ಮೂಲದಿಂದ, ಸರಕು ಸಂಸ್ಕೃತಿಯ ಮೂಲಕ ಹೆಣ್ಣನ್ನು ಪರಿಭಾವಿಸುವ ಸಾಂಸ್ಕೃತಿಕ

ಮನಸ್ಥಿತಿ ಸಂಪೂರ್ಣ ಬದಲಾಗಬೇಕು. ಅಂದಾಗ ಮಾತ್ರ ಹೆಣ್ಣಿಗೆ ಹೊರ ಸಮಾಜದಲ್ಲಿ ಎದುರಾಗುವ ಬಿಕ್ಕಟ್ಟುಗಳನ್ನು ಪರಿಹರಿಸಿಕೊಳ್ಳಲು ಸಾಧ್ಯ."[೧೩]

ಸಾರ್ವಜನಿಕ ಜೀವನದಲ್ಲಿರುವ ಬಹುಮುಖ್ಯವಾಗಿ ಉನ್ನತವಾದ ಉದ್ಯೋಗದಲ್ಲಿರುವಂತಹ ಮಹಿಳೆಯ ಬದುಕು ಒಂದು ರೀತಿಯಲ್ಲಿ ಗಾಜಿನ ಮನೆ ಇದ್ದಂತೆ. ಉನ್ನತ ಹುದ್ದೆಯನ್ನು ಹೊಂದಿರುವ ಮಹಿಳೆ ಒಂದು ವೇಳೆ ಅಧಿಕಾರವನ್ನು ಅಸ್ತ್ರವನ್ನಾಗಿ ಬಳಸಿದರೆ ಗಾಜಿನ ಮನೆಯು ಒಡೆಯುವ ಆತಂಕ ಅವರಲ್ಲಿ ಸದಾ ಕಾಡುತ್ತಿರುತ್ತದೆ. ಮಹಿಳೆಯರಿಗೆ ಉನ್ನತ ಹುದ್ದೆ ಎಂಬುದು ಕೇವಲ ಒಂದು ಹುದ್ದೆಯಾಗಿರುತ್ತದೆ ಅಷ್ಟೆ. ಅಧಿಕಾರ ಅಂತ ಬಂದಾಗ ಅದು ಮಹಿಳೆಯ ಮೂಲಕ ಪುರುಷ ನಡೆಸುವ ಚದುರಂಗದಾಟವೇ ಆಗಿರುತ್ತದೆ.

ಮಹಿಳೆಯರು ಅತ್ಯಂತ ಉನ್ನತ ಹುದ್ದೆಯನ್ನು ಹೊಂದಿದ್ದಾಗಲೂ ಸಹಿತ ಆಕೆಯನ್ನು ನೋಡುವ ಮತ್ತು ನಡೆಸಿಕೊಳ್ಳುವ ರೀತಿ ಬದಲಾಗಿಲ್ಲ. ಉನ್ನತ ಹುದ್ದೆಯಲ್ಲಿದ್ದ ಮಹಿಳೆಯು ತನ್ನ ಕೈಕೆಳಗೆ ಇರುವಂತಹ ಪುರುಷ ನೌಕರರೊಂದಿಗೆ ಕೆಲಸ ಮಾಡುವ ಸಂದರ್ಭದಲ್ಲಿ ಅವರನ್ನ ಸಂಬಾಳಿಸುವುದು ತುಂಬಾ ಕಷ್ಟದ ಸಂಗತಿಯೇ ಸರಿ. ಕೆಲವೊಮ್ಮೆ ಅಧಿಕಾರವನ್ನು ಅಸ್ತ್ರವಾಗಿ ಬಳಸಬೇಕೆಂದಾಗಲೂ ಆಕೆಯನ್ನು ನೋಡುವುದು ಅವಳ ಹುದ್ದೆಯಿಂದಲ್ಲ, ಅವಳ ದೇಹಮೂಲದಿಂದಲೇ. ಅಂದರೆ ಅವಳು ಒಬ್ಬ ಮಹಿಳೆಯೆಂದೇ ನೋಡಲಾಗುತ್ತದೆ. ಇಂತಹ ಲಿಂಗ ತಾರತಮ್ಯ ನೆಲೆ ಬದಲಾಗಿ, ಲಿಂಗಾತೀತ ನೆಲೆಯಿಂದ ನೋಡುವ ಮತ್ತು ಲಿಂಗಾತೀತವಾಗಿ ಕರ್ತವ್ಯ ನಿರ್ವಹಿಸುವಂತಹ ವ್ಯವಸ್ಥೆಯೊಂದು ಹುಟ್ಟಿದಾಗ ಮಾತ್ರ ಅಧಿಕಾರ ಆರ್ಥಿಕತೆ, ಹುದ್ದೆ ವಿದ್ಯೆಗಳಿಗೆಲ್ಲ ನಿಜವಾದ ಅರ್ಥ, ವ್ಯಾಖ್ಯಾನಗಳನ್ನು ಮಾಡಲು ಸಾಧ್ಯವಾಗುತ್ತದೆ. ದೇಹ ಮೂಲದಿಂದ ಮತ್ತು ಸರಕು ಸಂಸ್ಕೃತಿಯ ಮೂಲಕ ಹೆಣ್ಣನ್ನು ಪರಿಭಾವಿಸುತ್ತಿರುವ ಸಾಂಸ್ಕೃತಿಕವಾದಂತಹ ಮನಸ್ಥಿತಿ ಬದಲಾದಾಗ ಮಾತ್ರ ಮಹಿಳೆಗೆ ಹೊರಸಮಾಜದಲ್ಲಿ ಎದುರಾಗುವ ಸಮಸ್ಯೆಗಳು, ಬಿಕ್ಕಟ್ಟುಗಳನ್ನು ಬಗೆಹರಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂಬುದನ್ನು ಇವರು ಮನವರಿಕೆ ಮಾಡುತ್ತಾರೆ.

"ಶ್ರಮ ಸಂಬಂಧಿಯಾದ ಮಾರುಕಟ್ಟೆಯಲ್ಲಿ ಇಂದಿಗೂ ಮಹಿಳೆ ಶೋಚನೀಯ ಸ್ಥಿತಿಯಲ್ಲಿದ್ದಾಳೆ. ಮಾರುಕಟ್ಟೆ ಪುರುಷ ಪಕ್ಷಪಾತಿಯಾಗಿದ್ದು ಒಂದೇ ರೀತಿಯ ಪರಿಶ್ರಮಕ್ಕೆ ಮಹಿಳೆಗೆ ಕಡಿಮೆ ಪ್ರತಿಫಲವನ್ನು ನೀಡುತ್ತದೆ. 'ಗಂಡಾಳು' ಮತ್ತು 'ಹೆಣ್ಣಾಳು' ಎಂಬ ವರ್ಗೀಕರಣವೇ ಶ್ರಮಕ್ಕೆ ಪ್ರತಿಫಲ ನೀಡುವಾಗ ಮಾನದಂಡವಾಗುತ್ತದೆ. ಲಿಂಗಾಧಾರಿತವಾದ ಶ್ರಮ ಮಾರುಕಟ್ಟೆಯಲ್ಲಿ ಮಹಿಳೆಗೆ ಸಮಾನ ಅವಕಾಶಗಳನ್ನು ನಿರಾಕರಿಸಲಾಗುತ್ತಿದೆ. ಇದರಿಂದ ಮಹಿಳೆ ತನ್ನದೇ ಸೀಮಿತ ಪರಿಧಿಯನ್ನು ಉದ್ಯೋಗದಲ್ಲಿ ಕಂಡುಕೊಂಡಿದ್ದಾಳೆ. ಮಹಿಳೆಯರೂ ಹೆಚ್ಚಾಗಿ ಅಧ್ಯಾಪನ, ಶುಶ್ರೂಷೆ, ಸಮಾಜ ಕಾರ್ಯ, ಕಛೇರಿ ಹಾಗೂ ಗುಮಾಸ್ತೆಯ ಕೆಲಸಗಳನ್ನು ಬಯಸುತ್ತಾರೆ. ಒಂದು ರೀತಿಯಲ್ಲಿ ಇವು ವಾಣಿಜ್ಯ ವ್ಯವಹಾರಗಳ ಹುದ್ದೆಗಳಿಗೆ ಹೋಲಿಸಿದರೆ ಕಡಿಮೆ ಸಂಭಾವನೆಯುಳ್ಳ ಕಡಿಮೆ 'ಅಂತಸ್ತಿನ' ಕೆಲಸಗಳೇ ಆಗಿವೆ. ವೃತ್ತಿ ಪರವಾದ, ಡಾಕ್ಟರ್, ಇಂಜಿನಿಯರ್ ಮುಂತಾದ

ಕಾರ್ಯಗಳಲ್ಲಿ ತೊಡಗಿಸಿಕೊಂಡರೂ ಆಯಾ ವೃತ್ತಿಗಳನ್ನು ಮತ್ತು ಕುಟುಂಬವನ್ನು ಒಟ್ಟಿಗೆ ನಿಭಾಯಿಸಬಹುದಾದ ಒತ್ತಡ ಮಹಿಳೆಯನ್ನು ಸಂಕಷ್ಟಕ್ಕೆ ದೂಡುತ್ತದೆ."[೧೪] ಮಹಿಳೆ ಉನ್ನತ ಶಿಕ್ಷಣ ಪಡೆದರೂ ಅವಳ ಉದ್ಯೋಗದ ಆಯ್ಕೆ ಮಾತ್ರ ಅವಳ ಕುಟುಂಬದ ಯಜಮಾನನದ್ದೇ ಆಗಿರುತ್ತದೆ. ಮಹಿಳೆಯು ಪುರುಷನಷ್ಟೇ ಸರಿಸಮಾನವಾದ ಉದ್ಯೋಗವನ್ನು ಹೊಂದಿದ್ದರೂ ಕೂಡ ಅವಳ ಶ್ರಮವನ್ನು ಸೇವೆ ಎಂದೇ ಪರಿಗಣಿಸಲಾಗುತ್ತಿದೆ. ಹೆಣ್ಣು ಗಂಡು ಎಂಬ ಲಿಂಗತಾರತಮ್ಯವು ಅಳಿಸಿದಾಗ ಮಾತ್ರ ಮಹಿಳೆಯ ಶ್ರಮಕ್ಕೆ ಮತ್ತು ಅವಳ ದುಡಿಮೆಗೆ ಸರಿಯಾದ ಪ್ರತಿಫಲದೊರೆಯುತ್ತದೆ. ಮಹಿಳೆಯು ತಾನು ನಿರ್ವಹಿಸುವ ಉದ್ಯೋಗವು ಪಾಲನೆ, ಪೋಷಣೆಗೆ ಸಂಬಂಧಿಸಿದ್ದವಾಗಿವೆ ಎಂಬುದನ್ನಿಲ್ಲಿ ಅಲ್ಲಗಳೆಯುವಂತಿಲ್ಲ. ಈ ಹುದ್ದೆಗಳು ಕಡಿಮೆ ಸಂಭಾವನೆವುಳ್ಳವಾಗಿವೆ. ಹಾಗೆಯೇ ಇವು ಮಹಿಳೆಗೆ ಮತ್ತಷ್ಟು ಒತ್ತಡಗಳನ್ನು ಹೆಚ್ಚಿಸುವಂತಹ ಉದ್ಯೋಗವಾಗಿವೆ.

ಕೊನೆಟಿಪ್ಪಣಿಗಳು

೧. ಆರ್.ಪೂರ್ಣಿಮಾ, ಮಣ್ಣಿನ ಕಣ್ಣು, ಪುಟ–೨೧–೨೨
೨. ಸಾರಾ ಅಬೂಬಕ್ಕರ್, ಸಾಹಿತ್ಯಕ್ಕೊಂದು ದಾರಿದೀಪ, ಪುಟ–೧೧೬–೧೧೭
೩. ಸಾರಾ ಅಬೂಬಕ್ಕರ್, ಸಾಹಿತ್ಯಕ್ಕೊಂದು ದಾರಿದೀಪ, ಪುಟ–೧೮೦
೪. ಸಾರಾ ಅಬೂಬಕ್ಕರ್, ಸಾಹಿತ್ಯಕ್ಕೊಂದು ದಾರಿದೀಪ, ಪುಟ–೧೯೨
೫. ಎಸ್.ಡಿ.ಶಶಿಕಲಾ (ಸಂ)., ವಿಜಯಾದಬ್ಬೆ ಸಮಗ್ರ ಸಾಹಿತ್ಯ ಸಂಪುಟ–೨, ಪುಟ–೩೨೧
೬. ಎಂ.ಎಸ್.ಇಂದಿರಾ, ಮಹಿಳೆ ಮತ್ತು ಸವಾಲುಗಳು, ಪುಟ–೧೧
೭. ಮೀನಾಕ್ಷಿ ಬಾಳಿ, ಮನದ ಸೂತಕ ಹಿಂಗಿದೊಡೆ, ಪುಟ–೫೩–೫೪
೮. ಮೀನಾಕ್ಷಿ ಬಾಳಿ, ಮನದ ಸೂತಕ ಹಿಂಗಿದೊಕೆ, ಪುಟ–೧೬–೧೭
೯. ಗುಲಾಬಿ ಬಿಳಿಮಲೆ (ಸಂ)., ಇನ್ನು ಸಾಕು, ಪುಟ–೫೩
೧೦. ಹೆಚ್.ನಾಗವೇಣಿ, ಸೂರ್ಯನಿಗೊಂದು ವೀಳ್ಯ, ಪುಟ–೧೫
೧೧. ಎಂ.ಎಸ್.ಆಶಾದೇವಿ, ನಾರಿಕೇಳಾ, ಪುಟ–೧೮
೧೨. ಶ್ರೀದೇವಿ ಕೆರೆಮನೆ, ಹೆಣ್ತನದ ಆಚೆ–ಈಚೆ. ಪುಟ–೧೦೬–೧೦೭
೧೩. ಅಮರೇಶ ನುಗುಡೋಣಿ (ಸಂ)., ಕಲ್ಯಾಣ ಕರ್ನಾಟಕ, ಪುಟ–೧೭೩–೧೭೪
೧೪. ಅಶ್ವಿನಿ ದೇಸಾಯಿ, ವಿಜಯಾನ್ವೇಷಣೆ, ಪುಟ–೪೮೫

ಅಧ್ಯಾಯ - ಏಳು

ವಿಚಾರ ಸಾಹಿತ್ಯ: ದುಡಿಯುವ ವರ್ಗದ ಮಹಿಳೆ

ಅಧ್ಯಾಯ – ಏಳು

ವಿಚಾರ ಸಾಹಿತ್ಯ: ದುಡಿಯುವ ವರ್ಗದ ಮಹಿಳೆ

ಆದಿಮಾನವನ ಕಾಲದಿಂದಲೂ ಇತಿಹಾಸದ ಪುಟಗಳಲ್ಲಿ ಮಹಿಳೆಯರನ್ನು ಗೌಣವಾಗಿಸಿಕೊಂಡೇ ಬರಲಾಗಿದೆ. ಇಲ್ಲಿಯವರೆಗೆ ಅಕ್ಷರ ರೂಪದಲ್ಲಿ ಕಾಣುತ್ತಿದ್ದ ಇತಿಹಾಸದ ಸಾಲುಗಳ ನಡುವಿನ ಖಾಲಿ ಜಾಗದಲ್ಲಿ ಸತ್ಯಸಂಗತಿಗಳು ಇನ್ನೂ ಇವೆ. ಅಲ್ಲಿ ನೊಂದವರ, ಮಹಿಳೆಯರ, ಸಾಮಾನ್ಯ ಜನರ, ದಲಿತರ ಯಶೋಗಾಥೆಗಳಿವೆ. ಯಜಮಾನ್ಯ ಸಂಸ್ಕೃತಿಯ ವಕ್ತಾರರು ಬರೆದಿರುವ ಚರಿತ್ರೆಯಲ್ಲಿ ಮಹಿಳೆಯ ಸಾಧನೆ ಮತ್ತು ಸಂಗತಿಗಳು ಅಸ್ತಿತ್ವ, ಅಸ್ಮಿತೆಗಳು ದಾಖಲಾಗದೆ ಹೋಗಿರುವುದನ್ನು ಕಾಣುತ್ತೇವೆ.

ಕುಟುಂಬದಲ್ಲಿಯೇ ಲಿಂಗ ತಾರತಮ್ಯವನ್ನು ಎಸಗುತ್ತಲೇ ಮಹಿಳೆಯನ್ನು ಎರಡನೇ ದರ್ಜೆಯವಳಾಗಿ ನೋಡಲಾಗಿದೆ. ಅವಳ ಶಿಕ್ಷಣ, ಬೌದ್ಧಿಕತೆಯನ್ನು ಮೊಟಕುಗೊಳಿಸಲಾಗಿದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಅಧೀನವಾಗಿಯೇ ನಡೆಸಿಕೊಳ್ಳುವಂತಹದ್ದು ಮತ್ತು ಗಂಡಿನ ಭೋಗದ ವಸ್ತುವನ್ನಾಗಿ ಕಾಣುವಂತಹದ್ದು ಇಂದಿಗೂ ಮುಂದುವರೆದುಕೊಂಡು ಬಂದಿರುವುದನ್ನು ನಾವು ಕಾಣುತ್ತೇವೆ. ಮಹಿಳೆಯರಲ್ಲಿ ಆಯ್ಕೆಯ ಪ್ರಶ್ನೆ ಬಂದಾಗಲೂ ಸಹ ಅವಳ ಆಸೆ ಆಕಾಂಕ್ಷೆಗಳಿಗೆ ಬೆಲೆಕೊಡದೆ ಅವಳು ಯಾವ ಕೆಲಸ ಮಾಡಬೇಕು, ಯಾವುದನ್ನು ಆಯ್ಕೆ ಮಾಡಿಕೊಂಡರೆ ಅವಳಿಗೆ ಒಪ್ಪುತ್ತದೆ ಅಂತಲೊ ಅಥವಾ ಆಕೆಗೆ ಕೆಲಸ ನಿಭಾಯಿಸಲು ಸಮರ್ಥಗಳಿಲ್ಲ ಎಂಬುದನ್ನು ಈ ಪುರುಷ ಪ್ರಧಾನ ವ್ಯವಸ್ಥೆಯೇ ನಿರ್ಧರಿಸುತ್ತದೆ. ಎಂತಹ ಕಠಿಣ ಪರಿಸ್ಥಿತಿಯನ್ನು ನಿಭಾಯಿಸಿ ಅದನ್ನು ತನ್ನದಾಗಿಸಿಕೊಳ್ಳುವ ಸಾಮರ್ಥ್ಯವಿದೆ ಎಂಬುದು ತಿಳಿದಿದ್ದರೂ ಅವಳ ಹಕ್ಕನ್ನು ಕಿತ್ತುಕೊಳ್ಳುವ ಅಸ್ತ್ರವನ್ನು ಈ ಪುರುಷ ಪ್ರಧಾನ ವ್ಯವಸ್ಥೆಯು ಸದಾ ತನ್ನ ಬತ್ತಳಿಕೆಯೊಳಗೆ ಸಿದ್ಧಮಾಡಿಯೆ ಇಟ್ಟುಕೊಂಡಿರುತ್ತದೆ. ಮಹಿಳೆಯರು ಅತ್ಯಂತ ಸುಲಭ ಎನಿಸುವ, ಕಡಿಮೆ ವೇತನ ಲಭಿಸುವಂತ ಕೆಲಸ ಮಾಡಬೇಕೆಂಬ ಅಪೇಕ್ಷೆ ಇವರದ್ದು. ಉದಾಹರಣೆಗೆ ಶಿಕ್ಷಕಿಯಾಗುವುದು, ನರ್ಸ್ ಆಗುವುದು, ಮಕ್ಕಳನ್ನು ನೋಡಿಕೊಳ್ಳುವ ಆಯಾ ಆಗುವುದು, ಹೀಗೆ ಸುಲಭದ ಹತ್ತು

ಹಲವು ಕೆಲಸಗಳನ್ನು ಆಯ್ಕೆ ಮಾಡುವುದು. ಇದು ವಿದ್ಯಾವಂತ ವರ್ಗದ ಮಹಿಳೆಯರ ಗಾಥೆಯಾದರೆ ಇನ್ನೂ ಕೂಲಿಕಾರ ಮಹಿಳೆಯರ ಸಮಸ್ಯೆಗಳು (ಪ್ರಶ್ನೆಗಳು) ಮತ್ತೊಂದು ರೀತಿಯಾದವುಗಳು.

ತಳಸಮುದಾಯದ ಅಥವಾ ಗ್ರಾಮೀಣ ಮಹಿಳೆಯರ ಬದುಕು, ಅವರ ಶ್ರಮ ಮತ್ತು ಬಿಡುವುಗಳನ್ನು ಗುರುತಿಸದೇ ತಮ್ಮ ಕಣ್ಣಳತೆಯ ದೂರದಲ್ಲಿ ನೋಡಿರುವಷ್ಟನ್ನೇ ಎಲ್ಲಾ ವರ್ಗದ ಮಹಿಳೆಯರ ಬದುಕು ಹೀಗೆಯೇ ಇರಬಹುದು ಅಥವಾ ಇರುತ್ತದೆಂದು ಭಾವಿಸಿ ನಿರ್ಧಾರವನ್ನು ಅಭಿವ್ಯಕ್ತಿಸಿರುವುದನ್ನು ಕಾಣುತ್ತೇವೆ. "ಯಾವುದೇ ಗೌರವಾನ್ವಿತ ಹೆಣ್ಣು ಕೂಡ ಎಂಥಾ ಶ್ರೀಮಂತಳೇ ಆಗಿದ್ದರೂ, ಬೆಳಗ್ಗೆ ಎದ್ದದ್ದೇ ಗಂಡಸಿನಂತೆ ಕಾಲಮೇಲೆ ಕಾಲು ಹಾಕಿಕೊಂಡು ಪೇಪರ್ ಓದುತ್ತಾ, ಕಾಫಿ ಕುಡಿಯುತ್ತಾ ಆರಾಮವಾಗಿ ಕುಳಿತಿರುವ ಚಿತ್ರಣವನ್ನು ನಮ್ಮ ಸಮಾಜದಲ್ಲಿ ಕಲ್ಪಿಸಲಾಗುವುದಿಲ್ಲ. ಕೆಟ್ಟ ಹೆಂಗಸರು ಮಾತ್ರವೇ ಹೀಗೆಲ್ಲಾ ಮಾಡುತ್ತಾರೆ. ಸಾಧ್ವಿಯಾದ ಹೆಂಗಸಂದಿರು ಪತಿದೇವನು ಹಾಸಿಗೆಯಲ್ಲಿ ತಂಗಳು ನಿದ್ದೆಯ ಸುಖದಲ್ಲಿ ಹೊದ್ದು ಮಲಗಿದ್ದರೆ, ಸ್ನಾನ, ಪೂಜೆ, ಬೆಳಗಿನ ಕಾಫಿ ತಿಂಡಿಗಳ ಸಿದ್ಧತೆಗಳನ್ನು ಪೂರೈಸಿ ಹೊರಡಲು ಹೊತ್ತಾಯಿತೆಂದು ಎಚ್ಚರಗೊಳಿಸಲು ಬರುತ್ತಾಳೆ. ಈ ಸೇವೆಯಲ್ಲಿ ಅವಳು ತುಂಬಾ ಸಂತೋಷದಿಂದ ಪ್ರೀತಿಯಿಂದ ನಿರತಳಾಗಿರುವುದರಿಂದ ನಗುನಗುತ್ತಾ ನವಚೈತನ್ಯ ತುಂಬಿದ ನಡವಳಿಕೆ ತೋರುತ್ತಾಳೆ. ಆಳುಕಾಳುಗಳಿದ್ದರೂ ಅಡಿಗೆ ಕೆಲಸ, ಗಂಡ ಮಕ್ಕಳ ವೈಯಕ್ತಿಕ ಕೆಲಸಗಳನ್ನು ಸ್ವತಃ ತಾನೇ ಮಾಡಿದರೇನೇ ತೃಪ್ತಿಯಾಗುವುದು ಎಂಬ ಭ್ರಮೆಯ ಮಾತುಗಳನ್ನಾಡುವ ಮಹಿಳೆಯರ ಒತ್ತಡಗಳನ್ನು ಸುಲಭವಾಗಿ ವಿವರಿಸಲಾಗುವುದಿಲ್ಲ"[೧] ಇಲ್ಲಿ ಕೆಳವರ್ಗದ/ದುಡಿಯುವ ವರ್ಗದ ಕುಟುಂಬ ಮತ್ತು ಮಹಿಳೆಯರ ಸಮಸ್ಯೆಗಳು ಕಾಣುವುದೇ ಇಲ್ಲ. ದುಡಿಯುವ ವರ್ಗದ ಕುಟುಂಬಗಳಲ್ಲಿ ಪೇಪರ್ ಓದುವ, ಕಾಲಮೇಲೆ ಕಾಲು ಹಾಕಿ ಕಾಫಿ ಕುಡಿಯುವ ಯಾವ ಕುಟುಂಬಗಳಲ್ಲಿ ಕಾಣುವುದಿಲ್ಲ. ಇವರಿಗೆ ಕೃಷಿ ಕಾರ್ಮಿಕ ಮಹಿಳೆಯರು, ಕಟ್ಟಡ ಕಾರ್ಮಿಕ ಮಹಿಳೆಯರು, ಗುತ್ತಿಗೆ ಕಾರ್ಮಿಕ ಮಹಿಳೆಯರು, ಕೂಲಿಕಾರ ಮಹಿಳೆಯರು ಈ ಯಾವ ವರ್ಗದ ಮಹಿಳೆಯರ ಸಮಸ್ಯೆಗಳು ಸಮಸ್ಯೆಯಾಗಿ ಕಾಣುವುದೇ ಇಲ್ಲ. ಈ ಎಲ್ಲಾ ಮಹಿಳೆಯರು ತಮ್ಮ ನಿತ್ಯದ ಬದುಕನ್ನು ಸಾಗಿಸಿಕೊಳ್ಳಲು ತಮ್ಮ ಕೆಲಸ ಕಾರ್ಯಗಳಲ್ಲಿ ಮಗ್ನರಾಗಿರುತ್ತಾರೆ. ಕಾಫಿ ಕುಡಿಯುವ ಕುಟುಂಬವೇ ಇಲ್ಲದಿದ್ದರೇ ಅಥವಾ ಅನಕ್ಷರಸ್ತ ಕುಟುಂಬಗಳಲ್ಲಿ ಪೇಪರ್ ಓದುವ, ಆಳುಕಾಳುಗಳನ್ನು ಕಾಣಲು ಸಾಧ್ಯವೇ ಇಲ್ಲ. ಹೀಗಿರುವಾಗ ಇವರು ಹೇಳುವ ಕುಟುಂಬ ವ್ಯವಸ್ಥೆಯಲ್ಲಿ ಹೆಣ್ಣಿಗಿರುವ ಸಮಸ್ಯೆಗಳನ್ನು ಎಲ್ಲಾ ವರ್ಗ, ಜಾತಿಗಳ ಮಹಿಳೆಯ ಸಮಸ್ಯೆಗಳೂ ಇವರಿಗೆ ಒಂದೇ ಆಗಿ ಕಾಣುತ್ತದೆ.

ಮಹಿಳೆ ದುಡಿಯುವಂತಹ ಸಂದರ್ಭದಲ್ಲಿ ಪುರುಷನಿಗೆ ಸಮಾನವಾಗಿ ದುಡಿದರೂ ಸಹ ಅವಳ ದುಡಿಮೆಗೆ ಸಮಾನ ವೇತನ ಸಿಗುವುದಿಲ್ಲ. ಪುರುಷನಷ್ಟೇ ಸಮಬಲವಿರುವ ದುಡಿಮೆಯನ್ನು ಮಾಡಿದರೂ ಸಹ ಆಕೆಗೆ ಸಿಗುವ ವೇತನ ಕಡಿಮೆಯೇ ಆಗಿರುತ್ತದೆ. "ಮನೆಯ ಹೊರಗೆ

ದುಡಿಯುವ ಮಹಿಳೆ ಒಂದು ರೀತಿಯಲ್ಲಿ ದ್ವಿಭಾರವನ್ನು ಹೊರುತ್ತಾಳೆ. ಅವಳ ಸ್ಥಾನ ಉದ್ಯೋಗದಲ್ಲಿ ಎಷ್ಟೇ ಮೇಲ್ಮಟ್ಟದಾಗಿರಲಿ ಮನೆಗೆ ಬಂದೊಡನೆ ಅವಳಿಗೆ ಎದುರಾಗಿರುವುದು ಮನೆಗೆಲಸದ, ಮಕ್ಕಳ ಜವಾಬ್ದಾರಿಗಳ ಸರಮಾಲೆ. ಈ ಪರಿಸ್ಥಿತಿಯನ್ನು ತಪ್ಪಿಸಿಕೊಂಡಿರುವ ಹೆಣ್ಣು ಮಕ್ಕಳ ಸಂಖ್ಯೆ ಇಂದಿಗೂ ಗೌಣ ಎಂದರೆ ತಪ್ಪಾಗಲಾರದು."[೨] ಹೀಗೆ ಸಮಾಜ ಮತ್ತು ಸಮುದಾಯಗಳಲ್ಲಿ ಹೆಣ್ಣು ಏಕಕಾಲದಲ್ಲಿ ಎರಡೂ ಜವಾಬ್ದಾರಿಗಳನ್ನು ನಿಭಾಯಿಸುತ್ತಾಳಾದರೂ ಅವಳಿಗೆ ಸಿಗುವಂತಹ ಗೌರವ ಶೂನ್ಯವೆ ಆಗಿರುತ್ತದೆ. ನಮ್ಮ ಸಾಮಾಜೀಕರಣ ವ್ಯವಸ್ಥೆಯಲ್ಲಿ ಮಹಿಳೆ, ಸಮಾಜ ಮತ್ತು ಸಂಸ್ಕೃತಿ ಈ ಮೂರು ಪರಿಕಲ್ಪನೆಗಳು ಒಂದಕ್ಕೊಂದು ನಿಕಟವಾದ ಸಂಬಂಧವನ್ನು ಹೊಂದಿವೆಯಾದರೂ ಗಂಡು ಮತ್ತು ಹೆಣ್ಣನ್ನು ಗುರುತಿಸುವಿಕೆಗೆ ಕೆಲವು ಪ್ರತ್ಯೇಕವಾದ ಗುಣವನ್ನು ಆರಂಭಿಸಲಾಗಿದೆ. ಇಲ್ಲಿ ಸಂಸ್ಕೃತಿ ಎಂದರೆ ಪುರುಷ ಎಂದೇ ಭಾವಿಸಲಾಗಿದೆ ಅಂದರೆ ಸಂಸ್ಕೃತಿಯ ನಿರ್ಮಾತೃ ಪುರುಷನೇ ಆಗಿರುವನು. ಪುರುಷ ಧೈರ್ಯಶಾಲಿ, ಸ್ವಾವಲಂಬಿ, ರಕ್ಷಕ ಮೊದಲಾದ ಗುಣಗಳನ್ನು ಹೊಂದಿದವನೆಂದು ಈ ಪುರುಷತ್ವ ಗುಣಗಳನ್ನು ಹೊಂದಿದವನಿಗೆ ಗಂಡು ಎಂದು ಕರೆಯಲಾಗುತ್ತದೆ. ಹಾಗೆಯೇ ಭಾವುಕತೆ, ಕೋಮಲತೆ, ವಿಧೇಯತೆ, ತಾಯ್ತನ, ಸಂಗೋಪನೆ, ಕ್ಷಮೆ, ಕಷ್ಟಸಹಿಷ್ಣುತೆ ಇವುಗಳನ್ನು ಸ್ತ್ರೀಗೆ ಆರೋಪಿಸಲಾಗುತ್ತದೆ. ಸ್ತ್ರೀ ಎನ್ನುವುದಕ್ಕೆ ಪ್ರತ್ಯೇಕ ಅನನ್ಯತೆಯನ್ನು ಗುರುತಿಸಲಾಗಿದೆ.

ಲಿಂಗತಾರತಮ್ಯವನ್ನು ೧೨ನೇ ಶತಮಾನದಿಂದಲೂ ವಿರೋಧಿಸುತ್ತಾ ಬಂದಿರುವುದನ್ನು ಕಾಣುತ್ತೇವೆ. 'ಮೊಲೆಮುಡಿ ಬಂದಡೆ ಹೆಣ್ಣೆಂಬರು, ಗಡ್ಡ ಮೀಸೆ ಬಂದಡೆ ಗಂಡೆಂಬರು, ಈ ಉಭಯದ ಜ್ಞಾನ ಹೆಣ್ಣೋ ಗಂಡೋ ನಾಸ್ತಿನಾಥ.' ಇಲ್ಲಿ ಹೇಳಿರುವಂತೆ ಪ್ರಮುಖವಾಗಿ ಗಂಡು ಮತ್ತು ಹೆಣ್ಣಿನ ಅನನ್ಯತೆಯ ಚಹರೆಯನ್ನು ಕುರಿತು ಹೇಳಿದ್ದಾರೆ. ಅದಲ್ಲದೆಯೆ ಮುಂದುವರೆದು ಜ್ಞಾನದ ಬಗೆಗೆ ಸಮಾಜಕ್ಕೆ ಪ್ರಶ್ನೆಮಾಡುವಂತಹದ್ದು, ಮಹಿಳೆಯ ಜ್ಞಾನ ಮತ್ತು ಅರಿವನ್ನು ಚರಿತ್ರೆಯ ಕಾಲದಿಂದಲೂ ಪರಿಗಣಿಸದೇ ಇದ್ದದ್ದು ಹಾಗು ಅವಳ ಜ್ಞಾನವನ್ನು ಗೌಣಗೊಳಿಸುತ್ತಾ ಗಂಡು ಮತ್ತು ಹೆಣ್ಣಿನ ನಡುವೆ ಒಂದು ಅಂತರವನ್ನು, ಅಸಮಾನತೆಯನ್ನು ಕಾಯ್ದುಕೊಳ್ಳುತ್ತಾ ಬಂದಿರುವುದನ್ನು ಈ ವಚನವು ಸ್ಪಷ್ಟಪಡಿಸುತ್ತದೆ.

ಆಧುನಿಕ ಪೂರ್ವಕಾಲಘಟ್ಟದಲ್ಲಿ ಸಂಚಿಹೊನ್ನಮ್ಮ ಸಮಾಜದಲ್ಲಿ ಹೆಣ್ಣನ್ನು ತಾತ್ಸಾರ ಮಾಡುವವರಿಗೆ ತನ್ನ ಬರವಣಿಗೆಯ ಮೂಲಕ ಪ್ರಶ್ನೆ ಮಾಡುವುದರ ಜೊತೆಗೆ ಹೆಣ್ಣಿನ ಸ್ಥಾನವನ್ನು ತಿಳಿಸುತ್ತಾಳೆ. 'ಪೆಣ್ಣಲ್ಲವೆ ತಮ್ಮನ್ನೆಲ್ಲ ಪಡೆದ ತಾಯಿ ಪೆಣ್ಣಲ್ಲವೆ ಪೊರೆದವಳು ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು ಕಣ್ಣು ಕಾಣದ ಗಾವಿಲರು.' ಸಮಾಜಕ್ಕೆ ಹೆಣ್ಣಿನ ಮಹತ್ವವೆನೆಂದು ದಿಟ್ಟವಾಗಿ ಹೇಳುತ್ತಾರೆ. ಹೆಣ್ಣು ಪಾಲನೆ ಪೋಷಣೆಯಿಂದ ಹಿಡಿದು ಸಮಾಜದ ವಕ್ರತೆಯನ್ನು ತಿದ್ದುವಂತಹಳು. ನಿಂದಿಸುವ, ಶೋಷಿಸುವ ಈ ಪುರುಷನನ್ನು ಹೆಣ್ಣು ಅಲ್ಲವೇ ಹೊತ್ತು, ಹೆತ್ತು ಬೆಳೆಸಿದವಳು? ಎಂಬುದನ್ನು ಮತ್ತಷ್ಟು ದೃಢಪಡಿಸುತ್ತಾಳೆ. ಯಾವುದಕ್ಕೂ ಅರ್ಹಳಲ್ಲ ಅಂದರೆ ಗಂಡಿನ ಸಮಾನವಾಗಿ

ನಿಲ್ಲುವಷ್ಟು ಸಮಬಲಳಲ್ಲ, ಸಾಮಾರ್ಥ್ಯವುಳ್ಳವಳೂ ಅಲ್ಲ, ಎಂದಿಗೂ ಕುಟುಂಬದ ಬೇಗೆಯೊಳಗೆ ಬೇಯಲು ಮಾತ್ರ ಅರ್ಹಳು. ಎನ್ನುವ ಹಾಗೂ ಮೌಢ್ಯತೆಯನ್ನು ಮತ್ತು ಹೆಣ್ಣಿನ ಬಗೆಗಿನ ಅಸಡ್ಡೆಯನ್ನು ಹೊಂದಿರುವಂತಹ ಈ ಪುರುಷಪ್ರಧಾನ ಸಮಾಜಕ್ಕೆ ಹೆಣ್ಣಿನ ಮಹತ್ವವನ್ನು ತಿಳಿಸಿದ್ದಾರೆ. ಕೇವಲ ಅಧೀನಳಾಗಿಯೇ ಇರಬೇಕೆಂಬುದನ್ನ ಹೇಳುವ ಈ ಪಿತೃಪ್ರಧಾನ ಸಮಾಜಕ್ಕೆ ಸವಾಲೊಡ್ಡುವ ಮತ್ತು ಸ್ಥಾಪಿತ ವ್ಯವಸ್ಥೆಯೊಳಗಿರುವ ನಿರ್ಬಂಧಗಳನ್ನ ಒಡೆಯುವ ಕೆಲಸವನ್ನಿಲ್ಲಿ ಮಾಡಿದ್ದಾರೆ.

ವಿವಾಹದಂತಹ ಸಂಸ್ಥೆಯನ್ನು ಸೃಷ್ಟಿಸಿಕೊಂಡು ಕುಟುಂಬಗಳು ಪರಸ್ಪರ ಹಲವು ಕೊಳು ಕೊಡುಗೆಗಳಲ್ಲಿ ಸಮಾಜಗಳು ಬೆಳೆದು ಬಹುರೂಪಗಳಲ್ಲಿ ವಿಸ್ತರಿಸಿದವು. ನಿರಂತರವಾಗಿ ನಡೆಯುತ್ತಲೇ ಹೋಗುವ ಈ ಬೆಳವಣಿಗೆ ಹಲವು ರೂಪಗಳಲ್ಲಿ ಕುಟುಂಬಗಳ ಹಾಗೂ ಅಲ್ಲಿನ ಸದಸ್ಯರ ಸ್ಥಿತಿಗತಿಗಳಲ್ಲಿ ಬದಲಾವಣೆಗಳನ್ನು ತರುತ್ತಲೇ ಇರುತ್ತದೆ.

ಕುಟುಂಬ ಎಂಬ ಪರಿಕಲ್ಪನೆಯ ಮೂಲದಲ್ಲೇ ಯಾಜಮಾನ್ಯದ ಕಲ್ಪನೆಯನ್ನು ಕಾಣುತ್ತೇವೆ. ಕುಟುಂಬ ಎನ್ನುವುದು ಎಲ್ಲರನ್ನು ಬಂಧಿಸಿಡುವ ಒಂದು ವ್ಯವಸ್ಥೆಯಾಗಿದೆ. ಜೊತೆಗೆ ವಿವಾಹ ಸಂಸ್ಥೆಯನ್ನು ಸ್ಥಾಪಿಸಿ ಹೆಣ್ಣನ್ನು ಒಂದು ಸರಕನ್ನಾಗಿಸಿ ಅಥವಾ ಅವಳನ್ನು ಅಧೀನಳಾಗಿಸುವುದು ಮೊದಲು ಈ ವಿವಾಹ ಸಂಸ್ಥೆ. ಪಿತೃಪ್ರಧಾನ ಕುಟುಂಬ ವ್ಯವಸ್ಥೆಯು ಹೆಣ್ಣನ್ನು ಯಾವುದೇ ರೀತಿಯಾದ ಪ್ರಶ್ನೆಮಾಡುತ್ತದೆ ಮತ್ತು ವಿವಾಹ ಎಂಬ ಪದ್ಧತಿಯಿಂದಾಗಿ ಒಂದು ರೀತಿಯಲ್ಲಿ ಅವಳನ್ನು ಮಾರಾಟದ ವಸ್ತುವಾಗಿ ಮಾಡಿದೆ. ಲಿಂಗತಾರತಮ್ಯ, ಲಿಂಗ ಅಸಮಾನತೆಯನ್ನು ಮೊದಲು ಸಾಮಾಜಿಕರಣಗೊಳಿಸುವುದು ಕುಟುಂಬ ವ್ಯವಸ್ಥೆಯೇ ಆಗಿದೆ.

ದುಡಿಯುವ ವರ್ಗ ಅಥವಾ ತಳಸಮುದಾಯಗಳ ಮಹಿಳೆ ಯಾವುದೇ ಕಠಿಣವಾದ ಕೆಲಸವನ್ನು ಪುರುಷನಿಗೆ ಸರಿಸಮಾನಾಗಿ ಬೆವರರಿಸಿ ದುಡಿದರೂ ಅವರಿಗೆ ಸಿಗುವ ವೇತನ ಕಡಿಮೆಯೇ. ಗ್ರಾಮೀಣ ಪ್ರದೇಶಗಳಲ್ಲಿ ಇಡೀ ಕುಟುಂಬವನ್ನು ನಿರ್ವಹಿಸುವ ಜವಾಬ್ದಾರಿ ಮಹಿಳೆಯರದ್ದೇ ಆಗಿರುತ್ತದೆ. ಇವರು ದುಡಿಯುವ ಸಂದರ್ಭದಲ್ಲಿ ಯಾವುದೇ ರೀತಿಯಾದಂತಹ ರಕ್ಷಣೆ ಎಂಬುದಿರುವುದಿಲ್ಲ. ಅಕ್ಷರ ವಂಚಿತರಾದ ಸ್ತ್ರೀ ಸಮುದಾಯವು ತನ್ನ ಶೂದ್ರ ಸ್ಥಿತಿಯನ್ನು ಅನುಭವಿಸಿದ್ದು ಒಂದು ಮುಖವಾದರೆ ಅದನ್ನು ದಾಟಿ ಏನನ್ನೊ ಮಾಡುವ ಕ್ರಿಯಾಶೀಲತೆಯನ್ನು ತನ್ನೊಳಗೆ ಉಳಿಸಿಕೊಂಡು ಬಂದಿದೆ ಎಂಬುದನ್ನು ಗಮನಿಸಬೇಕಾಗಿದೆ.

"ಸ್ವಾವಲಂಬಿ ಹೆಣ್ಣು ಸ್ವಸ್ಥ ಸಮಾಜದ ಕಣ್ಣು ಎಂದು ತಿಳಿದು ದುಡಿಮೆಯು ಅನಿವಾರ್ಯವಾದಾಗ ಮಹಿಳೆ ವಿವಿಧ ವೃತ್ತಿಗಳಲ್ಲಿ ಸಂಬಳ ಅಥವಾ ಮಂಜೂರಾತಿಗಾಗಿ ಕೆಲಸ ನಿರ್ವಹಿಸುತ್ತಿದ್ದಾಳೆ. ಗ್ರಾಮಗಳಿಗಿಂತ ನಗರಗಳಲ್ಲಿಯೇ ದುಡಿಯುವ ಮಹಿಳೆಯರ ಸಂಖ್ಯೆ ಹೆಚ್ಚಾಗಿರುತ್ತದೆ"[೩] ಇಲ್ಲಿ ಗ್ರಾಮೀಣ ಮಹಿಳೆಯರನ್ನು ನಿರ್ಲಕ್ಷ್ಯ ಮಾಡಿರುವುದನು ಇಲ್ಲಿ ಗಮನಿಸಬಹುದು. ಗ್ರಾಮೀಣರು ಎಂದೊಡನೆ ಒಂದು ರೀತಿ ಅಸಡ್ಡೆ, ನೀರಸವಾದಂತಹ

ನಿಲುವುಗಳನ್ನು ತಾಳುವುದನ್ನು ಕಾಣುತ್ತೇವೆ. ಲೇಖಕಿಯು ಕೇವಲ ನಗರ ಪ್ರದೇಶದ ಉದ್ಯೋಗಸ್ಥ (ಅಕ್ಷರ ಜ್ಞಾನವುಳ್ಳ) ಮಹಿಳೆಯರನ್ನು ಮಾತ್ರ ಗಮನದಲ್ಲಿಟ್ಟು ಹೇಳಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ.

ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆ ಯಾವುದೇ ತರಹದ ಸ್ವತಃ ನಿರ್ಧಾರವನ್ನು ತೆಗೆದುಕೊಳ್ಳುವ ಸ್ವಾತಂತ್ರ್ಯ ಮತ್ತು ಹಕ್ಕು ಅವಳಿಗಿಲ್ಲ ಒಂದೊಮ್ಮೆ ಯಾವುದಾದರೂ ನಿರ್ಧಾರವನ್ನು ತೆಗೆದುಕೊಂಡಿದ್ದಾಳೆ ಎಂದರೆ ಅದು ಕುಟುಂಬದ ಏಳಿಗೆಗಾಗಿಯೇ ಹೊರತು ತನಗಾಗಿ ಆಗಿರುವುದಿಲ್ಲ. ಪುರುಷ ಪ್ರಧಾನ ವ್ಯವಸ್ಥೆಯೊಳಗೆ ಅವಳದ್ದೇ ಆದ ನಿರ್ಧಾರಗಳನ್ನು ತೆಗೆದುಕೊಳ್ಳದಂತೆ ಮತ್ತು ಅವಳಿಗಾಗಿ ಯೋಚಿಸದಂತೆ ಹೊರಗಿಟ್ಟಿದ್ದು ಕೌಟುಂಬಿಕ ದಬ್ಬಾಳಿಕೆಯೇ ಸರಿ. ಪಿತೃಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆ ಕೌಟುಂಬಿಕ ಕಾರ್ಯಗಳಿಗೆ ಒಳಗಾಗುತ್ತ ನಾಲ್ಕು ಗೋಡೆಗಳ ನಡುವೆಯೆ ಬಂಧಿಯಾಗಿದ್ದಾಳೆ, ಹೀಗಾಗಿ ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತುವ ಶಕ್ತಿಯನ್ನು ಕಳೆದುಕೊಳ್ಳುತ್ತಾಳೆ ಎಂಬುದು ಉತ್ಪ್ರೇಕ್ಷೆ ಏನಲ್ಲ.

ಮಾರುಕಟ್ಟೆ ನಿತಿಯು ಕೇವಲ ಹೊರಗಿನ ಸಮಾಜದಲ್ಲಿ ಮಾತ್ರ ಉಳಿಯದೇ ಕುಟುಂಬದ ಒಳಗೂ ಅದರಲ್ಲೂ ವಿವಾಹ ಸಂಸ್ಥೆಯ ಮೇಲೆ ಇಂದಿನ ದಿನಮಾನಗಳಲ್ಲಿ ಕುಟುಂಬದೊಳಗೆ ಒಬ್ಬ ಸೋಸೆಯಾಗಿ ನೋಡುವಾಗ ಮೊದಲು ಸೇವಕಳಾಗಿ ನಂತರ ಅವಳು ಮಾಡುವಂತಹ ದುಡಿಮೆಯಿಂದ ಮನೆಯ ಆದಾಯ ಎಷ್ಟಾಗಬಹುದು ಎಂಬುದನ್ನು ಲೆಕ್ಕ ಮಾಡುವಂತಹ ಸ್ಥಿತಿಯನ್ನು ತಲುಪಿರುವುದು ಒಂದು ರೀತಿಯಾಗಿ ಖೇದದ ವಿಷಯವೇ ಸರಿ. ಮಹಿಳೆಗಿಂತ ಅವಳು ತರುವ ಆದಾಯಕ್ಕೆ ಬೆಲೆಯಿದೆಯೇ ಹೊರತು ಅವಳ ವ್ಯಕ್ತಿತ್ವಕ್ಕಲ್ಲ. "ಎರಡು ಹೃದಯಗಳನ್ನು ಬೆಸೆಯಬಹುದಾಗಿದ್ದ, ಎರಡು ಕುಟುಂಬಗಳನ್ನು ಬೆಸೆಯಬಹುದಾಗಿದ್ದ ಮದುವೆ ಎಂಬ ಮಧುರ ಬಾಂಧವ್ಯಕ್ಕೆ ನಾಂದಿ ಆಡಬಹುದಾದ ಘಟನೆ ಇಂದು ಕೊಡು-ಕೊಳ್ಳುವ ವ್ಯಾಪಾರವಾಗಿ ಮಾರ್ಪಾಡಾಗಿದೆ. ಹೆಣ್ಣಿನ ಗುಣ, ಸ್ವಭಾವ, ಸೌಂದರ್ಯ, ವಿದ್ಯಾಭ್ಯಾಸ ಇವೆಲ್ಲವು ಗೌಣವಾಗಿ ಆಕೆ ತರಬಹುದಾದ ಮೊತ್ತವಷ್ಟೆ ಮದುವೆಯ ಮಾರುಕಟ್ಟೆಯಲ್ಲಿ ಚಲಿಸುವ ನಾಣ್ಯವಾಗಿದೆ."[೪] ಒಟ್ಟಿನಲ್ಲಿ ಹೆಣ್ಣು ಒಂದು ಉತ್ಪನ್ನದ ಯಂತ್ರವಾಗಿದ್ದಾಳೆಯೇ ವಿನಃ ಹೃದಯ, ಮನಸ್ಸು ಇರುವ ವ್ಯಕ್ತಿ ಎಂದು ಯಾವಾಗಲೂ ಪರಿಗಣಿಸಲಿಲ್ಲ. ಮಹಿಳೆಯು ಹೆಚ್ಚು ದುಡಿದರೂ ಸಮಾನತೆ ನೆಮ್ಮದಿಯ ಜೀವನವೇನು ಅವಳದಾಗಿಲ್ಲ. ಎಲ್ಲ ರೀತಿಯ ಸಾಮಾಜಿಕ ಅನಿಷ್ಟಗಳಿಗೆ ಬಲಿಯಾಗುತ್ತಾ, ಪ್ರತಿಕ್ಷಣವೂ ಅಪಮಾನ ಕೀಳರಿಮೆಯಿಂದ ಕುಗ್ಗುತ್ತಿದ್ದಾಳೆ ಭಯದ ಬಲೆಯಲ್ಲಿ ಸಿಕ್ಕು ನಲುಗುತ್ತಿದ್ದಾಳೆ.

"ಸಮಾಜದಲ್ಲಿ ಬದಲಾಗುತ್ತಿರುವ ಮಹಿಳೆಯ ಸ್ಥಾನಮಾನ ಕುರಿತಾದ ಅಸಹನೆಯ ಸಂಕೇತ, ತಾವು ದುಡಿಯಬೇಕು ಹಾಗೂ ಹೆಣ್ಣು ಮಕ್ಕಳು ಮನೆ ವಾರ್ತೆ ಜೊತೆಗೆ ಮಕ್ಕಳನ್ನು ನೋಡಿಕೊಂಡು ಇರಬೇಕು ಎಂಬಂಥ ಸ್ವೀಕೃತ ಸಾಂಪ್ರದಾಯಿಕ ಮೌಲ್ಯಗಳನ್ನು ಅಂತರ್ಗತ ಮಾಡಿಕೊಂಡವರಿಗೆ ಈ ಪಲ್ಲಟವನ್ನು ಅರಗಿಸಿಕೊಳ್ಳುವುದು ಅಷ್ಟು ಸುಲಭದ ಮಾತಲ್ಲ"[೫] ಕೌಟುಂಬಿಕ ಜಗತ್ತಿನಲ್ಲಿ ಹೆಣ್ಣನ್ನು ವಿವಾಹ ಸಂಸ್ಥೆಯ ಮೂಲಕ ನಿರ್ಬಂಧಿಸಲಾಗಿದೆ. ಹಾಗೂ ಈ ವಿವಾಹ ಎಂಬುದು

ಮಹಿಳೆಗೆ ಹೊರಜಗತ್ತನ್ನು ಪ್ರವೇಶಿಸದಂತೆ ನೋಡಿಕೊಳ್ಳುತ್ತದೆ. ಆ ಮುಖೇನ ಅವಳನ್ನು ಶೋಷಣೆಗೆ ಒಳಗು ಮಾಡಲಾಗುತ್ತದೆ. ನಗರೀಕರಣ ವೇಗವಾಗಿ ಬೆಳೆಯುತ್ತಿರುವ ಹೊತ್ತಿನಲ್ಲಿ ಸಂಪ್ರದಾಯ ನಿಷ್ಠ ಸಮಾಜವು ಮಹಿಳೆಯ ಪ್ರಗತಿಯ ವಿರುದ್ಧದ ಸಾಂಸ್ಕೃತಿಕ ಸಮರಗಳಾಗಿ ಮಾರ್ಪಾಡಾಗಿರುತ್ತದೆ. ಎಂಬುದನ್ನು ಮೊದಲು ತಿಳಿದುಕೊಳ್ಳಬೇಕಾಗುತ್ತದೆ.

ಗ್ರಾಮೀಣ ಭಾಗದ ಮಹಿಳೆಯರ ಸ್ಥಿತಿಗತಿಗಳು ನಾಗರೀಕ (ನಗರಗಳ) ಮಹಿಳೆಯರಿಗಿಂತ ನಿಕೃಷ್ಟವಾದಂತಹ ಬದುಕು ಅವರದ್ದಾಗಿದೆ. ಮತ್ತು ಇವರು ಬಹಳ ಶ್ರಮಜೀವಿಗಳು ಎಂದು ಹೇಳಿದರೂ ಉತ್ಪ್ರೇಕ್ಷೆಯಾಗಲಾರದು. ತಮ್ಮ ಕುಟುಂಬ ನಿರ್ವಹಣೆಯ ರಥವನ್ನು ಮುನ್ನಡೆಸಲು ಹಲವಾರು ಸಮಸ್ಯೆಗಳು ಬಂದರೂ ಯಾವುದಕ್ಕೂ ಲೆಕ್ಕಿಸದೇ ಜೀವನ ಸಾಗಿಸುತ್ತರಾದರು, ಇವರ ದುಡಿಮೆಗೆ ಸರಿಯಾದ ಬೆಲೆ ಸಿಗದೇ ಇರುವುದು ವಿಶಾದನೀಯವಾಗಿದೆ. ಭೂ ಮಾಲೀಕರ ಜಮೀನುಗಳಲ್ಲಿ ಅಥವಾ ಅವರ ಮನೆಗಳಲ್ಲಿ ದುಡಿಯುವಂತಹ ಸಂದರ್ಭದಲ್ಲಿ ಏನೇ ಅನಾವುತಗಳಾದರೂ ಈ ಮಹಿಳೆಯರಿಗೆ ರಕ್ಷಣೆ ಎಂಬುದಿರುವುದಿಲ್ಲ. ಇವರಿಗೆ ಯಾವುದೇ ಕಾಯ್ದೆ, ಕಾನೂನುಗಳು ಮತ್ತು ಅಕ್ಷರ ಜ್ಞಾನ ಹಾಗೂ ಇವರಲ್ಲಿರುವ ಹಿಂಜರಿಕೆಯಿಂದಾಗಿಯೇ ಅತೀ ಹೆಚ್ಚು ಶೋಷಣೆಗೆ ಒಳಗಾಗುವ ಪರಿಸ್ಥಿತಿಯನ್ನು ನಾವು ಕಾಣುತ್ತೇವೆ. ಗ್ರಾಮೀಣ ಪ್ರದೇಶದ ಮಹಿಳೆಯರು ಮುಗ್ದತೆ ಹಾಗೂ ಮೌಢ್ಯತೆಗೆ ಬಲಿಯಾಗಿ ತಮ್ಮ ಅಸ್ತಿತ್ವವನ್ನೇ ಹುಡುಕಿಕೊಳ್ಳುವ ಸಂದರ್ಭ ಎದುರಾಗುತ್ತದೆ.

ಮಹಿಳೆಯರು ಎಲ್ಲಾ ಕೆಲಸಗಳನ್ನು ನಿಭಾಯಿಸಬಲ್ಲರು. ಇಂತಹದ್ದೇ ಕೆಲಸ ಮಾಡಬೇಕೆಂದೇನು ಇಲ್ಲ. ಭೂಮಿಯನ್ನು ಅಗೆದು ಆಹಾರ ಬೆಳೆಗಳನ್ನು ಬೆಳೆಯುವುದರಿಂದ ಹಿಡಿದು ಗಗನ ಸಖಿಯರಾಗಿಯೂ ಕಾರ್ಯ ನಿರ್ವಹಿಸುವರು. ಎಲ್ಲಾ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕಠಿಣ ಕೆಲಸಗಳನ್ನು ನಿಭಾಯಿಸುವವರು ಕೂಲಿಕಾರ ಅಥವಾ ದುಡಿಯುವ ವರ್ಗದ ಮಹಿಳೆಯರಾಗಿದ್ದಾರೆ. ಬೇರೊಬ್ಬರ ಹಿಡಿತದಿಂದ ಅಥವಾ ಜಮೀನಿನಲ್ಲಿ ಕೆಲಸ ಮಾಡುವವರಾಗಿದ್ದು, ಹೆಚ್ಚು ಶ್ರಮವಹಿಸಿ ದುಡಿದರೂ ಕಡಿಮೆ ವೇತನ, ತಾರತಮ್ಯ, ಲೈಂಗಿಕ ಕಿರುಕುಳಗಳನ್ನು ಇಲ್ಲಿ ಅನುಭವಿಸುತ್ತಾಳೆ. ಪುರುಷರಿಗಿಂತ ಹೆಚ್ಚು ಶ್ರಮವಹಿಸಿ ದುಡಿದರೂ ಹೆಣ್ಣಿನ ಶಕ್ತಿ ಬಲವು ಗಂಡಿಗಿಂತ ಕಡಿಮೆಯಾದದ್ದೆನ್ನುವ ವಾದವನ್ನು ಮುಂದಿಟ್ಟು ಅವಳ ಶ್ರಮಕ್ಕೆ ತಕ್ಕ ಪ್ರತಿಫಲ ನೀಡದೆ ವಂಚಿಸಲಾಗುತ್ತದೆ. ದುಡಿಯುವ ವರ್ಗದ ಮಹಿಳೆಯರಿಗೆ ಯಾವುದೇ ರೀತಿಯ ರಕ್ಷಣೆಯಾಗಲಿ, ಸಾಮಾಜಿಕ ಭದ್ರತೆಯಾಗಲಿ ಇರುವುದಿಲ್ಲ. ಕೆಲಸದ ವೇಳೆಯಲ್ಲಿ ಮಾನ–ಪ್ರಾಣಕ್ಕೆ ಹಾನಿಯಾದರೂ ಸಹ ಅವಳಿಗೆ ಅವಳೇ ರಕ್ಷಣೆ ಮಾಡಿಕೊಳ್ಳಬೇಕೆ ಹೊರತು ಬೇರೊಬ್ಬರ ಸಹಾಯ ಪಡೆಯುವಂತಿರುವುದಿಲ್ಲ.

ದುಡಿಯುವ ಮಹಿಳೆಯರನ್ನು ಎರಡು ರೀತಿಯಲ್ಲಿ ವಿಭಾಗಿಸಿ ನೋಡಬಹುದು. ಒಂದು ಗ್ರಾಮೀಣ ಪ್ರದೇಶದಲ್ಲಿ ದುಡಿಯುವ ಮಹಿಳೆ ಮತ್ತು ನಗರ ಪ್ರದೇಶಗಳಲ್ಲಿ ದುಡಿಯುವ

ಮಹಿಳೆ. ಗ್ರಾಮೀಣ ಪ್ರದೇಶದಲ್ಲಿನ ಮಹಿಳೆಯರು ತಮ್ಮ ಕುಟುಂಬ ನಿರ್ವಹಣೆಗಾಗಿ ಹಗಲಿರುಳೆನ್ನದೆ, ತಮ್ಮ ಆರೋಗ್ಯವನ್ನು ಲೆಕ್ಕಿಸದೆಯು ದುಡಿಯುತ್ತಾರೆ. ತನ್ನ ಮನೆ ಮಕ್ಕಳಿಗಾಗಿ ಅವಳು ಎಂತಹ ಕಷ್ಟದ ಸಂದರ್ಭವನ್ನು ಎದುರಿಸಲು ಹಿಂಜರಿಯಲಾರಳು. ಎಲ್ಲ ಅವಮಾನ, ನೋವುಗಳನ್ನು ತನ್ನೊಡಲೊಳಗೆ ಬಚ್ಚಿಟ್ಟುಕೊಂಡೆ ಇತರರಿಗೆ ಮಾದರಿಯಾಗಿ ದುಡಿದು ತನ್ನ ಕುಟುಂಬವನ್ನು ಸಲಹುವಳು. ಗ್ರಾಮೀಣ ಪ್ರದೇಶದ ದುಡಿಯುವ ಮಹಿಳೆಯರು ಅವರ ಗಂಡಂದಿರ ದುಡಿಮೆಯನ್ನು ಅವಲಂಬಿಸಿರುವುದಿಲ್ಲ. ಹೆಚ್ಚಿನದಾಗಿ ಕುಟುಂಬ ನಿರ್ವಹಣೆಯ ಜವಾಬ್ದಾರಿಯ ಹೊಣೆ ಇವರದ್ದೇ ಆಗಿರುತ್ತದೆ.

ಕುಡುಕ ಗಂಡನ ಹೊಡೆತಕ್ಕೆ ತತ್ತರಿಸಿ ಹೋಗಿದ್ದರೂ ಇವರೂ ಜವಾಬ್ದಾರಿಯಿಂದ ನುಣುಚಿಕೊಳ್ಳಲಾರರು ಎಂಬುದನ್ನು ಸಾವಿತ್ರಿ ಮುಜುಮದಾರ ಅವರು 'ಹೆಣ್ಣು ಹೆಜ್ಜೆ' ಕೃತಿಯ 'ಈ ಮಹಿಳೆಯರ ನೆತ್ತಿ ಮುಟ್ಟಬ್ಯಾಡ್ರಿ' ಎಂಬ ಲೇಖನದಲ್ಲಿ ಅಭಿವ್ಯಕ್ತಿಸಿದ್ದಾರೆ. "ತನ್ನ ಮತ್ತು ಮಕ್ಕಳ ಹೊಟ್ಟೆಪಾಡಿಗಾಗಿ ಅವಳ ಕಾಯಕ ಪ್ರಾರಂಭವಾಗುವುದು ರಾತ್ರಿ ಹನ್ನೆರಡು ಗಂಟೆಯ ಸುಮಾರಿಗೆ ಆ ಹೊತ್ತಿಗೆ ತಲೆಯ ಮೇಲೊಂದು ಸಿಂಬಿಯನ್ನು ಇಟ್ಟುಕೊಂಡು ಸಿದ್ಧಕ್ಕ ಮನೆಯಿಂದ, ಊರಿಂದ ಹೊರನಡೆಯಬೇಕು. ಅಲ್ಲಿ ಒಂದು ಟ್ರ್ಯಾಕ್ಟರ್ ನಿಂತಿರುತ್ತದೆ. ಹತ್ತಾರು ಜನ ಕಿರಿಯ ವಯಸ್ಸಿನ ಮಹಿಳೆಯರನ್ನು ಆ ಟ್ರ್ಯಾಕ್ಟರ್ ಹೊತ್ತು ಹಳ್ಳದ ದಡಕ್ಕೆ ಬಿಡುತ್ತದೆ. ಅಲ್ಲಿ ನಡೆಯುವುದು ಅಕ್ರಮ ಮರಳು ಸಾಗಾಣಿಕೆ ಕೆಲ ಗಂಡಸರು ಪುಟ್ಟಿಯಲ್ಲಿ ಹುಸುಕು ತುಂಬಿ ಇವರ ತಲೆಯ ಮೇಲೆ ಹೊರಿಸುತ್ತಾರೆ. ಈ ಮಹಿಳೆಯರು ಹಳ್ಳದ ದಡದಲ್ಲಿರುವ ಟ್ರ್ಯಾಕ್ಟರ್‌ಗೆ ಸುರುವುತ್ತಾರೆ. ಈ ಕೆಲಸ ಬೆಳಗಿನ ಜಾವ ನಾಲ್ಕು ಗಂಟೆಯವರೆಗೂ ನಿರಂತರವಾಗಿ ನಡೆಯುತ್ತದೆ. ಹಳ್ಳದಲ್ಲಿ ನಡೆಯುವಾಗ ಆಗಾಗ ಕಾಲು ಕುಸಿಯುತ್ತದೆ. ಹೆಜ್ಜೆ ತಪ್ಪಿ ಬೀಳುವುದು ಸಾಮಾನ್ಯ ಆದರೂ ಹೊಟ್ಟೆಪಾಡಿಗೆ ಈ ಕೆಲಸ ಮಾಡಲೇಬೇಕು. ಉಸುಕಿನ ಪುಟ್ಟಿಯನ್ನು ಸದಾ ಹೊರುವುದರಿಂದ ನೆತ್ತಿಯಲ್ಲಿ ದೊಡ್ಡ ಗಾಯವೇ ಆಗಿರುತ್ತದೆ. ಗಾಯಗೊಂಡ ನೆತ್ತಿ ಉರಿಯುತ್ತಲೇ ಇರುತ್ತದೆ. ಆದರೂ ಚುರುಚುರು ಉರಿಯುವ ನೆತ್ತಿಯ ಮೇಲೆ ಉಸುಕಿನ ಪುಟ್ಟಿಯನ್ನು ಹೇರಿಕೊಂಡು ಮುನ್ನಡೆಬೇಕು. ಸ್ವಲ್ಪ ಸಾವಧಾನ ಮಾಡಿದರೂ ಕೆಲಸ ಕಳೆದುಕೊಳ್ಳುವ ಸಂಭವವಿರುತ್ತದೆ."[೬] ಈ ಮಹಿಳೆಯರ ಸ್ಥಿತಿ ಧಾರುಣವಾದದ್ದು. ಒಂದೊತ್ತಿನ ಗಂಜಿಗಾಗಿ ತಮ್ಮ ಜೀವವನ್ನು ಲೆಕ್ಕಿಸದೇ ದುಡಿಯುತ್ತಾರೆ. ಅಲ್ಲದೆ ಅವರು ಸುಲಭ, ಕಷ್ಟವೆನ್ನದೆ ಮೂಕ ಪ್ರಾಣಿಗಳಂತೆ ಒಂದೂ ಚಕಾರವೆತ್ತದೆ ಗಂಡಸಿನ ಸರಿಸಮ ಬಲಳಾಗಿ ದುಡಿಯುತ್ತಾರೆ. ಆದರೂ ಅವರಿಗೆ ನೀಡುವ ಕೂಲಿ ಮಾತ್ರ ಅಲ್ಪ. ನಗರ ಪ್ರದೇಶದಲ್ಲಿ ರಾತ್ರಿ ಹೊತ್ತು ದುಡಿಯುವ ಮಹಿಳೆಯರಿಗೆ ರಕ್ಷಣೆಯಿಲ್ಲ. ಅವರಿಗೆ ಅವರೇ ರಕ್ಷಕರು, ಇವರನ್ನು ಭೋಗಕ್ಕಾಗಿ ಭಕ್ಷಿಸುವ ನರಹಂತಕರೇ ಹೆಚ್ಚು. ಮರಳು ಹೊರುವಾಗ ಅವರ ನೆತ್ತಿಯು ಗಾಯವಾಗಿ ರಕ್ತ ಸೋರುತ್ತಿದ್ದರೂ ಅವರಿಗೆ ರಕ್ಷಣೆ ನೀಡಲಾರದೆ ಒಂದು ಕ್ಷಣ ಕೂಡ ವಿರಾಮ ನೀಡಲಾರದಂತೆ ದುಡಿಸಿಕೊಳ್ಳುತ್ತಾರೆ. ಸಾವಿತ್ರಿ ಮುಜುಮದಾರರು ಒಂದು

ಪ್ರದೇಶದ ಗ್ರಾಮೀಣ ದುಡಿಯುವ ಮಹಿಳೆಯರ ಚಿತ್ರಣವನ್ನು ತೆರೆದಿಟ್ಟಿದ್ದಾರೆ. ಆದರೆ ಇನ್ನುಳಿದ ಗ್ರಾಮೀಣ ಮಹಿಳೆಯರ ಕತೆ ಬೇರೆಯಾದುದೇನಲ್ಲ.

ನಗರ ಪ್ರದೇಶದ ದುಡಿಯುವ ಹೆಣ್ಣುಗಳ ಬದುಕು ಮತ್ತೊಂದು ರೀತಿಯದು. ನಗರಗಳಲ್ಲಿ ಸಾರ್ವಜನಿಕರೊಂದಿಗೆ ಬೆರೆತು ಕೆಲಸ ಮಾಡುವವರಾಗಿರುತ್ತಾರೆ. ಗಾರೆ ಕೆಲಸದ ಮಹಿಳೆ, ಗೊಂಬೆ ಮಾರುವ ಮಹಿಳೆ, ತರಕಾರಿಗಳನ್ನು ಮಾರುವ ಮಹಿಳೆ ಇನ್ನೂ ಮುಂತಾದ ವಸ್ತುಗಳನ್ನು ಮಾರಾಟ ಮಾಡುವ ಮಹಿಳೆಯ ಚಿತ್ರಣವನ್ನು ನೀಲಾ ಕೆ., ಅವರ ಬರಹಗಳಲ್ಲಿ ಕಾಣಬಹುದಾಗಿದೆ. ಕೂಲಿ ಹೆಣ್ಣುಗಳು ಪಡುವ ಕಷ್ಟಗಳು ಮತ್ತು ಅವುಗಳನ್ನು ಎದುರಿಸಿ ಬದುಕುವ ಪರ್ಯಾಯ ಮಾರ್ಗಗಳನ್ನು ಇವರ ಬರಹಗಳಲ್ಲಿ ಸ್ಪಷ್ಟವಾಗುತ್ತದೆ. "ಅದೊಂದು ಸಂಜೆ ಹೊತ್ತು ಇನ್ನೇನು ವ್ಯಾಪಾರ ಮುಗಿಬೇಕು. ಕೊನೆಗಿತ್ತು ಹಿಡಿ ಸುಲಿಗಾಯಿ. ಒಬ್ಬ ಚಿಗುರು ಮೀಸೆಯ ಚಂಚಲಗಣ್ಣಿನ ಗಂಡಸು ಸ್ವಲ್ಪ ಹೊತ್ತಿನಿಂದ ಠಳಾಯಿಸುತ್ತಿದ್ದ. ಸರೂಬಾಯಿ ಸುಂದರ ಹೆಂಗಸು. ಅವಳಲ್ಲಿ ಇನ್ನೂ ಸುಲಿಗಾಯಿ ಇತ್ತು. ಆತ ಎರಡು ರೂಪಾಯಿ ಹಿಡಿದು ಸುಲಿಗಾಯಿ ಕೊಡು ಅಂದ. ಆಕಿ ಕೊಟ್ಟಳು. ಆತ ಹೊರಡಲಿಲ್ಲ ಅಲ್ಲೇ ನಿಂತ. 'ಮತ್ತೇನು ಬೇಕು ಎಂದಳು? ಯಾಕೆ ನಿಂತಿದ್ದಿ? ಕೇಳಿದಳು. ಆತ ಅಮಾಯಕನಂತೆ, ಏನಿಲ್ಲ. ನಾ ಹಳ್ಳಿ ಮನುಷ್ಯ ಗಂಜಿ ಕೆಲ್ಸಕ್ಕೆ ಬಂದಿನಿ. ರಾತ್ರಿ ಉಳಿಲಾಕ ಜಾಗಬೇಕಿತ್ತು. ಅವನ ಮನಸ್ಸಿನ ಮರ್ಮ ಅರಿತ ಸರೂಬಾಯಿ ಸ್ವಲ್ಪ ಸಮಯದಲ್ಲಿಯೇ ಎಲ್ಲ ಹೆಣ್ಣು ಮಕ್ಕಳಿಗೂ ಸುದ್ದಿ ರವಾನಿಸಿದಳು."[೬] ಇಲ್ಲಿ ಸುಲಿಗಾಯಿ ಮಾರುವ ಸರೂಬಾಯಿಗೆ ಎದುರಾಗುವ ಸಮಸ್ಯೆಯನ್ನು ಅವಳು ಬೇಗ ಅರಿತು ಇನ್ನಿತರ ಕೂಲಿ ಹೆಣ್ಣುಗಳಿಗೆ ಆ ವಾರ್ತೆಯನ್ನು ರವಾನಿಸಿ ಬೇಗ ಎಚ್ಚೆತ್ತುಕೊಳ್ಳುತ್ತಾರೆ. ಸರೂಬಾಯಿಯಂತೆ ಇನ್ನಿತರ ಮಹಿಳೆಯರೂ ಎಷ್ಟೋ ಸಂದರ್ಭದಲ್ಲಿ ಲೈಂಗಿಕ ಕಿರುಕುಳವನ್ನು ಎದುರಿಸಿ ದಿಟ್ಟತನದಿಂದ ಬದುಕು ಕಟ್ಟಿಕೊಳ್ಳುವರು. ಸರೂಬಾಯಿ ಗ್ರಾಹಕನ ಮನೋ ವ್ಯಾಪಾರವನ್ನು ಬೇಗ ಅರಿತು ಅವನಿಗೆ ಎಲ್ಲರೊಂದಿಗೆ ಸೇರಿ ತಕ್ಕಪಾಠವನ್ನು ಕಲಿಸಿದ್ದಲ್ಲದೆ, ಅವನನ್ನು ಪೋಲಿಸರಿಗೆ ಒಪ್ಪಿಸಿ, ಅವನಿಗೆ ಶಿಕ್ಷೆ ಕೊಡಿ ಎಂದು ತಾಕೀತು ಮಾಡುತ್ತಾಳೆ. ಹೆಣ್ಣು ಎಷ್ಟು ಸೂಕ್ಷ್ಮತೆಗಳನ್ನರಿತು ಬದುಕು ಸಾಗಿಸಿದರೂ ಕೂಡ ಅವಳಿಗೆ ಲೈಂಗಿಕ ಕಿರುಕುಳದಿಂದ ಮುಕ್ತಿಯೆಂಬುದು ಮರೀಚಿಕೆಯಾಗಿಯೇ ಉಳಿದುಕೊಂಡಿದೆ.

ದುಡಿಯುವ ವರ್ಗದ ಮಹಿಳೆಯರು ಕಷ್ಟ ಜೀವಿಗಳು ಜೊತೆಗೆ ಅವರು ಯಾವಾಗಲೂ ನಗುಮೊಗದಿಂದ ಹಸನ್ಮುಖಿಯಾಗಿ ಅವರವರ ಕೆಲಸಗಳನ್ನು ಹೇಗೆ ನಿರ್ವಹಿಸುತ್ತಾರೆ ಎಂಬುದನ್ನು ನೀಲಾ ಕೆ., ಅವರು ಡಾರ್ಜಿಲಿಂಗ್ ಮಹಿಳೆಯರ ಜೀವನ ಚಿತ್ರಣವನ್ನು ನೀಡುತ್ತಾರೆ. "ಸರಿ ಸುಮಾರು ೧೦೦ ಕೇಜಿಯಷ್ಟಾಗುವ ಲಗೇಜ್ ಅನ್ನು ಬೆನ್ನ ಮೇಲೆ ಹೊತ್ತು, ಎತ್ತರದ ಮೇಲ್ಮುಖದ ರಸ್ತೆ ಹತ್ತುತ್ತಾ ನಡೆಯುವಾಗ, ಆತಂಕ ನಮ್ಮ ಮುಖದಲ್ಲಿದ್ದರೆ, ಮುಟ್ಟ ಮಂದಹಾಸ ಅವರ ಮುಖದಲ್ಲಿತ್ತು. ಗಂಡಸಿನಷ್ಟೇ ಕೆಲವು ಬಾರಿ ಇನ್ನೂ ಹೆಚ್ಚು ಭಾರ ಹೊತ್ತು ನಡೆವ ಸೀತೆ

ಪ್ರಮೀಳೆಯರಂಥ ಹೆಂಗಸರು ನೂರಾರು ಜನ... ಹೆಂಗಸರು ಅಬಲೆಯರು, ಭಾರಹೊರಲಾರರು ಎಂದೆಲ್ಲಾ ತರ್ಕ ಮಾಡುವ ವಿತಂಡವಾದಿಗಳು ಒಮ್ಮೆ ಸೀತಾಳಂಥವರನ್ನು ನೋಡಬೇಕು. ಭಾರ ಇಳಿಸಿದ ಮೇಲಿನ ಆಯಾಸವೇನೊ ಇತ್ತು. ಆದರೆ ಅರಳಿದ ತುಟಿಗಳ ನಡುವೆ ಸೂಜಿ ಮಲ್ಲಿಗೆಯಂಥ ನಗು ಇದ್ದೇ ಇತ್ತು."[೮] ಮಹಿಳೆಯರು ಸುಲಭದ ಕೆಲಸ ಮಾಡಲು ಮಾತ್ರ ಅರ್ಹರು ಎನ್ನುವವರಿಗೆ ಇಲ್ಲಿನ ಉದಾಹರಣೆಯು ಸುಳ್ಳಾಗಿಸುತ್ತದೆ. ಮಹಿಳೆಯರು ಪುರುಷನಿಗಿಂತ ಹೆಚ್ಚು ಭಾರವನ್ನು ಹೊರಬಲ್ಲಳು. ಜೊತೆಗೆ ಪುರುಷನಿಗಿಂತ ತುಸು ಹೆಚ್ಚೆನಿಸುವಷ್ಟು ಕೂಲಿ ಕೆಲಸದಲ್ಲಿ ತಲ್ಲೀನಳಾಗುತ್ತಾಳೆ. ಡಾರ್ಜಿಲಿಂಗ್ ಮಹಿಳೆಯರು ಕೂಲಿಕೆಲಸವಾದರೂ ಯಾವ ರೀತಿಯಿಂದಲೂ ಕಿಂಚಿತ್ತು ಅಳುಕಿಲ್ಲದೆಯೇ ತನ್ನ ಕೆಲಸವನ್ನು ನಗುಮುಖದಿಂದ ನಿರ್ವಹಿಸುವಳು. ಸಾಮಾನ್ಯವಾಗಿ ಮಹಿಳೆಯರ ದುಡಿಮೆಯನ್ನು ಕುರಿತು ಒಂದು ಸೀಮಿತ ನೆಲೆಯಲ್ಲಿಯೇ ಚರ್ಚಿಸಲಾಗಿದೆ. ಆದರೆ ಇವರ ವಿಚಾರ ಸಾಹಿತ್ಯದಲ್ಲಿ ಮುರಿದು ಕಟ್ಟಲಾಗಿದೆ. ಡಾರ್ಜಿಲಿಂಗ್‌ನ ಕೊರೆಯುವ ಚಳಿಯನ್ನೂ ಲೆಕ್ಕಿಸದೇ ಅಲ್ಲಿನ ಮಹಿಳೆಯರು ತಮ್ಮ ಕೆಲಸಗಳಲ್ಲಿ ತಲ್ಲೀನರಾಗಿರುತ್ತಾರೆ. ಅಲ್ಲದೆಯೇ ಆ ಮಹಿಳೆಯರು ಚಹಾ ಮಾರುವ, ಗೊಂಬೆ ಮಾರುವ ಮಹಿಳೆಯರ ಮುಖದಲ್ಲಿದ್ದಂತಹ ನಗುಮುಖದ ಮಂದಸ್ಮಿತವನ್ನು ಗುರುತಿಸುತ್ತಾರೆ. ಸ್ವಾಭಿಮಾನದಿಂದ ದುಡಿದು ಬದುಕು ಸಾಗಿಸುವ ಕೂಲಿ ಮಹಿಳೆಯರ ಸಂಕಷ್ಟಗಳನ್ನು ನೀಲಾ ಕೆ., ಅವರು ಈ ರೀತಿಯಾಗಿ ಹೇಳುತ್ತಾರೆ.

"ಮರಿಯಮ್ಮಳಿಗೀಗ ೪೦ ವಯಸ್ಸು ಮದುವೆಯಾದ ಮೂರು ವರ್ಷಕ್ಕೆ ಮಕ್ಕಳಾಗಿಲ್ಲವೆಂದು ಹೊರಹಾಕಿದರು. ಒಂದೆರಡು ವರ್ಷದ ನಂತರ ತವರಿನವರೂ ಕೈ ಬಿಟ್ಟರು. ಎಲ್ಲಿಗೆ ಹೋಗಬೇಕು ಮರಿಯಮ್ಮ? ಇದೇ ಹಳ್ಳಿಯಲ್ಲಿ ಕೂಲಿ ಮಾಡುತ್ತ ಜಿದ್ದಿನಿಂದ ಬದುಕತೊಡಗಿದಳು. ದಿನವಿಡಿ ದುಡಿದರೂ ರೂ ೨೦ ಕೂಲಿ. ಕಳೆದ ವರ್ಷ NREGAದಲ್ಲಿ ೬೦ ದಿನಗಳು ಕೆಲಸ ಮಾಡಿದ್ದಾಳೆ. ೮ ತಿಂಗಳಿಂದ ಗುಡಿಸಲ ಬಾಡಿಗೆ ಬಾಕಿಯಿತ್ತಂತೆ. NREGAಕೂಲಿಯಿಂದ ಬಾಡಿಗೆ ಕಟ್ಟಿ ನಿಟ್ಟುಸಿರು ಬಿಟ್ಟಳಂತೆ ಅಕ್ಕಾರೆ ಈ ಕೆಲಸ ೩೦೦ ದಿನಗಳು ಸಿಗಂಗ ಮಾಡ್ರೀ... ಮರಿಯಮ್ಮಳ ದನಿಯಲ್ಲಿ ಬದುಕು ಜೈಸಲು ಆಸರೆ ಬೇಕಿತ್ತು."[೯] ಹೆಣ್ಣಾದ ಕಾರಣಕ್ಕೆ ಎಲ್ಲವನ್ನೂ ಸಹಿಸಿ ಬದುಕುವ ಪಾಠವನ್ನು ಹುಟ್ಟಿದಾಗಿನಿಂದ ಆಕೆಗೆ ಹೇಳುತ್ತಲೇ ಬರಲಾಗುತ್ತದೆ. ಹೆಣ್ಣಿಗೆ ಜೀವನ ಎಂಬುದು ಸಂಪೂರ್ಣವಾಗುವುದು ಅವಳು ಮದುವೆ, ಮಕ್ಕಳು, ಸಂಸಾರದಲ್ಲಿ ಎಂಬ ಭ್ರಮೆಯನ್ನು ತುಂಬಿಸಿಯೇ ಅವಳನ್ನ ಬೆಳೆಸುತ್ತಾರೆ. ತಾಯ್ತನದ ಅನುಭವವಾಗಲು ಹೆಣ್ಣೊಬ್ಬಳೇ ಕಾರಣಳಾಗಲಾರಳು ಇದರಲ್ಲಿ ಗಂಡಿನದೂ ಪಾಲಿರುತ್ತದೆ ಎಂಬುದನ್ನು ಈ ಸಮಾಜವು ಮರೆಮಾಚುತ್ತಲೇ ಬಂದಿದೆ. ಹೀಗಿರುವ ಸಂದರ್ಭದಲ್ಲಿ ಮಕ್ಕಳಿಲ್ಲ ಎಂಬ ನೋವನ್ನು ನುಂಗುವುದು ಮಾತ್ರ ಹೆಣ್ಣೇ ಆಗಿರುತ್ತಾಳೆ. ಮಕ್ಕಳಿಲ್ಲ ಎಂಬ ಕಾರಣಕ್ಕೆ ಮರಿಯಮ್ಮಳನ್ನ ಗಂಡನ ಮನೆಯವರು ಹೊರಹಾಕುತ್ತಾರೆ. ಇಂತಹ ಸಂದರ್ಭದಲ್ಲಿ ತವರು ಮನೆಯವರ ಆಸರೆ ಇರಬೇಕಾದಾಗಲೂ ತವರಿನವರೂ ಕೈಬಿಟ್ಟಾಗ ಹೆದರದೇ ದುಡಿದು ಜೀವನ ಸಾಗಿಸಲು ಮುಂದಾಗುತ್ತಾಳೆ.

ಕೇಂದ್ರ ಸರ್ಕಾರವು ಜಾರಿಗೆ ಮಾಡಿರುವ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು ಇಂತಹ ದುಡಿಯುವವರಿಗೆ ಆಸರೆಯಾಗಿದೆ. ಆದರೆ ಅಲ್ಲಿ ಸಿಗುವ ಕೆಲಸವು ೬೦ ದಿನಗಳು ಮಾತ್ರ ಆಗಿರುವುದರಿಂದ ಇನ್ನುಳಿದ ದಿನಗಳಲ್ಲಿ ದುಡಿಮೆಗಾಗಿ ಪರದಾಡುವ ಸ್ಥಿತಿ ಎದುರಾಗುತ್ತದೆ. ಈ ದುಡಿಮೆಯನ್ನೇ ನಂಬಿ ಬದುಕುತ್ತಿರುವ ಕುಟುಂಬಗಳು ಅತಂತ್ರ ಸ್ಥಿತಿಯನ್ನು ಎದುರಸಬೇಕಾಗುತ್ತದೆ. ಹೀಗಾಗಿ ಮರಿಯಮ್ಮ ೩೦೦ ದಿನದ ಕೆಲಸಕ್ಕಾಗಿನ ಕೋರಿಕೆ ಸರಿಯಾದದ್ದೇ ಆಗಿದೆ.

ಪ್ರಾಮಾಣಿಕವಾಗಿ ದುಡಿದು ತುತ್ತಿನ ಚೀಲ ತುಂಬಿಸಿಕೊಳ್ಳುತ್ತಿದ್ದರೂ ಕೂಡ ಆ ತುತ್ತನ್ನೇ ಕಸಿದುಕೊಳ್ಳುವ ಕೆಲಸವನ್ನು ಗ್ರಾಮ ಪಂಚಾಯ್ತಿಯವರು ಮಾಡುತ್ತಿರುವುದನ್ನು ನೋಡಬಹುದು. ಕೇಂದ್ರ ಸರ್ಕಾರದ ಉದ್ಯೋಗ ಖಾತ್ರಿ ಯೋಜನೆಯ ಫಲಾನುಭವಿಗಳದ್ದು ಹೀನ ಸ್ಥಿತಿ, ಕೃಷಿ ಕೂಲಿಕಾರರಿಗೆ ಕೆಲಸವಿಲ್ಲದ ಸಮಯದಲ್ಲಿ ಎರಡು ಹೊತ್ತಿನ ಊಟಕ್ಕೂ ಪರದಾಡಬಾರದೆನ್ನುವುದು ಈ ಯೋಜನೆಯ ಮೂಲ ಉದ್ದೇಶ. “ಆದರೆ ಅದರ ಅನುಷ್ಠಾನದಲ್ಲಿ ಆಗುತ್ತಿರುವ ಅನ್ಯಾಯ ಊಹೆಗೂ ನಿಲುಕ್ಕದ್ದು ಹರಪ್ಪನಹಳ್ಳಿಯ ಕರಿಯಮ್ಮ ಮತ್ತು ಸಕೀರಮ್ಮ ಅವರು ಇದರಿಂದ ಸಾಕಷ್ಟು ನೊಂದವರು. ಅನ್ಯಾಯಕ್ಕೆ ಒಳಗಾದವರು. ಐದು ವರ್ಷವಾಗಿದೆ ಈ ಯೋಜನೆಗೊಂಡು. ಆದರೆ ಇದುವರೆಗೂ ನೂರು ರೂ ಪಡೆಯಲು ಸಾಧ್ಯವಾಗಿಲ್ಲ ಎನ್ನುತ್ತಾರೆ ಸಕೀರಮ್ಮ. ಹಣವೆನೋ ಬಿಡುಗಡೆ ಆಗುತ್ತಿದೆ ಆದರೆ ಪಂಚಾಯಿತಿಯವರು ಅನ್ಯಾಯ ಮಾಡಿ ತಾವೇ ತಿನ್ನುತ್ತಿದ್ದಾರೆ ಎನ್ನುತ್ತಾರೆ ಕರಿಯಮ್ಮ. ಇದು ಒಂದು ಪಂಚಾಯಿತಿಯ ಕಥೆಯಲ್ಲ. ಅದರಲ್ಲಿಯೂ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಇದು ಸಾಮಾನ್ಯ ಎನ್ನುವಷ್ಟು ಅಧಿಕ ಪ್ರಮಾಣದಲ್ಲಿ ನಡೆಯುತ್ತಿರುವ ಸಂಗತಿ. ಹಾಗೆಂದಾಗ್ಯೂ ಇಲ್ಲಿನ ಮಹಿಳೆಯರು ಕೈಕಟ್ಟಿ ಸುಮ್ಮನೆ ಕುಳಿತಿಲ್ಲ. ಅವರು ಸಂಘಟಿತರಾಗಿ ಹೋರಾಡುತ್ತಿದ್ದಾರೆ. ಉಪವಾಸ, ಧರಣಿ ಎಲ್ಲವೂ ನಡೆದು ಈಗ ಕೆಲವು ಪಂಚಾಯಿತಿಯ ಕಾರ್ಯದರ್ಶಿಗಳನ್ನು ಅಮಾನತುಗೊಳಿಸಿಯೂ ಆಗಿದೆ.”[೧೦] ಬಡಕುಟುಂಬಗಳಲ್ಲಿ ತಾವೇ ದುಡಿದು ಸಂಸಾರ ಸಲಹುವ ಪರಿಸ್ಥಿತಿ ಈ ಮಹಿಳೆಯರದ್ದು. ತಮ್ಮ ಕುಟುಂಬ ನಿರ್ವಹಣೆಗಾಗಿ ತಮ್ಮಗಳ ಹೊಟ್ಟೆ ಬಟ್ಟೆ ಕಟ್ಟಿ ಶ್ರಮವಹಿಸಿ ದುಡಿಯುತ್ತಾರೆ. ಆದರೆ ಅವರುಗಳ ಶ್ರಮಕ್ಕೆ ಸರಿಯಾದ ಪ್ರತಿಫಲ ದೊರಕದೇ ಇರುವುದು ದುರಂತ. ಇವರ ದುಡಿಮೆಗೆ ಕೊಡಬೇಕಾದ ಕೂಲಿ ಹಣದಲ್ಲಿಯೂ ಈ ಅಧಿಕಾರಿ ವರ್ಗವು ಭ್ರಷ್ಟಾಚಾರವನ್ನು ಮಾಡುತ್ತಿದೆ. ಎಷ್ಟೋ ರೈತ ಕುಟುಂಬಗಳು ಮಳೆಯನ್ನೇ ಆಶ್ರಯಿಸಿ ಭೂಮಿಯನ್ನು ಉತ್ತುಬಿತ್ತುತ್ತಾರೆ. ಆದರೆ ಮಳೆ ಇಲ್ಲದಾಗ ಕೂಲಿ ಮಾಡಿಯೇ ಜೀವನ ಸಾಗಿಸುವುದನ್ನು ಕಾಣುತ್ತೇವೆ. ಹೀಗಿರುವಾಗ ಹಲವಾರು ಕುಟುಂಬಗಳು NREGAಯ ಯೋಜನೆಯ ಕೆಲಸವನ್ನೇ ಆಶ್ರಯಿಸಿದೆ. ತಮ್ಮ ದುಡಿಮೆಗೆ ತಕ್ಕ ವೇತನ ಸಿಗುವುದೆಂಬ ನಂಬಿಕೆಯಿಂದಲೇ ದುಡಿಯುತ್ತಾರೆ. ಆದರೆ ಇಲ್ಲಿನ ಮಧ್ಯವರ್ತಿಗಳು, ಪಂಚಾಯಿತಿಯ ಅಧಿಕಾರಿಗಳು ಮಾತ್ರ ಹಣವನ್ನು ನುಂಗಿ ನೀರು ಕುಡಿದು ಇವರಿಗೆ ಮಣ್ಣು ಮುಕ್ಕಿಸುವ ಕೆಲಸವನ್ನೇ ಮಾಡುತ್ತಾರೆ.

ಈ ಎಲ್ಲಾ ಅನ್ಯಾಯವನ್ನ ಅರಿತ ಮಹಿಳೆಯರು ಒಗ್ಗೂಡಿ ಅನ್ಯಾಯದ ವಿರುದ್ಧ ಹೋರಾಡಿ ಯಶಸ್ಸನ್ನು ಕಂಡಿದ್ದಾರೆ ಎಂಬುದನ್ನ ಇವರು ಹೇಳಿದ್ದಾರೆ.

ಶಿಕ್ಷಣ ಪಡೆದು ಉದ್ಯೋಗ ಗಳಿಸಿಕೊಂಡು ಸಂಘಟಿತ ವಲಯದಲ್ಲಿ ದುಡಿಯುವ ವರ್ಗದ ಮಹಿಳೆಯರು ಒಂದೆಡೆಯಾದರೆ, ಅಸಂಘಟಿತ ವಲಯದಲ್ಲಿ ದುಡಿಯುವ ಕೂಲಿ ಕಾರ್ಮಿಕ ಮಹಿಳೆಯರು ಮತ್ತೊಂದೆಡೆ ದುಡಿಯುವುದನ್ನು ಕಾಣಬಹುದು. "ಈ ಹಣದುಬ್ಬರದ ಸಂದರ್ಭದಲ್ಲಿ ದಿನದ ೧೦-೧೨ ಗಂಟೆಗಳ ದುಡಿಮೆಗೆ ಮಹಿಳಾ ಕಾರ್ಮಿಕರಿಗೆ ಸಿಗುವ ವೇತನ ೨೦-೨೫ ರೂಪಾಯಿ, ಮಂಡ್ಯದ ಸಮೀಪದ ಒಂದು ಹಳ್ಳಿ ಕಲ್ಯಾಣಕೊಪ್ಪಲು, ಈ ಊರಿನ ವಿಶೇಷ ಏನು ಅಂದರೆ ಇಲ್ಲಿಂದ ಶೇ ೮೦%ರಷ್ಟು ಹುಡುಗಿಯರು ಬೆಂಗಳೂರಿನ ಮನೆಗೆಲಸದ ಹುಡುಗಿಯರಾಗಿ ಸೇರಿಕೊಂಡಿದ್ದಾರೆ. ಸಂಬಳ ಎಷ್ಟು? ವರ್ಷಕ್ಕೆ ೨-೩ ಬಹಳ ಅಂದರೆ ೫ ಸಾವಿರ ರೂ ಜಾಗತೀಕರಣದ ಫಲವಾಗಿ ಈಗ ಮಧ್ಯಮ ವರ್ಗದ ಮನೆಗಳಲ್ಲೂ ಪ್ರತಿಷ್ಠಾಪಿತವಾಗಿರುವ ಯಾವ ಯಂತ್ರಗಳನ್ನೂ ಆ ಹುಡುಗಿಯರಿಗೆ ಹುಷಾರಿಲ್ಲದಿದ್ದಾಗಲೂ ಬಳಸುವುದಕ್ಕೆ ಇವರು ಇಷ್ಟಪಡುವುದಿಲ್ಲ. ಅವರ ವಯಸ್ಸಾದರೂ ಎಷ್ಟು? ೬-೧೩ವರ್ಷದ ಹುಡುಗಿಯರು ಅವರು."[೧೧] ಬೆರಳೆಣಿಕೆಯಷ್ಟು ಅಂದರೆ ಶೇಕಡ ೧೦%ರಷ್ಟು ಕೂಲಿ ಕಾರ್ಮಿಕ ಮಹಿಳೆಯರು ಸಂಘಟಿತ ವಲಯದಲ್ಲಿ ದುಡಿದರೆ ಇನ್ನುಳಿದ ೯೦%ರಷ್ಟು ಮಹಿಳಾ ಕಾರ್ಮಿಕರು ಅಸಂಘಟಿತ ವಲಯದಲ್ಲಿ ದುಡಿಯುತ್ತಾರೆ. ಜಾಗತೀಕರಣದ ಸಂದರ್ಭದಲ್ಲಿಯೂ 'ದುಡಿಮೆಗೆ ತಕ್ಕ ವೇತನ ಪ್ರತಿಷ್ಠೆಗೆ ತಕ್ಕ ಮನ್ನಣೆ' ಹೆಚ್ಚು ಹೆಚ್ಚು ಉದ್ಯೋಗಾವಕಾಶಗಳು ಎಂಬ ಜಾಗತೀಕರಣದ ಸೂತ್ರವಾಗಿದ್ರೂ ಸಹ ಇವು ಯಾವುದನ್ನು ತಳಮೂಲದ ಮಹಿಳೆಯರಿಗೆ ತಲುಪದೆ ಇರುವುದು ಕಾಣಬಹುದು. ದಿನಕಳೆದಂತೆ ಅವರ ಶೋಷಣೆಗಳು ಹೆಚ್ಚಾಗಿಯೇ ನಡೆಯುತ್ತಿದೆ. ಬಾಲಕಾರ್ಮಿಕ ಪದ್ಧತಿ ನಿವಾರಣೆಯಾಗಬೇಕೆಂದು ಸರ್ಕಾರಗಳು ಹಲವಾರು ಕ್ರಮಗಳನ್ನು ಕೈಗೊಂಡಿವೆ. ಆದರೆ ಯಾವ ಪ್ರಯೋಜನವು ಆಗುತ್ತಿಲ್ಲ. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಮೊದಲ ಪ್ರಾಶಸ್ತ್ಯ ನೀಡಿದರೂ ಅವು ಯಾವುವೂ ಕೆಳವರ್ಗದ ಬಾಲೆಯರ ವರೆಗೆ ತಲುಪುತ್ತಿಲ್ಲ. ಮನೆಗೆಲಸಕ್ಕೆಂದು ದುಡಿಯಲು ಹೋದ ಹುಡುಗಿಯರು ಬಾಲೆಯರಾಗಿದ್ದರೂ ಅವರನ್ನ ಯಂತ್ರದಂತೆ ದುಡಿಸಿಕೊಳ್ಳುತ್ತಿರುವುದು ಶೋಚನೀಯ ಸಂಗತಿ. ವಿದ್ಯಾವಂತ ಕುಟುಂಬಗಳು ಎನಿಸಿಕೊಂಡಿರುವ ಮಧ್ಯಮವರ್ಗದವರು ಮನೆಗೆಲಸದವರಿದ್ದಾರೆ ಎಂಬುದನ್ನು ಒಂದು ಪ್ರತಿಷ್ಠೆಯಾಗಿ ಮಾಡಿಕೊಂಡಿದ್ದಾರೆ.

ದುಡಿಯುವ ಮಹಿಳೆಯರ ಮೇಲೆ ಹಿಂದಿಗಿಂತಲೂ ಇಂದು ದೌರ್ಜನ್ಯಗಳು ಹೆಚ್ಚಾಗುತ್ತಿವೆ. ಅದು ಮನೆಯಾಗಿರಬಹುದು. ಅಥವಾ ಅವಳು ದುಡಿಯುವಂತಹ ಸ್ಥಳಗಳಾಗಿರಬಹುದು ಆಕೆಗೆ ಸುರಕ್ಷಿತವಾದಂತಹ ಸ್ಥಳವಾಗಿ ಉಳಿದಿಲ್ಲ. ಇದನ್ನ ಪರಿಶೀಲಿಸಿ ಸರಿಯಾದ ಭದ್ರತೆಯನ್ನು ಒದಗಿಸಬೇಕಾಗಿದ್ದು ಸರ್ಕಾರದ ಕರ್ತವ್ಯವಾಗಿದ್ದರೂ ಸಹ ರಾಜಕೀಯವಾಗಿ ನೋಡುತ್ತಿರುವುದು ಅತಂತ್ರ ಸ್ಥಿತಿಯನ್ನು ಸೃಷ್ಟಿಸುತ್ತಿರುವುದು ತಿಳಿಯುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಮಾರ್ಕ್ಸಿಸ್ಟ್

ಚಿಂತಕಿಯಾದ ಎನ್.ಗಾಯಿತ್ರಿ ಅವರು ಹೀಗೆ ವಿಶ್ಲೇಷಿಸಿದ್ದಾರೆ. “ಇತ್ತೀಚಿನ ಶಾಲಾ ಕಾಲೇಜುಗಳಲ್ಲಿ ಶಿಕ್ಷಕರು ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ಕೊಡುವುದು ವರದಿಯಾಗಿದೆ. ಆಸ್ಪತ್ರೆಗಳಲ್ಲಿ ಕಛೇರಿಗಳಲ್ಲಿ ಕಾರ್ಖಾನೆಗಳಲ್ಲಿ ಲೈಂಗಿಕ ಕಿರುಕುಳದ ಪ್ರಕರಣಗಳು ಹಿಂದೆಂದಿಗಿಂತಲೂ ಹೆಚ್ಚಾಗಿಯೇ ವರದಿಯಾಗುತ್ತಿವೆ. ೧೯೯೭ರ ಸುಪ್ರಿಂಕೋರ್ಟ್ ಅಧಿಸೂಚನೆಯಂತೆ ದುಡಿಯುವ ಕ್ಷೇತ್ರಗಳಲ್ಲಿ ಲೈಂಗಿಕ ಕಿರುಕುಳದ ದೂರು ಸಮಿತಿಯು ರಚಿತವಾಗಬೇಕಾದ್ದು ಕಾನೂನು ಬದ್ಧವಾಗಿದ್ದರೂ ಎಷ್ಟೋ ಕಡೆಗಳಲ್ಲಿ ಈ ಸಮಿತಿ ರಚಿತವಾಗಿಲ್ಲ, ಆಗಿದ್ದರೂ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಇದರ ಮೇಲ್ವಿಚಾರಣೆ ನಡೆಸುವುದು ಮತ್ತು ನಿಯಂತ್ರಿಸುವುದು ಸರ್ಕಾರದ ಹಾಗೂ ಮಹಿಳಾ ಆಯೋಗದ ಬಹುಮುಖ್ಯ ಕೆಲಸವಾಗಿದೆ.”[೨] ಮಹಿಳೆಯರ ಸುರಕ್ಷತೆಯ ಬಗೆಗೆ ನಿರ್ಲಕ್ಷ್ಯ ವಹಿಸಿರುವ ಸರ್ಕಾರದ ಬೇಜವಾಬ್ದಾರಿಯ ಕುರಿತು ಹೇಳುತ್ತಿದ್ದುದ್ದನ್ನು ಕಾಣಬಹುದು. ಪುರುಷ ಪಾರಮ್ಯ ಹೊಂದಿರುವ ಈ ಸಮಾಜದಲ್ಲಿ ದುಡಿಯುವ ಮಹಿಳೆಯರಿಗೆ ತಮಗಿರುವ ಸುರಕ್ಷತೆಯ ಬಗ್ಗೆ ಯೋಚಿಸುವಂತಹ ಸ್ಥಿತಿ ಒದಗಿರುವುದನ್ನು ಕಾಣಬಹುದು. ದಿನ ನಿತ್ಯ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯಗಳು, ಆ್ಯಸಿಡ್ ದಾಳಿಗಳು, ಅತ್ಯಾಚಾರ, ಕೊಲೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇವೆ. ಇವೆಲ್ಲವನ್ನೂ ಗಮನಿಸುತ್ತಿರುವ ಸರ್ಕಾರಗಳು ಮಹಿಳಾ ಆಯೋಗದ ರಚನೆ ಮಾಡಲು ಹಿಂದೇಟು ಹಾಕುತ್ತಿರುವುದರ ಹಿಂದೆ ರಾಜಕೀಯ ಕುತಂತ್ರದ ಹುನ್ನಾರವಿದೆ ಎಂಬುದು ಇವರ ನಿಲುವಾಗಿದೆ. ೧೯೯೭ರ ಸುಪ್ರಿಂ ಕೋರ್ಟ್‌ನ ಅಧಿಸೂಚನೆಯಂತೆ ದುಡಿಯುವ ಕ್ಷೇತ್ರದಲ್ಲಿ ಲೈಂಗಿಕ ಕಿರುಕುಳದ ಲೈಂಗಿಕ ಸಮಿತಿಯು ರಚಿತವಾಗಬೇಕು ಎಂಬ ಕಾನೂನು ಇದ್ದರೂ ಹಲವಾರು ಕಡೆ ಸಮಿತಿ ರಚನೆಯಾಗಿರದೆ ಇಲ್ಲದಿರುವುದರನ್ನು ಕಾಣಬಹುದು.

“೪೫ ನಿಮಿಷದಲ್ಲಿ ಬಟ್ಟೆ ತೊಳೆದರೆ ಅಥವಾ ಪಾತ್ರೆ ತಿಕ್ಕಿದರೆ ನಾಲ್ಕು ಜನರಿರುವ ಕುಟುಂಬವಿದ್ದರೆ ಕನಿಷ್ಟ ೧೫೦ರೂ. ತಿಂಗಳಿಗೆ ವೇತನ ಕೊಡಬೇಕು, ನೆಲ ಒರಸಿ ಪಾತ್ರೆ ತೊಳೆದು ಬಟ್ಟೆ ಶುಚಿಗೊಳಿಸಿ, ಮನೆ ಮಗುವನ್ನು ನೋಡಿಕೊಳ್ಳುವುದಕ್ಕೆಂದು ಎಂಟು ತಾಸು ಸಮಯ ಕೊಟ್ಟರೆ ೧೬೦೦ರೂ ವೇತನ, ೪೫ ನಿಮಿಷಕ್ಕೂ ಹೆಚ್ಚು ಸಮಯ ತಗುಲಿದರೆ ದಿನದ ವೇತನದ ಎರಡು ಪಟ್ಟು ಹೆಚ್ಚುವರಿ ವೇತನ ಪಾವತಿಸಬೇಕು, ಹಿಂದೆ ಇನ್ನು ಕೆಲವು ಸಣ್ಣ ಪುಟ್ಟ ಸೌಲಭ್ಯಗಳು ಅಕ್ಷರ ರೂಪದಲ್ಲಿದ್ದವು. ೨೦೦೪ ಮಾರ್ಚ್ ೧೨ರಂದು ರಾಜ್ಯ ಸರ್ಕಾರದ ಪತ್ರದಲ್ಲಿ ಪ್ರಕಟವಾದ ಅಧಿನಿಯಮವಿದು. ಕಪ್ಪು ಬುರ್ಖಾಗಳ ನಡುವಿನಿಂದ ಹೆಂಗಸೊಬ್ಬಳು ಎದ್ದು ನಿಂತಳು, ನೂರುಜಹಾ ಹೆಸರಿನ ನಡುವಯಸ್ಸಿನ ಅವಳು ‘ಏನ್ರೀ ಸಾಹೇಬ್ರೆ, ಕಾನೂನು ಬಾಳ ಅವಾ ಅಂತ ಹೇಳ್ತಿರಿ, ಕಾಗದದಾಗ ಇದ್ರ ನಮಗೇನ ಬಂತು? ನಮ ಗಂಣಸೂರು ದಿನಾ ಕುಡದ ಬಂದು ಮೈ ಮುರ್ಯಾಂಗ ಹೊಡಿತಾರ, ಸೆರಿ ಬಂದ್ ಮಾಡ್ತೀವಿ ಅಂತ ನಿಮ್ಮ ಮುಖ್ಯಮಂತ್ರಿ ಟೀವ್ಯಾಗ ಹೇಳಿ ಹೇಳ್ಯಾರ, ಮತ್ತ ನಮ್ಮ ಗಣಂಸರಿಗೆ ಕುಡಿಲಾಕ್ ಹ್ಯಾಂಗ್ ಎಲ್ಲಿಂದ ಸಿಗಲಲತದ ಹೇಳ್ರಿ? ಸಣ್ಣ ಮಕ್ಕಳಿಗೆ ಸಾಲಿಗೆ ಕಳಸ್ರೀ ಅಂತೀರಿ. ನಮ್ಮಲ್ಲಿ ಸರಕಾರಿ ಸಾಲಿ ಇಲ್ಲ, ಅಂಗನವಾಡೀ ನೂ ದೂರ ಅದಾ. ಅಷ್ಟ ದೂರ ನಡಕೊಂಡು ಹೋಗಿ ಬಿಟ್ಟ

ಬಂದ್ರ ಹೊಳ್ಳ ತರಲಾಕ ಯಾರ ಹೋಗಬೇಕು? ಬಡುರಿಗೆ ನಿಮ್ಮ ಸರಕಾರ ಯಾನ ಅನುಕೂಲ ಮಾಡ್ಯಾದ ಹೇಳ್ರಿ? ರೇಷನ್ ಕಾರ್ಡಿಲ್ಲ ಗ್ಯಾಸಲೇಟ್ ಎಣ್ಣೆ ಇಲ್ಲ, ಕುಡ್ಯಾಕ ನೀರ ಸಲ್ಲ್ಯಾಕ ಗಲ್ಲಿ ಓಡಾಡಬೇಕು. ಇವು ಕಷ್ಟದ ಪರಿಹಾರಕ್ಕೆ ನಿಮ್ಮ ಕಾನೂನದಾಗ ಯಾನ ಬರದಾರ ಹೇಳ್ರಿ? ನಮ್ಮ ಮಂದ್ಯಾಗ ಮನಿ ಹೊರಗ ಹೋಗಬ್ಯಾಡನೂ ಅಂತಾರ, ಹೊರ ಹೋಗಿ ದುಡ್ಡಿಲ್ಲಂದ್ರ ಹೊಟ್ಟಿನೂ ತುಂಬಲ್ಲ... ಬಡೂರಿಗೆ ಬದುಕು ಅಂತ್ರೀ? ಬೇಡ ಅಂತ್ರೀ?"[೧೩]

ಸರ್ಕಾರ ಜಾರಿಗೆ ತರುವ ಅಧಿಸೂಚನೆಗಳಾಗಲಿ ಅಥವಾ ಕಾನೂನುಗಳಾಗಲಿ ಯಾವುದೂ ಕೂಡ ಬಡವರಿಗೆ ತಲುಪುತ್ತಿಲ್ಲ. ಅಸಲಿಗೆ ಅವು ಕಾಗದದಲ್ಲಿ, ಮಾತ್ರ ಅಚ್ಚಾಗಿವೆಯೇ ವಿನಃ ಅನುಷ್ಠಾನವಾಗಿಲ್ಲ. ನಿಜವಾಗಿಯೂ ಬಡವರಾಗಿರುವವರಿಗೆ ಈ ಎಲ್ಲಾ ಸೌಲಭ್ಯಗಳು ದೊರಕುತ್ತಿಲ್ಲ. ಬೇರೆ ಮನೆಯವರ ಮನೆಗೆಲಸ ಮಾಡಿ ತಮ್ಮ ಕುಟುಂಬನ್ನೇ ನಿರ್ವಹಿಸುತ್ತಿರುವವರಿಗೆ ಈ ಕಾನೂನಿನ ಯಾವ ಸೌಲಭ್ಯವು ಇಲ್ಲ. ಇದ್ದರೂ ಯಾವ ಮನೆಗಳಲ್ಲಿಯೂ ಸರ್ಕಾರ ನೀಡಿರುವ ಅಧಿಸೂಚನೆಯಂತೆ ವೇತನವನ್ನೂ ನೀಡುತ್ತಿಲ್ಲ. ದಿನವೆಲ್ಲ ದುಡಿದು ಹೈರಾಣಾದರೂ ಈ ಮಹಿಳೆಯರಿಗೆ ವಿರಾಮ ಎಂಬುದು ಮರಿಚಿಕೆ. ಮಹಿಳೆಯರನ್ನ ಕೇವಲ ಓಟ್ ಬ್ಯಾಂಕಾಗಿ ನೋಡುವ ಸರ್ಕಾರಗಳು ಈ ದುಡಿಯುವ ವರ್ಗದ ಮಹಿಳೆಯರಿಗೆ ಯಾವುದೇ ರೀತಿಯಾದ ಸುರಕ್ಷತೆಯನ್ನು ನೀಡಿಲ್ಲ. 'ಇಲ್ಲಿ ನೂರುಜಹಾಳ ಅಹವಾಲು ಕೂಡ ಇದೇ ಆಗಿದೆ? ಬಡಕುಟುಂಬದ ಮಕ್ಕಳಿಗಾಗಿ ಸರ್ಕಾರಿ ಶಾಲೆ ಇರಬೇಕಾದ ಜಾಗದಲ್ಲಿ ಖಾಸಗಿ ಶಾಲೆಗಳು ತಲೆ ಎತ್ತಿವೆ. ಮೂಲ ಸೌಲಭ್ಯವನ್ನೇ ಕಾಣದ ಅದೆಷ್ಟೋ ಹಳ್ಳಿಗಳು ಇನ್ನು ಹಿಂದುಳಿದ ಸ್ಥಿತಿಯಲ್ಲಿವೆ. ಮನೆಯ ನಿರ್ವಹಣೆಯ ಜವಾಬ್ದಾರಿ ಹೊರಬೇಕಾಗಿದ್ದ ಮನೆಯ ಯಜಮಾನ ಎನಿಸಿಕೊಂಡವನು ಸಂಬಂಧವಿಲ್ಲವೆಂಬಂತೆ ಇದ್ದಾಗ ಮಹಿಳೆಯು ಅನಿವಾರ್ಯವಾಗಿ ತನ್ನ ಕುಟುಂಬದ ಜವಾಬ್ದಾರಿಯನ್ನು ಹೊರಲೇಬೇಕಾಗಿದೆ. ಇದು ಬರೀ ನೂರುಜಹಾಳ ಪ್ರಶ್ನೆಯಲ್ಲ ಇಡೀ ಬಡಕುಟುಂಬದ ಮಹಿಳೆಯರ ಪ್ರಶ್ನೆಯಾಗಿದೆ ಎಂಬುದನ್ನು ಕೆ.ನೀಲಾ ಅವರು ಈ ಲೇಖನದಲ್ಲಿ ವ್ಯಕ್ತಿಪಡಿಸಿದ್ದಾರೆ.

"ಹೊಟ್ಟೆ ತುಂಬ ಬಾನ ಕೊಡಲಿಲ್ಲ. ಮಕ್ಕಳು ಅಷ್ಟೋ ಇಷ್ಟೋ ಓದಿ ಮನೇಲಿ ಕುಂತ್ಯಾ ಮುಂದೆ ಓದಿಸಕ್ಕೆ ಆಗಾಂಗಿಲ್ಲ ಆಸ್ತಿ ಇಲ್ಲ, ಮನೆ ಇಲ್ಲ, ಮೈಮುಚ್ಚೂವಷ್ಟು ಬಟ್ಟೆ ತರೋದಕ ಆಗಂಗಿಲ್ಲ, ೫೦ ವರ್ಷ ದುಡುದ್ರೂ ಏನೂ ಇಲ್ಲ. ಬೆಳಗ್ಗೆ ೬ ರಿಂದ ರಾತ್ರಿ ೮ರವರೆಗೆ ಕೆಲ್ಸ ಮಾಡುದ್ರೂ ಹೊಟ್ಟೆ ತುಂಬೋಕೆ ಆಗ್ತಿಲ್ಲ. ಎಷ್ಟು ಭಾರ ಹೊತ್ರು ಕೂಲಿ ಕೊಡೋದು ಕಡಿಮೆನೇ. ನಮ್ಮ ಮಕ್ಕಳ ಬಗ್ಗೆ ಗಮನ ಕೊಡದೆ ಹೊಟ್ಟೆ ಪಾಡಿಗಾಗಿ ದುಡಿಮೆ. ಯಾವ ಪ್ರಯೋಜನವು ಇಲ್ಲ, ಗಂಗಾವತಿಯಿಂದ ಬಂದ ಬಸಮ್ಮನ ಕೊರಗು ಇದು. ಇದು ಆಕೆ ಒಬ್ಬರದೇ ಅಲ್ಲ; ಅಕ್ಕಿ ಗಿರಣಿಯಲ್ಲಿ ಹಲವಾರು ವರ್ಷಗಳಿಂದ ಕೂಲಿ ಕಾರ್ಮಿಕರಾಗಿ ದುಡಿಯುತ್ತಿರುವ ಅಲ್ಲಿನ ಎಲ್ಲ ಮಹಿಳೆಯರ ಸ್ಥಿತಿ ಈ ಬಗೆಯದು. ಅಲ್ಲೇ ಕೆಲಸ ಮಾಡುವ ಸೈನಾಬಿ ವಿವರಗಳನ್ನು ಹೀಗೆ

ಬಿಚ್ಚಿಟ್ಟರು; 'ಐವತ್ತು ವರ್ಷಗಳಿಂದ ಇರುವ ಅಕ್ಕಿ ಗಿರಣಿ ಮಹಿಳೆಯರಿಗೆ ಕೆಲಸದ ಭದ್ರತೆಯಾಗಲಿ, ಶೌಚಾಲಯ ವ್ಯವಸ್ಥೆಯಾಗಲಿ, ವಿರಾಮಕ್ಕೆ ಸ್ಥಳವಾಗಲಿ, ಮಕ್ಕಳ ಕೇಂದ್ರವಾಗಲಿ ಇಲ್ಲ, ಮೂವತ್ತು ವರ್ಷ ದುಡಿದ ಮಹಿಳಾ ಕಾರ್ಮಿಕರಿಗೆ ಏನಾದರೂ ಆದರೆ ಪರಿಹಾರವಿಲ್ಲ."[೧೪] ಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಮಹಿಳೆಯರಿಗೆ ಯಾವುದೇ ರೀತಿಯಾದಂತಹ ಸುರಕ್ಷತೆ ಇರುವುದಿಲ್ಲ. ಹಾಗೂ ದುಡಿಯುತ್ತಿರುವ ಸ್ಥಳಗಳಲ್ಲಿ ಶೌಚಾಲಯದ ವ್ಯವಸ್ಥೆಯೂ ಇಲ್ಲದಿರುವುದನ್ನು ಕಾಣಬಹುದು. ಹಗಲಿರುಳೆನ್ನದೆ ದುಡಿದರೂ ಇವರಿಗೆ ಕೊಡುವ ಕೂಲಿ ಮಾತ್ರ ಕಡಿಮೆ ಇದೆ. ಲಿಂಗತಾರಮ್ಯದಿಂದಾಗಿ ಮಹಿಳೆಯರು ಎಷ್ಟು ದುಡಿದರು ಮಹಿಳೆ ಎನ್ನುವ ಕಾರಣಕ್ಕೆ ಕೂಲಿಯನ್ನ ಕಡಿಮೆ ಕೊಡಲಾಗುತ್ತದೆ. ಅಲ್ಲದೆಯೇ ಆಕೆಯ ಶ್ರಮ ಗಂಡಿಗಿಂತ ಕಡಿಮೆಯಾದುದು ಎಂದೇ ಪರಿಗಣಿಸಲಾಗಿದೆ. ಆ ಕಾರಣದಿಂದ ತಮ್ಮಗಳ ಕುಟುಂಬ ನಿರ್ವಹಣೆಯು ಕಷ್ಟವಾಗಿದೆ. ಮತ್ತು ಮಕ್ಕಳನ್ನು ಚೆನ್ನಾಗಿ ಓದಿಸಲು ಆಗುತ್ತಿಲ್ಲವೆಂಬ ಅಳಲು ಇವರದ್ದು.

ಮಾನವನು ಬೇಟೆಯಾಡಿ ತಿಂದು ಬದುಕುತ್ತಿದ್ದನು. ಬೆಂಕಿಯನ್ನು ಕಂಡು ಹಿಡಿದಾಗಿನಿಂದ ಬೇಯಿಸಿ ತಿನ್ನುವುದನ್ನು ಕಲಿತುಕೊಂಡ ನಂತರದಿಂದ ಮಹಿಳೆಯು ಮನೆಯಲ್ಲೇ ಉಳಿಯುವಂತಾಯಿತು. ಪುರುಷ ಬೇಟೆಯಾಡಿ ತಂದಿದ್ದನ್ನು ಮಹಿಳೆಯು ಬೇಯಿಸಿ ಆಹಾರ ತಯಾರಿಸುತ್ತಿದ್ದಳು. ಆದ್ದರಿಂದ ಒಂದು ಕಡೆ ನೆಲೆನಿಲ್ಲುವಂತಾಯಿತು. ಕಾಲಕ್ರಮೇಣ ಜನಸಂಖ್ಯೆಯು ಬೆಳೆಯುತ್ತಾ ಹೋಯಿತು. ಮಹಿಳೆಯು ಮನೆಯಲ್ಲಿ ಇದ್ದಾಗ ಆಹಾರಕ್ಕಾಗಿ ಸುತ್ತಮುತ್ತಲಿನ ಜಾಗದಲ್ಲಿ ಆಹಾರಕ್ಕೆ ಬೇಕಾಗುವ ಪದಾರ್ಥಗಳನ್ನು ಬೆಳೆಯಲು ಆರಂಭಿಸಿದಳು. ಹೀಗೆ ಮಹಿಳೆಯು ಕೃಷಿಯನ್ನು ಕಂಡು ಹಿಡಿದಳು. ಕೃಷಿಯನ್ನು ಕುಟುಂಬ ನಿರ್ವಹಣೆ ಮತ್ತು ಜೀವನದ ಉಳಿವಿಗಾಗಿ ಕೈಗೊಳ್ಳುವವರೆಗೂ ಆ ಕೃಷಿಯು ಸ್ತ್ರೀ ಪ್ರಧಾನವಾಗಿತ್ತು. ಗಂಡಸರು ಕಾಡನ್ನೆಲ್ಲ ಕಡಿದು ಭೂಮಿಯನ್ನು ಉಳುಮೆ ಮಾಡಿ ಹದಗೊಳಿಸುವುದನ್ನು ಹೊರತು ಪಡಿಸಿದರೆ, ಇನ್ನುಳಿದ ಎಲ್ಲಾ ಕೆಲಸಗಳನ್ನು ಸ್ತ್ರೀ ನಿರ್ವಹಿಸುತ್ತಿದ್ದಳು. ಬೀಜ ಬಿತ್ತುವುದು ನಾಟಿ ಮಾಡುವುದು, ಕಳೆ ತೆಗೆಯುವುದು, ಕೊಯ್ಲು ಮಾಡುವುದು, ಬೀಜ ಸಂಸ್ಕರಿಸುವ ಎಲ್ಲಾ ಕೆಲಸಗಳನ್ನು ಮಹಿಳೆಯರೇ ಮಾಡುತ್ತಿದ್ದರು. ಇದರ ಜೊತೆ ಜೊತೆಗೆ ಪಶುಸಂಗೋಪನೆ ಮತ್ತು ಹೈನುಗಾರಿಕೆಯನ್ನು ಆರಂಭಿಸಿದರು. ದಿನಗಳು ಉರುಳಿದಂತೆ ಕೃಷಿಯು ಕುಟುಂಬದ ವ್ಯಾಪ್ತಿಯನ್ನು ಮೀರಿ ಮಾರುಕಟ್ಟೆಗೆ ವಿಸ್ತರಿಸಿಕೊಂಡ ಹಾಗೆ ಅದು ಪುರುಷ ಪ್ರಧಾನವಾಗಿ ಪರಿವರ್ತನೆಯಾಗತೊಡಗಿತು. ಕೃಷಿ ಯಾವಾಗ ಲಾಭ, ಮಾರುಕಟ್ಟೆ ಮತ್ತು ವಾಣಿಜ್ಯದ ಉದ್ದೇಶವನ್ನು ಹೊಂದಿತೋ ಆಗಿನಿಂದ ಕೃಷಿಯಲ್ಲಿ ಲಿಂಗತಾರಮ್ಯ ಪ್ರಾರಂಭವಾಯಿತು. ಪುರುಷರು ಉಳುಮೆ ಮಾಡಿ ಕೃಷಿಯ ಉತ್ಪನ್ನಗಳನ್ನು ಮಾರುಕಟ್ಟೆಗೆ ಕೊಂಡೊಯ್ದು ಅದರಿಂದ ಬರುವ ಆದಾಯವನ್ನು ಮನೆಗೆ ತಂದುಕೊಡುವುದು 'ದುಡಿಮೆ'ಯ ಆದಾಯವೆಂದು ಅನ್ನಿಸಿಕೊಂಡರೆ, ಸ್ತ್ರೀಯರು ಮಾಡಿದ ಅಥವಾ ಮಾಡುವ ಬಾಕಿ ಎಲ್ಲಾ ಕೆಲಸಗಳು ಕರ್ತವ್ಯವೆಂದು ಪರಿಗಣಿಸಲ್ಪಟ್ಟವು. ಪುರುಷರು ಮಾಡುವ ಕೃಷಿ ಕೆಲಸಕ್ಕೆ ಹೆಚ್ಚು

ಶಕ್ತಿಬೇಕೆಂಬ ನಿಲುವಿಗೆ ಬರಲಾಯಿತು. ಮತ್ತು ಕೃಷಿಯ ಉತ್ಪನ್ನಗಳನ್ನು ಮಾರಾಟ ಮಾಡಿದ ಹಣದಿಂದಾಗಿ ಅವರು ಮಾಡುವ ಕೆಲಸಕ್ಕೆ ದುಡಿಮೆ ಎಂಬ ಆದ್ಯತೆಯನ್ನು ನೀಡಲಾಯಿತು. ಆದರೆ ಸ್ತ್ರೀಯರು ಅದೇ ಕೃಷಿಯಲ್ಲಿ ಎಷ್ಟು ಶ್ರಮಶಕ್ತಿಯನ್ನು ಹಾಕಿ ದುಡಿದು ಹೈರಾಣಾಗಿದ್ದರೂ ಅವರ ಶ್ರಮಕ್ಕೆ ಯಾವ ಪ್ರತಿಫಲವು ಸಿಗುವುದಿಲ್ಲ ಮತ್ತು ಅವರೇ ನಿರ್ವಹಿಸಿದ ಆ ಧಾನ್ಯ ಬೆಳೆಗಳ ಮೇಲೆ ಇವರ ಆದ್ಯತೆ ಮತ್ತು ಹಣದ ವ್ಯವಹಾರದಿಂದ ನೇರ ಸಂಬಂಧ ಇಲ್ಲದೇ ಇರುವುದರಿಂದ ಮಹಿಳೆಯ ದುಡಿಮೆಯು ಅಗೋಚರವಾಗಿಯೇ ಉಳಿಯಿತು.

ಬೆಳೆಯ ಲಾಭವನ್ನು ನೇರವಾಗಿ ಪಡೆದು ಹಾಗೂ ಅದರ ಪ್ರತಿಫಲವನ್ನು ಕೃಷಿ ಕುಟುಂಬದಿಂದ ಬಂದ ಮಹಿಳೆಯು ತಾನು ದುಡಿಮೆ ಮಾಡಿದ ಮತ್ತು ಅದರ ಉತ್ಪನ್ನಕ್ಕೂ ಯಾವುದೇ ಸಂಬಂಧವಿಲ್ಲ ಎನ್ನುವಂತೆ ಅಂತರವನ್ನು ಉಳಿಸಿಕೊಂಡು ಬರಲಾಗಿದೆ. ಇವಳಿಗೆ ಇಷ್ಟವಾದ ಯಾವುದೇ ವಸ್ತುವನ್ನು ಕೊಂಡುಕೊಳ್ಳುವ ಅವಕಾಶ ಇವಳಿಗಿಲ್ಲ. ಕೃಷಿ ಮೂಲ ಕುಟುಂಬದಿಂದ ಬಂದ ಮಹಿಳೆಯರು ಕೃಷಿಯಲ್ಲಿ, ತಮ್ಮನ್ನು ತಾವು ತೊಡಗಿಸಿಕೊಂಡು ಅದಕ್ಕೆ ಬೇಕಾದ ಎಲ್ಲಾ ನಿರ್ವಹಣೆ ಮಾಡಿ, ಅದೆಲ್ಲವನ್ನು ಹಸನುಗೊಳಿಸಿ ಜೋಪಾನ ಮಾಡುವ ಎಲ್ಲಾ ಜವಾಬ್ದಾರಿಯನ್ನು ಮಹಿಳೆಯೇ ನಿರ್ವಹಿಸುತ್ತಾಳಾದರೂ ಅವಳ ಶ್ರಮಕ್ಕೆ ತಕ್ಕ ಪ್ರತಿಫಲವನ್ನು ಹೊಂದುವ ಹಕ್ಕಿಂದ ವಂಚಿತಳಾಗಿದ್ದಾಳೆ. ಅವಳು ಬೆಳೆದ ಬೆಳೆಯಿಂದ ಬರುವ ಲಾಭದಿಂದ ಒಂದು ತುಂಡು ಬಟ್ಟೆಯನ್ನು ತೆಗೆದುಕೊಳ್ಳಲು ಹೇಗೆ ಚಡಪಡಿಸುತ್ತಾಳೆ (ಒದ್ದಾಡುತ್ತಾಳೆ) ಎನ್ನುವುದನ್ನು ಕೆ.ನೀಲಾ ಅವರು 'ಬದುಕು ಬಂಧೀಖಾನೆ' ಕೃತಿಯಲ್ಲಿ ವ್ಯಕ್ತಪಡಿಸುತ್ತಾರೆ. "ಇಳಕಲ್ ಸೀರೆ ಕಿಮ್ಮತ್ ಕೇಳಕೊಂಡು ಬರ್ರಿ"[೧೫] ಎಂದು ತೊಗರಿಯನ್ನು ಮಾರಾಟ ಮಾಡಲು ಹೊರಟ್ಟಿದ್ದ ಗಂಡನಿಗೆ ಹೇಳುತ್ತಾಳೆ. ಕೃಷಿ ಕಾರ್ಮಿಕ ಮಹಿಳೆಯು ತಾನು ತನ್ನೆಲ್ಲಾ ಶ್ರಮವನ್ನು ಹಾಕಿ ದುಡಿದಿದ್ದರೂ ಅದರಿಂದ ಬರುವ ಪ್ರತಿಫಲದಿಂದ ವಂಚಿತಳಾಗುತ್ತಾಳೆ. ಅಲ್ಲದೆಯೆ ತನಗೆ ಬೇಕಾದ ವಸ್ತುವನ್ನು ಕೊಂಡುಕೊಳ್ಳಲು ಆಕೆ ತನ್ನ ಗಂಡನಿಂದ ಕೇಳಿಯೇ ಪಡೆದುಕೊಳ್ಳಬೇಕು. ಅವಳು ರೇಷ್ಮೆ ಸೀರೆ ತನಗೆ ಬೇಕೆಂದು ನೇರವಾಗಿ ಕೇಳುವುದಿಲ್ಲ. ಅವಳ ಭಾಷೆಯು ಪರೋಕ್ಷವಾಗಿರುವುದನ್ನು ಲೇಖಕಿಯು ಸ್ಪಷ್ಟಪಡಿಸಿದ್ದಾರೆ.

ಖಾಸಗಿ ಆಸ್ತಿಯ ಪರಿಕಲ್ಪನೆ ಬಂದಾಗಿನಿಂದ ಮಹಿಳೆಯು ಸಮಾನ ಭೂಮಿಯ ಹಕ್ಕಿನಿಂದ ವಂಚಿತಳಾದಳು. ಮಹಿಳೆ ಮತ್ತು ಪುರಷರ ನಡುವೆ ಲಿಂಗತಾರತಮ್ಯ ಹೆಚ್ಚಾಯಿತು. ವೇತನದಲ್ಲಿಯೂ ಕೂಡ ಅಸಮಾನತೆಯುಂಟಾಯಿತು. "ಭೂಮಿಯ ಖಾಸಗಿ ಒಡೆತನದ ಪರಿಕಲ್ಪನೆ ಹುಟ್ಟಿಕೊಂಡ ಮೇಲೆ ಕುಟುಂಬಗಳಲ್ಲಿ ಮಾತೃಪ್ರಧಾನತೆಯಲ್ಲಿ ತಾಯಿಯಿಂದ ಮಗಳಿಗೆ ಆಸ್ತಿ ವರ್ಗವಾಯಿತು. ಆದರೆ ಭೂಮಿಯನ್ನು ಮಾರಾಟ ಮಾಡುವ ಹಾಗಿರಲಿಲ್ಲ. ಭೂಮಿಯನ್ನು ಕೊಳ್ಳುವ ಪ್ರಶ್ನೆ ಬಂದಾಗ ವಾಣಿಜ್ಯ ಬೆಳೆಗಳನ್ನು ಬೆಳೆದು ಹಣಮಾಡಿಕೊಂಡ ಗಂಡಸರಿಗೆ ಹೆಚ್ಚಿನ ಅವಕಾಶ ಸಿಕ್ಕಿತು. ಆಹಾರ ಬೆಳೆ ಬೆಳೆಯುತ್ತಿದ್ದ ಹೆಂಗಸರಿಗೆ ಭೂಮಿಯನ್ನು ಕೊಂಡುಕೊಳ್ಳುವ

ಸಾಮರ್ಥ್ಯವಿರಲಿಲ್ಲ. ಹೀಗಾಗಿ ಒಮ್ಮೆ ಮಹಿಳೆಯರ ಅಧೀನದಲ್ಲಿದ್ದ ಭೂಮಿ ಕ್ರಮೇಣ ಪುರುಷರ ಪಾಲಾಯಿತು."[೧೬] ಆಹಾರ ಬೆಳೆಗಳನ್ನು ಬೆಳೆಯುತ್ತಿದ್ದ ಮಹಿಳೆಯರ ಭೂಮಿಗಿಂತ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಿದ್ದ ಪುರುಷರ ಭೂಮಿಗೆ ಅಧಿಕ ಆದಾಯ ದೊರೆಯಿತು. ಹಾಗೆಯೇ ಭೂಮಿಯನ್ನು ಕೊಂಡುಕೊಳ್ಳುವ ಸಾಮರ್ಥ್ಯವನ್ನು ಪುರುಷರು ಬೆಳೆಸಿಕೊಂಡರು, ಆದರೆ ಮಹಿಳೆಯರು ಈ ಪ್ರಕ್ರಿಯೆಯಿಂದ ದೂರ ಉಳಿಯಬೇಕಾಯಿತು. ಆದಾಯ ಕಡಿಮೆಯಾದ ಕಾರಣದಿಂದ ಭೂಮಿಯನ್ನು ಖರೀದಿಸುವ ಸಾಮರ್ಥ್ಯವನ್ನು ಹೊಂದದೇ ಹೋದದ್ದು ವಿಶಾದವೇ ಸರಿ. ಗಂಡಸು ಕೃಷಿಯ ಭೂಮಿಯಲ್ಲಿ ದುಡಿಯುವಾಗ ಭೂಮಿಯನ್ನು ಉತ್ತು ಹಸನುಗೊಳಿಸಿ, ಬೆಳೆಗಳಿಗೆ ನೀರಾಯಿಸುವ ಕೆಲಸ ಮಾಡಿದರೆ ಮಹಿಳೆಯರು ಬೀಜ ಬಿತ್ತನೆ ಮಾಡಿ, ಬೆಳೆಗಳಲ್ಲಿನ ಕಳೆ ತೆಗೆದು, ಕೊಯ್ಲು ಮಾಡುವವರೆಗೆ ನಡು ಬಗ್ಗಿಸಿ, ಕಷ್ಟದಿಂದ ದುಡಿಯುತ್ತಾಳೆ. ಆದರೂ ಇವಳಿಗೆ ಪುರುಷರಂತೆ ಸಮಾನ ವೇತನ ದೊರೆಯುವುದಿಲ್ಲ. ಗಂಡಸಿಗಿಂತ ಹೆಚ್ಚಾಗಿ ಸ್ತ್ರೀಯು ಕೃಷಿ ಭೂಮಿಯಲ್ಲಿ ಶ್ರಮವಹಿಸಿ ದುಡಿಯುತ್ತಾಳೆ. "ಗದ್ದೆ ಸಾಗುವಳಿ ಕೆಲಸದಲ್ಲಿ ಗದ್ದೆ ಉಳುವವನು ಮತ್ತು ಬೀಜ ಬಿತ್ತುವವನು ಗಂಡಸಾದರೆ, ಭತ್ತದ ಸಸಿ ನಾಟಿ ಮಾಡುವ ಕೆಲಸ ಹೆಂಗಸರಿಲ್ಲದೆ ಗಂಡಸರಿಂದ ಮಾಡಲಾಗದು; ಗಂಡಸರ ದೇಹ ಪ್ರಕೃತಿ, ದೇಹ ರಚನೆಯೇ ಆ ಕೆಲಸಕ್ಕೆ ಒಗ್ಗುವಂತಹದ್ದಲ್ಲ."[೧೭] ಎಲ್ಲಾ ಕೆಲಸಗಳಿಗೆ ಮಹಿಳೆಯರ ದೇಹರಚನೆಯು ಹೊಂದಿಕೊಳ್ಳುತ್ತದೆ ಮತ್ತು ಅವರು ಬಹಳ ಶ್ರಮ ಪಟ್ಟು ಕೃಷಿ ಕೆಲಸವನ್ನು ನಿಭಾಯಿಸುತ್ತಾರೆ. ಆದರೆ ಪುರುಷರು ಹಾಗೆ ನಡುಬಗ್ಗಿಸಿ ನಾಟಿ ಮಾಡುವಷ್ಟು ಗಟ್ಟಿ ದೇಹರಚನೆಯನ್ನು ಹೊಂದಿಲ್ಲ ಮತ್ತು ಗಂಡಸರಿಂದ ಇಂತಹ ಕೆಲಸವನ್ನು ನಿರ್ವಹಿಸಲು ಅವರಿಂದ ಸಾಧ್ಯವಿಲ್ಲ ಎನ್ನುವುದು ಲೇಖಕಿಯ ಅಭಿಪ್ರಾಯವಾಗಿದೆ.

ಮಹಿಳೆಯರು ಕೃಷಿಯಲ್ಲಿ ದುಡಿಯುವಾಗ ಅವರು ಹೆಚ್ಚು ಸಮಯ ಹಾಗೂ ಶ್ರಮದಿಂದ ದುಡಿಯುತ್ತಾರೆ. ಇವರು ಬೆಳಗ್ಗೆಯಿಂದ ಸಂಜೆವರೆಗೆ ನಡುಬಗ್ಗಿಸಿ ನಾಟಿ ಮಾಡಿ, ಗದ್ದೆಯೊಳಗಿನ ಕಳೆ ತೆಗೆದು ಮಳೆ-ಗಾಳಿ-ಬಿಸಿಲೆನದೆ ಹಗಲಿರುಳು ಬಿಟ್ಟಿ ಆಳಿನಂತೆ ದುಡಿಯುವಳಾದರೂ ಅವಳ ಕೆಲಸಕ್ಕೆ ಬೆಲೆಯಿಲ್ಲ. ಜೊತೆಗೆ ತಾನು ನಿರ್ವಹಿಸಿದ ಬೆಳೆಯ ಮೇಲೆ ಆಕೆಗೆ ಯಾವುದೇ ಹಕ್ಕಿರುವುದಿಲ್ಲ. ಕಾಲಕ್ರಮೇಣ ಆಧುನಿಕತೆಯಿಂದಾಗಿ ಕೃಷಿ ಭೂಮಿಯಲ್ಲಿ ದುಡಿಯಲು ಯಂತ್ರಗಳು ಬಂದವು. ಕೃಷಿ ಮಹಿಳೆಯರ ದುಡಿಮೆಗೆ ಕತ್ತರಿ ಬಿದ್ದಂತಾಯಿತು. ಕೃಷಿಕ ಮಹಿಳೆಯರು ಆ ಕೆಲಸದಿಂದ ವಂಚಿತರಾಗಿ ಅತಂತ್ರ ಸ್ಥಿತಿಯನ್ನು ತಲುಪಿದರು. ಹಾಗೆಯೇ ಕೈಗಾರೀಕರಣ ಮತ್ತು ಜಾಗತೀಕರಣದಿಂದಾದ ಪರಿಣಾಮವನ್ನು ಇವು ಸೂಚಿಸುತ್ತವೆ. ಆದರೆ ಜಾಗತೀಕರಣವು ಮಹಿಳೆಯರಿಗೆ ಆರ್ಥಿಕ ಸ್ವಾವಲಂಭಿತನವನ್ನು ಹೊಂದಲು ಹೇಗೆ ಕಾರಣವಾಯಿತು. ಎನ್ನುವುದನ್ನು ಎಚ್.ನಾಗವೇಣಿಯವರ ಮಾತಿನಲ್ಲಿಯೇ ಈ ಮುಂದಿನಂತೆ ನೋಡುವುದಾದರೆ "ಸ್ತ್ರೀ ಸಬಲೀಕರಣ ಎಂಬ ಪದವೇ ಚಾಲ್ತಿಯಲ್ಲಿಲ್ಲದ ಆ ಕಾಲದಲ್ಲಿ ಆ ಪ್ರಕ್ರಿಯೆಗೆ ಬೀಡಿ ಉದ್ಯಮ ನೀಡಿದ

ಚಾಲನೆಯಿಂದಾಗಿ ನಮ್ಮೂರಿನ ಕೆಳವರ್ಗದ ಹಾಗೂ ಆರ್ಥಿಕವಾಗಿ ಕೆಳಪದರದಲ್ಲಿರುವ ಮೇಲ್ವರ್ಗದ ಮಹಿಳೆಯರಿಗೂ ಆರ್ಥಿಕ ಬಲ ಬಂದಂತಾಗಿ, ಆರ್ಥಿಕ ಬಲಾಢ್ಯರು ಮಾತ್ರವಲ್ಲ. ಇಡೀ ಪುರುಷಲೋಕವನ್ನೇ ಎದುರಿಸುವ ಆತ್ಮಸ್ಥೈರ್ಯವೊಂದು ಅವರೊಳಗೆ ಪ್ರಾಪ್ತವಾಯಿತು."[೧೮] ಒಂದು ಕಡೆ ಗುಡಿ ಕೈಗಾರಿಕೆಯು ಅಳಿವಿನಂಚಿಗೆ ತಳ್ಳಲ್ಪಟ್ಟಿತು ಎಂದು ಹೇಳುವಾಗಲೂ ಕೂಡ ಮತ್ತೊಂದೆಡೆ ಗೃಹ ಕೈಗಾರಿಕೆಗೆ ಹೆಚ್ಚು ಪ್ರೋತ್ಸಾಹವನ್ನು ನೀಡಲಾಗುತ್ತಿದೆ. ಕೃಷಿ ಕೂಲಿ ಮಹಿಳೆಯರು ದುಡಿಮೆಯನ್ನು ಕಳೆದುಕೊಂಡರೂ ಪರ್ಯಾಯವಾಗಿ ಮನೆಯಲ್ಲಿಯೇ ಕೆಲಸ ಮಾಡಿ ದುಡಿಮೆಯನ್ನು ಮಾಡುವಂತಹ ಕೆಲಸವನ್ನು ಹುಡುಕಿಕೊಂಡರು. ಬೀಡಿಕಟ್ಟುವುದು, ಊದು ಬತ್ತಿ ಹೊಸೆಯುವುದು, ಹೂಕಟ್ಟುವುದು, ಬಟ್ಟೆ ಹೊಲಿಯುವುದು, ಗೊಂಬೆ ತಯಾರಿಸುವುದು ಹೀಗೆ ಅನೇಕ ಕೆಲಸವನ್ನು ಮಾಡುವುದರ ಮೂಲಕ ಆರ್ಥಿಕ ಸದೃಢತೆಯನ್ನು ಪಡೆದುಕೊಂಡರು. ಜೊತೆಗೆ ಆತ್ಮಸ್ಥೈರ್ಯವನ್ನು ಬೆಳಸಿಕೊಳ್ಳುವಂತೆ ಗುಡಿಕೈಗಾರಿಕೆಯಿಂದ ಪಡೆದುಕೊಂಡರು. ಇಲ್ಲಿ ಸ್ವಯಂ ಉದ್ಯೋಗವನ್ನು ಮಹಿಳೆಯರು ಪಡೆದುಕೊಂಡರು. ಕೃಷಿ ಭೂಮಿಯಲ್ಲಿ ಕೃಷಿ ಕೂಲಿಕಾರ ಮಹಿಳೆಯು ದುಡಿಯುವ ಸಂದರ್ಭದಲ್ಲಿ ಭೂ ಒಡೆತನ ಹೊಂದಿದವರಿಗೆ ಅಂಜುತ್ತಾ, ಅವರ ಕೈಕೆಳಗೆ ದುಡಿಯಬೇಕಾಗಿತ್ತು. ಆದರೆ ಗೃಹ ಕೈಗಾರಿಕೆಯಿಂದಾಗಿ ಯಾರಿಗೊ ಅಂಜಿ ಬದುಕುವ ತಾಪತ್ರಯದಿಂದ ದೂರಾದರಲ್ಲದೆ, ಅನ್ಯಾಯಕ್ಕೆ ಪ್ರತಿರೋಧ ಒಡ್ಡುವ ಹಾಗೂ ಪ್ರತಿಭಟಿಸುವ ಧೈರ್ಯವನ್ನು ಆರ್ಥಿಕ ಸ್ವಾಯತ್ತತೆಯಿಂದ ಅವರು ಪಡೆದುಕೊಂಡಿದ್ದಾರೆ ಎಂಬುದನ್ನು ಈ ಲೇಖಕಿಯ ವಿಚಾರ ಸಾಹಿತ್ಯದಲ್ಲಿ ಸ್ಪಷ್ಟವಾಗುತ್ತದೆ.

"ಕೃಷಿ ಚಟುವಟಿಕೆಗಳಲ್ಲಿ ಸಾಂಪ್ರದಾಯಿಕ ರೀತಿಯ ಲಿಂಗಾಧಾರಿತ 'ಶ್ರಮ ವಿಂಗಡಣೆ' ಇದೆ. ಈ ವಿಂಗಡಣೆಯಲ್ಲದೆ ಜಾತಿ ಮತ್ತು ವರ್ಗಾಧಾರಿತ ಹಿನ್ನೆಲೆಗಳು ಮಹಿಳೆಯರ ಭಾಗವಹಿಸುವಿಕೆಯನ್ನು ನಿರ್ಧರಿಸುತ್ತವೆ. ಸಾಮಾನ್ಯವಾಗಿ ನಿಮ್ನ ವರ್ಗದ ಮತ್ತು ಗಿರಿಜನ ಮಹಿಳೆಯರು ಕೃಷಿ ಕಾರ್ಯದಲ್ಲಿ ದಿನಗೂಲಿ ಕೆಲಸಗಾರರಾಗಿ ಅಥವಾ ಬಿಡುವಿನ ವೇಳೆಯ ಕೆಲಸದ ರೀತಿಯಲ್ಲಿ (Casual Labour) ತೊಡಗಿಕೊಳ್ಳುವುದನ್ನು ಗುರುತಿಸಬಹುದು. ಈ ಮಹಿಳೆಯರು ಸಾಮಾಜಿಕವಾಗಿ ಕೆಳಸ್ತರದವರೆಂದು ಗುರುತಿಸಲ್ಪಡುತ್ತಾರೆ."[೧೯] ಕೃಷಿ ಕೆಲಸದಲ್ಲಿ ಮಹಿಳೆಯರಿಗೆ ಮತ್ತು ಪುರುಷರಿಗೆ ಬೇರೆ ಬೇರೆಯಾದ ಕೆಲಸಗಳಾಗಿ ವಿಂಗಡಿಸಿರುವುದು ಕಾಣಬಹುದು. ಉಳುವುದು ಪುರುಷನ ಕೆಲಸವಾದರೆ. ಬೀಜ ಬಿತ್ತನೆ, ನಾಟಿ, ಕಳೆತೆಗೆಯುವ ಕೆಲಸ ಮಹಿಳೆಯರದ್ದಾಗಿರುತ್ತದೆ. ಹೀಗಿರುವಾಗ ಕೆಲವು ಪ್ರದೇಶಗಳಲ್ಲಿ ಜಾತಿ ಮತ್ತು ವರ್ಗದ ಆಧಾರದ ಮೇಲೆಯು ಈ ಶ್ರಮ ವಿಂಗಡಣೆಯು ನಡೆದಿದೆ. ಇಂತಹ ಸಂದರ್ಭಗಳಲ್ಲಿ ತಳಸಮುದಾಯಗಳ ಅಥವಾ ಕೆಳಜಾತಿಯ ಮಹಿಳೆಯರು ದಿನಗೂಲಿಯ ಆಳುಗಳಾಗಿ ಕೃಷಿ ಕೆಲಸಗಳಲ್ಲಿ ದುಡಿಯುವುದನ್ನು ಕಾಣಬಹುದು. ಅಲ್ಲದೆ ಜಾಗತೀಕರಣದ ಸಂದರ್ಭದಲ್ಲಿ ಕೃಷಿಯಲ್ಲಿಯೂ ಹಲವಾರು ಬದಲಾವಣೆಗಳಾದದ್ದು ಕಾಣಬಹುದು. ಇದರಿಂದಾಗಿ ಮಹಿಳೆಯರಿಗೆ ಇನ್ನಷ್ಟು ಶ್ರಮಾಧಾರಿತ ಕೆಲಸವು ಹೆಚ್ಚಾದವು.

"ಆಧುನಿಕ ಕೃಷಿ ಪದ್ಧತಿ ಈ ಮಹಿಳೆಯರ ಮೇಲೆ ಹೆಚ್ಚಿನ ಒತ್ತಡ ಹೇರಿದೆ. ಮಕ್ಕಳನ್ನು ನೋಡಿಕೊಳ್ಳುವ ಅಡುಗೆ ಮಾಡುವ, ಪಾತ್ರೆ ಬಟ್ಟೆ ತೊಳೆಯುವ ಕೆಲಸಗಳು ಬಹುಪಾಲು ಅವರ ಸಮಯವನ್ನು ನುಂಗುವುದೇ ಅಲ್ಲದೆ, ಪಶುಗಳ ಮೇವು ಅಡುಗೆಗೆ ಸೌದೆ ಇತ್ಯಾದಿಗಳನ್ನು ಹೊಂದಿಸುವುದು ಕಷ್ಟವಾಗುತ್ತದೆ. ಹಳ್ಳಿಗಳಲ್ಲಿದ್ದ ಗೋಮಾಳಗಳು ನಶಿಸಿವೆ. ಅರಣ್ಯ ನಾಶದಿಂದ ಸೌದೆ ಸಂಗ್ರಹ ಕಷ್ಟ ಸಾಧ್ಯವಾಗಿದೆ. ತಮ್ಮ ಪಶುಗಳನ್ನು ಬಹಳ ದೂರದ ತನಕ ಅಟ್ಟಿಕೊಂಡು ಹೋಗಿ ಅವುಗಳಿಗೆ ಮೇವು ಒದಗಿಸುವ ಹಾಗೆಯೇ ಮನೆಗೆ ಸೌದೆ ಸಂಗ್ರಹಿಸುವ ಕೆಲಸಗಳು ಮಹಿಳೆಯರದ್ದಾಗಿಯೇ ಉಳಿದಿವೆ. ಇಂತಹ ಶ್ರಮವನ್ನು ಅಳೆಯುವುದು ಹೇಗೆ."[೨೦] ಸಾಂಪ್ರದಾಯಿಕ ಕೃಷಿಯು ದಿನದಿಂದ ದಿನಕ್ಕೆ ಕುಸಿಯುತ್ತಿರುವ ಮತ್ತು ವಾಣಿಜ್ಯ ಬೆಳೆಗೆ ಹೆಚ್ಚು ಒತ್ತು ನೀಡುತ್ತಿರುವ ಈ ಹೊತ್ತಿನಲ್ಲಿ ಮಹಿಳೆಯರಿಗೆ ಹಿಂದಿಗಿಂತಲೂ ಇಂದು ಶ್ರಮದ ಪಾಲು ದುಪ್ಪಟ್ಟಾಗಿದೆ. ವಾಣಿಜ್ಯ ಬೆಳೆಗಳನ್ನು ಬೆಳೆಯುವ ಸಲುವಾಗಿ ಕಾಡುಗಳನ್ನು ನಾಶಪಡಿಸಲಾಗುತ್ತಿದೆ. ಇದರಿಂದಾಗಿ ಹಳ್ಳಿಗಳಲ್ಲಿ ಅಡುಗೆಗಾಗಿ ಸೌದೆಯನ್ನೆ ಆಶ್ರಯಿಸಿದ್ದ ಮಹಿಳೆಯರು ಸೌದೆಗಾಗಿ ತಡಕಾಡುತ್ತಾ ಅಲೆಯುವಂತಹ ಸ್ಥಿತಿಯಾದರೆ, ಧನ ಕರುಗಳಿಗೆ ಮೇವಿಗಾಗಿ ದೂರದ ಪ್ರದೇಶಗಳಿಗೆ ಅರಸುತ್ತಾ ಸಾಗಬೇಕಾಗಿದೆ. ಪ್ರವಾಸೋದ್ಯಮಗಳು ಹೆಚ್ಚುತ್ತಿರುವ ಹೊತ್ತಲ್ಲಿ ಇದ್ದ ಭೂಮಿಯನ್ನೂ ವಾಣಿಜ್ಯೀಕರಣ ಮಾಡಿಕೊಳ್ಳುತ್ತಾ ಬೆಳೆ ಬೆಳೆಯಬೇಕಾದ ಸ್ಥಳಗಳಲ್ಲಿ ಬಿಲ್ಡಿಂಗ್‌ಗಳು ತಲೆ ಎತ್ತುತ್ತಿರುವುದು ಇದಕ್ಕೆ ಒಂದು ರೀತಿಯಾದ ಕಾರಣವೂ ಹೌದು ಎನ್ನುವುದನ್ನು ಇವರು ಚರ್ಚಿಸಿದ್ದಾರೆ.

ಕೊನೆಟಿಪ್ಪಣಿಗಳು

೧. ಶ್ರೀಮತಿ ಹೆಚ್.ಎಸ್., ಸ್ತ್ರೀವಾದ: ತಾತ್ವಿಕತೆ, ಪುಟ–೩೨೭.

೨. ನಾಗಮಣಿ ಎಸ್.ರಾವ್, ಸ್ತ್ರೀಪಥ, ಪುಟ–೩೭

೩. ಇಂದಿರಾ ಎಂ.ಎಸ್., ಮಹಿಳೆ ಮತ್ತು ಸವಾಲು, ಪುಟ–೨೮

೪. ಸಾ.ರಾ.ಅಬೂಬಕ್ಕರ್, ಅನಾವರಣ, ಪುಟ–೭೨

೫. ಸಿ.ಜಿ.ಮಂಜುಳ, ವಿಶ್ವವನ್ನು ಮಹಿಳೆ ಕಣ್ಣಲ್ಲಿ ನೋಡುವುದೆಂದು, ೧೦.೦೧.೨೦೧೭

೬. ಮಹಿಳಾ ಜಾಗೃತಿ ವೇದಿಕೆ, ಸೌಂದರ್ಯ ಸ್ಪರ್ಧೆ ಮಾರಾಟಕ್ಕೆ ನೂರೆಂಟು ಮಾರ್ಗ, ಪುಟ–೮

೭. ನೀಲಾ ಕೆ., ನೆಲದ ಪಿಸು ಮಾತು, ಪುಟ–೨೭

೮. ನೀಲಾ ಕೆ., ಬಾಳಕೌದಿ, ಪುಟ–೨೮

೯. ನೀಲಾ ಕೆ., ನೆಲದ ಪಿಸುಮಾತು, ಪುಟ–೨೧

೧೦. ಚಂದ್ರಮತಿ ಸೋಂದಾ., ಆಟಕ್ಕೂ ಉಂಟು ಲೆಕ್ಕಕ್ಕೂ ಉಂಟು, ಪುಟ–೩೨

೧೧. ಎಂ.ಎಸ್.ಆಶಾದೇವಿ, ಸ್ತ್ರೀ ಮತವನುತ್ತರಿಸಲಾಗದೆ?, ಪುಟ-೮೮

೧೨. ಎನ್.ಗಾಯಿತ್ರಿ, ಸಂಚಲ, ಪುಟ-೨೧೮

೧೩. ನೀಲಾ ಕೆ., ನೆಲದ ಪಿಸುಮಾತು, ಪುಟ-೪೩

೧೪. ಚಂದ್ರಮತಿ ಸೋಂದಾ., ಆಟಕ್ಕೂ ಉಂಟು ಲೆಕ್ಕಕ್ಕೂ ಉಂಟು, ಪುಟ-೩೧

೧೫. ನೀಲಾ ಕೆ., ಬದುಕು ಬಂದೀಖಾನೆ, ಪುಟ-೧೪

೧೬. ಹೇಮಲತಾ ಹೆಚ್.ಎಂ., ಮಹಿಳಾ ಅಧ್ಯಯನ-೩, ಪುಟ-೧೨೦

೧೭. ನಾಗವೇಣಿ ಹೆಚ್., ವಸುಂದರೆಯ ಗ್ಯಾನ, ಪುಟ-೬೫

೧೮. ನಾಗವೇಣಿ ಹೆಚ್., ವಸುಂದರೆಯ ಗ್ಯಾನ, ಪುಟ-೬೫

೧೯. ಧರಣಿದೇವಿ ಮಾಲಗತ್ತಿ, ಸಾಹಿತ್ಯ ವಾಣಿಜ್ಯ ಮತ್ತು ಮಹಿಳಾ ಪ್ರಜ್ಞೆ, ಪುಟ-೫೬

೨೦. ಅದೇ, ಪುಟ-೫೭

ಅಧ್ಯಾಯ - ಎಂಟು

ಮಹಿಳಾ ವಿಚಾರ ಸಾಹಿತ್ಯ : ಸಿನಿಮಾ–ಧಾರಾವಾಹಿ–ಜಾಹೀರಾತು

ಅಧ್ಯಾಯ - ಎಂಟು

ಮಹಿಳಾ ವಿಚಾರ ಸಾಹಿತ್ಯ : ಸಿನಿಮಾ-ಧಾರಾವಾಹಿ-ಜಾಹೀರಾತು

ಭಾರತದಂತ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಜಾಗತೀಕರಣದ ಬಲೆಯೊಳಗೆ ಸಿಲುಕಿ ಅಭಿವೃದ್ಧಿ ಹೊಂದಿದೆ ಎಂದು ಕೆಲವರು ವಾದಿಸಿದರೆ ಇನ್ನೂ ಹಲವರು ಈ ಜಾಗತೀಕರಣದ ಕ್ರೂರ ಒಡೆತಕ್ಕೆ ಕೆಳವರ್ಗದ ಅಥವಾ ಕೂಲಿಕಾರ್ಮಿಕರು, ರೈತರು, ಮಹಿಳೆಯರು ಹೇಗೆ ನಲುಗಿ ಹೋಗುತ್ತಿದ್ದಾರೆ. ಮತ್ತು ಅವರ ಹೇಗೆ ಜೀವನ ಪದ್ಧತಿಯು ಬೀದಿಗೆ ಬೀಳುತ್ತಿದೆ ಎಂಬುದನ್ನು ಚರ್ಚಿಸಲಾಗಿದೆ. ಕನ್ನಡ ಮಹಿಳಾ ವಿಚಾರ ಸಾಹಿತ್ಯ ಸಂದರ್ಭದಲ್ಲಿ ಈ ಜಾಗತೀಕರಣದ ಮಾರುಕಟ್ಟೆ ಸಂಸ್ಕೃತಿಯ ಪರಿಣಾಮವನ್ನು ಹಲವಾರು ಲೇಖಕಿಯರು ಚರ್ಚಿಸಿದ್ದಾರೆ. ವಿಜಯಾದಬ್ಬೆ, ಬಿ.ಎನ್.ಸುಮಿತ್ರಾಬಾಯಿ, ಕೆ.ನೀಲಾ, ಸಾ.ರಾ.ಅಬೂಬಕ್ಕರ್, ಆರ್. ಪೂರ್ಣಿಮಾ, ಎನ್. ಗಾಯಿತ್ರಿ, ಎಂ.ಎಸ್.ಆಶಾದೇವಿ, ಕೆ.ಷರೀಫಾ, ವಿಜಯಾ ಹೀಗೆ ಅನೇಕರು ಇದರ ಕುರಿತಾಗಿ ಅಭಿವ್ಯಕ್ತಿಸಿದ್ದಾರೆ.

ಜಾಗತೀಕ ಸಂದರ್ಭದಲ್ಲಿ ಬೆಳೆಯುತ್ತಿರುವ ನಗರೀಕರಣದಿಂದಾಗಿ ಜಾಹೀರಾತಿನ ಸಂಖ್ಯೆ ದಿನೆ ದಿನೆ ಹೆಚ್ಚುತ್ತಲೇ ಇದೆ. ಜಾಹೀರಾತು ನೀಡಲು ಮಹಿಳೆಯನ್ನು ಮುಖ್ಯವಸ್ತುವನ್ನಾಗಿ ನೋಡಲಾಗುತ್ತಿದೆ. ಸೆಲೆಬ್ರಿಟಿ ಎಂಬ ಪದನಾಮದಡಿ ತಾವು ಏನು ಮಾಡಿದರೂ ಜಗತ್ತು ಒಪ್ಪಿಕೊಳ್ಳುತ್ತದೆ ಎಂಬ ಭ್ರಮೆಯಲ್ಲಿ ಜಾಹೀರಾತಿನ ಮುಖೇನ ಮಹಿಳೆಯನ್ನು ಇನ್ನಷ್ಟು ಶೋಷಣೆಗೆ ಒಳಗು ಮಾಡಲಾಗುತ್ತಿದೆ. ಧಾರಾವಾಹಿಗಳಲ್ಲಿ ಮಹಿಳೆಯನ್ನ ಸಂಪ್ರದಾಯದ ಹೆಸರಿನಲ್ಲಿ ನೇಮನಿಷ್ಠೆ ಎಂಬ ಹೇರಿಕೆಯ ನೆಲೆಯಲ್ಲಿಯೇ ಚಿತ್ರಿಸಲಾಗುತ್ತದೆ. ಪಿತೃ ಸಂಸ್ಕೃತಿಯನ್ನು ಯತಾವತ್ತಾಗಿ ಪಾಲಿಸಿಕೊಂಡೇ ಬರುವಂತೆ ಮತ್ತು ಧರ್ಮ, ದೇವರುಗಳ ಆಚರಣೆಯನ್ನು ವಿಜೃಂಭಿಸುವ ಹಾಗೂ ಮಹಿಳೆಯನ್ನ ಆ ಕ್ರೂರ ಆಚರಣೆಗೆ ಬಲಿಯಾಗುವಂತಹ ಚಿತ್ರವನ್ನೇ ಹೆಚ್ಚಾಗಿ ತೋರಿಸಲಾಗುತ್ತದೆ. ಹೆಣ್ಣಿಗೆ ಹೆಣ್ಣೆ ಶತೃ ಎಂಬ ಮಾತನ್ನು ಪುಷ್ಟೀಕರಿಸುವಂತೆ ಮಾಡಲು ಮಹಿಳೆಯರ ವಿರುದ್ಧ ಮಹಿಳೆಯರೇ ಶತೃ ಎನ್ನುವಂತೆ ಒತ್ತಿ ಒತ್ತಿ ತೋರಿಸಲಾಗುತ್ತದೆ.

ಸಿನೆಮಾಗಳಲ್ಲಿ ಹೆಣ್ಣು ಎಷ್ಟೇ ಬಲಿಷ್ಟಳಾಗಿರಲಿ ಅಥವಾ ಉನ್ನತವಾದ ಉದ್ಯೋಗದಲ್ಲಿರಲಿ ಪುರುಷನ ಮುಂದೆ ಆಕೆ ಕೇವಲ ಹೆಣ್ಣಾಗಿ ಕಾಣುತ್ತಾಳೆ. ಎಲ್ಲದಕ್ಕೂ ಮಹಿಳೆಯೇ ಸೋಲನ್ನ ಒಪ್ಪಿಕೊಳ್ಳುವಂತಹ ಅಥವಾ ಹೆಣ್ಣು ಯಾವಾಗಲೂ ಪುರುಷನ ಅಧೀನಳಾಗಿಯೇ ಇರಬೇಕು ಎಂಬುದನ್ನ ತೋರಿಸಲಾಗುತ್ತದೆ.

ಮಹಿಳೆಗೆ ಸಂಬಂಧಿಸಿದ ಜಾಹೀರಾತಿನಲ್ಲಾಗಲಿ ಪುರುಷರಿಗೆ ಸಂಬಂಧಿಸಿದ ಜಾಹೀರಾತಾಗಲಿ ಎಲ್ಲದಕ್ಕೂ ಹೆಣ್ಣು ಮುಖ್ಯ ಪಾತ್ರವಹಿಸುವಂತೆ ನೋಡಿಕೊಳ್ಳಲಾಗುತ್ತದೆ. ಗಂಡಸರು ಉಪಯೋಗಿಸುವ ಸಿಗರೇಟ್, ಮಧ್ಯಪಾನ, ಶೇವಿಂಗ್ ಸೆಟ್, ಸೆಂಟ್ ಇತ್ಯಾದಿ ವಸ್ತುಗಳನ್ನು ತೋರಿಸಲು ಅಲ್ಲಿ ಅರೆನಗ್ನಳಾದ ಒಬ್ಬ ಮಹಿಳೆ ಇದ್ದೇ ಇರುತ್ತಾಳೆ. ಮಹಿಳೆಯನ್ನು ಅರೆಬರೆ ವಸ್ತ್ರವಿನ್ಯಾಸದೊಂದಿಗೆ ತೋರಿಸುವುದಲ್ಲದೇ ಆಕೆ ಯಾವಾಗಲೂ ಪುರುಷನ ದಾಸಳಾಗಿಯೇ ಅವನ ಮೈಗೆ ಅಂಟಿಕೊಂಡಿರುವಂತೆಯೆ ಚಿತ್ರಿಸುತ್ತಾರೆ. ಮಹಿಳೆ ಅಡುಗೆ ಮನೆಗೆ ಸೀಮಿತವಾದವಳು, ಮನೆವಾರ್ತೆಯ ಎಲ್ಲಾ ಕೆಲಸವನ್ನು ಒಬ್ಬಳೇ ನಿಭಾಯಿಸಿ ಅತ್ತೆ ಮತ್ತು ಮನೆಯ ಇತರೆ ಸದಸ್ಯರ ಮೆಚ್ಚುಗೆ ಪಾತ್ರಳಾಗುವವಳು ಎಂದು ಅವಳನ್ನು ಚಿತ್ರಿಸಲಾಗಿದೆ. ಉದಾಹರಣೆಗೆ ಯಾವುದೋ ಒಂದು ನೋವಿನ ಕ್ರೀಮ್ ಅಥವಾ ಔಷಧಿಯನ್ನು ತೋರಿಸುತ್ತಾರೆ ಅಂದುಕೊಳ್ಳೋಣ. ಮನೆಯ ತುಂಬೆಲ್ಲಾ ದೂಳು, ಕಸ, ಕಡ್ಡಿ, ರಾಶಿ ರಾಶಿ ತೊಳೆಯ ಬೇಕಾಗಿರುವ ಬಟ್ಟೆಗಳು ಅಲ್ಲಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿರುತ್ತವೆ. ಹೊರಗೆ ದುಡಿದು ಬಂದ ಆ ಹೆಣ್ಣುಮಗಳು ಮನೆಯೊಳಗಿನ ಕೆಲಸವನ್ನು ತಾನೊಬ್ಬಳೆ ನಿಭಾಯಿಸಬೇಕಾಗಿರುವುದರಿಂದ ಅವಳು ಇನ್ನಷ್ಟು ಕುಗ್ಗುತ್ತಾಳೆ.

ಆದರೂ ತನ್ನ ಕೆಲಸವನ್ನು ನಿಭಾಯಿಸಲು ಆ ಎಲ್ಲಾ ಕೆಲಸವನ್ನು ಮಾಡುವ ಸಂದರ್ಭದಲ್ಲಿ ಆಕೆಗೆ ಸೊಂಟ ಅಥವಾ ಬೆನ್ನು ನೋವು ಕಾಣಿಸಿಕೊಳ್ಳುವುದು. ತಕ್ಷಣ 'ಮೂವ್' ಕ್ರೀಮ್ ಹಚ್ಚಿದ ಕ್ಷಣಕ್ಕೆ ನೋವೆಲ್ಲಾ ಒಂದು ನಿಮಿಷಕ್ಕೆ ಮಾಯವಾಗಿ ದಿನದ ಪೂರ್ತಿ ಕೆಲಸವನ್ನು ಐದೇ ನಿಮಿಷದಲ್ಲಿ ಮುಗಿಸಿ ಬಿಡುತ್ತಾಳೆ. ಮಹಿಳೆ ಎಲ್ಲಾ ಕೆಲಸವನ್ನು ಅಂದ್ರೆ ಮನೆಯ ಹೊರಗೆ ಒಳಗೆ ತಾನೊಬ್ಬಳೆ ನಿಭಾಯಿಸುವ, ಹಾಗೂ ಮತ್ತವಳಿಗೆ ಬೇರೆಯವರ ಸಹಾಯದಿಂದ ದೂರವಿಡುವ ದೃಶ್ಯಗಳನ್ನೇ ತೋರಿಸುತ್ತಾರೆ.

ಬಹಳ ಬೇಗ ಶೋಷಣೆಗೆ ಒಳಗಾಗುವ ಕ್ಷೇತ್ರವೆಂದರೆ ಅದು ಮಾಡೆಲಿಂಗ್. ಮಹಿಳೆಯು ತನಗೆ ಗೊತ್ತಿಲ್ಲದಂತೆಯೇ ತಾನಾಗಿಯೇ ಈ ಜಾಲದೊಳಗೆ ಸಿಕ್ಕಿ ಬೀಳುತ್ತಾಳೆ. ಮಾಡೆಲಿಂಗ್ ಮೂಲಕವಾಗಿ ಅವಳು ಜಾಹೀರಾತು ಕ್ಷೇತ್ರಕ್ಕೆ ಕಾಲಿಡುತ್ತಾಳೆ. ಅದಲ್ಲದೆಯೇ ಅವಳ ಸೌಂದರ್ಯವನ್ನು ತೋರಗೊಡಲು ಈ ಮಾಡೆಲಿಂಗ್ ಕ್ಷೇತ್ರವು ತನ್ನತ್ತ ಸೆಳೆದುಕೊಳ್ಳುತ್ತದೆ. ಇಂತಹ ರೂಪದರ್ಶಿಯರ ಮೂಲಕ ಕಂಪನಿಗಳು ತಮ್ಮ ಪ್ರಚಾರವನ್ನು ಕೈಗೊಳ್ಳುತ್ತವೆ. ಅವರ ಉತ್ಪನ್ನಗಳನ್ನು ಮಾರಾಟ ಮಾಡಿಕೊಳ್ಳಲು ಈ ಮಹಿಳೆಯರು ಅವರ ಕೈಗೊಂಬೆಯಾಗಿ ವರ್ತಿಸುತ್ತಾರೆ. ತಮ್ಮ ಜನಪ್ರಿಯತೆಗಾಗಿ ಮಾಡೆಲಿಂಗ್ ಮಹಿಳೆಯರು ಆಯಾ ಕಂಪನಿಗಳೊಂದಿಗೆ 'ಅಗ್ರಿಮೆಂಟ್' ಮಾಡಿಕೊಳ್ಳುತ್ತಾರೆ. ಕೆಲವೊಂದು ಇಂತಹ ಅಗ್ರಿಮೆಂಟ್‌ಗಳಿಂದ ಏನೆಲ್ಲಾ ತೊಂದರೆಗಳನ್ನು ಈ ಮಹಿಳೆಯರು

ಎದುರಿಸಬೇಕಾಗುತ್ತದೆ. ಜೊತೆಗೆ ಯಾವುದೇ ರೀತಿಯ ನಿರ್ಧಾರವನ್ನು ತೆಗೆದುಕೊಳ್ಳುವ ಸ್ವಾತಂತ್ರ್ಯವನ್ನು ಇವರು ಹೊಂದಿರುವುದಿಲ್ಲ. ಇದರಿಂದಾಗಿ ಹಲವಾರು ಸಂಕಷ್ಟಕ್ಕೆ ಸಿಲುಕಿ ನರಳುವ ಪರಿಸ್ಥಿತಿ ಇವರದು.

"ಒಬ್ಬ ನಟಿ ಒಂದು ಜಾಹೀರಾತು ಕಂಪನಿಯೊಡನೆ ರೂಪದರ್ಶಿಯಾಗಿ ಒಪ್ಪಂದ ಮಾಡಿಕೊಳ್ಳುತ್ತಾಳೆ. ಆ ಒಪ್ಪಂದದಂತೆ ಆಕೆ ಆ ಸಂಸ್ಥೆಯಲ್ಲಿರುವವರೆಗೆ ಮದುವೆಯಾಗಬಾರದು, ಮಕ್ಕಳನ್ನು ಹೆರಬಾರದು, ತೆಳ್ಳಗೆ, ಬಳ್ಳಿಯಂತೆ ಬಳುಕುವ ಮೈಮಾಟವನ್ನು ಕಾಪಾಡಿಕೊಳ್ಳಬೇಕು. ಆದರೆ ಆಕೆ ಮನೆಯವರ ಒತ್ತಾಯದಿಂದ ಆ ಸಂಸ್ಥೆಗೆ ತಿಳಿಸದೆ ಮದುವೆಯಾಗುತ್ತಾಳೆ. ಮಗುವಾಗುವುದನ್ನು ತಡೆಯಲು ಗಂಡನಿಂದ ತನ್ನ ದೂರವನ್ನು ಕಾಪಾಡಿಕೊಳ್ಳಲು ಹಗಲಿರುಳೂ ಪ್ರಯತ್ನಿಸುತ್ತಾಳೆ. ಮನೆಯ ಹಿರಿಯರು ಆಕೆಗೆ ಹುಟ್ಟುವ ಮಗುವಿಗಾಗಿ ಕಾತರಿಸುತ್ತಾರೆ.

ಕೊನೆಗೆ ಹೇಗೋ ಆಕೆ ಗರ್ಭಿಣಿಯಾದಾಗ ಗರ್ಭಪಾತ ಮಾಡಿಸಿಕೊಳ್ಳಲು ಕೂಡ ಪ್ರಯತ್ನಿಸುತ್ತಾಳೆ. ಜಾಹೀರಾತಿಗೆ ರೂಪದರ್ಶಿಯಾಗುವ ಮಹಿಳೆಯರ ಮೇಲೆ ಎಂತೆಂತಹ ಒತ್ತಡಗಳನ್ನು ಹೇರಲಾಗುತ್ತದೆ."[೧] ಇಂತಹ ಒಪ್ಪಂದಗಳಿಂದಾಗಿ ಎಷ್ಟೋ ಮಹಿಳೆಯರು ಒಂದಲ್ಲ ಒಂದು ರೀತಿಯಾದ ಶೋಷಣೆಗೆ ಒಳಗಾಗುತ್ತಾರೆ. ಹೊರ ಜಗತ್ತಿಗೆ ಸೆಲೆಬ್ರಿಸಟಿಯಾಗಿ ತಾವು ಖುಷಿಯನ್ನು ಹೊಂದಿದ್ದರೂ, ಕೌಟುಂಬಿಕವಾಗಿ ಒತ್ತಡ, ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ತಮ್ಮ ಜೀವನವನ್ನು ಸ್ವತಂತ್ರವಾಗಿ ಕಟ್ಟಿಕೊಳ್ಳಲು ಯಾವುದೋ ಕಂಪನಿಯ ಅಥವಾ ಸಂಸ್ಥೆಯ ಒಪ್ಪಂದಗಳಿಗೆ ಕಟ್ಟುಬಿದ್ದು ಅವರ ಕೌಟುಂಬಿಕ ಜೀವನದ ಕ್ಷಣಗಳನ್ನೇ ಮರೆಯಬೇಕಾದಂತಹ ಪರಿಸ್ಥಿತಿಗೆ ತಲುಪಿದ್ದಾರೆ.

ಆಧುನಿಕ ಕಾಲದ ಸಂದರ್ಭದಲ್ಲಿ ಮಹಿಳೆಯ ಮೇಲೆ ನಡೆಯುತ್ತಿರುವ ಶೋಷಣೆಯು ಬದಲಾದ ಸ್ವರೂಪದಲ್ಲಿ ಮುಂದುವರೆದಿದೆ ಎನ್ನುವುದಕ್ಕೆ ಎಂ.ಎಸ್.ಆಶಾದೇವಿಯವರು ಹೀಗೆ ವಿವರಿಸಿದ್ದಾರೆ. "ಕೆರೆಗೆಹಾರ ಕಥೆಯ ಪುನರ್ ನಿರ್ಮಾಣ ಕಲಾಕೃತಿಯೊಂದಿದೆ. ಬಾತ್‌ಟಬ್ಬಿನ ತುಂಬ ನೀರು, ಆ ನೀರಿನ ತುಂಬ ತುಂಬಿಕೊಂಡಿರುವ ಹೂವಿನ ದಳಗಳು, ಆಕರ್ಷಕವಾಗಿ ಕಾಣಿಸುತ್ತಿರುವ ಆ ಟಬ್ಬಿನ ಕಡೆಗೆ ಮಹಿಳೆಯೊಬ್ಬಳು ಸ್ವ ಇಚ್ಛೆಯಿಂದಲೆಂಬಂತೆಯೂ ಅದರ ಸೆಳೆತಕ್ಕೆ ಒಳಗಾದವಳೆಂಬಂತೆಯೂ ತಾನೇ ಅದರ ಕಡೆಗೆ ಚಲಿಸುತ್ತಾಳೆ. ಆ ಕಾಲದ ಭಾಗೀರತಿ ಇದ್ದಾಂಗ ಇರಬೇಕು ಎನ್ನುವ ಪಿತೃಪ್ರಧಾನ ಮೌಲ್ಯ ವ್ಯವಸ್ಥೆಯ ಬಲಿಪಶುವಂತೆ ಕೆರೆಗೆ ಹಾರಗಳಾಗುತ್ತಿದ್ದಾರೆ. ಆದರೆ ಈ ಮೇಲ್ನೋಟಕ್ಕೆ ಶೋಷಣೆಯ ರೂಪದಲ್ಲಿ ಕಾಣಿಸಿಕೊಳ್ಳುವುದಿಲ್ಲ. ವಿದ್ಯಾಭ್ಯಾಸ, ಆರ್ಥಿಕ ಸ್ವಾತಂತ್ರ್ಯ ಮೊದಲಾದ ಬದಲಾಣೆಯ ಮತ್ತು ಸ್ವಾಯತ್ತತೆಯ ಛದ್ಮವೇಶಗಳಲ್ಲಿ ಕಾಣಿಸಿಕೊಳ್ಳುತ್ತದೆ. ಅವಳ ಕೌಟುಂಬಿಕ ವ್ಯಕ್ತಿತ್ವ ಎಂದಿನಂತೆಯೇ ಈಗಲೂ ಮುಂದುವರಿದಿದೆ."[೨] ಮಹಿಳೆ ಎಷ್ಟೇ ವಿದ್ಯಾವಂತಳಾದರು ಕೂಡ ಸಮಾಜದಲ್ಲಿ ಒಂದಿಲ್ಲೊಂದು ರೀತಿಯಲ್ಲಿ ಶೋಷಣೆಗೆ ಒಳಗಾಗುತ್ತಲೇ ಇದ್ದಾಳೆ. ಕುಟುಂಬದೊಳಗಿನ ಸಮಸ್ಯೆಯಲ್ಲದೆ ಹೊರ ಜಗತ್ತಿನಲ್ಲಿ ಹಳೆಯ ಮೌಲ್ಯವನ್ನೇ ಒಳಗೊಂಡಿರುವ ಮತ್ತು ಹೊಸ ರೂಪ ಪಡೆದುಕೊಂಡಿರುವ ಹಾಗೂ ಹಳೆಯ

ಮೌಲ್ಯವನ್ನು ಮುಂದುವರಿಸಿಕೊಂಡು ಬರಲಾಗಿರುವ ಮಾದರಿಯಲ್ಲಿ ಆಕೆಯನ್ನು ಇನ್ನಷ್ಟು ಶೋಷಿಸಲಾಗುತ್ತಿದೆ. ಜೊತೆಗೆ ಇದರ ಹಿಂದೆ ಯಾರ ಒತ್ತಾಯವು ಇಲ್ಲ, ಅವಳೆ ತನ್ನ ಸ್ವ ಇಚ್ಛೆಯಿಂದಲೆ ಒಪ್ಪಿಕೊಂಡಿದ್ದಾಳೆ ಎಂಬಂತೆ ನಂಬಿಸಲಾಗುತ್ತಿದೆ.

ಎಲ್ಲದಕ್ಕೂ ಒಂದೇ ಕಾರಣವನ್ನು ಹೇಳುತ್ತಾ ಪುರುಷ ಪ್ರಧಾನ ಸಮಾಜವನ್ನು ಆರೋಪಿಸುವುದಕ್ಕಿಂತ ಹೊಸ ಮಾದರಿಯಲ್ಲಿ ಅಥವಾ ಬೇರೊಂದು ಭಿನ್ನ ಮಾರ್ಗದಿಂದ ಇದನ್ನು ವಿಶ್ಲೇಷಣೆ ಮಾಡುವುದಾದರೆ, ಜಾಹೀರಾತು ಅಥವಾ ಮಾಡೆಲಿಂಗ್‌ನಲ್ಲಿ ಮಹಿಳೆಗೆ ಶೋಷಣೆಯಾಗುತ್ತಿದೆ. ಎಂಬುದನ್ನು ಹೇಳುವಾಗ ಒಂದು ಸಲ ಯೋಚಿಸಬಹುದು. ಮಹಿಳೆ ಎಲ್ಲಕ್ಕೂ ಒಪ್ಪಿಯೇ ತಾನು ಆ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಾಳೆ. ಜಾಹೀರಾತು ಕ್ಷೇತ್ರದಲ್ಲಿ ಹೆಚ್ಚಾಗಿ ಮೇಲ್ವರ್ಗದ ಅಥವಾ ಹಣವಂತ ಕುಟುಂಬದಿಂದ ಬಂದ ಮಹಿಳೆಯರೇ ಇಂತಹ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವವರು. ಅಪವಾದವೆಂಬಂತೆ ಕೆಲವರಿರಬಹುದು. ಪುರುಷ ಸಮಾಜವು ತನ್ನ ನಿರ್ಧಾರವನ್ನೇ ಮಹಿಳೆಯರ ಮೇಲೆ ಹೇರಿರುವುದನ್ನೇ ನಾವು ಅದೇ ಸರಿ ಎಂದು ಒಪ್ಪಿ ಅವರು ಮಾಡುತ್ತಿರುವುದು ತಪ್ಪು ಎಂಬುದಾಗಿ ಒಂದೇ ನೆಲೆಯಲ್ಲಿ ಆಲೋಚನೆ ಮಾಡಿ ವಿರೋಧಿಸಲಾಗುತ್ತದೆ.

"ಪುರಷ 'ತನ್ನ ಹೆಣ್ಣು' ಪ್ರದರ್ಶನಕ್ಕೆ ಬಂದರೆ ಒಪ್ಪಲಾರ. ತನ್ನ ಸೌಂದರ್ಯ ಇತರರಿಗಲ್ಲ. ತನ್ನದು ಮಾತ್ರ ಆಗಬೇಕೆಂದು ಅಪೇಕ್ಷೆಯುಳ್ಳವ. ಅದನ್ನೆ ನಾವೂ ಒಪ್ಪಿಕೊಂಡು ಹೆಣ್ಣಿನ ಸೌಂದರ್ಯ ಪ್ರದರ್ಶನವಾಗುತ್ತಿದೆ ಎಂಬ ತಕರಾರು ಎತ್ತುತ್ತಿದ್ದೇವೆ. ಹೆಣ್ಣಿನಲ್ಲಿ ಇರುವ ಅಮೂಲ್ಯವಾದ ಈ ಆಕರ್ಷಣೆಯನ್ನು ತನ್ನದೇ ಆದ ರೀತಿಯಲ್ಲಿ ಗೌಪ್ಯವಾಗಿ ಇಡಲು ಅಸಹ್ಯ, ಅಶ್ಲೀಲ ಎಂದು ನಂಬಿಸುತ್ತಿದ್ದಾನೆ. ಅದನ್ನ ಒಪ್ಪಿಕೊಂಡೇ ನಮ್ಮ ಮಾತು, ಚಿಂತನೆ ಸಾಗಿದೆ ಅಲ್ಲವೆ?

ಹಾಗೆ ಹೇಳುವ ಪುರುಷನಿಗೆ ಇರುವ ಆತಂಕ ತನ್ನ ಬಗ್ಗೆ ತನಗೇ ನಂಬಿಕೆ ಇಲ್ಲದಿರುವುದು ಮತ್ತು ಆತನ ಸಂಯಮಕ್ಕೆ ಧಕ್ಕೆ ಎಂಬುದು. ಅಂತೇ ಆತ ಎಲ್ಲ ನೆಲೆಯಲ್ಲೂ ಮುಖ್ಯವಾಗಿ ಧಾರ್ಮಿಕ ನೆಲೆಯಲ್ಲಿ, ತತ್ವಗಳ ನೆಲೆಯಲ್ಲಿ, ಮೋಕ್ಷದ ನೆಲೆಯಲ್ಲಿ, ಆತನ ನಡೆಗೆ ಹೆಣ್ಣು ತಡೆ ಎಂಬ ಭಾವನೆ. ಇಲ್ಲೆಲ್ಲ ಆಕೆಯನ್ನು ದೂರ ಇಡಲು ಕಾರಣ ಆಕೆಯ ಆಕರ್ಷಣೆಯಿಂದ ಆತ ದೂರ ಇರಲಾರ. ಆತನ ನಿಗ್ರಹ ಶಕ್ತಿಗಿರುವ ಮಿತಿಗಳವು. ಆತ ಆ ಕಾರಣಕ್ಕಾಗೆ ಹಾಕಿದ ಕೆಲವು ನಿಯಮಗಳು ಮತ್ತು ತನ್ನ ಸ್ವತ್ತಾದ ಸೌಂದರ್ಯ ಇತರರ ಪಾಲಿಗೆ ಹೋಗಬಾರದೆಂಬುದು. ಇಂಥ ಅನೇಕ ಸ್ವಂತ ಕಾರಣಗಳ ಹಿನ್ನೆಲೆಯಲ್ಲಿ ಬಲು ನಾಜೂಕಾಗಿ ಹೆಣ್ಣಿನ ಮೇಲೆ ನಿರ್ಬಂಧ ಹೇರಿದ. ಸೌಂದರ್ಯದ ಬಗ್ಗೆ ಆತನದೇ ಚಿಂತನೆಯನ್ನು, ಆತ ಅಸಹ್ಯಕ್ಕೆ ಕೊಟ್ಟ ವ್ಯಾಖ್ಯಾನವನ್ನು ಒಪ್ಪಿದ ಮಹಿಳೆ ಅದನ್ನೇ ಆಧರಿಸಿ ಮಾತನಾಡುತ್ತಿದ್ದಾಳೆ. ಅದನ್ನ ಮೀರಿ ತನ್ನ ಮನಸ್ಸಿನಾಳವನ್ನು ಹೊಕ್ಕು ನೋಡಿದರೆ ಪ್ರತಿ ಕ್ಷಣದ ತನ್ನ ವರ್ತನೆಯ ನೆಲೆಯಲ್ಲೂ ಕೊಂಚಮಟ್ಟಿಗಾದರೂ ತನ್ನೊಳಗಿರುವ ಆಕರ್ಷಿಸುವ ಗುಣವನ್ನು ಗುರುತಿಸಬೇಕಾಗಿದೆ. ಇದು ಕೆಲವರಲ್ಲಿ ಹಿತಮಿತವಾದರೆ ಹಲವರಲ್ಲಿ ವಿಜೃಂಭಿಸಿದೆ. ಇಂಥ ಪ್ರವೃತ್ತಿಯಲ್ಲಿ ಹೆಣ್ಣು ತನ್ನನ್ನು ಪ್ರಕಟಿಸಿಕೊಳ್ಳಲು ಸಮೂಹ

ಮಾಧ್ಯಮದಲ್ಲಿ ಹೆಚ್ಚು ಅವಕಾಶವಿದೆ. ಒಂದೆರೆಡು ಅಪವಾದಗಳು ಇರಬಹುದಾದರೂ ಆಕೆ ಒಪ್ಪಿಯೇ ನಿರ್ವಹಿಸುತ್ತಿದ್ದಾಳೆಂದು ಹೇಳಬಹುದಾಗಿದೆ. ಶೋಷಣೆ ಎನ್ನುವುದಕ್ಕಿಂತ ಪುರುಷ ಹೇಗೆ ತನ್ನ 'ಮಿತಿ'ಗಳನ್ನೇ ಹೆಗ್ಗಳಿಕೆ ಮಾಡಿಕೊಳ್ಳಬಲ್ಲನೋ ಹಾಗೆ ಆತನಿಗಿಂತ ಹೆಚ್ಚಿನ ಸಹನೆ, ಕಷ್ಟ ಸಹಿಷ್ಣುತೆ, ಸಾಧನೆ ಸಾಧ್ಯವಿರುವ ಹೆಣ್ಣು ಅದನ್ನೇ ಹೆಗ್ಗಳಿಕೆಯಾಗಿ ಹೇಳಿಕೊಳ್ಳುತ್ತಿಲ್ಲ. ಅಲ್ಲಿ ಆಕೆಗೆ ನಾಚಿಕೆ ಅಪಮಾನಗಳೆಂಬ ಸಂಕೋಲೆಗಳಿವೆ. ಅದು ಬಹುಕಾಲದಿಂದ ನಂಬಿಬಂದ ನಮ್ಮದಾಗಿಸಿಕೊಂಡ ಕೆಲವು ಮೌಲ್ಯಗಳ ಪರಿಣಾಮ. ಅದನ್ನ ಮೀರಿ ನಿಲ್ಲಬಲ್ಲ ಶಕ್ತಿ ಕೆಲವರಿಗೆ ಇದೆ. ಅದನ್ನ ಅಪಮಾನ ಅವಹೇಳನಕರ ಎನ್ನುವುದಕ್ಕಿಂತ ಅದರ ಹಿಂದಿರುವ ಮನೋಧರ್ಮವನ್ನು ಅದರ ಮೂಲಕ ಸ್ತ್ರೀಯು ಪುರುಷ ವರ್ಗದ ಅಂತರಾಳದಲ್ಲಿ ಆಗಬಹುದಾದ ತರಂಗಗಳ ಬಗೆಯನ್ನು ಪ್ರಾಮಾಣಿಕವಾಗಿ ವಿಶ್ಲೇಷಿಸಬೇಕಾಗಿದೆ."[೩]

ಯಾವುದೇ ಪುರುಷ ತನ್ನ ಹೆಣ್ಣು (ಹೆಂಡತಿ ಅಥವಾ ಹುಡುಗಿ) ಇಂತಹ ಕ್ಷೇತ್ರದಲ್ಲಿ ಅರೆನಗ್ನ ಬಟ್ಟೆಧರಿಸಿಕೊಂಡು ಅವಳ ಸೌಂದರ್ಯವನ್ನ ಪ್ರದರ್ಶಿಸುವಾಗ ಅವನಿಗೆ ಅದು ಅಸಹ್ಯ, ಅಶ್ಲೀಲ ಎನಿಸುತ್ತದೆ. ಆದರೆ ಅವನೇ ಬೇರೆ ಹೆಣ್ಣಿನ ಮೇಲೆ ಈ ಪ್ರಯೋಗ ಮಾಡುವ ಸಂದರ್ಭದಲ್ಲಿ ಆಗ ಅದು ಸಹಜವಾಗಿ ಕಾಣುತ್ತದೆ. ಪುರುಷನು ತನ್ನ ಹೆಣ್ಣಿನ ಸೌಂದರ್ಯ ತನಗೆ ಮಾತ್ರ ಸೀಮಿತವಾದದ್ದು ಎಂದು ತನ್ನೊಳಗೆ ಕಟ್ಟಳೆ ಹಾಕಿಕೊಂಡಿದ್ದಕ್ಕಾಗಿ ಅವಳ ಸೌಂದರ್ಯ ಸ್ಪರ್ಧೆ ಅಸಹ್ಯ, ಅಶ್ಲೀಲವೆನಿಸುತ್ತದೆ. ಅವನದನ್ನು ವಿರೋಧಿಸುವ ಸಲುವಾಗಿ ಸಮಾಜಕ್ಕೆ ಅವನಲ್ಲಿರುವ ಅಭಿಪ್ರಾಯವನ್ನೇ ಸಮಾಜದಲ್ಲಿನ ಎಲ್ಲರ ಅಭಿಪ್ರಾಯವನ್ನಾಗಿಸಿ ಪ್ರತಿರೋಧ ಒಡ್ಡುವಂತೆ ಮಾಡುತ್ತಾನೆ ಎನ್ನುವುದು ಲೇಖಕಿಯ ಅಭಿಪ್ರಾಯವಾಗಿದೆ.

ಜಾಗತೀಕರಣದ ಈ ಸಮಯದಲ್ಲಿ ಹೆಣ್ಣನ್ನು ಸರಕು ಸಾಮಾಗ್ರಿಯನ್ನಾಗಿ ಮಾಡಹೊರಟಿರುವುದು ದುರಂತವೇ ಸರಿ. ಇದೇ ಕಾಲಕ್ಕೆ ಇನ್ನೊಂದು ಅತಿರೇಕವೆಂದರೆ ಇಂತಹ ಬಿಕ್ಕಟ್ಟಿನ ಪರಿಸ್ಥಿತಿಯ ಅರಿವಿದ್ದು ಅದರಿಂದ ಮುಕ್ತಳಾಗಬೇಕೆಂದು ಬಯಸುವ ಮಹಿಳೆ ಮತ್ತು ಅವಳ ಪ್ರಯತ್ನಗಳು ಗೇಲಿಗೊಳಪಡುತ್ತಿರುವುದರ ಜೊತೆಗೆ ವಿಕೃತವಾಗಿ ಚಿತ್ರಣಗೊಳ್ಳುತ್ತಿರುವುದು ಆತಂಕದ ಸಂಗತಿಯಾಗಿದೆ. ಇದಕ್ಕೆ ಪುಷ್ಟಿ ನೀಡುವಂತೆ ದೂರದರ್ಶನದ ವೀಕ್ಷಕರಿಗೆ ಲಭ್ಯವಾಗುತ್ತಿರುವುದು ಇಂತಹ ಮಾದರಿಗಳೇ ಆಗಿವೆ.

"ಇಂದು ಬಿತ್ತರಗೊಳ್ಳುತ್ತಿರುವ ಪ್ರಮುಖ ಸೀರಿಯಲ್‌ಗಳ ಹೆಸರುಗಳು ಮಹಿಳೆಯರ ಹೆಸರುಗಳನ್ನು ಆಧರಿಸಿವೆ. ಕಾವೇರಿ, ಭಾಗೀರಥಿ, ಅಂಬಿಕಾ, ದುರ್ಗಾ, ಕಾವ್ಯಾಂಜಲಿ, ಪಾರ್ವತಿ, ಚಂದ್ರಿಕಾ ಹೀಗೆ ಇನ್ನು ಮುಂತಾದವು. ಶೀರ್ಷಿಕೆ ಮಾತ್ರವಲ್ಲದೆ ಅವುಗಳು ಸ್ತ್ರೀ ಪಾತ್ರಗಳನ್ನು ಆಧರಿಸಿದ ಚಿತ್ರಣಗಳೇ. ಈ ಧೋರಣೆಯನ್ನು ಗಮನಿಸಿದಾಗ ನಮಗೆ ಕಳೆದ ಶತಮಾನದ ಆರಂಭದ ದಿನಗಳ ಸಾಮಾಜಿಕ ಕಾದಂಬರಿಗಳ ನೆನಪು ಬರುತ್ತದೆ. ಇಂದಿರಾ, ಇಂದಿರಾಬಾಯಿ, ವಾಗ್ದೇವಿ ಮುಂತಾದ ಶೀರ್ಷಿಕೆಯ ಕಾದಂಬರಿಗಳು ಹೆಣ್ಣಿನ ವಸ್ತುವಿನ ಸುತ್ತಲೇ ರಚಿತವಾದವು. ವಸಾಹತು ಸಂಸ್ಕೃತಿಯ ನಡುವಿನಲ್ಲಿ ಕಾದಂಬರಿ ರಚಿಸಿದ ಲೇಖಕರಿಗೆ ಸ್ತ್ರೀ ಸುಧಾರಣೆ ಮುಖ್ಯ

ಕಾಳಜಿಯಾಗಿತ್ತು. ಬ್ರಿಟೀಷರೆದುರಿಗೆ ತಮ್ಮ ಹೆಣ್ಣು ಮಕ್ಕಳನ್ನು ಉದ್ಧರಿಸುವ ತಮ್ಮ ಪ್ರಯತ್ನವನ್ನು ಸಾಬೀತುಗೊಳಿಸುವ ಅಗತ್ಯವೂ ಆ ಲೇಖಕರಿಗಿತ್ತು. ಅದೇನೆ ಇರಲಿ. ಆ ಲೇಖಕರಿಗೆ ಸ್ವಸ್ಥ ಸಮಾಜದ ನಿರ್ಮಾಣದ ಕಲ್ಪನೆ ಮುಂದಿತ್ತು. ಅದಕ್ಕೆ ಹೆಣ್ಣು, ಪ್ರಮುಖ ಆಸಕ್ತಿಯ ವಿಷಯವಾಗಿದ್ದಳು."[೪]

ಕೆಲವು ವರ್ಷಗಳಿಂದ ದೂರದರ್ಶನದಲ್ಲಿ ಪ್ರಸಾರವಾಗುತ್ತಿರುವ ಧಾರಾವಾಹಿಗಳನ್ನು ಗಮನಿಸಿದಾಗ ಅಲ್ಲಿ ಕಾಣಸಿಗುವುದು ಒಂದೇ ಮಾದರಿಯಾದ ವಸ್ತುಗಳು. ಒಂದು ಕಡೆಯಲ್ಲಿ ಸಂಕುಚಿತವಾದ ಮೌಲ್ಯಗಳ ವೈಭವೀಕರಣ, ಸಾಂಪ್ರದಾಯಿಕವಾಗಿ ಜಡಗಟ್ಟಿದ ಮೌಲ್ಯಗಳು ಮತ್ತೊಂದೆಡೆ ಇಂತಹ ಆಚರಣೆ ಮೌಲ್ಯಗಳ ವಿರುದ್ಧ ಹೋರಾಡಿ ಗೆಲ್ಲುವ ಹೋರಾಟಗಾರ್ತಿಯರ ಚಿತ್ರಣಗಳೂ ಜೊತೆಯಲ್ಲಿಯೇ ಮಂಡಿಸಲ್ಪಡುವ ಮಾದರಿಯಾಗಿವೆ.

ಆರಂಭದ ಶತಮಾನದಲ್ಲಿ ಮಹಿಳೆಯನ್ನ ಮುಖ್ಯವಾಹಿನಿಯಾಗಿಯೇ ಇಟ್ಟುಕೊಂಡು ರಚಿತವಾಗಿರುವ ಸಾಮಾಜಿಕ ಕಾದಂಬರಿಗಳಲ್ಲಿ ಹೆಣ್ಣನ್ನು ಸಂಕಷ್ಟದ ಸಂಕೋಲೆಯಿಂದ ಬಿಡಿಸಿ ಅವಳಿಗೆ ಉತ್ತಮವಾದ ಮತ್ತು ಉನ್ನತವಾದ ಬದುಕು ಕಟ್ಟಿಕೊಳ್ಳುವಂತಹ ವಸ್ತುಗಳಾಗಿದ್ದವು. ಆದರೆ ಇಂದಿನ ದಿನಮಾನಗಳಲ್ಲಿ ಬಿತ್ತರಗೊಳ್ಳುತ್ತಿರುವ ಧಾರಾವಾಹಿಗಳ ಹೆಸರುಗಳು ಮಹಿಳೆಯ ಹೆಸರಾಗಿವೆಯಾದರೂ ಅಲ್ಲಿ ಮೂಡಿ ಬರುವ ಚಿತ್ರಣಗಳು ಮಾತ್ರ ಆಕೆಯನ್ನು ಹತ್ತಿಕ್ಕುವಂತಹ, ಸಂಪ್ರದಾಯದೊಳಗೇ ಸಿಲುಕಿ ನರಳುವಂತೆ ಮಾಡಿ ಬಿಕ್ಕಟ್ಟಿಗೆ ಸಿಲುಕಿಸುವಂತಹ ಮೌಲ್ಯಗಳನ್ನೇ ತೋರಿಸಲಾಗುತ್ತಿರುವುದು ವಿಶಾದನೀಯ.

"ಹೆಣ್ಣಿನ ದೈಹಿಕ ಆಕರ್ಷಣೆ ಈ ಆಕರ್ಷಕತೆಯನ್ನು ಉಂಟುಮಾಡಿದರೆ, ಹೆಚ್ಚಿಸಿದರೆ ಅವನೇಕೆ ಬೇಡವೆಂದಾನು. ಸರಿ ವಸ್ತು ಯಾವುದೇ ಇರಲಿ ಅದರ ಪ್ರಚಾರಕ್ಕೆ ಒಬ್ಬ ಹೆಂಗಸು, ಕೂದಲಿನ ಸಂರಕ್ಷಣೆಗಾಗಿ ಬಳಸಿದರೆನ್ನಲಾದ ಒಂದು ಬ್ರ್ಯಾಂಡಿನ ಸ್ಪೆಷಲ್ ಸೀಗೆಕಾಯಿ ಪುಡಿಗಷ್ಟೇ ಅಲ್ಲದೆ ಶಾವಿಗೆಯ ಜಾಹೀರಾತಿಗೂ ಹೆಂಗಸಿನ ನಗ್ನವಾದ ಭುಜ, ಬೆನ್ನು ಬಳಕೆಯಾಗುತ್ತದೆ. ಶಾವಿಗೆ ರುಚಿಯ ಶ್ರೇಷ್ಠತೆಯನ್ನು ಈ ತೆರೆದ ಭುಜ, ಬೆನ್ನುಗಳ ಮೂಲಕ ತಿಳಿಯಬೇಕೆ? ಮೆಕರೊಲನಿಯದ್ದೋ, ಬಲ್ವಿನದೋ, ಯಾವ ಜಾಹೀರಾತಾದರೇನಂತೆ ಒಂದು ಹೆಣ್ಣಿನ ಮುಖ ಅಲ್ಲಿದ್ದರೆ ಸರಿ. ನಮ್ಮ ಸಾಬೂನುಗಳ ಜಾಹೀರಾತುಗಳಿಗೆ ಗಂಡಸರ ಮಕ್ಕಳ ಆರೋಗ್ಯಕರ ಚರ್ಮ ಕಣ್ಣಿಗೆ ಬೀಳುವುದಕ್ಕಿಂತಲೂ ಬೇಗ ಹೆಣ್ಣಿನ ಚರ್ಮವೇ ಬೀಳುವುದು ಆಶ್ಚರ್ಯದ ಸುದ್ದಿಯಲ್ಲ."[೫]

ಸೋಪು, ಶಾಂಪೂಗಳನ್ನು ಪ್ರಚಾರ ಮಾಡುವುದಕ್ಕೆ ಹೆಣ್ಣಿನ ಆಕರ್ಷಕವಾದ ಅರೆನಗ್ನ ದೇಹವನ್ನು ತೋರಿಸಲಾಗುತ್ತದೆ. ಅಡುಗೆಯ ವಸ್ತುಗಳನ್ನು ಅಥವಾ ಅದರ ರುಚಿಯನ್ನು ತೋರಿಸುವಾಗಲೂ ಹೆಣ್ಣಿನ ನಗ್ನ ಭುಜ, ಬೆನ್ನುಗಳ ಮೂಲಕ ರುಚಿ ತಿಳಿಯಬೇಕೆ? ಮಕ್ಕಳು ಅಥವಾ ಗಂಡಸರ ಆರೋಗ್ಯಕರ ಚರ್ಮ ಕಣ್ಣಿಗೆ ಬೀಳುವುದಕ್ಕಿಂತಲೂ ಹೆಣ್ಣಿನ ಚರ್ಮವೇ ಬೀಳುವುದು ಆಶ್ಚರ್ಯವೇನಲ್ಲ ಎಂಬುದನ್ನ ಇವರು ವ್ಯಕ್ತಪಡಿಸುತ್ತಾರೆ.

"ಒಳಹೊರ ಪ್ರಪಂಚದ ಬದುಕನ್ನು ತಾರತಮ್ಯವಿಲ್ಲದೆ ಸ್ತ್ರೀ ಪುರುಷರು ಹಂಚಿಕೊಳ್ಳುವುದನ್ನೂ ಮನುಷ್ಯ ಘನತೆಯೊಂದಿಗೆ ವಿಕಸಿತಳಾದ ಹೆಣ್ಣನ್ನೂ ನಮ್ಮ ಜಾಹೀರಾತುಗಳು ಕಾಣಿಸುವ ದಿನಗಳ ಕನಸನ್ನು ಕಾಣುವ ಕಣ್ಣುಗಳಿಗೆ ಈಗಿನ ಜಾಹೀರಾತು ಪ್ರಪಂಚದಲ್ಲಿ ಹೆಣ್ಣು ಬಳಕೆಯಾಗುತ್ತಿರುವ ರೀತಿಯ ಬಗ್ಗೆ ಅಭಿರುಚಿಯಿರುವುದು ವಸ್ತುಸ್ಥಿತಿ. ಆದರೆ ಈ ಉತ್ಥಾನ ಇಡೀ ಸಂಸ್ಕೃತಿಯ, ಮಹಿಳೆಯ ಉತ್ಥಾನವನ್ನು ಅವಲಂಬಿಸಿದೆ. ಜಾಹೀರಾತಿನ ಹಿಂದಿರುವ ವಸ್ತುಸ್ಥಿತಿಗೆ ಮನಸ್ಸನ್ನು ವಿಮುಖವಾಗಿಸದೆ ಹೆಣ್ಣನ್ನು ಘನತೆಯಿಂದ ಜಾಹೀರಾತುಗಳು ಬಳಸಿಕೊಳ್ಳುವುದು ಈ ಸಾಂಸ್ಕೃತಿಕ ಉತ್ಥಾನಕ್ಕೆ ಅಗತ್ಯವಲ್ಲವೆ?"[೬] ಮನುಷ್ಯ ವಿಕಸಿತವಾಗುತ್ತಾ ಬಂದಹಾಗೆ ಮಹಿಳೆಯೂ ಸಹ ವಿಕಸಿತಳಾಗಿದ್ದಾಳೆ. ಸಮಾಜದಲ್ಲಿ ಮಹಿಳೆಯನ್ನು ಗೌರವ ದೃಷ್ಟಿಯಿಂದ ನೋಡುವ ಮತ್ತು ಹಾಗೆ ಅವಳನ್ನು ನಡೆಸಿಕೊಳ್ಳುವಂತೆ ಕನಸು ಕಾಣುವ ದಿನಮಾನಗಳಲ್ಲಿ ನಾವಿದ್ದೇವೆ. ಆದರೆ ಜಾಹೀರಾತು ಪ್ರಪಂಚದಲ್ಲಿ ಹೆಣ್ಣು ಬಳಕೆಯಾಗುತ್ತಿರುವ ರೀತಿ ಬೇರೆಯೇ ಆಗಿದೆ. ಸಂಸ್ಕೃತಿಯ ನೆಪದಲ್ಲಿ ಮಹಿಳೆಯನ್ನು ನೋಡುವ ಮತ್ತು ನಡೆಸಿಕೊಳ್ಳುವ ರೀತಿಯು ಬದಲಾಗಬೇಕು ಎಂದು ಹಂಬಲಿಸುವಾಗ ಜಾಹೀರಾತಿನಲ್ಲಿ ಮಹಿಳೆಯನ್ನು ಬಳಸಿಕೊಳ್ಳುವ ರೀತಿ ಬದಲಾಗಬೇಕಿದೆ. ಅದರ ಹಿಂದಿರುವ ದೇಹ ಮೂಲದಿಂದ ಮತ್ತು ಸರಕು ಸಂಸ್ಕೃತಿಯ ನೆಲೆಯಿಂದ ನೋಡುವ ದೃಷ್ಟಿ ಬದಲಾದಾಗ ಮಾತ್ರ ಸಾಂಸ್ಕೃತಿಕ ಉತ್ಥಾನವಾಗುತ್ತದೆ.

ಜಾಹೀರಾತುಗಳಲ್ಲಿ ಮಹಿಳೆಯನ್ನು ಲೈಂಗಿಕ ವಸ್ತುವಾಗಿಯೆ ರೂಪು ತಳೆಯುವುದು ಕಂಡು ಬರುತ್ತದೆ. ಮಹಿಳೆಗೆ ಸಂಬಂಧಿಸದ ವಸ್ತುಗಳಿಗೂ ಮಹಿಳೆಯನ್ನೇ ಬಳಸಿ ತೋರಿಸಲಾಗುತ್ತದೆ. ಆ ವಸ್ತುವಿಗೂ ಮತ್ತು ಅವಳಿಗೂ ಸಂಬಂಧವೇ ಇರುವುದಿಲ್ಲ. ಆದರೂ ಅಲ್ಲಿ ಮಹಿಳೆಯ ಪಾತ್ರ ಅಗತ್ಯವೆಂಬಂತೆ ಚಿತ್ರಿಸಲಾಗುತ್ತಿದೆ. "ಬ್ಲೇಡ್ ಬಗ್ಗೆ ಇರುವ ಕೆಲವು ಜಾಹೀರಾತುಗಳನ್ನು ನೋಡೋಣ, ಬ್ಲೇಡ್ ಬಳಸುವುದರಲ್ಲಿ ಮಹಿಳೆಯ ಪಾತ್ರ ಇಲ್ಲವೇ ಇಲ್ಲ ಅಥವಾ ತೀರ ಗೌಣವಾದದ್ದು, ಆದರೆ ಬ್ಲೇಡನ್ನು ಬಳಸುವ ಪುರುಷನೊಂದಿಗೆ ಒಬ್ಬ ಸುಂದರಿಯನ್ನು ಜಾಹೀರಾತಿನಲ್ಲಿ ತರುವುದು ಬ್ಲೇಡ್ ತಯಾರಕರಿಗೆ ಮುಖ್ಯವಾಗಿ ಕಂಡುಬರುತ್ತದೆ. ಆತನ ಗಡ್ಡ ಮುಟ್ಟಿ ಓ.ಕೆ.ಹೇಳಬೇಕಾದವಳು ಹೆಣ್ಣು, ಇಂಥ ಅನವಶ್ಯಕ ರೀತಿಯಲ್ಲಿನ ಮಹಿಳಾ ಪ್ರಾತಿನಿಧ್ಯವು ಜನರಲ್ಲಿ ಮೂಡಿಸುವ ಭಾವವಾದರೂ ಏನು? ಎಂಬುದನ್ನು ಒಂದು ಹೆಜ್ಜೆ ಮುಂದೆ ಹೋಗಿ ಬಿಡುತ್ತದೆ. ಅನಗತ್ಯ ಕುಣಿತ ಹಾಗೂ ದೇಹವನ್ನು ತೋರಿಸುವ ಕ್ರಮ ಮುಂದೆ ಚಲನಚಿತ್ರರಂಗಕ್ಕೆ ರೂಪದರ್ಶಿಯರಿಗೆ ಭಡ್ತಿಯನ್ನು ನೀಡಿದರೂ ಮಾರುಕಟ್ಟೆ ಹಾಗೂ ಸಮಾಜದ ದೃಷ್ಟಿಯಲ್ಲಿ ಅಪ್ರಸ್ತುತವಾಗಿ ಇರುತ್ತದೆ. ಈ ರೀತಿಯ ಮಾರುಕಟ್ಟೆಯ ತಂತ್ರದಲ್ಲಿ ಇದೂ ಒಂದು ತಂತ್ರವಾಗಿ ಮಹಿಳೆಯನ್ನು ಬಳಸಿಕೊಳ್ಳುವ ರೀತಿಗೆ ಸಾಕ್ಷಿಯಾಗಿದೆ."[೭] ಮಹಿಳೆಗೆ ಸಂಬಂಧಿಸಿದ್ದಾಗಿರಲಿ, ಸಂಬಂಧಪಡದೇ ಆಗಿರಲಿ ಅವಳ ಸಹಭಾಗಿತ್ವ ಅಲ್ಲಿರಲೇ ಬೇಕೆಂಬ ತುಡಿತ ಈ ಜಾಹೀರಾತು, ಸಿನಿಮಾಗಳದ್ದು, ಮಹಿಳೆಯನ್ನು ಭೋಗದ ವಸ್ತುವಾಗಿಯೇ ನೋಡಿಕೊಂಡು ಬರಲಾಗಿದೆ ಅಲ್ಲದೇ ಹಾಗೆ ನಡೆಸಿಕೊಳ್ಳಲಾಗುತ್ತಿದೆ. ಹಣದ ಆಮಿಷ ಒಂದು ಕಡೆಯಾದರೆ, ಮತ್ತೊಂದೆಡೆ ಸೌಂದರ್ಯ, ಪ್ರಜ್ಞೆಯನ್ನು ಹೆಚ್ಚುಮಾಡುವ ನೆಪವನ್ನು ಬಹಳ ನಾಜೂಕಾಗಿ ಹೇರಲಾಗುತ್ತಿದೆ.

ಬ್ಲೇಡು ತನಗೆ ಅಗತ್ಯವಿಲ್ಲ ಎಂಬುದು ಗೊತ್ತಿದ್ದರೂ ಸಹ ಅಲ್ಲಿ ಮಹಿಳೆಯನ್ನು ಮುಖ್ಯ ಪಾತ್ರವನ್ನಾಗಿ ಚಿತ್ರಿಸಲಾಗುತ್ತಿದೆ. ಯಾವುದು ತನ್ನದಲ್ಲವೋ ಅದಕ್ಕೆ ಹೆಚ್ಚೆಚ್ಚು ಪ್ರಾಶಸ್ತ್ಯ ಕೊಡುವ ಮೂಲಕ ಅದನ್ನು ಎಲ್ಲರಿಗೂ ಅಗತ್ಯವಿದೆ ಎಂಬ ಭ್ರಮೆಯನ್ನು ಬಿತ್ತರಿಸಲಾಗುತ್ತಿದೆ. ಶೇವಿಂಗ್ ಮಾಡಿಕೊಂಡ ಮೇಲೆ ಒಂದು ಹೆಣ್ಣು ಆತನ ಗಡ್ಡವನ್ನು ಮುಟ್ಟಿ ಓಕೆ ಹೇಳಬೇಕಾದ ಭಾವವು ಎಂತಹ ಸಂದೇಶವನ್ನು ನೀಡಬಲ್ಲದು? ಒಂದು ರೀತಿಯಲ್ಲಿ ಮಾದಕತೆಯನ್ನು ಒತ್ತಿ ಹೇಳುವ ಮೂಲಕ ಮತ್ತೆ ಹೆಣ್ಣು ಭೋಗಕ್ಕೆ ಮಾತ್ರ ಎಂಬುದನ್ನು ಹೇಳಲಾಗುತ್ತಿದೆ. ಇದು ಜಾಹೀರಾತಿನ ಕಥೆಯಾದರೆ, ಧಾರಾವಾಹಿ ಮತ್ತು ಸಿನಿಮಾಗಳಲ್ಲಿ ಹೆಣ್ಣನ್ನು ಚಿತ್ರಿಸುವ ಬಗ್ಗೆ ಮತ್ತೊಂದು ರೀತಿಯದ್ದು.

ಎಲ್ಲಾ ಸಿನಿಮಾಗಳಲ್ಲಿ ಮಹಿಳೆ(ಹೆಣ್ಣು)ಯನ್ನು ಪುರುಷನ ಅಡಿಯಾಳಾಗಿಯೇ ಚಿತ್ರಿಸಲಾಗಿದೆ. ಹೆಣ್ಣು ಎಷ್ಟೇ ಧೈರ್ಯವಂತೆ, ಗಟ್ಟಿಗಿತ್ತಿಯಾಗಿದ್ದರೂ ಸಹ ಗಂಡಿನ ಶಕ್ತಿಯ ಮುಂದೆ ಅವಳೆಲ್ಲ ಸಾಮರ್ಥ್ಯವು ಹುಲ್ಲುಕಡ್ಡಿಯಾಗಿ ಬಿಡುವುದು. ಅವಳ ಯೋಚನಾ ಲಹರಿಯಲ್ಲಿಯೂ ಹೆಣ್ಣು ಸಣ್ಣವಳು(ಸಣ್ಣತನ) ಎಂಬಂತೆ ಬಿಂಬಿಸಲಾಗಿದೆ. ಭಾವನಾತ್ಮಕ ಸಂಬಂಧಗಳಿಗೆ ಹೆಚ್ಚು ಬೆಲೆಕೊಡುವ ಮನಸ್ಥಿತಿಯನ್ನು ಮುಂದಿಟ್ಟು ಆಕೆ ದುರ್ಬಲಳು, ತನ್ನ ಭಾವನಾತ್ಮಕ ಸಂಬಂಧಗಳನ್ನು ಉಳಿಸಿಕೊಳ್ಳಲು ಆಕೆ ಎಲ್ಲವನ್ನು ಬಿಟ್ಟುಕೊಡಲು ಸಿದ್ಧವಾಗುತ್ತಾಳೆ ಎಂಬುದನ್ನು ಸಾಕಷ್ಟು ಸಿನಿಮಾಗಳಲ್ಲಿ ತೋರಿಸಲಾಗಿದೆ.

ಆಸ್ತಿಯ ಹಕ್ಕಿನ ವಿಷಯ ಬಂದಾಗಲೆಲ್ಲ ತನ್ನ ತವರು ಮನೆಯ ಸಂಬಂಧಗಳನ್ನು ಮುಂದಿಟ್ಟು ಆಕೆಯನ್ನು ಬೆದರಿಸುವುದು. ಇದರಿಂದ ಅವಳು ತನ್ನ ತವರು ಮನೆಯ ಸಂಬಂಧವನ್ನು ಕಡಿದುಕೊಳ್ಳಬಾರದೆಂದು ತನಗೆ ಸೇರಬೇಕಾದ ಹಣ, ಆಸ್ತಿ ಎಲ್ಲವನ್ನು ತನ್ನ ಅಣ್ಣ–ತಮ್ಮಂದಿರಿಗೆ ಬಿಟ್ಟುಕೊಟ್ಟು ದೊಡ್ಡ ಗುಣ ಉಳ್ಳವಳು, ಹೆಣ್ಣು ಆಸ್ತಿಯ ಹಕ್ಕನ್ನು ಕೇಳಬಾರದು ಎಂಬುದನ್ನ ಹೇಳಲಾಗುತ್ತದೆ. ಹೆಣ್ಣು ಆಸ್ತಿಯ ಒಡೆತನ ಹೊಂದಿದರೆ ಗಂಡಿನ ಅಹಂಕಾರಕ್ಕೆ ಧಕ್ಕೆಯಾಗುತ್ತದೆ. ಹೆಣ್ಣಿನ ಮುಂದೆ ಪುರುಷ ಸಮಾನವಾಗಿ ಬದುಕಲು ಇಚ್ಛಿಸಲಾರ. ಅವನು ಯಾವಾಗಲೂ ಹೆಣ್ಣು ತನ್ನ ಕಪಿಮುಷ್ಠಿಯಲ್ಲಿಯೇ ಇರಬೇಕೆಂದು ಬಯಸುವವನಾಗಿರುತ್ತಾನೆ.

"ನಾಯಕಿಯ ಪಾತ್ರದಲ್ಲಿ ಮಹಿಳೆ ಪುರುಷನಂತೆ ದೀರ್ಘಕಾಲ ಉಳಿಯಲು ಸಾಧ್ಯವಾಗುತ್ತಿಲ್ಲ. ಮುಖ್ಯವಾಗಿ ಚಲನ ಚಿತ್ರ ಕ್ಷೇತ್ರವು ಮಹಿಳೆಯ ದೇಹವನ್ನು ಮಾನ್ಯ ಮಾಡುವುದರಿಂದ ಕಾಲಕಳೆದಂತೆ ದೇಹದಲ್ಲಾಗುವ ಬದಲಾವಣೆಗಳಿಂದಾಗಿ ಮಹಿಳೆ ನಾಯಕಿ ಪಟ್ಟದಿಂದ ಕೆಳಗಿಳಿಯಬೇಕಾಗುತ್ತದೆ. ಇವರ ಜಾಗದಲ್ಲಿ ಹದಿಹರೆಯದ ಬಾಲೆಯರನ್ನು ಚಿತ್ರರಂಗ ತರುತ್ತದೆ. ಸ್ತ್ರೀಯರಿಗೆ ಪ್ರಾಯ ಮಾತ್ರ ಮಾರುಕಟ್ಟೆಯನ್ನು ನೀಡಬಲ್ಲದು. ಆಕೆಯ ಅಭಿನಯ ಸಾಮರ್ಥ್ಯಕ್ಕಿಲ್ಲದ ಬೆಲೆ ದೇಹರಚನೆಗಿರುತ್ತದೆ. ಮಹಿಳೆಯನ್ನು ಒಬ್ಬ ಕಲಾವಿದೆ ಎಂದು ನೋಡುವುದಕ್ಕಿಂತ ಆಕೆಯ ಅಂಗಾಂಗ ರಚನೆ ಮತ್ತು ಸೌಂದರ್ಯವನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳಲಾಗುತ್ತಿದೆ. ಇಂತಹ ವರ್ಗದಿಂದಲೆ ಸೌಂದರ್ಯ ಸ್ಪರ್ಧೆಗಳು ಘೋಷಿಸಲ್ಪಡುತ್ತವೆ. ಸ್ತ್ರೀಯರ ಕಲಾ ಸಾಮರ್ಥ್ಯ ನಾಯಕ ನಟನೊಂದಿಗೆ ನರ್ತಿಸುವುದರಿಲ್ಲಿರುತ್ತದೆ. ಈ ನರ್ತನಗಳ ಮುಖ್ಯ ಉದ್ದೇಶ ವಾಣಿಜ್ಯೀಕರಣವಾಗಿದೆ."[೮] ಚಿತ್ರರಂಗ

ಮತ್ತು ವಾಣಿಜ್ಯೀಕರಣದ ನಡುವೆ ಮಹಿಳೆಯು ಸರಕಾಗಿ ಹೋಗಿದ್ದಾಳೆ. ಚಿತ್ರರಂಗದಲ್ಲಿ ಪ್ರತೀ ಹಂತದಲ್ಲಿಯೂ ಮಹಿಳೆಯನ್ನು ಸೌಂದರ್ಯದ ದೃಷ್ಟಿಯಿಂದಲೇ ಹೆಚ್ಚಾಗಿ ಬಳಸಿಕೊಳ್ಳಲಾಗಿದೆ. ಅವಳ ನಟನೆ ಕೌಶಲ್ಯಗಳು ಇದರ ಮುಂದೆ ಲೆಕ್ಕಕೇ ಇಲ್ಲದಂತಾಗಿದೆ. ನಾಯಕನ ಜೊತೆ ನಟಿಸುವಾಗ ಅವಳನ್ನು ಬೊಂಬೆಯ ರೂಪದಲ್ಲಿ ಅಥವಾ ಅವಳ ದೇಹ ರಚನೆಯೇ ಮುಖ್ಯ ಗುರಿಯಾಗಿರುತ್ತದೆ. ಮಹಿಳೆಯ ಅಂಗಾಂಗ ಸೌಷ್ಠವದ ಆಧಾರದ ಮೇಲೆ ಅವಳನ್ನ ಚಿತ್ರರಂಗದಲ್ಲಿ ಮಾನ್ಯಮಾಡಲಾಗುತ್ತದೆ. ಎಲ್ಲಾ ಕಾಲಕ್ಕೂ ಎಲ್ಲರಿಗೂ ಒಂದೇ ರೀತಿಯಾದಂತಹ ದೇಹರಚನೆಯನ್ನು ಹೊಂದಿರಲು ಸಾಧ್ಯವಿಲ್ಲ. ಅವರವರ ಆರೋಗ್ಯ, ಆಹಾರ, ಅವರುಗಳ ರೂಢಿ. ಈ ಎಲ್ಲದರ ಪರಿಸರ ಈ ಎಲ್ಲದರ ಆಧಾರ ಮೇಲೆ ಇರುವಂತಹದ್ದು. ಇವೆಲ್ಲವನ್ನೂ ಲೆಕ್ಕಿಸದೇ ಹೆಣ್ಣನ್ನು ದೇಹ ರಚನೆಯ ಮೂಲದಿಂದ ಅಳೆಯುತ್ತಿರುವುದು ಶೋಚನೀಯವೇ ಸರಿ. ಎಷ್ಟೋ ಪುರುಷರೂ ಮಹಿಳೆಯರಿಗಿಂತ ದುರ್ಬಲರಿದ್ದಾರೆ, ಹಲವು ಮಹಿಳೆಯರು ಪುರುಷರಿಗಿಂತ ಶಕ್ತಿಶಾಲಿಗಳೂ ಇದ್ದಾರೆ. ಅಂತಹವರನ್ನ ಈ ರಂಗವು ವ್ಯಂಗ್ಯಮಾಡಿ ಚಿತ್ರಿಸುವುದೇ ಹೆಚ್ಚು. ಕಲೆಗಿಂತ ಸೌಂದರ್ಯಕ್ಕೆ ಹೆಚ್ಚು ಬೆಲೆ ಕೊಡುವುದರಿಂದಾಗಿ ಮತ್ತಷ್ಟು ಶೋಷಣೆಯ ಕೂಪಕ್ಕೆ ತಳ್ಳಲಾಗುತ್ತಿದೆ.

ಸ್ವತಃ ನಟಿಯಾಗಿರುವ ವಿನಯಾ ಪ್ರಸಾದ ಅವರು ಚಲನಚಿತ್ರ ರಂಗದಲ್ಲಿ ಹೆಣ್ಣನ್ನು ಹೇಗೆ ಚಿತ್ರಿಸುತ್ತಾರೆ ಮತ್ತು ಪ್ರೇಕ್ಷಕರನ್ನು ಸೆಳೆಯುವ ರೀತಿಯನ್ನು ಅವರು ಹೇಳುತ್ತಾರೆ. "ಎರಡನೇ ವರ್ಷದ ಡಿಗ್ರಿ ಓದುತ್ತಿರುವ ಅನುಕೂಲವಂತ ಮನೆಯ ಹೆಣ್ಣು ಮಗಳು ಪ್ರೇಮ ವಿವಾಹ ಮಾಡಿಕೊಂಡು, ಪ್ರೇಕ್ಷಕರ ಅನುಕಂಪಗಳಿಸಲಿಕ್ಕಾಗಿ ಮನೆಮನೆಯ ಮುಸುರೆ ತಿಕ್ಕಿ ಪಾತ್ರೆ ತೊಳೆಯುವುದನ್ನು ನೋಡಿದಾಗ ನಮ್ಮ ಸಿನಿಮಾದಲ್ಲಿ ಹೆಣ್ಣಿನ ಸ್ಥಾನಕ್ಕೆ ಮಾನವಿದೆಯೇ? ಮಾನಕ್ಕೆ ಸ್ಥಾನವಿದೆಯೇ, ಅಂತ ಇನ್ನೊಮ್ಮೆ ಯೋಚಿಸಬೇಕಾಗುತ್ತದೆ. ಒಟ್ಟಿನಲ್ಲಿ ತಾನು ಆರ್ಥಿಕವಾಗಿ, ಮಾನಸಿಕವಾಗಿ, ಸ್ವತಂತ್ರವಾಗಿ ತನ್ನಿಚ್ಚೆಯಂತೆ ನಡೆಯಬಯಸುವ ಹೆಣ್ಣನ್ನು ಸಮಾಜದಲ್ಲಿ ಸಿನಿಮಾದಲ್ಲಿ ಎಲ್ಲಡೆ 'ಗಂಡುಬೀರಿ' ಅನ್ನುವ ಹಣೆ ಪಟ್ಟಿ ಹಚ್ಚಿಯೇ ನೋಡುತ್ತಾರೆ."[೯] ಚಲನಚಿತ್ರ ಮಾಧ್ಯಮವು ಅತೀ ವೇಗವಾಗಿ ಎಲ್ಲರನ್ನು ತಲುಪುವಂತಹ ಹಾಗೂ ಸಂಚಲನವನ್ನೇ ಉಂಟುಮಾಡುವಂತಹ ಒಂದು ಪ್ರಬಲ ಮಾಧ್ಯಮವಾಗಿದೆ. ಇಂತಹ ಮಾಧ್ಯಮವು ಎಷ್ಟೋ ಸಲ ಹುಸಿಯಾದಂತಹ ನಂಬಿಕೆಗಳನ್ನ ಪ್ರೇಕ್ಷಕರಿಗೆ ಕೊಟ್ಟಿದ್ದೇ ಹೆಚ್ಚು. ಕೆಲವು ಸಿನಿಮಾ ನೋಡಿ ಪ್ರೇರಣೆಗೊಂಡು ಸಾಮಾಜಿಕವಾಗಿ ಆಲೋಚಿಸಿ ಬದುಕಿನ ದಿಕ್ಕನ್ನ ಬದಲಾಯಿಸಿಕೊಂಡಂತಹ ನಿದರ್ಶನಗಳೂ ಇವೆ. ಉದಾಹರಣೆಗೆ ಬಂಗಾರದ ಮನುಷ್ಯ ಚಿತ್ರವನ್ನು ನೋಡಿ ಪ್ರೇರಣೆಗೊಂಡು ವಿದ್ಯಾವಂತ ಯುವಕರು ನಗರಗಳಿಂದ ಹಳ್ಳಿಗೆ ವಾಪಾಸ್ಸು ಬಂದು ಕೃಷಿಯಲ್ಲಿ ತೊಡಗಿಕೊಂಡಿದ್ದು ಇದೆ. ಇಂತಹ ಮೌಲ್ಯವುಳ್ಳ ಸಿನಿಮಾಗಳನ್ನು ತೋರಿಸುವುದನ್ನು ಇಂದಿನ ಕಾಲಕ್ಕೆ ನಿಂತೇ ಹೋಗಿವೆ.

ಯಾವುದೇ ಸಿನಿಮಾವನ್ನು ನೋಡಿದರೂ ಅದು ಪ್ರೇಮ ಕಥೆಯನ್ನು ಹೊಂದಿದ ಸಿನಿಮಾವೇ ಆಗಿರುತ್ತವೆ. ಇಂತಹ ಕಥೆಗಳಲ್ಲಿ ಹೆಣ್ಣು ಯಾವ ವರ್ಗದವಳಾದರೂ ಸರಿ ನರಕಯಾತನೇ ಪಡುವವಳು ಹೆಣ್ಣೇ ಆಗಿರುತ್ತಾಳೆ. ಪ್ರೀತಿಸಿ ಮದುವೆಯಾದ ಜೋಡಿಗಳು ಜೀವನ ನಿರ್ವಹಿಸಲು

ಏನೆಲ್ಲ ಸಂಕಷ್ಟಗಳನ್ನ ಎದುರಿಸುತ್ತಾಳೆ. ಕೇವಲ ಸಿಂಪತಿಯನ್ನು ಅಥವಾ ಅನುಕಂಪವನ್ನ ಗಳಿಸುವಂತಹ ದೃಶ್ಯಗಳನ್ನೆ ತೋರಿಸಲಾಗುತ್ತದೆ.

ಮಹಿಳೆ ಆರ್ಥಿಕವಾಗಿ, ಮಾನಸಿಕವಾಗಿ ಸಬಲತೆಯನ್ನು ಹೊಂದಿ ತನ್ನಿಚ್ಛೆಯಂತೆ ಬದುಕಲು ನಿರ್ಧರಿಸಿದರೆ ಅವಳನ್ನು 'ಗಂಡುಬೀರಿ' ಎನ್ನುವ ಹಣೆಪಟ್ಟಿಯನ್ನು ಹಚ್ಚಿಯೇ ನೋಡಲಾಗುತ್ತದೆ. ಒಂದು ಕಡೆ ತುಂಬಾ ಧೈರ್ಯವಂತೆ ಎಂದು ಚಿತ್ರಿಸಿದರೆ, ಮತ್ತೊಂದೆಡೆ ಎಲ್ಲವನ್ನೂ, ಒಪ್ಪಿಕೊಳ್ಳುವ, ಎಲ್ಲದನ್ನೂ ಸಹಿಸಿ ತ್ಯಾಗಮಾಡುವ ಹೆಣ್ಣನ್ನು ಚಿತ್ರಿಸಲಾಗುತ್ತದೆ. ವಾಸ್ತವ ಜೀವನದಲ್ಲಿ ಹಾಗಿಲ್ಲದಿದ್ದರೂ ಅದು ಹೀಗೆ ಇದೆ ಎಂಬುದು ನಿರ್ದೇಶಕರ ವಾದ ಎಂಬುದನ್ನು ವಿನಯಾಪ್ರಸಾದ್ ಅವರ ವಾದವಾಗಿದೆ.

ತೆರೆಯ ಮೇಲೆ ನಟಿಯರ ಬದುಕು ಅತ್ಯಂತ ಸುಂದರವಾದದ್ದು. ದಿಟ್ಟತನದ ಧೈರ್ಯವಂತ ಹೆಣ್ಣಾಗಿ ಸಿನಿಮಾಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಇದರಿಂದ ಅವಳಿಗೆ ಅಭಿಮಾನಿಗಳ ಬಳಗವೂ ಹುಟ್ಟಿಕೊಳ್ಳುತ್ತದೆ. ಆದರೆ ನಿಜ ಜೀವನದಲ್ಲಿ ಬದುಕೇ ಬೇರೆಯದ್ದಾಗಿರುತ್ತದೆ. "ಹೆತ್ತ ತಾಯಿಯೇ ತನ್ನ ಮಗಳ ಬೇಡಿಕೆ ಚಿತ್ರರಂಗದಲ್ಲಿ ಕಡಿಮೆಯಾಗುತ್ತಿದ್ದಂತೆಯೇ ಅಧಿಕಾರಿಗಳ, ರಾಜಕಾರಣಿಗಳ ಬಳಿ ಕಳುಹಿಸುತ್ತಾಳೆ. ಅಲ್ಲಿ ಮಗಳು ನಲುಗುತ್ತಿದ್ದರೆ ಇಲ್ಲಿ ತಾಯಿ ಹಣ ಎಣಿಸಿಕೊಳ್ಳಲಾರದೇ ಸೋಲುತ್ತಾಳೆ. ಬದುಕಿ ಬಾಳಬೇಕಾದ ಹೂವುಗಳು ಯಾರದೋ ವಾಂಛೆಗೆ ಬಲಿಯಾಗುತ್ತಿದ್ದಾರೆ. ಕಾಪಾಡಬೇಕಾದ ತಾಯಿಗೆ ಮಗಳು ದುಡ್ಡು ತಂದುಕೊಡುವ ಯಂತ್ರವಾಗುತ್ತಾಳೆ. ಧಾರೆ ಎರೆಯಬೇಕಾದ ಕೈಗಳೇ ಮಗಳಿಂದ ಹಣದ ಧಾರೆ ಎರೆಸಿಕೊಳ್ಳಲು ಮುಂದಾಗುತ್ತವೆ. ಇದಕ್ಕೆ ತಾಯಿಯೇ ಆಗಬೇಕೆಂದಿಲ್ಲ ಕೆಲವೊಮ್ಮೆ ತಂದೆ, ಅಣ್ಣ, ಚಿಕ್ಕಮ್ಮ ಕೊನೆಗೆ ಕೈಹಿಡಿದ ಗಂಡನೇ ತಾರೆಯರನ್ನು ಸುಲಿಯುವ ಪಾತ್ರವಹಿಸಿಕೊಳ್ಳುತ್ತಾರೆ."[೧೦] ಬೇಲಿಯೇ ಎದ್ದು ಹೊಲ ಮೇಯ್ದರೆ, ಹೊಲಕ್ಕೆ ರಕ್ಷಣೆ ಎಲ್ಲಿಂದ ಸಿಗಬೇಕು? ಇಲ್ಲಿಯೂ ಹೀಗೆ ಆಗಿರುವುದನ್ನು ಗಮನಿಸಬಹುದಾಗಿದೆ. ತಾಯಿಯಾದವಳು ಮಕ್ಕಳ (ಮಗಳ) ರಕ್ಷಣೆಮಾಡಿ ಕಾಪಾಡಿಕೊಳ್ಳುವುದು ಅವಳ ಜವಾಬ್ದಾರಿಯಾಗಿದ್ದರೂ ಕೂಡ ಮಗಳನ್ನ ತಾನೇ ನರಕದ ಕೂಪಕ್ಕೆ ತಳ್ಳಿ ಸುಖಪಡುವುದು ಎಂಥ ವಿದ್ರಾವಕವಾದ ಘಟನೆಯಾಗಿದೆ.

ಹೆಣ್ಣಿಗೆ ಸೌಂದರ್ಯ ಎಷ್ಟು ಮುಖ್ಯವಾದದ್ದೋ ಅದರಷ್ಟೇ ಅವಳ ಜೀವನಕ್ಕೂ ಮಾರಕವಾಗಿರುವುದು ಕಾಣಬಹುದು. ಪರದೆಯ ಮೇಲೆ ಧೀರ, ದಿಟ್ಟನಡತೆಯ ಹೆಣ್ಣಾಗಿ, ಪುರುಷ ಪ್ರಧಾನ ಸಮಾಜದಲ್ಲಿ ಸವಾಲಾಗಿ ಬದುಕಿ ತೋರಿಸುತ್ತಾರೆ. ಆದರೆ ವಾಸ್ತವ ಜೀವನದಲ್ಲಿ ಇನ್ಯಾರದೋ ಆಣತಿಯಂತೆ ಗುಲಾಮರಂತೆ ದುಡಿದು ಸವೆದುಹೋಗಿದ್ದಾರೆ. ಅವಳ ಸೌಂದರ್ಯವನ್ನೇ ಬಂಡವಾಳವನ್ನಾಗಿಸಿಕೊಂಡು ಅವಳನ್ನ ಶೋಷಣೆ ಮಾಡುತ್ತಾರೆ. ತಾನು ದುಡಿದ ಸಂಪತ್ತೆಲ್ಲವನ್ನೂ ತನ್ನ ಕುಟುಂಬ, ಗಂಡನಿಗೊ, ಅಥವಾ ತಾಯಿಯೋ ಇನ್ನಿತರ ಸಂಬಂಧಿಕರಿಗೊ ಸುರಿಯುತ್ತಾಳೆ. ಆದರೂ ಸಹ ಆಕೆ ಜೀವನ ಸರಿಹೋದದ್ದು ಅಷ್ಟಕ್ಕಷ್ಟೆ. ಕೆಲವೊಮ್ಮೆ ಉತ್ತಮ ನಟಿ, ರೂಪವತಿ ಎಂದೆನಿಸಿಕೊಂಡ ನಟಿಯರಿಗೆ ತೆರೆಯ ಮೇಲೆ ನಟಿಸಲು ಅವಕಾಶಗಳು ಕಡಿಮೆಯಾಗುತ್ತಾ

ಬಂದಾಗ ಅವಳ ಹಣವನ್ನ ದೋಚಲು ಕಾದು ಕುಳಿತವರಿಂದ ಆ ನಟಿ ಅನುಭವಿಸುವ, ಎದುರಿಸುವ ಕಷ್ಟಗಳು ಒಂದು ರೀತಿಯದ್ದಲ್ಲ. ಕೆಲವೊಮ್ಮೆ ವೇಶ್ಯಾವಾಟಿಕೆಯಂತಹ ಕೂಪಗಳಿಗೂ ಅವಳನ್ನ ತಳ್ಳಿರುವ ನಿದರ್ಶನಗಳುಂಟು. ಸಿನಿಮಾಗಳಲ್ಲಿ ಅವಳನ್ನ ಕಾಪಾಡಲು ನಾಯಕ ಬರುತ್ತಾನೆ. ಆದರೆ ನಿಜ ಜೀವನದಲ್ಲಿ ಆಕೆಯನ್ನು ಯಾರೂ ಕೂಡ ಕಾಪಾಡಲು ಬರುವುದಿಲ್ಲ. ಅವಳ ಜೀವನ ಅವಳೇ ನೋಡಿಕೊಳ್ಳಬೇಕು. ಪ್ರಸಿದ್ಧ ನಟ ನಟಿಯರು ತೆರೆಯ ಮೇಲೆ ಜೋಡಿಯಾಗಿ ನಟಿಸಿ ಮದುವೆಯಾದವರಲ್ಲಿಯೂ ಇಂತಹ ದೌರ್ಜನ್ಯಗಳು ನಡೆದಿವೆ. ಆಕೆಯ ಗಂಡನಿಗೆ ಅವಳಿಗಿಂತ ಅವಳ ಸೌಂದರ್ಯವೇ ಮುಖ್ಯ ಮಾನದಂಡವಾಗಿರುತ್ತದೆ. ಹೀಗಿರುವಾಗ ಆ ಸೌಂದರ್ಯ ಮಾಸುತ್ತಾ ಬಂದಾಗ ಅವಳ ಮೇಲೆ ದೌರ್ಜನ್ಯಗಳು ಹೆಚ್ಚುತ್ತಲೇ ಹೋಗುತ್ತವೆ. ಹೀಗಾಗಿ ಎಷ್ಟೋ ನಟಿಯರು ಈ ರೀತಿಯ ಜೀವನದಿಂದ ಹೊರ ಬರಲು ವಿಚ್ಛೇದನ ಪಡೆದು ಮುಕ್ತಿ ಹೊಂದಿದ್ದಾರೆ. ಆದರೆ ನರಕ ಅನುಭವಿಸುವವರು ಈ ಮಹಿಳೆಯರೇ ಹೊರತು ಅವರ ಗಂಡಂದಿರಲ್ಲ. ಕಡುವಾಸ್ತವವನ್ನು ಲೇಖಕಿಯು ಇಲ್ಲಿ ಹೇಳಿದ್ದಾರೆ.

"ಕಿರುತೆರೆಯ ಮಾಧ್ಯಮ ಇದಕ್ಕಿಂತ ತುಂಬಾ ಭಿನ್ನವೇನಲ್ಲ. ಆದರೆ ಇಷ್ಟಪಟ್ಟರೆ ಸಂಭಾವ್ಯತೆಗೆ ಅವಕಾಶವುಂಟು. ಆದರೆ ಈ ಮಾಧ್ಯಮಗಳು ಬಿತ್ತುತ್ತಿರುವ ಸಂದೇಶಗಳು ಮಾತ್ರ ಸಹ್ಯ ಅನಿಸುತ್ತಿಲ್ಲ. ಪ್ರತಿಯೊಂದು ಕತೆಯಲ್ಲೂ ಹೆಣ್ಣಿಗೆ ಹೆಣ್ಣೇ ಶತ್ರು! ಇಲ್ಲಿಯ ವಿಲನ್ ಸಿನಿಮಾದ ವಿಲನ್ ಮಾದರಿಯಲ್ಲ. ಈ ಹೆಣ್ಣು ಸೇಡು, ಕುತಂತ್ರ, ಮೋಸದ ಪ್ರತಿನಿಧಿ. ಹೀಗೇಕೆ? ಕಿರು ತೆರೆ, ಹಿರಿತೆರೆಗಳಿಗೆ ಪ್ರೇಕ್ಷಕರೇ ಬೇರೆ ಬೇರೆ ಎಂದರೆ ಹಿರಿತೆರೆಯ ಪ್ರೇಕ್ಷಕರಿಗೆ ಕಿರುತೆರೆಯಾಗಲೀ ಕಿರುತೆರೆಯ ಪ್ರೇಕ್ಷಕರಿಗೆ ಹಿರಿತೆರೆಯಾಗಲೀ ಬೇಡವೆಂದಲ್ಲ, ಅಲ್ಲೂ ಒಂದು ಹವ್ಯಾಸವಾಗಿ, ಮತ್ತೊಂದು ಪ್ರಬಲ ಉದ್ದೇಶ. ಚಟ ಆಗಿರುವುದರ ಹಿನ್ನೆಲೆಯಲ್ಲಿ ಈ ಪ್ರೇಕ್ಷಕರನ್ನು ಗುರುತಿಸಬಹುದು."[೧೧] ಕಿರುತೆರೆಯ ಮೇಲೆ ಒಂದು ಕಡೆ ವಾಕರಿಕೆ ಬರುವಷ್ಟು ಸೌಮ್ಯ ಸ್ವಭಾವದ, ತ್ಯಾಗಮಯಿ ಹೆಣ್ಣನ್ನು ಚಿತ್ರಿಸಿದರೆ. ಮತ್ತೊಂದೆಡೆ ಕ್ರೂರಾತಿಕ್ರೂರ ಹೆಣ್ಣನ್ನು ಚಿತ್ರಿಸಲಾಗುತ್ತದೆ. ಇಲ್ಲಿಯ ಖಳನಾಯಕಿಯ ಪಾತ್ರದೊಂದಿಗೆ ಹೆಣ್ಣು ಅತೀ ಕ್ರೂರಿ, ಕುತಂತ್ರಿ ಮತ್ತು ಮೋಸದ ಪ್ರತಿನಿಧಿ ಎಂಬಂತೆಯೇ ಬಿತ್ತರಿಸಲಾಗುತ್ತದೆ. ಒಂದೊಂದು ಸಲ ನಿರ್ದೇಶಕರು ಹಿಂಸೆಯನ್ನೇ ವಿಜೃಂಭಿಸುವಂತೆ ತೋರಿಸುವುದು ಉಂಟು. ಹೆಣ್ಣಿಗೆ ಹೆಣ್ಣೇ ಶತ್ರುವಾಗಿರುತ್ತಾಳೆ ಎಂಬುದನ್ನು ಎಲ್ಲರ ಮನಸ್ಸಲ್ಲಿ ಅಚ್ಚೊತ್ತುವಂತೆ ತೋರಿಸಲಾಗುತ್ತದೆ.

ಪುರುಷ ಪಾತ್ರ ಇಲ್ಲಿ ಗೌಣವಾಗಿ ಉಳಿಯುತ್ತದೆ. ಪುರುಷನದ್ದೂ ಯಾವುದೇ ರೀತಿಯಾದಂತಹ ಕೈವಾಡ ಇರುವುದಿಲ್ಲ. ಎಲ್ಲ ಮೋಸಕ್ಕೂ ಮಹಿಳೆಯೆ ಕಾರಣ ಮತ್ತು ಆಕೆಯೆ ಅದರ ಪ್ರತಿನಿಧಿಯಾಗಿರುತ್ತಾಳೆ ಎಂಬಂತೆ ತೋರಿಸಲಾಗುತ್ತದೆ. ಮೌಢ್ಯತೆಗೆ ಹೆಚ್ಚು ಒತ್ತು ಕೊಡುವುದು ಕಂಡು ಬರುತ್ತದೆ. ಕೆಲವೊಮ್ಮೆ ಧಾರಾವಾಹಿ ಇನ್ನೇನು ನೆಲಕಚ್ಚುತ್ತದೆ ಎನ್ನುವ ಸಂದರ್ಭದಲ್ಲಿ ಅತ್ತೆ ಸೊಸೆಯ ಮಧ್ಯೆ ನಡೆಯುವಂತಹ ಕಲಹದಲ್ಲಿ ಅತ್ತೆ ಸೊಸೆಗೆ ಯಾವ ರೀತಿಯೆಲ್ಲಾ ಹಿಂಸೆ ಕೊಡಬಲ್ಲಳು ಎಂಬುದನ್ನ ಹಲವಾರು ಜನರಲ್ಲಿ ಕೇಳಿ ಅದನ್ನೇ ತೆರೆಯ ಮೇಲೆ ಬಿತ್ತರಿಸಿದಂತಹ

ನಾಲಾಯಕ್ ನಿರ್ದೇಶಕರೂ ಇದ್ದಾರೆ. ಸಮಾಜಕ್ಕೆ ಒಳ್ಳೆಯ ಸಂದೇಶ ನೀಡಬೇಕಾದ ಜಾಗದಲ್ಲಿ ಮತ್ತಷ್ಟು ಅಸಹನೆಯ ಬೀಜವನ್ನೇ ಬಿತ್ತುತ್ತಿದ್ದಾರೆ. ತೆರೆಯಮೇಲೆ ಮಹಿಳೆಯನ್ನು ವಿಲನ್ ಆಗಿ ತೋರಿಸುವುದರ ಹಿಂದಿನ ಮನಸ್ಥಿತಿ ಪುರುಷನದ್ದೇ ಆಗಿರುತ್ತದೆ ಎಂಬುದನ್ನು ಮರೆಯುವಂತಿಲ್ಲ ಎಂಬುದನ್ನು ಅತ್ಯಂತ ಕಠೋರವಾಗಿ ಟೀಕಿಸಿದ್ದಾರೆ.

"ಜಾಹೀರಾತುಗಳ ವಿಷಯಕ್ಕೆ ಬಂದರೆ, ಮಹಿಳೆಯರಿಂದ ವ್ಯಕ್ತವಾದ ವಿನೋದ, ಚಳುವಳಿ ಹಾಗೂ ಹೋರಾಟಗಳಿಂದಾಗಿ ಸ್ತ್ರೀ ದೇಹ ವಿನ್ಯಾಸವನ್ನು ಸರಕು ಸಾಮಾಗ್ರಿಗಳ ಪ್ರಸಾರಕ್ಕಾಗಿ ಹಾಗೂ ವಾಣಿಜ್ಯ ಉದ್ದೇಶಗಳಿಗಾಗಿ ಲೈಂಗಿಕ ಪ್ರಚೋದನೆಯ ರೂಪದಲ್ಲಿ ಬಳಸಿಕೊಳ್ಳುವುದು ತಪ್ಪಿ ಕಳೆದ ಒಂದು ವರ್ಷದಲ್ಲಿ ಸಾಕಷ್ಟು ಸುಧಾರಣೆ ಕಂಡುಬಂದಿದೆ. ಆದರೆ ಈಗಲೂ ಕೂಡ ಕೆಲವು ಜಾಹೀರಾತುಗಳು ಆಕ್ಷೇಪಾರ್ಹ ರೀತಿಯಲ್ಲೇ ಬರುತ್ತಿವೆ. ಇತ್ತೀಚಿನ ಒಂದು ಜಾಹೀರಾತಿನಲ್ಲಿ ಒಂದು ಸೈಕಲ್ ಮಾರಾಟಕ್ಕಿದೆ; ಅದನ್ನು ಕಿರಿ ವಯಸ್ಸಿನ ಯುವಕನೊಬ್ಬ ನೋಡುತ್ತಾನೆ. ಅವನ ದೃಷ್ಟಿ ಅದರ ಮೇಲೆ ಬೀಳುತ್ತಿದ್ದಂತೆಯೇ ಆ ಸೈಕಲ್ ಒಂದು ಸುಂದರ ಸ್ತ್ರೀ ರೂಪಾಕೃತಿಯನ್ನು ತಾಳುತ್ತದೆ. ತಕ್ಷಣ ಯುವಕ ಅದು ನನಗೆ ಬೇಕು ಎನ್ನುತ್ತಾನೆ. ಎಂತಹ ಅಸಹ್ಯಕರ ಜಾಹೀರಾತು! ಅನಗತ್ಯವಾಗಿ ಬಳಸಲಾದ ಮಹಿಳೆಯ ಅಂಕುಡೊಂಕಿನ ಸುಂದರ ಶರೀರ. ಈ ಜಾಹೀರಾತಿಗೆ ಅನಗತ್ಯ ಹಾಗೂ ಅಸಂಬದ್ಧ, ಅಷ್ಟೇ ಅಲ್ಲ ಯುವ ಮನಸ್ಸೊಂದು ತಕ್ಷಣ ಅದರ ಮೇಲಿನ ಅಧಿಕಾರವನ್ನು ಪಡೆದುಕೊಳ್ಳಲು ಪ್ರದರ್ಶಿಸುವ ಹಪಾಹಪಿತನ!"[೨] ಬಂಡವಾಳಶಾಹಿ ವ್ಯವಸ್ಥೆಯು ಹೆಣ್ಣಿನ ದೇಹವನ್ನೇ ಬಂಡವಾಳವನ್ನಾಗಿಸಿಕೊಂಡು ಮಾರಾಟದ ಸರಕಾಗಿಸಿದೆ. ಇದನ್ನು ಅರಿಯದ ಮಹಿಳೆಯು ಸೌಂದರ್ಯ ಪ್ರಜ್ಞೆಯ ಅಥವಾ ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಒಪ್ಪಿಕೊಂಡಿರುವುದು ಕಾಣಬಹುದು. ಬಹುತೇಕ ಜಾಹೀರಾತುಗಳು ಹೆಣ್ಣನ್ನು ಬಳಸಿಕೊಳ್ಳುವುದು ಲೈಂಗಿಕ ಪ್ರಚೋದನೆಯ ರೂಪದಲ್ಲಿ. ಈ ಮೇಲೆ ಉಲ್ಲೇಖಿಸಿದಂತೆ ಒಂದು ಸೈಕಲ್‌ಗೂ ಹೆಣ್ಣಿನ ರೂಪಾಕೃತಿಗೂ ಎಲ್ಲಿಯ ಸಂಬಂಧ. ಇಲ್ಲಿ ಎಲ್ಲಾ ವಸ್ತುಗಳಿಗೂ ಹೆಣ್ಣು ಬಹುಮುಖ್ಯ ಪಾತ್ರವಾಗಿ ಕಾಣುತ್ತಾಳೆ. ಅವಳಿಗೆ ಸಂಬಂಧಿಸಿದ್ದಲ್ಲವಾದರೂ ಸಹ ಅವಳ ಪ್ರಾತಿನಿಧ್ಯ ಇರಬೇಕು. ಮಹಿಳೆ ಇಲ್ಲವಾದಲ್ಲಿ ಅದು ಅಪೂರ್ಣವಾಗಿರುತ್ತದೆ ಎಂಬ ಭ್ರಮೆಯನ್ನು ಸೃಷ್ಟಿಸಲಾಗಿದೆ. ಗಂಡು ತನ್ನ ಅಧೀನದಲ್ಲಿ ಇಟ್ಟುಕೊಳ್ಳಲು ಬಯಸುವ ವಸ್ತುವೆಲ್ಲವೂ ಹೆಣ್ಣಿನ ಸಾಂಕೇತಿಕ ರೂಪವಾಗಿರುತ್ತದೆ ಎಂಬುದನ್ನು ಸೂಚಿಸುತ್ತದೆ. ಗಂಡಿನ ಆಸೆಯನ್ನು ತೀರಿಸುವ ಒಂದು ಯಂತ್ರವಾಗಿ ಕಾಣುತ್ತಾಳೆ. ಹೀಗಿರುವಾಗ ಆ ಯುವಕ ಸೈಕಲ್ ಮೂಲಕ ಹೆಣ್ಣಿನ ರೂಪಾಕೃತಿ ಕಂಡೊಡನೆ ತನಗೆ ಬೇಕು ಎನ್ನುವುದರಲ್ಲಿ ಎಂತಹ ಮನಸ್ಥಿತಿಯನ್ನು ಒಳಗೊಂಡಿದೆ ಎಂಬುದು ತಿಳಿಯಬಹುದು.

"ಜಾಹೀರಾತುಗಳ ಬಗ್ಗೆ ಹೇಳುವುದೇ ಬೇಡ. ಅದು ಮಾರುಕಟ್ಟೆ ಪದಾರ್ಥಗಳಿಗೋ, ಚಲನ ಚಿತ್ರದ್ದೋ ಏನಾದರೂ ಸರಿ ಅಲ್ಲಿ ಹೆಣ್ಣು ಹೇಗೆ ಚಿತ್ರಿತಳಾಗುತ್ತಾಳೆಂದು ಗಂಡಸಿನ ಒಳ ಉಡುಪು, ಅವನು ಬಳಸುವ ಶೇವಿಂಗ್ ಬ್ಲೇಡು, ಅವನು ಧರಿಸುವ ಬೂಟಿನಿಂದಾರಂಭಿಸಿ ಅವನ ಸಮಸ್ತ ಅಗತ್ಯಗಳನ್ನು ಆಕೆ ಮೋಹಿಸಿ ಅವನಿಗೆ ತನ್ನನ್ನು ಒಪ್ಪಿಸಿಕೊಳ್ಳುತ್ತಾಳೆ ಎಂದು

ಹೇಳುವ ಈ ಮಾರುಕಟ್ಟೆಯ ಬ್ರ್ಯಾಂಡ್‌ಗಳ ಜಾಹೀರಾತು ಕಂಪನಿಗಳಿಗೆ ಹೆಣ್ಣುಮಗಳು ಮನೆಯಲ್ಲಿ ದುಡಿಯುವ ಸ್ಥಳದಲ್ಲಿ ಸ್ವಸ್ಥವಾಗಿರಲು ಪಡುವ ಪಾಡು ಗೊತ್ತೆ? ತಾಪತ್ರಯಗಳ ಮಧ್ಯೆ ಈ ಹುಡುಗರ ಉಡುಪು, ಗಡ್ಡ ನೋಡಲು ಮರುಳಾಗಲು ಅವಳಿಗೆ ವ್ಯವಧಾನವಿದೆಯೇ?"[೧೩] ಈ ಜಾಹೀರಾತುಗಳಲ್ಲಿ ತೋರಿಸುವ ಮಾರುಕಟ್ಟೆಯ ಪದಾರ್ಥಗಳು ಯಾರಿಗೆ ಉಪಯೋಗವಾಗುತ್ತದೆ ಮತ್ತು ಅದರ ಬಳಕೆದಾರರು ಯಾರಾಗಿರುತ್ತಾರೆ ಎಂಬುದು ಮುಖ್ಯ. ಪ್ರತಿಯೊಂದು ವಸ್ತುವನ್ನು ತೋರಿಸುವಾಗಲೂ ಒಬ್ಬ ಮಹಿಳೆ ಇದ್ದೇ ಇರುತ್ತಾಳೆ. ಅವರು ತೋರಿಸುವಂತೆ ಪುರುಷನು ಬಳಸುವ ಎಲ್ಲಾ ವಸ್ತುಗಳನ್ನು ಅವಳು ಮೆಚ್ಚಿ ಅವನಿಗೆ ಅವಳನ್ನು ಒಪ್ಪಿಸಿಕೊಳ್ಳುತ್ತಾಳೆ ಎಂಬುದನ್ನು ಹೇಳಲಾಗುತ್ತದೆ. ಪುರುಷ ಪ್ರಧಾನ ಸಮಾಜದಲ್ಲಿ ಪುರುಷ ತಾನು ಮಾಡಿದ್ದೆಲ್ಲವನ್ನೂ ಮಹಿಳೆ ಒಪ್ಪಬೇಕು ಎಂಬುದನ್ನು ಹೇಳಲಾಗುತ್ತಿದೆ. ಈ ಜಾಹೀರಾತುಗಳಲ್ಲಿ ಕೇವಲ ಪುರುಷರಿಗೆ ಸಂಬಂಧಪಟ್ಟಂತಹ ವಸ್ತುಗಳಿಗೆ ಮಾತ್ರವಲ್ಲದೆ ಪ್ರಾಣಿಗಳಿಗೆ ಸಂಬಂಧಿಸಿದ ವಸ್ತುಗಳನ್ನು ತೋರಿಸುವುದಕ್ಕೂ ಸಹ ಹೆಣ್ಣನ್ನು ಬಳಸಿಕೊಂಡೇ ಆ ವಸ್ತುವನ್ನು ಮಾರುಕಟ್ಟೆಗೆ ತರಲಾಗುತ್ತದೆ. ಉದಾಹರಣೆಗೆ ನಾಯಿಗೆ ಬಳಸುವ ಸಾಬೂನನ್ನು ತೋರಿಸಲು ಪುರುಷ ಇದ್ದರೆ ಸಾಕು ಆದರೆ ಅಲ್ಲಿಯೂ ಮಹಿಳೆಯನ್ನ ತರುವಂತಹದ್ದು. ಹಾಗೇನೆ ಪುರುಷ ಹಚ್ಚುವಂತಹ ಫೇಸ್ ಕ್ರೀಮ್‌ಗಳನ್ನು ತೋರಿಸಲು ಹೆಣ್ಣಿನ ಅಗತ್ಯವೇ ಇಲ್ಲ. ಅಲ್ಲಿಯೂ ಸಹ ಹೆಣ್ಣನ್ನು ತರುವಂತಹದ್ದು. ವಾಸ್ತವ ಬದುಕಿನಲ್ಲಿ ಇದೆಲ್ಲದ್ದಕ್ಕೂ ಭಿನ್ನವಾದಂತಹ ಬದುಕಿದೆ ವಾಸ್ತವ ಸ್ಥಿತಿ ಇವರು ತೋರಿಸುವ ರೀತಿ ಇಲ್ಲ ಎಂಬುದನ್ನು ಚಿಂತಿಸದೇ ಇರುವಂತಹ ಮನಸ್ಥಿತಿಯನ್ನು ರೂಪಿಸಲಾಗಿದೆ.

"ಪತ್ರಿಕಾ ಮಾಧ್ಯಮಗಳಿಂದ ಇಲೆಕ್ಟ್ರಾನಿಕ್ ಮಾಧ್ಯಮಗಳಿಗೆ ಕಾಲಿಟ್ಟಾಗ ಜಾಹೀರಾತುಗಳ ವಿನ್ಯಾಸವೂ ಬದಲಾಗತೊಡಗಿತು. ಮೈ ತುಂಬಾ ಬಟ್ಟೆ ತೊಟ್ಟುಕೊಂಡ ಹೆಣ್ಣಿನ ಚಿತ್ರಕ್ಕಿಂತ ಆದಷ್ಟು ಕಮ್ಮಿ ಬಟ್ಟೆ ತೊಟ್ಟ ಹೆಣ್ಣು ಮತ್ತಷ್ಟು ಆಕರ್ಷಣೀಯವಾಗಿ ಕಾಣಿಸಿಕೊಳ್ಳತೊಡಗಿದಳು. ಅರೆನಗ್ನ ಹೆಣ್ಣಿನ ಮೈಮಾಟವನ್ನು ಜಾಹೀರಾತಿಗಾಗಿ ಬಳಸಿದರೆ ಮತ್ತಷ್ಟು ಲಾಭ ಪಡೆಯಬಹುದೆಂದು ಮನಗಂಡ ವ್ಯಾಪಾರಿಗಳು ಅದಕ್ಕೂ ಮುಂದಾದರು. ಈಜುಡುಗೆ ತೊಟ್ಟ ಹೆಣ್ಣು ಸಿನಿಮಾ ಮತ್ತು ಜಾಹೀರಾತುಗಳಲ್ಲಿ ಕಾಣಸಿಗುವುದು ಸಾಮಾನ್ಯವಾಯಿತು. ಈಜುಡುಗೆಯಲ್ಲಿ ಮಾತ್ರವಲ್ಲ ಈಜುತ್ತಾ ಅಥವಾ ಮಳೆಯಲ್ಲಿ ನೆನೆಯುತ್ತಾ ಅಥವಾ ಧುಮ್ಮಿಕ್ಕುವ ಜಲಪಾತದಡಿಯಲ್ಲಿ ಜಲಕ್ರೀಡೆಯಾಡುತ್ತಾ ತಾನು ಹಚ್ಚಿಕೊಳ್ಳುವ ಸಾಬೂನಿನ ಕುರಿತೋ, ಟೂತ್ ಪೇಸ್ಟಿನ ಕುರಿತೋ ಹೇಳತೊಡಗುತ್ತಾಳೆ. ಒದ್ದೆ ಮೈಯ ಹೆಣ್ಣು ಮಗಳ ಅರೆನಗ್ನ ದೇಹದ ಮೈ ಮಾಟದ ಸೌಂದರ್ಯವನ್ನು ಸವಿಯುತ್ತಾ ಪ್ರೇಕ್ಷಕನು ಮೈ ಮರೆಯುತ್ತಾನೆಂಬುದರಲ್ಲಿ ಸಂದೇಹವೇ ಇಲ್ಲ."[೧೪]

ಮಾಧ್ಯಮಗಳ ಮಾದರಿಯು ಬದಲಾದಂತೆಲ್ಲಾ ಜಾಹೀರಾತಿನ ವಿನ್ಯಾಸಗಳು ಬದಲಾಗ ತೊಡಗಿದವು. ಮುದ್ರಣ ಮಾಧ್ಯಮದಿಂದ ಎಲೆಕ್ಟ್ರಾನಿಕ್ ಮಾಧ್ಯಮಕ್ಕೆ ಬದಲಾದಾಗ ಮಹಿಳೆಯರು ಪ್ರದರ್ಶಿಸುವ ಜಾಹೀರಾತುಗಳು ಬದಲಾಗುತ್ತಾ ಬಂದವು. ಎಲ್ಲಾ ವಸ್ತುಗಳನ್ನು ಪ್ರದರ್ಶಿಸಿ ಮಾರಾಟ ಮಾಡುವುದಕ್ಕೆ ಹೆಣ್ಣಿನ ಅರೆನಗ್ನ ದೇಹವನ್ನೇ ಮುಖ್ಯ ಗುರಿಯನ್ನಾಗಿ ಮಾಡಿಕೊಳ್ಳಲಾಯಿತು.

ಒಂದು ಸೋಪನ್ನು ತೋರಿಸುವುದಕ್ಕೆ ಮಹಿಳೆಯು ಅರೆನಗ್ನಳಾಗಿ ಅದರಲ್ಲೂ ಈಜುಡುಗೆಯನ್ನೇ ಧರಿಸಿ ಆ ಸೋಪಿನ ಗುಣಗಳನ್ನು ಆಕೆ ತೋರಿಸುವಂತಹದ್ದು, ಅಲ್ಲದೆಯೆ ನೀರಿನೊಳಗೆ ಧುಮುಕಿ ಅಥವಾ ಜಲಪಾತದ ಕೆಳಗೆ ಮಿಂದೆದ್ದೇ ತೋರಿಸುವ ದೃಶ್ಯಗಳು. ಆ ಹೆಣ್ಣಿನ ಒದ್ದೆಯಾದ ಅರೆನಗ್ನ ದೇಹದ ಸೌಂದರ್ಯವನ್ನು ಸವಿಯುವ ಮೂಲಕ ಪ್ರೇಕ್ಷಕನು ಮೈಮರೆಯುತ್ತಾನೆ. ಸಾಬೂನು ಒಂದು ರೂಪಕವಷ್ಟೇ ಆದರೆ ಹೆಣ್ಣಿನ ದೇಹ ಸೌಂದರ್ಯವನ್ನು ತೋರಿಸುವುದೇ ಇವರ ಮುಖ್ಯ ಗುರಿಯಾಗಿದೆ.

ಬಂಡವಾಳಶಾಹಿಯ ಮಾರುಕಟ್ಟೆ ವ್ಯವಸ್ಥೆಯೊಳಗೆ ಮಾರಾಟಗಾರರು ಈ ಹಣವನ್ನು ತಮಗೆ ನಷ್ಟವಾಗಬಾರದಂತೆ ಗ್ರಾಹಕರ ಮೇಲೆ ಹೇರುತ್ತಾರೆ. ಆ ಮುಗ್ಧ ಜನಕ್ಕೆ ಇದರ ಹುನ್ನಾರ ತಿಳಿಯದ ಹಾಗೆ ಇಂತಹ ಕುತಂತ್ರವನ್ನು ಮಾಡುತ್ತಾರೆ. ಬಂಡವಾಳ ವ್ಯವಸ್ಥೆಯೊಳಗೆ ಯಾವುದೋ ಒಂದು ಬಣ್ಣಕ್ಕೆ ಒತ್ತು ನೀಡುವ ಮೂಲಕ ಕೀಳರಿಮೆಯನ್ನು ತುಂಬಲಾಗುತ್ತಿದೆ. ಅಲ್ಲದೆಯೇ ಒಂದು ಉದ್ಯೋಗ ಪಡೆದುಕೊಳ್ಳಲು ಅವಳ ಶಿಕ್ಷಣ, ಜ್ಞಾನಕ್ಕಿಂತ ಮಿಗಿಲಾಗಿ ಅವಳ ದೇಹ ಸೌಂದರ್ಯಕ್ಕೆ ಮೊದಲ ಪ್ರಾಶಸ್ತ್ಯ ನೀಡಲಾಗುತ್ತದೆ. ಮೊದಲ ಸಲ ಒಂದು ಕಂಪನಿಯಲ್ಲಿ ಕೆಲಸ ಕೇಳಲು ಹೋದಾಗ ಅವಳನ್ನ ತಿರಸ್ಕರಿಸಿ ಕೆಲಸಕೊಡುವುದಿಲ್ಲ. ಅವಳು 'ಫೇರ್ ಅಂಡ್ ಲವ್ಲಿ' ಕ್ರೀಮನ್ನು ಬಳಸಿ ತನ್ನ ಸೌಂದರ್ಯವನ್ನ ಹೆಚ್ಚಿಸಿಕೊಂಡು ಮತ್ತೊಮ್ಮೆ ಅದೇ ಕಂಪನಿಗೆ ಕೆಲಸ ಕೇಳಲು ಹೋದಾಗ ಆಕೆಗೆ ಅಲ್ಲಿ ಕೆಲಸ ಲಭ್ಯವಾಗುತ್ತದೆ.

ವಾಸ್ತವದಲ್ಲಿ ಮುಖ ಸೌಂದರ್ಯದಿಂದಲೋ ಅಥವಾ ದೇಹ ಸೌಂದರ್ಯದಿಂದಲೋ ಉದ್ಯೋಗ ಲಭ್ಯವಾಗುವುದಾಗಿದ್ದರೆ, ಶಿಕ್ಷಣದ, ವೃತ್ತಿಪರ ಕೋರ್ಸುಗಳ ಅಗತ್ಯವೇ ಇರಲಿಲ್ಲ. ಇಂತಹ ಪ್ರಾಡಕ್ಟ್‌ಗಳನ್ನು ಬಳಕೆಮಾಡಿಕೊಂಡೇ ಉದ್ಯೋಗವನ್ನು ಪಡೆಯಬಹುದಿತ್ತೇನೋ? ಕೇವಲ ಬಿಳಿ ವರ್ಣದಿಂದ ಮಾತ್ರ ಗೌರವ ಸಿಗುವುದು ಮತ್ತು ಅವರಿಗೆ ಮಾತ್ರ ಮಾನ್ಯತೆ ದೊರೆಯುತ್ತದೆ ಎಂಬುದನ್ನು ಹೇಳ ಹೊರಟಿರುವ ಬಂಡವಾಳಶಾಹಿ ಮಾರುಕಟ್ಟೆಯು ಕಪ್ಪು ಮತ್ತು ಬಿಳಿ ಎಂಬ ತಾರತಮ್ಯವನ್ನು ಬಹಳ ಚಾಣಾಕ್ಷತೆಯಿಂದ ಹರಡಲಾಗುತ್ತಿದೆ.

ಸಮಾಜಕ್ಕೆ ಜಾಹೀರಾತುಗಳು ಮತ್ತು ಸೌಂದರ್ಯ ಸ್ಪರ್ಧೆಗಳು ಸಮಾಜ ಸೇವೆಯ ನೆಪದಲ್ಲಿ ಹೇಗೆ ಹರಾಜಕತೆಯನ್ನು ಹೊಂದಿವೆ ಎಂಬುದನ್ನು ಎಂ.ಎಸ್.ಆಶಾದೇವಿಯವರು ಹೀಗೆ ಹೇಳುತ್ತಾರೆ. "ವ್ಯಕ್ತಿತ್ವದ ಮೂಲಕ ಜಾಹೀರಾತುಗಳು ಎಂಥವು? ಚಹಾದ ಜೋಡಿ ಚೂಡದ್ಹಾಂಗ ನೀನಗೆಂದಾವ ಎನ್ನುವ ರೀತಿಯ ಒಳ್ಳೆ ಹೆಂಡತಿ, ತಾಯಿಯ ಮಗಳ 'ಒಳ್ಳೆಯ' ಅನ್ನುವುದು ಏನು, ಹೇಗೆ, ನಾನು ವಿವರಿಸಬೇಕಿಲ್ಲ. ಗಂಧದಂತೆ ತೇಯಬೇಕಾದ ಬದುಕನ್ನು ಪ್ರತಿಪಾದಿಸುವ ಜಾಹೀರಾತುಗಳು ಅವಳ ವ್ಯಕ್ತಿತ್ವದ ಸ್ವಂತಿಕೆಯ ಆತ್ಮ ವಿಶ್ವಾಸದ ಸಾಧನೆಯ ಸಂಕೇತಗಳಾಗಿರುವ ಜಾಹೀರಾತುಗಳು ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ.

ಸೌಂದರ್ಯ ಸ್ಪರ್ಧೆಗಳಂತೂ, ಹೆಣ್ಣನ್ನು ನೇರವಾಗಿ ಹರಾಜಿಗಿಡುವ ನಿರ್ಲಜ್ಜ ವ್ಯಾಪಾರ ಸಮಾಜ ಸೇವೆಯ ಸೋಗು ಹಾಕಿಕೊಂಡಿರುವ ಈ ಸ್ಪರ್ಧೆ ಜಾಗತೀಕರಣದ ಮುಖ್ಯ

ರೋಗವಾಹಕಗಳೂ ಹೌದು. ಈ ಸ್ಪರ್ಧೆಗಳನ್ನು ನಿವಾರಿಸಿಕೊಳ್ಳುವುದು ಈ ಸಮಾಜದ ಆರೋಗ್ಯದ ದೃಷ್ಟಿಯಿಂದ ಅಗತ್ಯ ಮಾತ್ರವಲ್ಲ ಅನಿವಾರ್ಯ ಕೂಡ. ಇಂಥ ಅನಾಗರಿಕ, ಸ್ಪರ್ಧೆಯ ವಿರುದ್ಧ ಸಂಘಟಿತವಾದ ಹೋರಾಟವೊಂದು ನಡೆಯಬೇಕಾಗಿರುವುದು ಇಂದಿನ ತುರ್ತು ಅಗತ್ಯ."[೧೫] ಜಾಹೀರಾತುಗಳು ಮಾದರಿ ಹೆಣ್ಣು ಎಂಬ ಕಲ್ಪನೆಯನ್ನು ಬಿತ್ತರಿಸುವ ಪ್ರಯತ್ನವನ್ನು ಮಾಡುತ್ತವೆ. ಮನೆಯ ಎಲ್ಲಾ ಕೆಲಸಗಳನ್ನು ಮಾಡಿ, ಅದರ ಜೊತೆಗೆ ಎಲ್ಲರನ್ನೂ ನಗುಮುಖದಲ್ಲೇ ಎದುರುಗೊಳ್ಳುವಂತೆ ಮಾಡುವುದು. ಮನೆ ವಾಳ್ತೆಯಲ್ಲವನ್ನು ತಾನೊಬ್ಬಳೆ ನಿರ್ವಹಿಸಿದರೂ ಆಕೆ ಎಂದಿಗೂ ಧಣಿವಾಗದೇ ಇರುವುದೇ ಒಳ್ಳೆಯ ಗೃಹಿಣಿಯ ಲಕ್ಷಣ ಎಂಬುದನ್ನು ಹೇಳಹೊರಟಿದ್ದಾರೆ. ಶಾಲೆಯ ಹಂತದಿಂದಲೇ ಸೌಂದರ್ಯ ಸ್ಪರ್ಧೆಯ ಕಲ್ಪನೆಗಳನ್ನು ಬಿತ್ತುತ್ತಿರುವುದು ದುರಂತವೇ ಸರಿ. ಭ್ರಮಾ ಲೋಕದಲ್ಲಿ ಬದುಕುವಂತಹ ಸ್ಥಿತಿಯನ್ನು ನಿರ್ಮಾಣ ಮಾಡುತ್ತಿವೆ. ಇಂತಹ ಸೌಂದರ್ಯ ಸ್ಪರ್ಧೆಗಳು ಹೆಣ್ಣನ್ನು ನೇರವಾಗಿ ಹರಾಜಿಗಿಡುತ್ತಿವೆ. ಇಂತಹ ಸ್ಪರ್ಧೆಗಳಿಂದ ದೂರ ಉಳಿಯುವಂತೆ ಮಾಡುವುದು ಇವತ್ತಿನ ತುರ್ತುಕೂಡ ಹೌದು. ಈ ರೀತಿಯ ಸ್ಪರ್ಧೆಗಳ ವಿರುದ್ಧ ಸಂಘಟಿತವಾದ ಹೋರಾಟ ಮಾಡಬೇಕಾಗಿದೆ ಎನ್ನುವುದು ಇವರ ನಿಲುವಾಗಿದೆ.

ಕನ್ನಡ ಮಹಿಳಾ ವಿಚಾರ ಸಾಹಿತ್ಯದಲ್ಲಿ ಮಹಿಳಾ ಪ್ರಶ್ನೆಗಳನ್ನು ಕುರಿತು ಬಂದಿರುವ ಚರ್ಚೆಯಲ್ಲಿ ಆರ್ಥಿಕ ಪ್ರಶ್ನೆಗಳು ಪ್ರಮುಖವಾದ ಸ್ಥಾನವನ್ನು ಹೊಂದಿದೆ. ಎಲ್ಲಾ ರೀತಿಯ ಆದಾಯ, ದುಡಿಮೆ, ಉತ್ಪತ್ತಿಯನ್ನು ಕುರಿತಾದ ಚಿಂತನೆಯೇ ಆರ್ಥಿಕ ಪ್ರಶ್ನೆಗಳಾಗಿವೆ. ಮಹಿಳೆಯ ದುಡಿಮೆಯನ್ನು ಜೈವಿಕತೆಯ ಆಧಾರದ ಮೇಲೆ ನಿರ್ಧರಿಸಲಾಗಿದೆ. ಕೌಟುಂಬಿಕ ಗೃಹ ಕೃತ್ಯದಲ್ಲಿ ಆಕೆ ಹೆಚ್ಚು ಪಾಲ್ಗೊಳ್ಳುವುದರಿಂದಾಗಿ ಅವಳ ದುಡಿಮೆಯನ್ನು ಆರ್ಥಿಕತೆಯ ಭಾಗವಾಗಿ ನೋಡಲಾಗಿಲ್ಲ. ಹೆಣ್ಣಿನ ಜೈವಿಕ ಅಂಶಗಳಾದ ಹೆರುವಿಕೆ, ಪಾಲನೆ, ಪೋಷಣೆ ಇವು ಯಾವುದನ್ನು ದುಡಿಮೆ ಎಂದು ಪರಿಗಣಿಸಿಲ್ಲ. ಮಹಿಳೆಯರ ದುಡಿಮೆಯು ವಿಶ್ರಾಂತಿ ರಹಿತವಾದ ಮತ್ತು ಆದಾಯ ರಹಿತವಾದ ಕುಟುಂದ ಜವಾಬ್ದಾರಿಯನ್ನು ಇವರು ನಿಭಾಯಿಸುತ್ತಿದ್ದಾರೆ. ಮಹಿಳೆಯರ ದುಡಿಮೆಯ ಹಾಗು ಅವರ ಅಭಿವೃದ್ದಿಯನ್ನು ಕುರಿತಂತಹ ವಿಚಾರಗಳನ್ನು ಸರಿಯಾಗಿ ಗ್ರಹಿಸದ ಹೊರತಾಗಿ ಮಹಿಳೆಯರ ಸ್ಥಿತಿಗತಿಯು ಸುಧಾರಿಸಲು ಸಾಧ್ಯವಿಲ್ಲ ಎಂಬ ಚರ್ಚೆಯು ಮಹಿಳಾ ವಿಚಾರ ಸಾಹಿತ್ಯದಲ್ಲಿ ನಡೆದಿವೆ.

ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಭಾರತವು ಒಂದು. ಇಲ್ಲಿ ಬಂಡವಾಳಶಾಹಿಯ ಪಾರುಪತ್ಯವು ವಿಭಿನ್ನವಾದದ್ದಾಗಿದೆ. ಇಲ್ಲಿ ಮಹಿಳೆಯರ ದುಡಿಮೆಯನ್ನು ಆರ್ಥಿಕತೆಯ ಭಾಗವಾಗಿ ಪರಿಗಣಿಸಿಲ್ಲ. ಮಹಿಳೆಯರು ದುಡಿಮೆಯಲ್ಲಿ ತನ್ನನ್ನು ತಾನು ಪ್ರಾಮಾಣಿಕವಾಗಿ ತೊಡಗಿಸಿಕೊಂಡರೂ ಅವರ ದುಡಿಮೆಗೆ ನಿರ್ಧಿಷ್ಟವಾದ ವೇತನವನ್ನು ನೀಡುವುದಿಲ್ಲ. ಮಹಿಳೆ ಮತ್ತು ಪುರುಷನ ದುಡಿಮೆಯಲ್ಲಿ ತಾರತಮ್ಯದ ಸ್ವರೂಪವನ್ನು ಹೊಂದಿದೆ. ಇದಲ್ಲದೆಯೆ ಆಧುನಿಕರಣದ ಪ್ರಭಾವದಿಂದಾಗಿ ಕೂಲಿಗೆಲಸ ಮತ್ತು ಮನೆಕೆಲಸಗಳ ನಡುವಣ ಸ್ಪಷ್ಟವಾದಂತಹ ವ್ಯತ್ಯಾಸವು ಕಂಡುಬಂದಿದೆ. ಮಹಿಳೆಯರು ಪುರುಷಪ್ರಧಾನ ಸಮಾಜದಿಂದ ಮಾತ್ರ ಶೋಷಣೆಗೆ ಒಳಗಾಗಿಲ್ಲ.

ಜಾಗತೀಕರಣ ಮತ್ತು ಖಾಸಗಿ ಆಸ್ತಿಯಿಂದಾಗಿಯೂ ಸ್ತ್ರೀಯರ ಶೋಷಣೆಯಲ್ಲಿ ಇವುಗಳ ಪಾತ್ರವೂ ಅಧಿಕವಾಗಿದೆ. ಖಾಸಗಿ ಆಸ್ತಿಯು ಮಹಿಳೆಯನ್ನು ದ್ವಿತೀಯ ದರ್ಜೆಯ ಪ್ರಜೆಯನ್ನಾಗಿ ಮಾಡಿದೆ. ಮಹಿಳೆಯರು ಪುರುಷನಿಗೆ ಸರಿಸಮಾನಾದ ಸ್ಥಾನವನ್ನು ಹೊಂದಬೇಕಾದರೆ ಮೊದಲು ಪುರುಷ ಹಾಗು ಮಹಿಳೆಯರ ನಡುವಿನ ಶ್ರಮವಿಭಜನೆಯ ಶ್ರೇಣೀಕರಣವು ನಾಶವಾಗಬೇಕು.

ಈ ಲಿಂಗ ತಾರತಮ್ಯದ ಮೂಲ ಪ್ರಶ್ನೆ ಇರುವುದೇ ಆರ್ಥಿಕತೆಯ ಪ್ರಶ್ನೆಗಳನ್ನು ಸರಿಯಾಗಿ ಅರ್ಥೈಸಿಕೊಳ್ಳುವುದರಲ್ಲಿ. ಎಂಬ ಚರ್ಚೆಯನ್ನು ವಿಚಾರ ಸಾಹಿತ್ಯವು ಬಹಳಗಂಭೀರವಾಗಿ ಪರಿಗಣಿಸಿದೆ. ಮೊದಲ ಘಟ್ಟದ ಮಹಿಳಾ ಚಿಂತಕರು ಮಹಿಳೆಯ ಆರ್ಥಿಕತೆ ಹಾಗು ದುಡಿಮೆಯ ವ್ಯಾಖ್ಯಾನವನ್ನು ಪೂರ್ಣಪ್ರಮಾಣದಲ್ಲಿ ಮಹಿಳೆಯನ್ನು ಕೇಂದ್ರವಾಗಿಟ್ಟು ಚರ್ಚೆಮಾಡದೇ ಇದ್ದರೂ ತದನಂತರದಲ್ಲಿ ಬಂದಂತಹ ಚಿಂತಕರು ಈ ಪ್ರಶ್ನೆಯ ಬಗೆಗೆ ಗಂಭೀರವಾದ ವ್ಯಾಖ್ಯಾನವನ್ನು ಮಾಡಿದ್ದಾರೆ. ಆ ಪ್ರಶ್ನೆಯನ್ನು ಮುಖ್ಯವಾಗಿ ಮಾರ್ಕ್ಸಿಸ್ಟ್ ಸ್ತ್ರೀವಾದಿ ಚಿಂತಕರು ಇದನ್ನು ನಿರ್ವಹಿಸಿದರು. ಮಹಿಳೆಯರ ಆರ್ಥಿಕತೆಯು ಸಬಲೀಕರಣಗೊಂಡರೆ ಮಹಿಳೆಯರ ಸ್ಥಿತಿಗತಿ ಸಮಾಜದಲ್ಲಿ ಸ್ವಲ್ಪ ಮಟ್ಟಿಗಾದರು ಸುಧಾರಣೆಯಾಗುತ್ತದೆ. ಅಲ್ಲದೆ ಆರ್ಥಿಕ ಸ್ವಾವಲಂಬನೆಯಿಂದಾಗಿ ಸಮಾಜದಲ್ಲಿ ಸ್ತ್ರೀ ಮತ್ತು ಪುರುಷರ ನಡುವೆ ಸಮಾನತೆ ಬೆಳೆಯಲು ಸಾಧ್ಯವಾಗುತ್ತದೆ. ಎನ್ನುವಂತದ್ದು ಮಾರ್ಕ್ಸಿಸ್ಟ್ ಚಿಂತಕರ ವ್ಯಾಖ್ಯಾನವಾಗಿದೆ.

ಜಾಗತೀಕರಣದ ಮಾರುಕಟ್ಟೆಯು ಮಹಿಳೆಯನ್ನು ಹೆಚ್ಚು ಶೋಷಣೆ ಮಾಡುತ್ತಿರುವುದು ಕಾಣುತ್ತೇವೆ. ಮಾರುಕಟ್ಟೆ ಮಹಿಳೆಯರ ಶ್ರಮವನ್ನು ಶೋಷಣೆ ಮಾಡುತ್ತಿದೆ. ಜಾಗತೀಕರಣವು ಮಹಿಳೆಯನ್ನು ಸ್ವಾವಲಂಬಿಯನ್ನಾಗಿ ಮತ್ತು ಸ್ವತಂತ್ರ ಆಯ್ಕೆಗೆ ಎಷ್ಟು ಆಧ್ಯತೆ ಕೊಟ್ಟಿತೋ ಹಾಗೆಯೇ ಅವಳನ್ನು ನಿರ್ಬಂಧಿಸುವುದಕ್ಕೆ ಅಷ್ಟೇ ಜರೂರಾಗಿ ತನ್ನ ವೇದಿಕೆಯನ್ನು ನಿರ್ಮಿಸಿತು. ಹಾಗೆಯೇ ಲಿಂಗ ಅಸಮಾನತೆಯನ್ನೂ ಸಹ ತಂದೊಡ್ಡಿದೆ ಎಂಬುದರಲ್ಲಿ ಯಾವುದೇ ರೀತಿಯಾದ ಅನುಮಾನವಿಲ್ಲ. "ಯಾವ ಜಾಗತೀಕರಣವು ವಿಮೋಚನೆಯ ದಾರಿಯಾಗಿ ಕಂಡಿತ್ತೋ ಅದೇ ಜಾಗತೀಕರಣ ಇನ್ನೂ ತೀವ್ರವಾದ, ಜಟಿಲವಾದ, ಬಿಡಿಸಲು ಬಾರದ ಕಗ್ಗಂಟಾಗಿ ಕಾಣಿಸತೊಡಗಿದ್ದು ಅದರ ಮುಂದುವರಿದ ಘಟ್ಟದಲ್ಲಿ. ಬದಲಾವಣೆಯ ಹರಿಕಾರನ ಹಾಗೆ, ಮಾರ್ಗದರ್ಶಿಯ ಹಾಗೆ, ಸ್ನೇಹಿತನ ಹಾಗೆ ಕಂಡ ಜಾಗತೀಕರಣವು ಹಿತಶತ್ರುವಿನ ಹಾಗೆ, ಕೆಲವೊಮ್ಮೆ ರಾಕ್ಷಸನ ಹಾಗೆ ಕಾಣಿಸತೊಡಗಿತು. ಇದು ಹೆಣ್ಣಿನ ಮಟ್ಟಿಗೆ ಮಾತ್ರವಲ್ಲ, ಸಂಸ್ಕೃತಿ, ಅನನ್ಯತೆ, ವ್ಯವಸ್ಥೆಯ ಸ್ವಾವಲಂಬನೆ, ಸಮಾಜದ ಸ್ವಾಸ್ಥ್ಯ ಹೀಗೆ ಬದುಕಿನ ಎಲ್ಲಾ ಕ್ಷೇತ್ರಗಳಲ್ಲಿಯೂ ಕಾಡತೊಡಗಿತು."[೧೬] ಜಾಗತೀಕರಣವೂ ಯಾರನ್ನೂ ಬಿಟ್ಟಿಲ್ಲ. ಕೇವಲ ಮಹಿಳೆಯರಿಗೆ ಮಾತ್ರ ಇದು ಮಾರಕವಾಗಿರದೆ ಸಮಾಜ, ಸಂಸ್ಕೃತಿಗಳ ಮೇಲೆಯು ಇದರ ಕೆಟ್ಟ ಪರಿಣಾಮ ಬಿದ್ದಿದೆ ಎನ್ನುವುದು ಲೇಖಕಿಯು ಹೀಗೆ ಅಭಿಪ್ರಾಯಪಡುತ್ತಾರೆ. ಜಾಗತೀಕರಣವು ಮೊದಲು ಬರುವ ಸಂದರ್ಭದಲ್ಲಿ ಅತ್ಯಂತ ಉತ್ಸಾಹದಿಂದ ಸ್ವಾಗತ ಮಾಡಿಕೊಂಡರಾದರೂ, ಅದರಿಂದಾದ ಪರಿಣಾಮಗಳನ್ನು ಅಷ್ಟೇ ಉತ್ಸಾಹದಿಂದ ಸ್ವಾಗತಿಸಿಕೊಳ್ಳಲಾಗಲಿಲ್ಲ.

ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಭ್ರೂಣಹತ್ಯೆಗೆ ಈ ಜಾಗತೀಕರಣವು ಹೇಗೆ ನೆರವಾಯಿತು ಮತ್ತು ಇದರ ಪರಿಣಾಮವಾಗಿ ಅಸಮಾನ ಸಂಪತ್ತು ಹೇಗೆ ಶೇಕರಣೆಯಾಗಲು ಕಾರಣವಾಗಿದೆ ಎಂಬುದನ್ನಿಲ್ಲಿ ನೋಡಬಹುದು. "ಸಂಪತ್ತಿನ ಅಸಮಾನತೆಯ ಕಾರಣದಿಂದಾಗಿ ಸಮಾಜದಲ್ಲಿ ಮಾನವೀಯ ಮೌಲ್ಯಗಳು ಕಾಣೆಯಾಗುತ್ತಿವೆ. ಜೀವಗಳೂ ಸರಕಾಗುತ್ತವೆ. ಹೌದಲ್ಲ! ಕುರುಡು ಕಾಂಚಾಣದ ಥಕಥೈ ಮಾರುಕಟ್ಟೆಯಲ್ಲಿ ದುಡಿವ ಜನರ ರಟ್ಟೆಗಳೂ ಸರಕೇ. ಜೀವಂತ ಹೆಣ್ಣಿನ ಕಟಿ–ತುಟಿ, ಚರ್ಮವೂ ಸರಕೇ. ಈ ಸರಕು ಸಂಸ್ಕೃತಿಯಲ್ಲಿ ಹೆಂಗಸಿನ ಹೆಣ್ಣು ಪಿಂಡದ ಹತ್ಯೆಯೂ ವ್ಯಾಪಾರದ ಭಾಗವೇ"[೧೬] ಇಲ್ಲಿ ಲೇಖಕಿಯು ದುಡಿಯುವವರ ರಟ್ಟೆಗಳೂ ಸಹ ಸರಕಾಗಿವೆ. ಹಣದ ಮುಂದೆ ಎಲ್ಲವನ್ನೂ ಅಂದರೆ ಮನುಷ್ಯತ್ವವೇ ಇಲ್ಲದಂತಾಗಿದೆ. ಈ ಜಾಗತೀಕ ಮಾರುಕಟ್ಟೆಯಲ್ಲಿ ಹೆಣ್ಣಿನ ಕಟಿ–ತುಟಿ, ಚರ್ಮವೂ ಜೀವಂತ ಸರಕೇ ಎನ್ನುವಾಗ ಸೌಂದರ್ಯ ಮತ್ತು ಮಾರುಕಟ್ಟೆ ಹೇಗೆ ಮಿಳಿತಗೊಂಡು ಹೆಣ್ಣನ್ನು ಶೋಷಣೆಗೆ ಒಳಗು ಮಾಡುತ್ತಿದೆ ಎಂಬುದನ್ನಿಲ್ಲಿ ವಿಷಾದಿಸುತ್ತಿದ್ದಾರೆ. ಈ ಜಾಗತೀಕರಣವು ಕೊಳ್ಳುಬಾಕ ಸಂಸ್ಕೃತಿಯನ್ನು ಮತ್ತು ಸರಕು ಸಂಸ್ಕೃತಿಯನ್ನು ಬೆಳೆಸಿಕೊಂಡು ಬಂದಿದೆ. ಜಾಗತೀಕರಣದ ಆರಂಭವೂ ಮಾರುಕಟ್ಟೆಯೆ ಆಗಿದೆ ಎಂಬುದನ್ನು ಅರಿಯಬೇಕಾದ ಬಹುಮುಖ್ಯವಾದ ಅಂಶವಾಗಿದೆ. ಜಾಗತೀಕರಣ ವ್ಯವಸ್ಥೆಗೆ ಮೊದಲು ಬಲಿಯಾಗುವವಳು ಮಹಿಳೆಯಾಗಿದ್ದಾಳೆ ಎನ್ನುವುದನ್ನು ಮರೆಯುಂತಿಲ್ಲ. ಈ ಮಾರುಕಟ್ಟೆ ಮತ್ತು ಸರಕು ಸಂಸ್ಕೃತಿಯಲ್ಲಿ ಹೆಣ್ಣಿನ ದೇಹ ಸೌಂದರ್ಯವನ್ನು ಸರಕನ್ನಾಗಿಸಿವುದನ್ನು ನೋಡಬಹುದು. ಇಲ್ಲಿ ಹಣದ ಆಮಿಷಕ್ಕೆ (ಪ್ರಾಮುಖ್ಯತೆಗೆ) ದೇಹವನ್ನೇ ಮೊದಲು ಬಂಡವಾಳವನ್ನಾಗಿಸಿಕೊಂಡಿದೆ. ಈ ಜಾಗತೀಕರಣವು ಅವಳ ಶ್ರಮವನ್ನೊಂದೆಡೆ ದೋಚಿದರೆ ಇನ್ನೊಂದು ಕಡೆ ಅವಳ ದೇಹವನ್ನೇ ದೋಚುತ್ತಿದೆ. ಬಂಡವಾಳಶಾಹಿಯ ನೀತಿಯು ಮಹಿಳೆಯರನ್ನು ಜಾಗತೀಕ ಮಹಿಳೆಯರ ಶ್ರಮಶಕ್ತಿಯನ್ನು ಕಡಿಮೆ ಕೂಲಿಗೆ ಖರೀದಿಸಿ, ಕೂಲಿಕಾರ್ಮಿಕ ಮಹಿಳೆ, ರೈತ, ಕೃಷಿ ಮಹಿಳೆಯರನ್ನು ಖರೀದಿಸುತ್ತಿದ್ದಾರೆ. ಸಾಮ್ರಾಜ್ಯಶಾಹಿಗಳ ಮತ್ತು ಕಾರ್ಪೋರೇಟ್ ಕಂಪೆನಿಗಳು ಇವರ ಮೇಲೆ ನಡೆಸುತ್ತಿರುವ ಶೋಷಣೆಯ ಭಾರವನ್ನು ಇವರೆ ಹೊರಬೇಕಾಗಿದೆ.

ಮಹಿಳೆಯು ಮೊದಲೆಲ್ಲ ತನ್ನ ಶತ್ರುಗಳನ್ನು ನೇರವಾಗಿ ಮುಖಾಮುಖಿಯಾಗಿ ನೋಡಬಹುದಿತ್ತು. ಆದರೆ ಜಾಗತೀಕರಣದಂತಹ ಸಂದರ್ಭದಲ್ಲಿ ತನ್ನ ಶತ್ರು ಯಾರೆಂದು ತಿಳಿಯಲು ಅಸಾಧ್ಯವಾಗಿದೆ. ಇನ್ನೂ ಅವಳ ಶತ್ರುವನ್ನು ಮುಖಾಮುಖಿಯಾಗುವ ಮಾತೆಲ್ಲಿಂದ ಬಂತು. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಕುಟುಂಬವು ಆಕೆಯನ್ನು ನಿರ್ಬಂಧಿಸುವ ಮೊದಲ ಕಾರಾಗೃಹವಾಗಿರಬಹುದು. ಧರ್ಮ ಶೋಷಣೆ ಮತ್ತು ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕಿಕೊಳ್ಳಬಹುದಿತ್ತು. ಆದರೆ ಪ್ರಸ್ತುತದಲ್ಲಿ ಜಾಗತೀಕರಣದ ಸಲುವಾಗಿ ತನ್ನ ಶತ್ರುವನ್ನು ಹುಡುಕಿಕೊಳ್ಳುವ ಮತ್ತು ಅವಳು ಯಾರ ವಿರುದ್ಧ ತನ್ನ ಅಸ್ತಿತ್ವಕ್ಕಾಗಿ ಹೋರಾಡಬೇಕೆಂದು ತಿಳಿಯದಂತಹ ಅತಂತ್ರ ಸ್ಥಿತಿಯನ್ನು ತಲುಪಿದ್ದಾಳೆ. "ವಿಶ್ವದ ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರು ಪ್ರಾಚೀನ ಕಾಲದಿಂದಲೂ ವ್ಯವಸ್ಥೆಯ ಅಧೀನಳಾಗಿ, ಪುರಷರ ಮೇಲಾಳುತನದಲ್ಲಿ ಬದುಕಿದ್ದಾರೆ. ಅನೇಕ ಕಾರಣಗಳಿಂದ

ಅವಳು ಉಳಿಸಿಕೊಂಡು ಬಂದಿದ್ದ ಅಲ್ಪ ಸ್ವಲ್ಪ ಸ್ವಾತಂತ್ರ್ಯವನ್ನು ಕಿತ್ತುಕೊಂಡು ಅನೇಕ ಅಸಮತೋಲನಗಳಿಗೆ ಈ ಜಾಗತೀಕರಣವು ಕಾರಣವಾಗಿದೆ. ನಮ್ಮ ಅರ್ಥ ವ್ಯವಸ್ಥೆಯ ಮೇಲೆ ಹಿಡಿತ ಸಾಧಿಸುತ್ತಲೇ ಪ್ರಜಾಪ್ರಭುತ್ವದ ತತ್ವಗಳನ್ನು ಅಶಕ್ತಗೊಳಿಸುತ್ತವೆ."[೧೮] ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಕಿತ್ತು ತಿನ್ನುವ ಬಡತನವು ಬಹಳ ಮುಖ್ಯ ಸಮಸ್ಯೆಗಳಲ್ಲಿ ಇದು ಒಂದಾಗಿದೆ. ಗಂಡು ಮಗು ಹುಟ್ಟಿನೊಂದಿಗೆ ಸಂಪತ್ತು (ಲಾಭ)ದ ಹೊರೆಯ ತಂದರೆ, ಹೆಣ್ಣು ನಷ್ಟದ ಪಾಲನ್ನು ತರುತ್ತದೆ ಎನ್ನುವಂತಹ ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿನ ಭ್ರೂಣಹತ್ಯೆಯು ಹೆಚ್ಚಾಗಿ ನಡೆಯುತ್ತಿದೆ. ಇದರ ಜೊತೆಗೆ ಮಹಿಳೆ ಮತ್ತು ಮಕ್ಕಳ ಮಾರಾಟದ ಜಾಲಗಳು ತಲೆ ಎತ್ತಿವೆ. ಜಾಗತೀಕರಣವು ಇದಕ್ಕೆ ಹೇಗೆ ಪೂರಕವಾದ ವಾತಾವರಣವನ್ನು ಕಲ್ಪಿಸಿಕೊಟ್ಟಿದೆ ಎಂಬುದು 'ನೆಲದ ಪಿಸುಮಾತು' ಕೃತಿಯ ಮುನ್ನುಡಿಯಲ್ಲಿ ಎಸ್.ವೈ. ಗುರುಶಾಂತ್ ಅವರು ಹೀಗೆ ಅಭಿವ್ಯಕ್ತಿಸುತ್ತಾರೆ. "ಹೆಣ್ಣೊಂದು ಹುಣ್ಣು ಎಂದು ಬಗೆವ ಲಿಂಗ ತಾರತಮ್ಯದ ಸಮಾಜ ವ್ಯವಸ್ಥೆಯಲ್ಲಿ, ದಾರಿದ್ರ್ಯವೂ ಸೇರುವಾಗ ಹೆಣ್ಣು ಕಂದಮ್ಮಗಳ ಮಾರಾಟ ನಡೆಯುತ್ತಿದೆ. ಮಹಿಳೆಯರು, ದಲಿತರ ಮೇಲಿನ ದೌರ್ಜನ್ಯಗಳು ಘಟಿಸುತ್ತಲೇ ಇರುತ್ತವೆ. ತುಂಬಿ ಹರಿವ ನದಿಗಳ ನಡುವೆ ನೆಲ ಬರಡಾಗಿದೆ. ಬಿರಿದ ನೆಲದಿಂದ ಹೊಮ್ಮುವ ನಿಟ್ಟುಸಿರು, ಕಣ್ಣೀರು ಹೀಗೆ ಆರ್ಥಿಕ ಆಂತಕವಾದವು. ಜನರ ಜೀವ-ಜೀವನವನ್ನು ನೆಕ್ಕಿ ಮುಕ್ಕುತ್ತಿದ್ದರೆ, ಸಾಮಾಜಿಕ ಸಂಕ್ಷೋಭೆಗಳನ್ನು ಹುಟ್ಟು ಹಾಕಿ ಜನ ಎಚ್ಚರಗೊಳ್ಳದಂತೆ ಹಾದಿ ತಪ್ಪಿಸುವ ಪ್ರಯತ್ನಗಳು ನಿರಂತರವಾಗಿ ನಡೆದೇ ಇವೆ."[೧೯] ಆರ್ಥಿಕತೆಯ ಚರ್ಚೆಯೊಂದಿಗೆ ಸಾಮಾಜಿಕತೆಯೂ ಸಹ ಇದರೊಂದಿಗೆ ತಳುಕು ಹಾಕಿಕೊಳ್ಳುತ್ತದೆ. ಹಾಗೆಯೇ ದಲಿತರು ಮತ್ತು ಮಹಿಳೆಯರನ್ನು ಹಾದಿ ತಪ್ಪಿಸುವ ಕಾರ್ಯವನ್ನು ನಿರ್ವಹಿಸುತ್ತದೆ.

ಜಾಗತೀಕರಣವು ಆಹಾರದ ಮೇಲೆಯು ತನ್ನ ಪರಿಣಾಮವನ್ನು ಬೀರಿರುವುದನ್ನು ಕಾಣುತ್ತೇವೆ. ಇದರಿಂದಾಗಿ "ಮೊದಲು ಮಹಿಳೆ ಕಳೆದುಕೊಳ್ಳುವುದು ಅವಳ ಆಹಾರದ ಭದ್ರತೆಯನ್ನು ವಿದೇಶಿ ಬಂಡವಾಳ ಹೂಡಿಕೆದಾರರು ದೇಶವನ್ನು ಪ್ರವೇಶಿಸಿದ ಕೂಡಲೇ ಗ್ರಾಮೀಣ ರೈತ ಭಾಂದವರಿಂದ ಫಲವತ್ತಾದ ಜಮೀನನ್ನು ಕಿತ್ತುಕೊಳ್ಳುತ್ತಾರೆ. ಕೃಷಿಯೋಗ್ಯ ಜಮೀನಿನ ಜೊತೆಗೆ ಅರಣ್ಯವನ್ನು ದಟ್ಟ ಕಾಡುಗಳನ್ನು ಆಕ್ರಮಿಸುತ್ತಾರೆ. ದೊಡ್ಡ ದೊಡ್ಡ ಕಾರ್ಖಾನೆಗಳನ್ನು ಉದ್ದಿಮೆಗಳನ್ನು ಆರಂಭಿಸುತ್ತಾರೆ."[೨೦] ಇದರಿಂದಾಗಿ ಫಲವತ್ತಾದ ಭೂಮಿಯಲ್ಲಿ ವಾಣಿಜ್ಯ ಬೆಳೆಯನ್ನು ಬೆಳೆಯುವುದರ ಜೊತೆಗೆ ಅದಕ್ಕೆ ಅತಿಯಾದ ಕ್ರಿಮಿನಾಶಕವನ್ನು ಸಿಂಪಡಿಸಿ ಅಲ್ಲಿನ ಫಲವತ್ತಾದ ಜಮೀನನ್ನು ನಾಶ ಮಾಡುತ್ತಾರೆ. ಅಲ್ಲಿ ಕಾರ್ಖಾನೆಗಳನ್ನು ನಿರ್ಮಿಸುವುದರಿಂದ ಮಹಿಳೆ ಮತ್ತು ಆಕೆಯ ಕುಟುಂಬ ಬೀದಿ ಪಾಲಾಗುತ್ತದೆ. ಅಲ್ಲದೆಯೇ ಸಾಂಪ್ರದಾಯಿಕ ಬೆಳೆಗಳು ನಾಶವಾಗುವ ಅಂಚಿಗೆ ಸರಿಯುವುದರಿಂದ ಮಹಿಳೆಯ ಆಹಾರದ ಮೇಲಿನ ಅಭದ್ರತೆ ಹೆಚ್ಚು ಕಾಡುತ್ತದೆ. "ಬಹುರಾಷ್ಟ್ರೀಯ ಕಂಪನಿಗಳ ಜಾಗತಿಕ ಮಾರುಕಟ್ಟೆ ತಂತ್ರಗಳು ನಮ್ಮ ಅಡಿಗೆ ಮನೆಯೊಳಗೆ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿಲ್ಲವೇ? ಹಸುಗೂಸಿನ ನಾಲಿಗೆಗೂ ಕಡಿವಾಣ ಹಾಕುತ್ತಿಲ್ಲವೇ? ರಾಗಿ ಸರಿ, ಬೇಳೆ ಸರಿ ಎಂಬ ತಲತಲಾಂತರದಿಂದ ಬಂದ ಶಿಶು ಆಹಾರ, ನೆನಪಿನಿಂದಲೆ ಹಿಂದೆ ಸರಿದು ಫೆರೆಕ್ಸ್ ಸೀರಿಯಲ್‌ಗಳ ಡಬ್ಬಗಳು ಹಳ್ಳಿಗಳಲ್ಲೂ ಕಾಣುತ್ತಿಲ್ಲವೇ? ಜಾಗತೀಕರಣವೆಂಬುದು ಅಡಿಗೆ ಮನೆಗೂ

ನುಗ್ಗಿರುವಾಗ ನಮ್ಮ ಮಕ್ಕಳು ಬೆಳಗಿನ ತಿಂಡಿಗೆ ಇಡ್ಲಿ, ದೋಸೆ ಬೇಡ, ಲಂಚ್‌ಗೆ ಸ್ಯಾಂಡ್‌ವಿಚ್ ಸಾಕು ಎಂದು ಹೇಳದೆ ಸುಮ್ಮನಿರಲು ಸಾಧ್ಯವೆ? ಹೀಗೆ ಆಗುತ್ತ ಹೋದರೆ ಒಂದು ದಿನ ಎಂದಿಗೂ ಬದಲಾಗದು ಅಂದುಕೊಂಡಿದ್ದ ಆಹಾರ ಸಂಸ್ಕೃತಿಯೂ ಬದಲಾಗುತ್ತದೆ. ಜಗತ್ತಿನ ಎಲ್ಲ ಮಕ್ಕಳೂ ಒಂದೇ ರೀತಿ ತಿನ್ನಲಾರಂಭಿಸಿದರೆ ಒಂದು ದಿನ ನಮ್ಮ ಹೊಟ್ಟೆಯಲ್ಲಿ ಜಗತ್ತು ಕೂರುತ್ತದೆ. ನಾವು ಬಾಯಿ ಮುಚ್ಚಿಕೊಂಡು ಕೂರುತ್ತೇವೆ."[೨೧] ನಮ್ಮ ಜೀವನ ಕ್ರಮವು ಜಾಗತೀಕರಣ ಪರಿಣಾಮವಾಗಿ ಯಾವ ಹಂತವನ್ನು ತಲುಪುತ್ತಿದೆ. ಮತ್ತದರ ಅಜಾನು ಬಾಹುಗಳು ಆಹಾರದ ಮೇಲಿನ ಹಿಡಿತವನ್ನು ಹೇಗೆ ಸಾಧಿಸಿಕೊಳ್ಳುತ್ತಿದೆ ಎಂಬುದನ್ನು ಇವರು ವ್ಯಕ್ತಪಡಿಸುವುದರ ಜೊತೆಗೆ ನಮ್ಮ ಆಹಾರ ಪದ್ಧತಿಗೆ ಮುಂದೆ ಒದಗಬಹುದಾದಂತ ಆಂತಕವನ್ನು ಲೇಖಕಿಯು ವ್ಯಕ್ತಪಡಿಸುತ್ತಾರೆ. ಜಾಗತೀಕರಣವು ಎಲ್ಲವನ್ನೂ ತನ್ನೊಳಗೆ ಆಗು ಮಾಡಿಕೊಳ್ಳುವುದರ ಜೊತೆಗೆ ಬಡವರ ಮತ್ತು ಮಹಿಳೆಯರ ಆರೋಗ್ಯದ ಮೇಲೆ ಈ ಆಹಾರ ಪದ್ಧತಿಯು ಏನೆಲ್ಲಾ ಪರಿಣಾಮವನ್ನುಂಟು ಮಾಡಿದೆ/ಮಾಡುತ್ತಿದೆ ಎಂಬುದನ್ನು ಬಹಳ ಗಂಭೀರವಾಗಿ ಚರ್ಚಿಸಿದ್ದಾರೆ.

ಹೆಣ್ಣು ಮಕ್ಕಳನ್ನು ಮಾರಾಟ ಮಾಡುವ ಮೂಲಕ ವೇಶ್ಯಾವಾಟಿಕೆಗೆ ಹೆಚ್ಚು ಉತ್ತೇಜನ ಕೊಡಲಾಗಿದೆ. ಅವಳನ್ನು ಬಲವಂತವಾಗಿ ವೇಶ್ಯಾವಾಟಿಕೆಗೆ ತಳ್ಳುವುದಲ್ಲದೆ ಅವಳ ದೇಹದ ಆಧಾರದ ಮೂಲಕ ಲಾಭವನ್ನು ಪಡೆಯುತ್ತಿದ್ದಾರೆ. ಕೆಲವೊಮ್ಮೆ ಬಡತನ ಕಾರಣವಾದರೆ ಇನ್ನು ಕೆಲವೊಮ್ಮೆ ಯಾರದೊ ಬಲವಂತಕ್ಕೆ ವೇಶ್ಯಾವಾಟಿಕೆಗೆ ತಳ್ಳಲ್ಪಟ್ಟರೆ ಇನ್ನು ಕೆಲವರು ತಮ್ಮ ಸ್ವ ಇಚ್ಛೆಯಿಂದ ಬಂದವರೂ ಇರುತ್ತಾರೆ. ಬಡತನದ ಕಾರಣಕ್ಕೆ ಹಾಗೂ ಬಲವಂತದಿಂದ ತಳಲ್ಪಟ್ಟವರೇ ಹೆಚ್ಚಾಗಿ ಈ ದಂಧೆಯಲ್ಲಿ ಸಿಲುಕಿ ನೋವನ್ನು ಅನುಭವಿಸುವವರೆ ಹೆಚ್ಚು. ಆಕೆಯ ದೇಹವನ್ನು ಕಿತ್ತು ತಿನ್ನುವ ರಣಹದ್ದುಗಳಾಗಿ ಅವಳನ್ನು ಮತ್ತಷ್ಟು ಶೋಷಣೆಗೆ ಈಡುಮಾಡಲಾಗಿದೆ.

ಕೇವಲ ಭಾರತದಲ್ಲಿ ಮಾತ್ರವಲ್ಲದೆ ವಿಶ್ವದೆಲ್ಲೆಡೆ ಈ ಜಾಲವನ್ನು ಹಬ್ಬಿಸಿದೆ. ವರ್ಷಕ್ಕೆ ಅದೆಷ್ಟು ಹೆಣ್ಣುಗಳು ಬಲಿಯಾಗುವರೋ? ಬೇರೆ ಬೇರೆ ದೇಶಗಳಿಗೆ ಮತ್ತು ಇತರ ದೇಶಗಳಿಂದ ಭಾರತಕ್ಕೆ ಹೆಣ್ಣುಗಳು ಆಮದಾಗುತ್ತಿರುವುದನ್ನು ಕೇಳುತ್ತಿದ್ದೇವೆ. ಆದರೂ ಅದನ್ನು ತಡೆಯುವ ಕ್ರಮಗಳು ನಡೆಯುತ್ತಿದೆಯಾದರೂ ಮಹಿಳೆ ಮತ್ತು ಮಕ್ಕಳ ಸಾಗಾಣಿಕೆ ಕಡಿಮೆಯಾಗಿಲ್ಲ. "ಜಾಗತೀಕರಣದ ಬಹಳ ಭಯಾನಕವಾದ ರೂಪವೇ ಸೂಳೆಗಾರಿಕೆ. ಹೆಣ್ಣುಗಳ ವಿರುದ್ಧ ಅನೈತಿಕ ಲೈಂಗಿಕತೆಯನ್ನು ಭೂಗತ ಲೋಕದ ನಂಟನ್ನು ಹಿಂಸೆ ಕ್ರೌರ್ಯಗಳನ್ನು ಭೂಗತ ಜಗತ್ತು, ಹೆಣ್ಣುಗಳ ನಿರುದ್ಯೋಗ ಮತ್ತು ವಲಸೆಗಳು ನೇರವಾಗಿ ಈ ಅನೈತಿಕ ಲೋಕವನ್ನು ನೀಡುತ್ತವೆ. ಇದು ಮಹಿಳೆ, ಯುವತಿ, ಹಾಲುಗೆನ್ನೆಯ ಹೆಣ್ಣು ಕೂಸನ್ನು ಬಿಡದೇ ತನ್ನ ಲೈಂಗಿಕ ನಿರ್ಲಜ್ಜ ಲೋಕಕ್ಕೆ ಬಳಸಿಕೊಂಡು ಕಾಯಿಲೆ ಅನಾರೋಗ್ಯ, ಬಡತನ, ಭಯ, ಕ್ರೌರ್ಯಗಳನ್ನು ಅವಳಿಗೆ ಬಳುವಳಿಯಾಗಿ ನೀಡುತ್ತದೆ. ಇದು ಜಾಗತೀಕರಣದ ಒಂದು ಭಯಾನಕ ರೂಪವಾಗಿದೆ. ಪ್ರತಿ ವರ್ಷ ಮುಂಬೈ ನಗರವೊಂದರಲ್ಲಿಯೇ ೪೫,೦೦೦ ಹುಡುಗಿಯರು ಈ ಕ್ಷೇತ್ರಕ್ಕೆ ಬರುತ್ತಾರೆ. ಚೀನಾ, ನೇಪಾಳದಿಂದಲೂ ಸಾಕಷ್ಟು ಸಂಖ್ಯೆಯ ಯುವತಿಯರು ಈ ಕ್ಷೇತ್ರಕ್ಕೆ ಲೈಂಗಿಕ

ಕಾರ್ಯಕರ್ತೆಯರಾಗಿ ಕಾಲಿಡುತ್ತಿದ್ದಾರೆ. ಪ್ರತಿ ವರ್ಷ ನೇಪಾಳದಿಂದ ಭಾರತಕ್ಕೆ ಈ ಕ್ಷೇತ್ರಕ್ಕೆ ಸುಮಾರು ೫೦೦೦ ರಿಂದ ೭೦೦೦ ಹುಡುಗಿಯರು ಬರುತ್ತಿದ್ದಾರೆ. ಜಾಗತೀಕರಣದಲ್ಲಿ ಆರ್ಥಿಕ ರಂಗದ ಬಹುಮುಖ್ಯ ಮುಖವೆಂದರೆ ವಿದೇಶಿ ವಿನಿಮಯ ಗಳಿಸುವುದು. ಅದಕ್ಕಾಗಿಯೂ ಮಹಿಳೆಯೇ ಗುರಿಯಾಗುತ್ತಾಳೆ."[೨೨] ಹೆಣ್ಣುಗಳ ಮಾರಾಟದ ಜಾಲವು ಇನ್ನಷ್ಟು ಹೆಚ್ಚುತ್ತಿದೆ ವಿನಃ ಕಡಿಮೆಯಾಗುತ್ತಿಲ್ಲ. ಅವಳ ದೇಹದ ಮೇಲೆ ಅವಳಿಗೆ ಯಾವುದೇ ರೀತಿಯಾದಂತಹ ಹಕ್ಕಿಲ್ಲ. ಅವಳು ಏನಿದ್ದರೂ ಮಾರಾಟದ ಸರಕೆ ವಿನಃ ತನ್ನದೇ ಆದ ಭಾವನೆಗಳನ್ನು, ಆಸೆ, ಆಕಾಂಕ್ಷೆಗಳನ್ನು ಹೊಂದಿರುವ ಒಬ್ಬ ಮನುಷ್ಯಳಾಗಿ ಕಾಣಲಾರಳು ಎಂಬುದು ಕೆ.ಷರೀಫ ಅವರ ಅಭಿಪ್ರಾಯವಾಗಿದೆ.

ಜಾಗತೀಕರಣವು ವೇಶ್ಯಾವಾಟಿಕೆಯನ್ನು ಇನ್ನಷ್ಟು ಹೈಟೆಕ್ ಮಾಡುವುದರ ಮೂಲಕ ಮಹಿಳೆಯನ್ನು ಮತ್ತಷ್ಟು ಕ್ರೌರ್ಯದ ಕೆಂಡದೊಳಗೆ ತಳ್ಳುತ್ತಿರುವುದನ್ನು ಎಂ.ವಿ.ವಸು ಅವರು 'ಕೆಂಪು ದೀಪ ಉರಿಸುವವರು' ಎಂಬ ಲೇಖನದಲ್ಲಿ ಹೇಳುತ್ತಾರೆ. "ಲೈಂಗಿಕ ಸೇವೆಯಲ್ಲಿ ತೊಡಗಿದ್ದ ಮಹಿಳೆಯರ ಸ್ಥಿತಿ ಅಧೋಗತಿಯನ್ನು ತಲುಪಿದ್ದು ಬ್ರಿಟೀಷರ ಕಾಲಕ್ಕೆ. ಇಂದು ಭಾರತದಲ್ಲಿ ವೇಶ್ಯಾವಾಟಿಕೆ ಕಾನೂನು ಬಾಹಿರವಾದುದು. ಆದರೆ ಪರೋಕ್ಷವಾಗಿ ರಾಜ್ಯ ಅದರ ಪೋಷಣೆಯನ್ನು ಮಾಡುತ್ತಾ ಬಂದಿದೆ ಎಂದರೂ ತಪ್ಪಾಗಲಾರದು. ನಾಲ್ಕು ವರ್ಷಗಳ ಹಿಂದೆ ಬೆಂಗಳೂರನ್ನು ಥಾಯ್ಲೆಂಡ್ ಮಾಡುವ ಯೋಜನೆಯೂ ಇತ್ತೆಂದರೆ ಗಾಬರಿಯಾಗುತ್ತದೆ. ಬೆಂಗಳೂರು ಐಟಿ ನಗರವಾಗಿ ಬೆಳೆದು ಆ ಹಿನ್ನೆಲೆಯಲ್ಲಿ ಇಲ್ಲಿಗೆ ಬರುವ ಜನರನ್ನು ತಣಿಸುವ ವರ್ಗವನ್ನು ಹುಟ್ಟುಹಾಕುವ ಯೋಜನೆ ನಡೆದೇ ಇದೆ... ಸಹಾಯವಾಣಿಯ ಉದ್ದೇಶವೂ ಅವರೆಲ್ಲರ ಪೋಟೋ, ಮೊಬೈಲ್ ಸಂಖ್ಯೆಯನ್ನು ನೀಡಿ ಗಿರಾಕಿಗಳನ್ನು ಸುಲಭವಾಗಿ ಆನ್ಲೈನ್ ಮೂಲಕ ಪಡೆಯುವಂತೆ ಮಾಡುವುದಾಗಿತ್ತು. ಸಮಾಜ ಆಧುನಿಕವಾದರೆ ಪಿಡುಗುಗಳಿಗೆ ಆಧುನಿಕ ಸ್ವರೂಪ ಬರುತ್ತದೆ. ಆಧುನಿಕ ಸಲಕರಣೆಗಳು ಬಳಕೆಯಾಗುತ್ತವೆ. ಕೆಂಪು ದೀಪ ಸದಾ ಬರುತ್ತದೆ. ಆಧುನಿಕ ಸಲಕರಣೆಗಳು ಜಾಗತಿಕ ಮಾರುಕಟ್ಟೆ ಎಣ್ಣೆಯನ್ನು ಸಿದ್ಧ ಮಾಡುವುದರಲ್ಲಿ ಆಶ್ಚರ್ಯವೇನು."[೨೩] ಮೊದಲು ಕಾನೂನು ಬಾಹಿರವಾಗಿ ನಡೆಯುತ್ತಿದ್ದ ವೇಶ್ಯಾವಾಟಿಕೆಯನ್ನು ಜಾಗತೀಕರಣದ ಪರಿಣಾಮವಾಗಿ ಕಾನೂನಿನ ರಕ್ಷಣೆಯ ಮೂಲಕವೇ ನಡೆಯುವುದರಲ್ಲಿ ಯಾವುದೇ ರೀತಿಯಾದ ಸಂದೇಹವಿಲ್ಲವೆನ್ನುವುದು ವಸು ಮಳಲಿಯವರ ಅಭಿಪ್ರಾಯವಾಗಿದೆ.

ಸೌಂದರ್ಯವೆಂಬುದು ಪ್ರಕೃತಿದತ್ತವಾಗಿ ಬಂದಿರುವಂತಹದ್ದು. ಅದನ್ನು ಯಾವುದೋ ಒಂದು ಮಾನದಂಡದಿಂದ ಅಳೆಯುವಂತಹದ್ದಲ್ಲ. ಹಲವಾರು ರೀತಿಯ ಸೌಂದರ್ಯವನ್ನು ಕಾಣಬಹುದು. ಮನುಷ್ಯನ ಭಾವನೆಯೇ ಒಂದು ಸುಂದರವಾದ ಸೌಂದರ್ಯವಾಗಿದೆ. ಮನುಷ್ಯ ತನ್ನಲ್ಲಿ ತಾನು ಕಂಡುಕೊಂಡಂತಹ ಅಂತರ್ಗತ ಸೌಂದರ್ಯ ಇಂತಹ ಸೌಂದರ್ಯವೆನ್ನುವುದು ಯಾವುದೇ ಸ್ಪರ್ಧೆಗಳಿಂದ ಬರುವಂತಹದ್ದಲ್ಲ. ಆದರೆ ಈ ಸೌಂದರ್ಯವನ್ನು ಜಾಗತೀಕರಣವು ಮಾರುಕಟ್ಟೆಯಲ್ಲಿಟ್ಟು ಲಾಭ ಗಳಿಸುವ ತಂತ್ರವನ್ನು ರೂಪಿಸಿ ಸೌಂದರ್ಯವೆನ್ನುವ ದೃಷ್ಟಿಕೋನವನ್ನೇ ಬದಲಾಯಿಸಿದೆ. ಸೌಂದರ್ಯ ಎಂಬುದು ಹೆಣ್ಣು ದೇಹದ ಮೈಬಣ್ಣಗಳನ್ನು ಮಾನದಂಡವಾಗಿ

ಆರೋಪಿಸಲಾಗುತ್ತಿದೆ. ಸೌಂದರ್ಯ ಪರಿಕಲ್ಪನೆಯನ್ನು ಕುರಿತು ಮಹಿಳಾ ಚಿಂತಕರ ಒಂದು ದೃಷ್ಟಿಕೋನದ ಆಲೋಚನೆಯಾದರೆ ಪುರುಷ ಚಿಂತಕರದು ಮತ್ತೊಂದು ನೆಲೆಯ ಚೌಕಟ್ಟನ್ನು ಹೊಂದಿದೆ. ಸೌಂದರ್ಯ ಸ್ಪರ್ಧೆಯ ಮೂಲಕ ಅವಳ ಲೈಂಗಿಕ ಮೂಲವಾದ ವ್ಯಕ್ತಿತ್ವವನ್ನು ಈ ಸೌಂದರ್ಯ ಸ್ಪರ್ಧೆಯಲ್ಲಿ ಬಳಸಿಕೊಳ್ಳಲಾಗುತ್ತದೆ ಎನ್ನುವುದು ಮಹಿಳಾ ಚಿಂತಕಿಯರ ನಿಲುವಾಗಿದೆ.

ಸೌಂದರ್ಯ ಸ್ಪರ್ಧೆಯನ್ನು ಕುರಿತು ವಿಜಯಾದಬ್ಬೆಯವರ ಚಿಂತನೆಯನ್ನು ಈ ಮುಂದಿನಂತೆ ನೋಡಬಹುದು. "ಸ್ತ್ರೀಯರ ಸಮಗ್ರ ವ್ಯಕ್ತಿತ್ವವನ್ನು ದಮನ ಮಾಡಿ ಅವಳನ್ನು ಉಪಭೋಗ ಮತ್ತು ಸಂತಾನೋತ್ಪತ್ತಿಗೆ ಇಳಿಸಿದ್ದರಿಂದಲೇ ಇವತ್ತಿನ ಮಹಿಳೆಯ ದಾರುಣ್ಯ ಸ್ಥಿತಿ ಹುಟ್ಟಿದೆ. ದೇಹವನ್ನು ಮಾತ್ರ ವೈಭವೀಕರಿಸುವ ಈ ಪ್ರವೃತ್ತಿ ನಿಲ್ಲದ ಹೊರತು ಅವಳ ಸಮಗ್ರ ಬೆಳವಣಿಗೆ ಪ್ರೋತ್ಸಾಹ, ಅವಳ ಒಟ್ಟು ಶಕ್ತಿಗೆ ಮಾನ್ಯತೆ ದೊರೆಯದ ಹೊರತು ಆರೋಗ್ಯಕರವಾದ ಸ್ತ್ರೀ ಪುರುಷ ಸಂಬಂಧ, ಸಮಾಜ ಜನ್ಮ ತಳೆಯುವುದಿಲ್ಲ."[೨೪] ಮನುಷ್ಯರ ನಡುವಿನ ಹೆಣ್ಣು-ಗಂಡು ಸಂಬಂಧಗಳು ಸಮಾನವೆಂದು ನೋಡದೆ ಹೆಣ್ಣು ಸೌಂದರ್ಯವತಿ, ಒಂದು ಜೀವವಿರುವ ಗೊಂಬೆ, ಪುರುಷ ಏನನ್ನು ಮತ್ತು ಯಾವುದನ್ನು ಹೇಳುವನೋ ಅದೇ ಪರಮಸತ್ಯ ಎಂದು ನಂಬುವ ಹಾಗೂ ಅವೆಲ್ಲವುಗಳನ್ನು ಚಾಚೂ ತಪ್ಪದೇ ನಿರ್ವಹಿಸುವ ಜವಾಬ್ದಾರಿ ಈ ಹೆಣ್ಣು ಎಂಬ ಪಾತ್ರದ್ದು. ಈ ಆಲೋಚನೆಯಲ್ಲಿಯೇ ಹೆಣ್ಣನ್ನು ಒಂದು ಸರಕನ್ನಾಗಿ ನೋಡಲಾಗುತ್ತಿದೆ/ಲಾಗಿದೆ. ದೇಹದ ಹೊರ ಸೌಂದರ್ಯವನ್ನೇ ಅವನ ಬಂಡವಾಳವನ್ನಾಗಿಸಿಕೊಂಡಿರುವುದು ವಿಪರ್ಯಾಸವೇ ಸರಿ. ಆದರೆ ಇಂದಿನ ಕಾಲಮಾನದಲ್ಲಿ ಶಾಲೆಯಿಂದಲೇ ಸೌಂದರ್ಯ ಸ್ಪರ್ಧೆಗಳನ್ನು ಏರ್ಪಡಿಸಿ ಅಲ್ಲಿನ ಮಕ್ಕಳ ಮನಸ್ಸಿನ ಮೇಲೆ ಸೌಂದರ್ಯವೆಂಬುದು ಹೀಗೆ ಇರುತ್ತದೆ ಅದನ್ನು ಹೀಗೆಯೇ ನಿಭಾಯಿಸಬೇಕು, ಹೇಗಿರಬೇಕು, ಹೇಗಿರಬಾರದು ಎಂಬುದನ್ನು ಶಾಲೆಯ ಹಂತದಿಂದಲೇ ಸೌಂದರ್ಯ ಸ್ಪರ್ಧೆಯನ್ನು ಆ ಎಳೆ ಮನಸ್ಸಿನ ಮೇಲೆ ಸೌಂದರ್ಯದ ಹುಚ್ಚನ್ನು ಹೇರಲಾಗುತ್ತಿದೆ. ಅಲ್ಲದೆಯೇ ನಿಜವಾದ ಸೌಂದರ್ಯ ಯಾವುದು ಎಂಬುದರ ಸತ್ಯವನ್ನು ಬಚ್ಚಿಟ್ಟು ಹೇಳಲಾಗುತ್ತಿದೆ ಎನ್ನುವುದನ್ನು ಮಹಿಳಾ ವಿಚಾರ ಸಾಹಿತ್ಯದಲ್ಲಿ ಎಲ್ಲಾ ಲೇಖಕಿಯರ ಅಚಲವಾದ ವಾದವಾಗಿದೆ.

ಕೊನೆಟಿಪ್ಪಣಿಗಳು

೧. ಸಾ.ರಾ. ಅಬೂಬಕರ್, ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ, ಪುಟ-೧೭೧

೨. ಎಂ.ಎಸ್.ಆಶಾದೇವಿ, ನಡುವೆ ಸುಳಿವ ಆತ್ಮ, ಪುಟ-೧೩೬

೩. ವಿಜಯಾ, ನುಡಿರಂಗೋಲಿ, ಪುಟ-೧೨೨-೧೨೩

೪. ಎನ್.ಗಾಯಿತ್ರಿ, ಸಂಚಲ, ಪುಟ-೧೬೩

೫. ಎಸ್.ಡಿ.ಶಶಿಕಲಾ(ಸಂ), ವಿಜಯಾದಬ್ಬೆ ಸಮಗ್ರ ಸಾಹಿತ್ಯ ಸಂಪುಟ-೨, ಪುಟ-೫೨೫

೬. ಎಸ್.ಡಿ.ಶಶಿಕಲಾ, ವಿಜಯಾದಬ್ಬೆ ಸಮಗ್ರ ಸಾಹಿತ್ಯ ಸಂಪುಟ-೨, ಪುಟ-೫೨೭

೭. ಆರ್.ಸುನಂದಮ್ಮ, ಸಂಗಾತಿ ರೂಪ್ವ ಬರಸೇನಾ, ಪುಟ-೧೩೨

೮. ಆರ್.ಸುನಂದಮ್ಮ, ಸಂಗಾತಿ ರೂವ್ವ ಬರಸೇನಾ, ಪುಟ–೧೧೯

೯. ಅನುಸೂಯ ಕಾಂಬಳೆ(ಸಂ)., ವಿಚಾರ ಸಾಹಿತ್ಯ ಮತ್ತು ಹೆಣ್ಣು, ಪುಟ–೧೫೮

೧೦. ಅನುಸೂಯ ಕಾಂಬಳೆ, ವಿಚಾರ ಸಾಹಿತ್ಯ ಮತ್ತು ಹೆಣ್ಣು, ಪುಟ–೧೬೦

೧೧. ವಿಜಯಾ, ನುಡಿರಂಗೋಲಿ, ಪುಟ–೯೫

೧೨. ನಾಗಮಣಿ ಎಸ್.ರಾವ್., ಸ್ತ್ರೀಪಥ, ಪುಟ–೬೧

೧೩. ವಿಜಯಾ, ನುಡಿರಂಗೋಲಿ, ಪುಟ–೯೪

೧೪. ಸಾ.ರಾ.ಅಬೂಬಕ್ಕರ್, ಸಾಹಿತ್ಯಕ್ಕೊಂದು ದಾರಿದೀಪ, ಪುಟ–೧೭೦

೧೫. ಎಂ.ಎಸ್.ಆಶಾದೇವಿ, ಸ್ತ್ರೀಮತವನ್ನುತ್ತರಿಸಲಾಗದೆ?, ಪುಟ–೯೧

೧೬. ಆಶಾದೇವಿ ಎಂ.ಎಸ್., ಸ್ತ್ರೀ ಮತವನ್ನುತ್ತರಿಸಲಾಗದೆ? ಪುಟ–೮೪

೧೭. ನೀಲಾ ಕೆ. ನೆಲದ ಪಿಸುಮಾತು, ಪುಟ–೧೭

೧೮. ಪೋತೆ, ಹೆಚ್, ಟಿ.(ಸಂ). ವಿಚಾರ ಸಾಹಿತ್ಯ, ಪುಟ–೩೩೦

೧೯. ನೀಲಾ ಕೆ. ನೆಲದ ಪಿಸುಮಾತು, (ಮುನ್ನುಡಿ) ಕಿವಿಗೊಡುವ ಮುನ್ನ, ಪುಟ–೯

೨೦. ಪೋತೆ, ಹೆಚ್.ಟಿ. (ಸಂ)., ವಿಚಾರ ಸಾಹಿತ್ಯ, ಪುಟ–೩೩೧

೨೧. ಪೂರ್ಣಿಮಾ ಆರ್. ಮಣ್ಣಿನ ಕಣ್ಣು, ಪುಟ–೧೭೦

೨೨. ನೀಲಾ ಕೆ. ಬಾಳಕೌದಿ, ಪುಟ–೧೭–೧೮

೨೩. ವಸು ಮಳಲಿ, 'ಒಡಲ ಬೆಂಕಿ ಆರದಿರಲಿ', ಪುಟ–೧೧೭

೨೪. ನೀಲಾ ಕೆ., ನೆಲದ ಪಿಸುಮಾತು, ಪುಟ–೨೮

ಅಧ್ಯಾಯ - ಒಂಭತ್ತು

ಮಹಿಳಾ ವಿಚಾರ ಸಾಹಿತ್ಯ : ಹೋರಾಟಗಳ ಚರ್ಚೆ

ಅಧ್ಯಾಯ - ಒಂಭತ್ತು

ಮಹಿಳಾ ವಿಚಾರ ಸಾಹಿತ್ಯ : ಹೋರಾಟಗಳ ಚರ್ಚೆ

ಪ್ರತೀ ಜೀವಿಯೂ ತನ್ನ ಉಳಿಯುವಿಕೆಗಾಗಿ ಪ್ರತೀ ಹಂತದಲ್ಲೂ ಹೋರಾಡುತ್ತಲೇ ಜೀವಿಸುತ್ತಾ ಬಂದಿದೆ. ಮನುಷ್ಯರೂ ಕೂಡ ಇದರಿಂದ ಹೊರತಾದವರಲ್ಲ. ಎಲ್ಲಾ ಜೀವ ಸಂಕುಲಕ್ಕಿಂತ ಮನುಷ್ಯ ಭಿನ್ನವಾಗಿರುವ ಕಾರಣಕ್ಕಾಗಿಯೇ ಹಗೆ, ಹಸೂಯೇ, ಹೆಚ್ಚಾಗಿದೆ. ಹೆಣ್ಣು, ಗಂಡು ಎಂಬ ಬೇಧವನ್ನ ಮಾಡುತ್ತಲೇ ಬಂದಿದ್ದಾನೆ. ಗಂಡು ಶ್ರೇಷ್ಟ ಹೆಣ್ಣು ಕನಿಷ್ಟ ಎಂಬುದನ್ನ ಗಟ್ಟಿಗೊಳಿಸುತ್ತ, ಸಂಪ್ರದಾಯ, ಆಚರಣೆಯ ನೆಪದಲ್ಲಿ ಹೆಣ್ಣನ್ನು ಮೂಲೆ ಗುಂಪು ಮಾಡಿದ್ದಾನೆ. ಮಹಿಳೆಯು ಇದರಿಂದ ಹೊರಬರಲು ಹಲವಾರು ರೀತಿಯಲ್ಲಿ ಪ್ರತಿಭಟಿಸುತ್ತಾ ಬಂದಿದ್ದಾಳೆ. ಅಲ್ಲದೆಯೇ ಸಮಾಜದಲ್ಲಿ ನಡೆದಂತಹ ಅನ್ಯಾಯ, ದೌರ್ಜನ್ಯಗಳನ್ನು ಮಹಿಳಾ ಸಮೂಹವು ನ್ಯಾಯಕ್ಕಾಗಿ ಹೋರಾಟ ಮಾಡುವ ಮೂಲಕ ನ್ಯಾಯವನ್ನು ದೊರಕಿಸಿಕೊಂಡಿವೆ. ಅನೇಕ ಮಹಿಳಾ ಹೋರಾಟಗಾರ್ತಿಯರು ಬೆಳಕಿಗೆ ಬಂದಿದ್ದಾರೆ, ಇಂದಿಗೂ ಮಹಿಳೆಯರ ಪರವಾಗಿ ಶ್ರಮಿಸುತ್ತಿದ್ದಾರೆ.

"ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಮಹಿಳೆ ಆಯ್ದುಕೊಂಡ ಹೋರಾಟದ ವಿಧಾನಗಳು ಹಲವಾರಿವೆ. ಆಯಾ ಪರಿಸರದ ಅಗತ್ಯಕ್ಕೆ ತಕ್ಕಂತೆ ಹೋರಾಟದ ವಿಧಾನಗಳನ್ನು ಬದಲಿಸಿಕೊಂಡ ಮಹಿಳೆಯರು ಕರನಿರಾಕರಣೆ, ಪಿಕೆಟಿಂಗ್, ವಿದೇಶಿ ವಸ್ತುಗಳ ತ್ಯಾಗ, ಸತ್ಯಾಗ್ರಹ, ಉಪವಾಸ ವ್ರತ, ಪಾನನಿರೋಧ, ಪ್ರಭಾತಫೇರಿ ಎಲ್ಲಾ ರೀತಿಯ ಕಾರ್ಯಕ್ರಮಗಳಲ್ಲೂ ತಮ್ಮ ಸಾಮರ್ಥ್ಯವನ್ನು ಮೆರೆದಿದ್ದಾರೆ. ಹೋರಾಟದ ಸ್ವರೂಪ ಮತ್ತು ತೀವ್ರತೆ ವ್ಯಕ್ತಿ ವೈಶಿಷ್ಟ್ಯತೆಗಳನ್ನಲ್ಲದೆ ಸಂದರ್ಭದ ಒತ್ತಡಗಳನ್ನು ಪ್ರತಿಬಿಂಬಿಸುತ್ತದೆ. ಗಂಡನ ಗೈರು ಹಾಜರಿಯಲ್ಲಿ ಕಂಕುಳಲ್ಲಿ ಕೂಸಿರುವಾಗ, ಧ್ವಜಾರೋಹಣ ಮಾಡಿ ಜೈಲು ಸೇರಿದ ಸುಬ್ಬಮ್ಮ ಜೋಯಿಸರಿರಲಿ, ಗರ್ಭಿಣಿಯಾಗಿದ್ದರೂ ಬಿಜಾಪುರದಿಂದ ಬೆಂಗಳೂರಿಗೆ ಪೋಲಿಸರ ಕಣ್ಣು ತಪ್ಪಿಸಲು ಕಾಲ್ನಡಿಗೆಯಲ್ಲಿ ನಡೆದು ಬಂದ ಗೌರಮ್ಮ ವೆಂಕಟರಾಮಯ್ಯನವರ ಸಾಹಸವಾಗಲೀ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಿಳೆಯರ ಸಾಹಸಗಾಥೆಯನ್ನು ಹೇಳುತ್ತದೆ.

ಗಾಂಧಿ ಪ್ರತಿಪಾದಿಸಿದ ಸತ್ಯಾಗ್ರಹ ಮಾರ್ಗದಿಂದಷ್ಟೇ ಅಲ್ಲದೆ, ಶಸ್ತ್ರಾಸ್ತ್ರಗಳ ಮೂಲಕ ಬ್ರಿಟಿಷರ ವಿರುದ್ಧ ಸಮರ ಹೂಡಿದ ವಿವಿಧ ಅಲೆಗಳಿಗೆ ಸೇರಿದ ಪಂಗಡಗಳು ಈ ಸಂದರ್ಭದಲ್ಲಿ ಕಾಣಿಸಿಕೊಂಡಿವೆ. ಚಿತ್ತಗಾಂಗ್ ಸಮರದಲ್ಲಿ ಭಾಗವಹಿಸಿದ ಪ್ರೀತಿ, ಲತಾ ಕಲ್ಪನಾದತ್ ಮುಂತಾದವರು ಐ.ಎನ್.ಎ.ಸೈನ್ಯದಲ್ಲಿದ್ದ ಕ್ಯಾಪ್ಟನ್ ಲಕ್ಷ್ಮೀ ಸೆಹಗಲ್ ಮುಂತಾದವರೂ ಸ್ವಾತಂತ್ರ್ಯ ಹೋರಾಟದ ವಿವಿಧ ಧ್ವನಿಗಳಾಗಿದ್ದಾರೆ."[೧]

ಬಿಟ್ರೀಷರ ದಾಸ್ಯದಲ್ಲಿದ್ದ ನಮ್ಮ ರಾಷ್ಟ್ರವನ್ನು ಬಿಡಿಸಿಕೊಳ್ಳಲು ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು ಸಕ್ರಿಯವಾಗಿ ಭಾಗವಹಿಸಿದ್ದರು. ತಮ್ಮ ಹೋರಾಟದ ಕೆಚ್ಚನ್ನು ಕೊನೆಯ ಘಳಿಗೆಯವರೆಗೂ ಉಳಿಸಿಕೊಂಡಿದ್ದರು. ಎಲ್ಲಾ ರೀತಿಯ ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ತಮ್ಮ ಸಾಮರ್ಥ್ಯವನ್ನು ತೋರಿದ್ದಾರೆ. ಗಂಡನ ಗೈರು ಹಾಜರಿಯಲ್ಲಿ ತನ್ನ ಮಗುವನ್ನು ಜೊತೆಯಲ್ಲಿಟ್ಟುಕೊಂಡೇ ಧ್ವಜಾರೋಹಣ ಮಾಡಿದ ಸುಬ್ಬಮ್ಮ ಜೋಯಿಸರು, ಗರ್ಭಿಣಿಯಾಗಿದ್ದರೂ ಅದನ್ನ ಲೆಕ್ಕಿಸದೇ ಸಾವಿರಾರು ಕಿಲೋಮೀಟರ್ ಪೋಲಿಸರ ಕಣ್ಣು ತಪ್ಪಿಸಿ ಕಾಲ್ನಡಿಗೆಯಲ್ಲಿಯೇ ಬಿಜಾಪುರದಿಂದ ಬೆಂಗಳೂರನ್ನು ತಲುಪಿದ ಗೌರಮ್ಮ ವೆಂಕಟ ರಾಮಯ್ಯನವರಾಗಲಿ, ಶಸ್ತ್ರಾಸ್ತ್ರಗಳ ಮೂಲಕ ಬ್ರಿಟೀಷರ ವಿರುದ್ಧ ಸಮರದಲ್ಲಿ ಭಾಗವಹಿಸಿದ ಪ್ರೀತಿ, ಲತಾ ಕಲ್ಪನಾದತ್ ಮತ್ತು ಲಕ್ಷ್ಮೀಸೆಹಗಲ್ ಇನ್ನೂ ಅನೇಕ ಮಹಿಳಾ ಹೋರಾಟಗಾರ್ತಿಯರ ಸಾಹಸಗಾಥೆಯನ್ನು ಹೇಳುತ್ತದೆ.

"ದೆಹಲಿಯ ಮಹಿಳಾ ದಕ್ಷತಾ ಸಮಿತಿ, ಸ್ತ್ರೀ ಸಂಘರ್ಷ ಸಂಘಟನೆ ಮುಂತಾದ ಸಂಸ್ಥೆಗಳು ಸಮಕಾಲೀನ ಪ್ರಮುಖ ಮಹಿಳಾ ವಿಷಯವಾಗಿ ವರದಕ್ಷಿಣೆ ಹಾಗೂ ವರದಕ್ಷಿಣೆ ಸಂಬಂಧಿ ಕಿರುಕುಳಗಳನ್ನು ಮುಂಚೂಣಿಗೆ ತಂದವು. ೧೯೭೯ರ ಜೂನ್ ೧ರಂದು ಸ್ತ್ರೀ ಸಂಘರ್ಷ ಸಂಘಟನೆಯು ತಲ್ವಿಂದರ್ ಕೌರ್ ಎಂಬ ದೆಹಲಿ ನಿವಾಸಿಯೊಬ್ಬಳ ಮರಣ ಸಂದರ್ಭದ ಹೇಳಿಕೆಯನ್ನು ಆಧರಿಸಿ ಈ ಹೋರಾಟವನ್ನು ರೂಪಿಸಿತು. ೧೯೭೯ರಲ್ಲಿ ನವದೆಹಲಿಯೊಂದರಲ್ಲೇ ಹೊಸದಾಗಿ ವಿವಾಹಿತರಾದ ತರುಣಿಯರ ಅಪಘಾತದ ಸಾವಿನ ಸಂಖ್ಯೆ ೩೫೮ರಷ್ಟಿತ್ತು. ಇದರಲ್ಲಿ ಐವತ್ತು ಆತ್ಮಹತ್ಯೆಗಳೆಂದು ದಾಖಲಾಗಿದ್ದರೆ, ಇಪ್ಪತ್ತಮೂರು ಸಾವನ್ನು 'ವರದಕ್ಷಿಣೆಗಾಗಿ ದಹನ' ಎಂದು ಗುರುತಿಸಲಾಗಿತ್ತು. ಮಹಿಳೆಯರ ಸಾವಿನ ಸಂಖ್ಯೆಯು ದೆಹಲಿಯಲ್ಲಿ ೧೯೮೧ರಲ್ಲಿ ೪೬೬ಕ್ಕೆ ಏರಿದ್ದರೆ. ೧೯೮೨ಕ್ಕೆ ಸಂಖ್ಯೆ ೫೩೦ಕ್ಕೆ ತಲುಪಿತ್ತು. ದಕ್ಷಿಣ ದೆಹಲಿಯ ೧೯೮೧ ಮಹಿಳೆಯರ ಕಿರು ಸಂಘಟನೆ 'ಸಹೇಲಿ'ಯು ಇದನ್ನು ದಾಖಲಿಸಿತು. ಇದು ಹೊರ ಜಗತ್ತಿಗೆ ಕಾಣಿಸಿದ ಸತ್ಯವೆಂದರೆ ೧೯೬೦ರಿಂದಲೇ ಜಾರಿಗೊಂಡ 'ವರದಕ್ಷಿಣೆ ನಿಷೇದ ಕಾಯಿದೆ'ಯು ಅನುಷ್ಠಾನದಲ್ಲಿ ಅಕ್ಷರಶಃ ವಿಫಲಗೊಂಡಿದೆ ಎನ್ನುವುದನ್ನು ಬಯಲಿಗೆಳೆದವು. ಮಹಿಳಾ ಚಳುವಳಿಗಳು ವರದಕ್ಷಿಣೆ ಸಂಬಂಧಿ ಕಿರುಕುಳ ಕೊಲೆಯನ್ನು ಬಯಲಿಗೆಳೆಯುವ ಪ್ರಯತ್ನವನ್ನು ತೀವ್ರಗೊಳಿಸುವಂತಾಯಿತು."[೨] ಮಹಿಳೆಯು ಒಂದಲ್ಲ ಒಂದು ದೌರ್ಜನ್ಯಕ್ಕೆ ಒಳಗಾಗುತ್ತಲೇ ಇದ್ದಾಳೆ. ಯಾವುದೇ ಕಾಯ್ದೆ ಕಾನೂನು ಬಂದರೂ ಅವು ಕೇವಲ ಕಾಗದದಲ್ಲಿ ಮಾತ್ರ

ಉಳಿಯುವಂತಾಗಿದೆ. ಸಮಾಜದ ಅತೀಕ್ರೂರ ಪದ್ಧತಿಯಲ್ಲಿ ವರದಕ್ಷಿಣೆಯೂ ಒಂದು. ವರದಕ್ಷಿಣೆ ಕಿರುಕುಳಕ್ಕೆ ಅದೆಷ್ಟು ಮಹಿಳೆಯರು ತಮ್ಮ ಜೀವನವನ್ನೇ ತೆತ್ತಿದ್ದಾರೋ, ಕೆಲವು ಬೆಳಕಿಗೆ ಬಂದರೆ ಇನ್ನೂ ಬೆಳಕಿಗೆ ಬರದೇ ಮುಚ್ಚಿಹೋಗಿರುವ ಅವೆಷ್ಟೋ ಪ್ರಕರಣಗಳು. ಇಪ್ಪತ್ತೊಂದನೇ ಶತಮಾನದಲ್ಲಿಯೂ ಹೆಚ್ಚು ವರದಕ್ಷಿಣೆ ಕಿರುಕುಳಗಳು ನಡೆಯುತ್ತಿವೆ. ಇದರ ವಿರುದ್ಧ ಮಹಿಳೆಯರು ಪ್ರತಿಭಟಿಸಿ ಈ ಪ್ರಕರಣಗಳನ್ನು ಬೆಳಕಿಗೆ ತಂದಿವೆ. ಇದರಲ್ಲಿ ಮಹಿಳಾ ಸಂಘಟನೆಗಳ ಪಾತ್ರ ಬಹುದೊಡ್ಡದು.

"ಚೀನಾದ ಮಹಿಳಾ ಸಮಾವೇಶಕ್ಕೆ ಭಾರತ ಪೂರ್ವಸಿದ್ಧತೆ ನಡೆಸಿದ ಸಂಭ್ರಮವೇ ಈ ಸಮಾರಂಭವನ್ನು ಭಾರತದ ಮಹಿಳಾ ಚಳುವಳಿ ಎಷ್ಟೊಂದು ಗಂಭೀರವಾಗಿ ಸ್ವೀಕರಿಸಿತು ಎಂಬುದನ್ನು ಪ್ರಸ್ತುತಪಡಿಸುತ್ತದೆ. ಸರ್ಕಾರೇತರ ಸಂಸ್ಥೆಗಳು ಭಾರತದಲ್ಲಿ ಎರಡು ಗುಂಪುಗಳಾಗಿ ಕಾರ್ಯ ನಿರ್ವಹಿಸಿದವು. ಸ್ವಯಂ ಸೇವಾ ಸಂಘ ಸಂಸ್ಥೆಗಳ ವೇದಿಕೆಯು ಕಳೆದ ಎರಡು ವರ್ಷಗಳಿಂದ ಸುಮಾರು ನೂರು ಕಾರ್ಯಗಾರಗಳನ್ನು, ಸಭೆಗಳನ್ನು ಜಿಲ್ಲೆ, ರಾಜ್ಯ, ಪ್ರಾಂತೀಯ ಮತ್ತು ರಾಷ್ಟ್ರೀಯ ನೆಲೆಯಲ್ಲಿ ನಡೆಸಿ ಮಹಿಳೆಯರ ಸಮಸ್ಯೆಗಳನ್ನು ಮತ್ತು ಕಾಳಜಿಗಳನ್ನು ಗುರುತಿಸುವ ಪ್ರಯತ್ನ ನಡೆಸಿತು. ವಿದೇಶಿ ಚಟುವಟಿಕೆಯ ಸ್ವರೂಪ ಮತ್ತು ಉದ್ದೇಶದ ಬಗ್ಗೆ ತಮ್ಮ ಅನುಮಾನವನ್ನು ವ್ಯಕ್ತಪಡಿಸಿದ ಸರ್ಕಾರೇತರ ಅಖಿಲ ಭಾರತ ಸರ್ಕಾರ ಬೀಜಿಂಗ್‌ನಲ್ಲಿ ಮಂಡಿಸಲೆಂದು ತಯಾರಿಸಿದ ದಸ್ತಾವೇಜು ಅಸಮರ್ಪಕವಾಗಿದೆ. ಹಾಗೂ ಅಪೂರ್ಣವಾಗಿದೆಯೆಂದು ಆರೋಪಿಸಿದ ಏಳು ಅಖಿಲ ಭಾರತ ಮಹಿಳಾ ಸಂಘಟನೆಗಳ ವೇದಿಕೆಯು ಸರ್ಕಾರದ ದಸ್ತಾವೇಜಿನಲ್ಲಿ 'ಭಾರತದ ಮೂಲಭೂತವಾದದ ಕೋಮುವಾದದ ಬೆದರಿಕೆ, ಇದರಲ್ಲಿ ಸರ್ಕಾರದ ಪಾತ್ರ ಹೊಸ ಆರ್ಥಿಕ ನೀತಿಗಳ ವಿನಾಶಕಾರಿ ಪರಿಣಾಮ, ಜನಸಂಖ್ಯಾ ನೀತಿಗಳಲ್ಲಿನ ಮಹಿಳಾ ವಿರೋಧಿ ಅಂಶಗಳು, ಅಸಮರ್ಪಕ ಶಿಕ್ಷಣ ವ್ಯವಸ್ಥೆ, ಮಾಧ್ಯಮದ ಪಾತ್ರ, ರಾಜಕೀಯ ಅಪರಾಧೀಕರಣ, ಇತ್ಯಾದಿ ವಿಷಯಗಳ ಬಗ್ಗೆ ಮೌನವಾಗಿದೆ ಅಥವಾ ದುರ್ಬಲವಾಗಿದೆ' ಎಂದಿದ್ದಾರೆ. ಅಷ್ಟೇ ಅಲ್ಲದೆ ಬಹುರಾಷ್ಟ್ರೀಯ ಕಂಪನಿಗಳ ಅನುದಾನದಿಂದ ತಮ್ಮದೇ ರಚನೆಗಳನ್ನು ಸೃಷ್ಟಿಸಿಕೊಂಡು ಭಾರತದ ಮಹಿಳಾ ಚಳುವಳಿಯ ಗೊತ್ತುಗುರಿಗಳನ್ನು ನಿರ್ಧರಿಸುತ್ತಿರುವ ವಿದೇಶಿ ಅನುದಾನ ಪಡೆಯುವ ಮಹಿಳಾ ಸಂಘಟನೆಗಳ ಸ್ವರೂಪವನ್ನು ಖಂಡಿಸುತ್ತಲೇ ದೇಶದ ಸಾರ್ವಭೌಮತ್ವವನ್ನು ರಕ್ಷಿಸಬೇಕಾದ ಹೊಣೆಯನ್ನು ಮಹಿಳಾ ಚಳುವಳಿಗೆ ವಹಿಸಬೇಕೆಂಬ ನಿಲುವನ್ನು ಹೊಂದಿದ್ದಾರೆ."[೩]

ಯಾವುದೇ ಸರ್ಕಾರ ಅಥವಾ ಸಂಸ್ಥೆಗಳು ಮಹಿಳೆಯರ ಪರವಾಗಿ ದಸ್ತಾವೇಜನ್ನ ಮಾಡಿರುವುದು ಅತಿವಿರಳ ಬೀಜಿಂಗ್‌ನ ಮಹಿಳಾ ಸಮಾವೇಷದಲ್ಲಿ ಮಂಡಿಸಲು ತಯಾರಿಸಿದ ದಸ್ತಾವೇಜಿನಲ್ಲಿ ಹಲವಾರು ಅಂಶಗಳ ವಿರೋಧಿ ಮತ್ತು ಜನ ವಿರೋಧಿ ಅಂಶಗಳೇ ಆಗಿದ್ದರ ಸಲುವಾಗಿ ಬಹುತೇಕ ಮಹಿಳಾ ಸಂಘಟನೆಗಳು ಈ ದಸ್ತಾವೇಜನ್ನು ವಿರೋಧಿಸಲಾಯಿತು. ಭಾರತೀಯ ಸಮಾಜದಲ್ಲಿ ನಡೆಯುತ್ತಿರುವಂತಹ ಮುಖ್ಯವಾದ ಸಂಗತಿಗಳಾದ ಆರ್ಥಿಕ ನೀತಿ, ಶಿಕ್ಷಣ

ವ್ಯವಸ್ಥೆ, ಮಾಧ್ಯಮದ ಪಾತ್ರ, ರಾಜಕೀಯ ಅಪರಾಧೀಕರಣ ಮುಂತಾದ ವಿಷಯಗಳ ಬಗ್ಗೆ ದಸ್ತಾವೇಜಿನಲ್ಲಿ ಇಲ್ಲದೇ ಇರುವುದನ್ನು ಖಂಡಿಸಲಾಗಿದೆ. ಕೋಮುವಾದದ ಮೂಲಭೂತವಾದದ ಬೆದರಿಕೆಯು ಇದಕ್ಕೆಲ್ಲ ಪ್ರಮುಖ ಕಾರಣವೆಂಬುದನ್ನು ಇಲ್ಲಿ ಸ್ಪಷ್ಟಪಡಿಸಲಾಗಿದೆ. ವಿದೇಶಿ ಕಂಪನಿಗಳಿಗೆ ಅನುಕೂಲವಾಗುವಂತೆ ಮತ್ತು ಅವುಗಳ ಅನುದಾನ ಪಡೆದುಕೊಳ್ಳಲು ಮಹಿಳಾ ವಿರೋಧಿ ಅಂಶಗಳು ಹೆಚ್ಚಾಗಿರುವುದನ್ನು ಖಂಡಿಸಲಾಗಿದೆ.

"ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಮನುವಾದಿ ಮನಸ್ಸುಗಳ ಸಂಘಟಿತ ಕ್ರೌರ್ಯ ದಬ್ಬಾಳಿಕೆಯನ್ನು ಸಾರಾಸಗಟಾಗಿ ಧಿಕ್ಕರಿಸಿದ ಪ್ರಥಮ ಮಹಿಳೆ ಅಕ್ಕಮಹಾದೇವಿ, ಲೋಕದ ಗಂಡಸರ ಬಗೆಗಿನ ಹೇಸಿಗೆ ಅವಳನ್ನು ಚನ್ನಮಲ್ಲಿಕಾರ್ಜುನನತ್ತ ಹೊರಳುವಂತೆ ಅಥವಾ ಚನ್ನಮಲ್ಲಿಕಾರ್ಜುನನ ಆಕರ್ಷಣೆ ಲೋಕದ ಗಂಡಸರನ್ನು ತಿರಸ್ಕರಿಸುವಂತೆ ಮಾಡಿತೋ? ಎಂಬ ಪ್ರಶ್ನೆಗಿಂತ ಇಲ್ಲಿ ಹೆಣ್ಣೊಬ್ಬಳು ಬದುಕಿನ ಯಾವ ಹಂತದಲ್ಲೂ ಪುರುಷನ ಸಹಾಯವಿಲ್ಲದೆ ಬದುಕಬಲ್ಲಳು ಎಂಬುದನ್ನು ಮೊದಲ ಬಾರಿಗೆ ತೋರಿಸಿಕೊಟ್ಟಳು ಎಂಬುದು ಮುಖ್ಯವಾಗುತ್ತದೆ. ಭಾರತೀಯ ಹಿಂದು ತತ್ವಶಾಸ್ತ್ರ ವಾಹಿನಿಯ ಮಜಲುಗಳಾದ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮುಂತಾದ ಸಿದ್ಧಾಂತಗಳು ಪಾರಂಪರಿಕವಾಗಿ ಹೆಣ್ಣನ್ನು ಮಾಯೆ, ಕಂಟಕಿ, ಪಾಪಿಷ್ಟೆ, ಮೈಲಿಗೆ, ಆಧ್ಯಾತ್ಮ ಮಾರ್ಗದ ತೊಡಕು ಎಂದೆಲ್ಲಾ ಪ್ರತಿಬಿಂಬಿಸುತ್ತಾ ಬಂದಿರುವ ಸಂದರ್ಭದಲ್ಲಿ ಅಕ್ಕ 'ಪುರುಷನಿಗೆ ಸ್ತ್ರೀ ಮಾಯೆಯಾದರೆ ಸ್ತ್ರೀಗೆ ಪುರುಷನೂ ಮಾಯೆ' ಅಲ್ಲವೆ ಎಂದು ಸ್ಪಷ್ಟವಾಗಿ ಸವಾಲು ಹಾಕುತ್ತಾಳೆ. ಮಾಯೆ ಮೋಹವೆಂಬುದು ಭಾಷಾವಾಚಕ ಶಬ್ದವೇ ಹೊರತು ಲಿಂಗವಾಚಕವಲ್ಲ. ಅಕ್ಕಮಹಾದೇವಿ ಕೌಶಿಕ ನೊಡನೆ ಮಾಡಿಕೊಂಡ ಒತ್ತಾಯದ ಮದುವೆಯನ್ನು ದಿಕ್ಕರಿಸಿ ಕಲ್ಯಾಣದ ಅನುಭವ ಮಂಟಪಕ್ಕೆ ಬರುತ್ತಾಳೆ. ದೂರದ ಉಡುತಡಿಯಿಂದ ಕಲ್ಯಾಣದವರೆಗೆ ಏಕಾಂಗಿಯಾಗಿ ಬಂದ ಹದಿ ಹರೆಯದ ಹೆಣ್ಣೊಬ್ಬಳ ಶತಮಾನಗಳ ಹಿಂದಿನ ವರ್ತನೆ ನಂಬಲಾಗದ ಆಶ್ಚರ್ಯವಾಗಿಯೇ ಉಳಿದುಬಿಡುತ್ತದೆ."[೪] ಪುರುಷ ಪ್ರಧಾನ ಸಮಾಜದೊಳಗೆ ಕಟ್ಟಾ ಸಂಪ್ರದಾಯಸ್ಥ ಮನೆಯವಳಾದ ಅಕ್ಕಮಹಾದೇವಿಯು ಲೋಕದ ಗಂಡಸಿನ ಬಗೆಗೆ ಹೇಸಿಗೆಯುನ್ನು ಚನ್ನಮಲ್ಲಿಕಾರ್ಜುನನತ್ತ ಹೊರಳುವಂತೆ ಮಾಡಿತೋ ಶತಮಾನಗಳ ಹಿಂದೆಯೆ ಪುರುಷನ ದೌರ್ಜನ್ಯಕ್ಕೆ ತಿರುಗಿಬಿದ್ದವಳು ಅಕ್ಕ ಮಹಾದೇವಿ. ಮನುಧರ್ಮ ಹೇಳುವ ಮಹಿಳಾ ವಿರೋಧಿ ನೀತಿಗಳನ್ನು ಮೊಟ್ಟಮೊದಲು ದಿಕ್ಕರಿಸಿದವಳು ಅಕ್ಕಮಹಾದೇವಿಯಾಗಿದ್ದಾಳೆ. ಗಂಡಿಗೆ ಹೆಣ್ಣು ಮಾಯೆಯಾದರೆ, ಹೆಣ್ಣಿಗೂ ಗಂಡು ಮಾಯೆ ಅಲ್ಲವೆ ಎಂಬುದಾಗಿ ಪ್ರತಿ ಸವಾಲು ಹಾಕುತ್ತಾಳೆ. ಹೆಣ್ಣನ್ನು ಪಾಪಿ, ಮಾಯೆ, ಮೈಲಿಗೆ ಎಂಬುದು ಆಧ್ಯಾತ್ಮಿಕ ತೊಡಕು ಎಂದು ಉದ್ಧರಿಸಿದ್ದಾಳೆ. ಒಟ್ಟಿನಲ್ಲಿ ಆ ಕಾಲಕ್ಕೆ ಮಹಿಳಾ ವಿರೋಧಿ ಪುರುಷನ ವಿರುದ್ಧ ಪ್ರತಿಭಟಿಸಿದ ಮೊದಲ ಮಹಿಳೆಯಾಗಿ ಕಾಣಿಸುತ್ತಾಳೆ.

"ಹಾಲಕ್ಕಿ, ಬೋವಿ, ಕುಣಬಿ ಇನ್ನಿತರ ಸಮುದಾಯಗಳ ತೆರೆದೆದೆಯ ಹೆಣ್ಣುಮಕ್ಕಳು ರವಿಕೆ ಮೇಲಿನ ತಮ್ಮ ಹಕ್ಕು ಸಾಧಿಸುತ್ತಲೇ ಸಮಾಜದ ಪುರುಷಪಾರಮ್ಯದಿಂದ ಪಾರಾಗಲು

ಹೋರಾಡಬೇಕು. ದಲಿತ ಮಹಿಳೆ ದೇವದಾಸಿ ಪದ್ಧತಿ ವಿರೋಧಿಸುತ್ತಲೇ ದಲಿತ ಸಮಾಜ, ಸಂಘಟನೆಗಳೊಳಗೆ ಲಿಂಗಸೂಕ್ಷ್ಮತೆಯನ್ನು ಬೆಳೆಸಬೇಕು. ಎಲ್ಲಾ ರೂಪದ ಯಜಮಾನಿಕೆಯ ವಿರುದ್ಧ ಮಹಿಳೆ ಸಂಘಟಿತ ಹೋರಾಟ ನಡೆಸಬೇಕು.

ಮಹಿಳಾ ಚಳುವಳಿ ಮತ್ತು ಮಹಿಳಾಪರ ಚಿಂತನೆಗಳು ಸರಕು ಸಂಸ್ಕೃತಿಯ ಕಾಲದಲ್ಲಿ ಸೂಕ್ತ ವಕ್ತಾರಿಕೆ ಇಲ್ಲದೆ ಹಿನ್ನಡೆ ಅನುಭವಿಸುತ್ತಿರುವಾಗ ಇತ್ತೀಚಿನ ಅತ್ಯಾಚಾರ ಪ್ರಕರಣದ ಹಿನ್ನೆಲೆಯಲ್ಲಿ ಎದ್ದಿರುವ ಪ್ರತಿಭಟನಾ ಮನೋಭಾವವನ್ನು ದೌರ್ಜನ್ಯ ವಿರೋಧಿ ಚಳುವಳಿಯನ್ನಾಗಿ ಪರಿವರ್ತಿಸುವ. ಅವಶ್ಯಕತೆಯಿದೆ. ಜೊತೆಗೆ ಜಾತಿ/ಧರ್ಮ/ವರ್ಗಗಳ ಹೆಸರಲ್ಲಿ ಮಹಿಳೆಯರು ಹರಿದು ಹಂಚಿಹೋಗದೇ ದೌರ್ಜನ್ಯಗಳ ವಿರುದ್ಧ ಒಗ್ಗಟ್ಟಾಗಿ ಬೀದಿಗಿಳಿಯಬೇಕಾಗಿದೆ."[೫]

ಯಾವುದೇ ಸಮುದಾಯದ ಮಹಿಳೆಯು ದೌರ್ಜನ್ಯಕ್ಕೆ ಅತ್ಯಾಚಾರಕ್ಕೆ ಒಳಗಾದಾಗ ಎಲ್ಲಾ ಸಮುದಾಯದ ಮಹಿಳೆಯರು ಪುರುಷ ಪಾರಮ್ಯದಿಂದ ಪಾರಾಗಲು ಹೋರಾಡಬೇಕಾಗಿದೆ. ಧರ್ಮ, ಜಾತಿ, ಇವೆಲ್ಲವನ್ನು ಮೀರಿ ಮಹಿಳೆಯರೆಲ್ಲರೂ ಒಂದುಗೂಡಬೇಕಾದ ಅನಿವಾರ್ಯತೆ ಇದೆ. ಯಾವ ಧರ್ಮದ ಮಹಿಳೆಯೇ ಆಗಿರಲಿ ಆಕೆಯ ಸಂಕಷ್ಟಕ್ಕೆ ಎಲ್ಲರೂ ಜೊತೆಗೂಡಿ ನಿಲ್ಲಬೇಕಾದದ್ದು ಮಹಿಳೆಯರ ಕರ್ತವ್ಯ ಕೂಡ ಹೌದು. ಜಾತಿ, ಜನಾಂಗ ಎಂಬುದಾಗಿ ಹೊಡೆದು ಆಳುವ ನೀತಿಯನ್ನು ಅನುಸರಿಸಲಾಗುತ್ತಿದೆ. ಎಲ್ಲರೂ ಒಂದೇ ಎಂಬುದನ್ನು ಅರಿತು ದೌರ್ಜನ್ಯ ವಿರೋದಿ ಚಳುವಳಿಯನ್ನಾಗಿ ಪರಿವರ್ತಿಸುವ ಅವಶ್ಯಕತೆ ಇದೆ ಎಂಬುದು ಲೇಖಕಿಯ ಅಭಿಪ್ರಾಯವಾಗಿದೆ.

"ಭಾರತದ ಮಹಿಳೆಯರ ಈ ಸ್ಥಿತಿಯನ್ನು ಬದಲಾಯಿಸಲು ಹತ್ತೊಂಬತ್ತನೆಯ ಶತಮಾನದಲ್ಲಿ ಗಂಭೀರವಾದ ಪ್ರಯತ್ನಗಳು ಪ್ರಾರಂಭವಾದವು. ಕ್ರಿಶ್ಚಿಯನ್ ಮಿಷನರಿಗಳು, ಆಧುನಿಕ ಶಿಕ್ಷಣ ಪಡೆದ ದೇಶಿಯ ಸುಧಾರಕರು, ಅಂದಿನ ಬ್ರಿಟೀಷ್ ಸರಕಾರ ಸುಧಾರಣೆಗಳಿಗೆ ನಾಂದಿ ಹಾಡಿದರು. ೧೮೮೨ರಲ್ಲಿ ಪೂನಾದಲ್ಲಿ ಪಂಡಿತ ರಮಾಬಾಯಿಯವರು ಸ್ಥಾಪಿಸಿದ ಮಹಿಳಾ ಸಮಾಜ, ಆರ್ಯಸಮಾಜಗಳ ಮಹಿಳಾ ಶಾಖೆಗಳು ಸಾಂಸ್ಥಿಕ ನೆಲೆಯಲ್ಲಿ ಮಹಿಳಾ ಚಳುವಳಿಯ ಆರಂಭವನ್ನು ಮಾಡಿದವು. ಪಂಡಿತ ರಮಾಬಾಯಿ, ರಮಾಬಾಯಿ ರಾನಡೆ, ಪ್ರಾನ್ಸಿನಾ ಸೋರಬ್ಜಿ, ಅನ್ನಿಜಗನ್ನಾಥನ್, ರುಕ್ಮಾಬಾಯಿ ಮೊದಲಾದ ಬದಲಾವಣೆಯ ಹರಿಕಾರರು ಮಹಿಳಾ ಚಳುವಳಿಯನ್ನು ನೆಲೆಗೊಳಿಸುವಲ್ಲಿ ಮುಖ್ಯಪಾತ್ರ ವಹಿಸಿದರು. ಐರಿಷ್ ಮಹಿಳೆಯರಾದ ಸರೋಜಿನಿ ನಾಯ್ಡು, ಮುತ್ತುಲಕ್ಷ್ಮಿರೆಡ್ಡಿ, ಆರ್. ಕಲ್ಯಾಣಮ್ಮ, ಕಮಲಾದೇವಿ ಚಟ್ಟೋಪಧ್ಯಾಯ ಮೊದಲಾದವರು ಸೇರಿದರು.

೧೯೧೭ರಲ್ಲಿ ಹಿಂದೆ ಮತದಾನದ ಹಕ್ಕಿಗಾಗಿ ಕೋಮುಸೌಹಾರ್ದಕ್ಕಾಗಿ ದನಿಯೆತ್ತಿದೆ. ಹೆಜ್ಜೆಯಿಟ್ಟ ಸರೋಜಿನಿ ನಾಯ್ಡು, ಎಲ್ಲಾ ಸೋಲು, ಸವಾಲುಗಳ ನಡುವೆ ೧೮೮೨ರಲ್ಲಿ ಸ್ವಾಯತ್ತ ಮಹಿಳಾ ಸಂಸ್ಥೆಯನ್ನು ಪ್ರಾರಂಭಿಸಿದ ಪಂಡಿತ ರಮಾಬಾಯಿ, ನಲವತ್ತು ವರ್ಷಗಳ ಕಾಲ ಮಹಿಳಾ ಪತ್ರಿಕೆಯನ್ನು ನಡೆಸಿದ ಆರ್.ಕಲ್ಯಾಣಮ್ಮ ಇಂಥ ಎಷ್ಟೋ ಮಹಿಳೆಯರನ್ನೆಲ್ಲ ಮುನ್ನಡೆಸಿದ್ದು

ಮುಖ್ಯವಾಗಿ ಅವರವರ ಆತ್ಮವಿಶ್ವಾಸ. ನಮ್ಮ ಬೆಂಬಲಕ್ಕೆ ಏನೆಲ್ಲ ಇದ್ದರೂ ನಮ್ಮೊಳಗೇ ಆತ್ಮ ವಿಶ್ವಾಸವಿಲ್ಲದಿದ್ದರೆ ಕೊಳೆವ ಕುಂಬಳಕ್ಕೆ ಕಬ್ಬಿಣದ ಕಟ್ಟು ಕಟ್ಟಿದಂತಾದೀತು."[೬]

ರಾಷ್ಟ್ರವ್ಯಾಪಿ ಮಹಿಳಾ ಚಳುವಳಿಯು ಹತ್ತೊಂಬತ್ತನೆಯ ಶತಮಾನದಲ್ಲಿ ಆರಂಭವಾದವು. ಅಂದಿನ ಶಿಕ್ಷಣ ಮಿಷನರಿಯಿಂದ ಶಿಕ್ಷಣ ಪಡೆದ ಮಹನೀಯರು ಮಹಿಳಾ ಚಳುವಳಿಯ ಮುಂಚೂಣಿಯಲ್ಲಿದ್ದರು. ಹಲವಾರು ಮಹಿಳಾ ಶಾಖೆಗಳ ಸಾಂಸ್ಕೃಕ ನೆಲೆಯಲ್ಲಿ ಮಹಿಳಾ ಚಳುವಳಿಯನ್ನು ಆರಂಭಿಸಿದರು. ಕೇವಲ ಭಾರತೀಯ ಮಹಿಳೆಯರು ಮಾತ್ರವಲ್ಲದೆ ವಿದೇಶಿ ಮಹಿಳೆಯರೂ ಈ ಚಳುವಳಿ ನಡೆಯಲು ಮುಖ್ಯಪಾತ್ರವಹಿಸಿದ್ದರು ಅವರುಗಳಲ್ಲಿ ಆ್ಯನಿಬೆಸೆಂಟ್, ಮಾರ್ಗರೇಟ್ ಈ ಕಸಿನ್ಸ್ ಮುಂತಾದವರಾಗಿದ್ದಾರೆ.

ಒಂದು ಹೋರಾಟ ಅಥವಾ ಚಳುವಳಿಯನ್ನು ರೂಪಿಸುವ ಮತ್ತು ಅದನ್ನ ಮುನ್ನಡೆಸಿಕೊಂಡು ಹೋಗುವಲ್ಲಿ ಶಿಕ್ಷಣ, ತಿಳುವಳಿಕೆ ಇದ್ದರೆ ಸಾಲದು, ಮುಖ್ಯವಾಗಿ ಅವರವರ ಆತ್ಮವಿಶ್ವಾಸ ಹೆಚ್ಚಾಗಿರಬೇಕು. ತಮ್ಮಲ್ಲಿ ಆತ್ಮವಿಶ್ವಾಸ ಎಷ್ಟರಮಟ್ಟಿಗೆ ದೃಢವಾಗಿರುತ್ತದೊ ಅಷ್ಟರಮಟ್ಟಿಗೆ ನಮ್ಮ ಭಾಗವಹಿಸುವಿಕೆ ಗಟ್ಟಿಯಾಗಿರುತ್ತದೆ. ಈ ಆತ್ಮವಿಶ್ವಾಸದಿಂದಲೇ ಆರಂಭದ ಚಳುವಳಿಕಾರರು ಕೋಮುಸೌಹಾರ್ದಕ್ಕಾಗಿ ದನಿಯೆತ್ತಿದರು ಮತ್ತು ದಿಟ್ಟತನದಿಂದ ಹೋರಾಡಿ ಸಫಲರಾದರು.

"ಮುಖ ಮುಚ್ಚಿಕೊಳ್ಳುವಂತೆ ಉತ್ತರ ಪ್ರದೇಶದ ಗ್ರಾಮೀಣ ಭಾಗದ ಮಹಿಳೆಯರ ಗುಲಾಬಿ ಸೀರೆಯುಟ್ಟು ಕೈಲೊಂದು ಕೋಲು ಹಿಡಿದು ಗುಂಪಾಗಿ ಹೊರಟರೆಂದರೆ ಯಾವುದೋ ಅನ್ಯಾಯದ ಲೆಕ್ಕ ಚುಕ್ತಾ ಮಾಡಲೆಂದೇ ಹೊರಟಿದ್ದಾರೆಂದು ಲೆಕ್ಕ ಮೊದಮೊದಲು ಹೆಂಗಸರನ್ನು ಹೊಡೆಯುತ್ತಿದ್ದ ಗಂಡ, ಅತ್ತೆ, ಮಾವ, ಅಣ್ಣ, ತಮ್ಮಂದಿರನ್ನು ತರಾಟೆಗೆ ತೆಗೆದುಕೊಂಡು ಕ್ರೌರ್ಯ ಅನುಭವಿಸುತ್ತಿದ್ದವಳ ಪರವಾಗಿ ನಿಲ್ಲುತ್ತಿದ್ದ ಗುಲಾಬಿ ಗ್ಯಾಂಗ್, ಈಗ ತನ್ನ ವ್ಯಾಪ್ತಿ ಹಿಗ್ಗಿಸಿಕೊಂಡಿದೆ. ವೃದ್ಧಾಪ್ಯವೇತನ, ವಿಧವಾ ವೇತನ ಮಂಜೂರು ಮಾಡದ ಅಧಿಕಾರಿಗಳ ಬಳಿ ಜಗಳ ತೆಗೆದು ಅವರ ಕೆಲಸ ಮಾಡಿಸಿಕೊಡುವುದರಿಂದ ಹಿಡಿದು, ಪ್ರೇಮ ವಿವಾಹ, ಕೌಟುಂಬಿಕ ಕಲಹ, ಆಸ್ತಿ ವ್ಯಾಜ್ಯ, ರೇಷನ್ ಕಾರ್ಡ್ ಅನ್ಯಾಯ, ರೋಜಗಾರ್ ಯೋಜನಾ ಅವ್ಯವಹಾರ ಹೀಗೆ ದುರ್ಬಲರು ಅಧಿಕಾರ ಹೀನರು ಅನಕ್ಷರಸ್ಥರು, ಮಹಿಳೆಯರು ಒಬ್ಬೊಬ್ಬರೇ ಮಾಡಿಕೊಳ್ಳಲಾರದ ಕೆಲಸಗಳನ್ನು ಹಿಡಿದು ಮಾಡುತ್ತವೆ. ಊರೂರಿನಲ್ಲಿ ಗುಲಾಬಿ ಗ್ಯಾಂಗ್ ಇದೆ. ಅದು ಸ್ಥಳೀಯ ವಿಷಯಗಳನ್ನು ನೋಡಿಕೊಳ್ಳುತ್ತದೆ. ಅತ್ಯಾಚಾರ, ದೌರ್ಜನ್ಯ ಸಂಭವಿಸಿದರೂ ಬಡವರಿಂದ ಕಂಪ್ಲೇಂಟ್ ತೆಗೆದುಕೊಳ್ಳಲು ಹಿಂದೆಮುಂದೆ ನೋಡುವ ಪೋಲಿಸ್ ಅಧಿಕಾರಿಗಳ ಬಳಿ ಅಕ್ಷರಶಃ ಯುದ್ಧಕ್ಕಿಳಿಯುತ್ತದೆ."[೭] ಸರ್ಕಾರಗಳು ಮಾಡದ ಎಷ್ಟೋ ಕೆಲಸಗಳನ್ನು ಗುಲಾಬಿಗ್ಯಾಂಗ್ ಮಾಡಿರುವುದು ತಿಳಿದುಬರುತ್ತದೆ. ಕುಟುಂಬದೊಳಗೆ ಮಹಿಳೆ ಅನುಭವಿಸುತ್ತಿದ್ದ ನೋವು ದೌರ್ಜನ್ಯಗಳ ವಿರುದ್ಧ ಈ ಗುಲಾಬಿಗ್ಯಾಂಗ್ ಹುಟ್ಟಿಕೊಂಡಿತು. ಮಹಿಳೆಗೆ ನ್ಯಾಯದೊರಕಿಸಲಿಕ್ಕೆಂದೇ ಆರಂಭವಾಯಿತು. ಮಹಿಳೆಯರಿಗೆ ಈ ಸಮಾಜದಲ್ಲಿ ಆಗುತ್ತಿದ್ದ ದೌರ್ಜನ್ಯಗಳ ಬಗೆಗೆ ಇನ್ನಿತರ ಮಹಿಳಾ ಸಮೂಹಕ್ಕೆ ಅರ್ಥಮಾಡಿಸುವುದರ

ಮೂಲಕ ಉತ್ತರ ಪ್ರದೇಶದ ಊರೂರುಗಳಲ್ಲಿ ಗುಲಾಬಿಗ್ಯಾಂಗ್ ಗುಂಪನ್ನು ಕಟ್ಟಿದ್ದಾರೆ. ವ್ಯವಸ್ಥೆಯ ವಿರುದ್ಧ ಎಲ್ಲರೂ ಒಟ್ಟಾಗಿ ಹೋರಾಡುತ್ತಾ ಬರಲಾಗಿದೆ. ಮೊದಮೊದಲು ಮಹಿಳೆಯರಿಗೆ ಆಗುತ್ತಿದ್ದ ಅನ್ಯಾಯವನ್ನು ವಿರೋಧಿಸಲು ಹುಟ್ಟಿಕೊಂಡ ಈ ಗ್ಯಾಂಗ್ ತನ್ನ ಹರವನ್ನು ವಿಸ್ತರಿಸಿಕೊಂಡಿದೆ. ಬಡವರ ಕೆಲಸಗಳನ್ನು ಮಾಡುವಲ್ಲಿ ಮುಂಚೂಣಿ ಸ್ಥಾನವನ್ನು ಹೊಂದಿದೆ. ಬಡವರಿಗೆ, ವೃದ್ಧರಿಗೆ ಬರಬೇಕಾದ ಸವಲತ್ತುಗಳನ್ನು ಕೊಡಿಸಲು ಇದು ಶ್ರಮಿಸುತ್ತಿದೆ. ಕೆಲವೊಮ್ಮೆ ನ್ಯಾಯಕ್ಕಾಗಿ ಪೋಲಿಸರೊಂದಿಗೂ ಯುದ್ಧಕ್ಕಿಳಿದ ನಿದರ್ಶನಗಳೂ ಇವೆ ಎಂಬುದನ್ನು ಲೇಖಕಿಯು ವಿವರಿಸಿದ್ದಾರೆ.

"ಎಲ್ಲ ಕಾಲಕ್ಕೂ ಎಲ್ಲರೂ ಎಲ್ಲವನ್ನೂ ಸಹಿಸುತ್ತಾ ಕೂರುವುದಿಲ್ಲ ಎನ್ನುವ ಸತ್ಯವನ್ನು ಇರೋಮ್ ಸರ್ಮಿಳಾ ಅವರ ಹೋರಾಟ ಸಾಬೀತು ಪಡಿಸಿದೆ. ಸಶಸ್ತ್ರಪಡೆ ದೇಶವನ್ನು ಕಾಪಾಡುವಲ್ಲಿ ಸಹಕಾರಿ ನಿಜ. ಆದರೆ ದೇಶದ ನಾಗರೀಕರನ್ನು ಮನಸೋ ಇಚ್ಛೆ ದಂಡಿಸುವ ಅಧಿಕಾರವನ್ನು ನೀಡಿದರೆ ಅದು ಹೇಗೆ ವ್ಯವಹರಿಸುತ್ತದೆ ಎನ್ನುವುದಕ್ಕೆ ೩ ದಶಕಗಳಿಂದ ಮಣಿಪುರದಲ್ಲಿ ನಡೆಯುತ್ತಿರುವ ವಿದ್ಯಮಾನಗಳು ಸಾಕ್ಷಿ. ಅಲ್ಲಿನ ಜನತೆ ಇದನ್ನು ಪ್ರತಿಭಟಿಸಲಾರದ ಅಸಹಾಯಕತೆಯಲ್ಲಿ ನಲುಗುತ್ತಿರುವಾಗ ಅವರೆಲ್ಲರ ನೋವಿಗೆ ದನಿಯಾದವರು ಇರೋಮ್ ಶರ್ಮಿಳಾ. ಆಕೆ ಎಲ್ಲರಂತೆ ಒಬ್ಬ ಸಾಮಾನ್ಯ ಮಹಿಳೆಯೇ ೨೦೦೦ನೇ ಇಸವಿಯಲ್ಲಿ ಇಂಫಾಲವ್ಯಾರಿಯ ಮಲೋಮ್ ಎನ್ನುವ ಹಳ್ಳಿಯಲ್ಲಿ ಉಗ್ರಗಾಮಿಗಳು ಎಂಬ ಗುಮಾನಿಯಲ್ಲಿ ೧೦ ಜನ ಮುಗ್ದ ನಾಗರೀಕರ ಮೇಲೆ ಸಶಸ್ತ್ರಪಡೆಯ ಯೋಧರು ಗುಂಡುಹಾರಿಸಿ ಸಾಯಿಸಿದ ಸಂಗತಿ ಇರೋಮ್ ಶರ್ಮಿಳಾ ಅವರ ಮನಸ್ಸನ್ನು ಕಲಕಿತು. ಕವಿಹೃದಯದ ಆಕೆ ಇದರ ವಿರುದ್ಧ ಅಮರಣಾಂತಿಕ ಉಪವಾಸ ಸತ್ಯಾಗ್ರಹ ಕೈಗೊಳ್ಳುವ ಮೂಲಕ ತಮ್ಮ ಹೋರಾಟವನ್ನು ಆರಂಭಿಸಿದರು. ಇದು ಆತ್ಮಹತ್ಯೆಯ ಪ್ರಯತ್ನ ಎಂದು ಹೇಳಿ ಅವರನ್ನು ಬಂದಿಸಲಾಯಿತು. ಈ ಮೂಲಕ ಅವರ ಹೋರಾಟವನ್ನು ಹತ್ತಿಕ್ಕಬಹುದು ಎಂದು ಭಾವಿಸಿ ಹೀಗೆ ಮಾಡಿದ್ದರೂ ಇದಕ್ಕೆ ಮಣಿಯದೆ ತಮ್ಮ ಪ್ರತಿಭಟನೆಯನ್ನು ಮುಂದುವರೆಸಿರುವ ಶರ್ಮಿಳಾ ಅವರ ಹೋರಾಟಕ್ಕೆ ಮೊನ್ನೆ ನವಂಬರ್ ೨ನೇ ತಾರೀಕಿಗೆ ಹತ್ತುವರ್ಷ ತುಂಬಿತು."[೮]

ಭಾರತೀಯ ಯೋಧರನ್ನ ಅತ್ಯಂತ ಗೌರವದಿಂದ ನಡೆಸಿಕೊಳ್ಳಲಾಗುತ್ತದೆ ಮತ್ತು ಸರ್ಕಾರವು ಇವರಿಗೆ ವಿಶೇಷವಾದ ಸ್ಥಾನಮಾನವನ್ನು ಕಲ್ಪಿಸಿದೆ. ಯೋಧರ ತ್ಯಾಗ, ಬಲಿದಾನಗಳಿಂದಾಗಿ ಭಾರತೀಯ ನಾಗರೀಕರು ನೆಮ್ಮದಿಯಿಂದ ನಿಟ್ಟುಸಿರು ಬಿಡುತ್ತಿದ್ದಾರೆ. ಹೀಗಾಗಿ ಹೆಮ್ಮೆಯ ಸೈನಿಕರೆಂದು ಎದೆತಟ್ಟಿ ಹೇಳಿಕೊಳ್ಳುತ್ತೇವೆ. ಇಂತಹ ಸಶಸ್ತ್ರಪಡೆಯು ಅನಾಗರೀಕರಂತೆ ವರ್ತಿಸಿ ಮುಗ್ದ ನಾಗರೀಕರನ್ನ ಉಗ್ರಗಾಮಿಗಳೆಂದು ಗುಂಡು ಹಾರಿಸಿ ಸಾಯಿಸಿದರು. ಗೂಂಡಗಳಂತೆ ವರ್ತಿಸಿ ಅಧಿಕಾರವನ್ನ ದುರುಪಯೋಗ ಮಾಡಿಕೊಂಡಿದ್ದನ್ನು ವಿರೋಧಿಸಿ ಇರೋಮ್ ಶರ್ಮಿಳಾ ಅವರು ಅಮರಣಾಂತ ಉಪವಾಸ ಸತ್ಯಾಗ್ರಹವನ್ನು ಮಾಡುವ ಮೂಲಕ ತಮ್ಮ ಹೋರಾಟವನ್ನು ಆರಂಭಿಸಿದರು.

ನಿರಂತರವಾಗಿ ಸಶಸ್ತ್ರ ಪಡೆಗಳಿಂದ ನಡೆಯುತ್ತಿದ್ದ ದೌರ್ಜನ್ಯವನ್ನು ಅಲ್ಲಿಯವರೆಗೂ ಸಹಿಸಿದ್ದ ಇವರು ೧೦ ಮುಗ್ಧಜನರ ಮೇಲೆ ಗುಂಡು ಹಾರಿಸಿ ಕೊಂದಿದ್ದು ಹೋರಾಟ ಮಾಡುವಂತೆ ಮಾಡಿತ್ತು. ಯಾವುದೇ ಸರ್ಕಾರಗಳ ವಿರುದ್ಧ ಅಥವಾ ಅನ್ಯಾಯದ ವಿರುದ್ಧ ಹೋರಾಟ ಮಾಡಲಾಗುತ್ತಿದೆ ಎಂದರೆ ಅದನ್ನ ಆಳುವ ಸರ್ಕಾರಗಳು ಹತ್ತಿಕ್ಕುವುದಕ್ಕೆ ಹೊಂಚು ಹಾಕುತ್ತಿರುತ್ತವೆ. ಇಲ್ಲಿಯೂ ಆದದ್ದು ಹಾಗೆಯೇ. ಇದು ಆತ್ಮಹತ್ಯೆಯ ಪ್ರಯತ್ನವೆಂದು ಶರ್ಮಿಳಾ ಅವರನ್ನು ಬಂಧಿಸಲಾಯಿತು. ಆದರೆ ತನ್ನ ಪಟ್ಟು ಬಿಡದ ಶರ್ಮಿಳಾ ದಿಟ್ಟತನದಿಂದ ತಮ್ಮ ಹೋರಾಟವನ್ನು ಮುಂದುವರೆಸಿದರು. ಅವರ ಹೋರಾಟಕ್ಕೆ ದಶಕಗಳೇ ಕಳೆದು ಹೋಗಿವೆ. ಇವರ ಹೋರಾಟಕ್ಕೆ ಮಣಿದ ಸರ್ಕಾರ ಸಶಸ್ತ್ರಪಡೆಯ ವಿಶೇಷ ಅಧಿಕಾರವನ್ನು ವಾಪಾಸ್ಸು ತೆಗೆದುಕೊಂಡಿದ್ದನ್ನು ನಾವಿಲ್ಲಿ ಸ್ಮರಿಸಬಹುದು. ಇದಕ್ಕೆ ಹುಕ್ಕಿನ ಮಹಿಳೆ ಇರೋಮ್ ಶರ್ಮಿಳಾ ಅವರ ಅಚಲವಾದ ಹೋರಾಟವೇ ಕಾರಣವಾಗಿದೆ.

"ಮಧ್ಯಪ್ರದೇಶದ ಹಾರ್ಡಾ ಜಿಲ್ಲೆಯ ರಾಮೆಟಿಕ್ ಸರಪಂಚಳಾದ ಸೋಜರಾ ಬಾಯಿ ಅನಕ್ಷರಸ್ಥ ದಲಿತ ಮಹಿಳೆ. ಅವಳ ಗ್ರಾಮದ ಉಸ್ತುವಾರಿ ವಹಿಸಿದ್ದ ಕರ್ಕಿಯಾ ಪಂಚಾಯಿತಿಯ ಸಿ.ಇ.ಓ. ಮಹಾ ಲಂಚಕೋರನಾಗಿದ್ದನ್ನು ಕಂಡು ಅದರ ವಿರುದ್ಧ ಹೋರಾಡಿ ಜಯಗಳಿಸಿದ್ದಳು. ಸಿ.ಇ.ಓ.ನಿಂದಾದ ಅವ್ಯವಹಾರಗಳ ಮೇಲೆ ತನಿಖೆ ನಡೆದು ಅವನನ್ನು ಸಸ್ಪೆಂಡ್ ಮಾಡಲಾಯಿತು. ಮಧ್ಯಪ್ರದೇಶ ರಾಜ್ಯ ಸರ್ಕಾರವು ಗ್ರಾಮ ಪಂಚಾಯಿತಿಯ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದವಳು. ಆರು ಮಕ್ಕಳ ತಾಯಿಯಾದ ಸಂಕೋಚ ಪ್ರವೃತ್ತಿಯ ಸೋಜರಾ ಯಾವುದೇ ರೀತಿಯ ಸಂಘಟನೆಯ ಅನುಭವವಿಲ್ಲದಿದ್ದರೂ ಪಂಚಾಯಿತಿಗೆ ಸಂದಾಯವಾಗುವ ಹಣ ಲಂಚಕೋರರ ಪಾಲಾಗುವುದನ್ನು ಕಂಡು ಎಚ್ಚೆತ್ತಳು.

ಜವಾಹರ್ ಗ್ರಾಮ ಸ್ಮೃತಿ ಯೋಜನೆಯಡಿ ೫೦,೦೦೦ ರೂಪಾಯಿಗಳು ಮಂಜೂರಾದಾಗ, ಆ ಹಣದ ವಿಲೇವಾರಿಯನ್ನು ಅವಳಿದ್ದ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಯು ಆ ಹಣವನ್ನು ಸಂಪೂರ್ಣವಾಗಿ ಉಪಯೋಗಿಸದೆ, ಅದರ ಸ್ವಲ್ಪ ಭಾಗವನ್ನು ಕಮಿಷನ್ನೆಂದು ತೆಗೆದಿಟ್ಟುಕೊಂಡಾಗ ಸೋಜರಾಬಾಯಿ ಕೆರಳಿ ಕೆಂಡವಾದಳು. ರಸ್ತೆ, ಚರಂಡಿ ನಿರ್ಮಾಣದಲ್ಲಿ ತೊಡಗಿದ್ದ ಕೂಲಿಗಾರರ ಮತ್ತು ತನ್ನ ಗ್ರಾಮ ಪಂಚಾಯಿತಿಯ ಉಳಿದ ಪಂಚರ ನೆರವಿನಿಂದ ಎಲ್ಲ ವ್ಯವಹಾರವನ್ನು ತಾನೇ ನಡೆಸಿದಳು. ಆ ಗ್ರಾಮದ ಸಿ.ಇ.ಓ.ನ ದುರ್ನಡತೆಯನ್ನು ಕಂಡು ಹಳ್ಳಿಗರೆಲ್ಲಾ ಒಟ್ಟಾಗಿ ಸೋಜರಾಬಾಯಿಯ ಬೆಂಬಲಕ್ಕೆ ನಿಂತರು. ಡಿಸ್ಟ್ರಿಕ್ಟ್ ಕಲೆಕ್ಟರ್ ಮತ್ತು ಭೋಪಾಲ್‌ದಲ್ಲಿನ ಸೆಕ್ರೆಟರಿಯೇಟ್‌ಗೆ ಸಿ.ಇ.ಓ. ಒಳಗೊಂಡಿದ್ದ ಎಲ್ಲ, ಲಂಚ ವ್ಯವಹಾರಗಳನ್ನು ಕುರಿತು ದೂರು ಸಲ್ಲಿಸಿದರು. ಅಂತೂ ಕೊನೆಗೆ ಲಂಚಕೋರ ೧೦ ದಿನದೊಳಗೆ ಸಸ್ಪೆಂಡ್ ಆದ, ಈ ಹೋರಾಟ ಸೋಜರಾಬಾಯಿಗೆ ಮತ್ತು ಹಳ್ಳಿಗರಿಗೆ ನೆಮ್ಮದಿ ಮತ್ತು ಹೋರಾಟದ ಭರವಸೆಯನ್ನು ಹುಟ್ಟಿಸಿತು."[8] ಅಕ್ಷರಸ್ಥ ಸಮೂಹ ಇರುವಾಗಲೂ ಸಹಿತ ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತಲು

ಹಿಂದೇಟು ಹಾಕುವುದನ್ನು ಕಂಡಿದ್ದೇವೆ. ಆದರೆ ಅಕ್ಷರಜ್ಞಾನವಿಲ್ಲದ ಸೋಜರಾಬಾಯಿ ಗ್ರಾಮಪಂಚಾಯಿತಿಯ ಸಿ.ಇ.ಓ.ನ ಅವ್ಯವಹಾರದ ವಿರುದ್ಧ ಹೋರಾಟಕ್ಕೆ ಮುಂದಾಗಿದ್ದಾಳೆ. ಗ್ರಾಮಗಳ ಕಲ್ಯಾಣಕ್ಕಾಗಿ ಕೊಡುವ ಹಣವನ್ನು ದುರುಪಯೋಗ ಮಾಡಿಕೊಳ್ಳುವುದನ್ನು ತಡೆದು ಯಶಸ್ವಿಯೂ ಆಗಿದ್ದಾಳೆ. ಏನೂ ಅಕ್ಷರಜ್ಞಾನ ಇರದ ಮತ್ತು ನಾಚಿಕೆ, ಸ್ವಭಾವದ ಮುಗ್ಧ ಮಹಿಳೆಯಾಗಿದ್ದೂ ಕೂಡ ಅನ್ಯಾಯವನ್ನು ವಿರೋಧಿಸುವ ಛಲವನ್ನು ಬೆಳೆಸಿಕೊಂಡು ಹೋರಾಟವನ್ನು ಮಾಡಿದ್ದಾಳೆ. ಅವಳ ಆತ್ಮಸ್ಥೈರ್ಯ ಮತ್ತು ದೃಢ ಸಂಕಲ್ಪವಿದ್ದರೆ ಎಂಥಹ ಮುಗ್ಧರಾದರೂ ಸಹ ವ್ಯವಸ್ಥೆಯ ವಿರುದ್ಧ ತಿರುಗಿಬೀಳಲು ಸಾಧ್ಯವಿದೆ ಎಂಬುದಕ್ಕೆ ಸೋಜರಾಬಾಯಿ ಒಂದು ನಿದರ್ಶನ.

ಗ್ರಾಮ ಪಂಚಾಯಿತಿಗಳಿಗೆ ಆರಿಸಿ ಬರುವ ಮಹಿಳೆಯರ ಸಂಖ್ಯೆ ಹೆಚ್ಚಾಗಬೇಕು ಅಕ್ಷರ ಜ್ಞಾನ ಇರುವವರೂ ಬೇಕು. ಅದರ ಜೊತೆ ಜೊತೆಗೆ ಸೋಜರಾಬಾಯಿಯಂತಹ ಕೆಚ್ಚೆದೆಯ ಹೋರಾಟಗಾರ್ತಿಯರೂ ಹೆಚ್ಚಾಗಬೇಕು. ದೇಶದ ಯಾವುದೇ ಪಕ್ಷಗಳಿಂದಲೂ ನಿರೀಕ್ಷಿಸದೆ, ನಾಗರೀಕರು ಸ್ವತಃ ತಾವೇ ಇಂತಹ ನಿರ್ಧಾರವನ್ನು ತಮ್ಮ ಕೈಗೆತ್ತಿಕೊಂಡರೆ ಮೂಲೆ ಮೂಲೆಯಲ್ಲಿ ನಡೆಯುತ್ತಿರುವ ಲಂಚಕೋರತನದ ಬಗ್ಗೆ ಗಮನ ಹರಿಸಬಹುದು.

"ಹುಟ್ಟಿನಿಂದ ದಲಿತ ಸಮುದಾಯಕ್ಕೆ ಸೇರಿದ ಸಂಪತ್ ಪಾಲ್ ಅಸ್ಪೃಶ್ಯತೆ, ಜಾತೀಯತೆ ಕುರಿತ ಮಾತು ಬಂದರೆ ಕೆಂಡಾಮಂಡಲವಾಗುತ್ತಾರೆ. ದೇವಾಲಯದ ಪಕ್ಕ ಪುಷ್ಕರಣಿಯಲ್ಲಿ ಹಂದಿ, ನಾಯಿ, ಉಚ್ಚೆ ಹೊಯ್ಯುತ್ತವೆ, ಅದೇ ಕೊಳಕು ನೀರನ್ನು ತಲೆ ಮೇಲೆ ಚಿಮುಕಿಸಿಕೊಳ್ಳುತ್ತೀರಿ ತೀರ್ಥವೆಂದು ಕುಡಿಯುತ್ತೀರಿ, ಮುನಷ್ಯರನ್ನು ಮುಟ್ಟಲು ನಿಮಗೇನು ಧಾಡಿ? ಎಂದು ಪ್ರಶ್ನಿಸುವ ಆಕೆ. ದಲಿತರು ಎಂದರೆ ಎಲ್ಲ ಬಡವರು, ಮಹಿಳೆಯರು, ದುರ್ಬಲರೂ ದಲಿತರೇ ಅವರ ಪರವಾಗಿಯೇ ತಮ್ಮ ಹೋರಾಟ ಎನ್ನುತ್ತಾರೆ."[೧೦] ವೈದಿಕಶಾಹಿ ವರ್ಗವು ಹಿಂದಿನಿಂದಲೂ ದಲಿತರನ್ನು ನಡೆಸಿಕೊಂಡು ಬಂದ ರೀತಿಯನ್ನು ಪ್ರಶ್ನಿಸುವ ಜೊತೆಗೆ, ದಲಿತರೆಂದರೆ ಪ್ರಾಣಿಗಳಿಗಿಂತ ಕೀಳಾಗಿ ನಡೆಸಿಕೊಳ್ಳುವ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸುತ್ತಾರೆ. ದಲಿತರಿಗೆ ಮತ್ತು ಮಹಿಳೆಯರಿಗೆ ದೇವಾಲಯದ ಪ್ರವೇಶ ನಿರಾಕರಣೆಯನ್ನು ವಿರೋಧಿಸಿದ್ದಾರೆ. ಅಲ್ಲದೆ ಪ್ರಾಣಿಗಳಿಗೆ ಕೊಡುವ ಪ್ರಾಶಸ್ತ್ಯವನ್ನು ಮನುಷ್ಯರಿಗೆ ಯಾಕೆ ಕೊಡುವುದಿಲ್ಲ, ಮನುಷ್ಯ ಮನುಷ್ಯನನ್ನು ಮುಟ್ಟಲು ನಿಮಗೇನು ಧಾಡಿ? ಎಂಬುದಾಗಿ ಕಠೋರವಾಗಿಯೆ ಪ್ರತಿಭಟಿಸಿದ್ದಾರೆ.

"ನಮ್ಮ ಮೇಲೆ ಪ್ರತಿನಿತ್ಯ ಲೈಂಗಿಕ ದೌರ್ಜನ್ಯವನ್ನು ಎಸಗಬೇಡಿ ಹಾಗೂ ನಮ್ಮ ಕೊಲೆ ಮಾಡಬೇಡಿ ನಮ್ಮ ಹಕ್ಕುಗಳನ್ನು ಮಾನ್ಯಮಾಡಿ ಕೊಲೆಯಾಗಿರುವ ಮತ್ತು ಲೈಂಗಿಕ ದೌರ್ಜನ್ಯದಿಂದ ನಲುಗಿ ಹೋಗಿರುವವರ ಪರವಾಗಿ ಹೋರಾಡುವುದೇ ನನ್ನ ಜೀವನದ ಪರಮಗುರಿ ಮತ್ತು ಒಂದಾನೊಂದು ದಿನ ನಾನು ಕೂಡ ಈ ವ್ಯವಸ್ಥೆಯ ಬಲಿಪಶುವಾಗುತ್ತೇನೆ ಎಂಬುದು ನನಗೆ ಖಚಿತವಾಗಿದೆ. ಅಂತಹ ಹಿಂಸೆಗೆ ನಾನು ಬಲಿಯಾದಾಗ ಯಾರಾದರೂ ನನ್ನ ಪರಧ್ವನಿ ಎತ್ತಲಿ ಮತ್ತು ಹೋರಾಡಲಿ ಎಂದು ನಾನು ಬಯಸುತ್ತೇನೆ ಎಂದು ಮನೀಷಾ ಎಂಬ ಮಹಿಳೆ ಹಾಗೂ

ಮಾನವ ಹಕ್ಕು ಹೋರಾಟಗಾರ್ತಿ ನುಡಿಯುತ್ತಾಳೆ."[೧೧] ಮಹಿಳೆಯನ್ನು ಎರಡನೇ ದರ್ಜೆಯವಳನ್ನಾಗಿಯೆ ನಡೆಸಿಕೊಂಡು ಬರಲಾಗಿದೆ. ಅದರಲ್ಲೂ ದಲಿತ ಮಹಿಳೆಯರನ್ನು ಅತ್ಯಂತ ನಿಕೃಷ್ಟವಾಗಿ ಈ ಸಮಾಜವು ನಡೆಸಿಕೊಳ್ಳುತ್ತಿರುವುದು ಇಂದಿಗೂ ಮುಂದುವರೆದಿರುವುದನ್ನು ಕಾಣಬಹುದಾಗಿದೆ. ತಳಸಮುದಾಯದವರ ಮೇಲೆ ಮೇಲ್ಜಾತಿ, ಮೇಲ್ವರ್ಗದವರು ಶೋಷಣೆ ಮಾಡುತ್ತಿರುವುದನ್ನು ಈ ಹೋರಾಟಗಾರ್ತಿಯು ವ್ಯವಸ್ಥೆಯ ವಿರುದ್ಧ ಪ್ರತಿಭಟಿಸುತ್ತಿದ್ದಾರೆ. ಅಲ್ಲದೆಯೆ ದಲಿತರ ಮತ್ತು ಮಹಿಳೆಯ ಹಕ್ಕುಳಗಳನ್ನು ಮಾನ್ಯ ಮಾಡುವಂತೆ ತಮ್ಮ ಹೋರಾಟವನ್ನು ಇವರು ನಡೆಸುತ್ತಿರುವುದನ್ನು ಇಲ್ಲಿ ಲೇಖಕಿಯು ಅಭಿವ್ಯಕ್ತಿಸಿದ್ದಾರೆ.

ವರದಕ್ಷಿಣೆ ಎಂಬ ಪಿಡುಗು ಇಡೀ ಮಹಿಳಾ ಸಮುದಾಯವನ್ನು ನಲುಗಿಸುತ್ತಿರುವುದಲ್ಲದೆ, ಅವಳ ಜೀವನವನ್ನೇ ಕಸಿದುಕೊಳ್ಳುತ್ತಿದೆ. ವರದಕ್ಷಿಣೆಯ ಬಲಿಗೆ ಅದೆಷ್ಟು ಹೆಣ್ಣುಗಳು ಅತ್ತೆ ಗಂಡನಿಂದ ಬಲಿಯಾಗಿದ್ದಾರೊ, ಕೆಲವು ಮಹಿಳೆಯರು ಇದನ್ನ ಸಹಿಸಲಾರದೆ ಪೋಲಿಸ್ ಸ್ಟೇಷನ್ನಿಗೆ ದೂರು ದಾಖಲಿಸಿದರೂ ಪ್ರಯೋಜನವಾಗದೆ ಅಸಹಾಯಕ ಸ್ಥಿತಿಯನ್ನೂ ಅನುಭವಿಸಿರುವುದನ್ನು ಕಾಣುತ್ತೇವೆ. "ಅರೆಬೆತ್ತಲೆಯಾಗಿ ಬೀದಿಯಲ್ಲಿ ನಡೆದವಳು ಪೂಜಾ ಚೌಹಾನ್ ಎಂಬ ಮಹಿಳೆ, ವರದಕ್ಷಿಣೆ ತರುವಂತೆ ತನ್ನನ್ನು ಪೀಡಿಸುತ್ತಿದ್ದ ಗಂಡನ ಮತ್ತು ಅತ್ತೆ–ಮಾವರ ವಿರುದ್ಧ ದೂರನ್ನು ದಾಖಲಿಸುವಂತೆ ಪೂಜಾ ಪೋಲಿಸರಿಗೆ ಮನವಿ ಸಲ್ಲಿಸಿದ್ದಳು. ಪೊಲೀಸ್ ಠಾಣೆಯ ಮುಂದೆ ಪ್ರತಿಭಟಿಸಿದ್ದಳು. ಆತ್ಮಹತ್ಯೆಗೂ ಪ್ರಯತ್ನಿಸಿದ್ದಳು. ಆದರೆ ಇದ್ಯಾವುದರಿಂದಲೂ ಪ್ರಯೋಜನವಾಗಲಿಲ್ಲ. ಕೊನೆಗೆ ಅರೆ ಬೆತ್ತಲೆಯಾಗಿ ನಡೆದು ತನ್ನ ಅಸಹಾಯಕತೆ, ಆಕ್ರೋಶವನ್ನು ವ್ಯಕ್ತಪಡಿಸಿದಳು. ಈಗಲೂ ತನಗೆ ಅನ್ಯಾಯ ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ಸಂಪೂರ್ಣ ಬೆತ್ತಲಾಗಿ ಪ್ರತಿಭಟಿಸುವುದಾಗಿ ಹೇಳಿದಳು. ಪ್ರಾಯಶಃ ಮಾಧ್ಯಮದವರ ಗಮನಕ್ಕೆ ಪೂಜಾಳ ಪ್ರತಿಭಟನಾ 'ಯಾತ್ರೆ' ಬಾರದಿದ್ದರೆ ಆಕೆ ಪೂರ್ತಿ ಬೆತ್ತಲಾಗುವುದಕ್ಕೆ ಅಲ್ಲಿನ ಪೋಲೀಸರು ಕಾಯುತ್ತಿದ್ದರೇನೋ"[೧೨] ನಮ್ಮ ದೇಶದಲ್ಲಿ ಹೆಣ್ಣನ್ನು ದೇವತೆ, ಭೂಮಿತಾಯಿ ಎಂಬುದಾಗಿ ಪೂಜನೀಯ ಸ್ಥಾನವನ್ನು ಕಲ್ಪಿಸಿ ಪೂಜಿಸಲಾಗುತ್ತದೆ. ಆದರೆ ವಾಸ್ತವ ಸಮಾಜದಲ್ಲಿ ಮಹಿಳೆಯು ಲೈಂಗಿಕದೌರ್ಜನ್ಯ, ಅನೇಕ ಕಿರುಕುಳಗಳಿಂದ ತತ್ತರಿಸಿ ಹೋಗುತ್ತಿದ್ದಾಳೆ. ಅವಳಿಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಮುಂತಾದಂತೆ ಅವಳ ಧ್ವನಿಯನ್ನು ಅಡಗಿಸಲಾಗುತ್ತಿದೆ. ವರದಕ್ಷಿಣೆಯ ಕಿರುಕುಳದ ವರದಿ ದಿನದಿಂದ ದಿನಕ್ಕೆ ಹೆಚ್ಚೆಚ್ಚು ವರದಿಯಾಗುತ್ತಲೇ ಇವೆ. ಇಂತಹ ಕಿರುಕುಳವನ್ನು ಸಹಿಸಲಾರದ ಗುಜರಾತಿನ ಪೂಜಾ ಚೌಹಾನ್ ಇದರ ವಿರುದ್ಧ ಬೀದಿಗಿಳಿದು ಅರೆನಗ್ನರಾಗಿ ಪ್ರತಿಭಟಿಸಿದ್ದಾರೆ. ಆದರೆ ಅಲ್ಲಿನ ಪೋಲಿಸ್ ವ್ಯವಸ್ಥೆಯು ಇವಳನ್ನು ಲೆಕ್ಕಿಸದೇ ಇರುವುದು ಅಲ್ಲಿನ ವ್ಯವಸ್ಥೆಯ ದುರ್ಬಲತೆಯನ್ನು ತೋರಿಸುತ್ತದೆ. ಹೆಣ್ಣು ತನಗೆ ನ್ಯಾಯ ಕೇಳಲು, ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ತನ್ನ ದೇಹವನ್ನೇ ಬೆತ್ತಲಾಗಿಸಿಕೊಳ್ಳುವ ಸ್ಥಿತಿ ಎದುರಾಗುತ್ತಿರುವುದು ದುರಂತವೇ ಸರಿ.

ಹನ್ನೆರಡನೆಯ ಶತಮಾನದಲ್ಲಿ ಅಕ್ಕಮಹಾದೇವಿ ಗಂಡ ಕಿರುಕುಳ ಸಹಿಸಿಕೊಳ್ಳಲಾರದೆ ನಗ್ನಳಾಗಿ ಮನೆಯಿಂದ ಹೊರಬಂದಿದ್ದಳು. ಹಾಗೆಯೇ ಕಾಶ್ಮೀರದ ಲಲ್ಲೇಶ್ವರಿ ಹದಿನಾಲ್ಕನೇ

ಶತಮಾನದಲ್ಲಿ ಅತ್ತೆ ಮತ್ತು ಗಂಡನ ಕಾಟವನ್ನು ತಾಳಲಾಗದೆ ಬೆತ್ತಲಾಗಿ ಬೀದಿಗೆ ಬಂದಿದ್ದನ್ನು ಕಾಣಬಹುದು. ಶತಮಾನಗಳು ಕಳೆದರು ಅಂದಿನಿಂದ ಇಂದಿನವರೆಗೂ ತನ್ನ ಮೇಲಾಗುತ್ತಿರುವ ದೌರ್ಜನ್ಯಗಳ ವಿರುದ್ಧ ಮಹಿಳೆಯರು ಬೆತ್ತಲಾಗಿ ಪ್ರತಿಭಟಿಸುತ್ತಿರುವುದು ಶೋಚನೀಯವೇ ಆಗಿದೆ.

ದೇಶದ ರಕ್ಷಣೆಗಾಗಿ ಸೈನಿಕರನ್ನು ಸರ್ಕಾರವು ನೇಮಿಸಿಕೊಂಡಿದೆ. ಆದರೆ ಸರ್ಕಾರಕೊಟ್ಟ ವಿಶೇಷ ಸವಲತ್ತವನ್ನು ಯೋಧರು ದುರುಪಯೋಗ ಮಾಡಿಕೊಳ್ಳುತ್ತಿರುವುದರ ಜೊತೆಗೆ ಮಹಿಳೆಯರನ್ನು ಅತ್ಯಾಚಾರವೆಸಗಿ ಅಮಾನುಷವಾಗಿ ಹತ್ಯೆ ಮಾಡುವುದು ಎಷ್ಟರಮಟ್ಟಿಗೆ ಸರಿಯಾದುದು. ಇದರ ವಿರುದ್ಧ ಮಣಿಪುರದ ಮಹಿಳೆಯರು ಬೆತ್ತಲಾಗಿ ಪ್ರತಿಭಟಿಸಬೇಕಾಯಿತು. "ಇದೇ ಜುಲೈ ೧೫ಕ್ಕೆ ಸರಿಯಾಗಿ ಮೂರು ವರ್ಷಗಳ ಹಿಂದೆ ಇಂತಹದ್ದೇ ಒಂದು ಪ್ರತಿಭಟನೆ ನಡೆದದ್ದು ನಿಮಗೆ ನೆನಪಿರಬೇಕು. ಅಂದು ಮನೋರಮಾ ಥಂಗ್‌ಜಾಮ್ ಎಂಬ ಮಹಿಳೆಯನ್ನು ಮಣಿಪುರದಲ್ಲಿರುವ ಭಾರತ ಸೈನ್ಯದ ಅಸ್ಸಾಂ ರೈಫಲ್ಸ್‌ನ ಸೈನಿಕರು ಅಮಾನುಷವಾಗಿ ರೇಪ್ ಮಾಡಿ ಕೊಂದುಹಾಕಿದ್ದರ ವಿರುದ್ಧ ಅಲ್ಲಿನ ಮಹಿಳೆಯರು ಪ್ರತಿಭಟಿಸಿದ್ದರು. ಮೈರಾ ಪೈಬೀಸ್ ಎಂಬ ಸಂಘಟನೆಯ ಹನ್ನೆರಡು ಮಹಿಳೆಯರು ಸೈನ್ಯಾಧಿಕಾರಿಗಳ ಕಚೇರಿಯ ಮುಂದೆ ನಗ್ನರಾಗಿ 'ಇಂಡಿಯನ್ ಆರ್ಮಿ, ಕಮ್ ರೇಪ್ ಅಸ್' ಎಂದು ಪ್ರತಿಭಟಿಸಿದ್ದರು. ಅಲ್ಲಿಯವರೆಗೂ ಮಣಿಪುರದಲ್ಲಿ ನಡೆಯುತ್ತಿದ್ದ ಜನರ ಪ್ರತಿಭಟನೆಯು ದೇಶದ ಬಹಳಷ್ಟು ಜನರ ಅರಿವಿಗೆ ಬಂದೇ ಇರಲಿಲ್ಲ. ಆದರೆ ಎಲ್ಲಾ ರೀತಿಯ ಪ್ರಜಾಸತ್ತಾತ್ಮಕ ಮತ್ತು ಶಾಂತಿಯುತ ಪ್ರತಿಭಟನೆಗಳನ್ನು ಅಲ್ಲಿನ ಸರ್ಕಾರ ಮತ್ತು ಸೈನ್ಯ ನಿರ್ಲಕ್ಷಿಸುತ್ತಾ ಬಂದಿದ್ದರಿಂದ ರೋಸೆತ್ತ ಮಹಿಳೆಯರು ಕೊನೆಗೆ ಅಸಹಾಯಕ ನಗ್ನರಾಗಿ ನಿಂತಿದ್ದರು."[೧೩] ರಕ್ಷಿಸಬೇಕಾದವರೇ ಭಕ್ಷಕರಾದಾಗ ರಕ್ಷಣೆಯನ್ನು ನಿರೀಕ್ಷಿಸುವುದಾದರು ಹೇಗೆ? ಇಂತಹ ಸಂದರ್ಭದಲ್ಲಿ ಮಹಿಳೆಯರ ರಕ್ಷಣೆ ಕನಸಿನ ಮಾತೇ ಸರಿ. ಎಲ್ಲವನ್ನು ಸಹಿಸಿಕೊಂಡಾಗಲೂ ಅದರ ಮಿತಿ ದಾಟಿದಾಗ ಅನಿವಾರ್ಯವಾಗಿ ತಮ್ಮ ಉಳಿವಿಗಾಗಿ ಪ್ರತಿಭಟನೆಯ ಹಾದಿಯನ್ನು ಹಿಡಿಯದೆ ಬೇರೆಯ ಮಾರ್ಗವೇ ಇಲ್ಲ. ಹೀಗಾಗಿಯೇ ಅಲ್ಲಿನ ಮಹಿಳೆಯರು ಬೆತ್ತಲಾಗಿ ಪ್ರತಿಭಟಿಸಿದ್ದಾರೆ. 'ಇಂಡಿಯನ್ ಆರ್ಮಿ, ಕಮ್ ರೇಪ್ ಅಸ್' ಎಂದು ಸೈನ್ಯಾಧಿಕಾರಿಗಳ ಕಚೇರಿಯ ಮುಂದೆ ಪ್ರತಿಭಟಿಸಿದರು. ಹಾಗೆ ಈಶಾನ್ಯ ಪ್ರದೇಶಗಳಲ್ಲಿ ಜಾರಿಯಲ್ಲಿರುವ ಶಸ್ತ್ರಾಸ್ತ್ರ ಪಡೆಗಳ ವಿಶೇಷ ಅಧಿಕಾರ ಕಾಯಿದೆಯನ್ನು ರದ್ದುಗೊಳಿಸುವಂತೆ ಸರ್ವೋಚ್ಚ ನ್ಯಾಯಾಲಯದ ಮುಂದೆ ಪ್ರತಿಭಟನೆ ಮಾಡಲಾಯಿತು. ಹೀಗೆ ಪ್ರತಿ ಹಂತದಲ್ಲಿಯೂ ಹೋರಾಡಿಯೇ ತಮ್ಮ ಸಮಸ್ಯೆಗಳನ್ನು ನಿವಾರಣೆ ಮಾಡಿಕೊಳ್ಳುವಂತೆ ಈ ವ್ಯವಸ್ಥೆಯು ರೂಪಿಸಿರುವುದನ್ನು ಇವರು ಅತ್ಯಂತ ಕಠೋರವಾಗಿ ಟೀಕಿಸಿದ್ದಾರೆ.

ಮೊದಲಿನಿಂದಲೂ ಮಹಿಳಾ ಚಳುವಳಿ ಅಥವಾ ಮಹಿಳಾ ಹೋರಾಟವು ವೈಯಕ್ತಿಕತೆಗೆ ಮಾತ್ರ ಸೀಮಿತವಾಗದೆ ಎಲ್ಲಾ ಸಮುದಾಯದ ಮಹಿಳೆಯರ ಹೋರಾಟವಾಗಿ ರೂಪುಗೊಳ್ಳಬೇಕೆಂಬ ನಿಲುವಿನಿಂದಲೇ ಹುಟ್ಟಿಕೊಂಡಿತು. ಮಹಿಳೆಯರ ದಿನ ನಿತ್ಯ ಜೀವನದಲ್ಲಿ ಕುಟುಂಬ ಹಾಗೂ ಧರ್ಮವು ಮಹಿಳಾ ಶೋಷಣೆಯ ಪ್ರತಿಪಾದಕರೆಂದು ವಿರೋಧಿಸುವಾಗ ಹುಟ್ಟಿಕೊಂಡಂತಹದ್ದಾಗಿದೆ.

ಆದರೆ ಇಂದು ಧರ್ಮ ಮತ್ತು ಕುಟುಂಬದ ಸಂಕೋಲೆಗಳನ್ನು ಗಟ್ಟಿಗೊಳಿಸಲಾಗುತ್ತಿರುವುದನ್ನು ಕಾಣಬಹುದು. ಅಲ್ಲದೆಯೇ ಧರ್ಮದ ಹೆಸರಿನಲ್ಲಿ ಮಹಿಳೆಯರನ್ನು ಒಂದುಗೂಡದಂತೆ ಈ ಪುರುಷ ಸಮಾಜವು ವ್ಯವಸ್ಥಿತವಾಗಿ ಬದುಕನ್ನುಂಟುಮಾಡಿದೆ. ಆದರೆ ಮಹಿಳೆಯರು ತಮ್ಮದೇ ಆದ ನಿರ್ದಿಷ್ಟವಾದ ನಿಲುವಿನೊಂದಿಗೆ ಹೋರಾಡಿದ್ದಾರೆ. ಮತ್ತು ಹೋರಾಡುತ್ತಿರುವುದನ್ನು ಕಾಣಬಹುದು. ಸೈದ್ಧಾಂತಿಕ ನಿಲುವಿನ ಜೊತೆಯಲ್ಲಿ ಚಳುವಳಿಯನ್ನು ಮಾಡುತ್ತಾ ಮತ್ತು ತಮ್ಮ ಅಭಿವ್ಯಕ್ತಿಯ ಮೂಲಕವಾಗಿಯು ಪ್ರತಿರೋಧವನ್ನು ವ್ಯಕ್ತಪಡಿಸಿದ್ದಾರೆ.

ಕಥೆ, ಕವನ, ಕಾದಂಬರಿ ಹೀಗೆ ಸೃಜನಶೀಲ ಸಾಹಿತ್ಯದಲ್ಲಿ ತಮ್ಮದೇ ಆದ ರೀತಿಯಲ್ಲಿ ಪುರುಷಪ್ರಧಾನ ಸಮಾಜದ ವಿರುದ್ಧ ಪ್ರತಿಭಟಿಸಿರುವುದನ್ನು ನಾವಿಲ್ಲಿ ಗುರುತಿಸಬಹುದು. 'ಹೆಮ್ಮಿಂಗ್ ವೇ ಹೇಳುವಂತೆ ಮನುಷ್ಯನನ್ನು ನಾವು ನಿರ್ನಾಮ ಮಾಡಬಹುದು. ಆದರೆ ಸೋಲಿಸಲಾಗದು', ಎಂಬ ಮಾತನ್ನು ಮಹಿಳಾ ಹೋರಾಟಕ್ಕೂ ನಾವು ಅನ್ವಯಿಸಿಕೊಳ್ಳಬಹುದಾಗಿದೆ. 'ನೀವು ರೆಕ್ಕೆ ಸುಟ್ಟರೇನಂತೆ, ಹಕ್ಕಿ ಹಾರದಿರುವದೇ? ಎತ್ತರಕ್ಕೇರಿ ಮುಗ್ಗರಿಸಿ ಪಟಪಟ ಬಡಿದು ರೆಕ್ಕೆ ಹಾರುವುದು ಹಕ್ಕಿ... ನೋಟದಾಚೆ ದಿಗಂತದಾಚೆ... ರೆಕ್ಕೆ ಸುಡುವ ಕೈಗಳೇ, ಇದೆಯೇನು ನಿಮ್ಮೊಳಗೆ ಹಾರುವ ಕಸುವು..?'

ಮಹಿಳೆಯ ಸ್ವಾತಂತ್ರ್ಯ ಆತ್ಮಗೌರವವೆಂಬ ರೆಕ್ಕೆಯನ್ನು ಸುಟ್ಟಂತಾಗುವ ಮತ್ತು ಸ್ವಾಭಿಮಾನವನ್ನು ಹರಣಗೊಳಿಸುವ ಸನ್ನಿವೇಶದಲ್ಲಿ ಹೋರಾಟವು ಒಂದು ಸವಾಲಾಗಿ ಕವಿತೆಯೊಳಗೆ ನಾವು ಕಾಣುತ್ತೇವೆ. 'ರೆಕ್ಕೆ ಸುಡುವ ಕೈಗಳೇ, ಇದೆಯೇನು ನಿಮ್ಮೊಳಗೆ ಹಾರುವ ಕಸುವು...? ಎನ್ನುವ ಸಾಲು ಪುರುಷ ಪ್ರಧಾನ ಸಮಾಜವು ಮಹಿಳೆಯನ್ನು ಹತ್ತಿಕ್ಕುತ್ತಿದ್ದರೂ ನಾವು ಮತ್ತೆ ಮಟಿದೇಳುತ್ತೇವೆ. ಅದು ನಿಮ್ಮಿಂದ ಸಾಧ್ಯವಾಗುವುದೇ? ಎಂಬ ಸವಾಲನ್ನು ಹಾಕುವುದರ ಮೂಲಕ ಕವಿಯು ತನ್ನ ಪ್ರತಿರೋಧವನ್ನು ವ್ಯಕ್ತಪಡಿಸುತ್ತಿರುವುದು ತಿಳಿಯುತ್ತದೆ.

ತಳಸಮುದಾಯಗಳಲ್ಲಿ ಎಷ್ಟೋ ಕುಟುಂಬಗಳು ಮಹಿಳೆಯರ ದುಡಿಮೆಯ ಆಧಾರದಿಂದಲೇ ನಡೆಯುತ್ತಿವೆ. ಅದು ಇಂದಿಗೂ ಪ್ರಸ್ತುತ ಕೂಡ ಹೌದು. ದಲಿತ ಸಮುದಾಯವು ಇದರಿಂದ ಹೊರತಾದುದೇನಲ್ಲ. ತನ್ನ ಕುಟುಂಬವನ್ನು ಸಲವುತ್ತಿದ್ದ ಮನೆಯ ಯಜಮಾನ ಅನಾರೋಗ್ಯದಿಂದಲೋ ಅಥವಾ ಬೇರೆಯಾವುದೋ ಕಾರಣದಿಂದ ಕುಟುಂಬದ ನಿರ್ವಹಣೆಯಿಂದ ವಿಮುಖರಾದಾಗ ಮಹಿಳೆಯರು ಆ ಜವಾಬ್ದಾರಿಯನ್ನು ಹೊತ್ತುಕೊಳ್ಳುತ್ತಾಳೆ.

ಅಂತಹ ಸಂದರ್ಭಗಳಲ್ಲಿ ಮಹಿಳೆಯು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ತಾನು ಪಡಬೇಕಾದ ಕಷ್ಟಗಳು, ಅವಳಿಗೊದಗುವ ಸನ್ನಿವೇಶವನ್ನು ಜಿ.ಟಿ.ಲಲಿತನಾಯಕ್ ಅವರು ತಮ್ಮ 'ಲೂಟಿ'ಕಥೆಯ ಮೂಲಕ ಕಟ್ಟಿಕೊಟ್ಟಿದ್ದಾರೆ. ಕಥಾ ನಾಯಕಿ ತನ್ನ ಕುಟುಂಬ ನಿರ್ವಹಣೆಗಾಗಿ ಕಟ್ಟಿಗೆಯನ್ನರಸುತ್ತಾ ಕಾಡಿಗೆ ಹೋಗಿ ಕಟ್ಟಿಗೆ ಸಂಗ್ರಹಿಸಿ ಹೊರೆ ಹೊತ್ತು ಬರುವಾಗ ಅವಳನ್ನು ಅಲ್ಲಿಗೆ ಬರುವ ಇಬ್ಬರು ಪುರುಷರು ಆಕೆಯ ಕೊಡಲಿ ಮತ್ತು ಕಟ್ಟಿಗೆಯಜೊತೆ ಅತ್ಯಾಚಾರವೆಸಗಿ ಪರಾರಿಯಾಗುತ್ತಾರೆ. ಪ್ರಜ್ಞೆ ತಪ್ಪಿದ್ದ ಆಕೆ ಎಚ್ಚರಾದಾಗ ತನಗಾದ ನೋವನ್ನು ಲೆಕ್ಕಿಸದೆ ಕೆಂಡಾಮಂಡಲವಾಗಿ "ನೀವು

ಯಾವ ಗವಿಯಾಗ ಹೋಗಿ ಅವಿತುಕೊಂಡ್ರೂ ನಾ ಬಿಡಂಗಿಲ್ರೋ! ನನ್ನ ಕೊಡ್ಲಿ ಕಸಗೊಂಡು, ಅದರಿಂದ ನಿಮ್ಮನ್ನು ಸಣ್ಣಗ್ ಕಡಿದು ಚೂರ್ ಚೂರ್ ಮಾಡಿದ ಮ್ಯಾಲೆ ನಾ ಮನಿಗೆ ಹೋಗ್ತೀನ್ರೋ! ಎಂದು ಕಾಡು ನಗುವಂತೆ ಚೀತ್ಕರಿಸುತ್ತ ದಟ್ಟಡವಿಯಲ್ಲಿ ಓಡತೊಡಗಿದಳು"[೧೪] ಹೆಣ್ಣು ಸಹನಾಮಹಿ, ಬೋಗದ ವಸ್ತು, ಎಲ್ಲವನ್ನು ತಾಳ್ಮೆಯಿಂದ ನುಂಗಿಕೊಳ್ಳುವವಳು ಎಂದೇ ಬಿಂಬಿಸಿಕೊಂಡು ಬಂದಿರುವ ಈ ವ್ಯವಸ್ಥೆಯಲ್ಲಿ ಮಹಿಳೆಯು ತನ್ನ ಅಂತಃಶಕ್ತಿಯ ಮೂಲಕ ತನಗಾದ ಅನ್ಯಾಯ, ದೌರ್ಜನ್ಯಗಳನ್ನು ಪ್ರತಿಭಟಿಸಬಲ್ಲಳು. ಇಲ್ಲಿ ಕಥಾ ನಾಯಕಿಯ ಮೂಲಕ ಹೆಣ್ಣಿನ ಮೇಲೆ ನಡೆಯುತ್ತಿರುವ ಅತ್ಯಾಚಾರವನ್ನು ಸಹಿಸಿಕೊಳ್ಳಬಾರದು. ಅತ್ಯಾಚಾರಿಯ ವಿರುದ್ಧ ಪ್ರತಿಭಟಿಸಿ ನ್ಯಾಯವನ್ನು ಕಂಡುಕೊಳ್ಳಬೇಕಾಗಿದೆ ಎಂಬುದನ್ನು ಹೇಳಿದ್ದಾರೆ.

ಪ್ರಸ್ತುತ ಸಂದರ್ಭದಲ್ಲಿ ಸಮಾಜದಲ್ಲಿ ಸಮಾನತೆ, ಜಾತ್ಯಾತೀತತೆಯ ಕನಸು ಕಾಣುತ್ತಿರುವ ಹೊತ್ತಲ್ಲಿ ಅಂತರ್ಜಾತಿ ವಿವಾಹವು ಒಂದು ಪ್ರಮುಖವಾದ ಅಂಶವಾಗಿದೆ. ಕೆಳಜಾತಿ ಹುಡುಗಿ ಮೇಲ್ಜಾತಿ ಹುಡುಗ, ಮೇಲ್ಜಾತಿ ಹುಡುಗಿ ಕೆಳಜಾತಿಯ ಹುಡುಗ ಪರಸ್ಪರ ಪ್ರೀತಿಸಿ ಮದುವೆಯಾದರೂ ಸಹ ಅದನ್ನು ಒಪ್ಪಿಕೊಳ್ಳದ ಈ ಸಮಾಜವು ಮತ್ತೆ ತಿರಸ್ಕರಿಸುತ್ತದೆ. ತನ್ನ ಕಣ್ಣೆದುರೇ ತನ್ನ ಸಮುದಾಯದವರು ಅನುಭವಿಸುವ ಅಸ್ಪೃಶ್ಯತೆಯನ್ನು ಮೌನವಾಗಿ ಸಹಿಸುತ್ತಾ, ಎಂದಿಗೂ ತನಗೆ ಅಸ್ಪೃಶ್ಯತೆಯ ಸೋಂಕು ತಾಕದಂತೆ ಬೆಳೆದ ಆ ಹೆಣ್ಣು ಮದುವೆಯ ನಂತರ ಯಾವುದೋ ಒಂದು ಸಂದರ್ಭದಲ್ಲಿ ಅವಳಿಗಾದ ಅವಮಾನ ಅವಳನ್ನು ಒಳಗೊಳಗೆ ಕುದಿಯುವಂತೆ ಮಾಡುತ್ತದೆ ಮತ್ತು ಅದನ್ನವಳು ತನ್ನದೇ ಆದ ರೀತಿಯಲ್ಲಿ ಪ್ರತಿಭಟಿಸುತ್ತಾಳೆ. ಇದನ್ನು ದು.ಸರಸ್ವತಿ ಅವರು 'ಗುರುತಿರದ ವಿಳಾಸ' ಎಂಬ ಕಥೆಯಲ್ಲಿ ಕಥಾನಾಯಕಿಯ ಮೂಲಕ ಪ್ರತಿರೋಧ ಒಡ್ಡುವುದನ್ನು ಕಾಣಬಹುದು. "ಮನೆಗೆ ಬಂದ ಮೇಲೆ ಯಲ್ಲಮ್ಮನ ಮೌನ ಮುಂದುವರೆಯಿತು. ಕೈ-ಕಾಲು, ಮುಖ ತೊಳೆದು ಅನ್ನಕ್ಕಿಟ್ಟಳು, ಗೊಜ್ಜು ಮಾಡಿದರೆ ಸಾಕೆಂದು ಟೊಮೆಟೋ, ಈರುಳ್ಳಿ ಹೆಚ್ಚಿ ಒಗ್ಗರಣೆ ಹಾಕಿ ಕುದಿಸಿದಳು. ಮೌನದ ತಲೆ-ಬುಡ ತಿಳಿಯದ ಸಿದ್ರಾಮ ಮಾತಿಗೆಳೆಯಲು ನೋಡುತ್ತಿದ್ದ! 'ಏನ್ ತಮ್ಮೆ ಒಡುದ್ರು ಅಲ್ವ, ಸಕತ್ತಾಗಿ ಕುಣಿಸಿದ್ರಲ್ವಾ.' ಎನ್ನುತ್ತ ಅಕ್ಕಿ ಡಬ್ಬದ ಮುಚ್ಚಳ ತೆಗೆದು ಬಾರಿಸತೊಡಗಿದ. ಸೀರೆ ಬಿಚ್ಚಿ ಮಡಿಸುತ್ತಿದ್ದ ಯಲ್ಲಮ್ಮ ಲಂಗ, ರವಿಕೆಯಲ್ಲಿ ಮುಚ್ಚಳದ ಸದ್ದಿಗೆ ಕುಣಿಯತೊಡಗಿದಳು. ನಿಧಾನವಾಗಿ ವೇಗ ಹೆಚ್ಚಿಸಿದಳು. ಬಾಗಿದಳು, ತಿರುಗಿದಳು, ಕೂತು, ಬಾಗಿ, ಚಕ್ಕನೆ ಎದ್ದು ಕುಣಿಯುತ್ತಿದ್ದಳು. ಗಂಡನ ತಮಟೆಯ ಸದ್ದಿಗಲ್ಲ, ತಲೆಯೊಳಗೆ, ಎದೆಯೊಳಗೆ ಧಿಮಿಗುಡುತ್ತಿದ್ದ ಮಾದಿಗರ ತಮಟೆಯ ಸದ್ದಿನ ಲಯಕ್ಕೆ ಫರ್ಫೆಕ್ಟಾಗಿ ಕುಣಿದಳು. ಲೀಲಾಜಾಲವಾಗಿ ಕುಣಿಯುತ್ತಿದ್ದಳು. ಸಿದ್ರಾಮನ ತಮಟೆಯ ಲಯ ಮೀರಿ ಕುಣಿಯುತ್ತಿದ್ದಳು. ಅವನ ಕಣ್ಣೊಳಗೆಂತದೋ ಒಂದು ಉರಿವ ಉಲ್ಕೆ ಸರಿದು ಹೋಯಿತು. ತಕ್ಷಣ ಅವನು ಸಾವಿರ ರೂಪಾಯಿಯ ನೋಟೊಂದನ್ನು ನೆಲದ ಮೇಲಿಟ್ಟ. ಇವಳ ಹೊಟ್ಟೆಯೊಳಗಿಂದ ಬುಗ್ಗೆ ಎದ್ದಿತು. ಬುಗ್ಗೆಯ ಕುದಿ ಕಣ್ಣೊಳಗಿಂದ ಚಿಮ್ಮತೊಡಗಿತು. ಬಗ್ಗಲಿಲ್ಲ. ನೆತ್ತಿ ಕೆಳಗೆ ಸೋಕಿಸಿ ರೆಪ್ಪೆಯಲ್ಲಿ ನೋಟನ್ನು ಎತ್ತಲಿಲ್ಲ. ಅದರ ಮೇಲೆ ಕಾಲಿಟ್ಟು ತುಳಿದಳು. ಅದೆಂತ ಭಾವವೋ ಗುರುತಿಸಿ

ಹೆಸರಿಡಿಸುವ ಮುನ್ನ ಹೆಣಸಿ ನೆಲಕ್ಕೆ ಅಪ್ಪಳಿಸಿ ಮಣಿಸಲು ಕುಣಿದಳು."[೧೫] ಮೇಲು-ಕೀಳು, ಬಡವ-ಬಲ್ಲಿದ, ಗಂಡು-ಹೆಣ್ಣು ಎಂಬ ಬೇಧಭಾವನೆಯು ಅಂದಿನಿಂದ ಇಂದಿನವರೆಗೂ ಉಳಿದುಕೊಂಡೇ ಬಂದಿದೆ. ಅಕ್ಷರಜ್ಞಾನ ಪಡೆದು ವಿದ್ಯಾವಂತರಾಗಿದ್ದಾಗಲೂ ಸಹಿತ ದಲಿತರು ಮತ್ತು ಮಹಿಳೆಯರು ಇಂತಹ ಕ್ರೂರತೆಯ ವ್ಯವಸ್ಥೆಯಿಂದ ಮುಕ್ತರಾಗಿಲ್ಲ. ಮೇಲುಜಾತಿ ಮೇಲ್ವರ್ಗದವರು ನಡೆಸಿಕೊಂಡು ಬಂದಿರುವ ಈ ಅಸ್ಪೃಶ್ಯತೆಯನ್ನು ವಿದ್ಯಾವಂತರು ತಿರಸ್ಕರಿಸಿದರೂ ಮತ್ತದೆ ನರಕದ ಕೂಪದೊಳಗೆ ಬೀಳುತ್ತಿರುವುದನ್ನು ಕಾಣುತ್ತೇವೆ. ವ್ಯವಸ್ಥೆಯ ವಿರುದ್ಧ ನೇರವಾಗಿ ಪ್ರತಿಭಟಿಸಲು ಸಾಧ್ಯವಾಗದ ಯಲ್ಲಮ್ಮ ಸಿದ್ರಾಮ ಬಾರಿಸುವ ತಾಳಕ್ಕೆ ಕುಣಿಯುತ್ತ, ಅದನ್ನು ಮೀರಿ ಮಾದಿಗರು ಬಾರಿಸಿದ ಟಮಟೆಯ ಸದ್ಧಿಗೆ ಕುಣಿದು ತನ್ನೊಳಗಿನ ಆಕ್ರೋಶವನ್ನು ಕುಣಿತ ಮತ್ತು ಸಾವಿರದ ನೋಟನ್ನು ತುಳಿಯುವ ಮೂಲಕ ತೀರಿಸಿಕೊಳ್ಳುತ್ತಾಳೆ. ತನ್ನ ಸಮುದಾಯವು ಅನುಭವಿಸುತ್ತಿರುವ ನೋವನ್ನು ಯಲ್ಲಮ್ಮನ ಪಾತ್ರದ ಮೂಲಕ ಈ ಸಮಾಜದ ವಿರುದ್ಧ ಪ್ರತಿಭಟಿಸುತ್ತಿರುವುದನ್ನು ಕಾಣಬಹುದು.

ದು.ಸರಸ್ವತಿಯವರ 'ಸಣ್ತಿಮ್ಮಿ' ಕಥೆಯಲ್ಲಿಯೂ ಇದೇ ರೀತಿಯ ಸಂದರ್ಭವನ್ನು ಚಿತ್ರಿಸಿದ್ದಾರೆ. ಕಥಾನಾಯಕಿ ಸಣ್ತಿಮ್ಮಿಯು ಅಕ್ಷರ ಜ್ಞಾನಕ್ಕಾಗಿ ಹಾತೊರೆಯುತ್ತಾಳೆ. ತಲೆತಲಾಂತರದಿಂದಲೂ ಪೌರಕಾರ್ಮಿಕರು ಅನಕ್ಷರಸ್ಥರಾಗಿದ್ದು, ಅವರು ನಗರ ಸ್ವಚ್ಚಗೊಳಿಸುವ ಕಾಯಕದಲ್ಲೇ ಇಂದಿಗೂ ಇದ್ದಾರೆ. ಸಣ್ತಿಮ್ಮಿಗೆ ಹುಟ್ಟುವ ಮಗುವಿಗೆ ಬಲಗೈಯಲ್ಲಿ ಎರಡು ಬೆರಳಿರುವುದನ್ನು ನೋಡಿದ ತಾಯಿ ಮರುಕ ವ್ಯಕ್ತಪಡಿಸುವುದರ ಜೊತೆಗೆ ಕಳವಳ ಪಡುತ್ತಾಳೆ. 'ಈ ಮಗೀಗೆ ಎರಡೇ ಬೆಳ್ಳಿ ಇವೆಲ್ಲಾ ಕಸಬರಿಕೆಯನ್ನು ಯಂಗೆ ಹಿಡಿತದೆ? ಮುಂದಿನ ಜೀವನ ಯಂಗೆ? ಎಂದು ಚಿಂತಾಕ್ರಾಂತಳಾಗುತ್ತಾಳೆ. ಆದರೆ ಸಣ್ತಿಮ್ಮಿ ಭಿನ್ನವಾಗಿ ಆಲೋಚಿಸುತ್ತಾಳೆ. ಅವ್ವ ನನ್ನ ಮಗೀಗೆ ಎರಡು ಬೆರಳು ಇದ್ದಿದ್ದೇ ಒಳ್ಳೆಯದಾಯ್ತು. ಪೆನ್ನು ಹಿಡಿಯೋದಿಕ್ಕೆ ಎರಡು ಬೆರಳಿದ್ರೆ ಸಾಕು. ಎಲ್ಲಾ ಬೆರಳಿನ ಅಗತ್ಯವಿಲ್ಲ. ಎಂಬುದಾಗಿ ಆ ಸಮುದಾಯಕ್ಕೆ ಅಕ್ಷರ ಜ್ಞಾನದಿಂದ ಹೊರಗುಳಿಯುವಂತೆ ಮಾಡಿದ್ದ ವ್ಯವಸ್ಥೆಗೆ ಸೆಡ್ಡು ಹೊಡೆದು ನಿಲ್ಲುತ್ತಾಳೆ. ಶಿಕ್ಷಣವನ್ನು ಕಲಿಯುವಂತೆ ಹೊಸ ಹೆಜ್ಜೆಯನ್ನು ಮುಂದಡಿ ಇಡುತ್ತಾಳೆ.

ಅಕ್ಷರ ಜ್ಞಾನ ಪಡೆದು ನಾಗರೀಕ ಸಮಾಜದಲ್ಲಿ ಎಲ್ಲರ ಸರಿಸಮನಾಗಿ ಬದುಕುವ ಕನಸು ನನಸಾಗಿಸಿಕೊಂಡ ದಲಿತ ಸಮುದಾಯದವರು ಇದ್ದಾರೆ. ಮೇಲ್ಜಾತಿ ಮೇಲ್ವರ್ಗದವರು ನಡೆಸಿಕೊಂಡು ಬಂದಿರುವ ಅಸ್ಪೃಶ್ಯತೆಯನ್ನು ಕಲಿತ ದಲಿತರೂ ಕೂಡ ಆಚರಣೆ ಮಾಡುತ್ತಿರುವ ದಲಿತ ಸಮುದಾಯದ ವಿರುದ್ಧ ಬಿ.ಟಿ.ಜಾಹ್ನವಿ ಅವರು ತಮ್ಮ ಕಥೆಯ ಮೂಲಕ ಪ್ರತಿರೋಧವನ್ನು ವ್ಯಕ್ತಪಡಿಸಿದ್ದಾರೆ. 'ಕಳ್ಳುಬಳ್ಳಿ' ಕಥೆಯಲ್ಲಿ ಇಂತಹ ಸನ್ನಿವೇಶವನ್ನು ಅಭಿವ್ಯಕ್ತಿಸಿದ್ದಾರೆ. "ಕರ್ಕಂಡು ಹೋಗೋ ಯಾರು ಬೇಡಾಂತರೆ ನಿನಗೆ? ನಿಮ್ಗೆಲ್ಲ ಹೊರಗಡೆ ನಿಲ್ಲಿಸಿ, ಎತ್ತಿ ಕೂಳಾಕಿ ದೂರ ಸರೀತಾರಲ್ಲ ಅವ್ರೆ ಸರಿ ಅವ್ರೆ ಸರಿ ನಿಮ್ಗೆ... ಅಲ್ಲಿಗೆ ಲಾಯಕ್ಕು ನೀವೂ ಇಂದ್ರ ಬುಸುಗುಟ್ಟಿದಳು.

ಕೆಂಚ ನಿಂತು ಹೌದವ್ವ ನೀನು ಯೇಳಾದು ಸರಿನೇಯ. ಯೇನೋ ನಾಕು ಅಕ್ಷರ ಕಲ್ತೆ ನಾಕ್ದುಡ್ಡ ಸಂಪಾದಿಸ್ದೆ ಅಂತ ನೀನೆ ನಮ್ಗೆ ಅನ್ನ ಎತ್ತ್ಯಾಕ್ತ, ಬ್ಯಾರೆ ತಟ್ಟೆ ಲೋಟ ಇಟ್ಟದಿ. ಹೊರಗೆ ಉಣ್ಣಾಕೆ ಕುಂದ್ರುಸ್ತಿ ಎಂಜಲು ತಿನ್ನಕಾಕ್ತಿ ಅಂದ್ಮ್ಯಾಕೆ ಅನಾದಿ ಕಾಲದಿಂದ ನಡೆಸ್ಕಂಡು ಬಂದಿರಾರ್ದು ಯಾವ ಲೆಕ್ಕ ಯೇಳು? ವರಾಗ್ನಿಲ್ಸಿ ಉಣ್ಣಾಕಾಕರೂ, ನಮ್ಮನ್ನ ನೋಡಿ ದೂರ ಸರ್ಕಳಾರೂ ಬ್ಯಾರೆರವಾ ಅವ್ರೆಲ್ಲಾ ಬ್ಯಾರೆ. ಆದ್ರೆ ನೀವ್ಹೂ...? ನೀವು ನಮ್ಮರವ್ವ! ನಮ್ಮಜನ, ನಮ್ ಕಳ್ಳುಬಳ್ಳಿ ಕಣ್ಣವ್ವ ನೀವು ನಮ್ ಕಳ್ಳಬಳ್ಳಿ."[೧೬] ವಿದ್ಯೆ ಕಲಿತು ಸರ್ಕಾರಿ ನೌಕರಿ ಪಡೆದು ಎಲ್ಲರ ಹಾಗೆ ಸಮನಾಗಿ ಬದುಕನ್ನು ಕಟ್ಟಿಕೊಂಡ ಶಿವಣ್ಣನ ಪಾತ್ರವು ತಮ್ಮದೇ ಜಾತಿ, ತಮ್ಮ ಕಳ್ಳುಬಳ್ಳಿಯಲ್ಲೇ ತಿಪ್ಪ ಎನ್ನುವ ಹುಡುಗನನ್ನು ತನ್ನ ಮನೆಯ ಕೆಲಸಕ್ಕಾಗಿ ನೇಮಿಸಿಕೊಳ್ಳುತ್ತಾನೆ. ನಾಲ್ಕಕ್ಷರ ಕಲಿತ ಶಿವಣ್ಣ ತನ್ನ ಮಗನನ್ನು ಚೆನ್ನಾಗಿ ನೋಡಿಕೊಳ್ಳುತ್ತಾನೆ ಎನ್ನುವ ನಂಬಿಕೆಯ ಮೇಲೆ ಕೆಂಚ ಅವನ ಮಗನನ್ನು ಕಳಿಸುತ್ತಾನೆ. ಆದರೆ ವಾಸ್ತವ ಸ್ಥಿತಿಯನ್ನ ಅರಿತ ಕೆಂಚ ತನ್ನ ಮಗನ ತಿಪ್ಪನನ್ನು ವಾಪಸ್ಸು ಕರೆದುಕೊಂಡು ಹೋಗುತ್ತಾನೆ.

ಊಳಿಗಮಾನ್ಯ ಶಾಹಿ ಪದ್ಧತಿಯನ್ನು ಕಂಡುಂಡ ಕೆಂಚನಂತಹ ಅದೆಷ್ಟೋ ಮಂದಿ ಬಲಿಯಾಗಿದ್ದಾರೋ. ಅದನ್ನು ದಿಕ್ಕರಿಸುವ ಸಲುವಾಗಿಯೇ ದಲಿತ ಸಮುದಾಯವು ಶಿಕ್ಷಣವನ್ನೊಂದಿ ತಮ್ಮ ಜೊತೆಗೆ ಇತರರನ್ನೂ ಜ್ಞಾನವಂತರನ್ನಾಗಿಸುತ್ತಾರೆ. ಜೊತೆಗೆ ಈ ಸಮಾಜದಲ್ಲಿ ತಮಗಾಗುತ್ತಿರುವ ದೌರ್ಜನ್ಯ, ಶೋಷಣೆಗಳಿಂದ ಮುಕ್ತಿ ಕೊಡಿಸುತ್ತಾರೆ ಎಂಬ ನಂಬಿಕೆ ಮತ್ತು ನಿರೀಕ್ಷೆಯನ್ನು ಹೊತ್ತಿರುತ್ತಾರೆ. ಆದರೆ ಶಿಕ್ಷಣ ಪಡೆದ ತಾವೂ ಕೂಡ ಗೌರ್ಮೆಂಟ್ ಬ್ರಾಹ್ಮಣರಂತಾಗುತ್ತಾರೆ. ಅವರುಗಳ ಸ್ಥಾನವನ್ನು ಇವರು ಮುಂದುವರೆಸಲು ಆರಂಭಿಸಿರುವುದನ್ನು ಈ ಕಥೆಯ ಮೂಲಕ ಜಾಹ್ನವಿಯವರು ಪ್ರತಿರೋಧ ಮಾಡುತ್ತಿದ್ದಾರೆ. ಕೆಳಜಾತಿ (ದಲಿತ)ವರು ಅನುಭವಿಸಿದ ಕ್ರೂರತೆಯನ್ನು ಮೆಟ್ಟಿ ನಿಲ್ಲುತ್ತಾರೆ ಎಂಬುದನ್ನು ಕೆಲವರು ಹುಸಿಗೊಳಿಸಿರುವುದರ ಬಗೆಗೆ ಇವರು ತಿಳಿಸಿದ್ದಾರೆ. ಸೃಜನ ಶೀಲ ಸಾಹಿತ್ಯಕ್ಕೂ ಮತ್ತು ಹೋರಾಟಕ್ಕೂ ಅವಿನಾಭಾವ ಸಂಬಂಧವಿದೆ. ಸಾಹಿತ್ಯವೂ ಬಿಡುಗಡೆಯನ್ನು ಬಯಸುವ ದನಿಯಾಗುವುದರ ಜೊತೆಗೆ ಅದಮ್ಯ ಪ್ರೇಮವನ್ನು ಸಹ ಹಂಚುತ್ತದೆ.

ಮಹಿಳೆಯರಿಗೆ ಶಿಕ್ಷಣವು ಅತ್ಯಂತ ಅಗತ್ಯವಾದುದ್ದಾಗಿದೆ. ಅದರಲ್ಲಿಯೂ ದಲಿತ ಮಹಿಳೆಯರು ಹೆಚ್ಚು ಶಿಕ್ಷಣ ಪಡೆದು ಆರ್ಥಿಕ ಸ್ವಾವಲಂಬನೆ ಸಾಧಿಸಬೇಕಾಗಿದೆ. ಎಲ್ಲಾ ಮಹಿಳೆಯರು ಶೋಷಿತರೇ ಆದರೆ ಎಲ್ಲಾ ಮಹಿಳೆಯರಿಗಿಂತ ದಲಿತ ಮಹಿಳೆಯರು ಹೆಚ್ಚು ಶೋಷಿತರಾಗಿದ್ದಾರೆ. ಇದಕ್ಕೆ ಬಹು ಮುಖ್ಯ ಕಾರಣ ಶಿಕ್ಷಣ ಮತ್ತು ಆರ್ಥಿಕತೆಯ ಬಲವನ್ನು ಹೊಂದಿರದೇ ಇರುವುದಾಗಿದೆ. "ಗಂಡಸರ ಕ್ಷೇತ್ರವೆಂದೇ ಪರಿಗಣಿಸಲ್ಪಟ್ಟ ರಿಕ್ಷಾ ಚಾಲನೆ ಇಂದು ಮಹಿಳೆಯರ ಕ್ಷೇತ್ರವಾಗಿಯೂ ಸ್ವೀಕರಿಸಬಹುದೆಂದು ಮೊತ್ತ ಮೊದಲು ಸಾಧಿಸಿ ತೋರಿಸಿದವಳು ಗೌರಿ ಎಂಬ ದಲಿತ ಮಹಿಳೆ. ಮಹಿಳೆಯ ಸ್ವ ಉದ್ಯೋಗವೆಂದರೆ ಹಪ್ಪಳ, ಸಂಡಿಗೆ, ಉಪ್ಪಿನಕಾಯಿ ತಯಾರಿ, ಕುರಿ, ಕೋಳಿ, ದನ ಸಾಕುವುದು ಇವಿಷ್ಟೇ ಎಂದು ನಂಬಿದ್ದ ಜನರಿಗೆ ಗೌರಿಯು ರಿಕ್ಷಾ ಚಾಲಕಿಯಾಗಿ ಬಂದಾಗ ಬೆಕ್ಕಸ ಬೆರಗಾಗುವಂತಾಯಿತು. ದಲಿತ ಮಹಿಳೆ ಎಂಬ ಕಾರಣಕ್ಕೆ

ಮೇಲ್ಜಾತಿ ಜನರು. ಅದರಲ್ಲೂ ದೇವಸ್ಥಾನಕ್ಕೆ ಹೋಗುವವರು ಇವರ ರಿಕ್ಷಾವನ್ನು ಹತ್ತುತ್ತಿರಲಿಲ್ಲ. ಆದರೂ ಗೌರಿ ಎದೆಗೆಡಲಿಲ್ಲ. ಗೌರಿಯಂತೆ ಸಾಧನೆ ಮಾಡಿದ, ಮಾಡುವ ಹಲವಾರು ದಲಿತ ಮಹಿಳೆಯರಿದ್ದಾರೆ. ಅವರನ್ನು ಈ ಸಾಧನೆಯ ದಾರಿಗೆ ಕರೆದು ಪ್ರೋತ್ಸಾಹಿಸುವ, ಮುನ್ನಡೆಸುವ ಸಮಾಜ ಬಾಂಧವರೂ ಇಂದು ಹೆಚ್ಚಬೇಕಾಗಿದೆ."[೧೭] ಪುರುಷ ಪ್ರಧಾನ ಸಮಾಜದೊಳಗೆ ಮಹಿಳೆ ಎನ್ನುವ ಕಾರಣಕ್ಕೆ ಶೋಷಿತಳಾದರೆ, ಇನ್ನೂ ದಲಿತ ಮಹಿಳೆ ಎಂಬ ಕಾರಣಕ್ಕೆ ದೌರ್ಜನ್ಯಕ್ಕೆ ಒಳಗಾಗಿದ್ದಾಳೆ. ಜಾತಿ ಎನ್ನುವ ಭೂತವು ತಾನು ಸ್ವಾವಲಂಭಿಯಾಗಿ ಬದುಕನ್ನು ಕಟ್ಟಿಕೊಳ್ಳಲೂ ಬಿಡುವುದಿಲ್ಲ. ಆ ಕಾರಣಕ್ಕಾಗಿಯಾದರೂ ದಲಿತ ಮಹಿಳೆಯರು ಸಂಪೂರ್ಣವಾಗಿ ಸಾಕ್ಷರರಾಗಬೇಕು. ಸ್ವಾವಲಂಭಿಗಳಾಗಿ ನಿಂತಾಗ ಮಾತ್ರ ಮಹಿಳಾ ಸಮುದಾಯಕ್ಕೆ ಶಕ್ತಿ ಬಂದಂತಾಗುತ್ತದೆ ಎಂಬುದನ್ನು ಇವರು ಅಭಿಪ್ರಾಯ ಪಡುತ್ತಾರೆ.

ದಲಿತ ಮಹಿಳೆಯು ಅತ್ಯಾಚಾರ, ದೌರ್ಜನ್ಯಕ್ಕೆ ಒಳಗಾದರೂ ಅವಳಿಗೆ ನ್ಯಾಯಾಲಯದಲ್ಲೂ ನ್ಯಾಯ ದಕ್ಕಿರುವುದು ಅಷ್ಟರಲ್ಲೇ ಇದೆ. "ಜಾತಿಯ ಕಾರಣಕ್ಕೆ ನ್ಯಾಯಾಧೀಶರುಗಳು ಅತ್ಯಾಚಾರ ಪ್ರಕರಣಗಳತ್ತ ಗಮನ ನೀಡುವುದಿಲ್ಲ. ಇದು ಸಹ ಜಾತಿ ಪೂರ್ವಗ್ರಹವೇ. ಈ ಎಲ್ಲಾ ಪ್ರಕರಣಗಳಲ್ಲಿ ಮಹಿಳೆಯರನ್ನು ಅವರು ಉದ್ದೇಶಿಸುವುದು ಜಾತಿಯ ಹೆಸರಿನಲ್ಲೇ ದಲಿತರ ಮೇಲಿನ ಅತ್ಯಾಚಾರಕ್ಕೆ ಮುನ್ನ ಆಕೆಯ ಗಂಡ/ತಂದೆ ಕನಿಷ್ಟ ವೇತನಕ್ಕಾಗಿ ಒತ್ತಾಯಿಸಿರುತ್ತಾರೆ. ಅಥವಾ ಜಮೀನಿನ ವ್ಯಾಜ್ಯವೇನಾದರೂ ಇರುತ್ತದೆ. ಇವು ಜಾತಿ ವ್ಯಾಜ್ಯಗಳು. ಈ ಹಿನ್ನೆಲೆಯನ್ನು ಗಮನಿಸಿದಾಗ, ಆರೋಪಿಗಳು ಆಕೆಯ ಮೇಲೆ ಅತ್ಯಾಚಾರ ಎಸಗುವುದು ಅವಳು ಹೆಣ್ಣು ಎಂಬ ಕಾರಣಕ್ಕೆ ಅಲ್ಲ. ಆಕೆ ದಲಿತ ಸಮುದಾಯಕ್ಕೆ ಸೇರಿದವಳು ಎಂಬ ಕಾರಣಕ್ಕೆ ಈ ವಾದವನ್ನು ಒಪ್ಪಿಕೊಳ್ಳಲು ನ್ಯಾಯಾಂಗವು ಸಾಮಾನ್ಯವಾಗಿ ಸಮ್ಮತಿಸುವುದಿಲ್ಲ."[೧೮] ಎನ್ನುವ ಕಠೋರ ಸತ್ಯವನ್ನು ಶಾಜಿಯಾನಗರ್ ಅವರು ತೆಹಲ್ಕಾ ಪತ್ರಿಕೆಗಾಗಿ ನಡೆಸಿದ ಸಂದರ್ಶನದಲ್ಲಿ ಸುಪ್ರೀಂಕೋರ್ಟಿನ ಹಿರಿಯ ವಕೀಲರಾದ ಕಾಲಿನ್ ಗೋನ್ಸಾಲ್ವಿಸ್ ಅವರು ಹೇಳಿದ್ದಾರೆ. ಇದುವರೆಗೂ ನಡೆದ ಮಹಿಳಾ ಚಳುವಳಿಗಳು ಮತ್ತು ಸ್ತ್ರೀವಾದವು ಮೇಲ್ ಮಧ್ಯಮವರ್ಗದ ಪರಿಕಲ್ಪನೆಯಾಗಿರುವುದನ್ನು ಕಾಣುತ್ತೇವೆ. ಆದರೆ ದಲಿತ ಮಹಿಳೆಯನ್ನು ತಲುಪುವಲ್ಲಿ ಈ ಚಳವಳಿಯ ವಿಫಲವಾಗಿರುವುದು ಗೋಚರಿಸುತ್ತದೆ. ಕಾನೂನು ವ್ಯವಸ್ಥೆ ಎಲ್ಲಾ ಮಹಿಳೆಯರಿಗೂ ಸಮಾನವಾಗಿರುವಾಗ ಅಲ್ಲಿಯೂ ಕೂಡ ಜಾತಿಯ ಕ್ರೂರತೆಯು ಅಡ್ಡಿಯಾಗಿರುವುದು ತಿಳಿಯುತ್ತದೆ. ಸಮಾಜದಲ್ಲಿ ಯಾವುದೇ ಅಹಿತಕರವಾದ ಘಟನೆ ನಡೆಯಲಿ ಅದಕ್ಕೆ ಮೊದಲ ಬಲಿ ಮಹಿಳೆಯೇ ಆಗಿರುತ್ತಾಳೆ.

ಬಾಲ್ಯವಿವಾಹವನ್ನು ತಡೆದಿದ್ದಕ್ಕಾಗಿ ಬನ್ವಾರಿದೇವಿಯ ಮೇಲೆ ಅತ್ಯಾಚಾರ ಮಾಡಲಾಯಿತು. ತನಗೆ ನ್ಯಾಯ ಕೇಳಲು ಕೋರ್ಟಿಗೆ ಹೋದಾಗ ಅಲ್ಲಿನ ನ್ಯಾಯಾಲಯ ಬನ್ವಾರಿ ದೇವಿಗೆ ಕೊಟ್ಟ ತೀರ್ಪು ಮಾತ್ರ ಬೆಚ್ಚಿಬೀಳುವಂಥದ್ದಾಗಿತ್ತು. "ತನ್ನ ಮೇಲಿನ ಹೇಸಿಗೆಯ ಅತ್ಯಚಾರದ ಅಪಮಾನವನ್ನು ಮುಚ್ಚಿಟ್ಟು ಸುಮ್ಮನಿರದೆ ನ್ಯಾಯಾಲಯದ ಕಟ್ಟೆ ಹತ್ತಿದಳು. ಆದರೆ ನವೆಂಬರ್ ೧೯೯೫, ಜಯಪುರ ಡಿಸ್ಟಿಕ್ಟ್ ಮತ್ತು ಸೆಷನ್ಸಿನ ನ್ಯಾಯಾಧೀಶರು ಭಾಂಪ್ರಿಯ ಮೇಲೆ ಅತ್ಯಾಚಾರ ಎಸಗಿದ

ಆರೋಪದ ಮೇಲೆ ಬಂದಿಸಿದ್ದ ಐದು ಮಂದಿ ಆರೋಪಿಗಳನ್ನು ಬಿಡುಗಡೆ ಮಾಡಿದ್ದು. ಆಗ ನ್ಯಾಯಾಲಯ ನೀಡಿದ ತೀರ್ಪು ಆಘಾತಕಾರಿಯಾಗಿದೆ. ಈ ಆರೋಪಿತರು ೫೦ರಿಂದ ೬೦ರ ವಯಸ್ಸಿನಲ್ಲಿದ್ದು ಗೌರವಾನ್ವಿತ ಕುಟುಂಬದಿಂದ ಬಂದವರು. ಅವರು ಮಾನಭಂಗ ಮಾಡಲು ಸಾಧ್ಯವೇ ಇಲ್ಲ. ತಮ್ಮ ವಯಸ್ಸು, ಜಾತಿ ಮರೆತು ಇಂತ ಕೆಲಸ ಮಾಡುವಷ್ಟು ನಮ್ಮ ಭಾರತೀಯರ ಸ್ಥಿತಿ ಅದೋಗತಿಗಿಳಿದಿಲ್ಲ."[೧೯] ಕೆಳಜಾತಿಯವಳಾದ ಕಾರಣಕ್ಕೆ ನ್ಯಾಯಾಲಯದ ತೀರ್ಪಿನಲ್ಲಿಯೂ ಕೂಡ ಅನ್ಯಾಯದ ತೀರ್ಪು ನೀಡಿದ್ದು ಕಾನೂನಿಗೆ ಬಗೆಯುತ್ತಿರುವ ದ್ರೋಹವನ್ನು ಕಾಣಬಹುದು. ಮೇಲ್ಜಾತಿಯವರು ಮಾಡಿದ ಅತ್ಯಾಚಾರದ ಹೇಯ ಕೃತ್ಯವನ್ನು ನ್ಯಾಯಾಲಯ ಸಮರ್ಥಿಸಿಕೊಳ್ಳುವುದರ ಜೊತೆಗೆ ಜಾತಿ ತಾರತಮ್ಯವನ್ನು ಮತ್ತು ಲಿಂಗ ತಾರತಮ್ಯವನ್ನು ನ್ಯಾಯಾಲಯ ಎತ್ತಿಹಿಡಿದದ್ದು ಮಹಿಳಾ ಚಳುವಳಿಗೆ ಕೊಟ್ಟ ದೊಡ್ಡ ಪೆಟ್ಟಾಗಿದೆ. ಹಾಗೆಯೇ ದಲಿತರಿಗೆ ಅದರಲ್ಲೂ ದಲಿತ ಮಹಿಳೆಗೆ ಸುಲಭವಾಗಿ ನ್ಯಾಯ ದಕ್ಕುವುದಿಲ್ಲವೆಂಬುದು ಇದರ ಮೂಲಕ ತಿಳಿದುಬರುತ್ತದೆ. ಅಲ್ಲದೆ ತನಗಾದ ಅನ್ಯಾಯದ ವಿರುದ್ಧ, ಪುರುಷ ಪ್ರಧಾನ ಶೋಷಕ ಸಮಾಜದ ವಿರುದ್ಧ ಸಿಡಿದೆದ್ದ ಸಾಹಸದ ಮಹಿಳೆಯಾಗಿ ಕಂಗೊಳಿಸುತ್ತಾಳೆ.

"೮೦ರ ದಶಕದಲ್ಲಿ ಮಧುರಾ ಎಂಬ ಮಹಿಳೆಯ ಮೇಲೆ ಕಾನೂನು ಪಾಲಕರಾದ ಪೋಲಿಸರು ಪೋಲೀಸ್ ಠಾಣೆಯಲ್ಲಿ ಸಾಮೂಹಿಕ ಅತ್ಯಾಚಾರ ಎಸಗಿದರು. ಇದು ದೇಶಾದ್ಯಂತ ಪತ್ರಿಕೆಗಳಲ್ಲಿ ಸುದ್ಧಿಯಾಯಿತು. ಕೆಲವು ದಿನ ಪೋಲೀಸರನ್ನು ಅಮಾನತ್ತಿನಲ್ಲಿಡಲಾಯಿತು. ಎಂಟು ವರ್ಷಗಳ ಬಳಿಕ ಸರಿಯಾದ ಕಾರಣ ನೀಡಿ ನ್ಯಾಯಾಲಯ ಅವರನ್ನು ನೌಕರಿಗೆ ಸೇರಿಸಿಕೊಳ್ಳಬೇಕೆಂದು ಆಜ್ಞೆ ನೀಡಿತು. ಇಂತಹ ತೀರ್ಪುಗಳ ವಿರುದ್ಧ ಕೆಲವು ಮಹಿಳಾ ಸಂಘಟನೆಗಳು ಪ್ರತಿಭಟಿಸಿದ ಕಾರಣ ಮುಂದೆ ಅತ್ಯಾಚಾರದ ಮೊಕ್ಕದ್ದಮೆಗಳಲ್ಲಿ ಪುರುಷ ಅಪರಾಧವನ್ನು ಮಹಿಳೆ ಸಾಬೀತು ಪಡಿಸುವುದಕ್ಕೆ ಬದಲಾಗಿ ತನ್ನ ನಿರಪರಾಧ ತನವನ್ನು ಪುರುಷನೇ ಸಾಬೀತು ಪಡಿಸಬೇಕೆಂದು ನಿಯಮ ಬದಲಾವಣೆಗೊಂಡಿತು. ಪರಿಣಾಮವಾಗಿ ೧೯೮೦ರಲ್ಲಿ ಅಪರಾಧ ಕಾನೂನಿನ ತಿದ್ದುಪಡಿ ಬಿಲ್ ಮಂಡನೆಗೊಂಡಿತು."[೨೦] ಮಹಿಳೆಯು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಪ್ರತೀ ಹಂತದಲ್ಲಿಯೂ ಹೋರಾಟ ಮಾಡಿಯೇ ಪಡೆದುಕೊಳ್ಳುವ ಅನಿವಾರ್ಯತೆ ಎದುರಾಗಿದೆ. ತನಗಾದ ಅನ್ಯಾಯದ ವಿರುದ್ಧ ನ್ಯಾಯ ಕೇಳಿದಾಗಲೂ ಅವಳಿಗೆ ಸಿಕ್ಕ ತೀರ್ಪು ಮಾತ್ರ ಅನ್ಯಾಯದ್ದೇ ಆಗಿದೆ. ನ್ಯಾಯಕ್ಕಾಗಿ ಇಡೀ ಮಹಿಳಾ ಸಮುದಾಯವು ಒಕ್ಕೊರಲಿಂದ ಧ್ವನಿಯಾದಾಗ ಎಷ್ಟೋ ವರ್ಷಗಳ ನಂತರ ನ್ಯಾಯ ದೊರಕಿದೆ. ಆದರೆ ಎಲ್ಲಾ ತೀರ್ಪುಗಳಲ್ಲಿ ಇದು ಸಾಧ್ಯವಾಗಿಲ್ಲದಿರುವುದನ್ನು ಸಹ ಕಾಣಬಹುದು. ಲಿಂಗಾತೀತವಾಗಿ ಇರಬೇಕಾದ ತೀರ್ಪುಗಳು ಲಿಂಗ ತಾರತಮ್ಯ, ಜಾತಿ ತಾರಮ್ಯದ ನೆಲೆಯಲ್ಲಿಯೇ ಇರುವುದು ವಿಶಾದನೀಯ ಸಂಗತಿಯಾಗಿದೆ.

ವಿದ್ಯಾವಂತಳಾಗಿದ್ದು ಅಧಿಕಾರದಲ್ಲಿದ್ದಾಗಲೂ ಸಹಿತ ಈ ಪ್ರಧಾನ ವ್ಯವಸ್ಥೆಯು ಅವನ್ನು ಹಿಂಸಿಸುವ, ದೌರ್ಜನ್ಯವೆಸಗುವುದನ್ನು ನಿಲ್ಲಿಸಿಲ್ಲ. ಮತ್ತದರ ವಿರುದ್ಧವಾಗಿ ದೀರ್ಘಕಾಲ ಹೋರಾಡಿ

ಜಯಗಳಿಸಿರುವ ಉದಾಹರಣೆಯೂ ಇವೆ. "ಐ.ಎ.ಎಸ್.ನ ಹಿರಿಯ ಅಧಿಕಾರಿಯಾದ ರೂಪನ್ ದೇವಲ್ ಬಜಾಜ್ ಎಂಬ ಮಹಿಳೆಯೇ ತುಂಬಿದ ಸಭೆಯಲ್ಲಿ ತನ್ನಂತ ಅಧಿಕಾರಿಯೋರ್ವನಿಂದ ಅವಮಾನಿಸಲ್ಪಟ್ಟಳು. ಆದರೆ ಆಕೆ ಅದರ ವಿರುದ್ಧ ಹತ್ತು ವರ್ಷಗಳ ಕಾಲ ಮಾನಸಿಕ ಚಿತ್ರಹಿಂಸೆ, ಆರ್ಥಿಕ ತೊಂದರೆಗಳನ್ನು ಸಹಿಸುತ್ತಾ ಹೋರಾಡಿ ಕೊನೆಗೂ ಜಯಗಳಿಸಿದಳು. ಆಕೆಯ ಅವಮಾನಿಸಿದ ಪೋಲೀಸ್ ಅಧಿಕಾರಿ ಗಿಲ್ ಅವರಿಗೆ ಸಾರ್ವಜನಿಕ ಸ್ಥಳಗಳಲ್ಲಿ ಮದ್ಯಪಾನ ಮಾಡಬಾರದೆಂದು ನ್ಯಾಯಾಲಯವು ನಿಷೇಧಿಸಿದ್ದಲ್ಲದೆ ರೂಪನ್ ಅವರಿಗೆ ಎರಡು ಲಕ್ಷ ರೂಪಾಯಿ ಪರಿಹಾರ ಮತ್ತು ಐವತ್ತು ಸಾವಿರ ರೂಪಾಯಿ ಕೋರ್ಟು ಖರ್ಚು ನೀಡಬೇಕೆಂದು ತೀರ್ಪು ನೀಡಿದೆ. ರೂಪನ್ ಬಜಾಜ್ ಗಿಲ್ ಅವರಿಗಿಂತ ಹಿರಿಯ ಅಧಿಕಾರಿಯಾಗಿದ್ದು ಇಂತಹ ಕಿರುಕುಳವನ್ನು ಅನುಭವಿಸಿದರೆಂದರೆ ಮೇಲೆ ಇಂತಹ ಅಧಿಕಾರಿಗಳ ಕೈಕೆಳಗೆ ದುಡಿಯುವ ಸಾಮಾನ್ಯ ಮಹಿಳೆಯರ ಪಾಡೇನೆಂಬುದು ನಮ್ಮ ಊಹೆಗು ನಿಲುಕದ ವಿಷಯ."[೨೧] ಉನ್ನತ ಹುದ್ದೆಯಲ್ಲಿದ್ದರೂ ಸಹ ಮಹಿಳೆಯನ್ನು ಲಿಂಗತಾರತಮ್ಯದ ನೆಲೆಯಲ್ಲಿಯೇ ನೋಡಲಾಗುತ್ತಿದೆ. ಮಹಿಳೆ ಯಾವುದೇ ಅಧಿಕಾರವನ್ನು ಹೊಂದಿರಲಿ ಈ ಸಮಾಜಕ್ಕೆ ಕಾಣುವುದು ಕೇವಲ ಹೆಣ್ಣಾಗಿ ಮಾತ್ರ ಆ ಕಾರಣಕ್ಕಾಗಿಯೇ ರೂಪನ್‌ರವರು ಒಬ್ಬ ಅಧಿಕಾರಿಯೋರ್ವನಿಂದ ಅವಮಾನ ಪಟ್ಟಿದ್ದಕ್ಕಾಗಿ ನ್ಯಾಯಾಲಯದ ಮೆಟ್ಟಿಲೇರಿದರು. ಆದರೆ ಕೋರ್ಟ್ ತೀರ್ಪಿಗಾಗಿ ಅವರು ಹತ್ತು ವರ್ಷಗಳೇ ಬೇಕಾಯಿತು. ಛಲ ಬಿಡದೆ ರೂಪನ್ ಬಜಾಜ್ ಹೋರಾಡಿ ನ್ಯಾಯ ದೊರಕಿಸಿಕೊಂಡರು. ಅವರೇ ಹೇಳುವಂತೆ ಎಂತಹ ಅವಮಾನವನ್ನು ಸಹಿಸಿಕೊಳ್ಳದೆ ಅವಮಾನದ ವಿರುದ್ಧ ಛಲದಿಂದ ಹೋರಾಡಿ ನ್ಯಾಯ ದೊರೆಯುತ್ತದೆ. ಅಂತಹ ಕಾನೂನು ನಮ್ಮ ಸಂವಿಧಾನದಲ್ಲಿದೆ. ಅಂತಹ ತಿಳುವಳಿಕೆ ಮತ್ತು ಛಲ ನಮ್ಮಲ್ಲಿರಬೇಕು. ನನ್ನ ಹತ್ತು ವರ್ಷಗಳ ಹೋರಾಟ ಬಹಳಷ್ಟು ಮಹಿಳೆಯರಿಗೆ ಇಂತಹ ಅವಮಾನವಾಗದಂತೆ ತಡೆಯಬಲ್ಲದರು ಎನ್ನುತ್ತಾರೆ.

ಇಪ್ಪತ್ತೈದು ಸಾವಿರ ರೂಪಾಯಿ ವರದಕ್ಷಿಣೆ ತಂದಿಲ್ಲವೆಂಬ ಕಾರಣಕ್ಕೆ ಎಂಟು ತಿಂಗಳ ತುಂಬು ಗರ್ಭಿಣಿಯನ್ನು ಅವಳ ಗಂಡ ರವೀಂದ್ರ ಚೌತ್ಕಲ್‌ನಿಂದ ತುಂಡು ತುಂಡಾಗಿ ಕತ್ತರಿಸ್ಪಟ್ಟಳು. ಈ ಪ್ರಕರಣಕ್ಕೆ ಸುಪ್ರಿಂ ಕೋರ್ಟ್ ಮರಣದಂಡನೆಯನ್ನು ಬೆಂಬಲಿಸದೆ ನಿರಾಕರಿಸಿತು. ಅದಕ್ಕೆ ನ್ಯಾಯಾಧೀಶರು ಕೊಟ್ಟ ಕಾರಣ ಹೀಗಿದೆ. "ಈ ಕೊಲೆಯ ಹಿಂದಿನ ಉದ್ದೇಶ ವರದಕ್ಷಿಣೆ ತರುವ ಮತ್ತೊಂದು ಹೆಣ್ಣನ್ನು ತರುವುದೇ ಆಗಿದೆ. ವರದಕ್ಷಿಣೆ ಸಾವುಗಳು ನಮ್ಮ ರಕ್ತಕುದಿಸುವಂತಿದ್ದರೂ. ಈ ಕೇಸು ಅತ್ಯುಗ್ರ ಶಿಕ್ಷೆಗೆ ಅರ್ಹವಾದುದೇ ಎಂಬ ಪ್ರಶ್ನೆ ನಮ್ಮೆದುರು ನಿಂತಿದೆ. ಬಹಳಷ್ಟು ಚಿಂತಿಸಿದ ಮೇಲೆ ಈ ಕೇಸನ್ನು ಅತ್ಯಂತ ಅಪರೂಪದ ಅಪರಾಧವಾಗಿ ಉಳಿದಿಲ್ಲ. ಹೆಚ್ಚುತ್ತಿರುವ ಸಾವುಗಳು ತಡೆಗಟ್ಟಲು ಒಂದು ಹಂತದಲ್ಲಿ ಮರಣದಂಡನೆ ವಿಧಿಸುವ ಬಗ್ಗೆ ಯೋಚಿಸಿದರೂ ಮರಣದಂಡನೆ ಇಂತಹ ಸಾವುಗಳನ್ನು ತಡೆಗಟ್ಟಬಲ್ಲದು ಎಂಬ ಬಗ್ಗೆ ಅನುಮಾನಗಳಿವೆ. ಹಾಗಾಗಿ ರವೀಂದರ ಚೌತ್ಕಲ್‌ನಿಗೆ ಮರಣದಂಡನೆಯ ಬದಲು ಜೀವಾವಧಿ ಶಿಕ್ಷೆಯನ್ನು ವಿಧಿಸಲಾಗಿದೆ."[೨೨] ಸುಪ್ರಿಂ ಕೋರ್ಟ್ ತೀರ್ಪನ್ನು ಕೇಳಿದವರಿಗೆ ಎಂತಹವರಿಗೆ

ನ್ಯಾಯಾಂಗ ವ್ಯವಸ್ಥೆಯ ಮೇಲಿರುವ ನಂಬಿಕೆ, ಗೌರವವೂ ಕಡಿದು ಹೋಗುತ್ತದೆ. ವರದಕ್ಷಿಣೆ ಸಾವು ಮರಣದಂಡನೆಯನ್ನು ವಿಧಿಸುವಂತಹ ಅಪರಾಧವಲ್ಲ ಎನ್ನುವಂತ ಮಾತು ಆಘಾತಕಾರಿಯಾದುದು. ಎಂಟು ತಿಂಗಳ ಗರ್ಭಿಣಿಯನ್ನು ತುಂಡು ತುಂಡಾಗಿ ಕತ್ತರಿಸಿ ಪ್ಲಾಸ್ಟಿಕ್ ಸುತ್ತಿ ಎಸೆದದ್ದು ಬರ್ಬರ ಕೊಲೆಯಲ್ಲವೇ? ಹಾಗಿದ್ದರೆ ಆ ಹೆಣ್ಣು ಜೀವಕ್ಕೆ ಬೆಲೆಯೇ ಇಲ್ಲವೇ. ಒಂದು ಜೀವಕ್ಕಿಂತ ಹಣವೇ ಮುಖ್ಯವಾದುದೇ? ಹೀಗೆ ಅನೇಕ ಪ್ರಶ್ನೆಗಳು ಉದ್ಭವಿಸುತ್ತದೆ. ಪ್ರತೀ ತೀರ್ಪುಕೂಡ ಪುರುಷನ ಪರವಾಗಿಯೇ ತೀರ್ಪು ಹೊರಬಿದ್ದುದು ಮಹಿಳಾ ಸಮುದಾಯಕ್ಕೆ ಸಹಿಸಲಾರದ ತುತ್ತಾಗಿ ಕಾಡುತ್ತದೆ.

"ಇಂದೋರಿನ ಅರವತ್ತ ಮೂರು ವರ್ಷ ವಯಸ್ಸಿನ ಶಾಬಾನೋಗೆ ಅವಳ ಪತಿಯಿಂದ ಜೀವನ ನಿರ್ವಹಣಾಭತ್ಯೆ ಸಿಗಬೇಕೆಂದು ಸುಪ್ರಿಂ ಕೋರ್ಟು ನೀಡಿರುವ ಚರಿತ್ರಾರ್ಹ ನಿರ್ಣಯವು ಮುಸ್ಲಿಂ ವಲಯಗಳಲ್ಲಿ ವಿವಾದಾಸ್ಪದ ಕಿಡಿಯನ್ನು ಹೊತ್ತಿಸಿದೆ. ಮದುವೆಯಾದ ನಲವತ್ತಮೂರು ವರ್ಷಗಳ ನಂತರ ಗಂಡನಿಂದ ಹೊರದೂಡಲ್ಪಟ್ಟ ಶ್ರೀಮತಿ ಶಾಬಾನೋ ನಿರ್ವಹಣಾ ಭತ್ಯೆ (ನಾನ್–ನಾಫ್‌ಕಾ)ಗಾಗಿ ಗಂಡನಿಗೆ ಅರ್ಜಿ ಹಾಕಿದಳು. ಈ ಸಂದರ್ಭದಲ್ಲಿ ಪತ್ನಿಗೆ 'ತಲಾಕ್' ಘೋಷಿಸಿದ್ದ ಗಂಡ ಮಹಮದ್ ಅಹಮದ್ ಖಾನ್ ಅವಳ ಅರ್ಜಿಯನ್ನು ತಿರಸ್ಕರಿಸಿದ, ಕೋರ್ಟಿನಲ್ಲಿ ಇಪ್ಪತ್ತೈದು ರೂಪಾಯಿಗಳನ್ನು ಪತ್ನಿಯ ನಿರ್ವಹಣೆಗಾಗಿ ಕೊಡುವಂತೆ ತೀರ್ಮಾನವಾಯಿತು. ಗಂಡನ ಆದಾಯಕ್ಕೆ ಹೋಲಿಸಿದರೆ ಈ ಮೊತ್ತ ಬಹಳ ಕಡಿಮೆಯೆಂದು ಹೈಕೋರ್ಟಿಗೆ ಅಫೀಲು ಹೋದ ಶಾ ಬಾನೋಗೆ ಹೈಕೋರ್ಟ್‌ನಲ್ಲಿ ರೂ.೧೭೯.೨೦ರೂಗಳಷ್ಟು ಸಿಗಬೇಕೆಂದು ತೀರ್ಪು ದೊರೆಯಿತು. ಸ್ವತಃ ವಕೀಲನೂ ಆದ ಅವಳ ಪತಿ ಸುಪ್ರಿಂ ಕೋರ್ಟಿಗೆ ಹೋಗಿ ವಿಚ್ಛೇದನ ಹೊಂದಿರುವ ಮುಸ್ಲಿಂ ಮಹಿಳೆಗೆ ನಿರ್ವಹಣಾ ಭತ್ಯೆ ಕೊಡಬೇಕಾಗುವುದು 'ಇದ್ದತ್'ನ ಅವಧಿಯಲ್ಲಿ ಮಾತ್ರ ಎಂದು ವಾದಿಸಿದ. ಅವನ ವಾದವನ್ನು ತಳ್ಳಿಹಾಕಿದ ಸುಪ್ರೀಂ ಅವಧಿಯಲ್ಲಿ ಕ್ರಿಮಿನಲ್ ಪ್ರೋಸೀಜರ್ ಕೋಡ್ ೧೨೫ ಸೆಕ್ಷನ್‌ನ ಪ್ರಕಾರ ಶಾಬಾನೋಗೆ ನಿರ್ವಹಣಾ ಭತ್ಯೆಯನ್ನು ಕೊಡಬೇಕೆಂದು ತೀರ್ಪು ಹೊರಡಿಸಿದೆ."[೨೩] ತನ್ನ ಗಂಡನಿಂದ ಸಿಗಬೇಕಾಗಿದ್ದ ನಿರ್ವಹಣಾ ಭತ್ಯೆಯನ್ನು ಶಾಬಾನೋ ನ್ಯಾಯಾಲಯದ ಮೂಲಕ ದಕ್ಕಿಸಿಕೊಂಡರಾದರು ಆದರೆ ಧಾರ್ಮಿಕ ಮೂಲಭೂತವಾದಿಗಳು ಈ ತೀರ್ಪು ಮುಸ್ಲಿಂ ಧರ್ಮಕ್ಕೆ ವಿರುದ್ಧವಾದದ್ದು ಎಂದು ತಿರಸ್ಕರಿಸಿದ್ದನ್ನು ಕಾಣಬಹುದು. ಸುಪ್ರಿಂ ಕೋರ್ಟ್ ತೀರ್ಪಿನಲ್ಲಿ ಯಾವುದೇ ಧರ್ಮಕ್ಕೆ ಧಕ್ಕೆಯಾಗುವಂತೆ ಈ ತೀರ್ಪು ನೀಡಿಲ್ಲ ಎಂದು ಸ್ಪಷ್ಟಪಡಿಸಿದ್ದಾಗಲೂ ಸಹಿತ ಈ ತೀರ್ಪನ್ನು ವಿರೋಧಿಸಿ ಮತ್ತೆ ನ್ಯಾಯಾಲಯಕ್ಕೆ ದೂರು ಸಲ್ಲಿಸಿದ್ದು ವಿಪರ್ಯಾಸವೆ ಸರಿ.

ಮನುಷ್ಯ ಹಾದಿ ಕಾಲದಿಂದಲೂ ಸಂಘ ಜೀವಿಯಾಗಿಯೇ ಜೀವಿಸಿದ್ದಾನೆ. ಹಾಗೆಯೇ ಒಂದೊಂದು ಪಂಗಡಗಳನ್ನಾಗಿ ಮಾಡಿಕೊಂಡು ಬದುಕುತ್ತಾ ಬಂದಿದ್ದಾನೆ. ಅಧಿಕಾರದಾಹಿಯಾದ ಈ ಮನಷ್ಯನು ತನ್ನ ನಾಯಕ ಪಟ್ಟಕ್ಕಾಗಿ ಹೋರಾಡುವುದರ ಜೊತೆ ಜೊತೆಗೆ ಮತ್ತೊಬ್ಬರನ್ನು

ಶೋಷಣೆ ಮಾಡಿಕೊಂಡೇ ಬಂದಿದ್ದಾನೆ. ಅವನ ಅಧಿಕಾರದ ಆಸೆಗಾಗಿ ಎಂತಹ ಹೇಯ ಕೆಲಸವನ್ನಾದರೂ ಮಾಡಲು ಇವನು ಹಿಂಜರಿಯದಿರುವುದು ಇಂದಿಗು ಮುಂದುವರೆಸಿಕೊಂಡು ಬಂದಿರುವುದನ್ನು ಕಾಣಬಹುದಾಗಿದೆ. ಜಾತಿ, ಧರ್ಮದ ಹೆಸರಿನಲ್ಲಿ ಹಲವಾರು ನಿರ್ಬಂಧ, ನಿಬಂಧನೆಗಳನ್ನು ಹೇರಿಕೊಂಡೇ ಬಂದಿದ್ದಾನೆ. ಅದರಲ್ಲಿಯೂ ಮಹಿಳೆಯನ್ನು ಶೋಷಣೆಯನ್ನು ಮಾಡುವುದಲ್ಲದೆ ಉಳಿಸಿಕೊಂಡೆ ಬಂದಿದ್ದಾನೆ.

ಮಹಿಳೆಯರು ಸಂಘಟನಾತ್ಮಕವಾಗಿ ತಮ್ಮ ದೌರ್ಜನ್ಯಗಳ ವಿರುದ್ಧ ಹೋರಾಟ ಮಾಡುವುದರ ಜೊತೆಗೆ ತಮ್ಮ ಬರಹದ ಮೂಲಕವೂ ಪ್ರತಿಭಟಿಸಿ ಪ್ರತಿರೋಧವನ್ನು ವ್ಯಕ್ತಪಡಿಸಿರುವುದನ್ನು ಕಾಣುತ್ತೇವೆ. ಕೆಲವು ಲೇಖಕಿಯರು ತಣ್ಣಗೆ ಪ್ರತಿಭಟಿಸಿದರೆ ಮತ್ತೆ ಕೆಲವರು ಗಟ್ಟಿಯಾಗಿ ತಮ್ಮ ಸಾಹಿತ್ಯದೊಳಗೆ ಪ್ರತಿಭಟಿಸಿರುವುದನ್ನು ಕಾಣಬಹುದು. ಮಹಿಳಾ ಸಮುದಾಯದ ಜೊತೆಗೆ ತಳಸಮುದಾಯಗಳ ಮೇಲೆ ನಡೆಯುತ್ತಿರುವಂತಹ ದೌರ್ಜನ್ಯಗಳನ್ನೂ ಒಕ್ಕೊರಲಿನಿಂದ ಪ್ರತಿಭಟಿಸುವುದು ತಿಳಿಯುತ್ತದೆ.

ಕೊನೆಟಿಪ್ಪಣಿಗಳು

೧. ಎನ್.ಗಾಯಿತ್ರಿ, ಸಂಚಲನ, ಪುಟ-೧೦೮-೧೦೯

೨. ಕವಿತಾ ರೈ, ಮಹಿಳೆ ವಸಾಹತ್ತೋತ್ತರ ಸಂದರ್ಭ, ಪುಟ-೧೦೨-೧೦೩

೩. ಎನ್.ಗಾಯಿತ್ರಿ, ಸಂಚಲ, ಪುಟ-೨೦-೨೧

೪. ಮೀನಾಕ್ಷಿ ಬಾಳಿ, ಮನದ ಸೂತಕ ಹಿಂಗಿದೊಡೆ, ಪುಟ-೨೪-೨೫

೫. ಹೆಚ್.ಎಸ್.ಅನುಪಮಾ, ಹೆಣ್ಣು ಸಂಕರ ಕಾಲದ ಆತ್ಮಪ್ರಜ್ಞೆ, ಪುಟ-೩೪

೬. ಎಸ್.ಡಿ.ಶಶಿಕಲಾ, ವಿಜಯಾದಬ್ಬೆ ಸಮಗ್ರ ಸಾಹಿತ್ಯ, ಸಂಪುಟ-೨, ಪುಟ-೩೧೮-೩೧೯

೭. ಹೆಚ್.ಎಸ್.ಅನುಪಮಾ, ಹೆಣ್ಣು ಸಂಕರ ಕಾಲದ ಆತ್ಮಪ್ರಜ್ಞೆ, ಪುಟ-೬೦

೮. ಚಂದ್ರಮತಿ ಸೋಂದಾ, ಆಟಕ್ಕೂ ಉಂಟು ಲೆಕ್ಕಕ್ಕೂ ಉಂಟು, ಪುಟ-೨೮

೯. ಎನ್.ಗಾಯಿತ್ರಿ, ಸಂಚಲ, ಪುಟ-೧೩೭-೧೩೮

೧೦. ಹೆಚ್.ಎಸ್.ಅನುಪಮಾ, ಹೆಣ್ಣು ಸಂಕರ ಕಾಲದ ಆತ್ಮಪ್ರಜ್ಞೆ, ಪುಟ-೬೧

೧೧. ಬಾನುಮುಷ್ತಾಕ್, ಹೂ ಕಣಿವೆಯ ಚಾರಣ, ಪುಟ-೯೬

೧೨. ಗೌರಿ ಲಂಕೇಶ್, ಕಂಡ ಹಾಗೆ ಸಂಗ್ರಹ-೨, ಪುಟ-೧೬೦

೧೩. ಅದೇ, ಪುಟ-೧೬೩

೧೪. ಮನುಬಳಿಗಾರ್ (ಸಂ)., ದಲಿತ ಸಾಹಿತ್ಯ ಸಂಪುಟ, ಸಣ್ಣಕಥೆ, ಪುಟ-೨೭

೧೫. ಅದೇ, ಪುಟ-೯೩

೧೬. ಅದೇ, ಪುಟ-೫೯

೧೭. ಸಬಿಹಾ ಭೂಮೀಗೌಡ (ಸಂ)., ಮಹಿಳೆ ಸಂಘಟನೆ ಹೋರಾಟ, ಪುಟ-೬೬-೬೭

೧೮. ದು.ಸರಸ್ವತಿ (ಸಂ), ನೀರದಾರಿ, ಪುಟ-೯೯

೧೯. ಸಾ.ರಾ.ಅಬೂಬಕ್ಕರ್, ಸಾಹಿತ್ಯಕ್ಕೊಂದು ದಾರಿದೀಪ, ಪುಟ-೯೪

೨೦. ಅದೇ, ಪುಟ-೯೭

೨೧. ಎನ್.ಗಾಯಿತ್ರಿ, ಸಂಚಲ, ಪುಟ-೧೪

೨೨. ಅದೇ, ಪುಟ-೫೦

೨೩. ಸಾ.ರಾ.ಅಬೂಬಕ್ಕರ್, ಸಾಹಿತ್ಯಕ್ಕೊಂದು ದಾರಿದೀಪ, ಪುಟ-

ಅಧ್ಯಾಯ - ಹತ್ತು

ವಿಚಾರ ಸಾಹಿತ್ಯ : ಮತ, ಧರ್ಮದ ಪರಿಧಿಯಲ್ಲಿ ಮಹಿಳೆ

ಅಧ್ಯಾಯ - ಹತ್ತು

ವಿಚಾರ ಸಾಹಿತ್ಯ : ಮತ, ಧರ್ಮದ ಪರಿಧಿಯಲ್ಲಿ ಮಹಿಳೆ

ಭಾರತವು ವೈವಿಧ್ಯಮಯವಾದ ಸಂಸ್ಕೃತಿಯನ್ನು ಹೊಂದಿರುವ ದೇಶವಾಗಿದೆ. ಹಲವಾರು ಜಾತಿ, ಧರ್ಮಗಳನ್ನು ಹೊಂದಿರುವಂತಹ ರಾಷ್ಟ್ರ, ಇಲ್ಲಿ ವಿವಿಧ ಧರ್ಮಗಳಲ್ಲಿ ತಮ್ಮದೇ ಆದ ಸಂಪ್ರದಾಯ, ಆಚರಣೆ, ನಂಬಿಕೆಗಳನ್ನು ಬೆಳೆಸಿಕೊಂಡು ಬರಲಾಗಿದೆ. ಎಲ್ಲಾ ಜಾತಿ, ಧರ್ಮಗಳಲ್ಲಿಯೂ ಮಹಿಳೆಯನ್ನ ಎರಡನೇ ದರ್ಜೆಯವಳನ್ನಾಗಿಯೇ ನಡೆಸಿಕೊಂಡು ಬರಲಾಗಿದೆ. ಮತ, ಧರ್ಮದ ಹೆಸರಿನಲ್ಲಿ ಮಹಿಳೆಯನ್ನ ಶೋಷಣೆ ಮಾಡುತ್ತಲೇ ಇದೆ. ಈ ಎಲ್ಲಾ ವಿಷಯವಾಗಿ ವಿಚಾರ ಸಾಹಿತ್ಯದಲ್ಲಿ ಹಲವಾರು ಲೇಖಕಿಯರು ತಮ್ಮದೇ ಆದ ನಿಲುವನ್ನು ವ್ಯಕ್ತಪಡಿಸಿರುವುದನ್ನು ನಾವಿಲ್ಲಿ ಗಮನಿಸಬಹುದು. ಅಲ್ಲದೆ ದಲಿತರು ಮತ್ತು ಮಹಿಳೆಯನ್ನು ಧರ್ಮ ಮತ್ತು ದೇವರ ಹೆಸರಿನಲ್ಲಿ ಹೀನಾಯವಾಗಿ ಈ ಸಮಾಜ ಹೇಗೆ ನಡೆಸಿಕೊಂಡು ಬಂದಿದೆ? ಮತ್ತು ಅದರಿಂದಾಗಿ ಅವರು ಅನುಭವಿಸಿದಂತಹ ಹಾಗೂ ಎದುರಿಸಿದ ಸಂಕಷ್ಟಗಳು, ಎಂತಹ ಕ್ರೂರ ವ್ಯವಸ್ಥೆಯನ್ನು ಹೊಂದಿತ್ತು ಎನ್ನುವುದನ್ನು ಈ ಅಧ್ಯಾಯದಲ್ಲಿ ನೋಡಲಾಗಿದೆ.

ಕೆ.ನೀಲಾ ಅವರು 'ಹಾಲ್ದಿಂಗಳ ಕೆಳಗೆ ಸ್ನೇಹದ ಸೇತು' ಎಂಬ ಲೇಖನದಲ್ಲಿ ಧರ್ಮದ ನೆಲೆಯೊಳಗೆ ಮಹಿಳೆಯನ್ನು ಹೇಗೆ ತರತಮ ಭಾವವನ್ನು ಮೂಡಿಸುತ್ತದೆ ಎನ್ನುವುದಕ್ಕೆ ಈ ಮುಂದಿನಂತೆ ವಿವರಿಸಿದ್ದಾರೆ. ಅವರ ಮಾತಿನಲ್ಲೇ ಹೇಳುವುದಾದರೆ. "ಎಂಟು ವರ್ಷದ ಬಾಲಕ, ಬೋಡು ತಲೆಯ ಹಿಂಭಾಗಕ್ಕೆ ನೇತಾಡುವ ಪುಟ್ಟ ಜುಟ್ಟು ಅಂಗಿಯಿಲ್ಲದ ಎದೆಯ ಮೇಲೆ ಅಡ್ಡಲಾಗಿ ಜನಿವಾರ, ಮಾಸಿದ ನೂಲಿನ ಧೋತರ, ಏನು ಕೇಳಿದರೂ ಪಟಪಟನೇ ಮಾತಿನ ದಾಳ ಉರುಳಿಸುವ ಪರಿಗೆ ಬೆರಗಾಗಲೇಬೇಕು. ವೇದಾಧ್ಯಯನಕ್ಕೆಂದು ನೂರು ಬ್ರಾಹ್ಮಣ ವಟುಗಳು ಸುಮಾರು ನಾಲ್ಕು ರಾಜ್ಯಗಳಿಂದ ಬಂದವರು. 'ನೀವು ಅಧ್ಯಯನ ಮಾಡುವ ಪುಸ್ತಕಕೊಡಿ' ಅಂದರೆ ಥಟ್ಟಂತ 'ಇಲ್ಲ... ಇಲ್ಲ... ನೀವು ಹೆಂಗಸರು ಅದನ್ನು ಮುಟ್ಟಿದರೆ ಪಾಪ ತಗುಲುತ್ತದೆ' ಎಂದು ಬಲು ಮುಗ್ಧತೆಯಿಂದ ಉತ್ತರಿಸಿದ್ದಕ್ಕೆ ಹುಡುಗ ತಕ್ಷಣಕ್ಕೆ ನಕ್ಕರೂ ತುಂಬ ಚಾಲಾಕಿನಂತೆ

ವರ್ತಿಸಿದ. ಖಾನಾಪುರ, ನಾನು ಮತ್ತು ಗೆಳೆಯರೆಲ್ಲ ಬೇಕೆಂದೇ ಅನೇಕ ವಿಷಯ ಕೆದಕಿ ತೆಗೆದರೆ ಗಾಬರಿಯಾಗುವಂತಹ ಸಂಗತಿಗಳು ಈಚೆ ಬಂದವು. ಸರ್ವಧರ್ಮಗಳ ಸಮನ್ವಯ ಆಚರಣೆಯ ಕೇಂದ್ರವಾಗಿರುವ ಮಾಣಿಕ ಪ್ರಭುವಿನ ಮಠವು ಸಂಪೂರ್ಣ 'ಸನಾತನಿ'ಗಳ ಅಡ್ಡೆಯಾಗಿರುವುದು ಮತ್ತು ಈಚೆಗೆ ೬ ವರ್ಷಗಳಿಂದ ಬ್ರಾಹ್ಮಣ ವಟುಗಳಿಗಾಗಿ 'ವೇದ ಪಾಠಶಾಲೆ' ಶುರುವಾಗಿರುವುದು, ಮಕ್ಕಳಿಗೆ ಪಾಠ ಮಾಡಲು ಶೃಂಗೇರಿಯಿಂದ ಶಿಕ್ಷಕನೊಬ್ಬ ಇಲ್ಲಿಯೇ ಠಿಕಾಣಿ ಹೂಡಿರುವುದು ಎಲ್ಲವೂ ಬಯಲಾದವು. ಹಿಂದೂ ಮಂದಿರಗಳ ಪೂಜಾರಿಕೆ, ಹಿಂದೂ ಧರ್ಮ ಪ್ರಚಾರದ ಪ್ರಮುಖ ಉದ್ದೇಶ ಹೊಂದಿರುವ ವೈದಿಕ ಪಾಠಶಾಲೆಗಳು ಸನಾತನ ವ್ಯವಸ್ಥೆಯನ್ನು ಗಟ್ಟಿಗೊಳಿಸಲೆಂದೇ ಇರುವ ತಾಣಗಳು."[೧] ಸನಾತನ ಧರ್ಮಿಗಳು ಹಿಂದುತ್ವದ ಹೆಸರಿನಲ್ಲಿ ಧಾರ್ಮಿಕ ಅಂಧತ್ವವನ್ನು ಹೆಚ್ಚು ಮಾಡಿಕೊಂಡೇ ಬರುತ್ತಿರುವುದು ಇಲ್ಲಿ ತಿಳಿಯುತ್ತದೆ.

ಪೂಜಾರಿಕೆಯ ಹೆಸರಿನಲ್ಲಿ ಬ್ರಾಹ್ಮಣ ವಟುಗಳು ವೇದಾಧ್ಯಯನಕ್ಕೆಂದೇ ಬೇರೆ ಬೇರೆ ರಾಜ್ಯಗಳಿಂದ ಒಂದೆಡೆ ಸೇರಿ ವೈದಿಕ ಶಿಕ್ಷಣವನ್ನು ಮಕ್ಕಳಿಗೆ ಕಲಿಸುವ ಮೂಲಕವಾಗಿ ಚಿಕ್ಕ ವಯಸ್ಸಿನಲ್ಲೇ, ದ್ವೇಷ, ವೈರತ್ವವನ್ನು ಹೆಚ್ಚಿಸುವ ಕೆಲಸವನ್ನು ಮಾಡುತ್ತಿರುವುದನ್ನು ಕಾಣಬಹುದಾಗಿದೆ. ಮುಟ್ಟು ಮೈಲಿಗೆಯಂತಹ ಕ್ರೂರ ಆಚರಣೆಯನ್ನೂ ಎಳೆ ಮನಸ್ಸುಗಳಿಗೆ ಅಚ್ಚೊತ್ತುವಂತೆ ಧಾರ್ಮಿಕ ಶಿಕ್ಷಣವನ್ನು ಗಟ್ಟಿಗೊಳಿಸಲಾಗುತ್ತಿದೆ. ಮಠ ಮಂದಿರಗಳು ಸನಾತನ ಧರ್ಮಿಗಳಿಗೆ ಹಿಂದೂಧರ್ಮವನ್ನು ಪ್ರಚಾರ ಮಾಡುವ ಪ್ರಮುಖ ಅಡ್ಡವಾಗುತ್ತವೆ ಎನ್ನುವುದನ್ನಿಲ್ಲಿ ಅಭಿವ್ಯಕ್ತಿಸಿದ್ದಾರೆ.

ಮಠ ಮಂದಿರಗಳು ಹೆಣ್ಣಿನ ಶೋಷಣೆಯ ಕೇಂದ್ರಗಳಾಗಿವೆ. ಮಠಾಧಿಪತಿ ಏನು ಮಾಡಿದರೂ ಅದು ಸರಿಯಾಗೆ ಇರುತ್ತದೆ ಮತ್ತು ಆತ ದೈವಾಂಶ ಸಂಭೂತನಾಗಿರುತ್ತಾನೆ ಎಂಬ ಅಂಧಕಾರದಲ್ಲಿಯೇ ಜನ ಸಮುದಾಯ ಬದುಕುತ್ತಿರುವುದು ಬಹು ಹಿಂದಿನಿಂದಲೂ ಬೆಳೆದುಬಂದಿದೆ. "ಕಳೆದೆರಡು ತಿಂಗಳಲ್ಲಿ ಸುದ್ದಿಯಾಗಿ, ಬಹುಶಃ ನೆನಪಿನಿಂದ ಮಾಸಿ ಹೋಗಲು ಹವಣಿಸುತ್ತಿರುವ ಧಾರ್ಮಿಕ ಮುಖವಾಡ ಹೊತ್ತ ಎರಡು ಬರ್ಬರ ಕೃತ್ಯಗಳು ಆತಂಕಕಾರಿ ಸನ್ನಿವೇಶವನ್ನು ಸೃಷ್ಟಿಸಿವೆ. ಕಾಷಾಯ ವಸ್ತ್ರದ ಮುಸುಕಿನಲ್ಲಿ ಕಾಮಕೇಳಿಗೆ ಆಹ್ವಾನಿಸಿ, ಬಲಿಯಾದ ಪಾರ್ವತಮ್ಮನನ್ನು ಮತ್ತು ಅವಳ ಗೆಳತಿ ಹಸನ್‌ಬಿಯನ್ನು ಸಾರ್ವಜನಿಕವಾಗಿ ನಗ್ನಗೊಳಿಸಿದ ಕೊಪ್ಪಳದ ಮಹಾಂತನನ್ನು ಇನ್ನೂ ಲಾಕಪ್ಪಿಗೆ ಹಾಕದಿರುವುದಕ್ಕೆ ಕಾರಣವೇನು? ಈ ನಗ್ನ ದೌರ್ಜನ್ಯದ ವಿರುದ್ಧ ಎದ್ದ ಪ್ರತಿಭಟನೆಯ ದನಿಗಳ ಪರಿಣಾಮವನ್ನೂ ಕುಗ್ಗಿಸುವಂತೆ ಇರುವ ಕಾರ್ಯಗಳೆಷ್ಟು? ರಾಕ್ಷಸೀ ಪ್ರವೃತ್ತಿಯ ಮಹಾಂತನ ಕೃತ್ಯ ಒಬ್ಬ ವ್ಯಕ್ತಿಯ ಹುಚ್ಚಾಟವಾಗಿರದೆ ಒಂದು ಸಂಸ್ಥೆಯಾಗಿ ಗೂಂಡಾ ಜನಗಳ ಪುಂಡ ಪೋಕರಿಗಳ ಆಲದ ಮರವಾಗಿದೆಯೆಂಬುದನ್ನು ಮರೆಯಬಾರದು. ಈ ಮರದ ಬೇರು, ಬಿಳಿಲುಗಳು ಎಷ್ಟು ಬಲಿಷ್ಟವಾದುದು ಎಂಬುದನ್ನು ಕಳೆದೆರಡು ತಿಂಗಳಿಂದ ನಡೆದ ಮಠ ಪ್ರವೇಶ ಮಾಡಿಸಿಕೊಂಡ ನಮ್ಮ ಮೂಢ ಜನರ ಪ್ರಜ್ಞೆ ಗಾಬರಿ ಹುಟ್ಟಿಸುವಂತಹದು."[೨]

ಇಲ್ಲಿ ಮಹಿಳೆಯು ಯಾವ ತಪ್ಪೂ ಮಾಡದೇ ಇದ್ದರೂ ಸಮಾಜದ ಎದುರಲ್ಲಿ ತಪ್ಪಿಸ್ಥಳಾಗಿಯೇ ಕಂಡಿರುವುದು ದುರಂತವೇ ಸರಿ. ಒಬ್ಬ ಕಾಮುಕನಿಂದ ದೌರ್ಜನ್ಯಕ್ಕೆ ಒಳಗಾಗಿದ್ದರೂ ಕೂಡ

ಮೂಢ ಜನರ ಕಣ್ಣಲ್ಲಿ ತಪ್ಪಿಸ್ಥಳಾಗಿ ಕಂಡಿದ್ದೂ ಅಲ್ಲದೆಯೆ ನಗ್ನಳಾಗಿ ಮೆರವಣಿಗೆ ಮಾಡಿಸಿಕೊಳ್ಳುವ ಸಂದರ್ಭ ಅದೆಂತಹ ಕ್ರೂರವಾಗಿದ್ದೀತು. ತಪ್ಪು ಮಾಡಿದ ಮಠಾಧಿಪತಿ ಮಹಾಂತನನ್ನು ಯಾವುದೇ ರೀತಿಯಾದಂತಹ ಆರೋಪವನ್ನೂ ಮಾಡದೇ, ಆತನ ವಿರುದ್ಧ ಯಾವ ಶಿಕ್ಷೆಯನ್ನೂ ವಿಧಿಸದೇ ಇರುವುದು ಪುರುಷ ಪ್ರಧಾನ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ. ಈ ಪ್ರಕರಣದ ವಿರುದ್ಧ ನಡೆದ ಪ್ರತಿಭಟನೆಯನ್ನು ಹತ್ತಿಕ್ಕುವ ಮತ್ತು ಅದನ್ನು ಶಮನಗೊಳಿಸುವ ಗೂಂಡಾ ಪ್ರವೃತ್ತಿಯು ಈ ವ್ಯವಸ್ಥೆಯ ಸ್ಥಿತಿಯನ್ನು ಸಾರುತ್ತದೆ. ಜನ ಎಂತಹ ಅಂಧಕಾರ ಮತ್ತು ಮೂಢರಾಗಿದ್ದಾರೆ ಎನ್ನುವುದಕ್ಕೆ ಆರೋಪಿ ಮಹಾಂತನನ್ನೇ ಸಂಭಾವಿತನೆಂದು ಕೊಂಡಾಡಿದ್ದು ಅಲ್ಲದೇ ಅವನನ್ನೇ ಮಠಪ್ರವೇಶ ಮಾಡಿಸಿಕೊಂಡ ಪ್ರಸಂಗವೇ ಸಾಕ್ಷಿ. ಇಂತಹ ಮಠಗಳ ಹೆಸರಿನಲ್ಲಿ ದಲಿತ ಮತ್ತು ಮಹಿಳೆಯರ ಮೇಲೆ ದೌರ್ಜನ್ಯಗಳು ನಿರಂತರವಾಗಿ ನಡೆಯುತ್ತಿದ್ದರೂ ಯಾವುದೇ ಕ್ರಮಕೈಗೊಳ್ಳದ ಸರ್ಕಾರಗಳ ನೀತಿ ಕಂಡನೀಯವಾದದ್ದು ಎಂಬುದಾಗಿ ಲೇಖಕಿಯ ಆಕ್ರೋಶವಾಗಿದೆ.

"ಡಿಸೆಂಬರ್ ೧೬ರಂದು ಮಂಗಳೂರಿನ ಕಂಪದ ಕೋಡಿಯಲ್ಲಿ ಕುರುಡು ಧಾರ್ಮಿಕ ನಂಬಿಕೆಗೆ ಬಲಿಯಾದ ೩ ವರ್ಷದ ಹಸುಳೆ ಪ್ರಿಯಾಂಕ ಎಷ್ಟನೆಯ ಬಲಿಯೋ? ಒಂದು ಕಡೆ ವೈಜ್ಞಾನಿಕ ಸಾಧನೆಯಲ್ಲಿ ದೇಶ ವಿಶ್ವದ ಗಮನ ಸೆಳೆಯುತ್ತಿದ್ದರೆ, ಇನ್ನೊಂದೆಡೆ ಇಂಥ ಮೌಢ್ಯಕ್ಕೆ ಪ್ರತಿವರ್ಷ ಹಲವು ಅಮಾಯಕರು ಬಲಿಯಾಗುತ್ತಲೇ ಇದ್ದಾರೆ. ೨೧ನೇ ಶತಮಾನದ ಮೊಲದ ದಶಕದಲ್ಲಿ ನಡೆದ ನರಬಲಿಯನ್ನು ನೆನಪಿಸಿಕೊಂಡರೆ ಸಾಕು. ಮೈನವಿರೇಳುತ್ತದೆ. ೨೦೦೨ರ ಏಪ್ರಿಲ್‌ನಲ್ಲಿ ಜಾರ್ಖಂಡ್ ರಾಜ್ಯದಲ್ಲಿ ಮಂಜು ಕುಮಾರಿ ಎನ್ನುವ ಹುಡುಗಿಯನ್ನು ಶಕ್ತಿ ದೇವತೆಗೆ ಬಲಿ ನೀಡಲಾಗಿತ್ತು. ಅದೇ ವರ್ಷ ಆಂಧ್ರ ಪ್ರದೇಶದಲ್ಲಿ ಐಶ್ವರ್ಯದ ಆಸೆಗಾಗಿ ತಾಯಿಯೇ ಮಗನನ್ನು ಬಲಿಕೊಟ್ಟಿದ್ದು ವರದಿಯಾಗಿತ್ತು. ೨೦೦೨ರ ಆಗಸ್ಟ್‌ನಲ್ಲಿ ಐವರು ಗುಡ್ಡಗಾಡು ಮಹಿಳೆಯರನ್ನು ಮಾಟಗಾತಿಯರೆಂದು ಕೊಲ್ಲಲಾಗಿತ್ತು. ಮೂರು ವರ್ಷದ ಹಿಂದೆ ಬೆಂಗಳೂರಿನಲ್ಲಿ ನಿಧಿ ಆಸೆಗಾಗಿ ಅರುಣ ಮತ್ತು ಎಲಿಜಬೆತ್ ಎನ್ನುವವರನ್ನು ಕೊಂದಿದ್ದು ಸುದ್ದಿಯಾಗಿತ್ತು. ಹೀಗೆ ಒಂದಿಲ್ಲ ಒಂದು ಆಸೆಗೆ ಈಗಲೂ ನರಬಲಿ ನಡೆದಿದೆ."[೩] ದೇಶ ವೈಜ್ಞಾನಿಕವಾಗಿ ಮುಂದುವರೆಯುತ್ತಿದೆ. ಆದರೆ ಧಾರ್ಮಿಕ ನೆಲೆಯಲ್ಲಿ ಮಾತ್ರ ಅದೇ ಕುರುಡು ಸಂಪ್ರದಾಯ, ಆಚರಣೆಯಲ್ಲೇ ಮುಳುಗೇಳುತ್ತಿರುವುದು ಇನ್ನೂ ಕಡಿಮೆಯಾಗಿಲ್ಲ. ಎಷ್ಟೇ ವಿದ್ಯಾವಂತರಾಗಿದ್ದಾಗಿಯೂ ಸಹ ಇಂತಹ ಮೌಢ್ಯವನ್ನು ನಂಬಿಕೊಂಡೆ ಬರಲಾಗುತ್ತಿದೆ. ಪ್ರಜ್ಞಾವಂತರೂ ಕೂಡ ಒಂದಲ್ಲ ಒಂದು ರೀತಿಯಲ್ಲಿ ಮುಂದುವರೆಸಿಕೊಂಡು ಬರುತ್ತಿರುವುದು ಕಾಣಬಹುದಾಗಿದೆ. ನಿಧಿ ಅಥವಾ ಸಂಪತ್ತಿನ ಆಸೆಗಾಗಿ ಹೆತ್ತ ಕುಡಿಯನ್ನೂ ಲೆಕ್ಕಕ್ಕಿಲ್ಲದಂತೆ ಪ್ರಾಣ ಬಲಿಕೊಡುತ್ತಿರುವುದು ದೇಶದ ಉದ್ದಗಲಕ್ಕೂ ನಡೆಯುತ್ತಲೇ ಇದೆ. ಆದರೆ ಈ ಎಲ್ಲಾ ಆಚರಣೆಯ ಹಿಂದೆ ಜ್ಯೋತಿಷಿಗಳು, ಸ್ವಾಮಿಗಳು, ಪುರೋಹಿತಶಾಹಿ ಹುನ್ನಾರಗಳು ಇಲ್ಲದೇ ಇಲ್ಲ. ಸಮಾಜವನ್ನು ಸ್ವಾಸ್ಥ್ಯದಿಂದ ಇಡಬೇಕು ಎಂದು ಒಂದು ಕಡೆ ಬೊಬ್ಬಿಟ್ಟರೆ ಮತ್ತೊಂದೆಡೆ ಇಂತಹ ಕ್ರೂರ ಆಚರಣೆಗಳು ಎಗ್ಗಿಲ್ಲದಂತೆ ನಡೆದು ಹೋಗುತ್ತಿರುವುದು ದುರಂತವೇ ಸರಿ.

ಒಂದು ಕಾಲದಲ್ಲಿ ಶರಣಸಂಸ್ಕೃತಿಯನ್ನು ಒಪ್ಪಿಕೊಂಡಿದ್ದ ದಲಿತ ಕುಟುಂಬಗಳು ಇಂದು ಅನಿಷ್ಟ ಪದ್ಧತಿಯ ಅಡಿಯಾಳಾಗಿಯೇ ಉಳಿದುಕೊಂಡಿರುವುದು ದುರಂತ. ದಲಿತಳೆಂಬ ಕಾರಣಕ್ಕೆ ಪುರೋಹಿತಶಾಹಿ ವರ್ಗ ನಡೆಸುವ ಹುನ್ನಾರದೊಳಗೆ ಬಲಿಪಶುವಾಗಿಯೆ ಉಳಿದುಕೊಂಡಿದ್ದಾಳೆ. "ದಲಿತಳು ಎಂಬ ಕಾರಣಕ್ಕಾಗಿಯೇ ನಿತ್ಯವೂ ಈ ಅನಿಷ್ಟ ಪದ್ಧತಿಗೆ ಬಲಿ ಮಾಡುತ್ತಿರುವ ವ್ಯವಸ್ಥೆಯ ಹಿಂದೆ ಪುರೋಹಿತಶಾಹಿ ವರ್ಗದ ಹುನ್ನಾರವಿದೆ. ಹಿಂದೆ ದೇವಸ್ಥಾನಗಳಲ್ಲಿ ದೇವರ ಸೇವೆಗೆಂದು ನೆಮಿಸಲ್ಪಡುತ್ತಿದ್ದ ದೇವದಾಸಿಯರು ಕಾಲಾನಂತರ ದೇವರಷ್ಟೇ ಅಲ್ಲ, ಅಲ್ಲಿನ ಪೂಜಾರಿ, ಊರಿನ ಮುಖಂಡ, ಗೌಡರ ಕಾಮಲಾಲಸೆಗೂ ಬಳಕೆಯಾಗತೊಡಗಿದರು. ಜಮೀನ್ದಾರಿ, ಊಳಿಗಮಾನ್ಯ ಪದ್ಧತಿಯಲ್ಲಿ ಪುರುಷ ಎಷ್ಟಾದರೂ ಮದುವೆಯಾಗಬಹುದು. ಕೆಳಜಾತಿಯ ಮಹಿಳೆಯರನ್ನೂ ತನ್ನ ಕಾಮಲಾಲಸೆಗೆ ಬಳಸಬಹುದು ಎಂಬ ನಂಬಿಕೆಯೇ ಈ ಪದ್ಧತಿ ಜೀವಂತವಾಗಿರಲು ಕಾರಣ. ಇಂದಿಗೂ ನಮ್ಮ ಹಳ್ಳಿಗಳಲ್ಲಿ ಈ ಪದ್ಧತಿ ಅವ್ಯಾಹತವಾಗಿ ನಡೆದುಕೊಂಡು ಬರುತ್ತಿದೆ ಎಂಬುದಕ್ಕೆ ಈಚೆಗೆ ಮಾಧ್ಯಮಗಳಲ್ಲಿ ವರದಿಯಾದ ಕೊಪ್ಪಳ ಜಿಲ್ಲೆಯ ಹಿರೇಸಿಂದೋಗಿ ಪ್ರಕರಣವೇ ಸಾಕ್ಷಿ. ಇಲ್ಲಿನ ಸುಪ್ರಸಿದ್ಧ ಮಠವೊಂದರ ಸೇವೆಗೆ ಮೀಸಲಾಗಿರುವ ಸುಮಾರು ೮೦ ಕುಟುಂಬಗಳ ಎಲ್ಲಾ ಹೆಣ್ಣು ಮಕ್ಕಳು ಇಲ್ಲಿ ದೇವದಾಸಿಯಾರಾಗಿದ್ದಾರೆ. ಅಷ್ಟೇ ಅಲ್ಲ, ಪ್ರತೀ ಶಿವರಾತ್ರಿ, ಯುಗಾದಿ ಹಾಗೂ ಊರ ಜಾತ್ರೆಯ ಸಂದರ್ಭಗಳಲ್ಲಿ ಆ ಊರಿನ ಪೂಜಾರಿಯೇ ಮುತ್ತು ಕಟ್ಟುತ್ತಾನೆ! ಇವೆಲ್ಲವನ್ನೂ ಆ ದೇವದಾಸಿ ಮಹಿಳೆಯರು ಎಗ್ಗಿಲ್ಲದೇ ಹೇಳಿಕೊಳ್ಳುತ್ತಾರೆ. ತಮ್ಮ ಬದುಕು ಇರುವುದೇ ಹೀಗೆ. ತಮ್ಮ ಮನೆಯಲ್ಲಿ ಹುಟ್ಟುವ ಪ್ರತೀ ಹೆಣ್ಣೂ ದೇವರಿಗೆ ಮೀಸಲು ಎಂಬ ಮೂಢನಂಬಿಕೆ ಅವರಲ್ಲಿ ಆಳವಾಗಿ ಬೇರೂರಿದೆ. ಅಷ್ಟೇ ಅಲ್ಲ. ೨೧ನೇ ಶತಮಾನದ ಈ ವೈಜ್ಞಾನಿಕ ಯುಗದಲ್ಲೂ ಈ ಪದ್ಧತಿ ತಪ್ಪಿದ್ದಲ್ಲಿ ತಮ್ಮ ಕುಟುಂಬಕ್ಕೆ ಒಳ್ಳೆಯದಾಗದು, ದೇವರ ಶಾಪ ತಟ್ಟುತ್ತೆ' ಎಂದು ನಂಬಿಯೇ ಆ ದಲಿತ ಮಹಿಳೆಯರು ಜೀವನ ಸಾಗಿಸುತ್ತಿರುವುದು ಸಾಮಾಜಿಕ ವ್ಯವಸ್ಥೆಯ ಕ್ರೂರ ವ್ಯಂಗ್ಯ."[೪]

ಕೆಲವು ಸಾಮಾಜಿಕ ಅನಿಷ್ಟ ಪದ್ಧತಿಗಳಲ್ಲಿ ದೇವದಾಸಿ ಪದ್ಧತಿಯೂ ಒಂದು ದೇವರ ಸೇವೆಗೆಂದು ಮಹಿಳೆಯರಿಗೆ ಮುತ್ತು ಕಟ್ಟಿ ನೇಮಿಸಲಾಗುತ್ತಿತ್ತು. ಕಾಲ ಕ್ರಮೇಣ ಊರಿನ ಮುಖಂಡರ ಊರಿನ ಪೂಜಾರಿಗಳ ಕಾಮಲಾಲಸೆಗೆ ತುತ್ತಾಗಬೇಕಾಯಿತು. ದೇವರ ಹೆಸರಿನಲ್ಲಿ ಕೆಳಜಾತಿಯ ಮಹಿಳೆಯರಿಗೆ ಮುತ್ತು ಕಟ್ಟುವುದು ಹಾಗೂ ಇಡೀ ಕುಟುಂಬದ ಹೆಣ್ಣು ಮಕ್ಕಳು ಈ ಅನಿಷ್ಟ ಪದ್ಧತಿಯನ್ನು ಅನುಸರಿಸಿಕೊಂಡು ಬರುವಂತೆ ಪುರೋಹಿತಶಾಹಿ ವರ್ಗವು ಹಿಂದಿನಿಂದಲೂ ಕಾಪಿಟ್ಟುಕೊಂಡೆ ಬಂದಿದೆ. ಕಾನೂನನ್ನು ಎಷ್ಟು ಕಠಿಣವಾಗಿ ಜಾರಿಗೆ ತಂದರೂ ಕೂಡ ಅದನ್ನ ಪಕ್ಕಕ್ಕೆ ಸರಿಸಿ ಈ ಪದ್ಧತಿಯನ್ನು ಆಚರಣೆ ಮಾಡುತ್ತಿರುವುದು ಎಂತಹ ನಿಕೃಷ್ಟವಾದ ಸ್ಥಿತಿ ಎಂಬುದು ಈ ಲೇಖನದಲ್ಲಿ ವಿವರಿಸುವ ಪ್ರಯತ್ನ ಮಾಡಿದ್ದಾರೆ. ದೇವರ ಬಗೆಗಿನ ಭಯವನ್ನು ಎಷ್ಟರಮಟ್ಟಿಗೆ ಗಟ್ಟಿಗೊಳಿಸಲಾಗಿದೆ ಎಂದರೆ ಆ ಮಹಿಳೆಯರೇ ಹೇಳುವಂತೆ

'ಈ ಪದ್ಧತಿ ತಪ್ಪಿದ್ದಲ್ಲಿ ತಮ್ಮ ಕುಟುಂಬಕ್ಕೆ ಒಳ್ಳೆಯದಾಗದು, ದೇವರ ಶಾಪ ತಟ್ಟುತ್ತೆ.' ಎಂಬ ನಂಬಿಕೆಯನ್ನು ಈ ದಲಿತ ಕುಟುಂಬಗಳಿಗೆ ಗಾಢವಾಗಿ ಹೇರಿಕೊಂಡು ಬರಲಾಗಿದೆ.

ತನ್ನ ಕುಟುಂಬ, ಕುಟುಂಬದವರ ಒಳಿತಿಗಾಗಿ ಇಡೀ ಕುಟುಂಬದ ಎಲ್ಲಾ ಹೆಣ್ಣು ಮಕ್ಕಳು ಈ ಅನಿಷ್ಟ ಪದ್ಧತಿಯ ಬಲಿಪಶುವಾಗಿರುವುದು ಶೋಚನೀಯ ಸಂಗತಿ. ೨೧ನೇ ಶತಮಾನದ ಈ ಕಾಲಘಟ್ಟದಲ್ಲಿಯೂ ದೇವದಾಸಿ ಪದ್ಧತಿಯಿಂದ ಹೊರ ಬರಲಾರದಂತೆ ಈ ಮೇಲ್ವರ್ಗವು ಅದೆಂತಹ ಬಲಿಷ್ಟ ಸರಪಳಿಯನ್ನು ಹೆಣೆದಿರಬಹುದಲ್ಲವೆ.

ಕೋಮುವಾದದ ದಳ್ಳುರಿಗೆ ಸಿಕ್ಕು ನರಳದೇ ಇರುವ ಮಹಿಳೆಯರೇ ಇಲ್ಲ. ಧರ್ಮದ ಹೆಸರಿನಲ್ಲಿ ಹೆಚ್ಚು ಬಲಿಪಶುವಾಗುವವಳು ಮಹಿಳೆಯೇ ಆಗಿರುತ್ತಾಳೆ. "ಕೋಮುವಾದದಿಂದ ಅತೀ ಹೆಚ್ಚು ಸಂಕಷ್ಟಕ್ಕೆ ಮತ್ತು ಅವಮಾನಕ್ಕೆ ತುತ್ತಾಗುವವಳು ಮಹಿಳೆಯೇ. ಗುಜರಾತಿನ ಹತ್ಯಾಕಾಂಡದಲ್ಲಿ ಬಹಳಷ್ಟು ನೋವು ಮತ್ತು ಅವಮಾನವನ್ನನುಭವಿಸಿದವರು ಮುಸ್ಲಿಂ ಮಹಿಳೆಯರು, ಗರ್ಭಿಣಿಯ ಹೊಟ್ಟೆ ಸೀಳಿ ಆ ಭ್ರೂಣವನ್ನು ತ್ರಿಶೂಲದಲ್ಲಿ ಚುಚ್ಚಿ ತೆಗೆದು ಬೆಂಕಿಗೆಸೆದು ಕೊನೆಗೆ ಆ ಮಹಿಳೆಯನ್ನೂ ಉರಿಯುತ್ತಿರುವ ಬೆಂಕಿಗೆಸೆದದ್ದು ನಾವು ಎಲ್ಲೂ ಕಂಡು ಕೇಳರಿಯದ ದೌರ್ಜನ್ಯ. ಜರ್ಮನಿಯಲ್ಲಿ ನಾಜಿಗಳೂ ಕೂಡಾ ಯಹೂದ್ಯರ ಮೇಲೆ ಇಂತಹ ಪೈಶಾಚಿಕ ಕೃತ್ಯವನ್ನೆಸಗಿದ ದಾಖಲೆ ಇಲ್ಲ. ಮನುಷ್ಯರನ್ನು ಇಂತಹ ಅಮಾನವೀಯ ಹಿಂಸೆ ಪಶುಗಳಾಗಿ ರೂಪಿಸಲು ಈ ಕೋಮುವಾದಿಗಳಿಗೆ ಹೇಗೆ ಸಾಧ್ಯವಾಯಿತು? ಈ ಕೃತ್ಯವನ್ನೆಸಗಿದವರ ಹೃದಯದಲ್ಲಿ ಮಾನವೀಯತೆಯ ಸೆಲೆ ಎಂದೆಂದಿಗೂ ಬತ್ತಿ ಹೋಗಿದೆಯೆ? ಮನುಷ್ಯರನ್ನು ಈ ರೀತಿ ರೂಪಿಸಲು ಸಾಧ್ಯವಾದುದುರ ಕಾರಣವನ್ನು ನಾವೀಗ ಕಂಡುಕೊಳ್ಳಬೇಕಾಗಿದೆ."[೫]

ಧರ್ಮ ಎಂಬ ಅಫೀಮು ಮನುಷ್ಯನನ್ನ ಮಾನವೀಯತೆಯನ್ನೆ ಕಳೆದು ಕ್ರೂರ ವ್ಯಕ್ತಿಯಾಗಿಸುತ್ತದೆ ಧರ್ಮ ಮತ್ತು ಪುರುಷನ ಪೈಶಾಚಿಕ ಕೃತ್ಯಕ್ಕೆ ಬಲಿಪಶುವಾಗುವುದು ಮೊದಲು ಮಹಿಳೆಯೇ ಆಗಿದ್ದಾಳೆ. ಏನೂ ಅರಿಯದ ಭ್ರೂಣವನ್ನ ತ್ರಿಶೂಲದಿಂದ ಚುಚ್ಚಿ ತೆಗೆಯುವಷ್ಟು ಮನುಷ್ಯತ್ವವನ್ನೇ ಕಳೆದುಕೊಂಡಿದ್ದಾನೆಯೇ? ಗರ್ಭಿಣಿ ಮಹಿಳೆಯು ಒಂದು ಜೀವವಾಗಿ ಕಾಣಿಸದೇ ಇರುವಷ್ಟೂ ಕೋಮು ಎಂಬ ಅಫೀಮು ಇರಲು ಸಾಧ್ಯವಾದದ್ದಾರೂ ಹೇಗೆ? ಹಿಂದೂ ಧರ್ಮದ ಹೆಸರಿನಲ್ಲಿ ಅನ್ಯಧರ್ಮೀಯರನ್ನು ದ್ವೇಷಿಸುವ ಮತ್ತು ಹಿಂಸಿಸುವಂತಹ ಮನಃಸ್ಥಿತಿಯನ್ನು ಬೆಳೆಸುತ್ತಿರುವುದಾದರು ಹೇಗೆ? ಸಮಾನತೆ, ಭ್ರಾತೃತ್ವವನ್ನು ಸಾರಿದ ಈ ನೆಲದಲ್ಲಿ ಇಂತಹ ಪೈಶಾಚಿಕ ಕೃತ್ಯನ್ನೆಸಗುವಂತೆ ಕೋಮುವಾದಿಗಳು ಪ್ರೇರೇಪಿಸುತ್ತಿರುವುದು ಇನಷ್ಟು ಕ್ರೂರಿಯನ್ನಾಗಿಸುತ್ತಿದೆ ಎಂಬುದು ಸಾ.ರಾ.ಅಬೂಬಕ್ಕರ್ ಅವರು ಧರ್ಮದಿಂದಾಗಿ ನರಳುತ್ತಿರುವ ಮಹಿಳೆಯರ ಬಗೆಗೆ ಆತಂಕ ವ್ಯಕ್ತಪಡಿಸಿದ್ದಾರೆ.

"ಮಹಿಳೆಯರು ಮುಟ್ಟಾದರೆ ನಮ್ಮ ಸಮಾಜವು ತುಂಬ ಕೆಟ್ಟದಾಗಿ ನಡೆಸಿಕೊಳ್ಳುವುದು. ಕರ್ನಾಟಕ ರಾಜ್ಯ ಚಿತ್ರದುರ್ಗ, ತುಮಕೂರು, ಬಳ್ಳಾರಿ, ಬೆಂಗಳೂರು ಮತ್ತು ಹಾಸನ ಜಿಲ್ಲೆಗಳ

ಕಾಡುಗೊಲ್ಲರ ಹಟ್ಟಿಗಳಲ್ಲಿ ಮುಟ್ಟಾದ ಮಹಿಳೆಯರನ್ನು ಹಟ್ಟಿಯಿಂದಲ್ಲೇ ಹೊರ ಹಾಕುವರು. ಮಳೆಗಾಲ, ಚಳಿಗಾಲ, ಬೇಸಿಗೆ ಹೀಗೆ ಯಾವ ಕಾಲವಾದರೇನು? ಮುಟ್ಟಾದವರನ್ನು ಊರ ಹೊರಗಿನ ಕಿಲೋಮೀಟರ್‌ಗಟ್ಟಲೇ ದೂರದಲ್ಲಿ ಗಿಡಮರಗಳು ಇದ್ದರೆ ಅವುಗಳ ಆಸರೆಗೆ ಇಲ್ಲದಿದ್ದರೆ ಬಟಾಬಯಲಿನಲ್ಲಿಯೇ ನಾಲ್ಕು ದಿನಗಳು ದೂಡಬೇಕು, ಸ್ವಚ್ಛತೆಗಾಗಿ ನೀರಿನ ವ್ಯವಸ್ಥೆ ಇರುವುದಿಲ್ಲ. ಹೆಚ್ಚು ಕಡಿಮೆ ಒಂದು ನೂರ ಆರು ಗಂಟೆಗಳನ್ನು ಮುಟ್ಟಾದವಳು ಒತ್ತಡದ ಮನಸ್ಥಿತಿಯಲ್ಲಿ ಕಳೆಯಬೇಕು, ಅದೊಂದು ಮಾನವ ಹಕ್ಕುಗಳ ಉಲ್ಲಂಘನೆಯ ಪಟ್ಟಿಗೆ ಬರುವ ಪಾಡದು. ದೇವರ ದೈವದ ಭಯದಲ್ಲಿ ಮಹಿಳೆಯೊಬ್ಬಳು ತನ್ನನ್ನು ತಾನು ಅಂಥ ನರಕದ ಸ್ಥಿತಿಗೆ ಒಪ್ಪಿ(ಡ್ಡಿ)ಕೊಳ್ಳುವಂತೆ ಮಾಡಲಾಗಿದೆ. ಇನ್ನು ಕೆಲವು ಸಮುದಾಯಗಳಲ್ಲಿ ಇಂಥ ಕ್ರೂರ ಆಚರಣೆ ಇರುವುದಾಗಿ ಕೇಳಿದ್ದೇನೆ. ವೈದಿಕ ನೆಲೆಯ ಸಮುದಾಯಗಳಲ್ಲಿ ಮಹಿಳೆಯನ್ನು ಮುಟ್ಟಾದರೆ ಹೀಗೆ ದೂರ ಅಟ್ಟುವ ತನ್ಮೂಲಕ ಅವಳ ಮುಟ್ಟಿನ ಬಗ್ಗೆ, ಗರ್ಭದ ಬಗ್ಗೆ ತಿರಸ್ಕಾರ, ಅಸಹ್ಯ, ಕೀಳು ಭಾವನೆ ಹುಟ್ಟುಹಾಕಲಾಗುತ್ತದೆ."[೬] ಮನುಷ್ಯನ ಜನನ ಮಹಿಳೆಯ ಮುಟ್ಟಿನ ಮೂಲಕವೇ ಆಗಿದೆ ಎಂಬುದನ್ನು ಮರೆತು ಮುಟ್ಟಿನ ಬಗೆಗೆ ಕೀಳರಿಮೆ ಬೆಳಸಿಕೊಂಡಿದ್ದಾರೆ. ದೇವರು ಧರ್ಮದ ಹೆಸರಿನಲ್ಲಿ ಮಹಿಳೆಯನ್ನು ಮತ್ತಷ್ಟು ಶೋಷಣೆಗೆ ಒಳಪಡಿಸಲಾಗುತ್ತಿದೆ. ಒಂದು ವೇಳೆ ಮಹಿಳೆಯ ಮುಟ್ಟು ಇಲ್ಲವೆಂದಿದ್ದರೆ ಈ ಮಾನವ ಕುಲ ಇಲ್ಲವಾಗಿರುತ್ತಿತ್ತು. ಎಂಬುದನ್ನು ಅರಿತಿದ್ದರೂ ಸಹ ಮಹಿಳೆಯನ್ನು ಈ ಸಮಾಜ ಕೆಟ್ಟದಾಗಿ ನಡೆಸಿಕೊಳ್ಳುವುದನ್ನು ಕಾಣುತ್ತೇವೆ. ಕೆಲವು ಸಮುದಾಯಗಳಲ್ಲಿ ಮಹಿಳೆ ಮುಟ್ಟಾದ ಸಂದರ್ಭದಲ್ಲಿ ಮನೆಯಿಂದ, ಊರಿನಿಂದ ಸುಮಾರು ಮೂರು ದಿನಗಳ ಕಾಲ ಹೊರಗೆ ಕಳೆಯಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಮಹಿಳೆ ಒತ್ತಡಕ್ಕೆ ಸಿಲುಕಿ ಆರೋಗ್ಯ ಹಾಳಾಗುವುದೇ ಹೆಚ್ಚು. ಸ್ವಚ್ಛತೆಗಾಗಿ ನೀರಿನ ವ್ಯವಸ್ಥೆಯೂ ಇರುವುದಿಲ್ಲ ಇಂತಹ ಸಮಯದಲ್ಲಿ ಆಕೆ ಒತ್ತಡದಲ್ಲಿಯೇ ದಿನ ದೂಡಬೇಕಾಗುತ್ತದೆ ಇಷ್ಟಾದರೂ ಸಹ ಇಂತಹ ಆಚರಣೆ ತಪ್ಪು ಎಂಬುದನ್ನು ಕೆಲವು ಸಮುದಾಯಗಳು ಒಪ್ಪಿಕೊಳ್ಳಲು ಸಿದ್ಧವಿಲ್ಲ. ಮಹಿಳೆಯರೂ ಕೂಡ ಈ ಪದ್ಧತಿಯನ್ನು ಒಪ್ಪಿಕೊಂಡು ತನ್ನನ್ನ ತಾನು ಒಗ್ಗಿಸಿಕೊಂಡಿದ್ದಾಳೆ. ವೈದಿಕ ಸಂಸ್ಕೃತಿಯ ಇಂತಹ ಅನಿಷ್ಟ ಆಚರಣೆಗಳನ್ನು ಮಾಡಿಕೊಂಡು ಬರಲಾಗಿದೆ. ಅದೇ ಸಂಸ್ಕೃತಿಯನ್ನು ಉಳಿದ ಎಲ್ಲಾ ಸಮುದಾಯವು ಶ್ರೇಷ್ಠ ಎಂಬಂತೆ ಪರಿಪಾಲಿಸಿಕೊಂಡು ಬಂದಿರುವುದನ್ನು ಕಾಣಬಹುದಾಗಿದೆ. ಮಹಿಳೆಯರ ಆರೋಗ್ಯದ ಸ್ಥಿತಿಯ ಬಗ್ಗೆ ವಿವರವಾಗಿ ತಮ್ಮ ವಿಚಾರ ಸಾಹಿತ್ಯದಲ್ಲಿ ಅಭಿವ್ಯಕ್ತಿಸಿದ್ದಾರೆ.

"ಪ್ರತಿ ಹೆಣ್ಣಿನ ಮನದಲ್ಲೂ ಋತುಸ್ರಾವ ಮೈಲಿಗೆಯೆಂಬ ಭಾವ ಹುಟ್ಟಿ ಬೆಳೆಯುವುದರ ಹಿಂದೆ ಪುರುಷ ಪ್ರಧಾನ ಸಮಾಜ ಹೆಣ್ಣನ್ನು ಅಂಕೆಯಲ್ಲಿಡಲು ಮಾಡಿದ ಹುನ್ನಾರಗಳಾಗಿವೆ. ಮುಟ್ಟುಮೈಲಿಗೆಯನ್ನೇ ನೆಪ ಮಾಡಿಕೊಂಡು ಎಷ್ಟೋ ಧಾರ್ಮಿಕ ಕೌಟುಂಬಿಕ ಹಕ್ಕುಗಳನ್ನು

ಆಕೆಗೆ ನಿರಾಕರಿಸಲಾಗಿದೆ. ಆದರೆ ಈ ಕಾಲದಲ್ಲೂ ಅವು ಹುನ್ನಾರಗಳೆಂದು ಆಕೆಗೆ ಅರ್ಥವಾಗುತ್ತಿಲ್ಲ. ಹೆಣ್ಣಿನ ದೇಹದ ರಚನೆ, ಅಂಗಾಂಗಗಳ ಕಾರ್ಯ ವೈಖರಿಯ ಕುರಿತು ಕಲಿತವರಲ್ಲೂ ತಿಳುವಳಿಕೆಯ ಕೊರತೆಯಿದೆ. ಋತುಚಕ್ರದ ಕುರಿತು ವೈಜ್ಞಾನಿಕ ವಿಷಯಗಳನ್ನು ತಿಳಿದುಕೊಂಡರಾದರೂ ತಪ್ಪು ಗ್ರಹಿಕೆಗಳು ದೂರವಾಗಬಹುದು."[೭]

ಇದುವರೆಗೂ ಹೆಣ್ಣಿಗೆ ಮುಟ್ಟನ್ನು ಮೈಲಿಗೆ ಎಂತಲೇ ನಂಬಿಸಲಾಗಿದೆ. ಹೆಣ್ಣಿನ ಋತುಸ್ರಾವವನ್ನೆ ನೆಪವಾಗಿಸಿ ಅವಳನ್ನ ಧಾರ್ಮಿಕ ಕಾರ್ಯಗಳಲ್ಲಿ ಭಾಗಿಯಾಗಲಾರದಂತೆ ವಂಚಿಸಿಕೊಂಡೇ ಬರಲಾಗಿದೆ. ವೈಜ್ಞಾನಿಕವಾಗಿ ಚಿಂತಿಸುವುದರ ಜೊತೆಯಲ್ಲಿ ಋತುಸ್ರಾವದ ಬಗ್ಗೆ ಇರುವ ಅಪನಂಬಿಕೆಯನ್ನು ಹೋಗಲಾಡಿಸಬೇಕಾಗಿದೆ. ಅಲ್ಲದೆಯೇ ಹೆಣ್ಣು ಒಂದು ಕುಟುಂಬವನ್ನು ಬೆಳೆಸುವಂತಹ ಶಕ್ತಿಯನ್ನು ಹೊಂದಿರುವಂತಹವಳು ಎಂಬುದನ್ನ ಎಲ್ಲರು ಮನವರಿಕೆ ಮಾಡಿಕೊಳ್ಳಬೇಕಾದ ಅಗತ್ಯವಿದೆ. ಎಂಬುದು ಈ ಲೇಖಕಿಯ ವಾದವಾಗಿದೆ.

ಎಲ್ಲಾ ಧರ್ಮಗಳು ಮಹಿಳಾ ವಿರೋಧಿಯೇ ಆಗಿವೆ. ಅದರಲ್ಲಿಯೂ ಹಿಂದೂ ಧರ್ಮವು ಎಲ್ಲದ್ದಕ್ಕಿಂತ ಮೊದಲ ಸ್ಥಾನದ್ದಾಗಿದೆ. ಇದಕ್ಕೆ ಉದಾಹರಣೆಯಾಗಿ ನೋಡುವುದಾದರೆ, ಶಬರಿ ಮಲೈ ಪ್ರಕರಣವೇ ಸಾಕ್ಷಿ. ಶಬರಿಮಲೈ ದೇವಾಲಯಕ್ಕೆ ಎಲ್ಲಾ ಜಾತಿಯ ಪುರುಷ ಭಕ್ತರು ಈ ದೇವಾಲಯಕ್ಕೆ ಹೋಗಲು ಮುಕ್ತವಾದ ಪ್ರವೇಶವಿದೆ. ಯಾವುದೇ ಒಂದು ಜಾತಿಗೆ ಸೀಮಿತವಾಗಿರದ ಏಕೈಕ ದೇವಾಲಯವಾಗಿದೆ. ಆದರೆ ಮಹಿಳೆಯರಿಗೆ ಮಾತ್ರ ಸುತಾರಾಂ ಪ್ರವೇಶವನ್ನ ನಿರಾಕರಿಸಿದೆ. ಅದಕ್ಕೆ ಕಾರಣವನ್ನ ಶಬರಿಮಲೈನ ಅಧಿಕಾರಿಗಳು ಹೀಗೆ ಹೇಳುತ್ತಾರೆ. "ದೇವಸ್ಥಾನವನ್ನು ತಲುಪಲು ಕಾಡುದಾರಿಯಲ್ಲಿ ಎಂಟು ಕಿಲೋಮೀಟರ್ ನಡೆಯುವುದು ಮಹಿಳೆಯರಿಗೆ ಕಷ್ಟ ಮಹಿಳೆಯರನ್ನು ನೋಡಿದರೆ ಅಯ್ಯಪ್ಪನ ಬ್ರಹ್ಮಚಾರಿತ್ರ್ಯ ಕಳಂಕಗೊಳ್ಳುತ್ತದೆ. ಶಬರಿಮಲೈಗೆ ತೀರ್ಥಯಾತ್ರೆ ಕೈಗೊಳ್ಳುವ ಮುನ್ನ ಆಚರಿಸಬೇಕಿರುವ ೪೧ ದಿನಗಳ ವ್ರತವನ್ನು ಪಾಲಿಸುವುದು ಹೆಂಗಸರಿಗೆ ಕಷ್ಟ. ಮಹಿಳೆಯರು ಜೊತೆಗೆ ಬಂದರೆ ಪುರುಷರಲ್ಲಿ 'ಕೆಟ್ಟ ಆಲೋಚನೆಗಳು' ಮೂಡುತ್ತವೆ! ಮಹಿಳೆಯರಿಗೆ ಪ್ರವೇಶ ನೀಡಿದರೆ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು ಕಷ್ಟವಾಗುತ್ತದೆ. ಮುಟ್ಟಾಗಿರುವ ಮಹಿಳೆಯರು ಕಾಡಿನ ಪ್ರಾಣಿಗಳನ್ನು ಆಕರ್ಷಿಸಿ ಇತರೆ ಯಾತ್ರಾರ್ಥಿಗಳಿಗೆ ಅಪಾಯ ತರುತ್ತಾರೆ. ದೇವರಿಗೆ ಮಹಿಳೆಯನ್ನು ಕಂಡರೆ ಆಗುವುದಿಲ್ಲ."[೮] ಎಂತಹ ಕ್ಷುಲಕ ಕಾರಣವನ್ನು ಈ ಅಧಿಕಾರಿಗಳು ನೀಡುತ್ತಾರೆ. ಪುರುಷನ ಬಲಹೀನತೆಯನ್ನ ಮುಚ್ಚಿಕೊಳ್ಳಲು ಮಹಿಳೆಯ ಮೇಲೆ ತಪ್ಪನ್ನ ಹೊರಿಸುತ್ತಿದ್ದಾನೆ. ತನ್ನ ಉಳಿಯುವಿಕೆಗಾಗಿ ಹೆಣ್ಣು ಮತ್ತು ಅವಳ ಮುಟ್ಟಿನ ಬಗ್ಗೆ ಅಪಪ್ರಚಾರವನ್ನು ಮಾಡಲಾಗಿದೆ. ಮುಟ್ಟಾದ ಮಹಿಳೆ ಕಾಡುಪ್ರಾಣಿಗಳನ್ನ ಆಕರ್ಷಿಸಲು ಹೇಗೆ ಸಾಧ್ಯ? ಅಲ್ಲದೆ ೪೧ ದಿನಗಳ ವ್ರತವನ್ನ ಆಚರಿಸಲು ಅವಳಿಂದ ಸಾಧ್ಯವಿಲ್ಲ ಎನ್ನುವುದನ್ನು ಈ ಪುರುಷನೇ ಹೇಗೆ ನಿರ್ಧಾರ ಮಾಡಿಯಾನು? ತನ್ನಲ್ಲಿನ ದೌರ್ಬಲ್ಯವನ್ನು ಮುಚ್ಚಿಕೊಳ್ಳಲು ಮುಟ್ಟು ಮೈಲಿಗೆ ಎಂಬ ನೆಪ ಹೇಳುವುದಲ್ಲದೆ 'ದೇವರ ಬ್ರಹ್ಮಚಾರಿತ್ರ್ಯ ಅಪವಿತ್ರಗೊಳ್ಳುತ್ತದೆ' ಎಂದು ಹೇಳುವುದರ

ಹುನ್ನಾರಗಳು ಅರ್ಥೈಸಿಕೊಳ್ಳಬೇಕಾಗಿದೆ. ದೇವರು ಎಲ್ಲರಿಗೂ ಸಮಾನವಲ್ಲವೆ? ದೇವರ ಸೃಷ್ಟಿಯಲ್ಲಿ ಹೆಣ್ಣು ಬೇರೆ ಗಂಡು ಬೇರೆಯಾಗಲು ಸಾಧ್ಯವಿದೆಯೇ? ಹೀಗೆ ಹಲವಾರು ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಪುರುಷಪ್ರಧಾನ ಸಮಾಜದಲ್ಲಿ ಹೆಣ್ಣಿನ ಸಮಾನ ಸ್ಥಾನಮಾನದ ಬಗ್ಗೆ ಎಂದಿಗೂ ನಿರಾಕರಣೆಯಿದೆ. ಹಿಂದೂ ಧರ್ಮದೊಳಗೆ ಹೆಣ್ಣನ್ನು ನಡೆಸಿಕೊಳ್ಳುವ ರೀತಿ ಮತ್ತು ಅವಳನ್ನು ಹಿಂಸಿಸುವ ಬಗೆಯನ್ನು ಗೌರಿಲಂಕೇಶ್ ಅವರು ದಿಟ್ಟವಾಗಿ ಖಂಡಿಸಿದ್ದಾರೆ. ಇದು ಹಿಂದೂ ಧರ್ಮದ ಕಥೆಯಾದರೆ, ಮುಸ್ಲಿಂ ಧರ್ಮದ ಮಹಿಳೆಯರ ಕಥೆ ಮತ್ತೊಂದು ರೀತಿಯಾದದ್ದಾಗಿದೆ.

"ಇಮ್ರಾನಳ ವಿಷಯದಲ್ಲಂತೂ ಧರ್ಮ ಗುರುಗಳು ಖುರ್‌ಆನಿನ ನಿಯಮಗಳನ್ನೇ ಅವಮಾನಿಸಿದ್ದಾರೆ. ಖುರಾನಿನ ನಿಯಮದ ಪ್ರಕಾರ ಮಾವ ಮತ್ತು ಸೊಸೆಯ ಸಂಬಂಧವೆಂಬುದು ತಂದೆ ಮಗಳ ಸಂಬಂಧ. ಒಂದು ವೇಳೆ ಮಗನು ಸೊಸೆಗೆ ತಲಾಖ್ ನೀಡಿದರೂ ಅಥವಾ ಸತ್ತರೂ ಮಾವ ಮತ್ತು ಸೊಸೆಯ ಸಂಬಂಧ ಮುರಿಯುವುದಿಲ್ಲ. ಹಾಗೆಯೇ ಅತ್ತೆ ಮತ್ತು ಅಳಿಯನ ಸಂಬಂಧ ಕೂಡಾ. ಅಳಿಯ ಮಗಳಿಗೆ ತಲಾಖ್ ನೀಡಿದರೂ ಅಲ್ಲಿ ತಾಯಿ ಮತ್ತು ಮಗನಂತಿರುವ ಸಂಬಂಧ ಹಾಗೆಯೇ ಉಳಿಯಬೇಕಾಗುತ್ತದೆ ಉಳಿಯುತ್ತದೆ. ನಿಯಮ ಈ ರೀತಿ ಇರುವಾಗ ಮಾವ ಸೊಸೆಯನ್ನು ನಿಖಾಹ್ ಮಾಡಿಕೊಳ್ಳಲಿ ಎಂದು ಧರ್ಮಗುರುಗಳು ತೀರ್ಪು ನೀಡಿರುವುದಾದರೂ ಹೇಗೆ? ಇವರು ಅನುಸರಿಸುತ್ತಿರುವ ಈ ನಿಯಮ ಯಾವುದು? ಅತ್ಯಾಚಾರ ಮಾಡಿದವರನ್ನು ಕಲ್ಲಿನಿಂದ ಹೊಡೆದು ಕೊಲ್ಲಬೇಕೆಂಬ ಶಿಕ್ಷಾಕ್ರಮ ಎಲ್ಲಿ ಹೋಯಿತು? ಅಥವಾ ಪುರುಷ ಪ್ರಧಾನ ಸಮಾಜ ಈವರೆಗೆ ಗಂಡಸರು ಕೈಗೊಳ್ಳುವ ಅಪರಾಧಗಳಿಗೆ ಹೆಂಗಸರಿಗೆ ಶಿಕ್ಷೆ ನೀಡಿದಂತೆ ಅತ್ಯಾಚಾರಿಗೆ ಆ ಹೆಣ್ಣನ್ನು ಮದುವೆ ಮಾಡಿಕೊಡುವ ಪರಿಪಾಠವನ್ನಾರಂಭಿಸಿ ಇದೂ ಕೂಡಾ ಧಾರ್ಮಿಕ ನಿಯಮವೆಂದು ಸಮಾಜವನ್ನು ನಂಬಿಸಲು ಹೊರಟಿದೆಯೇ? ತನ್ನ ಐದು ಮಕ್ಕಳ ತಂದೆಯನ್ನು ಇನ್ನು ಮುಂದೆ ಮಗನೆಂದು ತಿಳಿದುಕೊಳ್ಳಬೇಕೆನ್ನುವ ಈ ಧಾರ್ಮಿಕ ಗುರುಗಳು ಮಾನಸಿಕ ಆಸ್ಪತ್ರೆಯಿಂದ ತಪ್ಪಿಸಿಕೊಂಡು ಬಂದವರಾಗಿರಬಹುದೆಂಬ ಸಂದೇಹ ನನ್ನನ್ನು ಕಾಡುತ್ತಿದೆ."[7]

ಧಾರ್ಮಿಕತೆಯ ಹೆಸರಿನಲ್ಲಿ ಇನ್ನು ಎಷ್ಟೆಲ್ಲಾ ಸಂಕಷ್ಟಗಳನ್ನ ಈ ಮಹಿಳೆಯರು ಎದರಿಸಬೇಕಾಗಿದೆಯೋ? ಪುರುಷನು ತನ್ನ ಅಧೀನದಲ್ಲಿಟ್ಟುಕೊಳ್ಳಲು ಏನೆಲ್ಲಾ ನಿಯಮಗಳನ್ನು ಜಾರಿಗೆ ತರುತ್ತಾನೆ. ಸಂಬಂಧಗಳ ಬಗೆಗೆ ಅರಿವಿದ್ದರೂ ಕೂಡ ಅದನ್ನ ಉಲ್ಲಂಘಿಸಿ ತಂದೆಯಂತಿರುವ ಮಾವ, ಮಗಳಂತಿರುವ ಸೊಸೆಯನ್ನು ಮದುವೆಯಾಗುವಂತೆ ಆದೇಶಿಸುವುದು ಅದೆಂತಹ ನಿಯಮವಿರಬಹುದು. ಒಳ್ಳೆಯ ಸಂದೇಶವನ್ನು ನೀಡಬೇಕಾಗಿರುವ ಧರ್ಮಗುರುಗಳು ಹೊಸ ಪದ್ಧತಿಯನ್ನು ಜಾರಿಮಾಡುವ ಮೂಲಕ ಮುಸ್ಲಿಂ ಮಹಿಳೆಯನ್ನು ಇನ್ನಷ್ಟು ಕ್ರೂರ ಪರಿಸ್ಥಿಗೆ ತಳ್ಳುವಂತಹ ಕೆಲಸವನ್ನು ಮಾಡಲಾಗುತ್ತಿದೆ. ಅಲ್ಲದೆಯೆ ಧರ್ಮಗ್ರಂಥದಲ್ಲಿರುವ ನಿಯಮಗಳನ್ನು ಪುರುಷನು ತನಗೆ ಬೇಕಾದ ಹಾಗೆ ತಿರುಚಿಕೊಂಡು ಮಹಿಳೆಯನ್ನು ಇನ್ನಷ್ಟು ಶೋಷಣೆ ಮಾಡುತ್ತಿರುವ ಧಾರ್ಮಿಕ ಕ್ರೌರ್ಯವನ್ನು ಸಾ.ರಾ.ಅಬೂಬಕ್ಕರ್ ಅವರು ವಿವರಿಸಿದ್ದಾರೆ.

"ತಿರುವನಂತ ಪುರದ ಭೀಮಪಲ್ಲಿಯಲ್ಲಿ ನಡೆದ ಸುಲೇಖ ಬೀವಿಯ ಪ್ರಕರಣ ಧರ್ಮದ ಮತ್ತೊಂದು ಮುಖವನ್ನು ತೋರಿಸುತ್ತದೆ. ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡ ಜಮಾತ್ನ ಕಾರ್ಯದರ್ಶಿ ಮತ್ತು ಅಧ್ಯಕ್ಷರಿಬ್ಬರೂ ಎಂಟು ಮಕ್ಕಳ ತಾಯಿ ಹಾಗೂ ಅಜ್ಜಿಯೂ ಆಗಿರುವ ಸುಲೇಖ ಬೀವಿಯ ಮೇಲೆ ವ್ಯಭಿಚಾರ ಮತ್ತು ಮಧ್ಯಪಾನದ ಆರೋಪ ಹೊರಿಸಿ ತಲೆ ಬೋಳುಮಾಡುವ ಮತ್ತು ನೂರ ಒಂದು ಛಡಿ ಏಟುಗಳ ಶಿಕ್ಷೆ ವಿಧಿಸಿದರು. ದಿಟ್ಟತನದಿಂದ ಪರಿಸ್ಥಿತಿಯನ್ನು ಎದುರಿಸಿದ ಸುಲೇಖ ಮತ್ತು ಅವಳ ಪತಿ ಕಾನೂನಿನ ಮೂಲಕ ಜಮಾತ್‌ಗೆ ಉತ್ತರಿಸಿದರೂ ನೆತ್ತಿಗೇರಿದ ಜಮಾತ್ ಪಿತ್ತ ಇಳಿಯಲಿಲ್ಲ. ಸರ್ಕಾರ ಮತ್ತು ಪತ್ರಿಕೆಗಳ ಪ್ರಯತ್ನದಿಂದ ಜಮಾತ್ ತಪ್ಪೊಪ್ಪಿಕೊಳ್ಳುವ ಪ್ರಸಂಗ ಬಂದದ್ದು ಈಗ ಎಲ್ಲಾ ಬಯಲಾಗಿರುವ ವಿಷಯ. ಕೋಮಿನ ಅವತಾರ ತಾಳಿರುವ ಈ ಧಾರ್ಮಿಕ ಸಂಸ್ಥೆಯ ಪುಂಡತನಕ್ಕೆ ಕೊನೆ ಎಂದು?"[೧೦]

ಜಮಾತ್‌ನ ಅಧ್ಯಕ್ಷರ ತಪ್ಪನ್ನು ತಪ್ಪೆಂದು ಸಾಬೀತು ಮಾಡಿದರೂ ಕೂಡ ಅವರ ದ್ವೇಷ ಕಡಿಮೆಯಾಗಿಲ್ಲ. ಸುಲೇಖ ಬೀವಿಯು ತಾನು ಮಾಡದೇ ಇರುವ ತಪ್ಪಿಗೆ ಶಿಕ್ಷೆ ಅನುಭವಿಸಿದರು. ಆದರು ತನ್ನ ಛಲ ಬಿಡದೆ ತನ್ನ ಪತಿಯೊಂದಿಗೆ ಸರ್ಕಾರ ಮತ್ತು ಕಾನೂನಿನ ಮೂಲಕ ಜಮಾತ್‌ಗೆ ಉತ್ತರವನ್ನು ನೀಡಿದ್ದೂ ಆಯ್ತು. ಸರ್ಕಾರಗಳು ಮತ್ತು ಕಾನೂನು ಏನೆಲ್ಲಾ ಕ್ರಮಕೈಗೊಂಡರೂ ಸಹ ಧರ್ಮದ ಹೆಸರಿನಲ್ಲಿ ಮಹಿಳೆಯನ್ನು ಶೋಷಣೆ ಮಾಡುತ್ತಿರುವುದು ಮಾತ್ರ ಹೆಚ್ಚಾಗುತ್ತಲೇ ಇದೆ. ಅಲ್ಲಿನ ಅಧಿಕಾರಿಗಳು ತಮ್ಮ ಮನಸ್ಸಿಗೆ ಬಂದಂತೆ ನೀತಿ ನಿಯಮಗಳನ್ನು ಬದಲಾಯಿಸಿಕೊಳ್ಳುತ್ತಾ ಅವರವರ ಅನುಕೂಲಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಅಲ್ಲದೆಯೇ ದ್ವೇಷ, ಅಸೂಯೆಯನ್ನು ಕೂಡ ಬಿತ್ತುವಂತಹ ಮನಸ್ಥಿತಿಗೆ ತಲುಪುತ್ತಿರುವುದು ಆಘಾತವನ್ನುಂಟುಮಾಡುವ ವಿಷಯವೇ ಆಗಿದೆ.

"ಮತಾಂತರ ಹೊಂದಿ ಮತ್ತೊಬ್ಬರನ್ನು ಮದುವೆಯಾಗಿ ಮುಸ್ಲಿಂ ವೈಯಕ್ತಿಕ ಕಾನೂನಿನ ಅಡಿಯಲ್ಲಿ ಆಶ್ರಯ ಪಡೆದು ತಮ್ಮನ್ನು ವಿಚ್ಛೇದಿಸದೆ, ಜೀವನಾಂಶವನ್ನೂ ಕೊಡದೆ ವಂಚಿಸಿದ ತಮ್ಮ ಗಂಡಂದಿರ ನಡವಳಿಕೆಯನ್ನು ನಾಲ್ಕು ಜನ ಪರಿತ್ಯಕ್ತೆಯರು ನ್ಯಾಯಾಲಯದಲ್ಲಿ ಪ್ರಶ್ನಿಸಿದರು. ಈ ಸಂದರ್ಭದಲ್ಲಿ ೧೯೯೫ಮೇ ಹತ್ತರಂದು ಸಂವಿಧಾನದ ೪೪ನೇ ವಿಧಿಯಲ್ಲಿ ಸೂಚಿತವಾದ ಸಮಾನ ನಾಗರಿಕ ಸಂಹಿತೆಯ ಬಗ್ಗೆ ಗಮನಹರಿಸಲು ಸರ್ವೋಚ್ಚ ನ್ಯಾಯಾಲಯವು ಸರ್ಕಾರವನ್ನು ಕೇಳಿತು. ಹತ್ತು ವರ್ಷದ ಹಿಂದಿನ ಕಥೆಯೇ ಮರುಕಳಿಸಿತು. ಮಹಿಳೆಯರ ಸಮಸ್ಯೆಗಳು ನ್ಯಾಯಾಲಯಕ್ಕೆ ಹೋಗುತ್ತವೆ. ವೈಯಕ್ತಿಕ ಕಾನೂನಿನ ಅಸ್ತಿತ್ವದಿಂದ ಅವರ ಸಮಸ್ಯೆಗಳು ಪರಿಹಾರಗೊಳ್ಳದೆ ಉಳಿಯುತ್ತದೆ. ಆ ಮಿತಿಯನ್ನು ಗಮನಿಸಿದಾಗೆಲ್ಲ ಸಮಾನ ನಾಗರಿಕ ಸಂಹಿತೆಯ ನೆನಪಾಗುತ್ತದೆ. ಈ ಕಾಯ್ದೆಯಿಂದ ತಮ್ಮ ಅನನ್ಯತೆಗೆ ಧಕ್ಕೆ ಎಂದು ಭಾವಿಸುವುದರಿಂದ ವಿರೋಧಗಳು ಬರುತ್ತವೆ. ಸವಮಾನ ನಾಗರಿಕ ಸಂಹಿತೆಗೆ ಎದುರಾಗುತ್ತಿರುವ ವಿರೋಧ ಕಾನೂನಿಗೆ ಸಂಬಂಧಿಸಿದ್ದಾಗಿರದೆ ಬಹುಸಂಖ್ಯಾತ, ಅಲ್ಪಸಂಖ್ಯಾತ ಸಮೂಹದ ನಡುವಿನ ಆತಂಕಕ್ಕೆ ಸಂಬಂಧಿಸಿದೆ. ವೈಯಕ್ತಿಕ ಕಾನೂನು ಎಂಬುದು ಮತೀಯ ಅನನ್ಯತೆಯ, ಮತೀಯ ಸಂಘಟನೆಗಳ ಸೋಲು

ಗೆಲುವಿನ ಪ್ರಶ್ನೆಯಾಗಿ ಮಾರ್ಪಟ್ಟಿರುವುದರಿಂದ ಸಮಾನ ನಾಗರಿಕ ಸಂಹಿತೆಯನ್ನು ತರುವುದು ಸಾಮಾಜಿಕ ಅಶಾಂತಿ, ವಿಪ್ಲವದ ಪ್ರಶ್ನೆಯಾಗಿದೆ."[೧೧] ಗಂಡಸರು ತಪ್ಪುಮಾಡಿದರೆ ಯಾವುದೇ ರೀತಿಯಿಂದಲೂ ಶಿಕ್ಷೆಯಿಂದ ರಿಯಾಯಿತಿ ದೊರೆಯುತ್ತದೆ. ಅದೇ ಮಹಿಳೆಯರು ತಪ್ಪು ಮಾಡಿದರೆ ರಿಯಾಯಿತಿ ಇರಲಿ ಅವಳ ಮಾತುಗಳನ್ನು ಆಲಿಸಲೂ ಸಮಯವಿರುವುದಿಲ್ಲ. ಮುಸ್ಲಿಂ ಮಹಿಳೆಯರು ತಮ್ಮ ಹಕ್ಕನ್ನು ಕೇಳಲೋದರೆ ಧಾರ್ಮಿಕತೆಯ ಹೆಸರಿನಲ್ಲಿ ಅವಳನ್ನ ವಂಚಿಸಲಾಗುತ್ತದೆ. ಅದೇ ಪುರುಷ ಧರ್ಮದ ಆಶ್ರಯದಡಿಯಲ್ಲಿ ಆಕೆಗೆ ವಂಚಿಸಿದರೂ ಅವನ ಪರವಾಗಿಯೇ ಈ ಧಾರ್ಮಿಕ ಗುರುಗಳು ತೀರ್ಪು ನೀಡುತ್ತಾರೆ. ಮುಸ್ಲಿಂ ಗಂಡಸರು ಎಷ್ಟು ಮದುವೆಯಾದರು ನಡೆಯುತ್ತದೆ. ಒಬ್ಬರಿಗೆ ತಲಾಖ್ ನೀಡದೇ, ಅವರಿಗೆ ಜೀವನಾಂಶ ನೀಡದೆಯೆ ಮತ್ತೊಂದು ಧರ್ಮಕ್ಕೆ ಮತಾಂತರ ಹೊಂದಿ ಮದುವೆಯಾದದ್ದನ್ನು ವಿರೋಧಿಸಿದರು. ವೈಯಕ್ತಿ ಕಾನೂನಿನ ಅಡಿಯಲ್ಲಿ ಕಾನೂನಿನ ಮೊರೆ ಹೋದರು. ಆದರೆ ಮಹಿಳೆಯರ ಸಮಸ್ಯೆಗಳು ನ್ಯಾಯಾಲಯವನ್ನು ತಲುಪಿದವೆ ವಿನಃ ಬೇಗ ಇತ್ಯರ್ಥವಾಗಲಿಲ್ಲ. ಮಹಿಳೆಯರ ಯಾವುದೇ ಸಮಸ್ಯೆಯಾಗಲಿ ಬೇಗ ಪರಿಹಾರವಾಗುವುದೇ ಇಲ್ಲ ಎಂಬುದು ಲೇಖಕಿಯ ವಾದವಾಗಿದೆ.

ಹಿಂದೂ ಧರ್ಮದಲ್ಲಿ ಮಹಿಳೆಯರ ಮೇಲೆ ಹಲವಾರು ಕಟ್ಟುಪಾಡುಗಳನ್ನು ಹೇರಿಕೊಂಡೇ ಬರಲಾಗಿದೆ. ಇಂತಹ ಕಟ್ಟುಪಾಡುಗಳಲ್ಲಿ ವಿಧವೆಯರು ದೇವಾಲಯದ ಪ್ರವೇಶ ನಿಷೇಧ, ಯಾವುದೇ ಮಂಗಳಕರ ಕಾರ್ಯಗಳಲ್ಲಿ ಭಾಗಿಯಾಗಬಾರದು, ಹೊಸಿಲು ದಾಟಿ ಹೊರ ಹೋಗಬಾರದು. ಹೀಗೆ ಅನೇಕ ಕಟ್ಟುಪಾಡುಗಳನ್ನು ವಿಧಿಸಿದೆ. ವೈದಿಕಶಾಹಿ ನೀತಿಯನ್ನು ಎಲ್ಲರ ಮೇಲೆಯು ಹೇರಲಾಗಿದೆ. ಇದನ್ನ ಅನಾದಿಕಾಲದಿಂದಲೂ ಮಹಿಳೆಯರೂ ಕೂಡ ಪಾಲಿಸಿಕೊಂಡೆ ಬರಲಾಗಿದೆ. ಇಂತಹ ಆಚರಣೆಯನ್ನು ಮುರಿದು ವಿಧವೆ ಮಹಿಳೆಯರಿಗೆ ದೇವಾಲಯದ ಪೂಜೆ ಮಾಡಲು ಅವಕಾಶ ಮಾಡಿಕೊಡುವುದರ ಮೂಲಕ ಸಾಮಾಜಿಕವಾಗಿ ಬದಲಾವಣೆಗೆ ಮುಂದಾಗಿರುವುದನ್ನು ನೋಡಬಹುದು. "ಕುದ್ರೋಳಿಯ ಗೋಕರ್ಣನಾಥೇಶ್ವರ ದೇವಸ್ಥಾನದಲ್ಲಿ ಇತ್ತೀಚೆಗೆ ಎರಡು ಪ್ರಮುಖ ಘಟನೆಗಳು ನಡೆದಿವೆ. ಗಂಡ ಸತ್ತ ಮಹಿಳೆಯರಿಗೆ ಕುಂಕುಮ ಹೂ ಕೊಟ್ಟು ಅವರಿಂದಲೇ ರಥ ಎಳೆಸಲಾಗಿದೆ. ಮುಂದುವರೆದು ಸಾವಿರಾರು ಮಹಿಳೆಯರು ಇನ್ನು ಮುಂದೆ ತಮ್ಮ ಗಂಡ ಸತ್ತಲ್ಲಿ ಮಾಂಗಲ್ಯ ಕುಂಕುಮ ತೆಗೆಯುವುದಿಲ್ಲ ಎಂದು ಪ್ರತಿಜ್ಞೆ ಮಾಡಿರುವರು. ಮತ್ತು ಈ ಪ್ರಕ್ರಿಯೆಯಲ್ಲಿ ಸಾವಿರಾರು ಮಹಿಳೆಯರು ಭಾಗವಹಿಸುವುದು ನೋಡಿದರೆ ಮಹಿಳೆಯರು ಬದಲಾವಣೆಗೆ ಮಾನಸಿಕವಾಗಿಯೂ ಸಿದ್ಧರಾಗಿರುವರು ಎಂಬುದು ಸ್ಪಷ್ಟ. ಭಾರತದ ಎಲ್ಲಾ ಮಹಿಳೆಯರು ಘನತೆ ಮತ್ತು ಗೌರವದಿಂದ ಬದುಕ ಬಯಸುತ್ತಾರೆ. ಅದಕ್ಕಾಗಿ ಅನೇಕ ಚಳುವಳಿ ನಡೆದಿದೆ. ಧಾರ್ಮಿಕ ಆಚರಣೆ ಮತ್ತು ನಂಬಿಕೆಗಳ ಹೆಸರಿನಲ್ಲಿ ಮಹಿಳೆಯರನ್ನು ಹತ್ತಿಕ್ಕುತ್ತಿರುವ ಈ ಹೊತ್ತಿನಲ್ಲಿ ಧಾರ್ಮಿಕ ಆಚರಣೆಯ ಹೆಸರಿನಲ್ಲಿಯೇ ಇಂಥ ಪ್ರಯತ್ನ ಮಾಡಿರುವುದು ಮತ್ತು ಇದರಲ್ಲಿ ಮಹಿಳೆಯರು ಭಾಗವಹಿಸಿದ್ದು ಅಭಿನಂದನಾರ್ಹವಾದದ್ದು. ಜನಾರ್ಧನ ಪೂಜಾರಿಯವರು ಸ್ವತಃ ತೊಡಗಿರುವುದು ಕೂಡಾ ಸ್ಲಾಘನೀಯವೇ."[೧೨]

ಇಪ್ಪತ್ತೊಂದನೇ ಶತಮಾನದಲ್ಲಿದ್ದರೂ ಕೂಡ ವೇದಗಳ ಕಾಲದಿಂದ ಬಂದಿರುವ ಮೂಢನಂಬಿಕೆ, ಆಚರಣೆ, ಸಂಪ್ರದಾಯಗಳನ್ನ ಮುಂದುವರೆಸಿಕೊಂಡೇ ಬರಲಾಗಿದೆ. ಅಂತಹ ಕಾರ್ಯಗಳಲ್ಲಿ ವಿಧವೆಯರಿಗೆ ಸಂಬಂಧಿಸಿದ ಆಚರಣೆಯೂ ಕೂಡ ಹೌದು. ಕುಂಕುಮ, ಬಳೆಗಳನ್ನು ಗಂಡ ಸತ್ತಾಗ ತೆಗೆಯುವ ಪದ್ಧತಿ ಮತ್ತು ದೇವಾಲಯದ ಪ್ರವೇಶ ನಿರಾಕರಣೆ ಈ ಎರಡು ಆಚರಣೆಯನ್ನು ಇಂದು ಮುರಿದು ವಿಧವೆ ಮಹಿಳೆಯರಿಗೆ ದೇವಾಲಯದ ಪ್ರವೇಶಮಾತ್ರವಲ್ಲದೇ ಗೋಕರ್ಣನಾಥೇಶ್ವರ ದೇವಾಲಯದಲ್ಲಿ ಕುಂಕುಮ ಹೂವು ಕೊಟ್ಟು ಅವರಿಂದಲೇ ರಥವನ್ನು ಎಳೆಸಲಾಗಿದೆ. ಇಂತಹ ಪದ್ಧತಿಯ ವಿರುದ್ಧ ಜನಾರ್ಧನರೆಡ್ಡಿಯವರು ಸ್ವತಃ ಮುಂದೆ ನಿಂತು ಆಚರಿಸಿರುವುದು ಸ್ವಾಗತಾರ್ಹವಾದುದು. ನಾರಾಯಣಗುರು ಅವರು ಜಾತಿ ವ್ಯವಸ್ಥೆಯ ವಿರುದ್ಧ ಆ ಕಾಲದಲ್ಲಿ ಸಮರ ಸಾರಿ ದಲಿತರ ದೇವಾಲಯ ಪ್ರವೇಶವನ್ನು ನಿರಾಕರಿಸಿದ್ದರ ವಿರುದ್ಧ ತಮ್ಮ ಪ್ರತಿಭಟನೆಯನ್ನು ಆರಂಭಿಸಿದರು. ಅಲ್ಲದೇ ದಲಿತರಿಗಾಗಿಯೇ ಬೇರೆಯಾದ ದೇವಾಲಯವನ್ನೇ ನಿರ್ಮಿಸಿದರು. ಇಂತಹ ಸಾಮಾಜಿಕ ಬದಲಾವಣೆಯು ಅತ್ಯಗತ್ಯ. ಮತ್ತು ಧಾರ್ಮಿಕ ವಿಧಿವಿಧಾನಗಳಿಂದ ವಂಚಿತರಾಗಿರುವ ದಲಿತರು ಮತ್ತು ಮಹಿಳೆಯರಿಗೆ ಘನತೆಯ ಬದುಕಿಗಾಗಿ ಇಂತಹ ಬದಲಾವಣೆಯು ಪ್ರಮುಖವಾದದ್ದಾಗಿದೆ. ಜೊತೆಗೆ ಬದಲಾವಣೆ ಎಲ್ಲರ ಜವಾಬ್ದಾರಿಯೂ ಕೂಡ ಅಷ್ಟೇ ಮುಖ್ಯ ಎಂಬುದನ್ನು ಲೇಖಕಿಯು ಮನನ ಮಾಡಿದ್ದಾರೆ

"ಇಂದು ಮತಾಂಧತೆಯನ್ನೆ ರಾಜಕೀಯ ಮೌಲ್ಯವಾಗಿಸಿಕೊಂಡಿರುವ ರಾಜಕೀಯ ಪಕ್ಷಗಳು ದೇಶದ ಜನರ ಭಾವನೆಗಳ ಮೇಲೆ ಅತ್ಯಂತ ಹೆಚ್ಚಿನ ಪ್ರಭಾವ ಬೀರಿ ಅಧಿಕಾರಕ್ಕೆ ಬರಲು ಹವಣಿಸುತ್ತಿವೆ. ಬೇರಾವುದೇ ರಾಜಕೀಯ ಪಕ್ಷಕ್ಕಿರುವಂತೆ ಭಾರತೀಯ ಜನತಾ ಪಕ್ಷವೂ ರಾಜಕೀಯ ಅಧಿಕಾರವನ್ನು ತನ್ನದಾಗಿಸಿಕೊಳ್ಳುವ ಹಕ್ಕು ಪಡೆದಿದೆಯಾದರೂ ಇಂತಹದೊಂದು ಅಧಿಕಾರದ ಗಳಿಕೆಗೆ ಪಕ್ಷವು ಅನುಸರಿಸುತ್ತಿರುವ ಮಾರ್ಗವು ಮಾತ್ರ ವಕ್ರದಾರಿಯಾದುದು. ಆದ್ದರಿಂದಲೇ ಈ ಪಕ್ಷವು ಅಧಿಕಾರವನ್ನು ದಕ್ಕಿಸಿಕೊಳ್ಳಲು ಬಳಸುವ ವಿಧಾನ, ಅದರ ಹಿಂದಿನ ಉದ್ದೇಶ ಮತ್ತು ಅಧಿಕಾರ ಪಡೆದ ನಂತರ ಉಂಟಾಗಬಹುದಾದ ಸಾಂಸ್ಕೃತಿಕ ಸಾಮಾಜಿಕ ಪರಿಣಾಮಗಳ ಬಗ್ಗೆ ಭಾರತೀಯ ಜನತೆ ಎಚ್ಚರ ವಹಿಸುವುದು ತೀರ ಅಗತ್ಯ. ಅದರಲ್ಲಿ ಇಂತಹ ಪರಿಣಾಮಗಳ ಭೀಕರತೆಗೆ ಮೊದಲು ತಲೆಕೊಡಬೇಕಾದವಳು ಭಾರತೀಯ ಮಹಿಳೆಯೇ ಆಗಿರುತ್ತಾಳೆ."[೧೩] ಯಾವುದೇ ರಾಜಕೀಯ ಪಕ್ಷಗಳು ಅಧಿಕಾರಕ್ಕೆ ಬರುವಾಗ ಮೊದಲು ಮಹಿಳೆಯನ್ನೇ ಮುಖ್ಯ ಗುರಿಯನ್ನಾಗಿಸಿಕೊಳ್ಳುತ್ತವೆ. ತಮ್ಮ ವೋಟ್ ಬ್ಯಾಂಕ್ ಹೆಚ್ಚಿಸಿಕೊಳ್ಳಲು ಇಂತಹ ದಾರಿಯನ್ನು ಹುಡುಕಿಕೊಳ್ಳುತ್ತವೆ. ಆದರೆ ಭಾರತೀಯ ಜನತಾ ಪಕ್ಷದ ಆಯ್ಕೆ ಮತ್ತು ದಾರಿ ಎರಡೂ ಕೂಡ ವಕ್ರದಾರಿಯನ್ನು ಅನುಸರಿಸುತ್ತಿದೆ ಎಂಬುದನ್ನು ಇಲ್ಲಿ ಹೇಳಲಾಗಿದೆ. ಮಹಿಳೆಯರು ರಾಜಕೀಯದಿಂದ ದೂರ ಉಳಿಯಬೇಕು. ಮತ್ತು ಕುಟುಂಬದೊಳಗೆ ಅವಳು ಉಳಿದುಕೊಳ್ಳಬೇಕೆಂಬುದು ಈ ಪಕ್ಷದ ನಿಲುವನ್ನು ಖಂಡಿಸುತ್ತಿರುವುದನ್ನು ಕಾಣಬಹುದು.

"ತುಮಕೂರಿನ ಬಳಿ ಗೊಲ್ಲರ ಹಟ್ಟಿಗಳಲ್ಲಿ ಹೆಣ್ಣು ಮಕ್ಕಳು ಅವೈಜ್ಞಾನಿಕ ಮತ್ತು ಅನಾರೋಗ್ಯಕರ ಮುಟ್ಟು ಮೈಲಿಗೆ ಸಂಪ್ರದಾಯವನ್ನು ಈಗಲೂ ಅನುಸರಿಸುತ್ತಿದ್ದು, ಬಾಣಂತಿ ಮಗುವನ್ನು ಮಳೆ ಚಳಿಗಾಳಿಯನ್ನದೆ. ಮನೆ ಹೊರಗಿನ ಗುಡಿಸಲುಗಳಲ್ಲಿ ಇಡುತ್ತಿರುವ ಬಗೆಗೆ ಕೆಲ ಸಮಯದ ಹಿಂದೆ ವರದಿಯಾಗಿತ್ತು. ಕೂಡಲೇ ಪ್ರತಿಕ್ರಿಯಿಸಿದ್ದ ಬಿಜೆಪಿ ಸರ್ಕಾರ ಗೊಲ್ಲರ ಹಟ್ಟಿಯಿರುವ ಕಡೆಗಳಲ್ಲಿ 'ಕೃಷ್ಣಕುಟೀರ'ವನ್ನು ಸ್ಥಾಪಿಸಿ ಮೇಲ್ವಿಚಾರಕರನ್ನು ನೇಮಿಸುವುದಾಗಿಯೂ, ಅವು ಮೈಲಿಗೆಯಾದ ಹೆಂಗಸರ ತಾತ್ಕಾಲಿಕ ಆಶ್ರಯದಾಣವಾಗಿ ಕೆಲಸ ಮಾಡುವುದೆಂದೂ ಹೇಳಿಕೆ ನೀಡಿತು."[೧೪] ಜನರಲ್ಲಿ ವೈಜ್ಞಾನಿಕ ಭಾವನೆಯನ್ನು ಮೂಡಿಸಬೇಕಾದ ಸರ್ಕಾರವೇ ಕೃಷ್ಣಕುಟೀರವನ್ನ ಸ್ಥಾಪಿಸಿಕೊಡುವುದಾಗಿ ಹೇಳುವುದನ್ನ ನೋಡಿದರೆ ಮಹಿಳೆಯರ ಬಗೆಗೆ ಇರುವ ಕಾಳಜಿ ಎಂಥದ್ದು ಎಂದು ತಿಳಿಯುತ್ತದೆ. ಮುಟ್ಟು, ಮೈಲಿಗೆ ಎಂದು ಹೆಣ್ಣನ್ನು ದೂರ ಉಳಿಸುತ್ತಲೇ ಬಂದಿದ್ದಾರೆ. ಗೊಲ್ಲ ಸಮುದಾಯದಲ್ಲಿ ಮುಟ್ಟು, ಮೈಲಿಗೆಯೆಂಬ ಕೀಳು ಮಟ್ಟದ ಆಚರಣೆ ಹೆಚ್ಚಾಗಿಯೆ ಇದೆ. ಆದರೆ ಇದೊಂದೇ ಸಮುದಾಯಕ್ಕೆ ಮಾತ್ರ ಸೀಮಿತವಾಗಿ ಉಳಿದಿಲ್ಲ. ಎಲ್ಲಾ ಸಮುದಾಯಗಳಲ್ಲಿಯು ಈ ಆಚರಣೆಯನ್ನು ಮಾಡಿಕೊಂಡು ಬರುತ್ತಿದ್ದಾರೆ. ಹೆಣ್ಣಿನ ದೈಹಿಕ ರಚನೆಯ ಬಗ್ಗೆ ತಿಳಿಹೇಳಬೇಕಾಗಿದೆ. ಮುಟ್ಟಿನ ಬಗೆಗೆ ಅರ್ಥಮಾಡಿಸುವ ತುರ್ತು ಇದೆ. ವೈದಿಕಶಾಹಿ ಆಚರಣೆಯು ಎಲ್ಲಾ ಸಮುದಾಯಗಳಲ್ಲಿಯೂ ಕಾರ್ಯರೂಪಕ್ಕೆ ಬಂದಿರುವುದು ದುರಂತ.

"ಭಾರತ ಸಂವಿಧಾನದಲ್ಲಿ ಸರ್ವರೂ ಸಮಾನರೂ. ಲಿಂಗದ ಆಧಾರದಲ್ಲಾಗಲಿ ಜಾತಿ ಧರ್ಮಗಳ ಆಧಾರದಲ್ಲಾಗಲಿ ಪಕ್ಷಪಾತ ಮಾಡುವುದನ್ನು ಸಂವಿಧಾನ ನೀಷೆಧಿಸಿದೆ. ಭಾರತ ಸಂವಿಧಾನ ಪ್ರತಿಯೊಬ್ಬರ ಧಾರ್ಮಿಕ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುತ್ತದೆ. ಧಾರ್ಮಿಕ ಸ್ವಾತಂತ್ರ್ಯದ ಈ ಅವಕಾಶದಿಂದಾಗಿ ಮಹಿಳೆಯರಿಗೆ ಸಂವಿಧಾನ ನೀಡಿದ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಸಮಾಜವು ಧರ್ಮದ ಹೆಸರಿನಲ್ಲಿ ಕಿತ್ತುಕೊಳ್ಳುತ್ತದೆ. ಸಂವಿಧಾನದಲ್ಲಿ ಸಮಾನತೆ ಇದ್ದರೂ, ವ್ಯಕ್ತಿ ನಿಯಮಗಳನ್ನು ಧಾರ್ಮಿಕ ನಿಯಮಗಳಿಗನುಸಾರವಾಗಿ ರಚಿಸುವುದರಿಂದ ಮಹಿಳೆಯರು ತಮ್ಮ ಸಂವಿಧಾನಿಕ ಹಕ್ಕುಗಳಿಂದ ವಂಚಿತರಾಗುತ್ತಾರೆ. ನ್ಯಾಯಾಧೀಶರೋರ್ವರು ಹಿಂದೂ ವಿಚ್ಛೇದಿತ ಮಹಿಳೆಗೆ ಜೀವನಾಂಶ ನೀಡಬೇಕೆಂದು ತೀರ್ಪು ನೀಡಿದರೆ ಮುಸ್ಲಿಂ ಮಹಿಳೆಗೆ ಮೂರು ತಿಂಗಳ ಅವಧಿಗೆ ಮಾತ್ರ ಜೀವನಾಂಶ ನೀಡಬೇಕೆಂದು ತೀರ್ಪು ನೀಡಲಾಗುತ್ತದೆ. ಭಾರತ ಸಂವಿಧಾನ ಮತ್ತು ಪ್ರಜಾಸತ್ತೆಗೆ ಜಾಗತಿಕ ಮನ್ನಣೆ ಇದ್ದರೂ ಇಂತಹ ವೈರುಧ್ಯಗಳಿಂದಾಗಿ ಈ ಮನ್ನಣೆ ಮಸುಕಾಗಿದೆ. ಸ್ತ್ರೀ–ಪುರುಷರಲ್ಲಿ ಮಾತ್ರವಲ್ಲ, ಈ ದೇಶದ ಸ್ತ್ರೀಯರಲ್ಲೆ ಸಮಾನತೆ ಇಲ್ಲ ವೆಂಬುದು ಇದರಿಂದ ವ್ಯಕ್ತವಾಗುತ್ತದೆ. ಮಹಿಳೆಯರೆಲ್ಲರೂ ಜಾತಿ, ಧರ್ಮಗಳ ಬಲೆಯಿಂದ ಹೊರಬಂದು ಒಟ್ಟಾದಾಗ ಸಹೋದರಿ, ಭಾವದಿಂದ ಪರಸ್ಪರ ಕೈ ಹಿಡಿದು ಮುನ್ನಡೆದು ಎಲ್ಲಾ ಅಸಮಾನತೆಗಳ ವಿರುದ್ಧ ಒಕ್ಕೊರಲಿನಲ್ಲಿ ಧ್ವನಿ ಎತ್ತಿದಾಗ ಈ ಪರಿಸ್ಥಿತಿ ಬದಲಾದರೂ

ಆಗಬಹುದು."[೧೫] ಭಾರತವನ್ನು ಸಂವಿಧಾನದಲ್ಲಿರುವ ಸ್ವಾತಂತ್ರ್ಯತೆಯನ್ನು ಹೇಳುತ್ತಲೆ ನ್ಯಾಯಾಲಯದ ತೀರ್ಪನ್ನು ಅಥವಾ ಮಹಿಳೆಯರಿಗೆ ಇರುವ ಅಸಮತೋಲನವಾದ ನ್ಯಾಯ ವ್ಯವಸ್ಥೆಯನ್ನು ಪ್ರಶ್ನಿಸುತ್ತಾರೆ. ಭಿನ್ನ ಧರ್ಮೀಯ ಮಹಿಳೆಯರಿಗೆ ಇರುವ ಅಸಮಾನತೆಯನ್ನು ಜೊತೆಗೆ ಮಹಿಳೆಯರ ನಡುವೆಯೇ ಇರುವ ಲಿಂಗ ಸಮಾನತೆಯನ್ನು ಇಲ್ಲಿ ವಿಷಾಧಿಸುತ್ತಾರೆ.

ವಿವಿಧ ಧರ್ಮಗಳ ಮಹಿಳೆಯರೆಲ್ಲರನ್ನು ಬೇರ್ಪಡಿಸಿರುವ ಈ ಪಿತೃಪ್ರಧಾನ ಸಮಾಜದ ವಿರುದ್ಧ ಎಲ್ಲರೂ ಸಮಾನ ಮನಸ್ಸಿನಿಂದ ಪ್ರತಿಭಟಿಸಬೇಕೆಂದು ಇಲ್ಲಿ ಹೇಳುತ್ತಿರುವುದನ್ನು ಕಾಣುತ್ತೇವೆ. ಪಿತೃಪ್ರಧಾನ ಸಮಾಜದಲ್ಲಿ ಪುರುಷನು ಮಹಿಳೆಯನ್ನು ಅವಲಂಭಿತಳಾಗಿಯೇ ಮುಂದುವರೆಸಿಕೊಂಡು ಹೋಗುವ ಮತ್ತು ತನ್ನ ಅಧೀನದಲ್ಲಿಯೆ ಇರಬೇಕೆಂದು ಬಯಸುತ್ತಾನೆ. ಮಾತೃಪ್ರಧಾನ ವ್ಯವಸ್ಥೆಯಿಂದ ಪಿತೃಪ್ರಧಾನ ವ್ಯವಸ್ಥೆಯಾಗಿ ವರ್ಗಾವಣೆಯಾದಾಗಿನಿಂದ ಮಹಿಳೆ ಕೇವಲ ಹೆರುವ ಯಂತ್ರವಾಗಿ ಹಾಗೂ ಅವನ ಗುಲಾಮಳನ್ನಾಗಿಯೆ ನಡೆಸಿಕೊಂಡು ಬರಲಾಗಿದೆಯೇ ವಿನಃ ಆಕೆ ತನ್ನಂತೆಯೇ ಮನುಷ್ಯಳು. ಅವಳಿಗೂ ಅವಳದೆ ವ್ಯಕ್ತಿತ್ವ ಇದೆ ಎಂಬುದನ್ನು ಎಂದಿಗೂ ಒಪ್ಪಿಕೊಳ್ಳಲಾರದು ಈ ಪಿತೃಪ್ರಧಾನ ವ್ಯವಸ್ಥೆ.

"ಮಹಿಳೆಯ ಬದುಕಿನ ಮುಖ್ಯ ಕೇಂದ್ರ ಪುರುಷನೇ ಆಗಿರತಕ್ಕದ್ದು. ಇದಕ್ಕಾಗಿ ವಿವಾಹ ಗಂಡ, ಮಕ್ಕಳು, ಮನೆ, ಮನೆತನ ಇತ್ಯಾದಿಗಳನ್ನು ಕಟ್ಟುನಿಟ್ಟಿನಲ್ಲಿ ಅನುಸರಿಸಬೇಕು. ಇವುಗಳಿಗಾಗಿ ಜೀವ ತೇಯುತ್ತಲೇ ಅವಳು ಉಸಿರಾಡಬೇಕು. ಇದರ ಇನ್ನೊಂದು ತಾರ್ಕಿಕ ಸಿದ್ಧಾಂತವೆಂದರೆ ಅವಳು ತನಗಾಗಿ ಎಂದೂ ಒಂದು ಕ್ಷಣವೂ ಬದುಕು ಸಾಗಿಸಬಾರದು ಹಾಗೆ ಚಿಂತಿಸಬಾರದು, ಆಗ ಮಾತ್ರವೇ ಅವಳಿಗೆ ಸ್ವರ್ಗದಲ್ಲಿ ಪ್ರವೇಶ ದೊರಕೀತು"[೧೬] ಇಲ್ಲಿ ಸ್ವರ್ಗ ಮತ್ತು ನರಕ ಪ್ರಾಪ್ತಿಯನ್ನು ಈ ಪಿತೃಪ್ರಧಾನ ವ್ಯವಸ್ಥೆ ಹೇಗೆ ನಿರ್ಧರಿಸುತ್ತದೆ ಮತ್ತು ಅದರೊಂದಿಗೆ ಮಹಿಳೆಯನ್ನ ಮತ್ತಷ್ಟು ಶೋಷಣೆಗೆ ಎಡೆಮಾಡಿ ಕೊಡುವ ವ್ಯವಸ್ಥೆಯನ್ನಿಲ್ಲಿ ವ್ಯಕ್ತಪಡಿಸಿದ್ದಾರೆ.

ಮಹಿಳೆಗೆ ತನ್ನದೇ ಆದ ನೆಲೆಯೊಂದು ಇರಲು ಸಾಧ್ಯವೇ ಇಲ್ಲದಂತೆ ರೂಪಿತವಾಗಿರುವ ವಿವಾಹದ ಇತರ ನಿಯಮಗಳಿಂದಾಗಿ ವರದಕ್ಷಣೆ ಎಂಬ ಪಿಡುಗು ಹುಟ್ಟುತ್ತದೆ. ಇದರ ಜೊತೆಗೆ ಜಾತಿ ವ್ಯವಸ್ಥೆಯ ಬೇರುಗಳನ್ನು ಇನ್ನಷ್ಟು ಈ ಸಂಸ್ಥೆಯು ಭದ್ರಪಡಿಸುತ್ತಾ ತನ್ನ ಸುತ್ತ ರಕ್ಷಣಾ ಕೋಟೆಯನ್ನು ಗಟ್ಟಿಗೊಳಿಸುತ್ತದೆ. "ಏಕೆಂದರೆ ವಿವಾಹ ಸಂಸ್ಥೆಯು ಸಾಮಾಜಿಕ ಸಂರಚನಾ ಕೇಂದ್ರದ ಪ್ರಮುಖ ಅಂಗವಾಗಿದೆ. ಸಮಾಜವು ಜಾತಿಪದ್ಧತಿಯ ಆಧಾರದಿಂದಲೇ ಕೂಡಿರಬೇಕು ಎಂಬುದು ವರ್ಣ ವ್ಯವಸ್ಥೆಯ ಮೂಲ ಆಶಯವಾಗಿದೆ. ವಿವಾಹ ಸಂಸ್ಥೆಯಲ್ಲಿ ಆಯ್ಕೆಯ ಹಕ್ಕು ಪ್ರಾಪ್ತವಾದರೆ ಜಾತಿ ವ್ಯವಸ್ಥೆಯಲ್ಲಿ ಅಡಗಿದೆ. ಆದ್ದರಿಂದ ಜಾತಿ ತಾರತಮ್ಯದ ತಳಪಾಯವು ಅಲುಗಾಡಬಾರದು ಎಂದರೆ ಮದುಮಗಳು ಮನುಸ್ಮೃತಿಯು ಹೇಳಿದಂತೆ ನಡೆಯಬೇಕು ಅಂತರ್ಜಾತಿ, ಅಂತರ ಧರ್ಮಿಯ ಮತ್ತು ಸ್ವಗೋತ್ರದಲ್ಲಿ ಮದುವೆಗಳು ನಡೆಯಬಾರದೆಂದು ಮನುಸ್ಮೃತಿ ಹೇಳುತ್ತದೆ."[೧೭] ಇದು ಹಿಂದೂ ಧರ್ಮದಲ್ಲಿ ವಿವಾಹ ಸಂಸ್ಥೆಯ ನಿಯಮವಾದರೆ ಮುಸ್ಲಿಂ ಧರ್ಮದ ನಿಯಮವೇ ಬೇರೆ ಆಗಿದೆ.

"ಇಸ್ಲಾಂ ಧರ್ಮದಲ್ಲಿ ವಿವಾಹವೆಂಬುದು ಪವಿತ್ರವಾದ ಬಂಧನದಲ್ಲಿ, ಅದು ಓರ್ವ ಸ್ತ್ರೀ ಮತ್ತು ಪುರುಷನ ನಡುವಿನ ಕಾಂಟ್ರಾಕ್ಟ್; ಒಂದು ಒಪ್ಪಂದ ಇಷ್ಟವಿದ್ದಷ್ಟು ಕಾಲ ಜೊತೆಯಾಗಿದ್ದು ಬೇಡವಾದಾಗ ಬೇರೆಯಾಗುವ ಸೌಲಭ್ಯ ಈ ವಿವಾಹ ಕ್ರಮದಲ್ಲಿದೆ. ಈ ಒಪ್ಪಂದಕ್ಕೆ ಮುನ್ನವೇ ಹೆಂಡತಿಯಾಗಿರುವವಳು ತನಗೆ ಇಷ್ಟವಾದಂತಹ ಷರತ್ತುಗಳನ್ನೊಡ್ಡಬಾರದು. ತನಗೆ ಎಷ್ಟು ಮೆಹರ್ ದೊರೆಯಬೇಕೆಂದು ಆಕೆ ತೀರ್ಮಾನಿಸಬಾರದು. ವಿವಾಹದ ಬಳಿಕ ಜೊತೆಯಲ್ಲಿ ಬಾಳಲಾಗದಿದ್ದರೆ ತಲಾಖ್ (ವಿಚ್ಛೇದನ) ನೀಡುವ ಹಕ್ಕು ತನಗಿರಬೇಕೆಂದು ತರ್ಕ ಮತ್ತು ಆತನ ದ್ವಿತೀಯ ವಿವಾಹಕ್ಕೂ ತನ್ನ ಅನುಮತಿ ಬೇಕೆಂಬ ತರ್ಕವನ್ನು ಕೂಡಾ ಆಕೆ ಮುಂದೊಡ್ಡಬಹುದು, ಇದು ಧಾರ್ಮಿಕ ನಿಯಮ. ಆದರೆ ಸಮಾಜದ ಮನೋಭಾವ ಮಾತ್ರ ಬೇರೆಯೇ ಆಗಿದೆ. ವಿಚ್ಛೇಧನದ ಹಕ್ಕು ತನಗಿರಬೇಕೆಂಬ ಹೆಣ್ಣನ್ನು ವಿವಾಹವಾಗಲು ಯಾವ ಪುರುಷನು ಮುಂದೆ ಬರುತ್ತಾನೆ? 'ಗಂಡುಬೀರಿ' ಎಂಬ ಹೆಸರು ಹೊತ್ತು ಆಕೆ ಬಾಳು ಪೂರ್ತಿ ವಿವಾಹವಿಲ್ಲದೆ ಬದುಕು ನೂಕಬೇಕಾಗುತ್ತದೆ. ಬಾಲ್ಯ ವಿವಾಹ ಪದ್ಧತಿ ಕೂಡ ವಾಡಿಕೆಯಲ್ಲಿರುವುದರಿಂದ ಚಿಕ್ಕ ಬಾಲಿಕೆಯೊಬ್ಬಳು ಯಾವುದೇ ತರ್ಕವನ್ನು ಮುಂದೊಡ್ಡುವ ಪ್ರಶ್ನೆಯೇ ಏಳಬಾರದು"[೧೮] ಹಿಂದೂ ಧರ್ಮದಲ್ಲಿರುವ ವಿವಾಹ ಪದ್ಧತಿಗೂ, ಮುಸ್ಲಿಂ ಧರ್ಮದ ವಿವಾಹ ಪದ್ದತಿಗೂ ಭಿನ್ನತೆಯನ್ನು ಹೇಳುತ್ತಲೇ ಇಸ್ಲಾಂ ಸಮುದಾಯದೊಳಗೆ ಮಹಿಳೆಯರು ಶೋಷಣೆಗೆ ಒಳಗಾಗುವ ಮತ್ತು ಒಳಗಾಗುವಂತೆ ಮಾಡುವ ಅಲ್ಲಿ ಪುರುಷ ಸಮಾಜ ವ್ಯವಸ್ಥೆಯ ಬಗೆಗೆ ವಿವರಿಸಿದ್ದಾರೆ. ಹಾಗೆಯೇ ಬಾಲ್ಯವಿವಾಹ ಪದ್ಧತಿಯನ್ನು ನೇರವಾಗಿ ಅಲ್ಲದಿದ್ದರು ಪರೋಕ್ಷವಾಗಿ ವಿರೋಧಿಸಿರುವುದು ಕಂಡುಬರುತ್ತದೆ.

"ಮಹಿಳೆ ದುಡಿಯಲು ಹೊರಬಂದರೂ ಆಕೆಯನ್ನು ಬಿಗಿದ ಬಂಧನಗಳೂ ಹಾಗೆ ಇರಬೇಕೆಂದು ದುಡಿಸಿಕೊಳ್ಳುವವರು ಬಯಸುತ್ತಾರೆ. ಆಗ ಮಾತ್ರ ಅವರಿಗೆ ಸಿದ್ಧವಾದ ಗುಲಾಮಿ ಪಡೆಯೊಂದು ಸದಾ ಸರಬರಾಜಾಗಲು ಸಾದ್ಯವಾಗುತ್ತದೆ. ಮಹಿಳೆಯ ಮೇಲೆ ಹೊರಗೆ ದುಡಿಯಬೇಕಾದ ಹೊರೆಯನ್ನು ಹೇರಿದ್ದು ಬಿಟ್ಟರೆ ಕುಟುಂಬ, ತಾಯ್ತನ ಹಾಗೂ ನಡವಳಿಕೆಯ ಬಗ್ಗೆಯೆ ಕಾಮುಕ ಹಾಗೂ ಶೋಷಕ ಧೋರಣೆಗಳನ್ನು ಪರಿಷ್ಕರಿಸಿ ಮತ್ತೆ ಮತ್ತೆ ಎತ್ತಿ ಹಿಡಿಯಲಾಯಿತು"[೧೯] ಕುಟುಂಬ ವ್ಯವಸ್ಥೆಯೊಳಗೆ ಗಂಡು ಏನೆ ತಪ್ಪು ಮಾಡಿದರೂ ಅದನ್ನು ತಳ್ಳಿ ಹಾಕುವ ಮತ್ತು ಸಮರ್ಥಿಸುವ ಧೋರಣೆಯನ್ನು ಹೊಂದಿದರೆ, ಹೆಣ್ಣಿಗೆ ಪ್ರಶ್ನೆ ಮಾಡುವ ಹಕ್ಕನ್ನು ಕಸಿದುಕೊಳ್ಳುವ ತಾರತಮ್ಯ ನೀತಿಯನ್ನು ಅನುಸರಿಸುವ ಮತ್ತು ಪುರುಷಾಧಿಕಾರವನ್ನು ಇಲ್ಲಿ ಗುರುತಿಸಬಹುದು.

ದೇಶದಲ್ಲಿನ ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯ ಆರ್ಥಿಕ ಬೆಳವಣಿಗೆಯಲ್ಲಿ ಅರ್ಥಪೂರ್ಣವಾಗಿ ಬಳಕೆಯಾಗುತ್ತಿಲ್ಲ. ಕುಟುಂಬವು ಮಹಿಳೆಯ ಉದ್ಯೋಗದ ಬಗ್ಗೆ ಬಹಳ ಚೌಕಾಸಿ ನಡೆಸುತ್ತದೆ. ಆದರೆ ಪುರುಷನೋರ್ವ ತನ್ನ ಉದ್ಯೋಗವನ್ನು ಆರಿಸಿಕೊಳ್ಳುವ ಬಗೆಗೆ ಯಾವ ತರಹದ ಚಕಾರವನ್ನು ಎತ್ತುವುದಿಲ್ಲ. ಕಾರ್ಲ್‌ಮಾರ್ಕ್ಸ್ ತಮ್ಮ ಬಂಡವಾಳ ಶಾಹಿ

ತತ್ವದಲ್ಲಿ ಮಹಿಳೆಯ ಶೋಷಣೆಯನ್ನು ಈ ರೀತಿಯಾಗಿ ವಿವರಿಸಿದ್ದಾರೆ. "ಬಂಡವಾಳಶಾಹಿ ಮತ್ತು ಮಹಿಳೆ ಇದ್ದಾರೆ. ಮಹಿಳೆ ಕುಟುಂಬದ ಹೊರಗೆ ಆರ್ಥಿಕತೆಯಲ್ಲಿ ಮಹಿಳೆ ಕಾರ್ಮಿಕಳಾಗಿ, ಕೂಲಿ ಗುಲಾಮಳಾಗಿ ಶೋಷಿಸಲ್ಪಟ್ಟರೆ ಕುಟುಂಬದೊಳಗೆ ಕೂಲಿಯೇತರ ಗುಲಾಮಳಾಗಿ ಶೋಷಿಸಲ್ಪಡುತ್ತಿದ್ದಾಳೆ. ಇದು ಮಹಿಳೆ ಮೇಲೆ ದ್ವಿಮುಖ ದಮನವೇ ಆಗಿದೆ."[೨೦] ಮಹಿಳೆ ಆದವಳು ಏಕಕಾಲದಲ್ಲಿ ಎರಡೆರಡು ಜವಾಬ್ದಾರಿಯನ್ನು ನಿಭಾಯಿಸಿದ್ದರೂ ಸಹ ಶೋಷಣೆಯಿಂದೇನು ಮುಕ್ತಳಾಗಿಲ್ಲ. ಮಹಿಳೆ ದುಡಿದರೂ ಕೂಡ ಅವಳ ದುಡಿಮೆಗೆ ಯಾವುದೇ ರೀತಿಯ ಪ್ರತಿಫಲ ದೊರೆಯುವುದಿಲ್ಲ. ಮನೆಯಲ್ಲಿಯೇ ಆಕೆ ಒಂದು ನಿಮಿಷ ಬಿಡುವಿಲ್ಲದೆ ದುಡಿದರೂ ಅವಳ ಶ್ರಮಕ್ಕೆ ಯಾವುದೇ ರೀತಿಯಾದಂತಹ ವೇತನ ದೊರೆಯುವುದಿಲ್ಲ. ಅವಳ ದುಡಿಮೆ ಲೆಕ್ಕಕ್ಕೇ ಬರುವುದಿಲ್ಲ. ಇದಕ್ಕೆಲ್ಲ ಕಾರಣ ಕುಟುಂಬದೊಳಗಿನ ವಿವಾಹ ಸಂಸ್ಥೆಯೇ ಆಗಿದೆ.

"ಮಹಿಳೆ ಗುಲಾಮಳಾಗಿ ಇರುತ್ತಲೇ, ಗಂಡನಿಗೆ ಅವನ ಶ್ರಮಶಕ್ತಿಯನ್ನು ಪುನರುತ್ಪಾದನೆ ಮಾಡಿಕೊಳ್ಳುವ ಸಾಧನವಾಗಿ ಉಪಯೋಗವಾಗುತ್ತಾಳೆ. ಆಕೆಯ ಶ್ರಮ ಆಕೆಯ ಗಂಡನ ಶ್ರಮಶಕ್ತಿಯಾಗಿ ಬದಲಾಗುವುದರ ಮೂಲಕ ಬಂಡವಾಳಕ್ಕೆ ಇತರೆ ಪದ್ಧತಿಗಳ ಮೂಲಕ ಸಾಧ್ಯವಾದಷ್ಟು ದೊಡ್ಡ ಮಟ್ಟದಲ್ಲಿ ಹೆಚ್ಚುವರಿ ಮೌಲ್ಯವನ್ನು ಹೊಂದಿಸಿಕೊಡುತ್ತದೆ. ಒಬ್ಬ ಕಾರ್ಮಿಕ ಕಾರ್ಖಾನೆಯಲ್ಲಿ ಕೆಲಸ ಮಾಡಿದ ಅವಮಾನಗಳಿಗೆ ಮಾನಸಿಕವಾಗಿ ಕುಗ್ಗಿಹೋಗಿ ಬರುತ್ತಾನೆ. ಹೊರ ಜಗತ್ತಿನಲ್ಲಿ ಅನ್ಯೀಕರಣಕ್ಕೆ ಗುರಿಯಾಗಿ ಒಬ್ಬಂಟಿಯಾಗಿ ಆತ್ಮೀಯತೆಗಾಗಿ ಹಪಹಪಿಸುತ್ತ ಬರುತ್ತಾನೆ. ಹಸಿವಿನಿಂದ ಹೇಗೊ ಬರುತ್ತಾನೆ. ಅವನ ಹಸಿವು ತೀರಬೇಕು. ಶಾರೀರಿಕವಾದ ಬಳಲಿಕೆ ತೀರಿಸಬೇಕು. ವಿಶ್ರಾಂತಿ ನೀಡಬೇಕು. ಅವನ ಅನುಮಾನಗಳನ್ನು ಹೋಗಲಾಡಿಸಿ ಅವನ ಅಧಿಕಾರಕ್ಕೆ ಅವನ ಯಜಮಾನಿಕೆಗೆ ಇಲ್ಲಿ ಒಂದು ಜಾಗ, ಒಂದು ಹೆಣ್ಣು ಮಕ್ಕಳು ಇದ್ದಾರೆಂದು ಒಂದು ಭದ್ರತೆಯನ್ನು ಕಲ್ಪಿಸಿ ಮಾನಸಿಕವಾಗಿ ಬಲವನ್ನು ನೀಡಬೇಕು. ಅವನ ಅಭಿಪ್ರಾಯಗಳಿಗೆ ತಮ್ಮ ಬೆಂಬಲ ತಿಳಿಸಬೇಕು. ಲೋಕವೆಲ್ಲಾ ಬೇರೆಯಾದರು ಅವನಿಗಾಗಿಯೇ ಬದುಕುವುದಕ್ಕೆ ಮಹಿಳೆಗೆ ಬೇಕಾದ ಶಾರೀರಿಕ ಮಾನಸಿಕ ಬಲವನ್ನು ಕುರಿತು ನೆನೆದುಕೊಂಡರೆ ಎದೆ ಹೊಡೆದು ಹೋಗುತ್ತದೆ."[೨೧] ಪುರುಷನಾದವನಿಗೆ ಎಲ್ಲಾ ರೀತಿಯ ನೈತಿಕ ಬೆಂಬಲವಾಗಿ ಮಹಿಳೆ ನಿಲ್ಲುತ್ತಾಳೆ. ಆದರೆ ಅವಳ ಕ್ಷೇಮಕ್ಕೆ ಗಂಡನೆನಿಸಿಕೊಳ್ಳುವ ಪುರುಷ ಆಕೆಯ ಬೆಂಬಲಕ್ಕಾಗಲಿ ಸಹಾಯಕ್ಕಾಗಲಿ ನಿಲ್ಲುವುದಿಲ್ಲ. ಅವಳ ಯಾವ ಅಹವಾಲನ್ನು ಕೇಳುವ ಮತ್ತು ಸ್ವೀಕರಿಸುವ ಮನಸ್ಥಿತಿಯನ್ನು ಹೊಂದಿಲ್ಲದವನಾಗಿರುತ್ತಾನೆ.

ಹಿಂದೂ ಧರ್ಮವು ದೇವರುಗಳ ಹೆಸರಿನಲ್ಲಿ ಹೆಣ್ಣು ಮತ್ತು ದಲಿತ, ಶೂದ್ರರನ್ನು ಶೋಷಣೆ ಮಾಡಿದ್ದಲ್ಲದೆ ಅವರನ್ನು ವೈಚಾರಿಕವಾಗಿ ಆಲೋಚಿಸಲು ಎಂದಿಗೂ ಸಹ ಮುಕ್ತವಾದಂತಹ ಅವಕಾಶವನ್ನು ಕಲ್ಪಿಸಲೇ ಇಲ್ಲ. ಮಹಿಳೆ ಮೇಲೆ ನಡೆಯುತ್ತಿರುವ ಶೋಷಣೆಯ ಗ್ರಹಿಕೆಗಳ ನೆಲೆಯೂ ಸಹ ಒಂದೇ ರೀತಿಯಾಗಿಲ್ಲ. "ಸತಿ ಪದ್ಧತಿಯಾಗಲಿ ವಿಧವಾ ಪದ್ಧತಿಯಾಗಲಿ ಹೆಣ್ಣಿನ ಸಾರ್ವತಿಕ ಸಮಸ್ಯೆಗಳಲ್ಲ, ಏಕೆಂದರೆ ದೇಶದ ಶೇಕಡಾ ಮೂರು ಅಥವಾ ಐದರಷ್ಟಿರುವ

ಮತ ಧರ್ಮದವರಲ್ಲಿ ಬಳಕೆಯಲ್ಲಿರುವ ಸಂಪ್ರದಾಯವದು. ಇದನ್ನೇ ಹೆಣ್ಣಿನ ಶೋಷಣೆ ಎಂದು ಬಿಂಬಿಸುತ್ತಾ ಬರಲಾಗಿದೆ. ಬಹುಸಂಖ್ಯಾತರಾದ ದಲಿತ ಮತ್ತು ಶೂದ್ರರಲ್ಲಿ ಗಂಡ ಬಿಟ್ಟರೆ ಅಥವಾ ಗಂಡ ಸತ್ತರೆ ಮರು ಮದುವೆಯಾಗುವ ಅವಕಾಶವಿದೆ. ಅದನ್ನು ಉಡುಕಿ ಎಂದು ಕರೆಯಲಾಗುತ್ತದೆ. ಸೋಜಿಗವೆಂದರೆ ಸತಿ ಹಾಗೂ ವಿಧವೆ ಆಚರಿಸುವ ಮತಧರ್ಮದವರು ಸುಶಿಕ್ಷಿತರು, ಮುಂದಾಳುಗಳಾಗಿರುವುದರಿಂದ ಬಹುಸಂಖ್ಯಾತರ ಸಮಸ್ಯೆಗಳಾದ ಅವಿದ್ಯೆ, ದೇವದಾಸಿ ಪದ್ಧತಿ, ಅತ್ಯಾಚಾರ, ವರದಕ್ಷಿಣೆ, ಅಧಿಕಾರ ವಂಚಿತತೆ, ಅನಾರೋಗ್ಯ, ಬಾಲ್ಯವಿವಾಹ, ಬಡತನ ಹೆಚ್ಚು ಗಮನ ಸೆಳೆಯಲೇ ಇಲ್ಲ."[೨೨] ಮೇಲ್ವರ್ಗವು ಆಚರಿಸುತ್ತಿದ್ದ ಸತಿ ಪದ್ಧತಿಯನ್ನು ಎಲ್ಲ ತಳಸಮುದಾಯಗಳು ಆಚರಿಸುವಂತೆ ಮಾಡಲಾಯಿತು. ಹಾಗೆಯೇ ನಿರಂತರವಾಗಿ ಪಾಲನೆ ಮಾಡುವಂತೆಯು ನೋಡಿಕೊಳ್ಳಲಾಗಿದೆ. ಕೆಳಜಾತಿಗಳಲ್ಲಿ, ಬುಡಕಟ್ಟು ಸಮುದಾಯಗಳಲ್ಲಿ ಗಂಡ ಸತ್ತರೆ ಮರುಮದುವೆ ಮಾಡುವ ಸಂಪ್ರದಾಯ ಇಂದಿಗೂ ಕಾಣಬಹುದು. ದೇವರು, ಧರ್ಮದ ಹೆಸರಿನಲ್ಲಿ ಕೆಳವರ್ಗದವರನ್ನು ಮೌಢ್ಯ, ಅಂಧಕಾರದ ಕೂಪಕ್ಕೆ ತಳ್ಳಲಾಯಿತು. ಅಲ್ಲದೆ ಇವರ ಮುಖ್ಯ ಸಮಸ್ಯೆಗಳಾದ ಬಾಲ್ಯವಿವಾಹ, ದೇವದಾಸಿ ಪದ್ಧತಿ, ಅನಕ್ಷರತೆ, ಅವರ ಮೇಲೆ ನಡೆಯುವಂತಹ ದೌರ್ಜನ್ಯಗಳು ಇವು ಯಾವುವು ಮುನ್ನೆಲೆಯ ಬಹುಮುಖ್ಯ ಸಮಸ್ಯೆಯಾಗಿ ಕಾಣಲೇ ಇಲ್ಲ ಎಂಬುದು ಇವರ ಸ್ಪಷ್ಟ ನಿಲುವಾಗಿದೆ.

"ಇಸ್ಲಾಂ ಧರ್ಮದಲ್ಲಿ ಬಹುಪತ್ನಿತ್ವಕ್ಕೆ ಬೇರೆಯೇ ವ್ಯಾಖ್ಯಾನವಿದೆ. ಆಗಾಗ ಯುದ್ಧಗಳಾಗಿ ಪುರುಷರು ಮರಣಹೊಂದಿ ಮಹಿಳೆಯರು ವಿಧವೆ ಅವರ ಅನಾಥ ಮಕ್ಕಳು ನಿರ್ಗತಿಕರಾದಾಗ ಈ ಮಕ್ಕಳ ಪೋಷಣೆಗಾಗಿ ಆ ವಿಧವೆಯರನ್ನು ವಿವಾಹವಾಗಲು ಪೈಗಂಬರರು ತಮ್ಮ ಅನುಯಾಯಿಗಳಿಗೆ ಬೋಧಿಸಿದರು. ಅದಕ್ಕೆ ಸಾಕಷ್ಟು ತರ್ಕಗಳನ್ನು ಒಡ್ಡಿದರು."[೨೩] ಮಹಿಳೆಯರ ಮೇಲಿನ ಶೋಷಣೆಯ ಕಾಲಗಳು ಕಾಲದಿಂದ ಕಾಲಕ್ಕೆ ಒಂದು ಪ್ರದೇಶದಿಂದ ಪ್ರದೇಶಕ್ಕೆ, ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ಬದಲಾದ ಸ್ವರೂಪವನ್ನು ಒಳಗೊಳ್ಳುತ್ತದೆ. ಮಹಿಳೆಯರು ಎಂದಾಕ್ಷಣ ಒಟ್ಟಂದದ ಕಲ್ಪನೆಯನ್ನು ರೂಪಿಸಿಕೊಂಡು ಹೇಳುವಂತದ್ದಾಗಿದೆ. ಒಂದು ವರ್ಗದ ಮಹಿಳಾ ಸಮಸ್ಯೆಗಳನ್ನು ಹೇಳುವುದಕ್ಕೆ ಇನ್ನುಳಿದ ಎಲ್ಲಾ ಮಹಿಳಾ ವರ್ಗದ ಮಹಿಳಾ ಸಮಸ್ಯೆಗಳನ್ನು ಗೌಣಗೊಳಿಸಲಾಗುತ್ತಿದೆ. ಒಂದೇ ದೃಷ್ಟಿಕೋನದಲ್ಲಿ ಒಂದು ವರ್ಗವನ್ನು ಕೇಂದ್ರವಾಗಿಟ್ಟು ನೋಡುವುದು ತಪ್ಪಾದ ಗ್ರಹಿಕೆಯಾಗಿದೆ.

ಧರ್ಮದ ನೆಲೆಯಲ್ಲಿ ಮಹಿಳಾ ಪ್ರಶ್ನೆಗಳೆಂದರೆ ವಿದ್ಯಾವಂತ ಮಹಿಳಾ ವರ್ಗ, ಉನ್ನತ ಅಥವಾ ಮೇಲು ಮಧ್ಯಮ ವರ್ಗದ ಮಹಿಳೆಯರ ಸಮಸ್ಯೆ ಮತ್ತು ಶೋಷಣೆಗಳನ್ನು ಒತ್ತಿ ಹೇಳಲಾಗಿದೆ. ತಳ ಸಮುದಾಯದ ಶೂದ್ರ, ದಲಿತ, ಗ್ರಾಮೀಣ, ಬುಡಕಟ್ಟು ಮಹಿಳೆಯರ ಹಸಿವು, ಬಡತನದ ಬವಣೆ ಅಲ್ಲಿನ ಮೇಲ್ವರ್ಗದವರಿಂದ ತುಳಿಯಲ್ಪಟ್ಟವರ ಶೋಷಣೆಯ ನೆಲೆಗಳು, ಈ ಅಕ್ಷರಸ್ಥ ಸಮುದಾಯದ ಮಹಿಳೆಯರು ದಕ್ಕಿಸಿಕೊಳ್ಳುವಲ್ಲಿ ವಿಫಲರಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಕುಟುಂಬದಲ್ಲಿಯೇ ಲಿಂಗ ತಾರತಮ್ಯವನ್ನು ಎಸಗುತ್ತಲೇ ಮಹಿಳೆಯನ್ನು ಎರಡನೇ ದರ್ಜೆಯವಳಾಗಿ ನೋಡಲಾಗಿದೆ. ಅವಳ ಶಿಕ್ಷಣ-ಬೌದ್ಧಿಕತೆಯನ್ನು ಮೊಟಕುಗೊಳಿಸಲಾಗಿದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಅಧೀನವಾಗಿಯೇ ನಡೆಸಿಕೊಳ್ಳುವಂತಹದ್ದು ಮತ್ತು ಗಂಡಿನ ಭೋಗದ ವಸ್ತುವನ್ನಾಗಿ ಕಾಣುವಂತಹದ್ದು ಇಂದಿಗೂ ಮುಂದುವರೆದುಕೊಂಡು ಬಂದಿರುವುದನ್ನು ನಾವು ಕಾಣುತ್ತೇವೆ. ಮಹಿಳೆಯರಲ್ಲಿ ಆಯ್ಕೆ ಪ್ರಶ್ನೆ ಬಂದಾಗಲೂ ಸಹಿತ ಅವಳ ಆಸೆ ಆಕಾಂಕ್ಷೆಗಳಿಗೆ ಬೆಲೆಕೊಡದೆ ಅವಳು ಯಾವ ಕೆಲಸ ಮಾಡಬೇಕು, ಯಾವುದನ್ನು ಆಯ್ಕೆ ಮಾಡಿಕೊಂಡರೆ ಅವಳಿಗೆ ಒಪ್ಪುತ್ತದೆ ಅಂತಲೂ ಅಥವಾ ಆಕೆಗೆ ಕೆಲಸ ನಿಭಾಯಿಸಲು ಸಮರ್ಥಳಿಲ್ಲ ಎಂಬುದನ್ನು ಈ ಪುರುಷ ಪ್ರಧಾನ ವ್ಯವಸ್ಥೆಯೇ ನಿರ್ಧರಿಸುತ್ತದೆ.

"ಯಾವುದೇ ಪುರುಷ ಪ್ರಧಾನ ವ್ಯವಸ್ಥೆಯು ರೂಪಿಸಿದ ಅತಿಯಶಸ್ವಿ ಆದರ್ಶವೆಂದರೆ ಪತಿವ್ರತಾ ಧರ್ಮವೇ ಇರಬೇಕು. ಹೆಣ್ಣಿಗೆ ಸ್ತ್ರೀಧರ್ಮ ಪತಿವ್ರತಾ ಧರ್ಮದ ಬಗ್ಗೆ ಮನದಟ್ಟಾಗುವಂತೆ ಸತಿತ್ವದ ನಿಯಮಗಳನ್ನು ಅವಳ ಆಂತರೀಕ ಗುಣದಲ್ಲೆ ಅಳವಡಿಸಲು ಯತ್ನಿಸಲಾಯಿತು. ಈ ನಿಯಮವನ್ನು ರೂಪಿಸ ಹೊರಟ ಮೇಲ್ಜಾತಿಯ, ಅದರಲ್ಲೂ ಮುಖ್ಯವಾಗಿ ಬ್ರಾಹ್ಮಣ ಪುರುಷ ಪ್ರಧಾನ ವ್ಯವಸ್ಥೆ ಪತಿವ್ರತಾ ಧರ್ಮವನ್ನು ಮಹಿಳೆ ಒಪ್ಪುವಂತೆ ಅಷ್ಟೇ ಅಲ್ಲಾ ಅದನ್ನೊಂದು ಆದರ್ಶವನ್ನಾಗಿ ಸ್ವೀಕರಿಸುವಂತೆ ಪತಿ ನಿಷ್ಠೆಯೇ ಸ್ತ್ರೀತ್ವದ ಆತ್ಯಂತಿಕ ಮೌಲ್ಯವೆಂದು ಆ ಮೂಲಕ ಪುರುಷ ಪ್ರಧಾನವನ್ನು ಪೋಷಿಸಿ ಮುಂದುವರೆಸಿಕೊಂಡು ಬರುವಂತೆ ಮಾಡಲಾಯಿತು. ತನ್ನ ಲೈಂಗಿಕತೆಯ ನಿಯಂತ್ರಣಕ್ಕಾಗಿ ಹಾಗೂ ಅಧೀನತೆಯನ್ನು ಹೇರಲಿಕ್ಕಾಗಿ ಪತಿವ್ರತಾ ಧರ್ಮ ಹುಟ್ಟಿದ್ದು ಎಂಬುದನ್ನು ಮಹಿಳೆಯೇ ಮರೆತು ಬೀಡುವಷ್ಟು ಅದು ಸಹಜೀಕರಣಗೊಳಿಸಲಾಯಿತು. ಇದಾದ ನಂತರ ಜೈವಿಕ ಮಹಿಳೆ ಮಾಯವಾದಳು."[೨೪] ಮಹಿಳೆ ಸಹಜವಾಗಿಯೇ ಒಪ್ಪಿಕೊಳ್ಳುವಂತೆ ಹಾಗೂ ಈ ನಿಯಮಗಳು ಪ್ರಕೃತಿ ಸಹಜವೆಂಬಂತೆ ಬಿಂಬಿಸಲಾಗಿದೆ. ಯಾವುದೊ ಒಂದು ಸಮಾಜ ವ್ಯವಸ್ಥೆ ನಿರ್ದೇಶಿಸುವ ಎಲ್ಲಾ ನಿಯಮಗಳು ಸರಿ ಎಂಬಂತೆ ಬಿಂಬಿಸಲಾಗಿದೆ ಮತ್ತು ಒಪ್ಪಿಸಲಾಗಿದೆ. ಈ ನಿಯಮಗಳನ್ನು ಯಾವುದೇ ರೀತಿಯಿಂದ ಮುರಿಯುವ ಕೆಲಸವನ್ನು ಮಾಡಹೊರಟರೆ ಅವರನ್ನು ಇನ್ನಿಲ್ಲದಂತೆ ಶಿಕ್ಷಿಸುವ ಮತ್ತು ಆ ಸಮಾಜದಿಂದ ಹೊರಗಿಡುವ ಯತ್ನವನ್ನು ಮಾಡಲಾಗಿದೆ. ಜೊತೆಗೆ ಉಳಿದೆಲ್ಲಾ ಸಮುದಾಯಗಳ ನಿಯಮಗಳು ಇದೇ ಆಗಿವೆ. ಇದರ ಹೊರತಾಗಿ ಬೇರೆ ನಿಯಮವೇ ಇಲ್ಲವೆಂಬಷ್ಟು ಸಹಜತೆಯನ್ನು ಈ ಒಂದು ಸಮಾಜವು ರೂಪಿಸಲಾಗಿದೆ. ಹಾಗಾಗಿ ಎಲ್ಲ ವರ್ಗದ, ಜಾತಿಯ ಮಹಿಳೆಯರು ಇದೇ ನಿಯಮವನ್ನು ಅಂದರೆ ಪತಿವ್ರತೆ ಧರ್ಮವನ್ನು ಅನುಕರಣೆ ಮಾಡುವಂತೆ ಮಾಡಲಾಗಿದೆ.

"ಪುರುಷ ಕೇಂದ್ರಿತ ಯೋಚನೆಯ ಕ್ರಮ ಚಾಲ್ತಿಗೆ ಬಿಡುವ ಮೌಲ್ಯ ಹೆಂಗಸರನ್ನು ಹೇಗೆ ಒಡೆಯುತ್ತದೆಂಬುದಕ್ಕೆ ಕಲ್ಪನೆಯನ್ನೇ ನೋಡಬಹುದು. ಹೆಂಗಸಿನ ಅವನತಿಯೊಂದಿಗೆ ಬಲವಾಗಿ ಬೆಳೆದ ಕಲ್ಪನೆ ಇದಾಗಿದೆ. ಆರ್ಥಿಕ, ಸಾಮಾಜಿಕ, ರಾಜಕೀಯ ಸ್ವಾತಂತ್ರ್ಯ ಪ್ರಾಮುಖ್ಯತೆ ಹೆಂಗಸಿಗಿದ್ದ

ವಸಾಹತುಶಾಹಿ ಪೂರ್ವದ ಘಾನಾದಲ್ಲಿ ವ್ಯಭಿಚಾರ ಸಾಧಿತವಾದರೆ ಗಂಡಸು ಮಹಿಳೆಯ ಗಂಡನಿಗೆ ದಂಡಕೊಡಬೇಕಾಗಿತ್ತು. ಇಂಥದೊಂದು ಸ್ಥಿತಿಗೆ ಬದಲಾಗಿ ಬಹುತೇಕ ಸಮಾಜಗಳಲ್ಲಿ ಪಾವಿತ್ರ್ಯ ಹೆಂಗಸಿನ ಮೌಲ್ಯವಾಯಿತು."[೨೫] ಸ್ತ್ರೀ-ಪುರುಷರ ನಡುವಿನ ಲಿಂಗತಾರತಮ್ಯಕ್ಕೆ ಪಾವಿತ್ರತೆ ಎಂಬ ಕಲ್ಪನೆ ಹೇಗೆ ಕಾರ್ಯ ನಿರ್ವಹಿಸುತ್ತದೆ. ಎಂಬುವದನ್ನಿಲ್ಲಿ ಹೇಳಲಾಗಿದೆ. ಹೆಂಗಸನ್ನು ಆಳುವ ಮತ್ತು ತುಳಿಯುವ ಪ್ರವೃತ್ತಿಯಿಂದ ಗಂಡಸು ಹಾಗೂ ದಾಸ್ಯ ಮತ್ತು ಕೀಳರಿಮೆಯ ಪ್ರವೃತ್ತಿಯಿಂದ ಹೆಂಗಸು ಮುಕ್ತವಾಗಬೇಕಿದೆ.

ಸಂವಿಧಾನದಲ್ಲಿ ಸಮಾನತೆಯನ್ನು ಹೇಳುತ್ತಲೆ ಇರುವಾಗ, ಮಹಿಳೆಯರ ಸಮಸ್ಯೆಗಳು ನ್ಯಾಯಾಲಯದ ಮೆಟ್ಟಿಲೇರಿದಾಗ ಏಕೆ ಆಯಾ ಆಯಾ ಧರ್ಮದ ಸುಪರ್ಧಿಗೆ ಒಪ್ಪಿಸಿ ಹಿಂದಕ್ಕೆ ಸರಿಯುವಂತಹ ಕೆಲಸ ಮಾಡುತ್ತದೆ. ಈ ನ್ಯಾಯಾಂಗವು ಅಡ್ಡಗೋಡೆಯ ಮೇಲೆ ದೀವಿಗೆಯನ್ನಿರಿಸಿ ತಟಸ್ಥವಾಗುತ್ತದೆ. ಇದೇ ಭಾರತದ ಏಕರೂಪತೆಯನ್ನು ಮತ್ತು ಸಮಾನತೆಯನ್ನ ಒಳಗೊಂಡಿರುವ ಸಂವಿಧಾನವೆಂದಾದರೆ, ಮಹಿಳೆಯರ ಸಮಸ್ಯೆಗಳಿಗೆ ನ್ಯಾಯ ಒಂದೇ ಆಗ ಬೇಕಲ್ಲವೇ?. ನ್ಯಾಯಾಂಗವು ಮಹಿಳೆಯರ ಮೇಲೆ ಯಾಕೀ ತರತಮ ನೀತಿಯನ್ನು ಅನುಸರಿಸುತ್ತದೆ?.

ಕೊನೆಟಿಪ್ಪಣಿಗಳು

೧. ನೀಲಾ ಕೆ., ನೆಲದ ಪಿಸುಮಾತು, ಪುಟ-೬೭-೬೮
೨. ಗಾಯಿತ್ರಿ ಎನ್., ಸಂಚಲ, ಪುಟ-೧೬
೩. ಚಂದ್ರಮತಿ ಸೋಂದಾ, ಆಟಕ್ಕು ಉಂಟು ಲೆಕ್ಕಕ್ಕೂ ಉಂಟು, ಪುಟ-೩೦
೪. ದು.ಸರಸ್ವತಿ (ಸಂ)., ನೀರದಾರಿ, ಪುಟ-೨೧೯
೫. ಸಾ.ರಾ.ಅಬೂಬಕರ್, ಸಾಹಿತ್ಯಕ್ಕೊಂದು ದಾರಿ ದೀಪ, ಪುಟ-೮೫
೬. ನೀಲಾ ಕೆ., ಬಾಳಕೌದಿ, ಪುಟ-೧೧೯-೧೨೦
೭. ಎಚ್.ಎಸ್.ಅನುಪಮಾ, ಹೆಣ್ಣು ಸಂಕರ ಕಾಲದ ಆತ್ಮಪ್ರಜ್ಞೆ, ಪುಟ-೫೧-೫೨
೮. ಗೌರಿಲಂಕೇಶ್, ಕಂಡಹಾಗೆ, ಪುಟ-೫೭
೯. ಸಾ.ರಾ. ಅಬೂಬಕ್ಕರ್, ಸಾಹಿತ್ಯಕ್ಕೊಂದು ದಾರಿದೀಪ, ಪುಟ-೧೦೬
೧೦. ಗಾಯತ್ರಿ ಎನ್., ಸಂಚಲ, ಪುಟ-೧೬
೧೧. ಶಶಿಕಲಾ ಎಸ್.ಡಿ. (ಸಂ)., ವಿಜಯಾದಬ್ಬೆ, ಸಮಗ್ರಸಾಹಿತ್ಯ, ಪುಟ-೩೬೪
೧೨. ನೀಲಾ ಬಾಳಕೌದಿ ಕೆ., ಪುಟ-೧೧೯
೧೩. ಗಾಯತ್ರಿ ಎನ್., ಸಂಚಲ, ಪುಟ-೭೮
೧೪. ಅನುಪಮಾ ಎಚ್.ಎಸ್., ಹೆಣ್ಣು: ಸಂಕರಕಾಲದ ಆತ್ಮಪ್ರಜ್ಞೆ, ಪುಟ-೪೯
೧೫. ಸಾ.ರಾ, ಅಬೂಬಕ್ಕರ್, ಸಾಹಿತ್ಯ ಸಂಸ್ಕೃತಿ ಮತ್ತು ಮಹಿಳೆ, ಪುಟ-೨೦೪
೧೬. ಇಂದಿರಾ, ಮಹಿಳೆ ಸಮಾಜ ಮತ್ತು ಸಂಸ್ಕೃತಿ ಪುಟ-೫೧
೧೭. ಅದೇ ಪುಟ-೫೯
೧೮. ಸಾ.ರಾ, ಅಬೂಬಕ್ಕರ್, ಸಾಹಿತ್ಯ ಸಂಸ್ಕೃತಿ ಮತ್ತು ಮಹಿಳೆ, ಪುಟ-೨೨೦
೧೯. ನೀಲಾ ಕೆ., ಬಾಳಕೌದಿ, ಪುಟ-೧೪೭

೨೦. ಓಲ್ಗಾ, ಕುಟುಂಬ ವ್ಯವಸ್ಥೆ: ಮಾರ್ಕ್ಸ್‌ವಾದ-ಸ್ತ್ರೀವಾದ, ಪುಟ-೬೪
೨೧. ಶೃತಿ ಜಿ.ಎಂ., ಮಹಿಳಾ ಶೋಷಣೆ, ಪುಟ-೭೦
೨೨. ಅನುಸೂಯ ಕಾಂಬಳೆ., ವಿಚಾರ ಸಾಹಿತ್ಯ ಮತ್ತು ಹೆಣ್ಣು, ಪುಟ-೭
೨೩. ಸಾ.ರಾ, ಅಬೂಬಕ್ಕರ್, ಸಾಹಿತ್ಯಕ್ಕೊಂದು ದಾರಿದೀಪ, ಪುಟ-೨೫೧
೨೪. ಸುನಂದ ಎಂ., ನಿಷೇಧಗಳು ಮತ್ತು ಲಿಂಗ ವ್ಯವಸ್ಥೆ, ಪುಟ-೨೬
೨೫. ವಿಜಯಾ ದಬ್ಬೆ, ಸ್ತ್ರೀವಾದ ಮತ್ತು ಸ್ತ್ರೀ ವಿಮರ್ಶೆ, ಪುಟ-೭೬

ಅಧ್ಯಾಯ - ಹನ್ನೊಂದು

ಸಮಾರೋಪ

ಅಧ್ಯಾಯ – ಹನ್ನೊಂದು

ಸಮಾರೋಪ

ಕನ್ನಡ ಮಹಿಳಾ ವಿಚಾರ ಸಾಹಿತ್ಯ : ಮಹಿಳಾ ಪ್ರಶ್ನೆಗಳು ಎಂಬ ವಿಷಯವನ್ನು ಸಂಶೋಧನೆಗೆ ಆಯ್ದುಕೊಂಡಿದ್ದು, ಪ್ರಸ್ತುತ ಸಮಾಕಾಲೀನ ತಲ್ಲಣಗಳನ್ನು ಮಹಿಳಾ ವಿಚಾರ ಸಾಹಿತ್ಯದ ಪರಿದಿಯೊಳಗೆ ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ. ಕನ್ನಡ ಸಾಹಿತ್ಯ ಪರಂಪರೆಯು ಆದಿಕಾಲದಿಂದಲೂ ವೈಚಾರಿಕತೆಯನ್ನು ತನ್ನೊಳಗೆ ಮಿಳಿತಗೊಳಿಸಿಕೊಂಡೇ ಬಂದಿದೆ. ವಿಚಾರ ಸಾಹಿತ್ಯ ಒಂದು ಪ್ರಕಾರವಾಗಿ ಪ್ರತ್ಯೇಕತೆಯನ್ನು ಪಡೆದುಕೊಂಡಿರುವುದು ಸುಮಾರು ೨೦ನೆಯ ಶತಮಾನದಲ್ಲಿ. ಅಲ್ಲಿಯವರೆಗೂ ಸೃಜನಶೀಲ ಸಾಹಿತ್ಯದ ಮೂಲಕವೇ ವೈಚಾರಿಕ ಸಾಹಿತ್ಯವನ್ನು ಕಾಣಬಹುದು. ವಿಚಾರ ಸಾಹಿತ್ಯವು ಸಮಾಜದಲ್ಲಿ ನಡೆದ ಮತ್ತು ನಡೆಯುತ್ತಿರುವಂತಹ ವಿಷಯಗಳನ್ನೊಳಗೊಂಡು ಅದಕ್ಕೆ ಪ್ರತಿಕ್ರಿಯೆಯನ್ನು ನೀಡುತ್ತಲೇ ಸಾಗಿದೆ.

ಎಪ್ಪತ್ತರ ದಶಕದ ಕಾಲಘಟ್ಟದ ಸಂದರ್ಭದಲ್ಲಿ ನಡೆದ ಹಲವಾರು ಹೋರಾಟಗಳು, ಚಳುವಳಿಯ ಮೂಲಕ ಅನೇಕ ಚಿಂತಕರು ಸಮಾಜದಲ್ಲಿನ ಅಸಮಾನತೆ, ಶೋಷಣೆಗಳ ವಿರುದ್ಧ ಪ್ರತಿಭಟಿಸಿರುವುದನ್ನು ಕಾಣುತ್ತೇವೆ. ಅದೇ ಕಾಲಕ್ಕೆ ಮಹಿಳಾ ಚಳುವಳಿಯು ತನ್ನ ಅಸ್ತಿತ್ವವನ್ನು ಆರಂಭ ಮಾಡಿದ್ದನ್ನೂ ಸಹ ಕಾಣಬಹುದು. ಸ್ತ್ರೀವಾದಿ ಚಿಂತಕಿಯರು ಎಪ್ಪತ್ತರ ದಶಕದಲ್ಲಿ ಮಹಿಳಾ ವಿಮೋಚನೆಗಾಗಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡರು. ಸ್ತ್ರೀವಾದಿ ಸಾಹಿತ್ಯವು ಪುರುಷ ಪ್ರಧಾನ ಸಮಾಜವು ಮಹಿಳೆಯರ ಮೇಲೆ ನಡೆಸುತ್ತಿದ್ದ ಶೋಷಣೆ, ಲೈಂಗಿಕ ದೌರ್ಜನ್ಯ, ಲಿಂಗತಾರತಮ್ಯ ಇವುಗಳನ್ನು ಪ್ರತಿಭಟಿಸುವ ಸಲುವಾಗಿಯೇ ರಚನೆಯಾದವು. ಇದೇ ಸಂದರ್ಭದಲ್ಲಿ ಸೃಜನಶೀಲ ಸಾಹಿತ್ಯವಾದ ಕಥೆ, ಕಾದಂಬರಿ, ನಾಟಕ ಇವುಗಳ ಮೂಲಕ ಯಜಮಾನ್ಯ ಸಂಸ್ಕೃತಿಯ ವಿರುದ್ಧ ಪ್ರತಿರೋಧವನ್ನು ಅಭಿವ್ಯಕ್ತಿಸಿರುವುದು ಕಾಣಬಹುದು. ಬಹುಮುಖ್ಯವಾಗಿ ಮಹಿಳೆಯರ ಸಮಸ್ಯೆಗಳನ್ನು ಮತ್ತು ಅವುಗಳನ್ನು ಮಹಿಳೆ ಹೇಗೆ ಧಿಕ್ಕರಿಸಿ ಪುರುಷ ಪ್ರಧಾನ ಸಮಾಜದ ಸಾರ್ವತ್ರಿಕ ಕಟ್ಟಳೆಗಳಾದ ದೇವರು, ಧರ್ಮ, ಸಂಪ್ರದಾಯ ಆಚರಣೆಗಳನ್ನು ಮುರಿಯುವ ಪ್ರಯತ್ನವನ್ನು ಅಲ್ಲಿಯ ಮುಖ್ಯ ಪಾತ್ರಗಳ ಮೂಲಕ ಚಿತ್ರಿಸಲಾಗಿದೆ.

ಮಾತೃಪ್ರಧಾನ ಕುಟುಂಬ ವ್ಯವಸ್ಥೆಯಿಂದ ಪುರುಷ ಪ್ರಧಾನ ಕುಟುಂಬ ವ್ಯವಸ್ಥೆಗೆ ಬದಲಾದಾಗಿನಿಂದ ಮಹಿಳೆಯನ್ನು ಭೋಗದವಸ್ತು, ಪುರುಷನ ಸೇವೆಗೆ ಮಾತ್ರ ಸೀಮಿತವಾದವಳು ಎನ್ನುವಂತಹ ಅಧೀನ ನೆಲೆಯಲ್ಲಿಯೇ ಮಹಿಳೆಯನ್ನು ನೋಡಲಾಗಿದೆ. ಮನುಧರ್ಮಶಾಸ್ತ್ರವು ಹೇಳಿರುವಂತೆ ಸ್ತ್ರೀ ಸ್ವಾತಂತ್ರ್ಯಕ್ಕೆ ಅರ್ಹಳಲ್ಲ ಎಂಬುದನ್ನ ಚಾಚೂತಪ್ಪದೆ ಈ ಸಮಾಜವು ಪಾಲಿಸಿಕೊಂಡೆ ಬಂದಿದೆ. ಹೀಗಾಗಿ ಹಿಂದಿನಿಂದಲೂ ಮಹಿಳೆಯನ್ನು ಶಿಕ್ಷಣದಿಂದ ವಂಚಿತಳನ್ನಾಗಿ ಮಾಡಲಾಯಿತು. ಎಲ್ಲದರ ವಿರುದ್ಧ ಮಹಿಳಾ ವಿಚಾರ ಸಾಹಿತ್ಯವು ಪ್ರತಿಭಟಿಸುತ್ತಾ, ಪರ್ಯಾಯ ಮಾರ್ಗವನ್ನು ಹುಡುಕಿಕೊಳ್ಳುವ ಮತ್ತು ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಪ್ರೇರಣೆ ನೀಡಿದೆ.

ಸಮಕಾಲೀನ ಸಂದರ್ಭದಲ್ಲಿ ಕೋಮುವಾದ ಮತ್ತು ಮೂಲಭೂತವಾದವು ಉತ್ತುಂಗದ ಸ್ಥಿತಿಯನ್ನು ತಲುಪುತ್ತಿದೆ. ಇದರ ಭಾಗವಾಗಿ ಮಂದಿರ ಮಸೀದಿ, ಚರ್ಚುಗಳ ಮೇಲೆ ವಿಧ್ವಂಸಕ ಕೃತ್ಯಗಳನ್ನು ನಡೆಸುವ ಮಾದರಿಗಳು ನಮ್ಮ ಮುಂದಿವೆ. ಧರ್ಮ ಮತ್ತು ಧಾರ್ಮಿಕತೆಯ ನೆಪವೊಡ್ಡಿ ದಲಿತರು, ಮಹಿಳೆಯರು ಮತ್ತು ದಮನಿತರ ಬದುಕಿನ ಮೇಲೆ ಆಕ್ರಮಣಗಳು ನಡೆಯುತ್ತಿವೆ. ಈ ಎಲ್ಲಾ ಕುತಂತ್ರಗಳ ಹಿಂದೆ ವೈದಿಕಶಾಹಿಯ ಪ್ರಭಾವವಿರುವುದು ಸ್ಪಷ್ಟವಾಗುತ್ತದೆ.

ಆರಂಭದ ಸ್ತ್ರೀವಾದವು ಮೇಲ್ವರ್ಗದ ಮಹಿಳೆಯರ ಸಮಸ್ಯೆಗಳನ್ನೇ ಎಲ್ಲಾ ವರ್ಗದ ಮಹಿಳೆಯರ ಸಮಸ್ಯೆಗಳೆಂದು ಭಾವಿಸಿ ಅವುಗಳಿಗೆ ಪರ್ಯಾಯ ಮಾರ್ಗವನ್ನು ಹುಡುಕುವ ಪ್ರಯತ್ನವನ್ನು ಮಾಡಿವೆ. ಸ್ತ್ರೀವಾದ ಮತ್ತು ಮಹಿಳಾ ಚಳುವಳಿಗಳು ತಳಸಮುದಾಯದ ಮಹಿಳೆಯರನ್ನು ತಲುಪುವಲ್ಲಿ ವಿಫಲವಾದುದ್ದನ್ನೂ ಇಲ್ಲಿ ಗಮನಿಸಬಹುದಾದ ಮುಖ್ಯ ಅಂಶವಾಗಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಮಹಿಳಾ ವಿಚಾರ ಸಾಹಿತ್ಯವು ಕೇವಲ ಒಂದು ವರ್ಗದ ಮಹಿಳಾ ಸಮುದಾಯವನ್ನು ಪ್ರತಿನಿಧಿಸದೆ, ಸಮಾಜದ ಎಲ್ಲಾ ವರ್ಗ, ಜಾತಿಯ ಮಹಿಳೆಯರನ್ನೊಳಗೊಂಡು ವಿಚಾರ ಸಾಹಿತ್ಯ ರಚನೆಯಾಗಿದೆ. ಪುರುಷ ಪ್ರಧಾನ ಸಮಾಜದಲ್ಲಿ ಇದುವರೆಗೂ ಇದ್ದ ಮೌಲ್ಯಗಳನ್ನು ಮುರಿದು ಕಟ್ಟುವ ಪ್ರಯತ್ನವನ್ನು ಈ ವಿಚಾರ ಸಾಹಿತ್ಯವು ಮಾಡಿದೆ. ಮಹಿಳಾ ಚಿಂತಕಿಯರು ಪುರುಷ ಪ್ರಧಾನ ಸಮಾಜದ ವಿರುದ್ಧ, ಬಂಡವಾಳಶಾಹಿ, ಪುರೋಹಿತಶಾಹಿ ವ್ಯವಸ್ಥೆಯ ವಿರುದ್ಧ ಪ್ರತಿರೋಧವನ್ನೊಡ್ಡಿದ್ದಾರೆ. ಇಲ್ಲಿ ಬರುವ ಮಹಿಳಾ ಚಿಂತಕಿಯರು ಭಿನ್ನ ನೆಲೆಯಿಂದ ಬಂದವರಾಗಿದ್ದಾರೆ. ಕೆಲವರು ಚಳುವಳಿಯ ಹಿನ್ನೆಲೆಯಿಂದ ಬಂದವರಾದರೆ ಇನ್ನೂ ಕೆಲವರು ಅಕಾಡೆಮಿಕ್ ವಲಯದಿಂದ ಬಂದವರಾಗಿದ್ದಾರೆ. ಹೀಗಾಗಿ ಮಹಿಳಾ ಪ್ರಶ್ನೆಗಳನ್ನು ಚರ್ಚೆ ಮಾಡುವ ಸಂದರ್ಭದಲ್ಲಿ ಭಿನ್ನ ಆಯಾಮಗಳಿಂದ ಚರ್ಚೆಗಳು ನಡೆದಿವೆ.

ಪ್ರಸ್ತುತ ಸಮಾಜದಲ್ಲಿ ಮಹಿಳೆಗೆ ಶಿಕ್ಷಣವಿದ್ದಾಗಲೂ ಸಹ ಅವಳಿಗೆ ಸಿಗಬೇಕಾದ ಮೂಲಭೂತ ಹಕ್ಕನ್ನು ಕಿತ್ತುಕೊಳ್ಳಲಾಗುತ್ತಿದೆ. ಧರ್ಮದ ನೆಲೆಯೊಳಗೆ ಇನ್ನಿಲ್ಲದಂತೆ ಶೋಷಣೆ ಮಾಡಲಾಗುತ್ತಿದೆ.

ಸನಾತನ ಮೂಲಭೂತವಾದಿಗಳು ಮಹಿಳೆಯ ಅಸ್ತಿತ್ವವನ್ನೆ ಕಸಿದುಕೊಳ್ಳುವ ಹುನ್ನಾರ ಪ್ರತೀ ಹಂತದಲ್ಲಿಯು ನಡೆಯುತ್ತಿದೆ ಎನ್ನುವುದನ್ನು ವಿಚಾರ ಸಾಹಿತ್ಯದ ಮೂಲಕ ಚರ್ಚೆಮಾಡಿದೆ. ಜಾತಿ, ಧರ್ಮದ ಕಟ್ಟಳೆಗಳನ್ನು ಮೀರಿ ತನ್ನ ಅಸ್ಮಿತೆಯನ್ನ ಉಳಿಸಿಕೊಳ್ಳುವ ಪ್ರಯತ್ನ ನಿರಂತರವಾಗಿ ನಡೆದಿದೆ. ಮಹಿಳೆಯ ಅಸ್ತಿತ್ವವನ್ನು ಯಾವುದೋ ಒಂದು ಕ್ಷೇತ್ರದ ಮೂಲಕ ಉಳಿಸಿಕೊಳ್ಳುವ ಪ್ರಯತ್ನ ಮಾಡದೆ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ, ಉದ್ಯೋಗ, ಇವುಗಳಲ್ಲಿ ಮಹಿಳೆ ತನ್ನ ಅಸ್ತಿತ್ವವನ್ನು ಕಂಡುಕೊಳ್ಳುವ ಪ್ರಯತ್ನ ಸಾಗಿದೆ.

ಪುರುಷ ಪ್ರಧಾನ ಸಮಾಜದೊಳಗೆ ಮಹಿಳೆ ಅತ್ಯಾಚಾರ, ಲೈಂಗಿಕ ದೌರ್ಜನ್ಯ, ವರದಕ್ಷಿಣೆ ಹೀಗೆ ಅನೇಕ ರೀತಿಯ ಶೋಷಣೆಗೆ ಒಳಗಾದಾಗ ಎಷ್ಟೋ ಸಂದರ್ಭದಲ್ಲಿ ತನಗೆ ಸಿಗಬೇಕಾದ ನ್ಯಾಯದಿಂದ ವಂಚಿತಳಾಗಿದ್ದಾಳೆ. ಅದರಲ್ಲೂ ದಲಿತ ಮತ್ತು ಮುಸ್ಲಿಂ ಮಹಿಳೆಯರ ಸ್ಥಿತಿ ಚಿಂತಾಜನಕವಾದುದು. ದಲಿತ ಮಹಿಳೆ ದಲಿತಳು ಎನ್ನುವ ಕಾರಣಕ್ಕಾಗಿಯೇ ಅವಳಿಗೆ ಸಿಗಬೇಕಾದ ನ್ಯಾಯದಿಂದ ವಂಚಿತಳಾಗಿರುವುದನ್ನು ದಾಖಲಿಸಿದೆ. ಮಹಿಳೆಗೆ ಸಿಕ್ಕಿದ ಅನ್ಯಾಯದ ತೀರ್ಪುಗಳ ವಿರುದ್ಧ ಹೋರಾಡಿ ಗೆಲುವು ಸಾಧಿಸಿದನ್ನ ಮಹಿಳಾ ವಿಚಾರ ಸಾಹಿತ್ಯವು ಚರ್ಚೆ ಮಾಡಿದೆ.

ಆಧುನಿಕ ಜಾಗತೀಕರಣದ ಸಂದರ್ಭದಲ್ಲಿ ಮಹಿಳೆಯನ್ನು ಸರಕು ಸಂಸ್ಕೃತಿಯ ಮೂಲಕ ಅಳೆಯಲಾಗುತ್ತಿದೆ. ಬಂಡವಾಳಶಾಹಿ ವ್ಯವಸ್ಥೆಯು ಹೆಣ್ಣಿನ ದೇಹವನ್ನೇ ಬಂಡವಾಳವನ್ನಾಗಿಸಿಕೊಂಡು ಮಾರುಕಟ್ಟೆಯ ಮುಖ್ಯ ಸರಕನ್ನಾಗಿಸಿದೆ. ಅಲ್ಲದೆಯೆ ಹೆಣ್ಣಿನ ದೇಹ ಸೌಂದರ್ಯವನ್ನು ಜಾಗತೀಕ ಮಾರುಕಟ್ಟೆಯಲ್ಲಿ ಪ್ರದರ್ಶನಕ್ಕಿಟ್ಟಿರುವುದನ್ನು ಮಹಿಳಾ ವಿಚಾರ ಸಾಹಿತ್ಯ ಅತ್ಯಂತ ಗಂಭೀರವಾಗಿ ಚರ್ಚಿಸಿದೆ. ಹಾಗೆಯೆ ಜಾಗತೀಕರಣದ ಪ್ರಭಾವ ಮಹಿಳೆಯರ ಮೇಲೆ ಯಾವ ರೀತಿಯ ಪರಿಣಾಮವನ್ನು ಉಂಟುಮಾಡಿದೆ? ಅದರಿಂದ ಮಹಿಳೆಯು ಅನುಭವಿಸುತ್ತಿರುವ ತಲ್ಲಣಗಳೇನು? ಇದರಿಂದಾಗಿ ಬಡಕುಟುಂಬಗಳು ಹೇಗೆ ನಲುಗುತ್ತಿವೆ? ಕುಟುಂಬದೊಳಗಿನ ಹೆಣ್ಣು ಮಗುವು ಏನೆಲ್ಲಾ ಸಂಕಷ್ಟಕ್ಕೆ ಸಿಲುಕಿದೆ ಈ ಎಲ್ಲಾ ಪ್ರಶ್ನೆಗಳನ್ನು ಮಹಿಳಾ ವಿಚಾರ ಸಾಹಿತ್ಯವು ಚರ್ಚಿಸಿದೆ.

ಕನ್ನಡ ಮಹಿಳಾ ವಿಚಾರ ಸಾಹಿತ್ಯದಲ್ಲಿ ಬರುವ ಅನೇಕ ಲೇಖಕಿಯರು ಸೃಜನಶೀಲ ಸಾಹಿತ್ಯವನ್ನು ರಚಿಸಿದ್ದಾರೆ. ವಿಚಾರ ಸಾಹಿತ್ಯದ ರಚನೆಯಲ್ಲಿ ನಿರೂಪಣಾ ಶೈಲಿಯಲ್ಲಿಯೂ ಕಥಾ ಮಾದರಿಯನ್ನೊಳಗೊಂಡಿದೆ. ಇಲ್ಲಿ ಮಹಿಳಾ ಚಿಂತಕಿಯರು ಮಹಿಳಾ ಪ್ರಶ್ನೆಯನ್ನು ವೈಯಕ್ತಿಕ ನೆಲೆಗಿಂತ ಸಾರ್ವತ್ರಿಕ ನೆಲೆಯಲ್ಲಿ ಚರ್ಚಿಸಿದ್ದಾರೆ. ಮಹಿಳೆಯರನ್ನು ಪ್ರತ್ಯೇಕಿಸದೆ ಸಂಘಟಿಸುವ ಇಲ್ಲವೆ ಚಳುವಳಿಯ ಮಾದರಿಯ ಆಲೋಚನೆಯ ಮುಖೇನ ಮಹಿಳಾ ಪ್ರಶ್ನೆಗಳನ್ನು ಚರ್ಚಿಸಿದ್ದಾರೆ. ಹಾಗಾಗಿ ಪ್ರಸ್ತುತ ಸಂಶೋಧನಾ ಮಹಾಪ್ರಬಂಧದಲ್ಲಿ ಕನ್ನಡ ಮಹಿಳಾ ವಿಚಾರ ಸಾಹಿತ್ಯವು ಗ್ರಹಿಸಿರುವ ಮಹಿಳಾ ಪ್ರಶ್ನೆಗಳನ್ನು ಅಧ್ಯಯನದ ಅನುಕೂಲಕ್ಕಾಗಿ ಹನ್ನೊಂದು ಅಧ್ಯಾಯಗಳನ್ನಾಗಿ ವಿಂಗಡಿಸಿ, ಹಲವು ಆಯಾಮಗಳಲ್ಲಿ ಆಧ್ಯಯನ ಮಾಡಲಾಗಿದೆ.

ಫಲಿತಗಳು:

೧. ಕನ್ನಡ ಮಹಿಳಾ ವಿಚಾರ ಸಾಹಿತ್ಯದಲ್ಲಿ ಮಹಿಳಾ ಪ್ರಶ್ನೆಯ ಹಲವು ನಾನಾ ಮುಖಗಳ ಚರ್ಚೆಗಳಿವೆ. ಆ ಚರ್ಚೆಯ ವಿಶ್ಲೇಷಣೆಯು ಘಟನಾ ರೂಪದಲ್ಲಿವೆ. ಆದರೆ ಆ ಚರ್ಚೆಯು ಒಂದು ಪ್ರಶ್ನೆಯನ್ನು ಕುರಿತ ಹಾಗೆ ಇರುವುದಿಲ್ಲ. ಮಹಿಳೆಗೆ ಸಂಬಂಧಿಸಿದ ರಾಜಕೀಯ ಪ್ರಶ್ನೆ, ಸಾಮಾಜಿಕ ಪ್ರಶ್ನೆಯೂ ಅವಳ ಖಾಸಗಿ ಪ್ರಶ್ನೆಯೂ ಆಗಿದೆ. ಆದ್ದರಿಂದ ಮಹಿಳಾ ವಾದವು ಮಹಿಳೆಯ ಅತ್ಯಂತ ಖಾಸಗಿ ತನವು ರಾಜಕೀಯವಾದುದು ಎಂದು ಹೇಳಲಾಗುತ್ತದೆ. ಆದ್ದರಿಂದ ಕನ್ನಡ ಮಹಿಳಾ ವಿಚಾರ ಸಾಹಿತ್ಯದಲ್ಲಿ ಮಹಿಳೆಯರ ನಿರ್ದಿಷ್ಟ ಪ್ರಶ್ನೆಯನ್ನು ಚರ್ಚೆ ಮಾಡುತ್ತಿದ್ದರೂ ಸಹ ಆ ಪ್ರಶ್ನೆಯನ್ನು ಧಾರ್ಮಿಕ, ಶೈಕ್ಷಣಿಕ, ಆರ್ಥಿಕ ಪ್ರಶ್ನೆಗಳಾಗಿ ಚರ್ಚಿಸಲಾಗಿದೆ.

೨. ಕನ್ನಡ ಮಹಿಳಾ ವಿಚಾರ ಸಾಹಿತ್ಯದಲ್ಲಿ ಮಹಿಳೆಯರ ಅನೇಕ ಪ್ರಶ್ನೆಗಳನ್ನು ವಿಶ್ಲೇಷಿಸಿ, ವ್ಯಾಖ್ಯಾನಿಸಲಾಗಿದೆ. ಪರಿಹಾರವನ್ನೂ ಸೂಚಿಸಲಾಗಿದೆ. ಆದರೆ ಬೇರೆ ಬೇರೆ ಚಿಂತಕಿಯರು ಪರಿಹಾರ ಸೂಚಿಸುವಾಗ ಬೇರೆ ಬೇರೆ ಬಗೆಯಲ್ಲಿ ಸೂಚಿಸಿದ್ದಾರೆ. ಕಾರಣ ಆ ಪ್ರಶ್ನೆಯು ಪ್ರಾದೇಶಿಕವಾಗಿ ಭಿನ್ನತೆಯನ್ನು ಹೊಂದಿರುತ್ತದೆ. ಕಾರಣ ಕನ್ನಡ ಮಹಿಳಾ ವಿಚಾರ ಚಿಂತಕಿಯರು ಬೇರೆ ಬೇರೆ ಸಿದ್ಧಾಂತದ ಹಿನ್ನೆಲೆಯಿಂದ ಬಂದವರಾದ್ದರಿಂದ ಹಲವು ಆಯಾಮಗಳಲ್ಲಿ ಪರಿಹಾರವನ್ನ ಹೇಳಲಾಗಿದೆ.

೩. ಮಹಿಳಾ ವಿಚಾರ ಸಾಹಿತ್ಯವು ಸಾಮಾಜಿಕ ಚಲನೆಗೆ ಮತ್ತು ಬದಲಾವಣೆಗೆ ಅಡ್ಡಿಯಾಗಿರುವ ಎಲ್ಲಾ ಬಗೆಯ ಗೊಡ್ಡು ನಂಬಿಕೆ ಹಾಗೂ ಆಚರಣೆಗಳನ್ನು ಗುರುತಿಸಿ ಅವುಗಳಿಂದ ಸಮಾಜದಲ್ಲಿ ನಡೆಯುತ್ತಿರುವ ಅನೇಕ ಅಮಾನುಷ ಕೃತ್ಯಗಳನ್ನು ಎಳೆ ಎಳೆಯಾಗಿ ಬಿಚ್ಚಿಡುತ್ತದೆ. ಮತ್ತು ಅನೇಕ ವಿಚಾರಗಳನ್ನು ವಿಮರ್ಶಿಸಿ ಆವುಗಳಿಗೆ ಪ್ರತಿರೋಧವನ್ನು ವ್ಯಕ್ತಪಡಿಸುತ್ತದೆ. ಆ ಮೂಲಕ ಸಾಮಾಜಿಕ ಪರಿಸರದಲ್ಲಿ ಬದಲಾಗಬೇಕಾದ ಅನೇಕ ಸಂಗತಿಗಳನ್ನು ಮಹಿಳೆಯ ಬದುಕಿಗೆ ಅವಶ್ಯಕವಾದ ಪರ್ಯಾಯ ಮಾರ್ಗಗಳ ಆಲೋಚನೆಗಳ ಮಂಥನವನ್ನೇ ಮಹಿಳಾ ವಿಚಾರ ಸಾಹಿತ್ಯ ನೀಡುತ್ತದೆ.

೪. ಯಾವುದೇ ಧರ್ಮವು ಗತಕಾಲದಿಂದಲೂ ಮಹಿಳೆಯನ್ನ ಎರಡನೇ ದರ್ಜೆಯ ಪ್ರಜೆಯನ್ನಾಗಿ ನೋಡಲಾಗಿದೆ. ಪುರುಷ ನಿರ್ಮಾಣಿತ ಆಚರಣೆ, ಸಂಪ್ರದಾಯವನ್ನು ಮೀರಿ ಬದುಕನ್ನು ಕಟ್ಟಿಕೊಳ್ಳುವ ಪ್ರಯತ್ನ ಮಾಡುವಂತೆ ಮಹಿಳಾ ವಿಚಾರ ಸಾಹಿತ್ಯವು ಪ್ರೇರೆಪಿಸುತ್ತದೆ. ಉದಾಹರಣೆಗೆ ಎನ್. ಗಾಯಿತ್ರಿ ಅವರ 'ಸತಿ ಅಮಾನವೀಯ ಸಂಸ್ಕೃತಿಯ ಸಂಕೇತ' ಎಂಬ ಲೇಖನದಲ್ಲಿ ಗುರುತಿಸಿದ್ದಾರೆ.

೫. ಕನ್ನಡ ಮಹಿಳಾ ವಿಚಾರ ಸಾಹಿತ್ಯದಲ್ಲಿ ಮಹಿಳಾ ಪ್ರಶ್ನೆಯು ಬಹುರೂಪಿಯಾದ ಆಯಾಮದಲ್ಲಿ ಚರ್ಚಿತವಾಗಿದೆ. ಒಂದೇ ಪ್ರಕರಣವನ್ನು ಭಿನ್ನ ಮಾದರಿಗಳಲ್ಲಿ ಚರ್ಚಿಸಲಾಗಿದೆ. ಉದಾಹರಣೆಗೆ ಮಹಿಳೆಯರ ಮಾರಾಟದ ಸಮಸ್ಯೆಯನ್ನು ಬೇರೆ ಬೇರೆ ನೆಲೆಯಲ್ಲಿ ವಿಶ್ಲೇಷಿಸಲಾಗಿದೆ.

೬. ಮಹಿಳಾ ಚಳುವಳಿಗಳು ಮತ್ತು ಮಹಿಳಾ ಹೋರಾಟಗಳು ಮೇಲ್ ಮಧ್ಯಮ, ಮಧ್ಯಮ ವರ್ಗದ ಮಹಿಳಾ ಸಮುದಾಯವನ್ನು ಮಾತ್ರ ತಲುಪಲು ಸಾಧ್ಯವಾಗಿತ್ತು. ಆದರೆ ದಲಿತ ಮಹಿಳೆಯನ್ನು ತಲುಪಲು ಸಾಧ್ಯವಾಗಿಲ್ಲ. ಹಾಗೆಯೇ ಮಹಿಳಾ ಹೋರಾಟಗಳು ಸಂಪೂರ್ಣವಾಗಿ ಯಶಸ್ವಿಗೊಳ್ಳಬೇಕಾದರೆ ತಳ ಸಮುದಾಯದ ಕೊನೆಯ ಮಹಿಳೆಯವರೆಗೂ ತಲುಪಿದಾಗ ಮಾತ್ರ ಸಾಧ್ಯವಾಗುತ್ತದೆ ಎಂಬುದು ಮಹಿಳಾ ವಿಚಾರ ಚಿಂತಕಿಯರ ನಿಲುವಾಗಿದೆ.

೭. ಕನ್ನಡ ಮಹಿಳಾ ವಿಚಾರ ಸಾಹಿತ್ಯದಲ್ಲಿ ಮಹಿಳಾ ಪ್ರಶ್ನೆಯನ್ನು ಎರಡು ಮಾದರಿಯಲ್ಲಿ ಚರ್ಚಿಸಲಾಗಿದೆ. ಶೈಕ್ಷಣಿಕ ವಲಯದಿಂದ ಬಂದ ಲೇಖಕಿಯರು ತಮ್ಮ ಸಾಹಿತ್ಯದ ಆಕರಗಳ ಮೂಲಕ ಪ್ರತಿಭಟಿಸಿದರೆ, ಚಳುವಳಿಯ ಹಿನ್ನೆಲೆಯಿಂದ ಬಂದ ಲೇಖಕಿಯರು ಕೇಸ್ ಸ್ಟಡೀಸ್ ಮತ್ತು ಸಂಶೋಧನಾಧಾರಿತವಾಗಿ ಮಹಿಳಾ ಪ್ರಶ್ನೆಯನ್ನು ಚರ್ಚಿಸಿದ್ದಾರೆ.

೮. ಕನ್ನಡ ಮಹಿಳಾ ವಿಚಾರ ಸಾಹಿತ್ಯದಲ್ಲಿ ಬರುವ ಸ್ತ್ರೀವಾದಿ ಲೇಖಕಿಯರು ಲಿಂಗತಾರತಮ್ಯವಿಲ್ಲದ, ಸಮಾನತೆಯ ಸಮಾಜ ನಿರ್ಮಾಣದ ಕನಸನ್ನು ಇಟ್ಟುಕೊಂಡ ಚಿಂತನೆಯನ್ನು ಹೊಂದಿದ್ದಾರೆ. ಅಂತಹ ಸಮಾಜದ ಕಲ್ಪನೆಗಾಗಿ ನಡೆಸುವ ಚಳುವಳಿಗಳು ಕೇವಲ ಮಹಿಳೆಯರಿಂದ ಮಾತ್ರ ನಡೆಯದೆ ಪುರುಷರೂ ಒಳಗೊಂಡಂತಿರಬೇಕು ಎಂಬ ನಿಲುವನ್ನು ಹೊಂದಿದ್ದಾರೆ. ಮಹಿಳೆಯರ ವಿಮೋಚನೆ ಕೇವಲ ಮಹಿಳೆಯರಿಂದ ಮಾತ್ರವಲ್ಲ ಪುರುಷನೂ ಸಹ ಭಾಗಿಯಾದಾಗ ಇದು ಸಾಧ್ಯವಾಗುತ್ತದೆ ಎಂಬದು ವಿಚಾರ ಚಿಂತಕಿಯರ ನಿಲುವಾಗಿದೆ.

೯. ಸಮಾಜದಲ್ಲಿ ಮಹಿಳೆಯನ್ನ ನೋಡುವ ನೋಟಕ್ರಮ ಬದಲಾಗಬೇಕು. ದೇಹ ಮೂಲದಿಂದಲೇ ಮಹಿಳೆಯನ್ನ ನೋಡುವುದರಿಂದಾಗಿ ಸಮಾಜದಲ್ಲಿ ಎಲ್ಲಾ ಬಗೆಯ ಶೋಷಣೆಗಳಿಗೆ ಒಳಗಾಗಿದ್ದಾಳೆ ಎನ್ನುವುದನ್ನು ಈ ವಿಚಾರ ಸಾಹಿತ್ಯವು ಗ್ರಹಿಸಿದೆ. ಹೆಣ್ಣಿನ ಬಗ್ಗೆ ಇರುವಂತಹ ಸಾಮಾಜಿಕ ನೋಟಕ್ರಮ ಬದಲಾಗದ ಹೊರತು ಮಹಿಳೆಯರ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಬೆಳವಣಿಗೆ ಹಾಗೂ ಬದಲಾವಣೆ ಎಂದಿಗೂ ಸಾಧ್ಯವಿಲ್ಲ. ಆ ಕಾರಣಕ್ಕೆ ಮಹಿಳೆಯರ ಸಾಮಾಜಿಕ ಸ್ಥಾನಮಾನ ಸುಧಾರಣೆಯಾಗಬೇಕೆಂಬುದು ಕನ್ನಡ ಮಹಿಳಾ ವಿಚಾರ ಚಿಂತಕಿಯರ ಸ್ಪಷ್ಟ ನಿಲುವಾಗಿದೆ.

ಅನುಬಂಧಗಳು

* ಗ್ರಂಥಋಣ

ಗ್ರಂಥಋಣ

I. ಪ್ರಾಥಮಿಕ ಆಕರಗಳು

೧. ಅನುಪಮಾ ಎಚ್.ಎಸ್., ಮಹಿಳೆ, ಲಡಾಯಿ ಪ್ರಕಾಶನ, ಗದಗ, ೨೦೧೨

೨. ಅನುಪಮಾ ಎಚ್.ಎಸ್., ಹೆಣ್ಣು, ಲಡಾಯಿ ಪ್ರಕಾಶನ, ಗದಗ, ೨೦೧೩

೩. ಅನುಪಮಾ ಎಚ್. ಎಸ್., ಅಭಿವ್ಯಕ್ತಿ ಸ್ವಾತಂತ್ರ್ಯ, ಲಡಾಯಿ ಪ್ರಕಾಶನ, ಗದಗ, ೨೦೧೩

೪. ಅನುಪಮಾ ಎಚ್. ಎಸ್., ನೋಯುವ ಹಲ್ಲಿಗೆ ಹೊರಳುವ ನಾಲಿಗೆ, ಸೃಷ್ಟಿ ಪಬ್ಲಿಕೇಷನ್, ಬೆಂಗಳೂರು, ೨೦೧೪

೫. ಅನುಪಮಾ ಎಚ್. ಎಸ್., ಮುಳ್ಳಮೇಲಿನ ಸೆರಗು, ಲಡಾಯಿ ಪ್ರಕಾಶನ, ಗದಗ, ೨೦೧೪

೬. ಅನುಸೂಯ ಕಾಂಬಳೆ. (ಸಂ), ವಿಚಾರ ಸಾಹಿತ್ಯ ಮತ್ತು ಹೆಣ್ಣು, ವೈಚಾರಿಕ ಸಾಹಿತ್ಯ ಪ್ರಕಾಶನ ರಾಯಭಾಗ, ೧೯೯೯

೭. ಅವಧಿಗಾಗಿ ಅಭಿನವ., ಹೇಳತೇವ ಕೇಳ...., ಅಭಿನವ, ಬೆಂಗಳೂರು, ೨೦೧೩

೮. ಅಬೂಬಕ್ಕರ್ ಸಾರಾ., ಲೇಖನಗುಚ್ಛ, ಚಂದ್ರಗಿರಿ ಪ್ರಕಾಶನ, ಮಂಗಳೂರು, ೧೯೯೭

೯. ಅಬೂಬಕ್ಕರ್ ಸಾರಾ., ಅನಾವರಣ, ಚಂದ್ರಗಿರಿ ಪ್ರಕಾಶನ, ಮಂಗಳೂರು, ೨೦೦೧

೧೦. ಅಬೂಬಕ್ಕರ್ ಸಾರಾ., ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

೧೧. ಅಬೂಬಕ್ಕರ್ ಸಾರಾ., ಚಿಂತೆ-ಚಿಂತನೆ, ಚಂದ್ರಗಿರಿ ಪ್ರಕಾಶನ, ಮಂಗಳೂರು, ೨೦೧೨

೧೨. ಅಬೂಬಕ್ಕರ್ ಸಾರಾ., ಸಾಹಿತ್ಯಕ್ಕೊಂದು ದಾರಿದೀಪ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೨

೧೩. ಆಶಾದೇವಿ ಎಂ.ಎಸ್., ಸ್ತ್ರೀಮತವನುತ್ತರಿಸಲಾಗದೆ?, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೨೦೦೬

೧೪. ಆಶಾದೇವಿ ಎಂ.ಎಸ್., ನಡುವೆ ಸುಳಿವ ಆತ್ಮ, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ, ೨೦೧೧

೧೫. ಆಶಾದೇವಿ ಎಂ.ಎಸ್., ನಾರೀಕೇಳಾ, ಪ್ರಜಾವಾಣಿ ಪ್ರಕಾಶನ, ಬೆಂಗಳೂರು, ೨೦೧೬

೧೬. ಇಂದಿರಾ ಎಸ್., ಮಹಿಳೆ ಮತ್ತು ಸವಾಲುಗಳು, ಶೃತಿಲೋಕ ಪ್ರಕಾಶನ, ಮೈಸೂರು, ೨೦೧೦

೧೭. ಕವಿತಾ ರೈ., ಅರಿವಿನ ನಡೆ, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೭

೧೮. ಕುಮಾರ್ ಬುರುಡಿಕಟ್ಟಿ. (ಸಂ), ಗೌರಿಹೂವು ಗೌರಿ ಲಂಕೇಶ್ ಬದುಕು-ಬರಹ, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ, ೨೦೧೭

೧೯. ಗಾಯಿತ್ರಿ ಎನ್., ಮಹಿಳಾ ಚಳುವಳಿಯ ಮಜಲುಗಳು, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೮

೨೦. ಗಾಯಿತ್ರಿ ಎನ್., ಆಯ್ದ ಸಂಪಾದಕೀಯ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೫

೨೧. ಗಾಯಿತ್ರಿ ಎನ್., ಸಂಚಲ, ಮಾ-ಲೆ ಪ್ರಕಾಶನ, ಬೆಂಗಳೂರು, ೨೦೧೦

೨೨. ಗಾಯಿತ್ರಿ ಎನ್., ಮಹಿಳಾ ಮೀಸಲಾತಿ ಮತ್ತು ಲಿಂಗರಾಜಕಾರಣ, ಲಡಾಯಿ ಪ್ರಕಾಶನ, ಗದಗ, ೨೦೧೨

೨೩. ಗೌರಿ ಲಂಕೇಶ್., ಕಂಡಹಾಗೆ ಸಂಗ್ರಹ-೧, ಲಂಕೇಶ ಪ್ರಕಾಶನ, ಬೆಂಗಳೂರು, ೨೦೦೯

೨೪. ಗೌರಿ ಲಂಕೇಶ್., ಕಂಡಹಾಗೆ ಸಂಗ್ರಹ-೨, ಲಂಕೇಶ ಪ್ರಕಾಶನ, ಬೆಂಗಳೂರು, ೨೦೧೦

೨೫. ಗೌರಿ ಲಂಕೇಶ್., ಕಂಡಹಾಗೆ ಸಂಗ್ರಹ-೩, ಲಂಕೇಶ ಪ್ರಕಾಶನ, ಬೆಂಗಳೂರು, ೨೦೧೧

೨೬. ಚಂದ್ರಮತಿ ಸೋಂದಾ., ಆಟಕ್ಕೂ ಉಂಟು ಲೆಕ್ಕಕ್ಕೂ ಉಂಟು, ಸಾಹಿತ್ಯ ನಂದನ, ಬೆಂಗಳೂರು, ೨೦೧೨

೨೭. ಚಂದ್ರಮತಿ ಸೋಂದಾ., ನಾರಿಬಾವ, ಸಾಹಿತ್ಯ ನಂದನ, ಬೆಂಗಳೂರು, ೨೦೦೯

೨೮. ತಾರಿಣಿ ಶುಭದಾಯಿನಿ, ಗಳಿಗೆ ಬಟ್ಟಲು, ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೧೨

೨೯. ತಾರಿಣಿ ಶುಭದಾಯಿನಿ(ಸಂ), ಆಧುನಿಕ ಕನ್ನಡ ಮಹಿಳಾ ವಿಚಾರ ಸಾಹಿತ್ಯಚರಿತ್ರೆ ಸಂಪುಟ-೭, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಾಪುರ, ೨೦೧೩

೩೦. ತಾರಿಣಿ ಶುಭದಾಯಿನಿ, ಸಾಮಯಿಕ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೩

೩೧. ದಂಡಪ್ಪ ಎಚ್ (ಸಂ), ಜಾಗತೀಕ ವಿಚಾರ ಸಾಹಿತ್ಯ, ಕುವೆಂಪು ಭಾಷಾ ಪ್ರಾಧಿಕಾರ, ಬೆಂಗಳೂರು, ೨೦೧೭

೩೨. ಧರಣಿದೇವಿ ಮಾಲಗತ್ತಿ., ಸ್ತ್ರೀವಾದ ಮತ್ತು ಭಾರತೀಯತೆ, ಚೇತನ ಬುಕ್ ಹೌಸ್, ಮೈಸೂರು, ೧೯೯೮

೩೩. ಧರಣಿದೇವಿ ಮಾಲಗತ್ತಿ., ಇಳೆಯ ಕಣ್ಣು, ರೂಪ ಪ್ರಕಾಶನ, ಮೈಸೂರು, ೨೦೧೦

೩೪. ಧರಣಿದೇವಿ ಮಾಲಗತ್ತಿ., ಸಾಹಿತ್ಯ ವಾಣಿಜ್ಯ ಮತ್ತು ಮಹಿಳಾ ಪ್ರಜ್ಞೆ, ಸಿರಾ ಪಬ್ಲಿಷಿಂಗ್ ಹೌಸ್,ಬೆಂಗಳೂರು, ೨೦೧೧

೩೫. ಧರಣಿದೇವಿ ಮಾಲಗತ್ತಿ., ದಹರಾಕಾಶ, ರೂಪ ಪ್ರಕಾಶನ, ಮೈಸೂರು, ೨೦೧೨

೩೬. ನಾಗವೇಣಿ ಎಚ್., ಸೂರ್ಯನಿಗೊಂದು ವೀಳ್ಯ, ಪ್ರೇಜಸ ಪ್ರಕಾಶನ, ಬೆಂಗಳೂರು, ೨೦೧೧

೩೭. ನಾಗಮಣಿ ಎಸ್.ರಾವ್., ಸ್ತ್ರೀಪಥ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೨

೩೮. ನೀಲಾ ಕೆ., ಬದುಕು ಬಂದೀಖಾನೆ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಬೆಂಗಳೂರು, ೨೦೦೧

೩೯. ನೀಲಾ ಕೆ., ನೆಲದ ಪಿಸುಮಾತು, ಚಿಂತನ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೦೯

೪೦. ನೀಲಾ ಕೆ., ಜ್ಯೋತಿಯೊಳಗಣ ಕಾಂತಿ, ಚಿಂತನ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೦೯,

೪೧. ನೀಲಾ ಕೆ., ಬಾಳ ಕೌದಿ, ಪಲ್ಲವ ಪ್ರಕಾಶನ, ಚನ್ನಪಟ್ಟಣ-೨೦೧೪

೪೨. ನೇಮಿಚಂದ್ರ., ಮಹಿಳಾ ಅಧ್ಯಯನ, ಅಂಕಿತ ಪುಸ್ತಕ, ಬೆಂಗಳೂರು-೨೦೧೧

೪೩. ಪ್ರೀತಿ ಶುಭಚಂದ್ರ., ಸೃಜನೆಯ ಮೂಡು, ರೂಪ ಪ್ರಕಾಶನ, ಮೈಸೂರು, ೨೦೦೭

೪೪. ಪ್ರೀತಿ ಶುಭಚಂದ್ರ., ಎಂ.ಎನ್. ಸುಮನಾ, ಸಾಕಾರದತ್ತ ಸಮಾನತೆಯ ಕನಸು, ಲಡಾಯಿ ಪ್ರಕಾಶನ, ಗದಗ, ೨೦೧೫

೪೫. ಪೂರ್ಣಿಮಾ. ಆರ್., ಮಣ್ಣಿನ ಕಣ್ಣು, ವಿಕಾಸ ಪ್ರಕಾಶನ, ಬೆಂಗಳೂರು, ೨೦೧೩

೪೬. ಬಾನು ಮುಷ್ತಕ್., ಇಬ್ಬನಿಯ ಕಾವು, ಲಡಾಯಿ ಪ್ರಕಾಶನ, ಗದಗ, ೨೦೧೩

೪೭. ಬಾನು ಮುಷ್ತಕ್., ಹೂ ಕಣಿವೆಯ ಚಾರಣ, ಹಾಡ್ಲಹಳ್ಳಿ ಪಬ್ಲಿಕೇಷನ್ಸ್, ಹಾಸನ, ೨೦೧೫
೪೮. ಮಂಜುಳಾ ಸಿ, ಜಿ., ಮಾತುಕತೆ, ವಿಕಾಸನ ಪ್ರಕಾಶನ, ಬೆಂಗಳೂರು, ೨೦೧೩
೪೯. ಮೀನಾಕ್ಷಿ ಬಾಳಿ., ಕತ್ತಲಂಚಿನ ಕಿಡಿಗಳು, ಚಿಂತನಾ ಪ್ರಕಾಶನ, ಬೆಂಗಳೂರು, ೨೦೧೦
೫೦. ಮೀನಾಕ್ಷಿ ಬಾಳಿ., ಮನದ ಸೂತಕ ಹಿಂಗಿದೊಡೆ,
೫೧. ವಸುಮಳಲಿ., ಒಡಲ ಬೆಂಕಿ ಆರದಿರಲಿ, ಚಿಂತನ ಪುಸ್ತಕ, ಬೆಂಗಳೂರು, ೨೦೧೫
೫೨. ವಸುಮಳಲಿ., ಗಡಿಗಳು ಗೋಡೆಗಳೇ? ಬನಶಂಕರಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಮೈಸೂರು, ೨೦೧೬
೫೩. ವಿಜಯಶ್ರೀ ಸಬರದ., ಮಹಿಳೆ ಶೋಷಣೆ–ಸವಾಲುಗಳು, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೫
೫೪. ವಿಜಯಾ., ಸುದ್ದಿ ಕನ್ನಡಿ, ಇಳಾ ಪ್ರಕಾಶನ, ಬೆಂಗಳೂರು, ೨೦೦೨
೫೫. ವಿಜಯಾ., ಚಿತ್ತ ಕೆತ್ತಿದ ಚಿತ್ರ, ನಾಕುತಂತಿ ಪ್ರಕಾಶನ, ಬೆಂಗಳೂರು, ೨೦೧೬
೫೬. ವಿಜಯಾ., ನುಡಿರಂಗೋಲಿ, ನಾಕುತಂತಿ ಪ್ರಕಾಶನ, ಬೆಂಗಳೂರು, ೨೦೧೭
೫೭. ವಿಜಯಾದಬ್ಬೆ., ನಾರಿ: ದಾರಿ–ದಿಗಂತ, ರಚನಾ ಪ್ರಕಾಶನ, ಬೆಂಗಳೂರು, ೧೯೯೪
೫೮. ವಿಜಯಾ ದಬ್ಬೆ,. ಮಹಿಳೆ ಮತ್ತು ಮಾನವತೆ, ಶ್ರೀಮತಿ ಯಶೋಧಾ ರಾಗೌ ಟ್ರಸ್ಟ್, ಬೆಂಗಳೂರು, ಮೈಸೂರು, ೨೦೦೩
೫೯. ವಿನಯಾ ಒಕ್ಕುಂದ., ಭಾರತೀಯ ಮಹಿಳಾ ವಿಚಾರ ಸಾಹಿತ್ಯ. ಕುವೆಂಪು ಭಾಷಾ ಪ್ರಾಧಿಕಾರ, ಬೆಂಗಳೂರು, ೨೦೧೭
೬೦. ವಿನಯಾ ಒಕ್ಕುಂದ., ಅನುದಿನದ ದಂದುಗ, ಪ್ರಗತಿ ಪ್ರಕಾಶನ, ಮೈಸೂರು, ೨೦೧೭
೬೧. ವಿನಂಯಾ ಒಕ್ಕುಂದ., ಉಡಿಯಕ್ಕಿ, ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೧೮
೬೨. ಶಶಿಕಲಾ ಎಸ್.ಡಿ. (ಸಂ), ವಿಜಯಾನ್ವೇಷಣೆ, ಅಭಿನವ ಪ್ರಕಾಶನ, ಬೆಂಗಳೂರು, ೨೦೦೪
೬೩. ಶ್ರೀದೇವಿ ಕೆರೆಮನೆ., ಪ್ರೀತಿ ಎಂದರೇ ಇದೇನಾ?, ಅನಿಕೇತನ ಪ್ರಕಾಶನ, ಮಾನಸ ಗಂಗೋತ್ರಿ, ಮೈಸೂರು, ೨೦೧೦
೬೪. ಶ್ರೀದೇವಿ ಕೆರೆಮನೆ., ಹೆಣ್ತನದ ಆಚೆ–ಈಚೆ, ಕುಕ್ಕೆಶ್ರೀ ಪ್ರಕಾಶನ, ಬೆಂಗಳೂರು, ೨೦೧೩
೬೫. ಶ್ರೀದೇವಿ ಕೆರೆಮನೆ., ಉರಿವ ಉಡಿ, ವಿಸ್ಮಯ ಪಬ್ಲಿಕೇಷನ್ಸ್, ಬೆಂಗಳೂರು, ೨೦೧೪
೬೬. ಶ್ರೀದೇವಿ ಕೆರೆಮನೆ., ಮನದಾಳದ ಮಾತು, ನುಡಿ ಪುಸ್ತಕ, ಬೆಂಗಳೂರು, ೨೦೧೬
೬೭. ಶ್ರೀದೇವಿ ಕೆರೆಮನೆ., ವರ್ತಮಾನದ ಉಯ್ಯಾಲೆ, ಪ್ರಗತಿ ಪ್ರಕಾಶನ, ಮೈಸೂರು, ೨೦೧೭
೬೮. ಶ್ರೀದೇವಿ ವಿ. ಆಲೂರ., ಮಹಿಳಾ ಅಸ್ತಿತ್ವದ ಹುಡುಕಾಟ, ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ, ಗುಲ್ಬರ್ಗ, ೨೦೧೦
೬೯. ಶ್ರೀಮತಿ ಎಚ್.ಎಸ್. (ಸಂ), ಸೇರಿಕೊಂಡ ಎಳೆಗಳು, ಸಿ.ವಿ.ಜಿ. ಪ್ರಕಾಶನ, ಬೆಂಗಳೂರು, ೨೦೦೩
೭೦. ಶ್ರೀಮತಿ ಎಚ್.ಎಸ್. (ಸಂ), ಹೆಣ್ಣು–ಹೆಂಗಸು, ಬ್ಯಾಲದಕೆರೆ ಪ್ರಕಾಶನ, ಬ್ಯಾಲದಕೆರೆ, ೨೦೦೪
೭೧. ಶ್ರೀಮತಿ ಎಚ್, ಎಸ್., ಹೆಣ್ಣುಬರೆಹದ ಒಳಬಂಡಾಯ, ಪ್ರಗತಿ ಗ್ರಾಫಿಕ್ಸ್ ಬೆಂಗಳೂರು, ೨೦೧೦

೭೨. ಶ್ರೀಮತಿ ಎಚ್.ಎಸ್., ಸ್ತ್ರೀವಾದ: ಆನ್ವಯಿಕತೆ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, ೨೦೧೨
೭೩. ಶ್ರೀಮತಿ ಎಚ್, ಎಸ್., ಸ್ತ್ರೀವಾದ: ತಾತ್ತ್ವಿಕತೆ ಪ್ರಗತಿ ಗ್ರಾಫಿಕ್ಸ್ ಬೆಂಗಳೂರು, ೨೦೧೨
೭೪. ಷರೀಫಾ ಕೆ., ಮುಸ್ಲಿಮ್ ಸಂವೇದನೆ, ಅಂಕಿತ ಪುಸ್ತಕ ಬೆಂಗಳೂರು, ೨೦೧೧
೭೫. ಷರೀಫಾ ಕೆ., ಅಮ್ಮ ಮತ್ತು ಯುದ್ಧ, ಹೊನ್ನಾರು ಪ್ರಕಾಶನ, ತಿಪಟೂರು, ೨೦೧೩
೭೬. ಸರಸ್ವತಿ.ದು.(ಸಂ), ನೀರದಾರಿ, ಕವಿ ಪ್ರಕಾಶನ, ಕವಲಕ್ಕಿ, ೨೦೧೪
೭೭. ಸಬಿಹಾ ಭೂಮಿಗೌಡ., ಮಹಿಳೆ ಸಂಘಟನೆ ಹೋರಾಟ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೮
೭೮. ಸಬಿಹಾ ಭೂಮಿಗೌಡ.(ಸಂ), ಸಂಸ್ಕೃತಿ ಮಹಿಳಾ ಮಾಲಿಕೆ ಸಂಪುಟ-೧, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೮
೭೯. ಸಬೀಹಾ ಭೂಮಿಗೌಡ. (ಸಂ), ನವಿಲುಗರಿ, ಲಡಾಯಿ ಪ್ರಕಾಶನ, ಗದಗ, ೨೦೧೧
೮೦. ಸಬಿಹಾ ಭೂಮಿಗೌಡ., ದಶಕದ ಮಹಿಳಾ ಸಾಹಿತ್ಯದಲ್ಲಿ ಪ್ರತಿರೋಧದ ನೆಲೆಗಳು, ಚಿಂತನ ಪುಸ್ತಕ, ಬೆಂಗಳೂರು, ೨೦೧೨
೮೧. ಸಬಿಹಾ ಭೂಮಿಗೌಡ., ಮಹಿಳೆ ಇಂದಿನ ಸವಾಲುಗಳು, ಲಡಾಯಿ ಪ್ರಕಾಶನ, ಗದಗ, ೨೦೧೪
೮೨. ಸಾವಿತ್ರಿ ಮುಜುಮದಾರ., ಹೆಣ್ಣು ಹೆಜ್ಜೆ, ಜನದನಿ ಪ್ರಕಾಶನ, ಅಳವಂಡಿ, ೨೦೧೪
೮೩. ಸುನಂದಮ್ಮ ಆರ್., ಸಂಗಾತಿ ರೂವ್ವ ಬರಸೇನಾ, ಕವಿ ಪ್ರಕಾಶನ, ಕವಲಕ್ಕಿ, ೨೦೧೭
೮೪. ಸುನಂದಮ್ಮ ಆರ್. (ಸಂ), ಮಹಿಳೆ-ಕಾನೂನು-ಪರಿಹಾರ, ಅಕ್ಕಮಹಾದೇವಿ ವಿಶ್ವವಿದ್ಯಾಲಯ, ವಿಜಯಪುರ, ೨೦೧೭
೮೫. ಸುಮಿತ್ರಾಬಾಯಿ ಬಿ.ಎನ್., ಬೊಗಸೆಯಲ್ಲಿ ಹೊಳೆನೀರು, ವಿಕಾಸ ಪ್ರಕಾಶನ, ೨೦೧೪
೮೬. ಸುಮಿತ್ರಾಬಾಯಿ ಬಿ.ಎನ್., ಸ್ತ್ರೀವಾದ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೬
೮೭. ಸುಮಿತ್ರಾಬಾಯಿ ಬಿ.ಎನ್.,(ಸಂ), ಸ್ತ್ರೀವಾದಿ ಪ್ರವೇಶಿಕೆ, ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು, ೧೯೯೫
೮೮. ಸುಮಿತ್ರಬಾಯಿ ಬಿ.ಎನ್., ಸಾರ್ವತ್ರಿಕದೆಡೆಗೆ, ಮಾನವ ಪ್ರಕಾಶನ, ಹಾಸನ, ೧೯೮೭
೮೯. ಸುಮಿತ್ರಬಾಯಿ ಬಿ.ಎನ್., ವಿಚಯ, ಇಳಾ ಪ್ರಕಾಶನ, ಹಾಸನ, ೧೯೯೫
೯೦. ಹೇಮಲತಾ ಮಹಿಷಿ (ಅನು)., ಮಾನವಹಕ್ಕುಗಳು, ಭಾರತೀಯ ವಿದ್ಯಾಭವನ, ಬೆಂಗಳೂರು, ೧೯೯೫
೯೧. ಹೇಮಲತಾ ಮಹಿಷಿ., ಮಹಿಳೆ ಶೋಷಣೆ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು, ೨೦೦೧
೯೨. ಹೇಮಲತಾ ಎಚ್.ಎಂ. (ಅನು), ಭಾರತದ ಮಹಿಳೆಯರ ಬದುಕು ಮತ್ತು ಹೋರಾಟ, ಸಮತಾ ಅಧ್ಯಯನ ಕೇಂದ್ರ, ಬೆಂಗಳೂರು, ೧೯೯೬.
೯೩. ಹೇಮಲತಾ ಎಚ್.ಎಂ., ಮಹಿಳಾ ಅಧ್ಯಯನ-೬, ಡಿ.ವಿ.ಕೆ. ಮೂರ್ತಿ ಪ್ರಕಾಸನ ಮೈಸೂರು, ೨೦೧೧

II. ಪೂರಕ ಆಕರಗಳು

೧. ಅನ್ನದಾನೇಶ್ ಬಿ.ಎ.(ಸಂ), ವಿಚಾರ ಸಾಹಿತ್ಯ ೨೦೧೪, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೧೬

೨. ಅಮರೇಶ ನುಗುಡೋಣಿ (ಸಂ)., -ಕಲ್ಯಾಣ ಕರ್ನಾಟಕ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೨೦೧೬

೩. ಆಬಿದಾ ಸಮೀಉದ್ದೀನ್(ಮೂಲ), ಷಾಕಿರಾ ಖಾನಂ(ಅನು),- ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಮುಸ್ಲಿಮ್ ಮಹಿಳೆಯರ ಕೊಡುಗೆ, ಚಂದ್ರಗಿರಿ ಪ್ರಕಾಶನ, ಮಂಗಳೂರು, ೨೦೧೬

೪. ಇಂದಿರಾ ಆರ್., ಸ್ತ್ರೀವಾದ ದಿಕ್ಸೂಚಿ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೭

೫. ಇಂದಿರಾ ಆರ್., ಹೊಸದಾರಿ, ಜ್ಯೋತಿ ಪ್ರಕಾಶನ, ಮೈಸೂರು, ೨೦೧೦

೬. ಇಂದಿರಾ ಜೈಪ್ರಕಾಶ್., ಸ್ತ್ರೀವಾದಿ ಮನೋವಿಜ್ಞಾನ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೭

೭. ಈರಣ್ಣ ಕೋಸಗಿ (ಸಂ)., ವಿಚಾರ ಸಾಹಿತ್ಯ ೧೯೯೬, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೭

೮. ಉಷಾ ಪಿ.ರೈ., ಆಡಿಸಿ ನೋಡು ಬೀಳಿಸಿ ನೋಡು, ಕಿರಣ್ ಬುಕ್‌ಹೌಸ್ ಡಿಸ್ಟ್ರಿಬ್ಯುಟರ್ಸ್, ಬೆಂಗಳೂರು, ೨೦೦೨

೯. ಉಷಾ ಪಿ.ರೈ., ಮಧ್ಯಂತರ, ಕಿರಣ್ ಬುಕ್‌ಹೌಸ್ ಡಿಸ್ಟ್ರಿಬ್ಯುಟರ್ಸ್, ಬೆಂಗಳೂರು, ೨೦೦೯

೧೦. ಉಷಾ ಎಂ., ಸುರುಚಿ, ಸಿವಿಜಿ ಪಬ್ಲಿಕೇಶನ್ಸ್, ಬೆಂಗಳೂರು, ೨೦೦೪

೧೧. ಉಷಾ ಎಂ., ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೪

೧೨. ಉಷಾ ಎಂ., ಮಹಿಳೆ ಮತ್ತು ಜಾತಿ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೯

೧೩. ಓಲ್ಗಾ., ಕುಟುಂಬ ವ್ಯವಸ್ಥೆ ಮಾರ್ಕ್ಸ್‌ವಾದ-ಸ್ತ್ರೀವಾದ, ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೧೦

೧೪. ಕಮಲಾ ಹಂಪನಾ., ಬೊಗಸೆ, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೩

೧೫. ಕಮಲಾ ಹಂಪನಾ., ಬೊಂಬಾಳ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೭

೧೬. ಕವಿತಾ ರೈ., ಅರಿವಿನ ನಡೆ, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೭

೧೭. ಗವೀಶ ಹಿರೇಮಠ, ಸಂಪ್ರೀತಿ (ಇಂದಿರಾ ಮಾನ್ವಿಕರ ಅಭಿನಂದನ ಗ್ರಂಥ) ಶ್ರೀಮತಿ ಇಂದಿರಾ ಮಾನ್ವಿಕರ ಅಭಿನಂದನ ಗ್ರಂಥ ಸಮಿತಿ, ಗುಲಬರ್ಗಾ, ೨೦೦೪

೧೮. ಗೌರೀಶ ಕಾಯ್ಕಿಣಿ, ಸಮಗ್ರ ಸಾಹಿತ್ಯ ಸಂಪುಟ-೧, ವಿಚಾರ-ವಿಮರ್ಶೆ, ಶ್ರೀ ರಾಘವೇಂದ್ರ ಪ್ರಕಾಶನ, ಅಂಕೋಲ, ೧೯೯೬

೧೯. ತೇಜಸ್ವಿನಿ ನಿರಂಜನ (ಸಂ)., ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಅಭಿನವ ಪ್ರಕಾಶನ, ಬೆಂಗಳೂರು, ೨೦೧೪

೨೦. ದಂಡಪ್ಪ ಎಚ್ (ಸಂ)., ಜಾಗತೀಕ ವಿಚಾರ ಸಾಹಿತ್ಯ, ಕುವೆಂಪು ಭಾಷಾ ಪ್ರಾಧಿಕಾರ, ಬೆಂಗಳೂರು, ೨೦೧೭

೨೧. ನಾರಾಯಣ ಕೆ.ವಿ. (ಸಂ), ವಿಚಾರ ಸಾಹಿತ್ಯ ೨, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೨೦೦೧

೨೨. ಪಾರ್ವತಿ ಎಚ್.ಎಸ್., ಕಿರಣ, ಸಮರ್ಥ ಪ್ರಕಾಶನ, ಬೆಂಗಳೂರು. ೨೦೦೯
೨೩. ಪ್ರತಿಭಾ ಆರ್, ದು. ಸರಸ್ವತಿ., ಮೆರವಣಿಗೆ ಹೊರಡುತ್ತೇವೆ..., ಕವಿ ಪ್ರಕಶನ, ಕವಲಕ್ಕಿ, ೨೦೧೬
೨೪. ಪ್ರಭಾಮಣಿ., ಮಹಿಳೆ ಮತ್ತು ಧರ್ಮ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೨
೨೫. ಪ್ರೀತಿ ಶುಭಚಂದ್ರ., ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨
೨೬. ಪೋತೆ.ಹೆಚ್.ಟಿ., ವಿಚಾರ ಸಾಹಿತ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬
೨೭. ಬಸವರಾಜ ಕಲ್ಗುಡಿ (ಸಂ)., ಸುವರ್ಣ ವಿಚಾರ ಸಾಹಿತ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬
೨೮. ಯಲ್ಲಪ್ಪ ಹಿಮ್ಮಡಿ., ವೈಚಾರಿಕ ಸಾಹಿತ್ಯ ಮೀಮಾಂಸೆ, ಸುಶೀಲ್ ಪ್ರಕಾಶನ, ತೆರೆದಾಳು, ೨೦೧೧
೨೯. ಯಮುನಾ ಗಾಂವ್ಕರ್., ಸುತ್ತ ಮುತ್ತ ಒಂದು ಸುತ್ತು, ಬಂಡಾಯ ಪ್ರಕಾಶನ, ಕೆರೆಕೋಣ,೨೦೧೨.
೩೦. ರಂಗಸ್ವಾಮಿ ಎ. (ಸಂ)., ರಾಷ್ಟ್ರೀಯವಾದಿ ಚಿಂತನೆ ಮತ್ತು ಮಹಿಳೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮಾನಸ ಗಂಗೋತ್ರಿ, ಮೈಸೂರು, ೨೦೧೨
೩೧. ರೂಪ ಹಾಸನ., ಮಹಿಳೆ ಮತ್ತು ಆಧುನಿಕತೆಯ ಸವಾಲುಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦
೩೨. ರೂಪ ಹಾಸನ.(ಸಂ), ಹೆಣ್ಣುಸಿರ ತಲ್ಲಣಗಳು..., ಅಭಿರುಚಿ ಪ್ರಕಾಶನ, ಮೈಸೂರು, ೨೦೧೫
೩೩. ಲಲಿತಾಂಬ ಎನ್.ಆರ್., ಸಂಪ್ರೀತಿ (ಡಾ. ಆರ್. ಲಕ್ಷ್ಮೀನಾರಾಯಣ ಅಭಿನಂದನಾ ಗ್ರಂಥ), ಪರಸ್ಪರ ಪ್ರಕಾಶನ, ಬೆಂಗಳೂರು, ೨೦೧೦
೩೪. ಲೀಲಾ ಸಂಪಿಗೆ, ಮೌನ ಸಹಗಮನ, ನೆಲೆ ಅಕಾಡೆಮಿ ಪ್ರಕಾಶನ, ಬೆಂಗಳೂರು, ೨೦೦೫
೩೫. ಲೀಲಾ ಸಂಪಿಗೆ, ಬುದ್ಧನಿಲ್ಲದ ಅಮ್ರಪಾಲಿ, ಚಾರುಮತಿ ಪ್ರಕಾಶನ, ಬೆಂಗಳೂರು, ೨೦೧೪
೩೬. ವಸಂತಲಕ್ಷ್ಮಿ (ಸಂ), ಭಾರತೀಯ ಸಂಸ್ಕೃತಿ ಮತ್ತು ಮಹಿಳೆ, ದಿ ಮಿಥಿಕ್ ಸೊಸೈಟಿ, ಬೆಂಗಳೂರು, ೨೦೦೯
೩೭. ವೀರಭದ್ರಪ್ಪ ಬಿ.ವಿ. (ಸಂ), ದೇವರನ್ನು ಕುರಿತು ಒಂದು ಬಹುಮುಖಿ ನೋಟ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫
೩೮. ವೀರಭದ್ರಪ್ಪ ಬಿ.ವಿ. (ಸಂ), ವೇದಗಳಲ್ಲಿ ಜನಸಾಮಾನ್ಯರು, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೯
೪೦. ಶಶಿಕಲಾ ಎಸ್.ಡಿ., ರೂಪ ಪ್ರತಿರೂಪ, ಉನ್ನತಿ ಪ್ರಕಾಶನ, ಮೈಸೂರು, ೨೦೧೨
೪೧. ಶಿವರಾಮ ಕಾರಂತ., ವಿಚಾರ ಸಾಹಿತ್ಯ ನಿರ್ಮಾಣ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೮
೪೨. ಶಾಂತಿನಾಥ ದಿಬ್ಬದ (ಸಂ), ವೈಚಾರಿಕ ಲೇಖನಗಳು, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೫
೪೩. ಶ್ಯಾಮಸುಂದರ ಬಿದರಕುಂದಿ (ಸಂ), ವಿಚಾರ ಸಾಹಿತ್ಯ ೧೯೯೬, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೮
೪೪. ಶ್ರೀನಿವಾಸಮೂರ್ತಿ ಕಾ.ವೆಂ. (ಸಂ), ವಿಚಾರ ಸಾಹಿತ್ಯ ೧೯೯೭–೨೦೧೦, ಪ್ರಾತಿನಿಧಿಕ ಸಂಪುಟ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೧

೪೫. ಸತೀಶ ಎಂ.ಈ., ಸ್ತ್ರೀವಾದ ಮತ್ತು ಭಾರತೀಯತೆ, ಕಾಲ ಪ್ರಕಾಶನ, ಬೆಂಗಳೂರು, ೨೦೧೨
೪೬. ಸವಿತಾ ನಾಗಭೂಷಣ, ಹೂ ಮನಸಿನ ಹೋರಾಟಗಾರ, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೧೧
೪೭. ಸುಕನ್ಯಾ ಕನಾರಳ್ಳಿ., ಹೇಳುತ್ತೇನೆ ಕೇಳ, ಲಂಕೇಶ್ ಪ್ರಕಾಶನ, ಬೆಂಳೂರು, ೨೦೧೨
೪೮. ಸುಧಾ ಮೂರ್ತಿ., ಮನದ ಮಾತು, ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು, ೨೦೦೮
೪೯. ಸುನಂದಾ ಪ್ರಕಾಶ ಕಡಮೆ., ಪಿಸುಗುಡುವ ಬೆಟ್ಟಸಾಲು, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೮
೫೦. ಸುನಂದಾ ಪ್ರಕಾಶ ಕಡಮೆ., ಪಡುವಣ ಕಡಲು, ಕನ್ನಡ ಸಂಘ ಕ್ರೈಸ್ಟ್ ಕಾಲೇಜ್, ಬೆಂಗಳೂರು, ೨೦೦೬
೫೧. ಸುಮಾ. ಬಿ.ಯು., ಸಂತೆಯೊಳಗೊಂದು ಮನೆ, ಲಡಾಯಿ ಪ್ರಕಾಶನ, ಗದಗ, ೨೦೧೫
೫೨. ಸುಮಿತ್ರಾ ಎಲ್, ಸಿ., ಹೂ ಹಸಿರಿನ ಮಾತು, ಅಂಕಿತ ಪ್ರಕಾಶನ, ಬೆಂಗಳೂರು, ೨೦೧೨
೫೩. ಸುಮಿತ್ರಾ ಎಲ್, ಸಿ., ಓದಿನ ಸುಖ, ಅಕ್ಷರ ಪ್ರಕಾಶನ ಹೆಗ್ಗೋಡು, ೨೦೧೪
೫೪. ಹಾಲತಿ ಸೋಮಶೇಖರ. (ಸಂ), ಮಹಿಳೆ ಒಂದು ಚಿಂತನೆ, ವಿಸ್ಮಯ ಪ್ರಕಾಶನ, ಮೈಸೂರು, ೨೦೧೨
೫೫. ಹಿರೇಮಠ ಎಸ್.ಎಸ್. (ಸಂ), ವಿಚಾರ ಸಾಹಿತ್ಯ, ೧೯೯೫, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೬

III. ಲೇಖನಗಳು

೧. ಅನಸೂಯ ಎಂ. ಕದಂ., ಮಹಿಳಾ ಶೋಷಣೆಯ ನೆಲೆ, ಗವೀಶ ಹಿರೇಮಠ (ಸಂ), ಸಂಪ್ರೀತಿ (ಇಂದಿರಾ ಮಾನ್ವಿಕರ ಅಭಿನಂದನ ಗ್ರಂಥ) ಶ್ರೀಮತಿ ಇಂದಿರಾಮಾನ್ವಿಕರ ಅಭಿನಂದನ ಗ್ರಂಥ ಸಮಿತಿ, ಗುಲಬರ್ಗಾ, ೨೦೦೪
೨. ಅರುಣಾ ಕಟ್ಟಿಮನಿ., ಮಹಿಳೆ ಮತ್ತು ಜಾಗತೀಕರಣ, ಸಂಪ್ರೀತಿ (ಇಂದಿರಾ ಮಾನ್ವಿಕರ ಅಭಿನಂದನ ಗ್ರಂಥ) ಶ್ರೀಮತಿ ಇಂದಿರಾಮಾನ್ವಿಕರ ಅಭಿನಂದನ ಗ್ರಂಥ ಸಮಿತಿ, ಗುಲಬರ್ಗಾ, ೨೦೦೪.
೩. ಇಂದಿರಾ ಹೆಗಡೆ., ಮಹಿಳೆ ಮತ್ತು ಸಮಾನತೆ, ಸಂಪ್ರೀತಿ (ಇಂದಿರಾ ಮಾನ್ವಿಕರ ಅಭಿನಂದನ ಗ್ರಂಥ) ಶ್ರೀಮತಿ ಇಂದಿರಾಮಾನ್ವಿಕರ ಅಭಿನಂದನ ಗ್ರಂಥ ಸಮಿತಿ, ಗುಲಬರ್ಗಾ, ೨೦೦೪
೪. ಕವಿತಾ ರೈ ಬಿ.ಆರ್., ಅಸ್ಮಿತೆಯ ಹುಡುಕಾಟ: ಉದಾರವಾದಿ ಸಾಂಸ್ಕೃತಿಕ ನೆಲೆ, ಕನ್ನಡ ಅಧ್ಯಯನ (ಸಂ), ಎ.ವಿ ನಾವಡ, ಸಂ–೧೨, ಸಂಚಿಕೆ–೧, ಜನವರಿ–ಜೂನ್ ೨೦೦೬, ಕನ್ನಡ ವಿಶ್ವವಿದ್ಯಾಲಯ. ಹಂಪಿ. ೨೦೦೬
೫. ಗಾಯತ್ರಿ ನಾವಡ., ಸ್ತ್ರೀವಿವಾದ ಪರಿಕಲ್ಪನೆ, ಸಂಪ್ರೀತಿ (ಇಂದಿರಾ ಮಾನ್ವಿಕರ ಅಭಿನಂದನ ಗ್ರಂಥ) ಶ್ರೀಮತಿ ಇಂದಿರಾ ಮಾನ್ವಿಕರ ಅಭಿನಂದನ ಗ್ರಂಥ ಸಮಿತಿ, ಗುಲಬರ್ಗಾ, ೨೦೦೪
೬. ಚೆನ್ನಕ್ಕ ಪಾವಟೆ., ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆ ಪಾತ್ರ, ಸಂಪ್ರೀತಿ (ಇಂದಿರಾ ಮಾನ್ವಿಕರ ಅಭಿನಂದನ ಗ್ರಂಥ) ಶ್ರೀಮತಿ ಇಂದಿರಾಮಾನ್ವಿಕರ ಅಭಿನಂದನ ಗ್ರಂಥ ಸಮಿತಿ, ಗುಲಬರ್ಗಾ, ೨೦೦೪

೭. ನೀಲಾ.ಕೆ., ಮಹಿಳೆಯರ ಮೇಲೆ ಹೆಚ್ಚುತ್ತಿರುವ ಅತ್ಯಾಚಾರಗಳು, ಸಂಪ್ರೀತಿ (ಇಂದಿರಾ ಮಾನ್ವಿಕರ ಅಭಿನಂದನ ಗ್ರಂಥ) ಶ್ರೀಮತಿ ಇಂದಿರಾಮಾನ್ವಿಕರ ಅಭಿನಂದನ ಗ್ರಂಥ ಸಮಿತಿ, ಗುಲಬರ್ಗಾ, ೨೦೦೪

೮. ಪ್ರೀತಿ ಶುಭಚಂದ್ರ., ಗಾಂಧಿವಾದ, ಸ್ತ್ರೀವಾದ ಮತ್ತು ಮಹಿಳೆ, (ಸಂ) ಎಂ.ಎಸ್. ಪಾಟೀಲ್, ಆಯ್ದ ವೈಚಾರಿಕ ಪ್ರಬಂಧಗಳು,

೯. ಪ್ರೇಮಾ ಸಿರ್ಸೆ., ಪುರುಷ ಪ್ರಪಂಚದಲ್ಲಿ ಸ್ತ್ರೀ, ಸಂಪ್ರೀತಿ (ಇಂದಿರಾ ಮಾನ್ವಿಕರ ಅಭಿನಂದನ ಗ್ರಂಥ) ಶ್ರೀಮತಿ ಇಂದಿರಾಮಾನ್ವಿಕರ ಅಭಿನಂದನ ಗ್ರಂಥ ಸಮಿತಿ, ಗುಲಬರ್ಗಾ, ೨೦೦೪

೧೦. ಭುವನೇಶ್ವರಿ ಹೆಗಡೆ, ಮಹಿಳೆ ಮತ್ತು ಆರ್ಥಿಕತೆ, ಸಂಪ್ರೀತಿ (ಇಂದಿರಾ ಮಾನ್ವಿಕರ ಅಭಿನಂದನ ಗ್ರಂಥ) ಶ್ರೀಮತಿ ಇಂದಿರಾ ಮಾನ್ವಿಕರ ಅಭಿನಂದನ ಗ್ರಂಥ ಸಮಿತಿ, ಗುಲಬರ್ಗಾ, ೨೦೦೪.

೧೧. ಮೀರಾ ಎಲ್.ಜಿ., ಸ್ತ್ರೀವಾದಕ್ಕೆ ಮುಜುಗರ ತರಬಲ್ಲ ಐದು ಸವಾಲುಗಳು. ಮಹಿಳಾ ಅಧ್ಯಯನ ಸಂಚಿಕೆ–೧, ಸಂ–೮, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೨. ಮೀರಾ ಎಲ್.ಜಿ., ಸ್ತ್ರೀವಾದವು ಪರಿಣಾಮಕಾರಿ ಆಗಬೇಕಾದರೆ ತನ್ನ ಹೆಸರನ್ನು ಬದಲಾಯಿಸಬೇಕೆ? ಒಂದು ಚಿಂತನೆ, ವಿಚಾರ ಸಾಹಿತ್ಯ, (ಸಂ) ಎಚ್.ಟಿ. ಪೋತೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೭.

೧೩. ಲೀಲಾದೇವಿ ಆರ್. ಪ್ರಸಾದ್., ರಾಜಕೀಯ ಕ್ಷೇತ್ರದಲ್ಲಿ ಮಹಿಳೆ, ಸಂಪ್ರೀತಿ (ಇಂದಿರಾ ಮಾನ್ವಿಕರ ಅಭಿನಂದನ ಗ್ರಂಥ) ಶ್ರೀಮತಿ ಇಂದಿರಾಮಾನ್ವಿಕರ ಅಭಿನಂದನ ಗ್ರಂಥ ಸಮಿತಿ, ಗುಲಬರ್ಗಾ, ೨೦೦೪

೧೪. ವನಜಾ ಎಸ್. ಕುಮಾರ್., ಮಹಿಳೆ ಒಂದು ಚಿಂತನೆ, ಸಂಪ್ರೀತಿ (ಇಂದಿರಾ ಮಾನ್ವಿಕರ ಅಭಿನಂದನ ಗ್ರಂಥ) ಶ್ರೀಮತಿ ಇಂದಿರಾ ಮಾನ್ವಿಕರ ಅಭಿನಂದನ ಗ್ರಂಥ ಸಮಿತಿ, ಗುಲಬರ್ಗಾ, ೨೦೦೪

೧೫. ವರದಾ ಶ್ರೀನಿವಾಸ., ಮಹಿಳಾ ವೈಚಾರಿಕತೆ ಮತ್ತು ವಿಮರ್ಶೆ, ಸಂಪ್ರೀತಿ (ಇಂದಿರಾ ಮಾನ್ವಿಕರ ಅಭಿನಂದನ ಗ್ರಂಥ) ಶ್ರೀಮತಿ ಇಂದಿರಾಮಾನ್ವಿಕರ ಅಭಿನಂದನ ಗ್ರಂಥ ಸಮಿತಿ, ಗುಲಬರ್ಗಾ, ೨೦೦೪

೧೬. ವಿಜಯಾ, ಶಾಸನ ಸಭೆಯಲ್ಲಯೂ ಸ್ತ್ರೀ ಶೋಷಣೆ, ಸಂಪ್ರೀತಿ (ಇಂದಿರಾ ಮಾನ್ವಿಕರ ಅಭಿನಂದನ ಗ್ರಂಥ) ಶ್ರೀಮತಿ ಇಂದಿರಾಮಾನ್ವಿಕರ ಅಭಿನಂದನ ಗ್ರಂಥ ಸಮಿತಿ, ಗುಲಬರ್ಗಾ, ೨೦೦೪

೧೭. ಶಾರದಾ, ಮಹಿಳೆ ಮತ್ತು ಮಾಧ್ಯಮ, ಸಂಪ್ರೀತಿ (ಇಂದಿರಾ ಮಾನ್ವಿಕರ ಅಭಿನಂದನ ಗ್ರಂಥ) ಶ್ರೀಮತಿ ಇಂದಿರಾಮಾನ್ವಿಕರ ಅಭಿನಂದನ ಗ್ರಂಥ ಸಮಿತಿ, ಗುಲಬರ್ಗಾ, ೨೦೦೪

೧೮. ಶಾಂತ ಇಮ್ರಾಪುರ, ಧರ್ಮ ಮತ್ತು ಮಹಿಳೆ, ಸಂಪ್ರೀತಿ (ಇಂದಿರಾ ಮಾನ್ವಿಕರ ಅಭಿನಂದನ ಗ್ರಂಥ) ಶ್ರೀಮತಿ ಇಂದಿರಾಮಾನ್ವಿಕರ ಅಭಿನಂದನ ಗ್ರಂಥ ಸಮಿತಿ, ಗುಲಬರ್ಗಾ, ೨೦೦೪

೧೯. ಷರೀಫ.ಕೆ, ಮಹಿಳೆ ಮತ್ತು ಜಾಗತೀಕರಣ, (ಸಂ) ಎಚ್.ಟಿ. ಪೋತೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೭.

೨೧. ಸಬಿತಾ ಬನ್ನಾಡಿ., ಆಧುನಿಕ ಹೆಣ್ಣಿನ ನಿರೂಪಣೆ ಮತ್ತು ಸ್ತ್ರೀ ನೀತೆ ಕಲ್ಪದ್ರುಮ, ಮಹಿಳಾ ಅಧ್ಯಯನ, ಸಂ–೮, ಸಂ–೧, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೨. ಸುಧಾ ಮೂರ್ತಿ., ಎಲ್ಲಿ ಸ್ತ್ರೀಯರನ್ನು ಪೂಜಿಸುತ್ತಾರೋ, ಮನದ ಮಾತು (ಸಂ), ಸ್ವಪ್ನ ಬುಕ್ ಹೌಸ್, ಬೆಂಗಳೂರು.



ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ